ಹಾಸನ ಜಿಲ್ಲೆಯ ಕೆರೆಗಳು

(ಪುರಾತತ್ವ ಮತ್ತು ಸಾಂಸ್ಕೃತಿಕ ಅಧ್ಯಯನ)

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧನ ವಿದ್ಯಾರ್ಥಿ
ಪದ್ಮ ಬಿ.ಎಸ್.

ಮಾರ್ಗದರ್ಶಕರು
ಡಾ. ಸಿ. ಮಹದೇವ
ಪ್ರಾಧ್ಯಾಪಕರು



ಸಮಾಜವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೭

ಹಾಸನ ಜಿಲ್ಲೆಯ ಕೆರೆಗಳು

(ಪುರಾತತ್ವ ಮತ್ತು ಸಾಂಸ್ಕೃತಿಕ ಅಧ್ಯಯನ)

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಲಾದ ಮಹಾಪ್ರಬಂಧ)

ಸಂಶೋಧನ ವಿದ್ಯಾರ್ಥಿ

ಪದ್ಮ ಬಿ.ಎಸ್.

ಮಾರ್ಗದರ್ಶಕರು

ಡಾ. ಸಿ. ಮಹದೇವ

ಪ್ರಾಧ್ಯಾಪಕರು

ಸಮಾಜವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೬-೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ಪದ್ಮ ಬಿ.ಎಸ್. ಅವರು ಹಾಸನ ಜಿಲ್ಲೆಯ ಕೆರೆಗಳು(ಪುರಾತತ್ವ ಮತ್ತು ಸಾಂಸ್ಕೃತಿಕ ಅಧ್ಯಯನ) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವ ಪದವಿಗೂ ಸಲ್ಲಿಸಲ್ಪಟ್ಟಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಸಿ. ಮಹದೇವ
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಸ್ಥಳ: ವಿದ್ಯಾರಣ್ಯ
ದಿನಾಂಕ: 12.04.17

ಪ್ರಮಾಣ ಪತ್ರ

ಹಾಸನ ಜಿಲ್ಲೆಯ ಕೆರೆಗಳು(ಪುರಾತತ್ವ ಮತ್ತು ಸಾಂಸ್ಕೃತಿಕ ಅಧ್ಯಯನ) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು ಡಾ. ಸಿ. **ಮಹದೇವ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಸದರಿ ಮಹಾಪ್ರಬಂಧವು ಈ ಮೊದಲು ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Padma B.S.

ಪದ್ಮ ಬಿ.ಎಸ್.
ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸ್ಥಳ: ವಿದ್ಯಾರಣ್ಯ
ದಿನಾಂಕ: 12-04-2017

ಪರಿವಿಡಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪ್ರಸ್ತಾವನೆ

ನೀರು ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ನೀರಿಲ್ಲದೆ ಮನುಷ್ಯನಷ್ಟೆ ಏಕೆ, ಇಡೀ ಜೀವಸಂಕುಲ ಬದುಕಲಾರದು. ಹಾಗಾಗಿ ನೀರು ಭೂಮಿಯ ಮೇಲಿನ ಅತ್ಯಮೂಲ್ಯ ಸಂಪನ್ಮೂಲ. ಪ್ರಪಂಚದಲ್ಲಿರುವ ಕೋಟ್ಯಂತರ ಜೀವರಾಶಿಗಳು, ಪ್ರಾಣಿಗಳು ನೀರಿನಿಂದಲೆ ಉಗಮ ಮತ್ತು ವಿಕಾಸವನ್ನು ಹೊಂದಿವೆ. ಉಗಮ ಮತ್ತು ವಿಕಾಸದಲ್ಲಿ ನೀರಿನ ಪಾತ್ರ ಪ್ರಮುಖವಾದುದಾಗಿದೆ. ಪ್ರಾಗಿತಿಹಾಸಕಾಲದ ಮಾನವ ಅಲೆಮಾರಿಯಾಗಿದ್ದ ಆತನ ಎಲ್ಲಾ ಬಗೆಯ ಕಾರ್ಯಚಟುವಟಿಕೆಗಳ ಕಾರ್ಯಕ್ಷೇತ್ರವು ಸರೋವರ, ನದಿ, ಕೆರೆ ತೊರೆಗಳ ಸಮೀಪದಲ್ಲಿಯೇ ಕೇಂದ್ರೀಕೃತವಾಗಿತ್ತು.[೧] ಆರಂಭಕಾಲದಲ್ಲಿ ಅಲೆಮಾರಿಯಾಗಿದ್ದ ಮಾನವ ಕ್ರಮೇಣ ಒಂದು ಕಡೆ ನೆಲೆ ನಿಲ್ಲಲು ಪ್ರಾರಂಭಿಸಿದನು. ತನ್ನ ಆಯುಧಗಳಲ್ಲಿ ಬಹಳಷ್ಟು ಸುಧಾರಣೆ ಮಾಡಿಕೊಂಡು ಕೃಷಿಕ ಜೀವನವನ್ನು ಪ್ರಾರಂಭಿಸಿದನು. ವ್ಯವಸಾಯಕ್ಕೆ ಮೊದಲಿಗೆ ಮಳೆ ಮತ್ತು ವಿಪುಲವಾಗಿ ನೀರು ಸಿಗುವ ಜಾಗವಾಗಿದ್ದ ನದಿಯನ್ನು ಆಶ್ರಯಿಸಿದ್ದನು. ಪರಿಸರದಲ್ಲಿ ಆಗುತ್ತಿದ್ದ ಬದಲಾವಣೆಗಳು ಮತ್ತು ಸಕಾಲದ ಮಳೆಯ ವೈಫಲ್ಯತೆಯು ಅವನನ್ನು ಆಗಿಂದ್ದಾಗ್ಗೆ ಕಷ್ಟಕ್ಕೆ ಗುರಿಪಡಿಸಿದ್ದವು. ಇದರಿಂದ ಅವನು ನೀರನ್ನು ಸಂಗ್ರಹ ಮಾಡಿ, ತನ್ನ ಹತೋಟಿಯಲ್ಲಿಟ್ಟುಕೊಳ್ಳುವ ಪ್ರಯತ್ನದಲ್ಲಿ ತೊಡಗಿದ. ಮಳೆಗಾಲವು ವರ್ಷದಲ್ಲಿ ಕೆಲವು ಮಾಸಗಳು ಮಾತ್ರ ಇರುತ್ತದೆ. ಅದರಂತೆಯೇ ನದಿಯಿಂದ ಕೆಲವು ಸಾವಿರಾರು ಎಕರೆಗಳಷ್ಟು ಭೂ ಪ್ರದೇಶವು ವ್ಯವಸಾಯಕ್ಕೆ ಒಳಪಟ್ಟಿತ್ತು. ಅದುದರಿಂದ ಎಲ್ಲ ಮೂಲಗಳಿಂದ ನೀರನ್ನು ಸಂಗ್ರಹಿಸಿಟ್ಟುಕೊಂಡು, ಅಗತ್ಯವಿದ್ದಾಗ ಅತ್ಯಂತ ಸಮರ್ಪಕವಾಗಿ ಬಳಸಿಕೊಳ್ಳತೊಡಗಿದನು. ಇಂತಹ ಕೃತಕ ಸಂಗ್ರಾಹಕಗಳೇ ಕೆರೆ, ಕಟ್ಟೆ ಕುಂಟೆಗಳಾಗಿವೆ. ಇವು ಮಾನವನ ಅಗತ್ಯತೆಗಳನ್ನು ಪೂರೈಸುವ ಪ್ರಾಥಮಿಕ ಮೂಲಗಳಾಗಿವೆ.[೨]

ಇಂತಹ ಪ್ರಯತ್ನಗಳು ನೂತನ ಶಿಲಾಯುಗದ ಅಂತಿಮ ಕಾಲಕ್ಕಾಗಲೆ ವ್ಯಾಪಕವಾಗಿ ಬೆಳೆದು, ಮಾನವ ಒಂದೆಡೆ ನೆಲೆ ನಿಂತು ತನ್ನ ಜೀವನ ಸಾಗಿಸಲು ಪ್ರಯತ್ನಿಸಿದ. ಅರಸರು, ಅಧಿಕಾರಿಗಳು, ಸ್ಥಳೀಯರು ತಮ್ಮ ರಾಜ್ಯ, ಪ್ರದೇಶ, ಊರಿನ ಅಭಿವೃದ್ಧಿಯ ದೃಷ್ಟಿಯಿಂದ ಅಗತ್ಯ ನೀರಿನ ತಾಣಗಳಾದ ಕೆರೆ, ಕಟ್ಟೆ, ಕುಂಟೆಗಳನ್ನು ಅವಿಭಾಜ್ಯ ಅಂಗಗಳಾಗಿ ನಿರ್ಮಿಸಿರುವುದು ಕಂಡುಬಂದಿದೆ.

ಕೆರೆಯ ಪರಿಕಲ್ಪನೆಯು ಇಂದು ನಿನ್ನೆಯದಲ್ಲ. ಇದರ ಇತಿಹಾಸವು ಬಹು ಪ್ರಾಚೀನವಾದುದಾಗಿದೆ. ಅಂದಿನ ಸಮಕಾಲೀನ ಸಾಹಿತ್ಯಗಳು ಸಹ ನೀರಾವರಿ ವ್ಯವಸ್ಥೆಯನ್ನು ಕುರಿತು ಮಾಹಿತಿ ನೀಡುತ್ತವೆ. ಅದೇ ರೀತಿ ಋಗ್ವೇದ, ಯರ್ಜುವೇದ ಮತ್ತು ಅಥರ್ವಣ ವೇದಗಳಲ್ಲಿಯೂ ಕೂಡ ಕೆರೆಗಳನ್ನು ಕುರಿತ ಉಲ್ಲೇಖಗಳು ದೊರೆಯುತ್ತವೆ. ಕೌಟಿಲ್ಯನ ಅರ್ಥಶಾಸ್ತ್ರ, ವಿಜ್ಞಾನೇಶ್ವರನ ಮಿತಾಕ್ಷರ, ಕಲ್ಹಣನ ರಾಜತರಂಗಿಣಿ, ರಾಮಾಯಣ, ಮಹಾಭಾರತ, ಪದ್ಮಪುರಾಣ, ಜಾತಕ ಕಥೆಗಳು, ಶುಕ್ರನ ನೀತಿಸಾರ, ಅಮರಕೋಶ ಹಾಗೂ ತಮಿಳು ಸಂಗಮ್ ಸಾಹಿತ್ಯಕೃತಿಗಳು ಸಹ ಕೆರೆ ನೀರಾವರಿಯ ಅನೇಕ ವಿಚಾರಗಳನ್ನು ಕುರಿತು ಪ್ರಸ್ತಾಪಿಸುತ್ತವೆ.

ಅಭಿಲಾಷಿತಾರ್ಥ ಚಿಂತಾಮಣಿಯಲ್ಲಿ 'ದ್ವಾರ ಹೀನೋಭವೇತ್ ಕೂಪೋ, ದ್ವಾರೇಣ್ಯೆಕೇನ ವಾಪಿಕ, ನೈಕದ್ವಾರಾ ಪುಷ್ಯರಿಣೀ ದೀರ್ಘಕಾರಾತು ದೀರ್ಘಕಾ, ಕುಲ್ಯಾ ವಿಸ್ತೃತ ತೋಯಶ್ಚ ತಟಾಕಂ ಪಿರಿಕೀರ್ತಿತಾ' ಅಂದರೆ ಬಾಗಿಲು ಇಲ್ಲದ್ದು ಕೂಪ, ಒಂದು ಬಾಗಿಲು ಇರೋದು ವಾಪಿ, ಅನೇಕ ದ್ವಾರಗಳಿರುವುದು ಪುಷ್ಕರಣಿ, ಅದರ ದೀರ್ಘಕಾರವೇ ಕಾಲುವೆ, ನದಿಗೆ ಅಥವಾ ಹೊಳೆಗೆ ಅಡ್ಡ ಕಟ್ಟೆ ಹಾಕಿ ನಿರ್ಮಿಸಿರುವುದೇ ತಟಾಕ ಅಥವಾ ಕೆರೆ ಎಂಬುದಾಗಿ ನೀರಿನ ರಚನೆಗಳ ಬಗೆಗೆ ತಿಳಿದುಬರುತ್ತದೆ.[೩] ಅಲ್ಲಮಪ್ರಭು ತಮ್ಮ ಒಂದು ವಚನದಲ್ಲಿ

ತನುವೆಂಬ ಏರಿಗೆ ಮನವೆಂಬ ಕಟ್ಟೆ
ಆಚಾರವೆಂಬ ಸೋಪಾನ ಪರಮಾನಂದವೆಂಬ ಜಲವ ತುಂಬಿ
ಕೆರೆಯ ಕಟ್ಟ ಬಲ್ಲವನಾರನೂ ಕಾಣೆ
ನಾ ಕಟ್ಟಿದ ಕೆರೆ ಸ್ಥಿರವಾಗಿತ್ತು ಗುಹೇಶರ್ವ[೪]

ಎಂದು ಭೂಮಿಯ ಮೇಲಿನ ಕೆರೆಯೊಂದಿಗೆ ಮನದೊಳಗೆ ಕೆರೆ ಕಟ್ಟುವ ವಿಚಾರವನ್ನು ಶರೀರಕ್ಕೆ ಹೋಲಿಸಿ ಅರ್ಥಪೂರ್ಣವಾಗಿ ಹೇಳಿದ್ದಾರೆ.

ಶಾಸನಗಳು ಇತಿಹಾಸಕಾಲದಿಂದ ನಮಗೆ ದೊರಕಿದ್ದು, ಇವು ಕೂಡ ಕೆರೆ ನೀರಾವರಿ ಪದ್ಧತಿಗಳನ್ನು ಕುರಿತ ಅನೇಕ ಮಾಹಿತಿಗಳನ್ನು ನೀಡಿರುವುದು ಗಮನಾರ್ಹ ಸಂಗತಿ. ನಮ್ಮ ಪೂರ್ವಜರ ಇತಿಹಾಸವನ್ನು ಬಿಚ್ಚಿಡುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿವೆ. ಅದು

ಶಿಲಾಶಾಸನವಿರಬಹುದು, ತಾಮ್ರಪಟವಿರಬಹುದು. ಕಾಗದದ ಪರಿಚಯವಿಲ್ಲದ ಕಾಲದಲ್ಲಿ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳನ್ನು ಒಳಗೊಂಡ ಶಾಸನಗಳು ಪ್ರಮುಖ ಮಾಧ್ಯಮಗಳಾಗಿದ್ದವು. ಉದಾಹರಣೆಗೆ ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ಮೌರ್ಯರ ಕಾಲದ ಚಂದ್ರಗುಪ್ತ ಮೌರ್ಯನ ರಾಜ್ಯಪಾಲ ಪುಷ್ಯಗುಪ್ತ ನಿರ್ಮಿಸಿದ ಸುದರ್ಶನ ಸರೋವರವನ್ನು ಪ್ರಮುಖವಾಗಿ ಗುರುತಿಸಬಹುದಾಗಿದೆ. ಕ್ರಿ.ಪೂ.ದಲ್ಲಿ ಪ್ರಾರಂಭವಾದ ಈ ಪ್ರಕ್ರಿಯೆಯು ಅವ್ಯಾಹತವಾಗಿ ಸಾಗುತ್ತಲೆ ಬಂದಿದೆ. ಆಂಧ್ರಪ್ರದೇಶದ ದ್ರಾಕ್ಷಾರಾಮದ ಭೀಮೇಶ್ವರ ದೇವಾಲಯದ ಒಂದು ಶಾಸನ[೫] ಕ್ರಿ.ಶ.೧೧೬೩ ರ ಕಾಲಕ್ಕೆ ಸೇರಿದ್ದು, ಇದರಲ್ಲಿ ಸಪ್ತ ಸಂತಾನವನ್ನು ಕುರಿತು ಹೇಳಲಾಗಿದೆ. ವೆಂಗಿ ಚಾಲುಕ್ಯರ ಮಹಾಮಂಡಳೇಶ್ವರ ದೋರಪನಾಯಕ, ಪ್ರಧಾನಿ ಸೋಮಣ ಪೆರ್ಗಡೆಯ ಮಗ ದತ್ತಣ ಪೆರ್ಗಡೆಯ ತೆಲುಗು ಶಾಸನವಿದು. ಇದರಲ್ಲಿ ಪುತ್ರಸಂತಾನ, ಕೆರೆಯ ನಿರ್ಮಾಣ, ಧರ್ಮವಿವಾಹ, ಆಲಯ ನಿರ್ಮಾಣ, ಉದ್ಯಾನವನಗಳ ನಿರ್ಮಾಣ, ಪುಸ್ತಕ ರಚನೆ, ನಿಧಿ ಕೂಡಿಸುವಿಕೆಗಳಂತಹ ಸಪ್ತಸಂತಾನಗಳ ಮಾಹಿತಿಗಳಿವೆ.

ಕೆರೆ, ಕಟ್ಟೆ, ಕೊಳ, ಕಲ್ಯಾಣಿ, ಸರೋವರ, ಬಾವಿ ಮುಂತಾದಗಳನ್ನು ನಿರ್ಮಿಸುವುದು ಸತ್ಕಾರ್ಯವೆಂದು ನಮ್ಮ ಹಿರಿಯರು ಭಾವಿಸಿದ್ದರು. ಕ್ರಿ.ಶ. ೧೪೧೧ರ ಹಂಪಿಯ ಶಾಸನದಲ್ಲಿ.[೬]

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಗಾರಮಂ ಮಾಡಿಸ
ಜ್ಜೆರೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ್ ನಂಬಿದ
ರ್ಗ್ಗೆರವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಯೆಂತೆಲ್ಲವಂ ಪಿಂದೆತಾ
ಯರೆದಳ್ವಾಲೆರೆವಂದು ತೊಟ್ಟು ಕಿವಿಯೊಳಂ ಲಕ್ಷ್ಮೀಧರಾಮಾತ್ಯನಾ

ಎಂದು ಉಲ್ಲೇಖಿಸಿದೆ. ಈ ಪದ್ಯವನ್ನು ವಿಜಯನಗರದ ಪ್ರೌಢಪ್ರತಾಪದೇವರಾಯನ ಮಂತ್ರಿ ಲಕ್ಷ್ಮೀಧರನು ಕೂಸಾಗಿದ್ದಾಗ ಅವನ ತಾಯಿ ಹಾಡಿ ಹಾಲೆರೆಯುತ್ತಿದ್ದಳೆಂದು ಹಂಪೆಯ ಕಡಲೆಕಾಳು ಗಣೇಶನ ಗುಡಿಯ ಮುಂದಿನ ಅಗಸೆಯಲ್ಲಿರುವ ಶಾಸನವು ತಿಳಿಸುತ್ತದೆ. ಇದರಿಂದ ನಮಗೆ ಮುಖ್ಯವಾಗಿ ತಿಳಿದುಬರುವುದೇನೆಂದರೆ ಮಧ್ಯಕಾಲೀನ ಭಾರತದ ನೀರಾವರಿ ವ್ಯವಸ್ಥೆಯಲ್ಲಿ ಕೆರೆಯನ್ನು ಕಟ್ಟಿಸುವುದು, ಬಾವಿಯನ್ನು ತೋಡಿಸುವುದು, ಅತಿ ಮುಖ್ಯವಾದ ಕೆಲಸವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಕೆಲಸವನ್ನು ಮಾಡುವುದು ಸಾಮಾಜಿಕ ಮತ್ತು ನೈತಿಕ ಜವಾಬ್ದಾರಿಯಾಗಿತ್ತೆಂದೂ ಸಹ ತಿಳಿಯಬಹುದು. ಭಾರತದಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಕೆರೆಗಳು ಕಂಡುಬರುತ್ತವೆಯಾದರೂ, ಅವುಗಳ ಸಂಖ್ಯೆ ದಕ್ಷಿಣಭಾರತದಲ್ಲಿ ಹೆಚ್ಚಾಗಿವೆ. ಉತ್ತರಭಾರತವು ಹಿಮಾಲಯ ಪರ್ವತಶ್ರೇಣಿ ಯಿಂದ ಕೂಡಿದ್ದು, ಹಲವಾರು ನದಿಗಳ ಉಗಮಸ್ಥಾನವಾಗಿದೆ. ಇದರಿಂದ ವರ್ಷವಿಡೀ ನದಿಗಳು ತುಂಬಿ ಹರಿಯುವುದರಿಂದ ಅಲ್ಲಿ ನೀರಿನ ಸಂಗ್ರಹದ ಅವಶ್ಯಕತೆ ಕಂಡುಬರುವುದಿಲ್ಲ. ದಕ್ಷಿಣಭಾರತದಲ್ಲಿ

ಒಣಪ್ರದೇಶವು ಹೆಚ್ಚಾಗಿದ್ದು, ನೀರಿನ ಸಂಗ್ರಹದ ಅವಶ್ಯಕತೆ ಹೆಚ್ಚಾಗಿರುವುದರಿಂದ ಇಲ್ಲಿ ಜಲಾಶಯಗಳು, ಕೆರೆ, ಕಟ್ಟೆ ಮತ್ತು ಬಾವಿಗಳು ಕಂಡುಬರುತ್ತವೆ.

ಕೆರೆಕಟ್ಟೆಗಳು ಭಾರತೀಯ ಪರಂಪರೆಯಲ್ಲಿ ಮಾನವ ಜೀವನದ ಅವಿಭಾಜ್ಯ ಅಂಗಗಳಾಗಿ ಅತಿ ಪ್ರಾಚೀನಕಾಲದಿಂದಲೂ ನಡೆದುಕೊಂಡು ಬಂದಿದೆ. ಪ್ರಾಚೀನ ಮಾನವನು ತನ್ನ ನೀರಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಮಳೆಯ ನೀರನ್ನು ಸಂಗ್ರಹಿಸುವ, ನದಿಯ ಪ್ರವಾಹವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನಗಳನ್ನು ಮಾಡಿದ್ದಾನೆ. ಅದರಿಂದ ಬೇಸಾಯವನ್ನು ಮಾಡುವುದಲ್ಲದೆ ತನ್ನ ವಸತಿಯ ಬೆಳವಣಿಗೆಗೆ ಕಾರಣನಾಗಿದ್ದಾನೆ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಕರ್ನಾಟಕವು ಬಹುಪಾಲು ಬೆಟ್ಟಗುಡ್ಡಗಳಿಂದ ಮತ್ತು ಏರುತಗ್ಗುಗಳಿಂದ ಕೂಡಿದ ಸಂಪದ್ಭರಿತ ನಾಡಾಗಿದ್ದು, ಈ ನಾಡಿನಲ್ಲಿ ಹಲವಾರು ನದಿಗಳ ಸಂಗಮವಾಗಿರುವುದು ಕಂಡುಬಂದಿವೆ. ಪುರಾಣ ಕಥೆಗಳಲ್ಲಿ ಇವುಗಳದೇ ಸ್ಥಾನಮಾನಗಳು. ಇಂದಿಗೂ ಕೂಡ ಇಂತಹ ಆಧುನಿಕ ಯುಗದಲ್ಲಿ ತಮ್ಮ ತಮ್ಮ ಸಂಸ್ಕೃತಿಯ ಪ್ರತೀಕವಾಗಿ ಗಂಗಾಸ್ನಾನ, ಕುಂಭಮೇಳ, ತಲಕಾವೇರಿ ಪೂಜೆ, ನದಿಗಳಿಗೆ ಬಾಗಿನ ಅರ್ಪಣೆ ಮಾಡುವ ಧಾರ್ಮಿಕ ಆಚರಣೆಗಳು ನಡೆಯುತ್ತಿವೆ. ನೂತನ ಶಿಲಾಯುಗ ಹಾಗೂ ಅನಂತರದ ಬೃಹತ್ ಶಿಲಾಯುಗದ ಕಾಲದಲ್ಲಿ ಕೃತಕ ಅಥವಾ ಮಾನವ ನಿರ್ಮಿತ ಕೆರೆಕಟ್ಟೆಗಳು ಪ್ರಾರಂಭವಾದವೆಂದು ಹೇಳಬಹುದು. ಆದಿ ಇತಿಹಾಸ ಕಾಲದಲ್ಲಿ ಶಾತವಾಹನ ರಾಜನಾದ ಪುಳುಮಾವಿಯ ಮ್ಯಾಕೆದೋಣಿ ಆಂಧ್ರಪ್ರದೇಶದ ಆಲೂರು ತಾಲೂಕಿನ ಶಾಸನವು ಕೆರೆಗಳ ಬಗ್ಗೆ ಪ್ರಸ್ತಾಪಿಸುವ ಅತಿ ಪ್ರಾಚೀನವಾದ ಶಾಸನವಾಗಿದೆ. ಇದಾದ ನಂತರ ನಾಡನ್ನಾಳಿದ ಪ್ರಮುಖ ರಾಜಮನೆತನಗಳಾದ ಕದಂಬರು, ಗಂಗರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು ಹಾಗೂ ಪಾಳೆಯಗಾರರು ಕೃಷಿಪ್ರಧಾನವಾದ ನಾಡಿನ ಆರ್ಥಿಕ ಸ್ಥಿತಿಯ ಉನ್ನತಿಗೆ ನೀರಾವರಿ ಅನಿವಾರ್ಯವೆಂದು ತಿಳಿದಿದ್ದರು. ಈ ಕಾರಣಕ್ಕಾಗಿಯೇ ಸಾವಿರಾರು ಕೆರೆಗಳು ನಿರ್ಮಾಣವಾದವು. ಇವು ನೀರಿನ ಸೌಲಭ್ಯದ ಜೊತೆಗೆ ಬೇಸಾಯಕ್ಕೂ ಸಹಾಯಕವಾಗಿದ್ದವು.

ಕರ್ನಾಟಕದ ದಕ್ಷಿಣ ಭಾಗದ ಮೈದಾನಪ್ರದೇಶದಲ್ಲಿರುವ ಜಿಲ್ಲೆ ಹಾಸನ. ಈ ಪ್ರದೇಶವು ಮಲೆನಾಡು ಮತ್ತು ಮೈದಾನದ ಭೂಲಕ್ಷಣಗಳನ್ನು ಒಳಗೊಂಡಿದೆ. ಜಿಲ್ಲೆಯನ್ನು ಮಲೆನಾಡು ಮತ್ತು ಅರೆಮಲೆನಾಡು ಮೈದಾನಪ್ರದೇಶವೆಂದು ಸ್ವಾಭಾವಿಕವಾಗಿ ವಿಂಗಡಿಸಬಹುದು. ಹಳೆಯ ಮೈಸೂರು ಭಾಗದಲ್ಲಿದ್ದ ಒಟ್ಟು ಒಂಬತ್ತು ಜಿಲ್ಲೆಗಳಲ್ಲಿ ಹಾಸನ ಜಿಲ್ಲೆ ಕೂಡ ಒಂದು. ಜಿಲೆಯು ಬೆಟ್ಟಗುಡ್ಡಗಳನ್ನು ಹೊಂದಿದ್ದು, ಹೆಚ್ಚು ಮಳೆ ಬೀಳುವ ಪ್ರದೇಶವಾಗಿದೆ. ನದಿಗಳಿದ್ದರೂ ಸಹ ಮೊದಲಿಗೆ ಕೆರೆ, ಕಟ್ಟೆ, ಕುಂಟೆ, ಬಾವಿಗಳು ಈ ಪ್ರದೇಶದ ಜೀವನಾಡಿಗಳಾಗಿದ್ದವು. ಇಲ್ಲಿನ ಕೃಷಿ

ಇವುಗಳನ್ನೇ ಅವಲಂಬಿಸಿದೆ.

ಹಾಸನ ಜಿಲ್ಲೆಯಲ್ಲಿ ೮ ತಾಲೂಕುಗಳಿವೆ. ಆಡಳಿತದ ಅನುಕೂಲಕ್ಕಾಗಿ ಹಾಸನ ಮತ್ತು ಸಕಲೇಶಪುರ ಎಂಬ ೨ ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಹಾಸನ ವಿಭಾಗಕ್ಕೆ ಅರಸೀಕೆರೆ, ಚನ್ನರಾಯಪಟ್ಟಣ, ಹಾಸನ, ಹೊಳೆನರಸೀಪುರ ಮತ್ತು ಅರಕಲಗೂಡು ತಾಲೂಕುಗಳು, ಸಕಲೇಶಪುರ ಉಪವಿಭಾಗಕ್ಕೆ ಬೇಲೂರು, ಸಕಲೇಶಪುರ ಮತ್ತು ಆಲೂರು ತಾಲೂಕುಗಳು ಸೇರಿವೆ.

ಮಲೆನಾಡು ಮತ್ತು ಬಯಲುಸೀಮೆಯನ್ನು ಒಳಗೊಂಡ ಹಾಸನ ಜಿಲ್ಲೆಯು ಉತ್ತರದಲ್ಲಿ ಚಿಕ್ಕಮಗಳೂರು, ಪೂರ್ವದಲ್ಲಿ ತುಮಕೂರು ಮತ್ತು ಮಂಡ್ಯ, ದಕ್ಷಿಣದಲ್ಲಿ ಕೊಡಗು ಮತ್ತು ಮೈಸೂರು, ಪಶ್ಚಿಮದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸ್ವಲ್ಪ ಭಾಗ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಿಂದ ಸುತ್ತುವರಿದೆ. ಇಲ್ಲಿ ಅನೇಕ ರಾಜಮನೆತನಗಳು, ಮಂತ್ರಿ ಮಾಂಡಳಿಕರು ಮತ್ತು ಸಾಮಂತ ಅರಸರು ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ. ಇವುಗಳಿಗೆ ಆಧಾರವಾಗಿ ಅವರಿಂದ ನಿರ್ಮಾಣಗೊಂಡಿರುವ ಕೆರೆಗಳು, ದೇವಾಲಯಗಳು, ಶಾಸನಗಳು ಮತ್ತು ವೀರಗಲ್ಲುಗಳು ಇಂದಿಗೂ ಲಭ್ಯವಿವೆ. ಹಾಸನ ಜಿಲ್ಲೆಯು ಫಲವತ್ತಾದ ಮಣ್ಣನ್ನು ಹೊಂದಿರುವುದರಿಂದ ಅನೇಕ ಬೆಳೆಗಳನ್ನು ಬೆಳೆಯಲಾಗುತ್ತದೆ. ಹೇಮಾವತಿ, ಕಾವೇರಿ ಮತ್ತು ಯಗಚಿ ಈ ಜಿಲ್ಲೆಯ ಮುಖ್ಯ ನದಿಗಳು. ಹೇಮಾವತಿ ಕಾವೇರಿ ನದಿಯ ಉಪನದಿ. ಯಗಚಿ ಹೇಮಾವತಿಯ ಉಪನದಿಯಾಗಿದೆ. ಇವು ನೀರಾವರಿ ದೃಷ್ಟಿಯಿಂದ ಅನುಕೂಲಕರವಾಗಿವೆ. ಜಿಲ್ಲೆಯಲ್ಲಿ ಸಣ್ಣ ಹಾಗೂ ದೊಡ್ಡ ಕೆರೆಗಳು ಸಾಕಷ್ಟಿದ್ದು, ಮಳೆಅವಲಂಬಿತ ಕೆರೆಗಳೇ ಹೆಚ್ಚಾಗಿವೆ. ಇವುಗಳನ್ನೇ ಅವಲಂಬಿಸಿ ಆಹಾರಧಾನ್ಯಗಳು, ದ್ವಿದಳಧಾನ್ಯಗಳು ಮತ್ತು ತೋಟದ ಬೆಳೆಗಳನ್ನು ಬೆಳೆಯಲಾಗುತ್ತದೆ. ಒಟ್ಟಾರೆ ಈ ಪ್ರದೇಶವು ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ಮಹತ್ವದ ಸ್ಥಾನವನ್ನು ಹೊಂದಿದೆ. ಆದ್ದರಿಂದ ಹಾಸನ ಜಿಲ್ಲೆಯಲ್ಲಿ ಕಂಡುಬರುವ ನೀರಾವರಿ ಮೂಲಗಳಾದ ಪ್ರಮುಖ ಕೆರೆಗಳನ್ನು ಅನುಲಕ್ಷಿಸಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಅಧ್ಯಯನದ ಉದ್ದೇಶ ಮತ್ತು ಮಹತ್ವ

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಹಾಸನ ಜಿಲ್ಲೆಯ ಕೆರೆಗಳ ಪುರಾತತ್ವ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಶಾಸನಗಳು ಪ್ರಧಾನ ಆಕರಗಳಾಗಿವೆ. ಈ ಶಾಸನಗಳ ಆಧಾರದ ಮೇಲೆ ಕೆರೆಗಳ ಕುರಿತಾದ ಹೊಸ ಸಂಗತಿಗಳನ್ನು ಬೆಳಕಿಗೆ ತರುವ ಪ್ರಯತ್ನ ಇದಾಗಿದೆ. ಪ್ರಾಚೀನ ಕಾಲದಲ್ಲಿ ನಮ್ಮ ಪೂರ್ವಜರು ಕೆರೆಗಳನ್ನು ನಿರ್ಮಿಸಿ ಕೃಷಿಗೆ ಅನುವು ಮಾಡಿಕೊಟ್ಟಿದ್ದಾರೆ. ಇವು ಇಂದಿಗೂ ಜೀವಂತವಾಗಿರುವುದನ್ನು ನೋಡಬಹುದು. ಆ ಮೂಲಕ ಕೆರೆ ನಿರ್ಮಾಣ, ಜಲತಂತ್ರಜ್ಞಾನ, ನೀರಿನ ಬಳಕೆ, ನೀರಿನ ವಿತರಣೆ ಮತ್ತು ನಿರ್ವಹಣೆ ಮುಂತಾದ ಸಂಗತಿಗಳನ್ನು ಅರಿಯಬಹುದು.

ಪ್ರಾಚೀನ ತಂತ್ರಜ್ಞಾನವನ್ನು ಬಳಸಿ ನಿರ್ಮಿಸಿದ ಕೆರೆಗಳನ್ನು ಅಲಕ್ಷ್ಯಕ್ಕೊಳಪಡಿಸದೆ ಅವುಗಳನ್ನು ದಾಖಲೆ ಮಾಡಿ, ಸಂರಕ್ಷಿಸಿ ಮುಂದಿನ ಪೀಳಿಗೆಗೆ ಸದುಪಯೋಗವಾಗುವಂತೆ ಮಾಡುವುದೆ ಈ ಅಧ್ಯಯನದ ಉದ್ದೇಶ. ಜತೆಗೆ ಪ್ರಾಚೀನ ತಂತ್ರಜ್ಞಾನವನ್ನು ವಿಶ್ಲೇಷಿಸಿ ಅರ್ಥೈಸಿಕೊಳ್ಳುವುದು ಸಹ ಮುಖ್ಯವಾಗಿದೆ. ಇತ್ತೀಚೆಗೆ ನಗರೀಕರಣ ಮತ್ತು ಭೂ ಒತ್ತುವರಿಯಿಂದ ಮಾಯವಾಗುತ್ತಿರುವ ಕೆರೆಗಳತ್ತ ಗಮನ ಹರಿಸಿ ಸಂರಕ್ಷಿಸುವುದು ಪ್ರಮುಖ ಕರ್ತವ್ಯವಾಗಿದೆ. ಹಾಸನ ಜಿಲ್ಲೆಯಲ್ಲಿ ಸಣ್ಣ ಮತ್ತು ದೊಡ್ಡ ಪ್ರಮಾಣದ ಕೆರೆಗಳು ಸಾಕಷ್ಟಿದ್ದು, ದುಸ್ಥಿತಿಯಲ್ಲಿವೆ. ಸರ್ಕಾರ ಇತ್ತೀಚೆಗೆ ಹಳೆಯ ಕೆರೆಗಳ ಜೀರ್ಣೋದ್ಧಾರ ಮಾಡಲು ಯೋಜನೆಗಳನ್ನು ರೂಪಿಸಿದೆ. ಆದರೆ ಈ ಪ್ರಯತ್ನಗಳು ಸಾಕಷ್ಟು ಪರಿಣಾಮಕಾರಿಯಾಗಿ ಆಗುತ್ತಿಲ್ಲ. ಹಿಂದೆ ಕೆರೆ ನಿರ್ಮಾಣ, ಕೆರೆಗಳ ಮೇಲುಸ್ತುವಾರಿ ಗ್ರಾಮಸಮಿತಿಯ ಮೇಲ್ವಿಚಾರಣೆಯಾಗಿತ್ತು. ಆದ್ದರಿಂದ ಕೆರೆಯನ್ನು ನಿರ್ಮಿಸಿದವರಿಗೆ ಕೆರೆಯ ಆಯಕಟ್ಟಿನಲ್ಲಿ ಭೂಮಿ ಪ್ರತಿಫಲವಾಗಿ ಸಿಗುತ್ತಿತ್ತು. ಬೇಸಾಯಗಾರರಿಗೆ ತೃಪ್ತಿಕರವಾಗುವಂತೆ ಗ್ರಾಮಸಮುದಾಯ ತನ್ನ ಅಧಿಕಾರಿಗಳ ಮೂಲಕ ನೀರನ್ನು ಸಮರ್ಪಕವಾಗಿ ಹಂಚುತ್ತಿತ್ತು. ಇಂತಹ ಪದ್ಧತಿಯು ಇಂದಿಗೂ ಇದೆಯೇ ಅಥವಾ ಕಣ್ಮರೆಯಾಗಿದೆಯೇ ಎಂಬುದನ್ನು ಪರಿಶೀಲಿಸಿ ಪರಾಮರ್ಶಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

ಜಿಲ್ಲೆಯ ಕೆರೆ ನೀರಾವರಿಯ ಇತಿಹಾಸ, ಬೆಳವಣಿಗೆ ಹಾಗೂ ಅವನತಿಯನ್ನು ಗುರುತಿಸುವುದು ಮಾತ್ರವಲ್ಲ ಕೆರೆಗೆ ಸಂಬಂಧಿಸಿದ ಪ್ರಮುಖ ಭಾಗಗಳಾದ ಏರಿ ನಿರ್ಮಾಣ, ತೂಬುಗಳ ರಚನೆ, ಕೋಡಿ ಮತ್ತು ಕಾಲುವೆಗಳನ್ನು ರಚಿಸುವಲ್ಲಿ ನಮ್ಮ ಪೂರ್ವಜರು ಅಳವಡಿಸಿಕೊಂಡ ತಾಂತ್ರಿಕತೆಯನ್ನು ಅರಿಯುವುದು ಅಧ್ಯಯನದ ಮುಖ್ಯ ಉದ್ದೇಶ. ಕೆರೆಗಳ ರಚನೆ, ಜೀರ್ಣೋದ್ಧಾರ, ಹಣಕಾಸು ವೆಚ್ಚ, ಕೆರೆ ನಿರ್ವಹಣೆ ಮತ್ತು ತೆರಿಗೆ ಪದ್ಧತಿಯನ್ನು ಶಾಸನಗಳಿಂದ ತಿಳಿದುಬರುವುದು ಹಾಗೆಯೇ ಜಿಲ್ಲೆಯ ಪ್ರಮುಖ ಕೆರೆಗಳು, ಅವುಗಳ ಸ್ಥಿತಿಗತಿ, ಆ ಪ್ರದೇಶಗಳ ಕೆರೆ ಸಂಬಂಧಿ ಸ್ಥಳನಾಮಗಳನ್ನು ತಿಳಿಯಲು ಈ ಅಧ್ಯಯನ ಸಹಕಾರಿಯಾಗಿದೆ.

ಕೆರೆಯ ಬಗೆಗೆ ಇರುವ ಮೌಖಿಕ ಆಕರಗಳನ್ನು ಸಂಗ್ರಹಿಸುವುದು ಹಾಗು ಕೆರೆಗೆ ಹಾರವಾದ ಗರತಿಯರ ಹಾಡುಗಳನ್ನು ವಿಶ್ಲೇಷಿಸುವುದು ಸಹ ಈ ಅಧ್ಯಯನದ ಮುಖ್ಯ ಉದ್ದೇಶಗಳಲ್ಲಿ ಒಂದು. ಹಿಂದೆ ಸಮಾಜದಲ್ಲಿ ಕೆರೆ ನೀರಿನ ಬಳಕೆಗೆ ಇದ್ದ ಸ್ಥಳೀಯ ಸಮಸ್ಯೆಗಳು, ವ್ಯಾಜ್ಯಗಳು, ನಿಷೇಧಗಳು ಮತ್ತು ನಿಬಂಧನೆಗಳನ್ನು ತಿಳಿಯುವುದಾಗಿದೆ. ಕೃಷಿ, ಪ್ರಾಣಿ, ಪಕ್ಷಿ ಮತ್ತು ಗ್ರಾಮಗಳ ಜನರ ಆರ್ಥಿಕ ಅಭಿವೃದ್ಧಿಯಲ್ಲಿ ಕೆರೆಗಳ ಕೊಡುಗೆ ಹಾಗೂ ಕೆರೆ ಕುರಿತಂತೆ ಇರುವ ನಂಬಿಕೆ ಮತ್ತು ಆಚರಣೆಗಳನ್ನು ಪರಿಚಯಿಸುವುದು ಪ್ರಸ್ತುತ ಅಧ್ಯಯನದ ಆಶಯವಾಗಿದೆ. ಅಲ್ಲದೆ ಕೆರೆಗಳು ಇತ್ತೀಚೆಗೆ ಕಣ್ಮರೆಯಾಗಲು ಕಾರಣವಾದ ಅಂಶಗಳನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಇಲ್ಲಿ

ಮಾಡಲಾಗಿದೆ. ಕೆರೆಗಳನ್ನು ನಿರ್ಮಾಣ ಮಾಡಿದ ನಂತರ ಅದರ ಉದ್ದೇಶ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ಈ ಅಧ್ಯಯನದಿಂದ ಅರಿಯುವುದಾಗಿದೆ.

ಅಧ್ಯಯನಗಳ ಸಮೀಕ್ಷೆ

ಹಾಸನ ಜಿಲ್ಲೆಯ ಕೆರೆ ನೀರಾವರಿ ವ್ಯವಸ್ಥೆಗೆ ಸಂಬಂಧಿಸಿದಂತೆ ಹೆಚ್ಚಾಗಿ ಬಿಡಿ ಲೇಖನಗಳು ಪ್ರಕಟಗೊಂಡಿವೆ. ಹಾಗೆಯೇ ಇಡೀ ಕರ್ನಾಟಕವನ್ನು ಒಳಗೊಂಡಂತೆ ಕೆರೆ ನೀರಾವರಿ ಅಧ್ಯಯನಗಳೂ ಸಾಕಷ್ಟು ನಡೆದಿವೆ.

ಹಯವದನರಾವ್ ಸಿ. ಅವರು ಪ್ರಕಟಿಸಿರುವ 'ಮೈಸೂರು ಗ್ಯಾಸೆಟಿಯರ್' ಸಂಪುಟ ೫ ಹಾಗೂ ಅಭಿಶಂಕರ್ ಕೆ. ಅವರ 'ಹಾಸನ ಜಿಲ್ಲಾ ಗ್ಯಾಸೆಟಿಯರ್'ಗಳಲ್ಲಿ ಹಾಸನ ಜಿಲ್ಲೆಯ ಕುರಿತಾದ ಭೌಗೋಳಿಕ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವಿಷಯಗಳನ್ನು ಕುರಿತು ಸಂಕ್ಷಿಪ್ತವಾದ ಮಾಹಿತಿಗಳನ್ನು ನೀಡಲಾಗಿದೆ. ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್ಸ್ ೧೯೧೧, ೧೯೨೯, ೧೯೩೭ರ ವಾರ್ಷಿಕ ವರದಿಯಲ್ಲಿ ಹಾಸನ ಜಿಲ್ಲೆಯ ಕೆಲವು ಕೆರೆಗಳ ಬಗ್ಗೆ ಉಲ್ಲೇಖವಿದೆ. ಎಪಿಗ್ರಾಫಿಯ ಕರ್ನಾಟಿಕ ಸಂಪುಟ ೨, ಶ್ರವಣಬೆಳಗೊಳಕ್ಕೆ ಸಂಬಂಧಿಸಿದ ಸಂಪುಟವಾಗಿದೆ. ಎಪಿಗ್ರಾಫಿಯ ಕರ್ನಾಟಿಕ(ಪರಿಸ್ಕೃತ) ೮ನೆಯ ಸಂಪುಟವು ಹಾಸನ ಜಿಲ್ಲೆಯ ಹೊಳೆನರಸೀಪುರ, ಅರಕಲಗೂಡು, ಹಾಸನ ಮತ್ತು ಆಲೂರು ತಾಲೂಕುಗಳ ಶಾಸನಗಳನ್ನು ಒಳಗೊಂಡಿದೆ. ೯ನೆಯ ಸಂಪುಟದಲ್ಲಿ ಹಾಸನ ಜಿಲ್ಲೆಯ ಸಕಲೇಶಪುರ ಮತ್ತು ಬೇಲೂರು ತಾಲೂಕುಗಳ ಶಾಸನಗಳನ್ನು ಪ್ರಕಟಿಸಲಾಗಿದೆ. ೧೦ನೆಯ ಸಂಪುಟವು ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲೂಕುಗಳ ಶಾಸನಗಳನ್ನು ಒಳಗೊಂಡಿದೆ. ಹೀಗೆ ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ನಾಲ್ಕು ಶಾಸನ ಸಂಪುಟಗಳಿವೆ.

ಗೋಪಾಲ್ ಆರ್. ಅವರು ಸಂಪಾದಿಸಿರುವ 'ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಗ್ರಂಥದಲ್ಲಿ ಹಾಸನ ಜಿಲ್ಲೆಯ ಪ್ರಾಚೀನ ನೀರಾವರಿ ವ್ಯವಸ್ಥೆಯನ್ನು ಕುರಿತ ಒಂದು ಲೇಖನ ಪ್ರಕಟವಾಗಿದೆ. ಈ ಲೇಖನದಲ್ಲಿ ಹಾಸನ ಜಿಲ್ಲೆಯ ಶಾಸನೋಕ್ತ ಕೆರೆಗಳ ಬಗ್ಗೆ ಉಲ್ಲೇಖ ಮಾಡಲಾಗಿದೆ. ಲಲಿತಾಂಬ ಎನ್.ಆರ್. ಅವರು 'ಮಧ್ಯಕಾಲೀನ ಸಾಮಾಜಿಕ ಸಂಚಲನ' ಎಂಬ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯಲ್ಲಿ ಲೇಖಕರು ಅರಸೀಕೆರೆ ತಾಲೂಕಿನಲ್ಲಿ ಬರುವ ಶಾಸನಗಳನ್ನು ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಕಲೆ ಮತ್ತು ಸಾಹಿತ್ಯ ದೃಷ್ಟಿಯಿಂದ ಅಧ್ಯಯನ ಮಾಡಿದ್ದಾರೆ. ಇದರಲ್ಲಿ ಆರ್ಥಿಕ ವ್ಯವಸ್ಥೆಯನ್ನು ವಿವರಿಸುವಾಗ ನೀರಾವರಿ ವ್ಯವಸ್ಥೆಯಲ್ಲಿ ಕೆರೆಗಳ ಪಾತ್ರ, ಜಲಾಯನ ಪ್ರದೇಶ, ಕೆರೆಗಳನ್ನು ಕಟ್ಟಿಸಿದವರಿಗೆ ಕೊಡುಗೆಗಳನ್ನು ನೀಡಿರುವುದನ್ನು ಸೂಚಿಸಿದ್ದಾರೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಹಾಸನ ಜಿಲ್ಲಾ ದರ್ಶನ' ಎಂಬ

ಕಿರು ಪುಸ್ತಕದಲ್ಲಿ ಜಿಲ್ಲೆಯ ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಅದೇ ರೀತಿ ಉದಯರವಿ ಮಾವನೂರು ಅವರು ರಚಿಸಿರುವ 'ಆಲೂರು ತಾಲೂಕು ದರ್ಶನ' ಎಂಬ ಕಿರುಪುಸ್ತಕದಲ್ಲಿ ತಾಲೂಕಿನ ಸ್ಥೂಲ ಪರಿಚಯ ಮಾಡಿದ್ದಾರೆ. ಮಳಲಿ ವಸಂತ ಕುಮಾರ್(ಸಂ)ರವರ 'ಹೊಯ್ಸಳ ಸಂಪದ' ಗ್ರಂಥದಲ್ಲಿ ಬೇಲೂರಿನ ಭಿಷ್ಟಮ್ಮನ ಕೆರೆಗೆ ಸಂಬಂಧಿಸಿದಂತೆ ಒಂದು ಲೇಖನ ಪ್ರಕಟವಾಗಿದೆ. ಉದಯರವಿ ಅವರ 'ಹಾಸನ ಜಿಲ್ಲಾ ವೈಶಿಷ್ಟ್ಯ' ಎಂಬ ಕೃತಿಯಲ್ಲಿ ಹಾಸನ ಜಿಲ್ಲೆಯ ಭೌಗೋಳಿಕತೆ, ಪೌರಾಣಿಕತೆ, ಚಾರಿತ್ರಿಕ ಅಂಶಗಳು ಹಾಗೂ ಐತಿಹಾಸಿಕ ಸ್ಥಳಗಳನ್ನು ಕುರಿತು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಗೊರೂರು ಅನಂತರಾಜು ಅವರು ರಚಿಸಿರುವ 'ಹಾಸನ ಜಿಲ್ಲೆಯ ದೇವಾಲಯಗಳ ದರ್ಶನ' ಎಂಬ ಕೃತಿಯಲ್ಲಿ ಜಿಲ್ಲೆಯ ಎಂಟು ತಾಲೂಕುಗಳಲ್ಲಿ ಬರುವ ಪ್ರಮುಖ ದೇವಾಲಯಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಇದರಲ್ಲಿ ಕಣಕಟ್ಟೆ, ಬೇಲೂರು, ಆನೇಕೆರೆ, ಹಾರನಹಳ್ಳಿ ಮತ್ತು ಉದೇವಾರದ ಕೆರೆಗಳ ದಡದಲ್ಲಿ ಇರುವ ದೇವಾಲಯಗಳನ್ನು ಪರಿಚಯಿಸಿದ್ದಾರೆ.

ಉಷಾರಾಣಿ ಎಚ್.ಎಸ್. ಅವರ 'ಹೊಯ್ಸಳ ಕಾಲದ ಕೆರೆ ನೀರಾವರಿ: ಒಂದು ವಿಶ್ಲೇಷಣೆ' ಎಂಬ ಲೇಖನವು ಇತಿಹಾಸ ದರ್ಶನ ಸಂಪುಟ ೭ರಲ್ಲಿ ಪ್ರಕಟವಾಗಿದೆ. ಈ ಲೇಖನದಲ್ಲಿ ನೀರು ಮನುಷ್ಯ ಮತ್ತು ಸಕಲ ಜೀವರಾಶಿಗಳಿಗೆ ಎಷ್ಟು ಅತ್ಯಗತ್ಯ ಎಂಬುದನ್ನು ತಿಳಿಸಿದ್ದಾರೆ. ಕರ್ನಾಟಕದಲ್ಲಿ ಸುಮಾರು ೩೦೦ ವರ್ಷಗಳ ಕಾಲ ಆಳ್ವಿಕೆ ನಡೆಸಿದ ಹೊಯ್ಸಳರು ನೀರಾವರಿಗೆ ನೀಡಿದ ಪ್ರೋತ್ಸಾಹ, ಅದರಲ್ಲಿ ಕೆರೆ ನೀರಾವರಿಯನ್ನು ಕುರಿತು ಶಾಸನೋಕ್ತವಾಗಿ ವಿಶ್ಲೇಷಿಸಿದ್ದಾರೆ. ಗೋಪಾಲ್ ಆರ್., ಗಂಗಾಧರ ಟಿ.ಎಸ್. ಅವರು ಸಂಪಾದಿಸಿರುವ ವಿಜಯನಗರ ಅಧ್ಯಯನ ಸಂಪುಟ ೧೭ರಲ್ಲಿ 'ಅರಸೀಕೆರೆ ತಾಲೂಕಿನ ವಿಜಯನಗರದ ಶಾಸನಗಳು' ಮತ್ತು 'ಅರಸೀಕೆರೆ ತಾಲೂಕಿನ ವಿಜಯನಗರದ ಕಾಲದ ಕೆರೆಗಳು' ಎಂಬ ಎರಡು ಲೇಖನಗಳು ಪ್ರಕಟವಾಗಿವೆ.

ದಿಕ್ಷೀತ್ ಜಿ.ಎಸ್ ಮತ್ತು ಇತರರು ರಚಿಸಿದ 'ಟ್ಯಾಂಕ್ ಇರಿಗೇಶನ್ ಇನ್ ಕರ್ನಾಟಕ: ಎ ಹಿಸ್ಟಾರಿಕಲ್ ಸರ್ವೆ' ಎಂಬ ಕೃತಿಯಲ್ಲಿ ಪ್ರಾಚೀನ ಕಾಲದಿಂದ ಬ್ರಿಟಿಷರ ಆಡಳಿತದವರಗಿನ ಕೆರೆಗಳ ಸಂರಕ್ಷಣೆಯನ್ನು ಪರಿಶೀಲಿಸಿದ್ದಾರೆ. ಜಲನಿರ್ವಹಣೆ ಮತ್ತು ಹಣಕಾಸು ಹೂಡಿಕೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಬಂಡವಾಳ ಹೂಡಿಕೆಗಳ ಕುರಿತು ಚರ್ಚಿಸಿದ್ದಾರೆ. ಈ ಕೃತಿಯನ್ನು ನೀಲತ್ತಹಳ್ಳಿ ಕಸ್ತೂರಿಯವರು 'ಕರ್ನಾಟಕದಲ್ಲಿ ಕೆರೆ ನೀರಾವರಿ' ಎಂಬ ಶಿರೋನಾಮೆಯೊಂದಿಗೆ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ.

ಕೊಟ್ರಯ್ಯ ಸಿ.ಟಿ.ಎಂ. ಅವರ 'ಇರಿಗೇಶನ್ ಸಿಸ್ಟಮ್ ಅಂಡರ್ ವಿಜಯನಗರ ಎಂಪೈರ್' ಗ್ರಂಥದಲ್ಲಿ ವಿಜಯನಗರ ಕಾಲದಲ್ಲಿ ನಿರ್ಮಾಣವಾದ ಪ್ರಮುಖ ಕೆರೆಗಳು ಹಾಗು ಪೂರಕ

ಕಾಮಗಾರಿಗಳಾದ ಕಾಲುವೆಗಳು, ತೂಬುಗಳು ಮತ್ತು ಕೋಡಿಗಳ ರಚನೆಯಲ್ಲಿ ನಮ್ಮ ಹಿರಿಯರು ಅನುಸರಿಸಿದ ತಂತ್ರಜ್ಞಾನದ ಅರಿವನ್ನು ಮೂಡಿಸಿದ್ದಾರೆ. ಕೆರೆಗಳನ್ನು ಕಟ್ಟುವಲ್ಲಿ ಮುಂದಾದ ರಾಜರು, ದಂಡನಾಯಕರು ಮತ್ತು ಗ್ರಾಮಗಳ ಸ್ಥಾನಿಕ ಅಧಿಕಾರಿಗಳ ಬಗ್ಗೆ ಶಾಸನಾಧಾರಗಳ ಮೂಲಕ ಪರಿಚಯಿಸಿದ್ದಾರೆ. ಅದರಲ್ಲಿ ಸಂಪೋಷಣೆ ಮತ್ತು ಬಲಿದಾನಗಳು ಎಂಬ ಅಧ್ಯಯನದಲ್ಲಿ ನೀರಾವರಿ ಕಾರ್ಯಗಳಲ್ಲಿ ನಡೆಯುತ್ತಿದ್ದ ಮಾನವರ ಮತ್ತು ಪ್ರಾಣಿಗಳ ಬಲಿದಾನಗಳ ಬಗ್ಗೆ ಚರ್ಚಿಸಿದ್ದಾರೆ. ಈ ಕೃತಿಯನ್ನು ಧ್ರುವನಾರಾಯಣ ಎಂ. ಅವರು 'ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ' ಎಂಬ ಹೆಸರಿನೊಂದಿಗೆ ಕನ್ನಡಕ್ಕೆ ಅನುವಾದಿಸಿದ್ದಾರೆ. ವಾಸುದೇವನ್ ಸಿ.ಎಸ್ ಅವರು 'ಹಂಪಿ ಪರಿಸರದ ಕೆರೆಗಳು' ಕೃತಿಯಲ್ಲಿ ಕೆರೆ ಕಟ್ಟಿಸುವುದರೊಂದಿಗೆ ಅದರ ರಕ್ಷಣೆ ಮತ್ತು ನಿರ್ವಹಣೆಯ ಬಾಧ್ಯತೆಗಳು, ಕೆರೆ ಕಟ್ಟುವವನಿಗೆ ಕಟ್ಟುಮಾನ್ಯ, ಕಟ್ಟುಕೊಡುಗೆ, ಬಿಟ್ಟುವತ್ತ, ದಸವಂದ ಇನ್ನಿತರ ಸವಲತ್ತುಗಳನ್ನು ನೀಡಿರುವುದನ್ನು ಹೇಳಿದ್ದಾರೆ. ಜತೆಗೆ ಕೆರೆ ಕಟ್ಟಿಸಲು ಇದ್ದ ನಂಬಿಕೆ ಮತ್ತು ಆಚರಣೆಗಳನ್ನು ಕುರಿತು ಚರ್ಚಿಸಿದ್ದಾರೆ.

ರಾಜಾರಾಮ ಹೆಗಡೆ ಅವರು ಸಂಪಾದಿಸಿರುವ 'ಕೆರೆ ನೀರಾವರಿ ನಿರ್ವಹಣೆ: ಚಾರಿತ್ರಿಕ ಅಧ್ಯಯನ' ಎಂಬ ಗ್ರಂಥವು ಕರ್ನಾಟಕ ಕೆಲವು ಜಿಲ್ಲೆಗಳ ಪ್ರಮುಖ ಕೆರೆಗಳ ಚಾರಿತ್ರಿಕ ಅಂಶಗಳನ್ನು ಕುರಿತಿದೆ. ಇದು ಕೆರೆಗಳ ನಿರ್ವಹಣೆ, ತಂತ್ರಜ್ಞಾನ, ಜನಸಾಮಾನ್ಯರ ಪಾತ್ರ, ಫ್ರಾನ್ಸಿಸ್ ಬುಕಾನನ್ ಕಂಡಂತೆ ನೀರಾವರಿ ಬೆಳೆಗಳ ಬಗ್ಗೆ ಚರ್ಚಿಸಿರುವ ಲೇಖನಗಳ ಸಂಪುಟವಾಗಿದೆ. ಮುನಿರಾಜಪ್ಪ ಸಂಪಾದಿಸಿರುವ 'ಕರ್ನಾಟಕ ಕೆರೆ ನೀರಾವರಿ ಅಧ್ಯಯನ' ಎಂಬ ಗ್ರಂಥದಲ್ಲಿ ಹತ್ತು ಲೇಖನಗಳು ಪ್ರಕಟವಾಗಿವೆ. ಕರ್ನಾಟಕದಲ್ಲಿನ ಪ್ರಮುಖ ಕೆರೆಗಳು ಹಾಗು ಪ್ರಸ್ತುತ ಅವುಗಳ ಸ್ಥಿತಿಗತಿಗಳನ್ನು ಕುರಿತ ಲೇಖನಗಳಾಗಿವೆ.

ಹೀಗೆ ವಿವಿಧ ದೃಷ್ಟಿಕೋನಗಳಿಂದ ಅಧ್ಯಯನಗಳು ನಡೆದರೂ, ಕೆರೆಗಳಿಗೆ ಸಂಬಂಧಿಸಿದಂತೆ ಹಾಸನ ಜಿಲ್ಲೆಯ ಕೆರೆ ನೀರಾವರಿ ವ್ಯವಸ್ಥೆ ಕುರಿತಂತೆ ಸೂಕ್ಷ್ಮವಾದ ಅಧ್ಯಯನದ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ 'ಹಾಸನ ಜಿಲ್ಲೆಯ ಕೆರೆಗಳು'(ಪುರಾತತ್ವ ಮತ್ತು ಸಾಂಸ್ಕೃತಿಕ ಅಧ್ಯಯನ) ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧನಾ ನೆಲೆಯಲ್ಲಿ ಸಮಗ್ರ ಅಧ್ಯಯನವನ್ನು ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಅಧ್ಯಯನವು ತನ್ನದೇ ಆದ ವ್ಯಾಪ್ತಿಯನ್ನು ಹೊಂದಿರುತ್ತದೆ. ವ್ಯಾಪ್ತಿ ಎಂದರೆ ಆ ಕ್ಷೇತ್ರದ ವೈಶಾಲ್ಯ, ವಿಷಯದ ಹರವು. ಅಂದರೆ ಒಂದು ಅಧ್ಯಯನದ ಮೇರೆಗಳನ್ನು ಗುರುತಿಸುವುದು ಎಂದರ್ಥ. ಒಂದು ವಿಷಯದ ಬಗ್ಗೆ ಅಥವಾ ಒಂದು ಸ್ಥಳದ ಬಗ್ಗೆ ಅಧ್ಯಯನ

ಮಾಡಬೇಕಾದರೆ ಅದು ಎಷ್ಟರಮಟ್ಟಿಗೆ ತನ್ನ ಪ್ರದೇಶವನ್ನು ಎಲ್ಲಿಯವರೆಗೆ ವಿಸ್ತರಿಸಿದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸುವುದು ಅಧ್ಯಯನದ ದೃಷ್ಟಿಯಿಂದ ಒಳ್ಳೆಯದು. ಪ್ರಸ್ತುತ ಅಧ್ಯಯನದಲ್ಲಿ ಹಾಸನ ಜಿಲ್ಲೆಯ ಕೆರೆಗಳನ್ನು ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ಈ ಪರಿಸರದ ಭೌಗೋಳಿಕತೆಯು ಕೆರೆಗಳ ಅಧ್ಯಯನದಲ್ಲಿ ಎಷ್ಟರಮಟ್ಟಿಗೆ ಸಹಾಯಕವಾಗಿದೆ ಎಂಬ ಹಿನ್ನೆಲೆಯಲ್ಲಿ ಇದರ ವ್ಯಾಪ್ತಿಯನ್ನು ನಿರ್ದಿಷ್ಟಪಡಿಸಲಾಗಿದೆ.

ಹಾಸನ ಜಿಲ್ಲೆಯು ಅರಸೀಕೆರೆ, ಚನ್ನರಾಯಪಟ್ಟಣ, ಹಾಸನ, ಹೊಳೆನರಸೀಪುರ, ಅರಕಲಗೂಡು, ಸಕಲೇಶಪುರ, ಬೇಲೂರು ಮತ್ತು ಆಲೂರು ತಾಲೂಕುಗಳನ್ನು ಒಳಗೊಂಡಿದೆ. ಈ ಪ್ರದೇಶವು ನೀರಾವರಿಗಾಗಿ ಬಹಳ ಹಿಂದಿನಿಂದಲೂ ಕೆರೆಗಳನ್ನು ಅವಲಂಬಿಸಿತ್ತು. ಇದರ ವ್ಯಾಪ್ತಿಯಲ್ಲಿ ೬೦೬೬ ಕೆರೆಗಳು ಬರುತ್ತವೆ. ಅಧ್ಯಯನದ ದೃಷ್ಟಿಯಿಂದ ಪ್ರತಿ ತಾಲೂಕಿನ ಗ್ರಾಮಗಳಲ್ಲಿನ ಪ್ರಮುಖ ಕೆರೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇತಿಹಾಸ ಆರಂಭಕಾಲದಿಂದ ಮೊದಲುಗೊಂಡು ಸ್ವತಂತ್ರದವರೆಗೂ ನಿರ್ಮಾಣಗೊಂಡ ಕೆರೆಗಳ ಅಧ್ಯಯನವು ಪ್ರಸ್ತುತ ಅಧ್ಯಯನದಲ್ಲಿ ಬರುತ್ತವೆ. ಈ ಅಧ್ಯಯನದ ವ್ಯಾಪ್ತಿ ಕೇವಲ ಕೆರೆಗಳ ನಿರ್ಮಾಣ, ನಿರ್ವಹಣೆಗೆ ಮಾತ್ರ ಸೀಮಿತವಾಗಿರದೆ ಕೆರೆ ಅಂಗಗಳಾದ ಜಲಾನಯನ ಪ್ರದೇಶ, ಕೆರೆ ಅಂಗಳ, ಅಚ್ಚುಕಟ್ಟು ಪ್ರದೇಶ, ಏರಿ, ತೂಬು, ಕೋಡಿ ಮತ್ತು ಕಾಲುವೆಗಳ ತಂತ್ರಜ್ಞಾನವನ್ನು ಒಳಗೊಂಡಿದೆ. ಹಾಗೆಯೇ ಕೆರೆ ಕುರಿತತಾದ ಐತಿಹ್ಯಗಳು, ಸಮಾಜದಲ್ಲಿ ಕೆರೆ ನೀರಿನ ಬಳಕೆಗೆ ಇದ್ದ ನಿಷೇಧಗಳು, ನಿಬಂಧನೆಗಳು ಮತ್ತು ಕೆರೆಯೊಂದಿಗಿನ ನಂಬಿಕೆ, ಆಚರಣೆ ಹಾಗು ಕೃಷಿ, ಗ್ರಾಮಗಳ ಆರ್ಥಿಕ ಅಭಿವೃದ್ಧಿಯಲ್ಲಿ ಕೆರೆಯ ಮಹತ್ವವನ್ನು ತಿಳಿಯುವ ಪ್ರಯತ್ನ ಹೊಂದಿದೆ.

ಅಧ್ಯಯನದ ವಿಧಾನ

ಹಾಸನ ಜಿಲ್ಲೆಯ ಕೆರೆಗಳನ್ನು ಕುರಿತ ಅಧ್ಯಯನವು ಬಹುತೇಕ ಕ್ಷೇತ್ರಕಾರ್ಯ ಆಧಾರಿತವಾಗಿದೆ. ಇದರ ಬಗ್ಗೆ ಇದುವರೆಗೆ ನಡೆದಿರುವ ಅಧ್ಯಯನಗಳನ್ನು ಗಮನದಲ್ಲಿಟ್ಟುಕೊಂಡು ಕ್ಷೇತ್ರಕಾರ್ಯದ ಮೂಲಕ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಅಧ್ಯಯನಕ್ಕೆ ಪೂರಕವಾಗಿರುವ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳಿಂದಲೂ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಕೆರೆಗಳ ಬಗ್ಗೆ ಸಣ್ಣ ನೀರಾವರಿ ಇಲಾಖೆ, ಜಿಲ್ಲಾ ತಾಲೂಕು ಮತ್ತು ಗ್ರಾಮ ಪಂಚಾಯಿತಿಗಳು ನೀಡಿದ ದಾಖಲೆಗಳು ಮತ್ತು ಕೃಷಿ ಇಲಾಖೆಯಿಂದ ಬೆಳೆಗಳಿಗೆ ಸಂಬಂಧಿಸಿದ ವರದಿಗಳನ್ನು ಸಂಗ್ರಹಿಸಿ ಬಳಸಿಕೊಳ್ಳಲಾಗಿದೆ. ಹಾಗು ಕೆರೆ, ಕೆರೆಗಳ ಏರಿ, ತೂಬು, ಕೋಡಿ ಮತ್ತು ಕಾಲುವೆ ಇವುಗಳ ಛಾಯಾಚಿತ್ರಗಳನ್ನು ಸಂಗ್ರಹಿಸಿ, ಅವುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಪಡೆಯಲಾಗಿದೆ. ಈ ಮಾಹಿತಿಗಳನ್ನು ಇಂಡೆಕ್ಸ್ ಕಾರ್ಡ್‌ಗಳಲ್ಲಿ ದಾಖಲಿಸಿಕೊಂಡು ನಂತರ ವರ್ಗೀಕರಿಸಿ ವಿಷಯಗಳನ್ನು ವಿಶ್ಲೇಷಿಸಿ, ಸಂಬಂಧಪಟ್ಟ ಅಧ್ಯಾಯಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಜತೆಗೆ ಕೆರೆಗಳು ಮತ್ತು ಅದರ ಪರಿಸರದಲ್ಲಿರುವ

ಶಾಸನಗಳು, ದೇವಾಲಯಗಳನ್ನು ಸಹ ದಾಖಲಿಸಿಕೊಳ್ಳಲಾಯಿತು. ಹಾಗೆಯೇ ಕೆರೆಗಳಿಗೆ ಸಂಬಂಧಿಸಿದ ಮೌಖಿಕ ಪರಂಪರೆ, ಜಾನಪದ ಕಾವ್ಯ, ಕಥೆ, ನಂಬಿಕೆ ಮತ್ತು ಆಚರಣೆಗಳನ್ನು ಸಂಗ್ರಹಿಸಿ, ಆ ಮೂಲಕ ಕೆರೆಗಳಿಗಿರುವ ಸಂಬಂಧವನ್ನು ಗುರುತಿಸಲಾಗಿದೆ. ಹಾಗೆಯೇ ಏರಿ, ತೂಬು ಮತ್ತು ಕೋಡಿಗಳಿಗೆ ಸಂಬಂಧಿಸಿದ ರೇಖಾಚಿತ್ರಗಳನ್ನು ಬಿಡಿಸಲಾಗಿದೆ. ಹೀಗೆ ಪುರಾತತ್ವ, ಚರಿತ್ರೆ ಮತ್ತು ಜಾನಪದ ಆಕರಗಳನ್ನು ಬಳಸಿಕೊಂಡು ಬಹುಶಿಸ್ತೀಯ ನೆಲೆಯಲ್ಲಿ ಅಧ್ಯಯನ ಮಾಡಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ 'ಹಾಸನ ಜಿಲ್ಲೆಯ ಕೆರೆಗಳು'(ಪುರಾತತ್ವ ಮತ್ತು ಸಾಂಸ್ಕೃತಿಕ ಅಧ್ಯಯನ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಏಳು ಅಧ್ಯಾಯಗಳನ್ನಾಗಿ ವಿಭಾಗಿಸಲಾಗಿದೆ. ಪ್ರತಿ ಅಧ್ಯಾಯವು ಉಪಶೀರ್ಷಿಕೆಗಳಿಂದ ಕೂಡಿದೆ.

ಮೊದಲನೆಯ ಅಧ್ಯಾಯನವು ಪ್ರಸ್ತಾವನೆಯ ರೂಪದಲ್ಲಿದ್ದು, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಕಾಲಮಿತಿಗಳನ್ನು ಸ್ಪಷ್ಟಪಡಿಸಲಾಗಿದೆ. ಈವರಗೆ ನಡೆದ ಅಧ್ಯಯನಗಳ ಸಮೀಕ್ಷೆ ಮಾಡಲಾಗಿದ್ದು, ಕರ್ನಾಟಕ ಒಳಗೊಂಡಂತೆ ನಡೆದ ಕೆರೆ ನೀರಾವರಿ ಗ್ರಂಥಗಳು ಮತ್ತು ಬಿಡಿ ಲೇಖನಗಳನ್ನು ಪರಿಗಣಿಸಿ ವಿಶ್ಲೇಷಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಲಭ್ಯವಿರುವ ಆಕರಗಳ ಸಮೀಕ್ಷೆ ನಡೆಸಿ, ಅಧ್ಯಯನದಲ್ಲಿ ಬಹುಶಿಸ್ತೀಯ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಹಾಸನ ಜಿಲ್ಲೆಯ ಭೌಗೋಳಿಕ ಪರಿಚಯ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ಪ್ರಸ್ತಾಪಿಸಲಾಗಿದೆ. ಭೌಗೋಳಿಕತೆಯಲ್ಲಿ ಹಾಸನ ಜಿಲ್ಲೆಯ ಬೆಟ್ಟಗುಡ್ಡ, ಅರಣ್ಯಸಂಪತ್ತು, ಮಣ್ಣಿನ ಫಲವತ್ತತೆ, ಬೆಳೆಗಳು, ಜಲಸಂಪನ್ಮೂಲಗಳು ಹಾಗು ಜನಸಂಖ್ಯೆಯನ್ನು ವಿವರವಾಗಿ ಚರ್ಚಿಸಲಾಗಿದೆ. ಚಾರಿತ್ರಿಕ ಹಿನ್ನೆಲೆಯಲ್ಲಿ ಜಿಲ್ಲೆಯ ಪ್ರಾಗಿತಿಹಾಸ ಮತ್ತು ವಿವಿಧ ರಾಜಮನೆತನಗಳಾದ ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕೊಂಗಾಳ್ವರು, ಹೊಯ್ಸಳರು, ವಿಜಯನಗರ, ಬೇಲೂರು ನಾಯಕರು, ಹೊಳೆನರಸೀಪುರದ ಪ್ರಭುಗಳು ಮತ್ತು ಜಾವಗಲ್ ಪಾಳೆಯಗಾರರು ಮತ್ತು ಕಾನಕಾನಹಳ್ಳಿ ಪ್ರಭುಗಳ ಆಳ್ವಿಕೆಯ ಅವಧಿಯಲ್ಲಿ ನಿರ್ಮಿಸಲಾದ ಕೆರೆಗಳ ಇತಿಹಾಸವನ್ನು ಸಮಕಾಲೀನ ಸಾಹಿತ್ಯಕ ಗ್ರಂಥಗಳು ಮತ್ತು ಶಾಸನಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯ ಕೆರೆಗಳನ್ನು ಕುರಿತಿದೆ. ಇದರಲ್ಲಿ ಕೆರೆಗಳ ವರ್ಗೀಕರಣ, ನಾಮಾವಳಿಗಳು, ಸರಣಿ ಕೆರೆಗಳು ಹಾಗು ಕೆರೆ ಅಂಗಗಳಾದ ಜಲಾನಯನ ಪ್ರದೇಶ, ಕೆರೆ ಅಂಗಳ, ಅಚ್ಚುಕಟ್ಟು ಪ್ರದೇಶ ಮತ್ತು ಕೆರೆಯ ಪ್ರಮುಖ ಭಾಗಗಳಾದ ಏರಿ ನಿರ್ಮಾಣ, ತೂಬುಗಳ ರಚನೆ, ಕೋಡಿ ರಚನೆ, ಕಾಲುವೆ ಮತ್ತು ತೂಬುಗಳ ನಿರ್ವಹಣೆಯಲ್ಲಿ ನೀರ್ಗಂಟಿಗಳ ಪಾತ್ರ ಹಾಗು ತೂಬಿನ

ಮೇಲಿನ ಉಬ್ಬುಶಿಲ್ಪಗಳನ್ನು ಕುರಿತು ಚರ್ಚಿಸಲಾಗಿದೆ. ಜಲಾನಯನ ಪ್ರದೇಶಗಳನ್ನು ಕಾಪಾಡುವುದಕ್ಕಾಗಿ ನಮ್ಮ ಪೂರ್ವಿಕರು ಕೈಗೊಳ್ಳುತ್ತಿದ್ದ ಶಿಸ್ತುಬದ್ಧ ಕಾರ್ಯಚಟುವಟಿಕೆಗಳನ್ನು ತಿಳಿಸಲಾಗಿದೆ. ಅವುಗಳಲ್ಲಿ ಕೆರೆ ನಿರ್ವಹಣೆ ನೋಡಿಕೊಳ್ಳುತ್ತಿದ್ದ ಅಧಿಕಾರಿಗಳ ವರ್ಗ, ಕೆರೆ ಕಟ್ಟಿಸಲು ಮಾಡಿದ ವೆಚ್ಚ, ಕೆರೆ ನಿರ್ಮಿಸಲು ಪಾಲಿಸಬೇಕಾದ ನಿಯಮಗಳು, ನಿರ್ವಹಣೆಯಲ್ಲಿನ ಸಾಮಾನ್ಯಕ್ರಮಗಳು, ಕೆರೆ ಕಟ್ಟುವವನಿಗೆ ಮತ್ತು ನಿರ್ವಹಣೆಯಲ್ಲಿ ತೊಡಗಿದವರಿಗೆ ಕೆರೆಬಂಡಿ, ಬಿತ್ತುವಟ್ಟ, ದಸವಂದ ಹಾಗೂ ಕಟ್ಟು–ಕೊಡುಗೆಗಳಂತಹ ಕೆರೆ ಕೊಡುಗೆಗಳನ್ನು ಕುರಿತು ಶಾಸನಗಳಿಂದ ಮಾಹಿತಿ ಸಂಗ್ರಹಿಸಿ ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಜಿಲ್ಲೆಯ ಪ್ರಮುಖ ಕೆರೆಗಳು, ಅವುಗಳ ಸ್ಥಿತಿಗತಿ ಮತ್ತು ಉಪಯೋಗವನ್ನು ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ಐತಿಹ್ಯಗಳನ್ನು ಕುರಿತಾಗಿದೆ. ಇದರಲ್ಲಿ ತ್ಯಾಗ ಬಲಿದಾನಗಳ ಕಥೆಗಳಾಗಿ ಪ್ರಚಲಿತವಾಗಿರುವ ಲಾವಣಿಗಳು, ಕಥೆ, ಕಾವ್ಯಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಸಾರ್ವಜನಿಕವಾಗಿ ಉಪಯುಕ್ತವಾಗುವ ಕೆರೆಗಳಿಗೆ ಹಾರವಾಗಲು ಮುಂದಾದ ಸ್ತ್ರೀಯರ ಮನಸ್ಥಿತಿ, ಕೆರೆ ಸಂರಕ್ಷಣೆಯಲ್ಲಿ ಕುಲುವಾಡಿಯ ಮರಣ ಹಾಗು ಕೆರೆಗೆ ಹಾರ ಕೊಡಲು ಮುಂದಾದ ಗೌಡರ ಘನತೆ, ಸ್ವಾರ್ಥತೆ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವ ಅವರ ಕಾರ್ಯಗಳನ್ನು ಚರ್ಚಿಸಲಾಗಿದೆ. ಅಲ್ಲದೆ ಕೆರೆ ಪರಿಸರದಲ್ಲಿರುವ ದೇವಾಲಯ ಮತ್ತು ಪ್ರಾಚ್ಯಾವಶೇಷಗಳಿಗೆ ಸಂಬಂಧಿಸಿದ ಐತಿಹ್ಯಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಐದನೆಯ ಅಧ್ಯಾಯ ಕೆರೆ ಮತ್ತು ಸಮಾಜ. ಇದರಲ್ಲಿ ಕೆರೆ ನೀರಿನ ಬಳಕೆಗೆ ಇದ್ದ ಸಮಸ್ಯೆಗಳು, ವ್ಯಾಜ್ಯಗಳು ಹಾಗು ಸ್ಪೃರ್ಶ ಮತ್ತು ಅಸ್ಪೃರ್ಶ ಸ್ಪರ್ಶಗಳೆಂಬ ನಿಷೇಧಗಳು ಮತ್ತು ನಿಬಂಧನೆಗಳನ್ನು ಚರ್ಚಿಸಲಾಗಿದೆ. ಕೆರೆ ಮತ್ತು ಸಂಸ್ಕೃತಿ ಉಪ ಶೀರ್ಷಿಕೆಯಲ್ಲಿ ಕೆರೆಗಳಿಗೆ ಸಂಬಂಧಿಸಿದ ನಂಬಿಕೆ ಮತ್ತು ಆಚರಣೆಗಳನ್ನು ಪ್ರಸ್ತಾಪಿಸಲಾಗಿದೆ. ಕೃಷಿಕರು ನೀರಿನ ಅಧಿದೇವತೆಯನ್ನು ಆರಾಧ್ಯದೈವವಾಗಿ ಮಾಡಿಕೊಂಡು ವಿವಿಧ ಬಗೆಯ ಆಚರಣೆಗಳನ್ನು ನಡೆಸುತ್ತಾರೆ. ಅವುಗಳಲ್ಲಿ ಗಂಗಮ್ಮನ ಪೂಜೆ, ಗಂಗಾಸ್ನಾನ, ಮಳೆ ಸಂಬಂಧಿತ ಆಚರಣೆ, ತೆಪ್ಪೋತ್ಸವ, ಬಂಡಿಹಬ್ಬ, ನಾಗರಪೂಜೆ, ಬ್ರಹ್ಮದೇವರ ಪೂಜೆ, ಕೆರೆ ಬಂದಮ್ಮ, ಮತ್ತು ವಾರ್ಷಿಕವಾಗಿ ನಡೆಯುವ ಜಾತ್ರೆ, ಉತ್ಸವಗಳನ್ನು ಕುರಿತು ವಿವೇಚಿಸಲಾಗಿದೆ.

ಅಧ್ಯಾಯ ಆರರಲ್ಲಿ ಕೆರೆ ಮತ್ತು ಆರ್ಥಿತೆಯನ್ನು ಪರಿಶೀಲಿಸಲಾಗಿದೆ. ಇದರಲ್ಲಿ ಕೆರೆಗಳಿಂದ ಗ್ರಾಮಗಳ ಜನರ ಉದ್ಯೋಗ ಮತ್ತು ಆರ್ಥಿಕ ಪ್ರಗತಿಯನ್ನು ಕುರಿತು ತಿಳಿಸಲಾಗಿದೆ. ಅಲ್ಲದೆ ಜಿಲ್ಲೆಯಲ್ಲಿನ ತರಿ, ಖುಷ್ಕಿ, ಮತ್ತು ಬಾಗಾಯ್ತು ಬೆಳೆಗಳು, ಕೆರೆ ಪರಿಸರದಲ್ಲಿನ ದೇವಾಲಯಗಳಿಗೆ ದತ್ತಿ ಬಿಟ್ಟ ತರಿ ಮತ್ತು ಖುಷ್ಕಿ ಭೂಮಿ, ಕಾಡುಗಳನ್ನು ಕಡಿದು ಕೃಷಿಗೆ ಇಂಬುಕೊಟ್ಟಿರುವ ಶಾಸನಗಳು ಹಾಗೂ ಫ್ರಾನ್ಸಿಸ್ ಬುಕಾನನ್ ಕಂಡಂತಹ ಕೃಷಿ ಬೆಳೆಗಳನ್ನು ಚರ್ಚಿಸಲಾಗಿದೆ. ಅದೇ

ರೀತಿ ಶಾಸನಗಳಲ್ಲಿ ಉಲ್ಲೇಖವಾದ ಬೆಳೆಗಳು, ಪ್ರಸ್ತುತ ದಿನಗಳಲ್ಲಿ ಅವುಗಳ ಬಳಕೆ, ಕೆರೆ ನೀರನ್ನು ಉಪಯೋಗಿಸಿಕೊಂಡು ಬೆಳೆದ ಬೆಳೆಗಳು, ಅವುಗಳಲ್ಲಿ ಏಕದಳಧಾನ್ಯ, ದ್ವಿದಳಧಾನ್ಯ, ತೋಟದ ಬೆಳೆ, ವಾಣಿಜ್ಯ ಬೆಳೆ, ಹಣ್ಣು ಮತ್ತು ತರಕಾರಿಗಳನ್ನು ಕುರಿತು ವಿವರಿಸಲಾಗಿದೆ.

ಕೊನೆಯ ಅಧ್ಯಾಯವು ಸಮಾರೋಪವನ್ನು ಒಳಗೊಂಡಿದ್ದು, ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ನಿರೂಪಿಸಲಾಗಿದೆ. ಹಾಸನ ಜಿಲ್ಲೆಯ ಕೆರೆಗಳನ್ನು ಅಧ್ಯಯನಕ್ಕೊಳಪಡಿಸಿ, ಅವುಗಳೊಂದಿಗಿದ್ದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ವಿವಿಧ ಆಕರಗಳ ನೆರವು ಮತ್ತು ಕ್ಷೇತ್ರ ಕಾರ್ಯದ ತಿಳಿವಳಿಕೆಯೊಂದಿಗೆ ಅಧ್ಯಯನ ಮಾಡಲಾಗಿದೆ. ಹಾಗು ಈ ಮೂಲಕ ಮಹತ್ವದ ಫಲಿತಗಳನ್ನು ದಾಖಲಿಸಲಾಗಿದೆ.

ಅನುಬಂಧದಲ್ಲಿ ಪರಾಮರ್ಶನ ಗ್ರಂಥಗಳು, ಸಂಕ್ಷೇಪ ಸೂಚಿ, ಪಾರಿಭಾಷಿಕ ಶಬ್ದಕೋಶ, ವಕ್ತೃಗಳ ವಿವರಗಳಿವೆ. ನಂತರ ವಿವಿಧ ಮೂಲಗಳಿಂದ ನೀರಾವರಿಯಾದ ಪ್ರದೇಶ, ತಾಲೂಕುವಾರು ಕೆರೆಗಳ ವಿವರ, ಜಿಲ್ಲೆಯ ದೊಡ್ಡ ಕೆರೆಗಳ ಪಟ್ಟಿ ಮತ್ತು ನಕ್ಷೆಗಳು, ರೇಖಾಚಿತ್ರಗಳು ಹಾಗು ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ.

ಅಡಿಟಿಪ್ಪಣಿಗಳು

೧. ವಾಸುದೇವನ್ ಸಿ.ಎಸ್., ೨೦೦೧: ಹಂಪಿ ಪರಿಸರದ ಕೆರೆಗಳು, ಪು.೪

೨. ನೀಲತ್ತಹಳ್ಳಿ ಕಸ್ತೂರಿ(ಅನು), ೨೦೦೦: ಕರ್ನಾಟಕದಲ್ಲಿ ಕೆರೆ ನೀರಾವರಿ(ಮೂಲ: ದೀಕ್ಷಿತ್ ಜಿ.ಎಸ್., ಕುಪ್ಪುಸ್ವಾಮಿ ಜಿ.ಆರ್., ಮೋಹನ್ ಎಸ್.ಕೆ.), ಪು.೧

೩. ಮುನಿರಾಜಪ್ಪ, ೨೦೦೯: ಕರ್ನಾಟಕ ಕೆರೆ ನೀರಾವರಿ ಅಧ್ಯಯನ, ಪು.೮೫

೩. ನಾಯಕ ಡಿ.ಬಿ.(ಸಂ.), ೨೦೦೫: ಬಯಲು ಸೀಮೆಯ ಜಲಸಂಸ್ಕೃತಿ ಮತ್ತು ನಂಬಿಕೆಗಳು, ಜಾನಪದ ಲೇಖನಗಳು, ಪು.೧೨೦

೪. ಪ್ರಹ್ಲಾದರಾವ್ ಕೆ., ೨೦೦೫: ಕೆರೆಯ ಹಾರ, ಪು.೫೪

೫. ಎಸ್.ಐ.ಐ. ಸಂ.IV, ನಂ.೨೬.

ಅಧ್ಯಾಯ – ಎರಡು

ಭೌಗೋಳಿಕತೆ ಮತ್ತು ಚಾರಿತ್ರಿಕ ಹಿನ್ನೆಲೆ

ಅಧ್ಯಾಯ – ಎರಡು

ಭೌಗೋಳಿಕತೆ ಮತ್ತು ಚಾರಿತ್ರಿಕ ಹಿನ್ನೆಲೆ

ಯಾವುದೇ ಒಂದು ಪ್ರದೇಶದ ಅಧ್ಯಯನ ಕೈಗೊಳ್ಳುವ ಪೂರ್ವದಲ್ಲಿ ಆ ಪ್ರದೇಶದ ಭೌಗೋಳಿಕ ವಿವರಗಳನ್ನು ತಿಳಿದುಕೊಳ್ಳುವುದು ಅಗತ್ಯವಾಗಿದೆ. ಇತಿಹಾಸ ಮತ್ತು ಭೂಗೋಳ ಶಾಸ್ತ್ರಗಳು ಪರಸ್ಪರ ನಿಕಟವಾದ ಸಂಬಂಧ ಹೊಂದಿವೆ. ಭೌಗೋಳಿಕ ಅಂಶಗಳು ಪ್ರಭಾವ ಬೀರದ ಪ್ರದೇಶ ಇಲ್ಲ. ಕಾರಣ ಆ ಪ್ರದೇಶದ ಜನರ ಜೀವನವನ್ನು ರೂಪಿಸುವಲ್ಲಿ ಭೌಗೋಳಿಕ ಪರಿಸರದ ಪಾತ್ರ ಪ್ರಮುಖವಾಗಿದೆ. ಪ್ರಾಚೀನ ನಾಗರಿಕತೆಗಳ ಉಗಮ ಮತ್ತು ವಿಕಾಸ ನದಿ ದಂಡೆಗಳ ಮೇಲೆ ಆಗಿರುವುದನ್ನು ಗಮನಿಸಿದಾಗ ಭೌಗೋಳಿಕ ಅಂಶಗಳ ಪ್ರಾಮುಖ್ಯತೆಯನ್ನು ತಿಳಿಯಬಹುದು. ಒಂದು ಪ್ರದೇಶದಲ್ಲಿ ಮಾನವನು ನೆಲೆ ನಿಲ್ಲಲು ಆ ಪ್ರದೇಶದಲ್ಲಿ ಹುಟ್ಟಿ ಹರಿಯುವ ನದಿಗಳು, ತೀರಪ್ರದೇಶ, ಪರ್ವತಶ್ರೇಣಿ, ಭೂಗರ್ಭಸಂಪತ್ತು, ಅರಣ್ಯಸಂಪತ್ತು, ಹವಾಗುಣ, ಉಷ್ಣಾಂಶ ಮತ್ತು ಮಣ್ಣಿನ ರಚನೆ ಮುಂತಾದ ಭೌಗೋಳಿಕ ಅಂಶಗಳು ಕಾರಣವಾಗಿವೆ. ಈ ಹಿನ್ನೆಲೆಯಲ್ಲಿ ಆಯಾ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿಯಲು ಅಲ್ಲಿನ ಭೌಗೋಳಿಕ ಅಂಶಗಳು ಸಹಕಾರಿಯಾಗಿವೆ.

ಕರ್ನಾಟಕದ ದಕ್ಷಿಣ ಭಾಗದಲ್ಲಿ ಬರುವ ಜಿಲ್ಲೆ ಹಾಸನ. ಅದು 'ಬಡವರ ಊಟಿ' ಎಂದೇ ಪ್ರಸಿದ್ಧಿ ಪಡೆದಿದೆ. ಜಿಲ್ಲೆಯು ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಪತ್ತಿನ ಜೊತೆಗೆ ವಿಶಿಷ್ಟವಾದ ಭೌಗೋಳಿಕತೆ ಮತ್ತು ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿದೆ. ಹಾಸನ ಜಿಲ್ಲೆಯು ಉತ್ತರದಲ್ಲಿ ಚಿಕ್ಕಮಗಳೂರು ಜಿಲ್ಲೆ, ಪೂರ್ವದಲ್ಲಿ ತುಮಕೂರು ಮತ್ತು ಮಂಡ್ಯ ಜಿಲ್ಲೆಗಳು, ದಕ್ಷಿಣದಲ್ಲಿ ಕೊಡಗು ಮತ್ತು ಮೈಸೂರು ಜಿಲ್ಲೆಗಳು ಹಾಗೂ ಪಶ್ಚಿಮದಲ್ಲಿ ದಕ್ಷಿಣಕನ್ನಡ ಜಿಲ್ಲೆಗಳಿಂದ ಸುತ್ತುವರೆದಿದೆ. ಈ ಜಿಲ್ಲೆ ೧೨° ೩೧° ಮತ್ತು ೧೩° ೩೩° ಉತ್ತರ ಅಕ್ಷಾಂಶ, ೭೫° ೩೯° ಮತ್ತು ೭೬° ೩೩° ಪೂರ್ವ ರೇಖಾಂಶಗಳ ನಡುವೆ ವ್ಯಾಪಿಸಿದೆ. ಜಿಲ್ಲೆಯ ಒಟ್ಟು ವಿಸ್ತೀರ್ಣ ೬೮೪೫ ಚ.ಕಿ.ಮೀ.ಗಳು.

ಉತ್ತರ-ದಕ್ಷಿಣವಾಗಿ ಉದ್ದಗಲಗಳನ್ನು ಹೊದಿದೆ. ೧೨೯ ಕಿ.ಮೀ. ಹಾಗೂ ಪೂರ್ವ-ಪಶ್ಚಿಮವಾಗಿ ೧೧೬ ಕಿ.ಮೀ.[೧] ಆಡಳಿತಾನುಕೂಲಕ್ಕಾಗಿ ಜಿಲ್ಲೆಯನ್ನು ಹಾಸನ ಮತ್ತು ಸಕಲೇಶಪುರ ಎಂದು ಎರಡು ಉಪವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಹಾಸನ ಉಪವಿಭಾಗಕ್ಕೆ ಅರಸೀಕೆರೆ, ಚನ್ನರಾಯಪಟ್ಟಣ, ಹಾಸನ, ಹೊಳೆನರಸೀಪುರ ಮತ್ತು ಅರಕಲಗೂಡು ತಾಲೂಕುಗಳು, ಸಕಲೇಶಪುರ ಉಪವಿಭಾಗಕ್ಕೆ ಸಕಲೇಶಪುರ ಮತ್ತು ಆಲೂರು ತಾಲೂಕುಗಳು ಸೇರಿವೆ. ಜಿಲ್ಲೆಯು ಸಮುದ್ರ ಮಟ್ಟದಿಂದ ೯೫೯.೮೧ ಮೀ. ಎತ್ತರದಲ್ಲಿದೆ. ಮೇಲ್ಮೈ ಲಕ್ಷಣಕ್ಕನುಗುಣವಾಗಿ ಜಿಲ್ಲೆಯನ್ನು ಮಲೆನಾಡು, ಅರೆಮಲೆನಾಡು, ಬಯಲುಸೀಮೆ ಎಂದು ಮೂರು ವಿಭಾಗಗಳನ್ನಾಗಿ ಮಾಡಬಹುದು. ಸಕಲೇಶಪುರ ತಾಲ್ಲೂಕು ಸಂಪೂರ್ಣ ಮಲೆನಾಡು ಪ್ರದೇಶವಾದರೆ. ಆಲೂರು, ಅರಕಲಗೂಡು ಮತ್ತು ಬೇಲೂರು ತಾಲೂಕುಗಳು ಅರೆಮಲೆನಾಡು ಗುಂಪಿಗೆ ಸೇರುತ್ತವೆ. ಚನ್ನರಾಯಪಟ್ಟಣ, ಹೊಳೆನರಸೀಪುರ, ಅರಸೀಕೆರೆ ಮತ್ತು ಹಾಸನ ತಾಲೂಕುಗಳು ಬಯಲುಪ್ರದೇಶವಾಗಿವೆ. ಜಿಲ್ಲೆಯಲ್ಲಿ ೮ ತಾಲೂಕುಗಳು, ೩೮ ಹೋಬಳಿಗಳು, ೧೧ ಪಟ್ಟಣಗಳು ಹಾಗೂ ೨೫೫೯ ಗ್ರಾಮಗಳಿವೆ. ೨೦೧೧-೧೨ರ ಜನಗಣತಿಯ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ ೧೭.೭೬.೪೨೧. ಇದರಲ್ಲಿ ಪುರುಷರು ೮.೮೫.೮೦೭ ಮತ್ತು ಹೆಂಗಸರು ೮೯.೦೪೧೪ರಷ್ಟು ಇರುವರು. ಗ್ರಾಮಾಂತರ ಪ್ರದೇಶದಲ್ಲಿ ೧೩.೯೯,೨೧೪ ಮತ್ತು ನಗರ ಪ್ರದೇಶದಲ್ಲಿ ೩೭,೭೦೭ರಷ್ಟು ಜನರು ವಾಸಿಸುತ್ತಿದ್ದಾರೆ.[೨] ಪ್ರತಿಶತ ಜನಸಂಖ್ಯೆ ಬೆಳವಣಿಗೆ ೩.೧೭ರಷ್ಟು ಇದೆ. ಈ ಪ್ರದೇಶದಲ್ಲಿ ಬ್ರಾಹ್ಮಣರು, ವೀರಶೈವರು, ಒಕ್ಕಲಿಗರು, ಅಕ್ಕಸಾಲಿಗರು, ದೇವಾಂಗದ ನೇಕಾರರು, ಬಣಜಿಗರು, ಕುರುಬರು, ಕುಂಬಾರರು, ಜೈನರು, ಮುಸಲ್ಮಾನರು, ಕ್ರೈಸ್ತರು, ಸಿಖ್ಖರು, ಮತ್ತು ಬೌದ್ಧ ಧರ್ಮಿಯರಿದ್ದಾರೆ. ಈ ಜನರು ವ್ಯವಸಾಯ, ವ್ಯಾಪಾರ, ಪಶುಪಾಲನೆ ಮತ್ತು ನೇಯ್ಗೆ ಕೆಲಸ ಮುಂತಾದ ಮುಖ್ಯ ಕಸುಬುಗಳ ಜೊತೆಗೆ ಕೆಲವು ಉಪಕಸುಬುಗಳಲ್ಲಿ ತೊಡಗಿದ್ದಾರೆ.

ಹಾಸನ ಪರಿಸರದಲ್ಲಿ ಬೆಟ್ಟಗುಡ್ಡಗಳಿವೆ. ಅವುಗಳಲ್ಲಿ ಮುಖ್ಯವಾದವು ಸುಬ್ರಹ್ಮಣ್ಯ ಅಥವಾ ಪುಷ್ಪಗಿರಿ(೧,೭೧೩ ಮೀ.), ದೇವರಬೆಟ್ಟ(೧,೨೮೨ ಮೀ.), ಮುರುಕನಗುಡ್ಡ(೧,೩೦೦ ಮೀ.) ಮತ್ತು ಜೇನುಕಲ್ಲುಬೆಟ್ಟ(೧,೩೮೯ ಮೀ.) ಇವುಗಳಲ್ಲದೆ ಕೆಲವು ಗ್ರಾನೈಟ್‌ಕಲ್ಲಿನ ಗಿರಿ ಶ್ರೇಣಿಗಳಿವೆ. ಅವುಗಳು ಬೇಲೂರು, ಹಾಸನ ಮತ್ತು ಅರಸೀಕೆರೆ ಮೂಲಕ ಹಾದುಹೋಗಿವೆ. ಅರಸೀಕೆರೆಯ ಹಿರೇಕಲ್ಲು ಗುಡ್ಡ(೧,೧೫೫ ಮೀ.), ಗರುಡನಗಿರಿ ಮತ್ತು ಚನ್ನರಾಯಪಟ್ಟಣ ತಾಲೂಕಿನಲ್ಲಿರುವ ಶ್ರವಣಬೆಳಗೊಳದ ಗೊಮ್ಮಟಗಿರಿ ಅಥವಾ ಇಂದ್ರಗಿರಿ(೧,೦೨೦ ಮೀ.), ಹಾಸನ ತಾಲೂಕಿನ ಸೀಗೆಗುಡ್ಡ(೧,೨೮೬ ಮೀ.), ಹೊಳೆನರಸೀಪುರದ ಮಲ್ಲಪ್ಪನ ಬೆಟ್ಟ, ಆಲೂರು ತಾಲೂಕಿನ ಮಹಾರಾಜನದುರ್ಗ, ಹಾಸನ ತಾಲೂಕಿನ ಕುಂತಿ ಗುಡ್ಡ ಮತ್ತು ಮಾಕುಂದೂರು ಹಾಗೂ ಅರಕಲಗೂಡು ತಾಲೂಕಿನ ಹಿಪ್ಪೆಬೆಟ್ಟ ಇತ್ಯಾದಿ. ಜಿಲ್ಲೆಯು ಸಾಕಷ್ಟು ಖನಿಜ ಸಂಪನ್ಮೂಲಗಳಿಂದ ಸಮೃದ್ಧವಾಗಿದೆ. ಕಟ್ಟಡಗಳ ನಿರ್ಮಾಣಕ್ಕೆ ಬೇಕಾದ ಗ್ರಾನೈಟ್‌ಕಲ್ಲು ದೊರೆಯುತ್ತದೆ. ಅರಸೀಕೆರೆ ಮತ್ತು ಬಾಣಾವರ ಸ್ಥಳಗಳಲ್ಲಿ ಒರಟಾದ ಬೆಣಚುಕಲ್ಲುಗಳು ಸಿಗುತ್ತವೆ. ಹೊಳೆನರಸೀಪುರದ ಈಡಿಗೊಂಡನಹಳ್ಳಿ, ತಿಮ್ಮಲಾಪುರ ಮತ್ತು ಎಣ್ಣೆಹೊಳೆ, ರಂಗನಬೆಟ್ಟ ಮುಂತಾದ ಕಡೆ ಕಲ್ನಾರು

ಸಿಕ್ಕಿವೆ. ಭೂಗರ್ಭ ಸಂಶೋಧನೆಯಿಂದ ಅರಸೀಕೆರೆಯಿಂದ ೧೭ ಕಿ.ಮೀ. ದೂರದಲ್ಲಿರುವ ಕಲ್ಯಾಡಿ ಗ್ರಾಮದ ಸಮೀಪ ತಾಮ್ರದ ಅದಿರಿನ ನಿಕ್ಷೇಪ ಇರುವುದು ಕಂಡುಬಂದಿದೆ. ಪೆನಸಮುದ್ರ, ಜೈರಾಪುರ, ಭಕ್ತರಹಳ್ಳಿ, ಚಿಕ್ಕನಹಳ್ಳಿ, ರಾಯಸಮುದ್ರ ಮತ್ತು ಜಂಬೂರುಗಳಲ್ಲಿ ಕ್ರೊಮೈಟ್ ಗಣಿಗಳಿವೆ.[೩]

ಹಾಸನ ಜಿಲ್ಲೆಯು ಉತ್ತಮ ಭೌಗೋಳಿಕ ಲಕ್ಷಣಗಳಿಂದಾಗಿ ಸಂಪದ್ಭರಿತ ಅರಣ್ಯಪ್ರದೇಶವನ್ನು ಹೊಂದಿದೆ. ಪೂರ್ವದಿಂದ ಪಶ್ಚಿಮದ ಕಡೆಗೆ ಹೋದಂತೆ ದಟ್ಟವಾದ ವಿವಿಧ ಜಾತಿಯ ಸಸ್ಯ ಸಂಪತ್ತನ್ನು ಹೊಂದಿರುವ ಕಾಡುಗಳಿವೆ. ಪ್ರಕೃತಿದತ್ತ ಅರಣ್ಯ ಮಾನವನ ಭೌತಿಕ ಅಗತ್ಯ ಪೂರೈಸುವುದರೊಂದಿಗೆ ಶುದ್ಧ ಗಾಳಿ, ನೀರು, ಮಣ್ಣಿನ ಫಲವತ್ತತೆ ಹಾಗು ಭೂಮಿಯ ತೇವಾಂಶವನ್ನು ಹಿಡಿದಿಟ್ಟುಕೊಂಡಿದೆ. ಜಿಲ್ಲೆಯಲ್ಲಿ ಒಟ್ಟು ಸುಮಾರು ೫೮,೭೭೫ ಹೆಕ್ಟೇರ್‌ಗಳಷ್ಟು ಅರಣ್ಯಪ್ರದೇಶವಿದೆ. ಮಂಜರಾಬಾದ್ ತಾಲೂಕಿನಲ್ಲಿ ಕಬ್ಬಿನಾಲೆ, ಕೆಂಪುಹೊಳೆ, ಕೆಂಚನಕುಮೇರಿ, ಕಾಗಿನೇರಿ ಮತ್ತು ಬಿಸಲೆ ಅರಣ್ಯಗಳು ದಕ್ಷಿಣಕನ್ನಡ ಜಿಲ್ಲೆಯವರೆಗೂ ವಿಸ್ತರಿಸಿವೆ. ಆಲೂರು ತಾಲೂಕಿನಲ್ಲಿರುವ ಹೊಂಗೆರೆ ಅರಣ್ಯ, ನಾಕಲಗೂಡು ಅರಣ್ಯ, ಹೊಳೆನರಸೀಪುರ ತಾಲೂಕಿನಲ್ಲಿರುವ ಒಂಟಿಗುಡ್ಡ ಅರಣ್ಯ, ಅರಕಲಗೂಡು ತಾಲೂಕಿನಲ್ಲಿರುವ ಬೈಸೂರು ಅರಣ್ಯ, ಹಾಸನ ತಾಲೂಕಿನಲ್ಲಿರುವ ರಾಮದೇವರಬೆಟ್ಟದ ಅರಣ್ಯ, ಅರಸೀಕೆರೆಯ ಬೆಟ್ಟದಪುರದ ಅರಣ್ಯ, ಚನ್ನರಾಯಪಟ್ಟಣ ತಾಲೂಕಿನ ಗೌಡಗೆರೆ ಅರಣ್ಯ ಇತ್ಯಾದಿ. ಈ ಅರಣ್ಯಪ್ರದೇಶದಲ್ಲಿ ಆಲ, ಹಲಸು, ಅತ್ತಿ, ನೇರಳೆ, ನಂದಿ, ಹೊನ್ನೆ, ತೇಗ, ಶ್ರೀಗಂಧದ ವೃಕ್ಷಗಳು ಹೇರಳವಾಗಿವೆ. ಇವುಗಳ ಜೊತೆಗೆ ಬಿದಿರು, ಬೀಡಿಗೆ ಉಪಯೋಗಿಸುವ ತೂಪರದ ಎಲೆ, ಗೋಂದು, ಮೇಣ, ಜೇನುತುಪ್ಪ ಮುಂತಾದವು ಸಿಗುತ್ತವೆ. ಇಲ್ಲಿನ ದಟ್ಟವಾದ ಅರಣ್ಯಪ್ರದೇಶವು ಕಾಡುಪ್ರಾಣಿಗಳಿಗೆ ಆಶ್ರಯತಾಣವಾಗಿವೆ. ಈ ಪರಿಸರದಲ್ಲಿ ಹುಲಿ, ಚಿರತೆ, ಕಿರುಬ, ತೋಳ, ಕಾಡುನಾಯಿ, ಮುಂಗುಸಿ, ಕರಡಿ, ನರಿ ಹಾಗೂ ವಿವಿಧ ಬಗೆಯ ಹಾವು ಮತ್ತು ಪಕ್ಷಿ ಮುಂತಾದ ವನ್ಯಜೀವಿಗಳಿವೆ.[೪]

ಜಿಲ್ಲೆಯು ವೈವಿಧ್ಯಮಯವಾದ ಹವಾಮಾನ ಹೊಂದಿದೆ. ನವಂಬರ್ ಕೊನೆಯಿಂದ ಜನವರಿವರೆಗೆ ಚಳಿಯಿದ್ದು ರಾತ್ರಿ ತುಂಬಾ ಮಂಜು ಬೀಳುತ್ತದೆ. ಫೆಬ್ರವರಿಯಿಂದ ಮೇ ತಿಂಗಳ ಕೊನೆಯವರೆಗೆ ಅರಬ್ಬೀಸಮುದ್ರದ ಕಡೆಯಿಂದ ತಂಗಾಳಿ ಬೀಸುವುದರಿಂದ ಹವಾಗುಣ ಹಿತಕರವಾಗಿರುತ್ತದೆ. ಹಿಂದೆ ಮಳೆಗಾಲ ಸಾಧಾರಣವಾಗಿ ಭರಣಿ ಮಳೆಯೊಂದಿಗೆ ಅಂದರೆ ಯುಗಾದಿ ಹಬ್ಬದ ನಂತರ ಮೇ ತಿಂಗಳಿನಲ್ಲಿ ಪ್ರಾರಂಭವಾಗುತ್ತಿತ್ತು. ಆಗ ಗಿಡ್ಡರಾಗಿ ಪೈರನ್ನು ಬಿತ್ತುತ್ತಿದ್ದರು. ಇದಕ್ಕೆ ಭರಣಿ ಬೆರಗು ಎಂದೇ ಹೆಸರು. ಈಚೆಗೆ ಮಳೆ ಸಾಧಾರಣವಾಗಿ ಜೂನ್ ತಿಂಗಳಿನಲ್ಲಿ ಪ್ರಾರಂಭವಾಗಿ ನವಂಬರ್ ಕೊನೆಯವರೆಗೆ ಇರುತ್ತದೆ. ಇಲ್ಲಿಯ ಪ್ರದೇಶಗಳನ್ನು ಹೆಚ್ಚು ಮಳೆ ಬೀಳುವ ಭಾಗ, ಸಾಧಾರಣ ಮಳೆ ಬೀಳುವ ಭಾಗ, ತುಂಬ ಕಡಿಮೆ ಮಳೆ ಬೀಳುವ ಭಾಗ ಎಂದು ವಿಂಗಡಿಸಬಹುದು. ಜಿಲ್ಲೆಯ ಆಲೂರಿನಲ್ಲಿ ೬, ಅರಕಲಗೂಡು ೭, ಅರಸೀಕೆರೆ ೭, ಬೇಲೂರು ೬, ಚನ್ನರಾಯಪಟ್ಟಣ ೬, ಹಾಸನ ೭, ಹೊಳೆನರಸೀಪುರ ೩ ಮತ್ತು ಸಕಲೇಶಪುರ ೧೯ ಹೀಗೆ ಒಟ್ಟು ೬೧ ಮಳೆಮಾಪನ ಕೇಂದ್ರಗಳಿವೆ. ಅದರಲ್ಲಿ ೨ ದುರಸ್ತಿಯಲ್ಲಿವೆ.[೫]

೨೦೦೦ ರಿಂದ ೨೦೧೧ರ ಮಳೆ ಸರಾಸರಿ ವಿವರ :

	ವಾಡಿಕೆ ಮಳೆ	೨೦೦೦	೨೦೦೧	೨೦೦೨	೨೦೦೩	೨೦೦೪	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	೨೦೧೧
ಆಲೂರು	೯೩೫.೦೦	೯೬೩.೯	೭೮೨.೫	೬೬೫.೬	೯೨೧.೦	೯೮೬.೭	೧೪೧೪.೬	೧೩೧೫.೩	೧೨೩೪.೦	೧೬೯೭೪	೧೧೬೦.೬	೧೪೫೩.	೧೩೧೮.೧
ಅರಕಲಗೂಡು	೮೪೬.೦	೮೯೯.೨	೭೭೮.೦೯	೬೫೮.೬	೬೧೧.೮	೮೯೮.೩	೧೨೫೬.೭	೧೧೩೬.೦	೧೩೬೧.೬	೧೦೪೨.೭	೭೯೫.೧	೧೦೧೮.೦	೮೫೩.೩
ಅರಸೀಕೆರೆ	೬೬೪.೦	೮೫೮.೮	೪೮೩.೯	೭೩೮.೭	೫೯೯.೯	೬೧೮.೦	೮೯೩.೬	೬೪೯.೬	೭೮೬.೩	೮೨೭.೨	೧೦೪೨.೭	೧೧೧೯.೩	೬೮೦.೧
ಬೇಲೂರು	೧೬೨೩.೦	೧೧೩೨.೫	೭೨೩.೯	೭೧೮.೪	೫೦೫.೯	೧೦೧೦.೨	೧೩೫೬.೯	೮೯೧.೯	೧೧೫೯.೨	೨೨೧೮.೭	೧೨೯೫.೨	೧೨೩೯.೦	೧೦೮೮.೦
ಚನ್ನರಾಯಪಟ್ಟಣ	೬೮೨.೦	೮೧೭೩	೭೬೬.೮	೬೧೬.೯	೪೭೬.೪	೮೩೭೮	೧೧೩೪.೩	೬೪೫.೪	೬೨೩.೦	೬೮೮.೪	೬೬೮.೫	೮೧೯.೧	೫೫೦.೨
ಹಾಸನ	೮೨೮.೦	೯೩೫.೮	೬೯೦.೧	೭೮೨.೫	೪೯೮.೯	೭೮೯.೨	೧೨೫೧.೮	೮೭೦.೫	೧೧೪೨.೯	೧೩೮೩.೭	೧೨೯೩.೨	೧೪೩೪.೬	೮೫೮.೦
ಹೊಳೇನರಸೀಪುರ	೭೩೯.೯	೮೭೪.೧	೫೬೬.೪	೪೮೪.೩	೪೪೮.೦	೫೭೮.೦	೧೨೦೫.೦	೬೧೬.೦	೬೫೪.೦	೮೨೪.೮	೮೪೬.೧	೧೦೧೫.೫	೬೬೪.೧
ಸಕಲೇಶಪುರ	೨೧೬೦.೦	೨೩೧೪.೭	೧೬೯೦.೫	೧೩೮೮.೫	೧೪೨೮.೪	೨೩೩೩.೪	೨೮೪೦.೩	೨೯೮೩.೪	೩೨೬೧.೪	೨೩೪೫.೮	೨೫೪೩.೦	೨೧೭೮.೨	೨೩೩೫.೧

ಈ ಪ್ರದೇಶದ ಪ್ರಮುಖ ಜಲಸಂಪನ್ಮೂಲಗಳೆಂದರೆ ನದಿ, ಕೆರೆ, ಕಟ್ಟೆ ಮತ್ತು ಬಾವಿಗಳು. ಜಿಲ್ಲೆಯು ಮುಖ್ಯವಾಗಿ ಮೂರು ನದಿಗಳನ್ನು ಒಳಗೊಂಡಿದೆ. ಕಾವೇರಿ, ಹೇಮಾವತಿ ಮತ್ತು ಯಗಚಿನದಿ. ಕಾವೇರಿ ನದಿಯು ಜಿಲ್ಲೆಯ ದಕ್ಷಿಣಭಾಗದಲ್ಲಿ ಅರಕಲಗೂಡು ತಾಲೂಕಿನ ಕಡವಿನ ಹೊಸಹಳ್ಳಿಯ ಬಳಿ ಜಿಲ್ಲೆಯನ್ನು ಪ್ರವೇಶಿಸಿ, ಈಶಾನ್ಯಾಭಿಮುಖವಾಗಿ ಕೊಣನೂರಿನ ಮೂಲಕ ಕೇರಳಾಪುರದ ಮಾರ್ಗವಾಗಿ ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲೂಕನ್ನು ಪ್ರವೇಶಿಸುವುದು. ಈ ನದಿಗೆ ಕೃಷ್ಣರಾಜೇಂದ್ರಕಟ್ಟೆ ಕಟ್ಟಿ, ಕಟ್ಟೆಪುರ ಮತ್ತು ರಾಮನಾಥಪುರ ನಾಲೆಗಳ ಮೂಲಕ ವ್ಯವಸಾಯಕ್ಕೆ ನೀರನ್ನು ಒದಗಿಸಲಾಗುತ್ತದೆ. ಕಾವೇರಿಯ ಉಪನದಿಯಾದ ಹೇಮಾವತಿ ನದಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಜವಳಿ ಎಂಬಲ್ಲಿ ಹುಟ್ಟಿ, ಪಶ್ಚಿಮ ಭಾಗದಲ್ಲಿ ಜಿಲ್ಲೆಯನ್ನು ಪ್ರವೇಶಿಸಿ ಆಗ್ನೇಯಾಭಿಮುಖವಾಗಿ ಹರಿದು ಕಾವೇರಿನದಿಯನ್ನು ಸೇರುತ್ತದೆ. ಗೊರೂರು ಬಳಿ ಹೇಮಾವತಿ ನದಿಗೆ ಅಣೆಕಟ್ಟು ಕಟ್ಟಲಾಗಿದೆ. ಜಿಲ್ಲೆಯಲ್ಲಿ ಈ ನದಿ ಹರಿವಿನ ಉದ್ದ ೧೮೨ ಕಿ.ಮೀ. ಹೊಳೆನರಸೀಪುರಕ್ಕೆ ೬ ಕಿ.ಮೀ. ದೂರದಲ್ಲಿ ಈ ನದಿಗೆ ಶ್ರೀರಾಮದೇವರ ಕಟ್ಟೆ ಕಟ್ಟಲಾಗಿದೆ. ಹೇಮಾವತಿ ನದಿ ನೀರಿನಿಂದ ಹಾಸನ ಮತ್ತು ಮಂಡ್ಯ ಜಿಲ್ಲೆಗಳ ಒಂದು ಲಕ್ಷ ಎಕರೆ ಭೂಮಿಗೆ ನೀರಾವರಿಯಾಗುವುದು. ಹಾಗೆಯೇ ಯಗಚಿ ನದಿಯು ಚಿಕ್ಕಮಗಳೂರಿನ ಬಾಬಾಬುಡನ್‌ಗಿರಿ(ಕುಂಭದ್ರೋಣ ಪರ್ವತ)ದಲ್ಲಿ ಹುಟ್ಟಿ ಜಿಲ್ಲೆಯನ್ನು ಬೇಲೂರು ತಾಲೂಕಿನ ಸಿರಿಘಟ್ಟ ಗ್ರಾಮದ ಬಳಿ ಪ್ರವೇಶಿಸುವುದು. ಹಾಸನ ತಾಲೂಕಿನಲ್ಲಿ ನೈಋತ್ಯಾಭಿಮುಖವಾಗಿ ಹರಿದು ಅನಂತರ ದಕ್ಷಿಣಾಭಿಮುಖವಾಗಿ ಜಿಲ್ಲೆಯಲ್ಲಿ ಒಟ್ಟು ೬೬ ಕಿ.ಮೀ. ದೂರ ಹರಿದು ಗೊರೂರಿನ ಪಶ್ಚಿಮಕ್ಕೆ ಹೇಮಾವತಿಯನ್ನು ಸೇರಿಕೊಳ್ಳುವುದು.[೭]

ಜಿಲ್ಲೆಯ ನದಿಗಳು ಕೃಷಿಗೆ ಪ್ರಧಾನವಾಗಿ ಬಳಕೆಯಾಗುತ್ತಿಲ್ಲ. ಇದರಿಂದಾಗಿ ಪ್ರಾಚೀನ ಕಾಲದಿಂದಲೂ ನೀರಿನ ಆಸರೆಯಾಗಿ ಇಲ್ಲಿನ ಕೆರೆಗಳು ಪ್ರಮುಖ ಪಾತ್ರ ವಹಿಸಿವೆ. ಸುಮಾರು ೬೦೬೬ ಸಣ್ಣ ಮತ್ತು ದೊಡ್ಡ ಕೆರೆಗಳಿವೆ. ಅವುಗಳ ಒಟ್ಟು ಅಚ್ಚುಕಟ್ಟು ಪ್ರದೇಶ ೨೫,೭೭೩ ಹೆಕ್ಟೇರ್. ಜಲವಿಸ್ತೀರ್ಣ ೩೦,೪೭೪ ಹೆಕ್ಟೇರ್. ಇಲ್ಲಿ ಅಂತರ್ಜಲ ಸಂಪತ್ತು ಬಹಳ ಇದ್ದು ೨,೭೪೬ ಬಾವಿಗಳು ಕಂಡುಬಂದಿವೆ. ಅವುಗಳಿಂದ ೬೩೦ ಹೆಕ್ಟೇರ್‌ಗಳಿಗೆ ನೀರಾವರಿ ಆಗುತ್ತದೆ.[೮] ಈ ಪರಿಸರದಲ್ಲಿನ ಕೆಲವು ಕೆರೆಗಳು ಮಳೆ ಆಧಾರಿತವಾಗಿದ್ದರೆ ಮತ್ತೆ ಕೆಲವು ಕೆರೆಗಳು ನದಿಯ ಆಶ್ರಯದಿಂದ ತುಂಬುತ್ತವೆ. ಇಲ್ಲಿನ ರೈತರು ತರಿ ಮತ್ತು ಖುಷ್ಕಿ ಬೆಳೆಗಳನ್ನು ಬೆಳೆಯುತ್ತಾರೆ. ನೀರಿನ ಅನುಕೂಲ ಚೆನ್ನಾಗಿರುವ ಕಡೆ, ಭತ್ತ, ಕಬ್ಬು, ತೆಂಗು, ಅಡಕೆ, ಕಾಫಿ, ಏಲಕ್ಕಿ ಮತ್ತು ಆಲೂಗಡ್ಡೆಯನ್ನು ಹೇರಳವಾಗಿ ಬೆಳೆಯಲಾಗುತ್ತದೆ. ಇನ್ನಿತರ ಧಾನ್ಯಬೆಳೆಗಳಾದ ಅಕ್ಕಿ, ರಾಗಿ, ಹುರುಳಿ, ಅವರೆ, ತೊಗರಿ, ಜೋಳ, ಉದ್ದು, ಹೆಸರು, ನೆಲಗಡಲೆ, ಹುಚ್ಚೆಳ್ಳು ಇತ್ಯಾದಿ ಬೆಳೆಗಳಿಗೆ ಅನುಕೂಲಕರವಾಗಿದೆ. ತರಕಾರಿಗಳ ಕಣಜವೇ ಹಾಸನದ ಸಂತೆಯಾಗಿದೆ. ಸಕಲೇಶಪುರ, ಆಲೂರು

ಮತ್ತು ಬೇಲೂರು ತಾಲೂಕುಗಳಲ್ಲಿ ಕಾಫಿ, ಏಲಕ್ಕಿ, ಮೆಣಸುಗಳು ಕಂಡುಬಂದರೆ, ಚನ್ನರಾಯಪಟ್ಟಣ ಮತ್ತು ಅರಸೀಕೆರೆ ತಾಲೂಕುಗಳಲ್ಲಿ ತೆಂಗು ಮುಖ್ಯ ಬೆಳೆ. ಕಬ್ಬು ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣ ತಾಲೂಕುಗಳಲ್ಲಿ ವಿಪುಲವಾಗಿ ಬೆಳೆಯಲಾಗುತ್ತಿದೆ. ಅಡಕೆ ಅರಕಲಗೂಡು ಮತ್ತು ಹಾಸನದಲ್ಲಿ ಹೆಚ್ಚು ಪ್ರಸಿದ್ಧಿಯಾಗಿದೆ. ಇತ್ತೀಚೆಗೆ ಹಾಸನದಲ್ಲಿ ಸೀ ಐಲೆಂಡ್ ಹತ್ತಿ ಬೆಳೆಯುತ್ತಿದ್ದಾರೆ. ಹೀಗೆ ಜಿಲ್ಲೆಯಲ್ಲಿ ಸಮಸ್ತ ಬೆಳೆಗಳನ್ನು ಬೆಳೆಯಲಾಗುತ್ತದೆ.

ಚಾರಿತ್ರಿಕ ಹಿನ್ನೆಲೆ

ಹಾಸನಕ್ಕೆ ಸ್ಥಳಪುರಾಣದಲ್ಲಿ 'ಸಿಂಹಾಸನ ಪುರಿ' ಎಂಬ ಹೆಸರಿದ್ದು, ಕ್ರಮೇಣ ಹಾಸನ ಎಂಬ ನಾಮಾಂಕಿತದಿಂದ ಪ್ರಸಿದ್ಧವಾಗಿದೆ. ಹಾಸನವು ಬೀರನಹಳ್ಳಿ ಕೆರೆ, ಚನ್ನಪಟ್ಟಣ ಕೆರೆ, ಹುಣಸಿ ಕೆರೆ, ಸತ್ಯಮಂಗಲ ಕೆರೆ ಮತ್ತು ಮಾಕನಕೆರೆಗಳಿಂದ ಸುತ್ತುವರೆದಿದೆ. ಸಿಂಹಾಸನ ಪುರಿ ಎಂಬ ಹೆಸರಿಗೆ ಪೌರಣಿಕ ಹಿನ್ನೆಲೆ ಇದೆ. ಸಪ್ತಮಾತೃಕೆಯರಲ್ಲಿ ಒಬ್ಬಳಾದ ಚಾಮುಂಡಿಯ ಅಂಶವಾದ ಹಾಸನಾಂಬ ಎಂಬ ದೇವಿ ಕೃಷ್ಣಪ್ಪನಾಯಕನ ಕನಸಿನಲ್ಲಿ ಕಾಣಿಸಿಕೊಂಡು ಸುಂದರವಾದ ಕೊಳ ಮತ್ತು ಪಟ್ಟಣ ಕಟ್ಟಿಸುವಂತೆ ಹೇಳಿದಳಂತೆ. ಅದರಂತೆ ಕೊಳದ ಹೆಸರಿನಲ್ಲಿ ದೇವಿಗೆರೆಯನ್ನು, ಪಟ್ಟಣವಾಗಿ ಚನ್ನಪಟ್ಟಣವನ್ನು ಕಟ್ಟಿಸಿದನೆಂದು ಪ್ರತೀತಿ. ಮೈಸೂರು ಕಡೆಯಿಂದ ಹಾಸನ ನಗರ ಪ್ರವೇಶಿಸುವಾಗ ಸಿಗುವ ಚನ್ನಪಟ್ಟಣ ಹಿಂದೆ ಆಡಳಿತ ಕೇಂದ್ರವಾಗಿತ್ತು. ಚೋಳರಿಂದ ಆಡಳಿತಾಧಿಕಾರಿಯಾಗಿ ನೇಮಿಸಲ್ಪಟ್ಟ ಬುಕ್ಕನಾಯಕ ತನ್ನ ಮೊಮ್ಮಗ ಚನ್ನಪ್ಪನಾಯಕನ ಹೆಸರಿನಲ್ಲಿ ಕೆರೆ ಕಟ್ಟಿಸಿ, ಕೋಟೆ ನಿರ್ಮಿಸಿ ಗ್ರಾಮಕ್ಕೆ ಚನ್ನಪಟ್ಟಣ ಎಂದು ಹೆಸರಿಟ್ಟ ಐತಿಹ್ಯವಿದೆ. ಇದಕ್ಕೆ ಸಂಬಂಧಿಸಿದಂತೆ ಮತ್ತೊಂದು ಐತಿಹ್ಯವಿದೆ. ಬುಕ್ಕನಾಯಕನ ನಂತರ ಕೃಷ್ಣಪ್ಪನಾಯಕನಿಗೆ ಈ ಪ್ರದೇಶ ಸೇರಿತು. ಈ ನಾಯಕ ಒಮ್ಮೆ ಪ್ರಯಾಣ ಹೊರಟಾಗ ಒಂದು ಮೊಲ ಅಡ್ಡ ಬಂದು ಪಟ್ಟಣವನ್ನು ಪ್ರವೇಶಿಸಿತು. ಈ ಅಪಶಕುನದಿಂದ ನಾಯಕ ನೊಂದುಕೊಂಡನಂತೆ. ಆಗ ಅವನಿಗೆ ಹಾಸನಾಂಬೆ ಪ್ರತ್ಯಕ್ಷಳಾಗಿ ಖಿನ್ನ ಮನಸ್ಸು ತೊರೆದು ಈ ಸ್ಥಳದಲ್ಲಿ ಒಂದು ಕೋಟೆ ಕಟ್ಟುವಂತೆ ಹೇಳಿದಳಂತೆ. ಆಗ ಒಂದು ಕೋಟೆಯನ್ನು ಕಟ್ಟಿ ಅದಕ್ಕೆ ಹಾಸನಾಂಬೆ ಎಂದು ಹೆಸರಿಟ್ಟ ಸಂಗತಿ ಹಾಸನ ತಾಲೂಕಿನ ಕುದುರೆಗುಂಡಿಯ ಕ್ರಿ.ಶ. ೧೧೪೦ರ ಶಾಸನದಲ್ಲಿದೆ.[೯]

ಸಪ್ತಮಾತೃಕೆಯರಾದ ಬ್ರಾಹ್ಮೀ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ ಮತ್ತು ಚಾಮುಂಡಿಯರು ವಾರಣಾಸಿಯಿಂದ ವಾಯುವಿಹಾರಕ್ಕೆ ಹೊರಟು ದಕ್ಷಿಣಭಾರತದಲ್ಲಿ ವಿಹರಿಸುವಾಗ ಈ ಕ್ಷೇತ್ರದ ಸೌಂದರ್ಯವನ್ನು ಕಂಡು ಆಕರ್ಷಿತರಾಗಿ ಇಲ್ಲೇ ನೆಲಸಿದರು. ಬ್ರಾಹ್ಮಿದೇವಿಯು ಕೆಂಚಮ್ಮನ ಹೊಸಕೋಟೆಯಲ್ಲಿ, ಚಾಮುಂಡಿ, ವಾರಾಹಿ ಮತ್ತು ಇಂದ್ರಾಣಿಯರು ನಗರದ ಮಧ್ಯದಲ್ಲಿರುವ ದೇವಿಗೆರೆಯಲ್ಲಿ ಹಾಗೂ ವೈಷ್ಣವಿ, ಕೌಮಾರಿ ಮತ್ತು ಮಹೇಶ್ವರಿಯರು

ಹಾಸನಾಂಬ ದೇವಾಲಯದಲ್ಲಿ ಹುತ್ತದ ರೂಪದಲ್ಲಿ ನೆಲಸಿದರೆಂಬ ಪ್ರತೀತಿ ಇದೆ.[೧೦] ಹಾಸನಾಂಬ ದೇವಿಯ ದರ್ಶನವು ಸರ್ವಕಾಲದಲ್ಲಿಯೂ ಭಕ್ತರಿಗೆ ದೊರೆಯುವುದಿಲ್ಲ. ವರ್ಷಕ್ಕೊಮ್ಮೆ ಅಶ್ವಿಜ ಮಾಸದ ಪೂರ್ಣಿಮೆ ನಂತರ ಬರುವ ಗುರುವಾರದಂದು ಬಾಗಿಲು ತೆರೆದರೆ ಬಲಿಪಾಡ್ಯಮಿಯ ಮಾರನೆಯ ದಿನದಂದು ಬಾಗಿಲು ಮುಚ್ಚುವುದು. ದೇವಸ್ಥಾನದ ಬಾಗಿಲು ಮುಚ್ಚುವ ಸಂದರ್ಭದಲ್ಲಿ ಹಚ್ಚಿದ ಹಣತೆಯು ಬಾಗಿಲು ತೆಗೆಯುವವರೆಗೂ ಒಂದು ವರ್ಷ ಕಾಲ ಉರಿಯುತ್ತದೆ. ಈ ರೀತಿಯ ನಂಬಿಕೆಯಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ.

ಪೌರಾಣಿಕವಾಗಿ ಈ ಊರು ಕಾವ್ಯವನವೆಂದೂ ಮಹಾಭಾರತ ಕಾಲದ ಅರ್ಜುನನ ಮೊಮ್ಮಗ ಜನಮೇಜಯನ ಸಿಂಹಾಸನ ಇಲ್ಲಿತ್ತೆಂದೂ, ಅದಕ್ಕಾಗಿಯೇ ಈ ಊರಿನ ಮೂಲ ಹೆಸರು 'ಸಿಂಹಾಸನಪುರ'ವೆಂದೂ ನಂತರ ಸಿಂಹ ಮತ್ತು ಪುರ ಎರಡೂ ಲೋಪವಾಗಿ ಹಾಸನವೆಂಬುದು ಮಾತ್ರ ಉಳಿದುಕೊಂಡಿದೆ. 'ಹಾಸಿನಬಳ್ಳಿ' ಎಂಬ ಸಸ್ಯಸಂಬಂಧದಿಂದ ಈ ಊರಿಗೆ ಹಾಸನ ಎಂಬ ಹೆಸರು ಬಂದಿರುವಂತೆ ತಿಳಿದುಬರುತ್ತದೆ.[೧೧]

ಪ್ರಾಗಿತಿಹಾಸಕಾಲ

ಮಾನವ ಇತಿಹಾಸವನ್ನು ಪ್ರಾಗಿತಿಹಾಸಕಾಲ ಮತ್ತು ಇತಿಹಾಸಕಾಲವೆಂದು ಎರಡು ವಿಭಾಗಗಳಾಗಿ ಮಾಡಬಹುದು. ಪ್ರಾಗಿತಿಹಾಸಕಾಲದ ಮಾನವನಿಗೆ ಓದು ಬರಹದ ಅಥವಾ ಅಕ್ಷರದ ಜ್ಞಾನವಿರಲಿಲ್ಲ. ಸ್ವೇಚ್ಛಾಜೀವಿಯಾಗಿ ತನ್ನ ಮನಬಂದಂತೆ ಜೀವನ ಸಾಗಿಸುತ್ತಿದ್ದನು. ಅಲೆಮಾರಿಯಾಗಿದ್ದು, ಆಹಾರವನ್ನು ಬೇಟೆಯಾಡಿ ಪಡೆಯುತ್ತಿದ್ದನು. ಈ ಕಾಲಮಾನದ ಮಾನವನ ಉಗಮ ಮತ್ತು ವಿಕಾಸವನ್ನು ಅರಿಯಬೇಕಾದರೆ ಆವನು ತನ್ನ ಜೀವನೋಪಾಯಕ್ಕಾಗಿ ಉಪಯೋಗಿಸಿದಂತಹ ವಿವಿಧ ವಸ್ತುಗಳು ಮತ್ತು ಉಪಕರಣಗಳ ಬಗ್ಗೆ ಅಧ್ಯಯನ ಮಾಡುವುದು ಅವಶ್ಯಕ. ಈ ಹಂತದಲ್ಲಿ ಬಳಕೆಯಲ್ಲಿದ್ದ ವಸ್ತುವಿನ ಆಧಾರದಿಂದ 'ಶಿಲಾಯುಗ ಸಂಸ್ಕೃತಿ' ಮತ್ತು 'ಲೋಹಯುಗ ಸಂಸ್ಕೃತಿ' ಎಂದು ವಿಭಾಗಗಳನ್ನಾಗಿ ಮಾಡಲಾಗಿದೆ.

ಶಿಲಾಯುಗ ಸಂಸ್ಕೃತಿಯ ಹಂತವನ್ನು ಅವಶೇಷ ಹಾಗೂ ಅವುಗಳ ಬೆಳವಣಿಗೆ ಮತ್ತು ಕುಶಲತೆಯನ್ನನುಸರಿಸಿ ಹಳೆಶಿಲಾಯುಗ ಸಂಸ್ಕೃತಿ, ಸೂಕ್ಷ್ಮಶಿಲಾಯುಗ ಸಂಸ್ಕೃತಿ ಮತ್ತು ನೂತನ ಶಿಲಾಯುಗ ಸಂಸ್ಕೃತಿ ಎಂದು ವರ್ಗೀಕರಿಸಲಾಗಿದೆ. ಹಾಗೆಯೇ ಹಳೆಶಿಲಾಯುಗವನ್ನು ಆದಿ ಹಳೆಶಿಲಾಯುಗ ಸಂಸ್ಕೃತಿ, ಮಧ್ಯ ಹಳೆಶಿಲಾಯುಗ ಸಂಸ್ಕೃತಿ ಮತ್ತು ಅಂತ್ಯ ಹಳೆಶಿಲಾಯುಗ ಸಂಸ್ಕೃತಿ ಎಂದು ಮೂರು ಭಾಗಗಳಾಗಿ ವಿಭಾಗಿಸಲಾಗಿದೆ. ಅನಂತರ ಲೋಹಯುಗ ಸಂಸ್ಕೃತಿಯ ಆರಂಭದಲ್ಲಿ ಶಿಲೆಯ ಬಳಕೆಯ ಜೊತೆಗೆ ತಾಮ್ರದ ಬಳಕೆಯು ಕಂಡುಬಂದಿದ್ದರಿಂದ ಈ ಹಂತವನ್ನು ಶಿಲಾತಾಮ್ರಯುಗ ಸಂಸ್ಕೃತಿ ಎಂದು ಕರೆಯಲಾಗಿದೆ. ಕರ್ನಾಟಕದ ಪ್ರಾಗಿತಿಹಾಸದ

ಅಧ್ಯಯನಗಳನ್ನು ೧೮೪೨ರಲ್ಲಿ ಪ್ರಿಮ್‌ರೋಸ್ ಅವರು ರಾಯಚೂರು ಜಿಲ್ಲೆಯ ಲಿಂಗಸೂರಿ(ಲಿಂಗಸುಗೂರು)ನಲ್ಲಿ ತನ್ನ ಕೈತೋಟವನ್ನು ಸ್ವಚ್ಛಗೊಳಿಸುವ ಸಮಯದಲ್ಲಿ ಶಿಲೋಪಕರಣಗಳಾದ ಬಾಣದ ಮೊನೆ ಹಾಗೂ ನೀಳ ಚಕ್ಕೆಗಳು ದೊರೆಯಲಾಗಿ ಶೋಧನೆ ಕಾರ್ಯವನ್ನು ಮೊತ್ತ ಮೊದಲಿಗೆ ಪ್ರಾರಂಭಿಸಿದನು. ಇವನ ನಂತರ ರಾಬರ್ಟ್ ಬ್ರೂಸ್‌ಫೂಟ್, ಕರ್ನಲ್ ಮೆಕೆಂಜಿ, ಎಂ.ಎಚ್. ಕೃಷ್ಣ, ಆರ್. ಶೇಷಾದ್ರಿ, ಎಚ್.ಡಿ. ಸಂಕಾಲಿಯಾ ಹಾಗೂ ಅ. ಸುಂದರ ಸೇರಿದಂತೆ, ಇನ್ನೂ ಹಲವು ವಿದ್ವಾಂಸರ ಸರ್ವೇಕ್ಷಣೆಯ ಫಲವಾಗಿ ನೂರಾರು ಶಿಲಾಯುಗದ ನೆಲೆಗಳನ್ನು ಬೆಳಕಿಗೆ ತಂದಿದ್ದಾರೆ.[೧೨] ಕರ್ನಾಟಕದ ಹಾಸನ ಜಿಲ್ಲೆಯ ೬ ತಾಲೂಕುಗಳಲ್ಲಿ ಇಂತಹ ಪ್ರಾಕ್ತನ ನೆಲೆಗಳನ್ನು ನದಿ, ಕೆರೆ ಮತ್ತು ಇತರ ಜಲಸಂಪನ್ಮೂಲ ಪರಿಸರದಲ್ಲಿ ಶೋಧಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು ೩೧ ನೆಲೆಗಳು ಕಂಡುಬಂದಿವೆ. ಅದರಲ್ಲಿ ಆದಿ ಹಳೆಶಿಲಾಯುಗದ ಸಂಸ್ಕೃತಿಯ ೩, ಮಧ್ಯ ಹಳೆಶಿಲಾಯುಗ ಸಂಸ್ಕೃತಿಯ ೧, ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ೩, ನೂತನ ಶಿಲಾಯುಗ ಸಂಸ್ಕೃತಿ ೧, ಬೃಹತ್ ಶಿಲಾ ಸಂಸ್ಕೃತಿಯ ೩೩ ಹಾಗೂ ಇತಿಹಾಸ ಕಾಲಕ್ಕೆ ಸಂಬಂಧಿಸಿದಂತೆ ೨ ನೆಲೆಗಳು ಪತ್ತೆ ಹಚ್ಚಲಾಗಿದೆ.[೧೩] ಇತ್ತೀಚಿನ ದಿನಗಳಲ್ಲಿ ಸಂಶೋಧಕರು ಹೊಸ ಹೊಸ ನೆಲೆಗಳನ್ನು ಶೋಧಿಸಿ ಬೆಳಕಿಗೆ ತರುತ್ತಿದ್ದಾರೆ.

ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಕೊಣನೂರು, ರುದ್ರಪಟ್ಟಣ ಮತ್ತು ಹಾಸನ ತಾಲೂಕಿನ ಕರಡಿಗುಡ್ಡ ಹಾಗೂ ಹೊಳೆನರಸೀಪುರ ತಾಲೂಕಿನ ಕಟ್ಟೆಬೆಳಗುಲಿ ಇವು ಆದಿ ಹಳೆಶಿಲಾಯುಗ ಸಂಸ್ಕೃತಿಯ ಪ್ರಮುಖ ನೆಲೆಗಳಾಗಿವೆ.[೧೪] ಕೊಣನೂರಿನಲ್ಲಿ ಕ್ವಾರ್ಟ್ಜ ಶಿಲೆಯಲ್ಲಿ ಮಾಡಿದ ಕೈಗೊಡಲಿ ಸಿಕ್ಕಿದೆ. ಇದೇ ಸಂಸ್ಕೃತಿಗೆ ಸಂಬಂಧಿಸಿದಂತೆ ರುದ್ರಪಟ್ಟಣದ ಕಾವೇರಿ ಕಣಿವೆಯಲ್ಲಿ ಕ್ವಾರ್ಟ್ಜಹಾಗೂ ಜಾಸ್ಪರ್ ಶಿಲೆಯ ಮಚ್ಚುಗತ್ತಿ, ಕೈಗೊಡಲಿ, ಹೆರೆಗತ್ತಿ ಉಪಕರಣಗಳು ಕಂಡುಬಂದಿವೆ. ಕರಡಿಗುಡ್ಡದಲ್ಲಿ ಆದಿ ಹಳೆಶಿಲಾಯುಗ ಸಂಸ್ಕೃತಿಯ ಒಂದು ಉಪಕರಣ ದೊರೆತಿದ್ದು, ಅಂಡಾಕಾರವಾಗಿದೆ. ಹಾಗೆಯೇ ಕಟ್ಟೆಬೆಳಗುಲಿಯಲ್ಲಿ ಕೈಗೊಡಲಿ ಸಿಕ್ಕಿದೆ. ಇವುಗಳನ್ನು ಮರ ಕತ್ತರಿಸಲು ಮತ್ತು ಬೇಟೆಯಾಡಲು ಆಯುಧಗಳಾಗಿ ಬಳಸಿರಬೇಕು.

ಮಧ್ಯ ಹಳೆಶಿಲಾಯುಗ ಸಂಸ್ಕೃತಿಯು ಆದಿ ಹಳೆಶಿಲಾಯುಗ ಸಂಸ್ಕೃತಿಯ ಮುಂದುವರಿದ ಭಾಗವಾಗಿದೆ. ಈ ಸಂಸ್ಕೃತಿಯ ಅವಶೇಷಗಳು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಬೋಳೇನಹಳ್ಳಿ ಮತ್ತು ಹೊಳೆನರಸೀಪುರ ತಾಲೂಕಿನ ಕಟ್ಟೆಬೆಳಗುಲಿ ಹಾಗೂ ಕಟ್ಟೆಹೊಸಹಳ್ಳಿಯಲ್ಲಿ ಕಂಡುಬಂದಿವೆ. ಈ ಸ್ಥಳಗಳಲ್ಲಿ ದೊರೆತ ಹೆರೆಚಕ್ಕೆ ಮೊನೆ ಉಪಕರಣಗಳನ್ನು ಮ್ಯಾಗ್ನಟೈಟ್ ಕ್ಲಾಸ್ಟೈಟ್ ಶಿಲೆಯಲ್ಲಿ ರೂಪಿಸಲಾಗಿದೆ.[೧೫]

ಸೂಕ್ಷ್ಮಶಿಲಾಯುಗ ಸಂಸ್ಕೃತಿಯು ಅಂತ್ಯ ಹಳೆಶಿಲಾಯುಗದ ನಂತರ ಹಾಗೂ ನೂತನ ಶಿಲಾಯುಗದ ಮುಂಚಿನ ಸಂಸ್ಕೃತಿಯ ಹಂತವಾಗಿದೆ. ಅರಸೀಕೆರೆ ತಾಲೂಕಿನ ಚಿಕ್ಕನಹಳ್ಳಿ,

ಚನ್ನರಾಯಪಟ್ಟಣ ತಾಲೂಕಿನ ಶೆಟ್ಟಿಹಳ್ಳಿ, ಹಾಸನ ತಾಲೂಕಿನ ಪಾಯ್‌ಗೋಡು ಹಾಗೂ ಹೊಳೆನರಸೀಪುರ ಪರಿಸರದ ಕಟ್ಟೆಬೆಳಗುಲಿ, ಕಟ್ಟೆಹೊಸಹಳ್ಳಿಗಳು ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನೆಲೆಗಳಾಗಿವೆ.[೧೬] ಬೆಟ್ಟನಹಳ್ಳಿಯಲ್ಲಿ ಕ್ವಾರ್ಟ್ಜ್ ಶಿಲೆಯ ಮೊನೆ, ಹೆರೆಚೆಕ್ಕೆ ಉಪಕರಣಗಳ ಜೊತೆಗೆ ಗೋರಿ ನೆಲೆ ಇದೆ. ಅದೇ ರೀತಿ ಪಾಯ್‌ಗೋಡ, ಕಟ್ಟೆಬೆಳಗುಲಿ, ಕಟ್ಟೆಹೊಸಹಳ್ಳಿಯಲ್ಲಿ ಮ್ಯಾಗ್ನಟೈಟ್ ಮತ್ತು ಕ್ವಾರ್ಟ್ಜ್ ಶಿಲೆಯ ಮೊನೆ ಹೆರೆಚೆಕ್ಕೆ ಮೊದಲಾದ ಆಯುಧಗಳು ಸಿಕ್ಕಿವೆ.[೧೭] ಈ ಸಂಸ್ಕೃತಿಯ ನೆಲೆಗಳು ಆಗಿನ ಜನರ ಆಹಾರಪದ್ಧತಿ, ಶವಸಂಸ್ಕಾರ ಪದ್ಧತಿ ಮುಂತಾದ ಅಂಶಗಳ ಬಗೆಗೆ ಮಾಹಿತಿ ತಿಳಿಸುತ್ತವೆ.

ನೂತನ ಶಿಲಾಯುಗ ಸಂಸ್ಕೃತಿಯ ಹಂತದಲ್ಲಿ ಮಾನವ ಒಂದು ಕಡೆ ನೆಲೆಯಾಗಿ ನಿಂತು ಪಶುಪಾಲನೆ ಮತ್ತು ಕೃಷಿ ಚಟುವಟಿಕೆಯಲ್ಲಿ ತೊಡಗಿದನು. ಅದಕ್ಕಾಗಿ ಉಜ್ಜಿ ನಯಗೊಳಿಸಿದ ಉಪಕರಣಗಳನ್ನು ಬಳಸಿಕೊಂಡನು. ಈ ಸಂಸ್ಕೃತಿಯ ಉಪಕರಣಗಳು ಹಾಸನ ತಾಲೂಕಿನ ಅಂಕನಾಥಪುರ ಮತ್ತು ಅರಸೀಕೆರೆ ತಾಲೂಕಿನ ಅಗ್ಗುಂದ ಪರಿಸರದಲ್ಲಿ ಹಾಗೂ ಸಕಲೇಶಪುರ ತಾಲೂಕಿನ ಕ್ಯಾನಹಳ್ಳಿ ಮತ್ತು ಆಲೂರು ತಾಲೂಕಿನ ಹೆಮ್ಮಿಗೆಯಲ್ಲಿ ಗುರುತಿಸಲಾಗಿದೆ. ಹಾಸನ ತಾಲೂಕಿನ ಅಂಕನಾಥಪುರದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಪತ್ತೆಹಚ್ಚಲಾಗಿದೆ. ಅದೇ ರೀತಿ ಅರಸೀಕೆರೆಯಿಂದ ಅಗ್ಗುಂದಕ್ಕೆ ಹೋಗುವ ರಸ್ತೆಯ ಉತ್ತರಕ್ಕೆ ೩ ಕಿ.ಮೀ ದೂರದಲ್ಲಿರುವ ಶಂಕರಲಿಂಗೇಶ್ವರ ದೇವಾಲಯದ ವ್ಯಾಪ್ತಿಯಲ್ಲಿ ಈ ಸಂಸ್ಕೃತಿಯ ಆಯುಧಗಳು ಬೆಳಕಿಗೆ ಬಂದಿವೆ.[೧೮] ಇಲ್ಲಿ ಉಪಕರಣಗಳನ್ನು ದೇವರನ್ನಾಗಿ ಪೂಜಿಸುತ್ತಿದ್ದಾರೆ. ಈ ಶಿಲಾಯುಧಗಳು ಮೇಲಕ್ಕೆ ಕಿರಿದಾಗುತ್ತ ಮೊನಚಾಗಿವೆ. ಇವುಗಳನ್ನು ಕೊಡಲಿಯಾಗಿ ಬಳಸಿಕೊಂಡು ದೊಡ್ಡ ದೊಡ್ಡ ಪ್ರಾಣಿಗಳನ್ನು ಬೇಟೆಯಾಡಲು ಮತ್ತು ಮರಗಳನ್ನು ಕಡಿಯಲು ಬಳಸಿರಬೇಕೆಂದು ಅರ್ಥೈಸಬಹುದು. ಸಕಲೇಶಪುರದಿಂದ ೧೨ ಕಿ.ಮೀ. ದಕ್ಷಿಣದಿಕ್ಕಿನಲ್ಲಿರುವ ಕ್ಯಾನಹಳ್ಳಿ ಗುಡ್ಡದಲ್ಲಿ ಸುಟ್ಟ ಹೆಂಚು ಮತ್ತು ಇಟ್ಟಿಗೆಗಳ ಮಾದರಿಗಳು ಸಿಕ್ಕಿವೆ.[೧೯] ಇವುಗಳನ್ನು ಮನೆಯ ಮೇಲೆ ಅಲಂಕಾರವಾಗಿ ಹೊದಿಸಲು ಕಿಟಕಿಗಳಿಗೆ ಜೋಡಿಸಲು ಉಪಯೋಗಿಸಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಸಂಸ್ಕೃತಿಯ ಮತ್ತೊಂದು ನೆಲೆ ನಾರ್ವೆ. ಇತಿಹಾಸಕಾರರಾದ ಶ್ರೀ ನಾರ್ವೆ ರಾಜಶೇಖರ ಅವರು ಹೇಮಾವತಿ ನದಿ ತೀರದ ನಾರ್ವೆಯ ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ದೊರೆತ ೩ ಶಿಲಾಕೊಡಲಿಗಳನ್ನು ಗುರುತಿಸಿದ್ದಾರೆ. ಈ ಮಾದರಿಯ ಉಪಕರಣಗಳು ಆಲೂರು ತಾಲೂಕಿನ ಹೆಮ್ಮಿಗೆಯ ಹೇಮಾವತಿ ನದಿತೀರದಲ್ಲಿ ಕಂಡುಬಂದಿವೆ.

ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ವಿವಿಧ ಮಾದರಿಯ ಬೃಹತ್ ಶಿಲಾಗೋರಿಗಳನ್ನು ನಿರ್ಮಿಸಿರುವುದರಿಂದ ಈ ಸಂಸ್ಕೃತಿಯನ್ನು ಬೃಹತ್ ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗುತ್ತದೆ.

ಈ ಹಂತದಲ್ಲಿ ಕಬ್ಬಿಣದ ಬಳಕೆಯ ಮಹತ್ವವನ್ನು ಕಾಣಬಹುದು. ಹಾಸನ ಜಿಲ್ಲೆಯಲ್ಲಿ ಹೆಚ್ಚು ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳು ಕಂಡುಬಂದಿವೆ. ಅರಸೀಕೆರೆ ತಾಲೂಕಿನ ಚಲುವನಹಳ್ಳಿಯಲ್ಲಿ ಒಂದೇ ಸಾಲಿನಲ್ಲಿ ಐದು ನಿಲಸುಗಲ್ಲುಗಳಿವೆ.[೨೦] ಈ ನೆಲೆಗಳ ಸಮೀಪದಲ್ಲಿ ಕೆರೆಗಳು ಇರುವುದರಿಂದ ಬೇಸಾಯದ ಮೂಲವನ್ನು ತಿಳಿಸುತ್ತವೆ. ಬೊಮ್ಮೇನಹಳ್ಳಿಯಲ್ಲಿ ಎಂಟು ನಿಲಸುಗಲ್ಲುಗಳಿದ್ದು ಐದು ತ್ರುಟಿತಗೊಂಡಿವೆ. ಇದೇ ತಾಲೂಕು ವ್ಯಾಪ್ತಿಗೆ ಸೇರಿದ ತಳಲೂರಿನಲ್ಲಿ ಮೂರು ಶಿಲಾಗೋರಿಗಳು, ಕಬ್ಬಿಣ ಉಪಕರಣ ಮತ್ತು ಒರಳುಕಲ್ಲು ಸಿಕ್ಕಿವೆ. ಹಾರನಹಳ್ಳಿಯಿಂದ ೫ ಕಿ.ಮೀ. ದೂರದಲ್ಲಿರುವ ಉಂಡಿಗನಾಳು ಗ್ರಾಮದ ದಕ್ಷಿಣದಲ್ಲಿ ಶಿಲಾವೃತ್ತ ಗೋರಿಗಳು ಇದ್ದು ಕೆಲವು ನಾಶ ಹೊಂದಿವೆ. ಬಾಣಾವರ ಹೋಬಳಿಯ ಕಲ್ಲುಸಾದರಹಳ್ಳಿಯಲ್ಲಿ ಬೃಹತ್ ಶಿಲಾಯುಗಕ್ಕೆ ಸೇರಿರುವ ನಿಲಸುಗಲ್ಲುಗಳು ಕಂಡುಬಂದಿವೆ. ಕಣಕಟ್ಟೆ ರಾಜ್ಯ ಹೆದ್ದಾರಿಯಲ್ಲಿ ಸಾಗುವಾಗ ಶಾನಗೆರೆ ಗ್ರಾಮವಿದೆ. ಇಲ್ಲಿಯೂ ಕೂಡ ಬೃಹತ್ ಶಿಲಾಯುಗದ ಡಾಲ್ಮೆನ್ಸ್ ಮಾದರಿಯ ಗೋರಿಗಳನ್ನು ಗುರುತಿಸಲಾಗಿದೆ. ಇದರ ಮೂರು ಭಾಗಗಳಲ್ಲಿಯೂ ಕಲ್ಲು ಚಪ್ಪಡಿಗಳಿದ್ದು, ಪೂರ್ವದ ಭಾಗವು ತೆರೆದುಕೊಂಡಿದೆ. ಶಾನೆಗೆರೆಯಿಂದ ಕಣಕಟ್ಟೆಗೆ ಹೋಗುವ ಗಂಜಿಗೆರೆ ರಸ್ತೆಯ ಎಡ ಭಾಗದಲ್ಲಿ ಬೃಹತ್ ದಿಬ್ಬವಿದೆ. ಇಲ್ಲಿ ಕಪ್ಪು ಮತ್ತು ಕಂದು ಬಣ್ಣದ ಮಡಕೆಯ ಅವಶೇಷಗಳು ಸಿಕ್ಕಿವೆ.[೨೧] ಬೇಲೂರು ತಾಲೂಕಿನ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಸಮೀಪದಲ್ಲಿ ಈ ಸಂಸ್ಕೃತಿಯ ನೆಲೆಯಿದೆ. ಇದೇ ತಾಲೂಕಿನ ಯಲಹಂಕ ಗ್ರಾಮದ ಪರಿಸರದಲ್ಲಿ ಶಿಲಾವೃತ್ತ ಗೋರಿಗಳಿವೆ.[೨೨] ಪ್ರಸ್ತುತ ದಿನಗಳಲ್ಲಿ ಬ್ಯಾಡರಹಳ್ಳಿ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಇಂದಿಗೂ ನಾಶವಾಗದಂತೆ ಉಳಿದಿರುವುದನ್ನು ಗಮನಿಸಬಹುದು. ಹಾಗೆಯೇ ಸಕಲೇಶಪುರ ತಾಲೂಕಿನ ಕ್ಯಾನಹಳ್ಳಿ, ಸಕಲೇಶಪುರ, ಹಾಸನ ತಾಲೂಕಿನ ಅಂಕನಾಥಪುರ, ಕೊಂಡಜ್ಜಿ, ಕೆಂಚಮಾರನಹಳ್ಳಿ, ಗುನ್ನಿ, ಪ್ರತಾಪಕುಮಾರಿಗ್ರಾಮ, ಪೂಮೆಗಾಮೆ, ಮುದ್ಲಾಪುರ, ಹೊನ್ನಾವರ, ಹೊಳೆನರಸೀಪುರ ತಾಲೂಕಿನ ಮೂಲೇಕಾಳೇನಹಳ್ಳಿಗಳಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ನೆಲೆಗಳನ್ನು ಗುರುತಿಸಲಾಗಿದೆ.

ಇತಿಹಾಸಪೂರ್ವ ಕಾಲದ ಜನರು ಗಟ್ಟಿಯಾದ ಶಿಲಾಯುಧಗಳಿಂದ ರೇಖಾ ಚಿತ್ರಗಳನ್ನು ಬಂಡೆಗಲ್ಲುಗಳ ಮೇಲೆ ಬಿಡಿಸುತ್ತಿದ್ದರು. ಈ ಬಗೆಯ ವರ್ಣಚಿತ್ರಗಳು ಅರಸೀಕೆರೆ ತಾಲೂಕಿನ ಚಲುವನಹಳ್ಳಿ ಗವಿಮಠ, ಅದೇ ಗ್ರಾಮದ ಪಾತಕಲ್ಲುಗುಡ್ಡ, ಬೈರಗೊಂಡನಹಳ್ಳಿ ಹಟ್ಟಿ ಮತ್ತು ಬೆಂಡೆಕೆರೆ ತಾಂಡಗಳಲ್ಲಿ ನೋಡಬಹುದು. ಚಲುವನಹಳ್ಳಿ ಗವಿಮಠದಲ್ಲಿ ಕೆಂಪು ವರ್ಣಚಿತ್ರಗಳು, ನವಿಲುಗಳ ಗುಂಪನ್ನು ವೃತ್ತಾಕಾರದಲ್ಲಿ ಚಿತ್ರಿಸಲಾಗಿದೆ. ಪಾತಕಲ್ಲುಗುಡ್ಡದ ಬಿಳಿಯ ವರ್ಣಚಿತ್ರಗಳು ಬೈರಗೊಂಡನಹಳ್ಳಿ ಹಟ್ಟಿ ಮತ್ತು ಬೆಂಡೆಕೆರೆ ತಾಂಡದ ವರ್ಣಚಿತ್ರಗಳು ವಿವಿಧ ಭಂಗಿಯಲ್ಲಿರುವ ಮಾನವರು ಮತ್ತು ಪ್ರಾಣಿ ಪಕ್ಷಿಗಳಿಂದ ಕೂಡಿವೆ. ಗವಿಮಠದ ಉತ್ತರ ಭಾಗದಲ್ಲಿ ಕಬ್ಬಿಣದ ಚೂರುಗಳು ಕೆಂಪುಮಿಶ್ರಿತ ಕಪ್ಪು ಮತ್ತು ಹಳದಿ ಬಣ್ಣದ ಮಡಕೆ ಚೂರುಗಳು ಹೇರಳವಾಗಿ ಕಂಡುಬರುತ್ತವೆ.[೨೩]

ಹಾಸನ ಜಿಲ್ಲೆಯ ನದಿ, ಕೆರೆ ಅಥವಾ ಜಲಸಂಪನ್ಮೂಲಗಳನ್ನೊಳಗೊಂಡ ಸ್ಥಳಗಳಲ್ಲಿ ಆದಿ ಹಳೆಶಿಲಾಯುಗ ಸಂಸ್ಕೃತಿಯ ಹಂತದಿಂದ ಬೃಹತ್ ಶಿಲಾಯುಗ ಸಂಸ್ಕೃತಿಯವರೆಗೂ ಹಲವು ನೆಲೆಗಳು ಮತ್ತು ಉಪಕರಣಗಳು ದೊರೆಕಿವೆ. ಇದರಿಂದ ಮಾನವನ ಆರಂಭದಿಂದ ಹಿಡಿದು ನಾಗರಿಕನಾದ ಹಂತದವರೆಗಿನ ಬದಲಾವಣೆಗಳನ್ನು ತಿಳಿಯಲು ಸಾಧ್ಯವಾಗಿದೆ.

ಇತಿಹಾಸಕಾಲ

ಅಕ್ಷರಜ್ಞಾನವಿದ್ದ ರಾಜಮಹಾರಾಜರ ಕಾಲವನ್ನು ಇತಿಹಾಸಕಾಲ ಎನ್ನುವರು. ಇತಿಹಾಸ ಪ್ರಸಿದ್ಧವಾದ ಹಾಸನ ಜಿಲ್ಲೆಯಲ್ಲಿ ಅನೇಕ ರಾಜಮನೆತನಗಳು ಮತ್ತು ಪಾಳೆಯಗಾರರು, ಪಾಳೆ ಪಟ್ಟುಗಳು ಆಡಳಿತ ನಡೆಸಿದ್ದಾರೆ. ಈ ಜಿಲ್ಲೆಯಲ್ಲಿ ದೊರೆಯುವ ಶಾಸನಗಳು, ವೀರಗಲ್ಲುಗಳು, ದೇವಾಲಯಗಳನ್ನು ಆಕರಗಳನ್ನಾಗಿಸಿ ಇಲ್ಲಿಯ ಕೆರೆಗಳ ಇತಿಹಾಸವನ್ನು ವಿಶ್ಲೇಷಿಸಲಾಗಿದೆ.

ಕೆರೆ ನೀರಾವರಿ ಪದ್ಧತಿಯ ಬಗ್ಗೆ ವಿಶ್ವದಾದ್ಯಂತ ಅನೇಕ ಸಂಶೋಧನೆಗಳು ನಡೆಯುತ್ತಲಿವೆ. ಈಜಿಪ್ಟ್ ದೇಶದಲ್ಲಿ ದೊರೆತಿರುವ ರೇಖಾಚಿತ್ರಗಳಲ್ಲಿ ಮಾನವನು ನೀರನ್ನು ಸಂಗ್ರಹಿಸಿ ಬಳಸಿಕೊಂಡಿರುವುದನ್ನು ಚಿತ್ರಿಸಲಾಗಿದೆ. ಇದರಿಂದಾಗಿ ಆ ದೇಶದಲ್ಲಿಯೇ ಮೊಟ್ಟ ಮೊದಲಿಗೆ ಕೆರೆ ನೀರಾವರಿ ಪದ್ಧತಿಯನ್ನು ಬಳಕೆಗೆ ತಂದರೆಂದು ಪುರಾತತ್ವಜ್ಞರು ಅಭಿಪ್ರಾಯಪಡುತ್ತಾರೆ. ಈಜಿಪ್ಟ್‌ನಷ್ಟು ಪ್ರಾಚೀನತೆಯನ್ನು ಹೊಂದಿರುವ ಭಾರತದಲ್ಲಿ ಸುಮಾರು ೬ ಸಾವಿರ ವರ್ಷಗಳಷ್ಟು ಹಿಂದೆಯೇ ಅಂದರೆ ಈಜಿಪ್ಟ್‌ಗೆ ಸಮಕಾಲೀನವಾಗಿ ಕೃಷಿಕ ಜೀವನದ ಕುರುಹುಗಳನ್ನು ನೋಡಬಹುದು. ಇಲ್ಲಿ ಇನ್ನೂ ಪೂರ್ಣಪ್ರಮಾಣದಲ್ಲಿ ಅಧ್ಯಯನವಾಗದ ಕಾರಣ ಖಚಿತತೆಯಿಂದ ಹೇಳಲು ಸಾಧ್ಯವಾಗದಿದ್ದರೂ ಅಲ್ಲಲ್ಲಿ ದೊರೆತಿರುವ ಪುರಾವೆಗಳ ಆಧಾರದಿಂದ ಭಾರತದಲ್ಲಿ ೬ ಸಾವಿರ ವರ್ಷಗಳ ಹಿಂದೆಯೇ ಕೃಷಿಜೀವನ ಪ್ರಾರಂಭವಾಯಿತು ಎಂದು ಹೇಳಬಹುದು.[೨೪]

ಚಾರಿತ್ರಿಕ ಪ್ರದೇಶಗಳಾದ ಭಿಲ್ಸಾದ ಬೀಸನಗರ, ಪಾಟ್ನಾದ ಕುಮ್ರಾಹರ, ಉಜ್ಜಯನಿಗಳಲ್ಲಿ ನಡೆಸಿದ ಉತ್ಖನನ ಕಾರ್ಯದಿಂದ ಪುರಾತನ ಕಾಲದಲ್ಲಿ ಭಾರತೀಯರು ನೀರಾವರಿಗೆಂದೇ ಕಾಲುವೆಗಳನ್ನು ನಿರ್ಮಿಸಿರುವುದನ್ನು ಬೆಳಕಿಗೆ ತರಲಾಗಿದೆ. ಇಂದಿನ ಒರಿಸ್ಸಾ ಪ್ರಾಂತದಲ್ಲಿ ಮೌರ್ಯರಿಗಿಂತ ಮುನ್ನ ಭಾರತವನ್ನು ಆಳುತ್ತಿದ್ದ ನಂದವಂಶದ ಅರಸರು ಕಾಲುವೆಯನ್ನು ನೀರಾವರಿಗೆಂದೇ ನಿರ್ಮಿಸಿದರು. ಈ ಕಾಲುವೆ ಸುಮಾರು ಐದು ಶತಮಾನಗಳವರೆಗೂ ಉಪಯೋಗಿಸಲ್ಪಟ್ಟಿರುವುದು ಗಮನಾರ್ಹ ಸಂಗತಿ.[೨೫]

ಭಾರತದ ಪುರಾತನ ಗ್ರಂಥಗಳಾದ ಋಗ್ವೇದ, ಯಜುರ್ವೇದ, ಅಥರ್ವಣ ವೇದಗಳಲ್ಲಿ ನೀರಾವರಿಯ ಬಗೆಗೆ ಅನೇಕ ಪದಗಳಿರುವುದನ್ನು ನೋಡಬಹುದು. ಅವತ, ಕೂಪ, ಕುಲ್ಯ, ಖನಿತ್ರಿಮ ಅಂದರೆ ಭೂಮಿಯನ್ನು ತೋಡಿ ನೀರು ತೆಗೆಯುವುದು. 'ಸಾಸಾಸಿ' ಅಂದರೆ ಅಣೆಕಟ್ಟು

ಅಥವಾ ಸರೋವರಗಳು. ಕೃತಿಮ ನದಿಯಾ ಅಂದರೆ ಕೃತ್ರಿಮ ನದಿಗಳು ಎಂದು ಉಲ್ಲೇಖಿಸುತ್ತವೆ.[೨೬] ನಮ್ಮ ದೇಶದ ಅತ್ಯಂತ ಪ್ರಾಚೀನ ಕೃತಿಗಳಲ್ಲಿ 'ಮನುಸ್ಮೃತಿಯು' ಒಂದು. ಇದರಲ್ಲಿ ನೀರಾವರಿಗೆ ಸಂಬಂಧಿಸಿದಂತೆ ಯಾರಾದರೂ ಧಕ್ಕೆ ಉಂಟುಮಾಡಿದರೆ ಕಠಿಣ ಶಿಕ್ಷೆಯನ್ನು ವಿಧಿಸುವಂತೆ ಸೂಚಿಸಿದೆ.[೨೭]

ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ಪುರಾತನಗಳ ಕಾಲದ ಜಲಾಶಯಗಳನ್ನು ಕುರಿತು ವಿವರಗಳನ್ನು ನೀಡುತ್ತವೆ. ಮಹಾಭಾರತದ ಅನುಶಾಸನಿಕ ಪರ್ವವು[೨೮] ಮಹಾರಾಜನು ಕೈಗೊಳ್ಳಬೇಕಾದ ಪ್ರಜಾಹಿತಾ ಕಾರ್ಯಗಳಲ್ಲಿ ಕೆರೆಗಳ ನಿರ್ಮಾಣವು ಒಂದು ಎಂದು ತಿಳಿಸುತ್ತದೆ. ಅದಲ್ಲದೆ ನಾಲೆಗಳ ನಿರ್ಮಾಣವು ಪ್ರಜಾಹಿತಾತ್ಮಕ ಕೆಲಸವೆಂದು ವಿವರಿಸುತ್ತದೆ. ಮತ್ತೊಂದು ವಿಶೇಷವೆಂದರೆ ನಾರದನು, ಧರ್ಮರಾಜನಿಗೆ ಎಚ್ಚರಿಸಿ 'ಮಳೆಯನ್ನೇ ನೆಚ್ಚಿಕೊಂಡು ಬೇಸಾಯಕ್ಕೆ ತೊಡಗಬೇಕು' ಎಂದು ಹೇಳುತ್ತಾನೆ. ಪ್ರಾಚೀನ ಭಾರತದಲ್ಲಿ ಹವಾಮಾನವು ಒಂದೇ ರೀತಿಯಾಗಿರದೆ ಮಳೆಯು ಕೆಲವೊಮ್ಮೆ ಬರುತ್ತಿರಲಿಲ್ಲ. ಇದರಿಂದ ಅಂದಿನ ಹವಾಮಾನವನ್ನು ಕುರಿತಂತೆ ನಮ್ಮ ನಿಲುವನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಎರಡನೆಯದಾಗಿ ಮಳೆಯ ನೀರಿನ ಪರ್ಯಾಯ ವ್ಯವಸ್ಥೆಯಾಗಿ ಕೆರೆ ಮತ್ತು ಸರೋವರಗಳ ನಿರ್ಮಾಣಗಳ ಕಾರ್ಯವನ್ನು ಅಂದಿನ ರಾಜರು ಕೈಗೊಳ್ಳುತ್ತಿದ್ದರು. ಇವು ಪ್ರಾಚೀನ ಭಾರತದ ಕೆರೆಗಳ ನಿರ್ಮಾಣವನ್ನು ತಿಳಿಯಲು ಪುರಾತನ ಆಕರಗಳಾಗಿವೆ. 'ಪದ್ಮಪುರಾಣ'ದಲ್ಲಿ ಸರೋವರ, ಕೆರೆ ಮತ್ತು ತಟಾಕಗಳದ್ದೇ ಒಂದು ಅಧ್ಯಾಯವಿದೆ. ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ ಕೃಷಿಯ ಉಪಕರಣಗಳು, ಬೆಳೆ ಬೆಳೆಯುವುದಕ್ಕೆ ಅನುಕೂಲವಾದ ಮಳೆಯ ಕ್ರಮ, ವಿವಿಧ ಪ್ರಕಾರಗಳ ಸಸ್ಯಗಳು, ಏತ ನೀರಾವರಿ ಪದ್ಧತಿ, ನದಿ, ಕೆರೆ, ಬಾವಿ, ಕೊಳ, ಸರೋವರ ಮುಂತಾದವುಗಳಿಂದ ತೂಬಿನ ಮೂಲಕ ನೀರನ್ನು ಹಾಯಿಸಿಕೊಂಡು ಬೆಳೆದ ಬೆಳೆಯಲ್ಲಿ ಕಂದಾಯ ವಿಧಿಸಿರುವುದನ್ನು ಚರ್ಚಿಸಲಾಗಿದೆ.[೨೯]

ಮೆಗಸ್ತನೀಸನ 'ಇಂಡಿಕಾ'ದಲ್ಲಿ ಭೂಮಿಗೆ ಅನುಗುಣವಾಗಿ ಕೆರೆಗಳ ನೀರನ್ನು ಸಮರ್ಪಕವಾಗಿ ವಿತರಿಸುವುದು. ನಾಲೆ ಮತ್ತು ತೂಬುಗಳನ್ನು ದುರಸ್ತಿ ಮಾಡಿ, ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳುತ್ತಿದ್ದರೆಂದು ಇದರಿಂದ ತಿಳಿದುಬರುತ್ತದೆ. ಶುಕ್ರನ 'ನೀತಿಸಾರ' ಗ್ರಂಥದಲ್ಲಿ ಪ್ರಜೆಗಳ ಒತಕ್ಕೆಂದು ಕೆರೆ ಬಾವಿಗಳನ್ನು ನಿರ್ಮಿಸಿರಬೇಕೆಂದು ಹೇಳಿದೆ. ನೀರಾವರಿ ಸೌಲಭ್ಯ ಒದಗಿಸಿಕೊಟ್ಟ ಪ್ರತಿಫಲವಾಗಿ ಜನಸಾಮಾನ್ಯರ ಮೇಲೆ ತೆರಿಗೆಯನ್ನು ವಿಧಿಸಬೇಕು. ಕೆರೆ ಮತ್ತು ನಾಲೆಗಳನ್ನು ನಿರ್ಮಾಣ ಮಾಡಿದ ವ್ಯಕ್ತಿ ಅಥವಾ ಸಂಘ ಸಂಸ್ಥೆಗಳನ್ನು ತೆರಿಗೆಯಿಂದ ವಿನಾಯ್ತಿ ನೀಡುವಂತೆ ತಿಳಿಸುತ್ತದೆ.[೩೦]

'ಅಮರಕೋಶ'ದಲ್ಲಿ ಸಾಗುವಳಿ ಭೂಮಿಯನ್ನು 'ದೇವಮಾತೃಕೆ', 'ನದಿಮಾತೃಕೆ'[೩೧] ಎಂದು ವರ್ಗೀಕರಿಸಲಾಗಿದೆ. ಪಂಪಾದಿ ಕವಿಗಳ ಕಾವ್ಯಗಳಲ್ಲಿ ಕೆರೆ, ಕಾಲುವೆಗಳ ಪ್ರಸ್ತಾಪವಿದೆ. ಪಂಪಭಾರತದ

ಹಸ್ತಿನಾಪುರ ವರ್ಣನೆಯಲ್ಲಿ 'ಗಗನತಳಿರು ಪರಿದುಮ್ಬಿದೆನಪ ಬಹುತಟಾಕದಿಂ' ಎಂಬ ಮಾತು ಬಂದಿದೆ. ಅದೇ ಕೃತಿಯಲ್ಲಿ ಕಾಲುವೆಗಳ ವರ್ಣನೆ, ಕೆರೆಗಳ ಪ್ರಸ್ತಾಪವು ಬಂದಿದೆ.[೩೨] 'ಆದಿಪುರಾಣ'ದಲ್ಲಿ ಜಲಾಶಯಗಳಮಂ ನಿಮ್ನಗಾತಟ ನಿಕಟವರ್ತಿಗಳಪ್ಪ ದ್ರೋಣಾಮುಖಗಳಮಂ' ಎಂಬ ಮಾತಿನಲ್ಲಿಯೂ ಅಂದಿನ ಕೆರೆ, ಕಾಲುವೆ, ಜಲಾಶಯಗಳ ಪ್ರಸ್ತಾಪವಿದೆ.[೩೩] 'ಅಜಿತಪುರಾಣ'ದಲ್ಲಿ ಅರಗಟಿಯಂತ್ರದ ಸುಂದರ ವರ್ಣನೆಯನ್ನು ಒಳಗೊಂಡಿದೆ.[೩೪] ಹೀಗೆ ಕೆರೆ ಕಾಲುವೆಗಳ ವರ್ಣನೆ ಕಾವ್ಯಗಳಲ್ಲಿ ಬಂದಿದ್ದರೂ ಅವು ನೈಸರ್ಗಿಕ ಕೆರೆ, ಕಾಲುವೆಗಳ ವರ್ಣನೆಗಳಾಗಿದ್ದು, ಕೆಲವೊಮ್ಮೆ ಅವು ಕಾಲ್ಪನಿಕವಾಗಿರುವ ಸಾಧ್ಯತೆಗಳುಂಟು.

'ವಿಜ್ಞಾನೇಶ್ವರ ಮಿತಾಕ್ಷರ'ದಲ್ಲಿ ಕೆರೆ ಗ್ರಾಮೀಣ ಜೀವನದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಚಟುವಟಿಕೆಗಳ ಜೀವಾಳ, ಬದುಕಿನ ಸಂಕೇತ ಎಂದು ತಿಳಿಸಿದೆ.[೩೫] ೧೨ನೆಯ ಶತಮಾನದ ಶರಣ ಚಳುವಳಿಯ ಸಂದರ್ಭದಲ್ಲಿ ರಚನೆಯಾದ ವಚನಗಳಲ್ಲಿ ಕೆರೆ, ಕಟ್ಟೆ, ಸರೋವರ, ತಟಾಕಗಳನ್ನು ಬೇರೆ ಬೇರೆ ಸಂದರ್ಭದಲ್ಲಿ ಬಳಸಲಾಗಿದೆ. ಅವುಗಳಲ್ಲಿ ತಾಂತ್ರಿಕ ಮೌಲ್ಯಗಳಿಗಿಂತ ಸಾಹಿತ್ಯ ಹೆಚ್ಚು ಮಹತ್ವ ಪಡೆದಿವೆ.

ಕೆರೆಯೊಡೆದ ಬಳಿಕ ತೂಬು ಬಲ್ಲದೆ.
ಕೆರೆಯನುಂಡು ತೊರೆಯ ಹೊಗಳುವುದೆ

ಅಲ್ಲಮ[೩೬] ।

ಕನ್ನಡ ವಚನಕಾರರಲ್ಲಿ ಪ್ರಸಿದ್ಧನಾದ ಸಿದ್ಧರಾಮನು ಸೊಲ್ಲಾಪುರದಲ್ಲಿ ಕೆರೆಯನ್ನು ನಿರ್ಮಾಣ ಮಾಡಿದನು. ಈ ಕೆರೆಯು ಇಂದಿಗೂ ಜನೋಪಯೋಗಿಯಾಗಿ ಬಳಕೆಯಾಗುತ್ತಿದೆ. ಹೀಗೆ ಸಾರ್ವತ್ರಿಕವಾಗಿ ಉಪಯೋಗವಾಗುವ ಶರಣ ಸಿದ್ಧರಾಮನ ಕೆರೆ ನಿರ್ಮಾಣದ ಕೌಶಲ್ಯವನ್ನು ಕವಿ ರಾಘವಂಕ ಅತ್ಯಂತ ಹೃದ್ಯವಾಗಿ ಚಿತ್ರಿಸಿದ್ದಾನೆ.[೩೭] ಶರಣರ ನಂತರ ದಾಸರು ಕೂಡ ಕೀರ್ತನೆಗಳಲ್ಲಿ ಕೆರೆಯ ಉಲ್ಲೇಖವನ್ನು ಬಳಸಿದ್ದಾರೆ. ಪುರಂದರದಾಸರು 'ಕೆರೆಯ ನೀರನ್ನು ಕೆರೆಗೆ ಚೆಲ್ಲು' ಎಂದು ಹಾಡಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಸಾಮ್ರಾಟನಾದ ಕೃಷ್ಣದೇವರಾಯನು ತನ್ನ 'ಅಮುಕ್ತಮಾಲ್ಯ'ದ ಕೃತಿಯಲ್ಲಿ ಕಾಲುವೆಗಳನ್ನು ಕಟ್ಟಿಸುವುದರಿಂದ ಕೇವಲ ಪಾರಮಾರ್ಥ ಸಾಧನೆಯಲ್ಲ, ಲೌಕಿಕ ಅರ್ಥ ಸಾಧನೆಯೂ ಆಗುತ್ತದೆ ಎಂದು ಹೇಳಿದ್ದಾನೆ.[೩೮] ಪ್ರಾಚೀನ ದಕ್ಷಿಣ ಭಾರತದ ತಮಿಳು ಸಂಗಮ್ ಸಾಹಿತ್ಯವಾದ 'ಶಿಲಪ್ಪದಿಕಾರಂ' ಕೃತಿಯಲ್ಲಿ ಕಾವೇರಿ ನದಿಗೆ ಕಟ್ಟಲಾದ ಅಣೆಕಟ್ಟಿನ ಮಾಹಿತಿ ಇದೆ. ಮುಂದುವರಿದು ಚೋಳರಾಜನಾದ ಕರಿಕಾಲನು ಕಾವೇರಿ ನದಿಗೆ ಅಣೆಕಟ್ಟುಗಳನ್ನು ನಿರ್ಮಿಸಿ, ತಮಿಳು ರಾಜ್ಯಕ್ಕೆ ಸದಾಕಾಲ ನೀರು ಹರಿಯುವ ವ್ಯವಸ್ಥೆಯನ್ನು ಮಾಡಿಸಿದನು.

ಇಂತಹ ಸಾರ್ವಜನಿಕ ಉಪಯುಕ್ತ ಕಾರ್ಯದಿಂದಾಗಿ ರಾಜನು 'ಕರಿಕಾಲ ಪೆರುವಲಟ್ಟನ್' ಎಂಬ ಅನೇಕ ಬಿರುದುಗಳನ್ನು ತನ್ನದಾಗಿಸಿಕೊಂಡಿದ್ದಾನೆ.[೩೯] ಈ ಬಗೆಯ ಸಾಹಿತ್ಯ ಕೃತಿಗಳು, ವಿದೇಶಿ ಪ್ರವಾಸಿಗರ ಬರವಣಿಗೆಗಳು ಮತ್ತು ಜನಪದ ಸಾಹಿತ್ಯಗಳು ಕೆರೆ ನೀರಾವರಿಯ ಅನೇಕ ವಿಚಾರಗಳನ್ನು ಪ್ರಸ್ತಾಪಿಸುತ್ತವೆ.

ಕೆರೆ, ಕಟ್ಟೆ, ಕೊಳ, ಕಲ್ಯಾಣಿ, ಸರೋವರ, ಬಾವಿ ಮುಂತಾದ ಜಲಾಶಯಗಳನ್ನು ನಿರ್ಮಿಸುವುದು ಸತ್ಕಾರ್ಯವೆಂದು ನಮ್ಮ ಪೂರ್ವಜರು ಭಾವಿಸುತ್ತಿದ್ದರು. ಶಾಸನಗಳು ಅಂತಹ ಪ್ರಾಚೀನ ಇತಿಹಾಸವನ್ನು ಬಿಚ್ಚಿಡುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿವೆ.

ಮೌರ್ಯರ ಕಾಲದ ವೇಳೆಗೆ ಕೆರೆ ನಿರ್ಮಾಣ ಶ್ರೇಷ್ಠತೆಯನ್ನು ಪಡೆದಿತ್ತು. ಉದಾಹರಣೆಗೆ ಸೌರಾಷ್ಟ್ರದ ಜುನಾಗಡದ ಸುದರ್ಶನ ಸರೋವರವನ್ನು ಚಂದ್ರಗುಪ್ತ ಮೌರ್ಯನ ರಾಜ್ಯಪಾಲ ಪುಷ್ಯಗುಪ್ತ ಕಟ್ಟಿಸಿದನು. ಅಶೋಕನ ರಾಜ್ಯಪಾಲ ತುಷಸ್ಪ ಅದಕ್ಕೆ ಕಾಲುವೆಯನ್ನು ಕಟ್ಟಿಸಿದ. ಶಕ ವಂಶದ ರುದ್ರದಾಮನ ಕಾಲದಲ್ಲಿ ಭಾರಿ ಬಿರುಗಾಳಿ ಎದ್ದು, ಆ ಕೆರೆಯ ಏರಿ ಒಡೆಯಿತು. ಸುದರ್ಶನ ದುದರ್ಶನ ಆಯಿತು. ರುದ್ರದಾಮನು ಸುದರ್ಶನ ಸರೋವರವನ್ನು ದುರಸ್ತಿ ಮಾಡಿಸಿದನು. ಇದನ್ನು ತನ್ನ ಸ್ವಂತ ಹಣದಿಂದ ಮಾಡಿಸಿದುದಾಗಿ ಹೇಳಿಕೊಂಡಿದ್ದಾನೆ.[೪೦] ಆ ನಂತರ(ಕ್ರಿ.ಶ. ೫ನೆಯ ಶತಮಾನದಲ್ಲಿ) ಗುಪ್ತರ ಕಾಲದಲ್ಲಿ ಈ ಕೆರೆಯು ಮತ್ತೊಮ್ಮೆ ಒಡೆದಾಗ ಸ್ಕಂದಗುಪ್ತನ ಮಾಂಡಲಿಕನಾದ ಚಪಲಿಕನು ಕ್ರಿ.ಶ. ಸುಮಾರು ೪೫೬–೫೭ರಲ್ಲಿ ಎರಡು ತಿಂಗಳ ಅವಧಿಯಲ್ಲಿ ದುರಸ್ತಿಗೊಳಿಸಿದುದಾಗಿ ಜುನಾಗಡದ ಮತ್ತೊಂದು ಶಾಸನದಿಂದ ತಿಳಿದುಬರುತ್ತದೆ. ಈ ಕೆರೆಯ ಇತಿಹಾಸ ಮೌರ್ಯರಿಂದ ಹಿಡಿದು ಗುಪ್ತರ ಕಾಲದವರೆಗೆ ಹರಡಿಕೊಂಡಿದೆ. ಹೀಗೆ ೭೫೦ ವರ್ಷಕ್ಕೂ ಹೆಚ್ಚು ಕಾಲ ನಿಲ್ಲುವಂತಹ ಜಲಾಶಯಗಳನ್ನು ಮೌರ್ಯರು ನಿರ್ಮಿಸಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ.

ಕರ್ನಾಟಕದಲ್ಲಿ ಕೆರೆ ನೀರಾವರಿ ಪದ್ಧತಿಯ ಇತಿಹಾಸವು ಇತಿಹಾಸಪೂರ್ವಕಾಲದ ಮಾನವನಿಂದ ಬೆಳೆದುಬಂದಿವೆ. ಪ್ರಾಗ್ಯೆತಿಹಾಸಿಕ ಕಾಲದ ಮಾನವ ತನ್ನ ವಾಸಕ್ಕಾಗಿ ಗುರುತಿಸಿಕೊಂಡ ನೆಲೆಗಳು ನೀರು ಸಿಗುವಂತಹ ನೈಸರ್ಗಿಕ ತಾಣಗಳೇ ಆಗಿದ್ದವು. ಕೃಷಿಯನ್ನು ತನ್ನ ಮುಖ್ಯ ಜೀವನಾಧಾರವಾಗಿ ರೂಢಿಸಿಕೊಂಡ ದಿನದಿಂದಲೇ ಮಳೆ ಮತ್ತು ಹೊಳೆಯ ನೀರನ್ನು ಸಂಗ್ರಹಿಸಿಕೊಂಡು, ತನ್ನ ಅಸ್ತಿತ್ವಕ್ಕೆ ತಕ್ಕಂತೆ ಬಳಸಿಕೊಳ್ಳಲು ಮಾಡಿಕೊಂಡ ಪ್ರಯತ್ನಗಳ ಫಲವೇ ಕೆರೆಗಳು. ಹೀಗೆ ಕೆರೆ ನಿರ್ಮಾಣ ಕಲೆ ಮಾನವನಲ್ಲಿ ಆರಂಭವಾದ ಅಂದಿನಿಂದ ಇಂದಿನವರೆಗೆ ವಿವಿಧ ರಾಜ ಮನೆತನಕ್ಕೆ ಸೇರಿದ ದೊರೆಗಳು ಕೆರೆಗಳ ನಿರ್ಮಾಣಕ್ಕೆ ಉತ್ತೇಜನವನ್ನು ನೀಡಿ ಕೃಷಿಯನ್ನು ವಿಸ್ತರಿಸಿದರು. ಹೀಗೆ ಕರ್ನಾಟದಲ್ಲಿ ಆಳ್ವಿಕೆ ಮಾಡಿದ ರಾಜಮನೆತನಗಳಾದ ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ಸೇವುಣರು,

ವಿಜಯನಗರದ ಅರಸರು, ಬಹಮನಿ ಸುಲ್ತಾನರು, ಮೈಸೂರು ಒಡೆಯರು, ಪಾಳೆಗಾರರು, ಅನೇಕ ಕೆರೆ ಕಟ್ಟೆ, ಕಾಲುವೆ, ಅಣೆಕಟ್ಟುಗಳನ್ನು ನಿರ್ಮಿಸಿರುತ್ತಾರೆ.

ಕೆರೆ ಕಟ್ಟೆಗಳ ನಿರ್ಮಾಣ ಕಾರ್ಯ ಕರ್ನಾಟಕದಲ್ಲಿ ಪ್ರಾರಂಭವಾದದ್ದು ನೂತನ ಶಿಲಾಯುಗದ ಕಾಲದಲ್ಲಿ. ಅದು ಹೆಚ್ಚು ಬೆಳಕಿಗೆ ಬಂದಿರುವುದು ಬೃಹತ್ ಶಿಲಾಯುಗದ ಕಾಲದಲ್ಲಿ. ಶಾತವಾಹನ ರಾಜನಾದ ಪುಳಮಾವಿಯ ಮ್ಯಾಕೆದೋಣಿ ಶಾಸನವು[೧೧] ಕೆರೆ ಬಗ್ಗೆ ಪ್ರಸ್ತಾಪಿಸುವ ಅತಿ ಪ್ರಾಚೀನ ಶಾಸನ. ತಮಿಳುನಾಡಿನಲ್ಲಿ ಪಲ್ಲವರು ಕ್ರಿ.ಶ. ೫–೬ನೆಯ ಶತಮಾನದಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿದ್ದು, ಅವರ ಕಾಲದಲ್ಲಿ ಅನೇಕ ಕೆರೆ, ಕಾಲುವೆಗಳನ್ನು ಇದ್ದವೆಂಬುದಕ್ಕೆ ಪೂರಕವಾಗಿ ಶಾಸನಾಧಾರಗಳಿವೆ. ಶಾಸನಗಳಲ್ಲಿ ವ್ಯಕ್ತಿನಾಮಗಳ ಜೊತೆಯಲ್ಲಿ ಕೆರೆಯನ್ನು ಸೇರಿಸಿ ಸಂಬೋಧಿಸಿರುವ ಜೋಡಣೆಗಳಿವೆ. ಉದಾಹರಣೆಗೆ ಪರಮೇಶ್ವರ ತಟಾಕ, ಚಿತ್ರಮೇಘ ತಟಾಕಗಳೆಂಬ ಹೆಸರುಗಳಿವೆ.[೧೨]

ಪಲ್ಲವರ ತರುವಾಯ ತಮಿಳುನಾಡಿನಲ್ಲಿ ಚೋಳರು ಮತ್ತು ಪಾಂಡ್ಯರು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ಇವರು ಸಹ ತಮ್ಮ ಪೂರ್ವಜರಂತೆಯೇ ಜನಕಲ್ಯಾಣ ಕಾರ್ಯಗಳನ್ನು ಮಾಡುತ್ತಿದ್ದರು. ಕೆರೆ ಕಟ್ಟಿಸುವ ಕಾರ್ಯವನ್ನು ತಾವು ರಾಜ್ಯ ಸ್ಥಾಪಿಸುವ ಕಡೆಗಳಲ್ಲೆಲ್ಲ ವಿಸ್ತರಿಸಿದರು. ಚೋಳರು ತಮ್ಮ ರಾಜ್ಯಾಡಳಿತದಲ್ಲಿ ಕೆರೆ, ಕಟ್ಟೆ, ವಾರಿಯಂ ಎಂಬ ಆಡಳಿತ ವಿಭಾಗವನ್ನು ರಚಿಸಿದ್ದರು. ಕೆರೆಯ ಉಸ್ತುವಾರಿಗೆ 'ಏರಿವಾರಿಯಂ' ಎಂಬ ಸಮಿತಿಯನ್ನು ರಚಿಸಲಾಗಿತ್ತೆಂದು ಉತ್ತರ ಮೇರೂರಿನ ಚೋಳರ ಶಾಸನ ಹೇಳುತ್ತದೆ.[೧೩] ಕೆರೆಯ ಸುಸ್ಥಿತಿಯನ್ನು ಕಾಪಾಡುವುದು ಅವರ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿತ್ತು. ಚೋಳರ ಆಡಳಿತಕ್ಕೆ ಒಳಪಟ್ಟ ಕರ್ನಾಟಕದ ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ನೂರಾರು ಕೆರೆಗಳಿವೆ.

ಕೆರೆ ಕಟ್ಟಿಸುವ ಕಾರ್ಯ ಕೇವಲ ರಾಜಕಾರ್ಯವಾಗಿರಲಿಲ್ಲ. ಅದು ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯವಾಗಿತ್ತು. ರಾಜನಿಗೆ ಕೆರೆ ಕಟ್ಟಿಸುವ ಕಾರ್ಯ ಕಷ್ಟಕರವಾಗಿರಲಿಲ್ಲ. ಉಳ್ಳವರು ಹಣ ಸಹಾಯ ಮತ್ತು ದವಸಧಾನ್ಯಗಳ ಸಹಾಯ ಮಾಡಿದರೆ ದುಡಿಯುವ ಜನ ಕೆರೆ ನಿರ್ಮಾಣ ಕಾರ್ಯದಲ್ಲಿ ತೊಡಗುತ್ತಿದ್ದರು. ಇದೇ ಮಾದರಿಯ ಕೆರೆ ಕಟ್ಟುವ ಪರಂಪರೆಯನ್ನು ನಂತರ ಬಂದ ಮನೆತನಗಳು ಮುಂದುವರಿಸಿದವು.

ಕೆರೆ ನಿರ್ಮಾಣದಂತಹ ಕಾರ್ಯಗಳು ಕನ್ನಡ ನಾಡಿನಲ್ಲಿ ಪ್ರಾಚೀನವಾಗಿ ಕಂಡುಬಂದಿವೆ. ಈ ನಾಡಿನ ಐತಿಹಾಸಿಕ ಸ್ಥಳ ಹಾಸನ. ಇಲ್ಲಿ ಅನೇಕ ರಾಜಮನೆತನಗಳು ಆಳ್ವಿಕೆ ಮಾಡಿವೆ. ಈ ಮನೆತನಗಳ ಇತಿಹಾಸವನ್ನು ಪರಿಚಯಿಸಿಕೊಂಡು, ಅವರು ಕೆರೆ ನೀರಾವರಿಗೆ ಕೊಟ್ಟ ಮಹತ್ವವನ್ನು ಶಾಸನಗಳ ಹಿನ್ನೆಲೆಯಿಂದ ಪ್ರಸ್ತಾಪಿಸಲಾಗಿದೆ.

ಕ್ರಿ.ಪೂ. ೩೨೭ರಲ್ಲಿ ಅಲೆಗ್ಸಾಂಡರನು ಭಾರತವನ್ನು ಮುತ್ತಿದನು. ಅದಾದ ನಂತರ ಕ್ರಿ.ಪೂ. ೨೯೮ರಲ್ಲಿ ಮಗಧ ಚಕ್ರವರ್ತಿ ಚಂದ್ರಗುಪ್ತನು ಸಿಂಹಾಸನವನ್ನು ತ್ಯಜಿಸಿ ಶ್ರುತಕೇವಲಿಗಳಲ್ಲಿ ಕೊನೆಯವನಾದ

ಭದ್ರಬಾಹುವಿನೊಂದಿಗೆ ಇಂದಿನ ಶ್ರವಣಬೆಳಗೊಳಕ್ಕೆ ವ್ರತಸಾಧನೆಗಾಗಿ ಬಂದನು. ಆಗ ಶ್ರವಣಬೆಳಗೊಳಕ್ಕೆ ಕಳ್ವಪ್ಪು ಅಥವಾ ಕಳಬಪ್ಪ(ಬಿಳಿಯ) ಬೆಟ್ಟವೆಂಬ ಹೆಸರಿದ್ದಿತು.[೪೪] ನಂತರ ಹಾಸನ ಜಿಲ್ಲೆ, ಪಲ್ಲವರ ನಂತರ ಕದಂಬರ ಆಳ್ವಿಕೆಯಲ್ಲಿದ್ದಿತು. ಕ್ರಿ.ಶ. ೫ನೆಯ ಶತಮಾನದಿಂದ ೧೧ನೆಯ ಶತಮಾನದವರೆಗೆ ಚಾಲುಕ್ಯರ ಸಾಮಂತರಾದ ಕೊಂಗಾಳ್ವರೆಂಬುವರು ಈ ಜಿಲ್ಲೆಯ ಕಾವೇರಿ ಮತ್ತು ಹೇಮಾವತಿ ನದಿಗಳ ಮಧ್ಯದ ಪ್ರದೇಶವನ್ನು ಆಳುತ್ತಿದ್ದರು.[೪೫] ಕ್ರಿ.ಶ. ೧೧ನೆಯ ಶತಮಾನದಿಂದ ಕ್ರಿ.ಶ. ೧೪ನೆಯ ಶತಮಾನದ ಅರ್ಧದವರೆಗೂ ಹೊಯ್ಸಳರು ಈ ಪ್ರದೇಶವನ್ನಾಳಿದರು. ಅವರ ಕೇಂದ್ರ ಸ್ಥಾನವಾಗಿತ್ತು.

ಹೊಯ್ಸಳರ ಚಕ್ರಾಧಿಪತ್ಯ ಕ್ಷೀಣಿಸಿದ ನಂತರ ಹಾಸನದ ಜಿಲ್ಲೆ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿತು. ವಿಜಯನಗರದ ಪತನಾನಂತರ ಮುಂದೆ ಯಾದವರಿಗೆ ಸೇರಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಆಳ್ವಿಕೆಗೆ ಒಳಪಟ್ಟಿತ್ತು.[೪೬] ಟಿಪ್ಪುವು ತನ್ನ ಫೌಜನ್ನು ಸಕಲೇಶಪುರದಲ್ಲಿ ಇಟ್ಟಿದ್ದನು. ಚಳಿಗಾಲದಲ್ಲಿ ಬೆಳಿಗ್ಗೆ ಆತ ತನ್ನ ಸೌಧದಿಂದ ಹೊರಗೆ ಬಂದು ನೋಡಿದಾಗ ಸುತ್ತಲೂ ಕಣ್ಣು ಕಾಣದಂತಹ ದಟ್ಟವಾದ ಮಂಜು ಬಿದ್ದಿತ್ತು. ಟಿಪ್ಪು ಸಕಲೇಶಪುರವನ್ನು ಮಂಜರಾಬಾದ್ ಎಂದು ಕರೆದನು. ಶ್ರೀರಂಗಪಟ್ಟಣದ ಪತನಾನಂತರ ಜಿಲ್ಲೆಯೂ ಮೈಸೂರು ಒಡೆಯರ ಅಧೀನಕ್ಕೆ ಒಳಪಟ್ಟಿತು.[೪೭] ಹೀಗೆ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ರಾಜಮನೆತನಗಳು, ಪಾಳೆಪಟ್ಟುಗಳು ತಮ್ಮ ಆಡಳಿತದ ಅವಧಿಯಲ್ಲಿ ನೀರಾವರಿ ವ್ಯವಸ್ಥೆಗೆ ಕೊಟ್ಟಿರುವ ಮಹತ್ವವನ್ನು ಶಾಸನಾಧಾರಗಳಿಂದ ಈ ಕೆಳಗಿನಂತೆ ಗುರುತಿಸಲಾಗಿದೆ.

ಕದಂಬರು ಶಿರಸಿ ತಾಲೂಕಿನ ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ೨೦೦ ವರ್ಷಗಳ ಕಾಲ ಆಳಿದರು. ಇವರ ಕಾಲದಲ್ಲಿ ನೀರಾವರಿಗಾಗಿ ಕೆರೆ ನಿರ್ಮಾಣವಾಗಿರುವುದನ್ನು ನೋಡಬಹುದು. ಅತ್ಯಂತ ಪ್ರಾಚೀನ ಕೆರೆ ಎಂದು ಕರೆಯುವ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಕೆರೆಯನ್ನು ಕದಂಬ ಅರಸ ಮಯೂರವರ್ಮ ಕಟ್ಟಿಸಿದನೆಂದು ಕ್ರಿ.ಶ. ೩೫೦ರ ಶಾಸನದಲ್ಲಿದೆ.[೪೮] ಅದೇ ಶಾಸನವನ್ನು ಮರು ಓದಿದ ಪಾಠದಲ್ಲಿ ಕೆರೆಯನ್ನು ಜೀರ್ಣೋದ್ಧಾರ ಮಾಡಿದ ಉಲ್ಲೇಖ ದೊರೆತಿದೆ. ಇದರಿಂದ ಕೆರೆ ನಿರ್ಮಾಣ ಕಾರ್ಯ ಹಿಂದೆಯೇ ಆರಂಭವಾಗಿವಾಗಿರಬಹುದು.[೪೯] ಕ್ರಿ.ಶ. ೪೩೦-೪೫೦ರ ಕಾಕುತ್ಸ್ಥವರ್ಮನ ತಾಳಗುಂದ ಶಾಸನ[೫೦] ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ತಾಳಗುಂದದ ಪ್ರಣಮೇಶ್ವರ ಗುಡಿಯ ಎದುರಿಗೆ ಕೆರೆ ನಿರ್ಮಿಸಿದ್ದನ್ನು ಹೇಳುತ್ತದೆ. ಕದಂಬರ ರವಿವರ್ಮ, ಗುಡ್ನಾಪುರ ಬಳಿ ಗುಡ್ಡ ತಟಾಕವೆಂಬ ದೊಡ್ಡ ಕೆರೆಯನ್ನು ನಿರ್ಮಿಸಿದನು.[೫೧] ಇದು ಉತ್ತರಕನ್ನಡದ ದೊಡ್ಡ ಕೆರೆಯಾಗಿದೆ.

ಹಾಸನ ಜಿಲ್ಲೆಯಲ್ಲಿ ಕದಂಬರ ಆಳ್ವಿಕೆ ಇದ್ದಿತು. ಜಿಲ್ಲೆಯಲ್ಲಿ ಸುಮಾರು ೧೫ ಶಾಸನಗಳು ಕದಂಬರ ಕಾಲಕ್ಕೆ ಒಳಪಟ್ಟಿವೆ. ಅವುಗಳಲ್ಲಿ ಎರಡು ಶಾಸನಗಳು ನೀರಾವರಿ ಭೂಮಿ ಮತ್ತು ಕೆರೆ

ಕೆಳಗಿನ ಜಮೀನಿನಿಂದ ಬಂದ ಹಣವನ್ನು ದೇವಾಲಯದ ಪೂಜೆಗೆ ವಿನಿಯೋಗಿಸಿರುವುದನ್ನು ಸ್ಪಷ್ಟಪಡಿಸುತ್ತವೆ. ಕ್ರಿ.ಶ. ೪೫೦ರ ಕಾಕುತ್ಸ್ಥವರ್ಮನ ಹಲ್ಮಿಡಿ ಶಾಸನದಲ್ಲಿ[೫೨] ತರಿ ಭೂಮಿಯ(Wet Land) ಹತ್ತನೆಯ ಒಂದು ಭಾಗವನ್ನು 'ಪೆತ್ತೊಂದಿ'ಯನ್ನು ಭಟ್ಟರಿಗೆ ಎಂದಿದೆ. ಈ ಹಿನ್ನೆಲೆಯಲ್ಲಿ ನೀರಾವರಿ ಆಧಾರಿತ ಕೃಷಿ ಚಟುವಟಿಕೆಗಳು ಇಲ್ಲಿ ಮೊದಲೇ ರೂಪುಗೊಂಡಿರಬೇಕೆಂದು ಅರ್ಥೈಸಲಾಗಿದೆ. ಉತ್ತರ ಕದಂಬರ ಕಾಲಕ್ಕೆ ಸೇರಿದ ಸಕಲೇಶಪುರ ತಾಲೂಕಿನ ಹಳೇಬೇಲೂರಿನ ಕ್ರಿ.ಶ. ೧೦೯೫ರ ಶಾಸನದಲ್ಲಿ[೫೩] ದಯಸಿಂಹನೃಪ ಹಾಗೂ ಆತನ ತಾಯಿ ಅರಸಿ ಮೇಚಲದೇವಿ ಅಗ್ರಹಾರವಾದ ಹಾರುವ ಬೆಲುಹೊರದಲು(ಹಳೇಬೇಲೂರಿನಲ್ಲಿ) ದೇವಾಲಯವನ್ನು ಮಾಡಿಸಿ ದೇವರ ನಿತ್ಯ ನೈವೇದ್ಯ ಪೂಜೆಗೆ ಹುಣಸೆ ಗದ್ದೆಯ ಭೂಮಿಯಲ್ಲಿ ಕ್ರಯವಾಗಿ ಪಡೆದ ಹಣ ಮತ್ತು ಕೆರೆಯ ಮಣ್ಣಿನಲ್ಲಿ ಒಂದು ಹಣದ ಮಣ್ಣನ್ನು ದೇವರಿಗೆ ಬಿಟ್ಟಿರುವ ಪ್ರಸ್ತಾಪವಿದೆ.

ಕದಂಬರ ಸಮಕಾಲೀನರಾಗಿ ಗಂಗರು ದಕ್ಷಿಣ ಕರ್ನಾಟಕದ ಕೆಲವು ಭಾಗಗಳನ್ನು ಸುಮಾರು ೪ನೆಯ ಶತಮಾನದಿಂದ ೧೦ನೇ ಶತಮಾನದವರೆಗೂ ಆಳಿದರು. ಇವರು ಕೃಷಿ ಭೂಮಿಗೆ ನೀರಾವರಿ ಒದಗಿಸುವಲ್ಲಿ ಆಸಕ್ತಿ ತೋರಿಸಿದ್ದರು. ಗಂಗರ ಕಾಲಕ್ಕೆ ಸಂಬಂಧಿಸಿದಂತೆ ಅನೇಕ ಶಿಲಾಶಾಸನಗಳು ಮತ್ತು ತಾಮ್ರಶಾಸನಗಳು ನೀರಾವರಿ ಪದ್ಧತಿಯನ್ನು ಕುರಿತು ಮಾಹಿತಿ ನೀಡುತ್ತವೆ. ಕೆರೆಗೆ ಮಡಪು, ದೋಣಿ, ಗುಂಡು, ಜಲಾಶಯ, ಕೊಳ ಎಂಬ ಪರ್ಯಾಯ ಹೆಸರುಗಳಿವೆ.[೫೪] ೬ನೆಯ ಶತಮಾನದಲ್ಲಿ ಕೆರೆಯ ಆಕಾರವನ್ನು ಬಾಲಚಂದ್ರಾಕಾರದ ಕೊಳ, ಅರ್ಧಚಂದ್ರಾಕಾರ ಕೊಳವೆಂದು ಗುರುತಿಸಲಾಗಿದೆ.[೫೫] ಬಹುಶಃ ಅಲ್ಲಿನ ಭೌಗೋಳಿಕ ಪರಿಸರವನ್ನು ಅನುಸರಿಸಿ ಕಟ್ಟಿರಬಹುದಾದ ಕೆರೆಗಳಿರಬೇಕು.

ತಡಂಗಲ ಮಾಧವವರ್ಮನ ಕ್ರಿ.ಶ. ೬ನೆಯ ಶತಮಾನದ[೫೬] ಮೇಲುಕೋಟೆ ಶಾಸನದಲ್ಲಿ ಕೆರೆಗಳ ಪ್ರಸ್ತಾಪವಿದೆ. ಏಕಕಾಲದಲ್ಲಿ ಎರಡು ಕೆರೆಗಳಿಂದ ಕೆಲವು ಗದ್ದೆಗಳಿಗೆ ನೀರುಣಿಸಿ ಕೆರೆ ನೀರಾವರಿಯಿಂದ ವರ್ಷದಲ್ಲಿ ಎರಡು ಬೆಳೆ ತೆಗೆಯುತ್ತಿದ್ದುದನ್ನು ಸೂಚಿಸುತ್ತದೆ. ಗಂಗರಾಜ ಶ್ರೀಪುರುಷನ ಕ್ರಿ.ಶ. ೭೭೬-೭೭೭ರ ತಾಮ್ರಶಾಸನವು[೫೭] ಆರು ಕೆರೆಗಳ ಸರಹದ್ದುಳ್ಳ ಪೊನ್ನಳ್ಳಿಯ ದಾನದ ವಿಷಯವನ್ನು ತಿಳಿಸುತ್ತದೆ. ರಾಜಮಲ್ಲನ ಶಾಸನವು[೫೮] ತಿಪಟೂರು ತಾಲೂಕಿನ ಕೆರೆಗೋಡಿ ರಂಗಾಪುರದಲ್ಲಿ ದೊರೆಕಿದ್ದು, ಅಲ್ಲಿ ೫ ಕೆರೆ ಇದ್ದುದನ್ನು ಉಲ್ಲೇಖಿಸುತ್ತದೆ. ತುಮಕೂರು ಜಿಲ್ಲೆಯ ಸಿರಾ ತಾಲೂಕಿನ ಬರಗೂರಿನ ಕ್ರಿ.ಶ. ೯೨೦ರ ಶಾಸನವು[೫೯] ನಾರಣಬ್ಬೆ ಎಂಬ ಹೆಂಗಸು ಕೆರೆ ಕಟ್ಟಿಸಿದ್ದನ್ನು ದಾಖಲು ಮಾಡಿದೆ. ಗಂಗ ಅರಸರು ಕೆರೆಗಳ ನಿರ್ಮಾಣಕ್ಕೆ ಮಾತ್ರ ಮಹತ್ವ ನೀಡದೆ ಅವುಗಳ ನಿರ್ವಹಣೆಗೆ ಕೆರೆ ಕೆಳಗಿನ ಜಮೀನನ್ನು ಅನುದಾನ ರೂಪದಲ್ಲಿ ನೀಡುತ್ತಿದ್ದರು.

ಹಾಸನ ಜಿಲ್ಲೆಯು ಕ್ರಿ.ಶ. ೫ನೆಯ ಶತಮಾನದಿಂದ ಕ್ರಿ.ಶ. ೧೧ನೆಯ ಶತಮಾನದವರೆಗೆ ಗಂಗರ ಪ್ರಭಾವಕ್ಕೆ ಒಳಪಟ್ಟಿತ್ತು. ಈ ಪರಿಸರದಲ್ಲಿ ಸುಮಾರು ೩೫ಕ್ಕೂ ಹೆಚ್ಚು ಶಾಸನಗಳಿವೆ. ಅವು

ಗಂಗರ ಇತಿಹಾಸವನ್ನು ತಿಳಿಸುತ್ತವೆ. ನೀರಾವರಿ ವ್ಯವಸ್ಥೆಯ ಬಗ್ಗೆ ಅಷ್ಟಾಗಿ ಮಾಹಿತಿಗಳಿಲ್ಲ. ನೀರಾವರಿ ಕಾಮಗಾರಿಗಳ ನಿರ್ಮಾಣದಷ್ಟೇ ದುರಸ್ತಿ ಮತ್ತು ನಿರ್ವಹಣಾ ರೂಪದ ಕಾಮಗಾರಿಗಳು ಅನುಷ್ಠಾನಗೊಳ್ಳುತ್ತಿದ್ದರ ಬಗೆಗೆ ಇಲ್ಲಿನ ಶಾಸನ ಬೆಳಕು ಚೆಲ್ಲುತ್ತದೆ. ಚನ್ನರಾಯಪಟ್ಟಣ ತಾಲೂಕಿನ ಗಂಗ ಅರಸ ಎರೆಯಪ್ಪನ ಕಾಲದ ಕ್ರಿ.ಶ. ೧೦ನೆಯ ಶತಮಾನದ ಬಸವಪುರ ಶಾಸನದಲ್ಲಿ[೮೦] ಉತ್ತಮ ಗಾವುಂಡ ನಿರ್ಮಿಸಿದ್ದ ಕೆರೆಯ ನಿರ್ವಹಣೆಗೆ ಆರು ಖಂಡುಗ ಭೂಮಿಯನ್ನು ಗೋವಿಂದರಸ ದಾನವಾಗಿ ನೀಡಿದ್ದಾನೆ ಎಂದಿದೆ.

ಕದಂಬರ ನಂತರ ಅಧಿಕಾರಕ್ಕೆ ಬಂದವರು ಬಾದಾಮಿ ಚಾಲುಕ್ಯರು. ಕ್ರಿ.ಶ. ೬ನೆಯ ಶತಮಾನ ಮಧ್ಯದಿಂದ ಕ್ರಿ.ಶ. ೮ನೇ ಶತಮಾನದ ಮಧ್ಯದವರೆಗೂ ಸುಮಾರು ಇನ್ನೂರು ವರ್ಷ ದಕ್ಷಿಣಭಾರತವನ್ನು ಆಳಿದರು. ಎರಡನೆಯ ಪುಲಿಕೇಶಿಯ ೩೨ ವರ್ಷಗಳ ದೀರ್ಘ ಆಡಳಿತ ನಡೆಸಿ ಕೃಷಿ ಅಭಿವೃದ್ಧಿಗಾಗಿ ಅನೇಕ ಕೆರೆ ಮತ್ತು ಬಾವಿಗಳನ್ನು ಕಟ್ಟಿಸಿದನು. ಚಾಲುಕ್ಯ ವಿನಯಾದಿತ್ಯನ ಕ್ರಿ.ಶ. ೭೦೭ರ ಶಿಗ್ಗಾಂವಿ ಶಾಸನವು[೮೧] ಧಾರವಾಡ ಜಿಲ್ಲೆಯ ಗುಡ್ಡಿಗೆರೆ(ಗುಡಿಗೇರಿ) ಎಂಬ ಗ್ರಾಮದ ಸರಹದ್ದುಗಳಲಿದ್ದ ಕೆರೆಗಳನ್ನು ಹೇಳುತ್ತದೆ. ಅವುಗಳಲ್ಲಿ ದಕ್ಷಿಣಕ್ಕೆ ವೆಣ್ಣಕೆರೆ, ಉತ್ತರಕ್ಕೆ ಪುಲಿವಾರ ಕೆರೆ, ಪಶ್ಚಿಮಕ್ಕೆ ಕುಪೇರ ಕೆರೆ, ವಾಯವ್ಯಕ್ಕೆ ಕೋಡಿಕೆರೆ, ಈಶಾನ್ಯಕ್ಕೆ ಮಕ್ಕ ಕೆರೆ ಮತ್ತು ಅರಸಾಳು ಕೆರೆ ಇದ್ದವೆಂದು ತಿಳಿಸುತ್ತದೆ. ಬಾದಾಮಿ ಚಾಲುಕ್ಯರು ಕೆರೆ ಮತ್ತು ಬಾವಿಗಳನ್ನು ನಿರ್ಮಿಸುವುದು ಪುಣ್ಯದ ಕಾರ್ಯವೆಂದು ಭಾವಿಸಿದ್ದರು. ಹಾಸನ ಜಿಲ್ಲೆಯು ಚಾಲುಕ್ಯರ ಆಡಳಿತಕ್ಕೆ ಒಳಗಾಗಿದ್ದರೂ ಬಾದಾಮಿ ಚಾಲುಕ್ಯರಿಗೆ ಸಂಬಂಧಿಸಿದ ಯಾವುದೇ ಶಾಸನಗಳಿಲ್ಲ.

ಬಾದಾಮಿ ಚಾಲುಕ್ಯರ ಉತ್ತರಾಧಿಕಾರಿಗಳಾಗಿ ರಾಷ್ಟ್ರಕೂಟರು ಕ್ರಿ.ಶ. ೮ನೆಯ ಶತಮಾನ ಮತ್ತು ಕ್ರಿ.ಶ. ೧೦ನೆಯ ಶತಮಾನಗಳಲ್ಲಿ ಕರ್ನಾಟಕದ ಅನೇಕ ಭಾಗಗಳಲ್ಲಿ ಆಡಳಿತ ನಡೆಸಿದರು. ಇವರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಅನೇಕ ಕೆರೆಗಳನ್ನು ಕಟ್ಟಲು ಪ್ರೋತ್ಸಾಹವಿತ್ತರು. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಕೇಸರಭಾವಿ ಶಾಸನವು[೮೨] ಕ್ರಿ.ಶ. ೮೩೭ರಲ್ಲಿ ಅಮೋಘವರ್ಷನಿಂದ ಅಥವಾ ಅವನ ಆಳ್ವಿಕೆಯಲ್ಲಿ ಒಂದು ಕೆರೆ ಮತ್ತು ಅದರ ತೂಬು ಕಟ್ಟಿಸಿದ್ದನ್ನು ತಿಳಿಸುತ್ತದೆ. ಅದೇ ರಾಜನ ಆಳ್ವಿಕೆಯಲ್ಲಿ ಕ್ರಿ.ಶ. ೮೬೨ರ ಬಾಗೇವಾಡಿ ತಾಲೂಕಿನ ಹೂವಿನ ಹಿಪ್ಪರಗಿ ಶಾಸನವು[೮೩] ಎರಡು ಕೆರೆಗಳು ಇದ್ದುದನ್ನು ಉಲ್ಲೇಖ ಮಾಡಿದೆ. ಹಾಸನ ಪರಿಸರದಲ್ಲಿ ರಾಷ್ಟ್ರಕೂಟರ ಕಾಲದ ಶಾಸನಗಳು ಕಂಡುಬಂದಿಲ್ಲ.

ಕ್ರಿ.ಶ. ೧೦ನೆಯ ಶತಮಾನದಿಂದ ೧೪ನೆಯ ಶತಮಾನದವರೆಗೂ ಸುಮಾರು ೩೫೦ ವರ್ಷಗಳು ಕೆರೆ ನಿರ್ಮಾಣದ ಸುವರ್ಣಯುಗವಾಗಿದೆ. ಆ ಕಾಲದಲ್ಲಿ ವಿದ್ವಾಂಸರು ನೆಲೆಸುವುದಕ್ಕಾಗಿ ಅಸಂಖ್ಯಾತ ಹೊಸ ಹಳ್ಳಿಗಳನ್ನು ಮತ್ತು ಅಗ್ರಹಾರಗಳನ್ನು ನಿರ್ಮಿಸಲಾಗಿದೆ. ಅಲ್ಲಿ ವಿಶ್ರಾಂತಿಗೃಹಗಳನ್ನು

ಹಾಗೂ ದೇವಸ್ಥಾನಗಳನ್ನು ಕಟ್ಟಲಾಗಿದೆ. ಇವೆಲ್ಲವೂ ಕಲ್ಯಾಣ ಚಾಲುಕ್ಯರ ಕಾಲದ ಪ್ರಮುಖ ಕಾರ್ಯಗಳಾಗಿವೆ. ವಾಸ್ತವಿಕವಾಗಿ ಒಂದು ಹಳ್ಳಿ ನಿರ್ಮಾಣವಾದಾಗ ಆ ಹಳ್ಳಿಯಲ್ಲಿ ಕೆರೆ, ಕಟ್ಟೆ ನಿರ್ಮಿಸಿ ನಂತರ ಗುಡಿಯನ್ನು ಕೆರೆ ಹತ್ತಿರ ಕಟ್ಟಲಾಗುತ್ತಿತ್ತು. ಕೆಲವೊಮ್ಮೆ ಕೆರೆ ಒಡೆದಾಗ ಅದರ ದುರಸ್ತಿಗೆ ದೇವಾಲಯದ ನಿಧಿಯನ್ನು ಬಳಸಲಾಗುತ್ತಿತ್ತು. ಇದರ ಉಸ್ತುವಾರಿಯನ್ನು ಗ್ರಾಮಸಭೆ ಮಾಡುತ್ತಿತ್ತು. ಗಾವುಂಡರು ಅದರ ಮುಂದಾಳತ್ವ ವಹಿಸುತ್ತಿದ್ದರು. ಈ ಯುಗದಲ್ಲಿ ನೀರಾವರಿ ಸೌಲಭ್ಯಗಳ ನಿರ್ಮಾಣ ಹಾಗೂ ಸಂರಕ್ಷಣೆಯಲ್ಲಿ ಜನತೆಯ ಪಾತ್ರ ಅತ್ಯುನ್ನತ ಮಟ್ಟದಲ್ಲಿತ್ತು.

ಕಲ್ಯಾಣ ಚಾಲುಕ್ಯರು ಹಾಸನ ಜಿಲ್ಲೆಯ ವಿವಿಧ ಭಾಗಗಳಲ್ಲಿ ಆಳ್ವಿಕೆ ನಡೆಸಿದರು. ಇವರ ಕಾಲಕ್ಕೆ ಸಂಬಂಧಿಸಿದಂತೆ ಕೆಲವು ಶಾಸನಗಳು ದೊರೆತಿವೆ. ಈ ಶಾಸನಗಳಲ್ಲಿ ಗಾವುಂಡರು ಕೆರೆ ನೀರಾವರಿಗೆ ತೋರಿಸಿದ ಆಸಕ್ತಿ ಪ್ರಮುಖವಾಗಿದೆ. ಇವರು ತಮ್ಮ ಆಡಳಿತ ಪ್ರದೇಶದ ಅಭಿವೃದ್ಧಿಗಾಗಿ ದುಡಿಯುತ್ತಿದ್ದರು. ಅವರ ಅಭಿವೃದ್ಧಿ ಕಾರ್ಯಗಳಲ್ಲಿ ನೀರಾವರಿ ವ್ಯವಸ್ಥೆಯೂ ಒಂದು. ಹೊಳೆನರಸೀಪುರ ತಾಲೂಕಿನ ದೊಡ್ಡಬ್ಯಾಗತಹಳ್ಳಿಯ ಕ್ರಿ.ಶ. ೯೭೪-೭೫ರ ಶಾಸನವು[೬೪] ಪಾಂಡ್ಯಗಾವುಂಡ ಎಂಬುವನು ಮಾಧವಯ್ಯನಿಗೆ ಕೆರೆ ಕೆಳಗಿನ ಅಚ್ಚುಕಟ್ಟಿನಲ್ಲಿ ೨ ಖಂಡುಗ ಭೂಮಿಯನ್ನು ದಾನ ನೀಡಿರುವುದನ್ನು ತಿಳಿಸಿದೆ. ಹಾಗೆಯೇ ಕ್ರಿ.ಶ. ೧೦೯೯-೧೧೦೦ರ ದೊಡ್ಡಗನ್ನಿ ಶಾಸನದಲ್ಲಿ[೬೫] ಮುದ್ದಮರಸನ ಮಗನಾದ ಬಾಚರಸನು ತಪೋಧನರಿಗೆ ಆಶ್ರಯವಾಗುವಂತೆ ಕೆರೆಯೊಂದನ್ನು ದತ್ತಿ ನೀಡಿರುವ ಪ್ರಸ್ತಾಪವಿದೆ. ಬೇಲೂರು ಪರಿಸರದಲ್ಲಿ ೬ನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಕೆರೆಗಳು ನಿರ್ಮಾಣಗೊಂಡಿವೆ. ಈ ಕಾಲದಲ್ಲಿ ಹಿರಿಯರ ಪುಣ್ಯಪ್ರಾಪ್ತಿಗಾಗಿ ಕೆರೆ ಕಟ್ಟಿಸಿರುವ ಉದಾಹರಣೆಗಳು ಇವೆ. ಕ್ರಿ.ಶ. ೧೧೦೧ರ ದಬ್ಬೆ ಅಗ್ರಹಾರದ ಶಾಸನದಲ್ಲಿ[೬೬] ಧೀವರ ಕೊಂಬೆಗಾವುಂಡ ದೇವಾಲಯದ ಮುಂಭಾಗದಲ್ಲಿ ಕೆರೆಯೊಂದನ್ನು ತೋಡಿಸಿ ತನ್ನ ತಂದೆಗೆ ಪುಣ್ಯವಾಗಲೆಂದು ಆ ಕೆರೆಯನ್ನು ದೇವಾಲಯಕ್ಕೆ ಅರ್ಪಿಸಿದನೆಂದು ತಿಳಿಸುತ್ತದೆ. ಇಲ್ಲಿ ತಂದೆ ಮೇಲಿರುವ ಮಮತೆ ಮಗನಿಗೆ ಕೆರೆ ನಿರ್ಮಿಸಲು ಪ್ರೇರಣೆಯಾಗಿದೆ. ಕೋಡಿಹಳ್ಳಿಯ ಕ್ರಿ.ಶ. ೧೧೦೦-೧೧೦೧ರ ಶಾಸನದಲ್ಲಿ[೬೭] ಕಾಳಬ್ಬೆಗಾವುಂಡಿಯ ಪುತ್ರ ಚನ್ನಗಾವುಂಡ ಮತ್ತು ಕರಿಕಸಾಮಂತನ ಪುತ್ರ ಅಹಿತರಂಕು ಶೆಟ್ಟಿ(ಅಹಿಂತದನಕ್ಕ ಶೆಟ್ಟಿ) ಕೆರೆ ಕಟ್ಟಿಸಿದರೆಂಬ ಉಲ್ಲೇಖವಿದೆ. ಇಲ್ಲಿ ಅನೇಕ ಜನರು ಕೂಡಿ ಕೆರೆ ಕಾಮಗಾರಿ ಕೈಗೊಂಡಿರುವುದು ಕಂಡುಬರುತ್ತದೆ.

ದೇವಾಲಯಗಳ ಪೂಜಾ ಕೈಂಕರ್ಯಕ್ಕೆ ಕೆರೆ ಕೆಳಗಿನ ಭೂಮಿಯನ್ನು ನೀಡಿರುವುದು ಇಲ್ಲಿನ ಶಾಸನಗಳಿಂದ ತಿಳಿಯುತ್ತದೆ. ಬೇಲೂರಿನ ಕ್ರಿ.ಶ. ೧೧೦೦-೧೧೦೧ನೇ ಶಾಸನವು[೬೮] ಕೊಂಡಿ ಗ್ರಾಮದ ದೇವಾಲಯಕ್ಕೆ ಕೆರೆ ಕೆಳಗಿನ ಗದ್ದೆ ಬೆದ್ದಲನ್ನು ದತ್ತಿ ನೀಡಿರುವುದನ್ನು ಹೇಳಿದೆ. ಅದೇ ತಾಲೂಕಿನ ದಬ್ಬೆ ಅಗ್ರಹಾರದ ಕ್ರಿ.ಶ. ೧೧-೧೨ನೆಯ ಶತಮಾನದ ಶಾಸನದಲ್ಲಿ[೬೯]

ಕಾರಕಾ(ಕರಿಕ) ಹಳ್ಳಿಯ ಕೆರೆಯ ಕೆಳಗೆ ಗದ್ದೆ ಭೂಮಿಯ ಆದಾಯದ ಚಿನ್ನದ ಒಂದು ಅಡ್ಡ ಪಾಲನ್ನು ಗೊರವಗಾವುಂಡ ಕೋಬೇಶ್ವರ ದೇವಾಲಯದಲ್ಲಿನ ನಿತ್ಯದೀಪಾಲಂಕಾರಕ್ಕಾಗಿ ದಾನ ನೀಡಿದದ್ದನ್ನು ಹೊಂದಿದೆ. ಹಾಗೆಯೇ ಕೆರೆಯ ಸಂರಕ್ಷಣೆಗಾಗಿ ಯುದ್ಧವೇ ನಡೆದು ಮಡಿದವರ ವಿಷಯಗಳು ಕೂಡ ಶಾಸನದಲ್ಲಿವೆ. ಕ್ರಿ.ಶ. ೧೧ ಮತ್ತು ೧೨ನೆಯ ಶತಮಾನದ ಬೇಲೂರು ತಾಲೂಕಿನ ಆಲೂರು ಶಾಸನದಲ್ಲಿ[೨೦] ಮಾಚಿಗಾಮಣ್ಣನು ಕೆರೆಯ ಕಟ್ಟೆ ಕಡಿದಾಗ ಕಾಳಗವೇ ನಡೆದು ಮರಣ ಹೊಂದಿದನು. ಈತನ ಹೆಂಡತಿ ಚಟ್ಟಬ್ಬೆ ಶಾಸನ ಹಾಕಿಸಿದಳು. ಅದೇ ರೀತಿ ಆಲೂರು ತಾಲೂಕಿನ ಹೊಲಹಳ್ಳಿಯ ಕ್ರಿ.ಶ. ೧೧ನೆಯ ಶತಮಾನದ ಶಾಸನದಲ್ಲಿ[೨೧] ಮಹಾಮಂಡಲೇಶ್ವರನಾದ ಜಯಸಿಂಘ ಮಹಾರಾಜ ದೇವನು ಆಳುತ್ತಿರುವಾಗ ಕರಿಕನ್ನನು ಕಟ್ಟೆ ನೀರಿಂಗೆ ಇಳಿದು ಕಾದಾಡಿ ತೀರಿಕೊಂಡನು ಎಂಬುದಾಗಿ ಉಲ್ಲೇಖಿಸಿದೆ. ಇದನ್ನು ಬ್ರಾಹ್ಮಣರು ಮತ್ತು ಬ್ರಾಹ್ಮಣೇತರ ಮಧ್ಯೆ ಕೆರೆ ನೀರನ್ನು ಕೃಷಿಗೆ ಬಳಸುವ ಸಂಬಂಧವಾಗಿ ನಡೆದ ಕಾಳಗ ಇರಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಶಾಸನ ತ್ರುಟಿತವಾಗಿರುವುದರಿಂದ ನಿಖರವಾಗಿ ಹೇಳಲು ಕಷ್ಟಸಾಧ್ಯ.

೧೧ನೆಯ ಶತಮಾನದಲ್ಲಿ ಹಾಸನ ಜಿಲ್ಲೆಯನ್ನು ಚಾಲುಕ್ಯ ಸಾಮಂತನಾದ ಕೊಂಗಾಳ್ವರು ಕಾವೇರಿ ಮತ್ತು ಹೇಮಾವತಿ ನದಿಗಳ ಮಧ್ಯಪ್ರದೇಶವನ್ನು ಆಳಿದ್ದಾರೆ.[೨೨] ಬಡಿಗ ಕೊಂಗಳ್ವ(೧೦೨೨), ರಾಜೇಂದ್ರ ಚೋಳ ಪೃಥ್ವೀ ಮಹಾರಾಜ(೧೦೨೬), ಕೊಂಗಳ್ವ ಆಧರಾದಿತ್ಯ(೧೦೬೬-೧೧೦೦), ಮತ್ತು ತ್ರಿಭುವನ ಚೋಳ(೧೧೦೦) ಕ್ರಮವಾಗಿ ಜಿಲ್ಲೆಯ ಒಂದು ಪ್ರದೇಶದಲ್ಲಿ ಆಧಿಪತ್ಯ ನಡೆಸಿದರು. ಇವರು ಕೆರೆ ನೀರಾವರಿ ಅಭಿವೃದ್ಧಿಗೆ ಮಹತ್ವ ನೀಡಿರುವುದು ಅತ್ಯಲ್ಪ. ಶಾಸನಗಳಲ್ಲಿ ಕೆರೆ ಕೆಳಗಿನ ಭೂಮಿಯನ್ನು ದೇವಾಲಯಗಳಿಗೆ ದತ್ತಿ ಬಿಟ್ಟಿರುವ ವಿಷಯಗಳ ಪ್ರಸ್ತಾಪಗಳು ಸಿಕ್ಕಿವೆ. ತ್ರಿಭುವನ ಚೋಳನ ಗುಬ್ಬಿಯ ಕ್ರಿ.ಶ. ೧೧ನೆಯ ಶತಮಾನದ ಶಾಸನವು[೨೩] ಉತ್ತರಾಯಣ ಸಂಕ್ರಮಣದಂದು ಪದ್ಮಣನ್ದಿದೇವರಿಗೆ ಧಾರಪೂರ್ವಕವಾಗಿ ಬೂವೆಯನಾಯಕನು ತೂಬಿನ ಮೊದಲೇರಿಯ ೧/೨ ಖಂಡುಗ ಮತ್ತು ೧/೨ ಅಡುವಿನ ಮಣ್ಣನ್ನು ಬಿಟ್ಟಿರುವ ವಿಷಯವನ್ನು ಉಲ್ಲೇಖಿಸಿದೆ.

ಕೊಂಗಾಳ್ವರ ನಂತರ ನಾಡಾಳ್ವರು ಹೊಳೆನರಸೀಪುರ ತಾಲೂಕಿನ ಉದ್ದೂರಿನಲ್ಲಿ ಸುಮಾರು ಕ್ರಿ.ಶ. ೧೧೪೧ರಲ್ಲಿ ವಿಷ್ಣುವರ್ಧನನ ಮಗ ನರಸಿಂಹನ ಸಾಮಂತರಾಗಿ ಆಡಳಿತ ಮಾಡಿದರು.[೨೪] ಅನಂತರ ಚಂಗಾಳ್ವರು ಜಿಲ್ಲೆಯ ಕಾವೇರಿ ನದಿಯ ದಕ್ಷಿಣ ಭಾಗದಲ್ಲಿ ಕ್ರಿ.ಶ. ೧೦೯೦ ರಿಂದ ಕ್ರಿ.ಶ. ೧೨೪೫ರ ವರೆಗೆ ಆಳ್ವಿಕೆ ನಡೆಸಿದ್ದಾರೆ.[೨೫] ಹೊಯ್ಸಳ ಅರಸರು ಇವರನ್ನು ಸಾಮಂತರರನ್ನಾಗಿ ಮಾಡಿಕೊಂಡಿದ್ದರು. ಇವರು ಕೊಂಗಾಳ್ವರಂತೆ ಕೆರೆ ನೀರಾವರಿ ನಿರ್ಮಾಣದಲ್ಲಿ ತೊಡಗಿಸಿಕೊಂಡಿಲ್ಲ ಎಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಕ್ರಿ.ಶ. ೧೧ನೆಯ ಶತಮಾನದ ಕೊನೆಯಿಂದ ಸುಮಾರು ಕ್ರಿ.ಶ. ೧೪ನೆಯ ಶತಮಾನದ ಮಧ್ಯದವರೆಗೂ ಹೊಯ್ಸಳರು ಆಡಳಿತ ನಡೆಸಿದರು. ಇವರು ತಮ್ಮ ಆಳ್ವಿಕೆಯ ಅವಧಿಯಲ್ಲಿ ನೀರಾವರಿ ಕಾರ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿ, ಅತ್ಯಂತ ಶ್ರೇಷ್ಠ ಕೆರೆಯ ನಿರ್ಮಾಪಕರು ಎನಿಸಿಕೊಂಡಿದ್ದಾರೆ. ಹಾಸನ ಜಿಲ್ಲೆಯಲ್ಲಿ ಹೊಯ್ಸಳ ವಿನಯಾದಿತ್ಯ, ಎರೆಯಂಗ, ವಿಷ್ಣುವರ್ಧನ, ಒಂದನೆಯ ನರಸಿಂಹ, ಇಮ್ಮಡಿ ವೀರಬಲ್ಲಾಳ, ಎರಡನೆಯ ನರಸಿಂಹ, ಸೋಮೇಶ್ವರ, ಮೂರನೆಯ ನರಸಿಂಹ ಮತ್ತು ಮುಮ್ಮಡಿ ಬಲ್ಲಾಳನ ಕಾಲದ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇವರು ಕೆರೆ ನೀರಾವರಿ ಬೆಳವಣಿಗೆಗೆ ಕೊಟ್ಟ ಕೊಡುಗೆ ಮಹತ್ವದಾಗಿದೆ.

ಹೊಯ್ಸಳರ ಆರಂಭದ ರಾಜಧಾನಿ ಮೂಡಿಗೆರೆ ತಾಲೂಕಿನ ಸೊಸೆಯೂರು(ಶಶಕಪುರ) ನಂತರದ ಕಾಲದಲ್ಲಿ ಬೇಲೂರು, ಹಳೇಬೀಡಿಗೆ ಸ್ಥಳಾಂತರವಾಯಿತು. ಹಾಸನ ಜಿಲ್ಲೆಯ ಈ ರಾಜಧಾನಿಗಳಿಗೆ ಯಗಚಿ ನದಿಯ ನೀರನ್ನು ಹರಿಸಲಾಗುತ್ತಿತ್ತು. ಇದಕ್ಕೆ ಆಧಾರವೆಂಬಂತೆ ಹಳೇಬೀಡಿನ ಒಂದು ಶಾಸನದಲ್ಲಿ[೭೬] ಎಲಚಿ(ಎಗಚಿ) ನದಿಯಿಂದ ತೋಡಲಾದ ಒಂದು ಕಾಲುವೆಯ ಬಗ್ಗೆ ಉಲ್ಲೇಖವಿದ್ದು ಎಲ್ಲಾ ಜನರು ಅದರಲ್ಲಿ ಸ್ನಾನ ಮಾಡಬಹುದು ಎಂದಿದೆ.

ಈ ಪ್ರದೇಶದಲ್ಲಿ ಅರಸರು, ರಾಣಿಯರು, ಸಾಮಂತರು ಅಧಿಕಾರಿಗಳು ಕೆರೆ ನಿರ್ಮಿಸಿರುವ ಅನೇಕ ದಾಖಲೆಗಳು ದೊರಕುತ್ತವೆ. ಹಳೇಬೀಡಿನ ಅತಿ ಪ್ರಾಚೀನ ಕೆರೆಯನ್ನು ವಿನಯಾದಿತ್ಯ ರಾಜ ಕ್ರಿ.ಶ. ೧೦೬೨[೭೭]ರಲ್ಲಿ ಕಟ್ಟಿಸಿ, ತೂಬನ್ನು ಮಾಡಿಸಿದ. ಹಾಗೂ ಅದರ ಸಂರಕ್ಷಣೆಗಾಗಿ ಬಿತ್ತುವಟ್ಟವನ್ನು ನೀಡಿರುವಂತಿದೆ. ಉತ್ತಮ ಅಧಿಕಾರ, ಸ್ಥಾನಮಾನ, ಆರ್ಥಿಕ ಸುಸ್ಥಿತಿಯನ್ನು ಪಡೆದಿದ್ದ ಮಹಾಪ್ರಧಾನರು ಕೆರೆ ಕಟ್ಟಿಸುವುದರಲ್ಲಿ ಆಸಕ್ತಿ ತೋರಿದ್ದಾರೆ. ಕ್ರಿ.ಶ. ೧೧ನೆಯ ಶತಮಾನದ ಕುರಾದಹಳ್ಳಿಯ ಶಾಸನದಲ್ಲಿ[೭೮] ಮಹಾಪ್ರಧಾನ ಚಾವುಣ್ಡರಾಜನ ಮೂವರು ಮಕ್ಕಳಾದ ಮರಿರಾಜ, ಜೀನದೇವ, ದಂಡನಾಯಕ ತೇಲಿಯಲಿಪ್ಪಯ್ಯ ರಾಯಘಟ್ಟದಲ್ಲಿ ಕೆರೆ ಮತ್ತು ದೇವಾಲಯವನ್ನು ನಿರ್ಮಿಸಿದರೆಂಬ ಉಲ್ಲೇಖವಿದೆ.

ಕೆರೆಗಳನ್ನು ನಿರ್ಮಿಸಲು ಅಲ್ಲಿನ ಭೌಗೋಳಿಕ ಮತ್ತು ಜಲಾನಯನ ಪರಿಸರವನ್ನು ಅಧ್ಯಯನ ಮಾಡಿ ಅನುಭವಿಗಳನ್ನು ತೊಡಗಿಸಲಾಗುತ್ತಿತ್ತು. ನಂತರ ನಿರ್ವಹಣೆಗೆ ಕೆರೆ ಕೊಡುಗೆಗಳನ್ನು ನೀಡಿರುವುದು ಮತ್ತು ಕೆರೆಯನ್ನು ಕಟ್ಟಿ ಮುಗಿಸಿದ ನಂತರ ಅಲ್ಲಿ ಒಂದು ಗುಡಿಯನ್ನು ಕಟ್ಟಲಾಗುತ್ತಿತ್ತು. ಈ ಕುರಿತಂತೆ ಜಿಲ್ಲೆಯಲ್ಲಿ ಬಹುತೇಕ ಹೊಯ್ಸಳ ಶಾಸನಗಳು ದೊರಕಿವೆ.

ಕ್ರಿ.ಶ. ೧೧ನೆಯ ಶತಮಾನದ ಕುರಾದಹಳ್ಳಿಯ ಶಾಸನದಲ್ಲಿ[೭೯] ಧರ್ಮರಾಸಿ ಎಂಬ ಕಾಳಾಮುಖ ಪಂಡಿತನು ಗುರುವೂ ತಪಸ್ವಿಯಾಗಿದ್ದು, ಕೆರೆ ಮತ್ತು ದೇವಾಲಯ ನಿರ್ಮಾಣದ ತಂತ್ರಜ್ಞನಾಗಿದ್ದನೆಂದು ಹೇಳುತ್ತದೆ. ಇದೇ ಶಾಸನದಲ್ಲಿ ಕಾಳಾಮುಖ ಪಂಡಿತನನ್ನು ಕುರಿತು

'ಕೆರೆಯಂ ಕಟ್ಟಿದ ಪೆಂಪು... ದೇಗುಲವು ನೆತ್ತಿದ ಪೆಂಪು ಸಮಸ್ತ ಧಾತ್ರಿಯೊಳ್ಪೆರರನದೇಕೆ ಪೇಳೊರ್ಗರ್ದಪ್ಪೆ ಪೊಗಳಿಂ ಸಲೆ ಧರ್ಮರಾಸಿಯಂ ಎಂಬ ವರ್ಣನೆ ಇದೆ. ಕಾಳಾಮುಖರಲ್ಲಿ ದೇವಸ್ಥಾನಗಳನ್ನು, ಕೆರೆಗಳನ್ನು ನಿರ್ಮಿಸುವ ಪರಿಣತರು ಇದ್ದಂತೆ ತೋರುತ್ತದೆ. ಅರಸೀಕೆರೆಯ ಕ್ರಿ.ಶ. ೧೧-೧೨ನೆಯ ಶತಮಾನದ ಶಾಸನದಲ್ಲಿ[೮೦] ಕಚ್ಚವೆರ್ಗ್ಗಡೆ ಎಂಬುವನು ಅರಸೀಕೆರೆಯನ್ನು ಕಟ್ಟಿ, ನಿರ್ವಹಣೆಗೆ ಬಿತ್ತುವಟ್ಟ ನೀಡಿದ ಪ್ರಸ್ತಾಪವಿದೆ. ಹೆಗ್ಗಡೆಗಳ ಕುಟುಂಬದವರು ಕೆರೆ ನಿರ್ಮಾಣದಲ್ಲಿ ಆಸಕ್ತಿ ತೋರಿಸಿರುವುದು ಇಲ್ಲಿಯ ಶಾಸನದಿಂದ ತಿಳಿದುಬರುತ್ತದೆ.

ಕೆರೆಗಳ ನಿರ್ಮಾಣವು ದೇವಾಲಯದ ನಿರ್ಮಾಣದೊಂದಿಗೆ ಕಂಡುಬರುತ್ತವೆ. ಈ ದೇವಾಲಯಗಳಿಗೆ ಭೂದಾನಗಳನ್ನು ನೀಡಿರುವುದು ಶಾಸನಗಳಲ್ಲಿ ಉಕ್ತವಾಗಿದೆ. ಎರೆಯಂಗನ ಕ್ರಿ.ಶ. ೧೦೯೩ರ ದೇವಿಹಳ್ಳಿಯ ಶಾಸನ[೮೧] ಮಹಾಪ್ರಧಾನ ಕುಂದಣಜೀಯ ಕನ್ನೆಗೆರೆಯನ್ನು ಮತ್ತು ಶಿವದೇವಾಲಯವನ್ನು ನಿರ್ಮಿಸಿ, ದೇವರ ನಿತ್ಯ ನೈವೇದ್ಯಕ್ಕೆ ಹೊಸ ಕೆರೆಯ ಕೆಳಗಿನ ಗದ್ದೆ ಬೆದ್ದಲು ಬಿಟ್ಟಿರುವಂತಿದೆ. ಬೇಲೂರು ತಾಲೂಕಿನ ರನ್ನಘಟ್ಟದ ಕ್ರಿ.ಶ. ೧೦೯೬ರ ಶಾಸನದಲ್ಲಿ[೮೨] ಭಾಸಾಗಾವುಂಡ ರಣಕಿಯಘಟ್ಟ ಎಂಬ ಊರನ್ನು ಮಾಡಿಸಿ, ಬಾಚೇಶ್ವರ ದೇವಾಲಯ ಮತ್ತು ಬಳ್ಳಿಕೆರೆಯನ್ನು ಕಟ್ಟಿಸಿದನು. ದೇವಾಲಯಕ್ಕೆ ಬಳ್ಳಿಕೆರೆಯ ಕೆಳಗೆ ಭತ್ತದ ಭೂಮಿಯನ್ನು ಬಿಟ್ಟಿದುದರ ಉಲ್ಲೇಖವಿದೆ. ಚನ್ನರಾಯಪಟ್ಟಣ ತಾಲೂಕಿನ ಕೆಂಬಾಳು ಗ್ರಾಮದ ಕ್ರಿ.ಶ. ೧೦೯೮ರ ವಿನಯಾದಿತ್ಯನ ಶಾಸನವು[೮೩] ಕೆಂಬಾಳುವಿನ ಕಲ್ಲಗೌಡ(ಗಾವುಂಡ) ದೇವಾಲಯ ಮತ್ತು ಕೆರೆ ಕಟ್ಟಿಸಿ, ಭೂದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ. ಅರಸೀಕೆರೆ ತಾಲೂಕಿನ ಕ್ರಿ.ಶ. ೧೧೦೦ರ ಕಾಟಿಕೆರೆಯ ಶಾಸನದಲ್ಲಿ[೮೪] ಎರೆಯಂಗ ಮಹಾರಾಜನ ಪಟ್ಟದರಸಿ ಮಹಾದೇವಿಯ ಅಧಿಕಾರಿಗಳಾದ ಕಾಡುವಿಟ್ಟಿಯು ಸೋಜಿದೆಯಬ್ಬೆಯು ರಾಮಾನ್ಮತದಿಂದ ನಳಂ ಸೇತುವಂ ಕಟ್ಟುವಂತೆ, ರಾಣಿಯ ಆಜ್ಞೆಯಂತೆ ಕೆರೆಯನ್ನು ಕಟ್ಟಿಸಿದರು ಎಂದಿದೆ. ನಳ ಸುಗ್ರೀವನ ರಾಜ್ಯದಲ್ಲಿ ಸೇತುವೆ ನಿರ್ಮಾಣದ ತಂತ್ರಜ್ಞಾನ ನಾಗಿದ್ದ. ಅವನಂತೆ ಸೋಜಿದೆಯಬ್ಬೆಯು ಕೆರೆ ನಿರ್ಮಾಣದಲ್ಲಿ ಪರಿಣತರಾಗಿರುವಂತೆ ತೋರುತ್ತದೆ. ಇಲ್ಲಿ ಸ್ತ್ರೀಯ ಹೆಸರು ಉಲ್ಲೇಖಿತಗೊಂಡಿರುವುದು ವಿಶೇಷವೆನಿಸುತ್ತದೆ.

ಹೊಯ್ಸಳ ಅರಸರು, ರಾಣಿಯರು, ಸಾಮಂತರು ಮತ್ತು ಗಾವುಂಡರು ತಮ್ಮ ಆಧಿಪತ್ಯಕ್ಕೆ ಒಳಪಟ್ಟ ಪ್ರದೇಶಗಳ ಸಂಪತ್ತಿನ ಅಭಿವೃದ್ಧಿಯ ಉದ್ದೇಶದಿಂದ ಕೆರೆ ನೀರಾವರಿ ವ್ಯವಸ್ಥೆಗೆ ಪ್ರಾಮುಖ್ಯತೆ ನೀಡಿರುವುದನ್ನು ಗಮನಿಸಬಹುದು. ಕ್ರಿ.ಶ. ೧೧೦೧ರ ಮನಕತ್ತೂರು ಶಾಸನದಲ್ಲಿ[೮೫] ಮಹಾಪ್ರಭು ಚಾಮುಗಾವುಂಡನು ಒಂದು ಹೊಸ ಗ್ರಾಮ ನಿರ್ಮಿಸಿ, ಅದಳಗಟ್ಟವೆಂಬ ಕೆರೆಯನ್ನು ಕಟ್ಟಿಸಿ. ದೇವರ ಪ್ರತಿಷ್ಠೆ ಮಾಡಿಸಿದನು. ವಿಷ್ಣುವರ್ಧನನ ಕ್ರಿ.ಶ. ೧೧೧೭ರ ಬೇಲೂರು ಶಾಸನದಲ್ಲಿ[೮೬] ರಾಜ ದೊಡ್ಡಕೆರೆ ನಿರ್ಮಿಸಿ ಅದಕ್ಕೆ 'ವಾಸುತೀರ್ಥ' ಎಂದು ಹೆಸರಿಟ್ಟ ಮಾಹಿತಿ ಇದೆ. ಇಲ್ಲಿ ದೇವಾಲಯದ ಪೂಜೆಗೆ ಮತ್ತು ಭಕ್ತಾಧಿಗಳ ಬಳಕೆಗೆ ಕೆರೆ ನಿರ್ಮಿಸಿರುವಂತೆ ಕಂಡುಬರುತ್ತದೆ. ಕ್ರಿ.ಶ. ೧೧೧೪ಕ್ಕೆ

ಸೇರಿದ ಶ್ರವಣಬೆಳಗೊಳದ ಶಾಸನದಲ್ಲಿ[೮೭] ವಿಷ್ಣುವರ್ಧನನ ದಂಡನಾಯಕ ಗಂಗಪಯ್ಯ ಗಂಗಸಮುದ್ರ ಎಂಬ ಕೆರೆಯನ್ನು ಕಟ್ಟಿಸಿದ ವಿಚಾರವಿದೆ. ಕ್ರಿ.ಶ. ೧೧೨೩ರ ಶ್ರವಣಬೆಳಗೊಳದ ಚಿಕ್ಕಬೆಟ್ಟದಲ್ಲಿನ ಮತ್ತೊಂದು ಶಾಸನದಲ್ಲಿ[೮೮] ಹೊಯ್ಸಳ ವಿಷ್ಣುವರ್ಧನನ ರಾಣಿ ಶಾಂತಲೆಯು ಎಳಸನಕಟ್ಟೆ ಎಂಬುದನ್ನು ಕೆರೆಯಾಗಿ ಕಟ್ಟಿಸಿ, ಸವತಿಗಂಧರ್ವಣ ಬಸದಿಗೆ ಸುರಗಿಗೆ ಬಿಟ್ಟ ವಿಚಾರವನ್ನು ತಿಳಿಸುತ್ತದೆ. ಅದೇ ಶಾಸನದಲ್ಲಿ ಶಾಂತಲೆಯು ಗಂಗರಾಜನು ಕಟ್ಟಿಸಿದ್ದ ಗಂಗಸಮುದ್ರದ ಕೆಳಗಿನ ಗದ್ದೆಗಳನ್ನು ದತ್ತಿ ಬಿಟ್ಟ ವಿಷಯವನ್ನು ಉಲ್ಲೇಖಿಸುತ್ತದೆ. ಕೆರೆ ಕಟ್ಟಿಸುವುದರಲ್ಲಿ ಹೊಯ್ಸಳ ರಾಣಿಯರು ಆಸಕ್ತಿ ತೋರಿದ್ದಾರೆ ಎಂಬುದನ್ನು ಶಾಸನಗಳಿಂದ ಅರಿಯಬಹುದು. ಹಾಗೆಯೇ ದೇವಾಲಯಗಳ ನಿರ್ಮಾಣದೊಂದಿಗೆ ಕೆರೆ ಕೆಳಗಿನ ಭೂಮಿಯನ್ನು ದತ್ತಿ ಬಿಟ್ಟಿರುವ ಉಲ್ಲೇಖಗಳು ಸಾಮಾನ್ಯವಾಗಿ ಕಂಡುಬಂದಿವೆ. ಅರಸೀಕೆರೆಯ ಕಣಕಟ್ಟೆಯ ಕ್ರಿ.ಶ. ೧೧೭೯ರ ಶಾಸನದಲ್ಲಿ[೮೯] ಸಿಂಗೇಶ್ವರ ದೇವರನ್ನು ಪ್ರತಿಷ್ಠಾಪಿಸಿ, ದೇವರ ಅಂಗರಂಗ ನಿತ್ಯ ನೈವೇದ್ಯಕ್ಕೆ ಹಿರಿಯ ಕೆರೆಯ ತೂಬಿನ ಮೊದಲೇರಿಯ ಭೂಮಿಯನ್ನು ಬಿಟ್ಟಿರುವುದು ಉಲ್ಲೇಖಿತಗೊಂಡಿದೆ. ಅದೇ ತಾಲೂಕಿನ ಕ್ರಿ.ಶ. ೧೧೩೪ರ ಶಾನೆಗೆರೆ ಶಾಸನದಲ್ಲಿ[೯೦] ಗ್ರಾಮದ ಮೂಲಸ್ಥಾನ ದೇವರಿಗೆ ಕೆರೆಯ ಕೆಳಗಿನ ಭತ್ತದ ಗದ್ದೆಯನ್ನು ನೀಡಿರುವುದರ ದಾಖಲೆ ಇದೆ. ಹಾಗೆಯೇ ಎಲೆ ತೋಟವನ್ನು ದೇವರಿಗೆ ಬಿಟ್ಟಿದುದನ್ನು ತಿಳಿಸಿದೆ. ಬೇಲೂರು ತಾಲೂಕಿನ ಕ್ರಿ.ಶ. ೧೧೩೬ರ ಕಟ್ಟೆಸೋಮನಹಳ್ಳಿ ಶಾಸನ[೯೧] ಶ್ರೀನಾಗೇಶ್ವರ ದೇವರಿಗೆ ಅಗರ ಕೆರೆಯ ಕೆಳಗಿನ ಹೂತೋಟ ಮತ್ತು ೩ ಸಲಗೆ ಗದ್ದೆ (ತರಿ) ಭೂಮಿಯನ್ನು ದಾನವಾಗಿ ನೀಡಿದ ಪ್ರಸ್ತಾಪವಿದೆ. ಶಾಸನಗಳಲ್ಲಿರುವ ಎಲೆ ಮತ್ತು ಹೂತೋಟಗಳ ಉಲ್ಲೇಖಗಳು ಆಯಕಟ್ಟು ಪ್ರದೇಶದಲ್ಲಿ ಬೆಳೆದ ಬೆಳೆಗಳಿರಬೇಕು. ಹಳೇಬೀಡಿನ ಕ್ರಿ.ಶ. ೧೧೩೬ರ ಶಾಸನವು[೯೨] ದೋರಸಮುದ್ರದ ಕೆರೆಯನ್ನು ಹಿರಿಯಕೆರೆ ಎಂದು ದಾಖಲಿಸಿದೆ. ಇದು ಕೆರೆಯ ಗಾತ್ರವನ್ನು ಸೂಚಿಸುತ್ತದೆ. ಶ್ರವಣಬೆಳಗೊಳದ ಬೊಮ್ಮೇನಹಳ್ಳಿ ಗ್ರಾಮದ ಕ್ರಿ.ಶ. ೧೧೩೮ರ ಶಾಸನವು[೯೩] ಕಿರಿಯಬಸವಾಚಾರಿ ಕೆರೆಯನ್ನು ಕಟ್ಟಿ, ದೇವಾಲಯವನ್ನು ನಿರ್ಮಿಸಿರುವುದನ್ನು ಹೇಳುತ್ತದೆ. ಕ್ರಿ.ಶ. ೧೧೫೯ರ ದೊಡ್ಡಕುಂಚದ ಶಾಸನದಲ್ಲಿ[೯೪] ಚಿಕ್ಕಗಾವುಂಡ ಮತ್ತು ಇತರರು ೪ ಸಲಿಗೆ ತರಿ ಭೂಮಿ ಮತ್ತು ೧೦ ಕೊಳಗ ಖುಷ್ಕಿ ಭೂಮಿಯನ್ನು ದತ್ತಿ ಬಿಡಲಾಗಿದೆ. ಇಲ್ಲಿ ಬೆಳೆಗಳ ಉಲ್ಲೇಖ ಸಿಗದಿದ್ದರು ನೀರಾವರಿ ಇತ್ತು ಎಂಬುದನ್ನು ದೃಢಪಡಿಸುತ್ತದೆ.

ಹಳೇಬೀಡಿನ ಕೆರೆ ಏರಿಯ ಮೇಲಿರುವ ಕ್ರಿ.ಶ. ೧೧೪೦ರ ಶಾಸನವು[೯೫] ಶಿವಾಲಯಕ್ಕಾಗಿ ಒರಿಯ ಕೆರೆಯ ಕೆಳಗಿನ ಭೂಮಿಯನ್ನು ದಾನ ಮಾಡಿದನೆಂದಿದೆ. ಕ್ರಿ.ಶ. ೧೨ನೆಯ ಶತಮಾನದ ನಾಗರನವಿಲೆ ಶಾಸನವು[೯೬] ಮಹಾದೇವ ಪಂಡಿತ, ರುದ್ರಪಂಡಿತರು ದೇವಾಲಯ ಮತ್ತು ಕೆರೆ ಕಟ್ಟಿಸಿದ್ದನ್ನು ತಿಳಿಸುತ್ತದೆ. ಶ್ರವಣಬೆಳಗೊಳದ ಕ್ರಿ.ಶ. ೧೨ನೆಯ ಶತಮಾನದ ಶಾಸನವು[೯೭] ಗಂಗರಾಜನ ಅತ್ತಿಗೆ ಜಕ್ಕಬ್ಬೆಯು ಜಕ್ಕಿ ಕೆರೆಯನ್ನು ಕಟ್ಟಿಸಿ ನಯಣದ ದೇವರನ್ನು ಮಾಡಿಸಿದ ವಿಷಯವನ್ನು

ಹೇಳುತ್ತದೆ. ಇಂದು ಜಕ್ಕಿಕಟ್ಟೆ ಎಂದು ಕರೆಯುತ್ತಾರೆ. ಕೆರೆಗೆ ನಿರ್ಮಾತೃವಿನ ಹೆಸರನ್ನಿಡುವ ಮೂಲಕ ಅವರನ್ನು ಅಮರರನ್ನಾಗಿಸುವ ಪ್ರಯತ್ನ ಮಾಡಲಾಗಿದೆ. ಕ್ರಿ.ಶ. ೧೨ನೆಯ ಶತಮಾನದ ಶ್ರವಣಬೆಳಗೊಳದ ಜಿಗಣಿಕಟ್ಟೆಯ ಬಳಿ ಇರುವ ಶಾಸನದಲ್ಲಿ[೯೮] ನಾಗಸಮುದ್ರ ಕೆರೆಯನ್ನು ನಾಗದೇವ ಹೆಗ್ಗಡೆ ಎಂಬುವನು ಕಟ್ಟಿದ ವಿಚಾರವಿದೆ. ಈಗಿನ ಜಿಗಣಿಕಟ್ಟೆಯೇ ಅಂದಿನ ನಾಗಸಮುದ್ರವಾಗಿರಬೇಕು. ಸುಂಡಳ್ಳಿಯ ಕ್ರಿ.ಶ. ೧೨ ಮತ್ತು ೧೩ನೆಯ ಶತಮಾನದ ಶಾಸನದಲ್ಲಿ[೯೯] ನಾಗದೇವ ಹೆಗ್ಗಡೆ, ಕೆಂಚೇಗೌಡ ಮತ್ತು ಮಾರೇಗೌಡ ಮುಂತಾದವರು ಕೆರೆ ಕಟ್ಟಿಸಿದರೆಂಬ ಉಲ್ಲೇಖವಿದೆ. ಹೆಬ್ಬಾಳುವಿನ ಕ್ರಿ.ಶ. ೧೨ ಮತ್ತು ೧೩ನೆಯ ಶತಮಾನದ ಶಾಸನವೊಂದರಲ್ಲಿ[೧೦೦] ಜಿವನೇಯ ಹೆಗ್ಗಡೆಯ ಸಿಂಗೇಶ್ವರ ದೇವರನ್ನು ಪ್ರತಿಷ್ಠಾಪಿಸಿ ಹೊಸಕೆರೆಯನ್ನು ನಿರ್ಮಿಸಿದನು ಎಂದಿದೆ.

ಹೊಯ್ಸಳ ವಿನಯಾದಿತ್ಯ ಎರೆಯಂಗ ಮತ್ತು ವಿಷ್ಣುವರ್ಧನನ ಕಾಲದ ಶಾಸನಗಳನ್ನು ನೋಡಿದಾಗ ಹಲವು ಶಾಸನಗಳಲ್ಲಿ ಕೆರೆ ಮತ್ತು ದೇವಸ್ಥಾನಗಳನ್ನು ನಿರ್ಮಿಸಿ ಕೆರೆ ಕೆಳಗಿನ ಜಮೀನನ್ನು ದೇವಾಲಯಗಳಿಗೆ ದತ್ತಿ ಬಿಟ್ಟಿರುವ ವಿಷಯಗಳು ಕಂಡುಬಂದಿವೆ. ನಂತರ ಬಂದ ರಾಜರು ಕೂಡ ಕೆರೆ ನೀರಾವರಿಯ ಮಹತ್ವವನ್ನು ಉದ್ಧರಿಸಿದ್ದಾರೆ.

ಅರಸೀಕೆರೆ ತಾಲೂಕಿನ ಒಂದನೆಯ ನರಸಿಂಹನ ಕ್ರಿ.ಶ. ೧೧೫೮ರ ಕೋಡಿಹಳ್ಳಿಯ ಶಾಸನವು[೧೦೧] ಬೋಕಗಾವುಡನ ಬಾವ ಚಿಕ್ಕಗಾವುಡ, ಚಿಕ್ಕ ಕೆರೆಯ ನೀರನ್ನು ಬಳಸಿಕೊಂಡು ಒಂದು ಹೂವಿನ ತೋಟವನ್ನು ಬೆಳೆಸಿದನು ಎಂದಿದೆ. ಸೂಳೆಕೆರೆಯ ಕ್ರಿ.ಶ. ೧೧೪೯ರ ಶಾಸನದಲ್ಲಿ[೧೦೨] ಗ್ರಾಮದ ಮೂಲಸ್ಥಾನ ದೇವರಿಗೆ ಹಿರಿಯ ಕೆರೆಯ ಕೆಳಗಿನ ಗದ್ದೆ ಬೆದ್ದಲು ೧೦೦ ಅಡಿಕೆ ಮರಗಳನ್ನು ಬಿಟ್ಟಿರುವ ಉಲ್ಲೇಖವಿದೆ. ಈ ಶಾಸನಗಳು, ಕೆರೆಯ ನೀರು ಕೃಷಿ ಮೂಲಗಳಿಗೆ ಬಳಕೆಯಾಗುತ್ತಿರುವುದನ್ನು ಸ್ಪಷ್ಟಪಡಿಸುತ್ತವೆ.

ಹೊಸದಾಗಿ ಕೆರೆಯನ್ನು ನಿರ್ಮಿಸಲು ಹಣವನ್ನು ವಿನಿಯೋಗಿಸಿರುವುದು ಉಂಟು. ಕ್ರಿ.ಶ. ೧೧೬೦ರ ಹುಲಿಕೆರೆಯ ಶಾಸನದಲ್ಲಿ[೧೦೩] ಧನವನ್ನು ಕೊಟ್ಟು ಕಂನ್ನೆಗೆರೆಯನ್ನು ಕಟ್ಟಿಸಿದ ಪ್ರಸ್ತಾಪವಿದೆ. ಬೇಲೂರು ತಾಲೂಕಿನ ಕ್ಯಾತಲಾಪುರದ ಕ್ರಿ.ಶ. ೧೧೬೨ರ ಶಾಸನದಲ್ಲಿ[೧೦೪] ರಾಜನೋರ್ವ ಕೆರೆಯನ್ನು ಹಾಗೂ ಅದರ ಅಚ್ಚುಕಟ್ಟನ್ನು ದೇವಾಲಯದ ಕಾರ್ಯಗಳಿಗೆ ದಾನ ನೀಡಿರುವುದನ್ನು ಸೂಚಿಸುತ್ತದೆ. ಅದೇ ತಾಲೂಕಿನ ಕ್ರಿ.ಶ. ೧೧೬೪ರ ಶಾಸನವೊಂದು[೧೦೫] ಬಿಟ್ಟಿದೇವ ಮತ್ತು ಮಾದಿಕಬ್ಬೆಯರು ಬೇಲೂರಿನಲ್ಲಿ ಹೊಯ್ಸಳ ಸಮುದ್ರವನ್ನು ಕಟ್ಟಿಸಿದರು ಹಾಗು ಹಲವಾರು ಕೆರೆಗಳನ್ನು ಜೀರ್ಣೋದ್ಧಾರ ಮಾಡಿಸಿದ್ದಾಗಿ ತಿಳಿಸುತ್ತದೆ. ಬಾಗೂರು ಹೋಬಳಿಯ ಬಿದರೆ ಗ್ರಾಮದ ಕ್ರಿ.ಶ. ೧೧೬೫ರ ಶಾಸನದಲ್ಲಿ[೧೦೬] ಒಂದನೆಯ ನರಸಿಂಹನ ಅಧಿಕಾರಿಯಾಗಿದ್ದ ಪಸಾಯಿತ ಬೆಳಪ್ಪನಾಯಕ ಎಂಬುವವನು ಕಗ್ಗನ ಬಿದರೆಯಲ್ಲಿ ಬಾಣಗೆರೆಯನ್ನು ಕಟ್ಟಿಸಿದ ವಿಚಾರವಿದೆ. ಅದೇ

ಶಾಸನದಲ್ಲಿ ಕಲಿದೇವನ ದೇವಾಲಯವನ್ನು ಕಟ್ಟಿಸಿ, ಮಹಾದೇವರಾಸಿ ಪಂಡಿತರ ಕಾಲನ್ನು ತೊಳೆದು ದೇವರ ಅಂಗಭೋಗಕ್ಕೆ ನೈವೇದ್ಯಕ್ಕೆಂದು ಭೂದತ್ತಿ ಬಿಡುತ್ತಾನೆ. ಕಲಿದೇವರ ದೇವಾಲಯದ ಹಿಂದೆ ಬಾಣಗೆರೆ ಮತ್ತು ನೆಲ್ಲಿಗುಂಡಿಯನ್ನು ಕಟ್ಟಿಸಿ ದೇವರಿಗೆ ಸಮರ್ಪಿಸುತ್ತಾನೆ. ನೆಲ್ಲಿಗುಂಡಿಯೂ ಒಂದು ಸಣ್ಣ ಕೆರೆ ಅಥವಾ ಕಟ್ಟೆಯಾಗಿರಬಹುದು.

ಎರಡನೆಯ ಬಲ್ಲಾಳನ ಶಾಸನಗಳಲ್ಲಿ ಗ್ರಾಮ, ಅಗ್ರಹಾರ ಮತ್ತು ದೇವಾಲಯ ನಿರ್ಮಾಣದೊಂದಿಗೆ ಕೆರೆ ನಿರ್ಮಾಣವು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಸಾರ್ವಜನಿಕರಿಗೆ ಸಕಲ ಜೀವಜಂತುಗಳಿಗೆ ಉಪಯೋಗವಾಗಲೆಂದು ಕೆರೆ ಕಟ್ಟಿಸುತ್ತಿದ್ದರು. ಕ್ರಿ.ಶ. ೧೧೭೭ರ ಯಡವನಹಳ್ಳಿಯ ಶಾಸನದಲ್ಲಿ[೧೦೭] ಕೇತಗಾವುಡ ಸಮಸ್ತ ಜನಕಾಶ್ರಯವಾಗಿ ಲಿಂಗ ಪ್ರತಿಷ್ಠೆ ಮಾಡಿಸಿ, ಕೆರೆ ಕಟ್ಟಿಸಿ, ಅದಕ್ಕೆ ಮದುವೆಯ ಹಂದರ ಹಣವನ್ನು ಕೊಟ್ಟಿರುವ ಉಲ್ಲೇಖವಿದೆ. ಎರಡನೆ ವೀರಬಲ್ಲಾಳನ ಕ್ರಿ.ಶ. ೧೧೭೭ರ ಜೆ.ಸಿ. ಪುರದ ಶಾಸನದಲ್ಲಿ[೧೦೮] ಹುಲುಕೂರ ಮಹಾಪ್ರಭುಗಳು ಕೆರೆಗಳನ್ನು ಕಟ್ಟಿಸುವುದರಲ್ಲಿ ಪ್ರಸಿದ್ಧರೆಂದು ತಿಳಿಯುತ್ತದೆ. ಅದಕ್ಕೆ ಸಾಕ್ಷಿಯಾಗಿ ಆ ಗ್ರಾಮದಲ್ಲಿ ಹಿರಿಯಕೆರೆ, ಮತ್ತಿಯಕೆರೆ, ಬಬ್ಬಿಯಕೆರೆ, ಅಣೆಯಕೆರೆ, ದೇವರ ಮುಂದಣಕೆರೆ, ಆನೆಯಕೆರೆ ಎಂಬ ಆರು ಕೆರೆಗಳನ್ನು ಶಾಸನ ಉಲ್ಲೇಖಿಸಿದೆ. ಚನ್ನರಾಯಪಟ್ಟಣ ತಾಲೂಕಿನ ಬಳಗಟ್ಟೆಯ ಕ್ರಿ.ಶ. ೧೧೭೮ರ ಶಾಸನದಲ್ಲಿ[೧೦೯] ದೇವಾಲಯದೊಂದಿಗೆ ಕೆರೆ ಕಟ್ಟಿಸಿದ ಮಾಹಿತಿ ಇದೆ. ಬೇಲೂರು ತಾಲೂಕಿನ ಕೊಡಲೂರಿನ ಕ್ರಿ.ಶ. ೧೧೭೮ರ ಶಾಸನದಲ್ಲಿ[೧೧೦] ಮಹಾಪ್ರಧಾನ ಪೆರುಮಾಳದೇವನು ಸಂದಿಯ ಉಪಗ್ರಾಮವಾದ ಕೂಡಲೂರಿನಲ್ಲಿ ದೇವಾಲಯ ಸ್ಥಾಪಿಸಿ, ಆ ಪರಿಸರದ ಕಾಡನ್ನು ಕಡಿದು ಭೂಮಿಯನ್ನು ಸಾಗುವಳಿಗೆ ಯೋಗ್ಯವಾಗಿಸಿ ದಾನ ನೀಡುವ ಮೂಲಕ ಕೃಷಿ ಚಟುವಟಿಕೆಗಳ ವಿಸ್ತರಣೆಗೆ ನೆರವಾಗುತ್ತಾನೆ. ಇದೇ ಶಾಸನದಲ್ಲಿ ಐಹೊಳೆಯ ಬಳಿ ವ್ಯಾಪಾರಿ ಮಾರಿಶೆಟ್ಟಿ ವ್ಯಾಪಾರಕ್ಕಾಗಿ ದಕ್ಷಿಣಕ್ಕೆ ಬಂದು ರಾಜನ ಕೃಪಾಶ್ರಯದಲ್ಲಿ ಮಹಾಪ್ರಭು ಹುದ್ದೆ ಪಡೆದು ಅವನ ಇಬ್ಬರು ಪುತ್ರರಲ್ಲಿ ಬಸವಗಾವುಂಡನು 'ತ್ರೈಲೋಕ್ಯ ಸಮುದ್ರ' ಎಂಬ ಕೆರೆಯನ್ನು ಕಟ್ಟಿಸಿದನು. ಹೀಗೆ ಪ್ರತಿಷ್ಠಿತ ವ್ಯಕ್ತಿಗಳು ಜನಪರ ಕೆರೆ ಕಾಮಗಾರಿಗಳಲ್ಲಿ ತೊಡಗಿರುವುದು ಕಂಡುಬರುತ್ತದೆ. ಚನ್ನರಾಯಪಟ್ಟಣದ ಕ್ರಿ.ಶ. ೧೧೮೦ರ ಶಾಸನದಲ್ಲಿ[೧೧೧] ಮಾರಿಗೌಡ ಮತ್ತು ಇತರರಿಗೆ ಕೆರೆ ನಿರ್ವಹಣೆಗಾಗಿ ೧ ಖಂಡುಗ ೫ ಕೊಳಗ ಭೂಮಿಯನ್ನು ದಾನ ನೀಡಿದ ವಿವರವಿದೆ. ಇಲ್ಲಿನ ಕ್ರಿ.ಶ. ೧೧೮೧ರ ಶಾಸನದಲ್ಲಿ[೧೧೨] ಮಾಚಿರಾಜನ ಮಡದಿ ಶಾಂತಲದೇವಿ(ಸಾತವ್ವೆ) ಕೊಳತೂರಿನಲ್ಲಿ ಶಾಂತಿಸಮುದ್ರವೆಂಬ ಕೆರೆ ನಿರ್ಮಿಸಿದಳು ಎಂದಿದೆ. ಹೊಯ್ಸಳರ ಕಾಲದಲ್ಲಿ ಕಾಡುಗಳನ್ನು ಕಡಿದು ಜನವಸತಿಗೆ ಅನುಕೂಲ ಮಾಡಿಕೊಟ್ಟಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೧೮೨ರ ಬೇಲೂರು ತಾಲೂಕಿನ ಒರೇಹಳ್ಳಿ ಶಾಸನದಲ್ಲಿ[೧೧೩] ಮಹಾದಂಡನಾಯಕ ಬೊಪ್ಪದೇವ ಕಂಜಲಿಯ ಗ್ರಾಮಕ್ಕೆ ಎಲ್ಲ ಬಗೆಯ ತೆರಿಗೆಗಳಿಂದ ವಿನಾಯಿತಿ ನೀಡಿ ತಳವಾರ ಬೂರ್ತಿಯನಾಯಕ ಮತ್ತು

ಅವನ ಮಗ ಮಾರ ಕಾಡನ್ನು ಕಡಿದು, ಗ್ರಾಮ ಸ್ಥಾಪಿಸಿ, ಕೆರೆಗಳನ್ನು ನಿರ್ಮಿಸಬೇಕೆಂದು ಮನವಿ ಸಲ್ಲಿಸಿದಾಗ, ಆದಿಗಾವುಂಡ ಮತ್ತು ಚಿಕ್ಕಗಾವುಂಡ ಹಾಗೂ ಅವನ ಸಹೋದರ ಕಾಳಗಾವುಂಡರು ಗ್ರಾಮ ಸ್ಥಾಪಿಸಿ, ದೇವಾಲಯ ಕಟ್ಟಿಸಿ, ಜಕ್ಕನಕೆರೆ ಹಾಗೂ ಕಂಬಣನ ಕೆರೆ ಎಂಬ ೨ ಕೆರೆಗಳನ್ನು ಕಟ್ಟಿಸಿದ ಉಲ್ಲೇಖವಿದೆ. ಒಬ್ಬ ಗಾವುಂಡ ತನ್ನ ಸಹೋದರರ ಸಹಾಯದಿಂದ ಕಾಡನ್ನು ಕಡಿದು ಒಂದು ಹಳ್ಳಿಯನ್ನು ನಿರ್ಮಿಸಿ, ಅಲ್ಲಿ ೨ ಕೆರೆಗಳನ್ನು ಕಟ್ಟಿಸಿದ. ಹಾಗೆಯೇ ವೀರದಂಡ ನಾಯಕ ಎನ್ನುವ ಮಂತ್ರಿಯೊಬ್ಬನು ವೀರಬಲ್ಲಾಳಪುರ ಎನ್ನುವ ನೂತನ ಹಳ್ಳಿಗಳನ್ನು ನಿರ್ಮಿಸಿ ೪ ಕೆರೆಗಳನ್ನು ನಿರ್ಮಿಸಿದನು. ವೀರದೇವನಹಳ್ಳಿ ಕ್ರಿ.ಶ. ೧೧೮೬ರ ಶಾಸನದಲ್ಲಿ[೧೧೪] ಮಾರಯ್ಯ ದಂಡನಾಯಕ ಕಾಡನ್ನು ಕಡಿದು, ನಾಡನ್ನು ವಿಸ್ತರಿಸಿ ವೀರಬಲ್ಲಳಾಪುರ ಎಂಬ ಗ್ರಾಮವನ್ನು ನಿರ್ಮಿಸಿದ ಅಲ್ಲಿ ರುದ್ರಸಮುದ್ರ, ಗಂಗಸಮುದ್ರ, ಅಚ್ಚುತಸಮುದ್ರ ಮತ್ತು ವೀರಸಮುದ್ರವೆಂಬ ನಾಲ್ಕು ಕೆರೆಗಳನ್ನು ಕಟ್ಟಿಸಿದ. ಆ ಕೆರೆಗಳನ್ನು ತೋಡಿಸಿದವರಿಗೆ ೧೨ ವರ್ಷಗಳ ಕಾಲ ತೆರಿಗೆಗಳಿಂದ ವಿನಾಯಿತಿ ನೀಡಿ ನಂತರದ ವರ್ಷಗಳಿಗೆ ೧೦ ಸಲಗೆ ನಿಗದಿ ಮಾಡಿದ್ದನ್ನು ದಾಖಲಿಸಿದೆ. ಹೊನ್ನಜೀಯ ಹೊಸಕೆರೆಯನ್ನು ಕಟ್ಟಿಸಿ, ದೇವಾಲಯವನ್ನು ಮಾಡಿಸಿರುವಂತೆ ಕಬ್ಬಳಿಯ ಕ್ರಿ.ಶ.೧೧೮೬ರ ಶಾಸನದಲ್ಲಿದೆ.[೧೧೫]

ಅರಸರು ಮತ್ತು ಅಧಿಕಾರಿಗಳ ನಂತರ ವ್ಯಾಪಾರಿಗಳು ಕೆರೆ ನಿರ್ಮಾಣಕ್ಕೆ ಕೊಟ್ಟ ಕೊಡುಗೆ ಅಪಾರವಾಗಿದೆ. ಕ್ರಿ.ಶ. ೧೧೮೭ರ ಬಾಣಾವರದ ಶಾಸನವು[೧೧೬] ಚಟ್ಟಪಶೆಟ್ಟಿಯು ಇಲ್ಲಿ ಅನೇಕ ಕೆರೆಗಳನ್ನು ಹೊಸದಾಗಿ ಕಟ್ಟಿಸಿದ ಉಲ್ಲೇಖವಿದೆ. ಅವುಗಳಲ್ಲಿ ಮುತ್ತರ ಹೊಸವೂರ ಕಡೆಯ ಎರಡು ಕೆರೆಗಳನ್ನು ವಿಸ್ತರಿಸಿ, ದೋರಸಮುದ್ರದ ರುದ್ರದೆಸೆಯಲ್ಲಿ ಒಂದು ಕೆರೆಯನ್ನು ಕಟ್ಟಿಸಿದ್ದಾನೆ. ಹಾಗೂ ಬಾಣಾವರದಲ್ಲಿ ಅತ್ಯಂತ ಕೃಶವಾಗಿದ್ದ ಕೆರೆಗಳನ್ನು ದೊಡ್ಡದಾಗಿ ಮಾಡಿಸಿ, ತೂಬುಗಳನ್ನಿಡಿಸಿದ್ದಾನೆ. ಅಲ್ಲದೆ ಮಾವಿನ ಕೆರೆ ಎಂಬ ಮತ್ತೊಂದು ಕೆರೆಯನ್ನು ಕಟ್ಟಿಸಿದನೆಂದು ಶಾಸನ ತಿಳಿಸುತ್ತದೆ. ಈ ಕೆರೆಗಳಿಂದ ಸುತ್ತುವರಿದಿದ್ದ ಬಾಣಾವರ ಇಂದು ಪ್ರಸಿದ್ಧ ಪಟ್ಟಣವಾಗಿ ಬೆಳೆದಿದೆ.

ಮಾರೇನಹಳ್ಳಿಯ ಕ್ರಿ.ಶ. ೧೧೮೮ರ ಶಾಸನದಲ್ಲಿ[೧೧೭] ಮಾರವ್ವ ಎಂಬುವಳು ಕಂದಲಿಯ ಮಹಾಜನರಿಗೆ ೮ ಹೊನ್ನು ಸಿದ್ದಾಯ ನೀಡಿದ್ದಲ್ಲದೆ, ಕೆರೆ, ದೇವಾಲಯ ಮತ್ತು ಕಾವಲುಗಾರನ ನಿರ್ವಹಣೆಗಾಗಿ ೫೬೨ ಗದ್ಯಾಣ, ೩ ಪಣ ನೀಡಿದ್ದನ್ನು ತಿಳಿಸುತ್ತದೆ. ಕಂದಲಿ ಅಗ್ರಹಾರಕ್ಕೆ ಇಷ್ಟು ದೊಡ್ಡ ಮೊತ್ತದ ಹಣ ನೀಡಿರುವುದು ಗಮನಾರ್ಹ. ಅರಕಲಗೂಡು ತಾಲೂಕಿನ ಕ್ರಿ.ಶ. ೧೧೮೯ರ ಶಾಸನವು[೧೧೮] ಭೋಗೇಶ್ವರ ದೇವರಿಗೆ ಕೆರೆ ಕೆಳಗಣ ಗದ್ದೆ, ಒಳಗೆರೆಯ ಬೆದ್ದಲನ್ನು ದಾನ ಬಿಟ್ಟಿರುವುದನ್ನು ಉಲ್ಲೇಖಿಸಿದೆ. ಅಲ್ಲದೆ ಕೆರೆಗಳ ಸರಣಿ ವ್ಯವಸ್ಥೆಯನ್ನು ಪರಿಚಯಿಸುತ್ತದೆ. ವ್ಯಾಪಾರಿಗಳು

ವ್ಯವಹಾರದಲ್ಲಿ ಮಾತ್ರ ತೊಡಗಿಸಿಕೊಳ್ಳದೆ, ಸಾರ್ವಜನಿಕ ಬಳಕೆಗಾಗಿ ಕೆರೆ ಕಟ್ಟಿಸುವ ಕಾರ್ಯವನ್ನು ಮಾಡಿದ್ದಾರೆ. ಅರಸೀಕೆರೆ ತಾಲೂಕಿನ ಕ್ರಿ.ಶ. ೧೧೮೯ರ ಕಣಕಟ್ಟೆಯ ಶಾಸನದಲ್ಲಿ[೯೯] ಎಲ್ಲ ಜಗತಿ ಕೊತ್ತಲಿಗಳು ಸೇರಿ ಕೆರೆ ನಿರ್ಮಿಸಿರುವ ಉಲ್ಲೇಖಗಳಿವೆ. ಕೋಳಗುಂದದ ಕ್ರಿ.ಶ. ೧೧೯೪ರ ಶಾಸನದಲ್ಲಿ[೧೦೦] ಕೆರೆ ಮತ್ತು ದೇವಾಲಯ ನಿರ್ಮಿಸಿ, ಬಾಚೋಜನ ಮಗ ಕೇತೋಜ ಮತ್ತು ಗಣಪೋಜನಿಗೆ ಭೂದಾನ ನೀಡಿರುವುದು ಕಂಡುಬಂದಿದೆ. ಅಂದರೆ ಇವರು ಕೆರೆ ಮತ್ತು ದೇವಾಲಯದ ನಿರ್ಮಾಣದಲ್ಲಿ ತಂತ್ರಜ್ಞರಿದ್ದಂತೆ ತಿಳಿದುಬರುತ್ತದೆ.

ದೊರೆಗಳು, ಅಧಿಕಾರಿಗಳು, ಗೌಡರು ಮತ್ತು ಸಾಮಾನ್ಯ ಜನರು ಕೂಡ ಕೆರೆ ನಿರ್ಮಾಣದಲ್ಲಿ ಮುಂದಾಗುತ್ತಿದ್ದರು. ಅವರಲ್ಲಿ ಮಹಾಪಸಾಯಿತ ಅಧಿಕಾರಿಗಳು ಕೆರೆ ಕಟ್ಟಿಸಿರುವುದು ಶಾಸನದಲ್ಲಿದೆ. ಕ್ರಿ.ಶ. ೧೧೯೫ರ ಮುದುಡಿ ಶಾಸನದಲ್ಲಿ[೧೦೧] ಪಟ್ಟದ ಇಭಧಾರುಕವಂಶದ ಪಸಾಯ್ತ ಹಿರಿಯ ಕಾಟಿಯ ಮಾವಂತನ ಸೋದರರು ಹೊಸದಾಗಿ ಮುದುಡಿಯಲ್ಲಿ ಕೆರೆಯನ್ನು ಕಟ್ಟಿಸಿ, ಆ ಕೆರೆಯ ಕೆಳಗಿನ ಗದ್ದೆಯನ್ನು ಸೂಚಿಸಿದೆ. ಕೆರೆಗಳ ನಿರ್ಮಾಣದೊಂದಿಗೆ ಹೊಸ ಗ್ರಾಮಗಳನ್ನು ನಿರ್ಮಿಸಿ, ಅದರ ಜೀವಿತಕ್ಕೆ ಆಧಾರವಾದ ಕೃಷಿ ಭೂಮಿ ಇರುತ್ತದೆ. ಹಾಗಾಗಿ ಶಾಸನಗಳಲ್ಲಿ ಗ್ರಾಮ, ಅಗ್ರಹಾರ ನಿರ್ಮಾಣದೊಂದಿಗೆ ಕೆರೆ ನಿರ್ಮಾಣವು ಸಹ ಕಾಣಿಸಿಕೊಳ್ಳುತ್ತವೆ. ಮಾದನಹಳ್ಳಿಯ ಕ್ರಿ.ಶ. ೧೧೯೬ರ ಶಾಸನದಲ್ಲಿ[೧೦೨] ಮಾದಿಗೌಡನಿಗೆ ಅಲ್ಲಿಯ ಪ್ರಜೆಗಳು ಹಳ್ಳಿಯ ಮಾಡೆಂದು ಕೊಟ್ಟರೆ ತರಗನುಡಿಗಿ ಕಂನೆಗೆಱೆಯಂ ಕಟ್ಟಿಸಿ, ಊರನ್ನು ಮಾಡಿಸಿ, ದೇವಾಲಯವನ್ನು ಸ್ಥಾಪಿಸಿದ ಮಾಹಿತಿ ಇದೆ. ಅರಸೀಕೆರೆಯ ಕ್ರಿ.ಶ. ೧೧೯೬ರ ವಡಗರಹಳ್ಳಿಯ ಶಾಸನದಲ್ಲಿ[೧೦೩] ಮಟ್ಟದ ಕೂಸಡಾಳಯ್ಯ ಹಿರಿವಾಳಹಳ್ಳಿಯ ವಡಗೆರೆಯೊಂದರ ಪಶ್ಚಿಮ ದಿಕ್ಕಿಗೆ ಕೆರೆಯೊಂದನ್ನು ಕಟ್ಟಿಸಿದನು, ಕೆರೆ ನಿರ್ಮಿಸಿದವನಿಗೆ ಸುತ್ತಮುತ್ತಲಿನ ಗ್ರಾಮದ ಮುಖ್ಯಸ್ಥರು ಕೃತಜ್ಞತೆಯಿಂದ ಅವರ ವಂಶಪಾರಂಪರ್ಯವಾಗಿ ಸಲ್ಲುವಂತೆ ೮ ಸಲಗೆ ಭೂಮಿಯನ್ನು ಬಿಟ್ಟಿದ್ದಾರೆ. ಬೇಲೂರಿನ ಕ್ರಿ.ಶ. ೧೧೯೬-೯೭ರ ಶಾಸನ[೧೦೪] ಮಹಾಪ್ರಧಾನ ಸಾವಂತಮರಾಯ(ಸಾಮಂತಮಾರ)ನು ಎಲಿಹಕ್ಕವನ್ನು ಅಗ್ರಹಾರವನ್ನಾಗಿ ಮಾಡಿ, ಚನ್ನಕೇಶವ ದೇವರನ್ನು ಪ್ರತಿಷ್ಠಾಪಿಸಿ, ಆ ದೇವರ ಅಂಗಭೋಗಕ್ಕೆ ಸಾವಂತಸಮುದ್ರ ಮತ್ತು ಬ್ರಹ್ಮಸಮುದ್ರ ಎಂಬ ಎರಡು ಕೆರೆಗಳನ್ನು ಕಟ್ಟಿಸಿರುವಂತಿದೆ. ಹಾಗೆಯೇ ಅರಸೀಕೆರೆ ತಾಲೂಕಿನ ಗಂಜಿಗೆರೆಯ ಶಾಸನವು[೧೦೫] ಮಹಾಸಾಮಂತ ಚಳುಕೆಯ ನಾಯಕನ ತಂತ್ರಪಾಲನು ಗಂಜಿಗೆರೆಯಲ್ಲಿ ಒಂದು ಕೆರೆಯನ್ನು ನಿರ್ಮಿಸಿದ್ದ ಹೇಳಿದೆ. ಅದೇ ತಾಲೂಕಿನ ಕಣಕಟ್ಟೆಯ ಕ್ರಿ.ಶ. ೧೨೦೮ರ ಶಾಸದಲ್ಲಿ[೧೦೬] ವೀರಬಲ್ಲಾಳನ ಪಿರಿಯರಸಿ ಪಟ್ಟಮಹಾದೇವಿಯಾದ ಉಮಾದೇವಿಯ ರಾಜ್ಯಸಮುದ್ಧರಣನಾದ ಶ್ರೀಮನ್ಮಪ್ರಧಾನ ಕುಮಾರ ಪಂಡಿತಯ್ಯ ದಂಡನಾಯಕರ ಮಗ ಬಿಟ್ಟಿಯ್ಯನು ತನ್ನ ಹೆಸರಿನಲ್ಲಿ ಊರನ್ನು ಮತ್ತು ಬಿಟ್ಟಿಸಮುದ್ರವೆಂಬ ಕೆರೆಯನ್ನು ನಿರ್ಮಿಸಿದ್ದಾನೆ.

ಅಗ್ರಹಾರ ಬೆಳಗುಲಿಯ ಕ್ರಿ.ಶ. ೧೨೦೯ರ ಶಾಸನವು[೨೭] ಕೇಶವರಾಜ ಬೆಳಗುಲಿ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ ಅದಕ್ಕೆ ಕೇಶವಪುರವೆಂಬ ಹೆಸರನ್ನು ಇಟ್ಟು, ಅಲ್ಲಿ ಕೇಶವಸಮುದ್ರ ಮತ್ತು ಲಕ್ಷ್ಮೀಸಮುದ್ರವೆಂಬ ಎರಡು ಕೆರೆಗಳನ್ನು ಕಟ್ಟಿಸಿದ್ದನೆಂದು ಉಲ್ಲೇಖಿಸಿದೆ. ಅರಕಲಗೂಡು ತಾಲೂಕಿನ ರಾಮೇನಹಳ್ಳಿಯ ಕ್ರಿ.ಶ. ೧೨೧೩ರ ಶಾಸನದಲ್ಲಿ[೨೮] ಹೆಗ್ಗಡೆ ರಾಮಯ್ಯನು ರಾಮಸಮುದ್ರವೆಂಬ ಕೆರೆಯನ್ನು ಕಟ್ಟಿಸಿ, ರಾಮಪುರವೆಂಬ ಊರನ್ನು ಮಾಡಿ, ಶ್ರೀರಾಮನಾಥದೇವರನ್ನು ಪ್ರತಿಷ್ಠಾಪಿಸಿದ್ದಾನೆ. ಬಲ್ಲಾಳನ ಕ್ರಿ.ಶ. ೧೨೧೪ರ ಹೊನ್ನಕಟ್ಟೆಯ ಶಾಸನದಲ್ಲಿದೆ.[೨೯] ಘಂಟಿಯ ಸಿಂಗಯ್ಯ ತನ್ನ ತಂದೆ ಮಾಚಿದೇವನ ಹೆಸರಿನಲ್ಲಿ ಮಾಚಸಮುದ್ರವೆಂಬ ಕೆರೆಯನ್ನು ಕಟ್ಟಿಸಿ ಶ್ರೀಸೋಮನಾಥದೇವರ ಪ್ರತಿಷ್ಠೆ ಮಾಡಿ, ದೇವಾಲಯದ ಅಂಗಭೋಗ ನೈವೇದ್ಯಕ್ಕೆ ಹಳೆಯ ಕೆರೆಯ ಗದ್ದೆ ಬೆದ್ದಲು ನೀಡಿದುದರ ವಿವರಗಳಿವೆ. ಕ್ರಿ.ಶ. ೧೨ ಮತ್ತು ೧೩ನೆಯ ಶತಮಾನದ ಬಸ್ತಿಹಳ್ಳಿ ಶಾಸನವು[೩೦] ದಂಡನಾಯಕ ವಾಚಿಮಯ್ಯನು ದೇವರ ಹೆಸರಿನಲ್ಲಿ ಕೆರೆಯನ್ನು ಕಟ್ಟಿಸಿ, ಕೆರೆ ಕೆಳಗಿನ ಗದ್ದೆ ಬೆದ್ದಲನ್ನು ಬ್ರಾಹ್ಮಣರಿಗೆ ಧಾರಪೂರ್ವಕವಾಗಿ ಬಿಟ್ಟಿರುವ ವಿಷಯವನ್ನು ಪ್ರಸ್ತಾಪಿಸಲಾಗಿದೆ.

ಎರಡನೆಯ ನರಸಿಂಹನ ಕಾಲದ ಕ್ರಿ.ಶ. ೧೨೦೭ರ ಹಿರಿಯೂರು ಶಾಸನದಲ್ಲಿ[೩೧] ಮಾರಜೀಯನೆಂಬ ಸ್ಥಾನಿಕ ಗುರು ಧರ್ಮೋರ್ಪಾರ್ಜನೆಯನ್ನು ನೆನೆದು ದೇವಾಲಯವನ್ನು ಮಾಡಿಸಿ, ಕೆರೆ ಕಟ್ಟಿಸಿರುವಂತಿದೆ. ಕ್ರಿ.ಶ. ೧೨೨೭ರ ಅರಸೀಕೆರೆ ತಾಲೂಕಿನ ಗೀಜಿಹಳ್ಳಿ ಶಾಸನವು[೩೨] ಎಕ್ಕಲಶೆಟ್ಟಿ ಮತ್ತು ಕಲ್ಲಶೆಟ್ಟಿ ಎಂಬ ವ್ಯಾಪಾರಿಗಳು ಗೀಜಿಹಳ್ಳಿಯಲ್ಲಿ ಎಕ್ಕಲಸಮುದ್ರವೆಂಬ ಕೆರೆ ಕಟ್ಟಿರುವುದನ್ನು ಹೇಳುತ್ತದೆ. ಬೇಲೂರು ತಾಲೂಕಿನ ಗೋಣಿಸೋಮನಹಳ್ಳಿಯ ಕ್ರಿ.ಶ. ೧೨೨೭ರ ಶಾಸನದಲ್ಲಿ[೩೩] ಸೋಮಯ್ಯನ ಅಕ್ಕ ಮಹಾದೇವಿಯು ಕೆರೆಯನ್ನು ಕಟ್ಟಿಸಿದಳೆಂದು ದಾಖಲಿಸಿದೆ. ಅದೇ ಶಾಸನದಲ್ಲಿ ಆಕೆಯ ಮಗ ಚಿಕ್ಕನಾಗಣ್ಣನು ಸೋಮನಾಥದೇವರಿಗೆ ಕೆರೆಯ ಹಿಂಭಾಗದ ಜಮೀನನ್ನು ದತ್ತಿ ಬಿಟ್ಟಿರುವ ಉಲ್ಲೇಖವಿದೆ.

ಮಹಾಜನರು ತಮ್ಮ ಅಗ್ರಹಾರಗಳ ವೃತ್ತಿಗಳಿಗೆ ಅವಶ್ಯಕವಾದ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಳ್ಳಲು ಸ್ಥಳೀಯ ಗೌವುಡರುಗಳಿಗೆ ಕೆರೆ ನಿರ್ಮಾಣ ಮಾಡುವಂತೆ ಪ್ರೋತ್ಸಾಹಿಸುತ್ತಿದ್ದರು. ಪ್ರತಿಫಲವಾಗಿ ಅವರಿಗೆ ಕೆರೆ ಕೊಡುಗೆಗಳನ್ನು ನೀಡುತ್ತಿದ್ದರು. ಕ್ರಿ.ಶ. ೧೨೩೪ರ ಕೋಳಗುಂದದ ಶಾಸನದಲ್ಲಿ[೩೪] ಭಟೋಪಾಧ್ಯಾಯರುಗಳಾದ ಏಳು ಜನ ಪಂಡಿತರು, ತಮ್ಮ ಏಳು ವೃತ್ತಿಯಿದ್ದ ಬಿದಿರಹಳ್ಳಿಯಲ್ಲಿ ಬಂಟಗವುಡ, ಮಾರಗವುಡರು ಕನ್ನೆಗೆರೆಯನ್ನು ಕಟ್ಟಿಕೊಟ್ಟಿದ್ದಕ್ಕಾಗಿ ಅವರಿಗೆ ಕೆರೆ ಕೊಡುಗೆ ಭೂಮಿಯನ್ನು ನೀಡಿದ್ದಾರೆ. ಅರಕಲಗೂಡು ತಾಲೂಕಿನ ಇಮ್ಮಡಿ ನರಸಿಂಹನ ಬಸವಾಪಟ್ಟಣದ ಕ್ರಿ.ಶ. ೧೨೬೧ರ ಶಾಸನದಲ್ಲಿ[೩೫] ಆಂಜನೇಯ ಮತ್ತು ಸಾತೇಶ್ವರ ದೇವರ

ಅವೃತ್ತ ಪಡಿಗೆ ಊರ ಮುಂದಿನ ಹಿರಿಯ ಕೆರೆಯ ಕೆಳಗಿನ ಗದ್ದೆ ಖಂಡುಗ, ಬೆದ್ದಲು ಮುನ್ನೂರನ್ನು ನೀಡಿರುವ ಉಲ್ಲೇಖವಿದೆ.

ಸೋಮೇಶ್ವರನ ಕ್ರಿ.ಶ. ೧೨೩೮ರ ಹೊಳೆನರಸೀಪುರ ತಾಲೂಕಿನ ಶಾಸನದಲ್ಲಿ[೧೩೬] ಯಳ್ಳೇಶ್ವರ ದೇವರಿಗೆ ಸೋಯಿಯಣ್ಣ ನಾಗಯ್ಯನ ಹೆಗ್ಗಡೆ ಸುಗ್ಗನಕಟ್ಟೆ ಕೆಳಗಿನ ಹೂತೋಟ ಬಿಟ್ಟಿರುವಂತಿದೆ. ನುಗ್ಗೇಹಳ್ಳಿಯ ಒಂದು ಶಾಸನದಲ್ಲಿ ಕಮ್ಮಟದ ಬಸವಣ್ಣ ಎಂಬುವನು ಒಂದು ಕೆರೆ ಕಟ್ಟಿಸಿದ ವಿಷಯವಿದೆ. ಶಾಸನದ ಕಾಲ ಕ್ರಿ.ಶ. ೧೨೫೨.[೧೩೭] ಹೊಯ್ಸಳ ಸೋಮೇಶ್ವರನ ಮಹಾಪ್ರಧಾನಿ ಸಂಧಿವಿಗ್ರಹಿ ಬೊಮ್ಮಣ್ಣ ದಂಡನಾಯಕನಿಗೆ ಪ್ರೀತಿಪಾತ್ರನಾಗಿದ್ದ ಕಮ್ಮಟದ ಬಸವಣ್ಣನು ಗೊಟ್ಟಿಕೆರೆಯಲ್ಲಿ ಬ್ರಾಹ್ಮರಿಗೆ ಛತ್ರ ನಿರ್ಮಿಸಿ, ಬ್ರಹ್ಮಸಮುದ್ರ ಎಂಬ ಕೆರೆ ಕಟ್ಟಿಸಿದನು. ಇದೇ ವ್ಯಕ್ತಿ ಪುನಃ ೧೨ ಜನ ಬ್ರಾಹ್ಮಣರಿಗೆ ಅನ್ನದಾನಕ್ಕಾಗಿ ಭೂದಾನಗಳನ್ನು ನೀಡಿ ಕೆರೆಯನ್ನು ಮತ್ತಷ್ಟು ವಿಸ್ತರಿಸಿ ಕಟ್ಟೆಗೆ ಕಲ್ಲುಗಳನ್ನು ಹೊಂದಿಸಿದನೆಂದು ದಾಖಲಿಸಿದೆ. ನುಗ್ಗೇಹಳ್ಳಿಯ ಮತ್ತೊಂದು ಕ್ರಿ.ಶ. ೧೨೫೩ರ ಶಾಸನವು[೧೩೮] ಬೊಮ್ಮಣ್ಣ ದಂಡನಾಯಕನ ಅಕ್ಕ ಲಕ್ಕವ್ವೆ ಎಂಬುವಳು ಒಂದು ಕೆರೆಯನ್ನು ಕಟ್ಟಿಸಿ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ.

ಚಟಚಟನಹಳ್ಳಿಯ ಕ್ರಿ.ಶ. ೧೨೨೧ರ ಶಾಸನವು[೧೩೯] ಚಟ್ಟಯ್ಯ ಪೆರುಮಾಳ್ ದೇವನು ೧೦೦ ಹೊನ್ನನ್ನು ಬಸದಿ ನಿರ್ಮಾಣ ಮತ್ತು ಅಗ್ರಹಾರಕ್ಕಾಗಿ ವಿನಿಯೋಗಿಸಲು ಘೋಷಿಸಿದಾಗ, ಅಲ್ಲಿನ ಮಹಾಜನರು ದಾಸಿಶೆಟ್ಟಿಕೆರೆಗೆ ಮೆಟ್ಟಿಲುಗಳನ್ನು ಇರಿಸಲು ಬೇಡಿಕೆ ಸಲ್ಲಿಸಿದಾಗ ೧೦೦ ಹೊನ್ನನ್ನು ಕೆರೆಯ ಮೆಟ್ಟಿಲುಗಳಿಗೆ ವಿನಿಯೋಗಿಸಿದುದನ್ನು ತಿಳಿಸುತ್ತದೆ. ಇಲ್ಲಿ ೧೦೦ ಹೊನ್ನನ್ನು ಮೆಟ್ಟಿಲುಗಳಿಗೆ ಬಳಸಿರುವುದು ಗಮನಾರ್ಹವಾದ ಅಂಶವಾಗಿದೆ. ಚನ್ನರಾಯಪಟ್ಟಣ ತಾಲೂಕಿನ ಕೆಂಬಾಳು ಗ್ರಾಮದ ಕ್ರಿ.ಶ. ೧೨೨೩ರ ಶಾಸನದಲ್ಲಿ[೧೪೦] ಶ್ರೀಕರಣಾಧಿಕಾರಿ ವಿಶ್ವನಾಥನು ನಿರಗುಂದ ನಾಡಿನಲ್ಲಿ ವೀರನರಸಿಂಹಪುರ ಅಗ್ರಹಾರವನ್ನು ನಿರ್ಮಿಸಿದಲ್ಲದೆ, ಕೆರೆಗಳನ್ನು ಕಟ್ಟಿಸಿರುವುದು ಉಲ್ಲೇಖಿತಗೊಂಡಿದೆ. ಅದೇ ತಾಲೂಕಿನ ಗೊಲ್ಲರ ಹೊಸಹಳ್ಳಿಯ ಕ್ರಿ.ಶ. ೧೨೬೮ರ ಶಾಸನದಲ್ಲಿ[೧೪೧] ಬೆಟ್ಟಗಾವುಂಡನ ಮಗ ಪಾಂಡುಗಾವುಂಡ ಕೆರೆಯನ್ನು ಕಟ್ಟಿಸಿ, ದೇವಾಲಯವನ್ನು ಮಾಡಿಸಿದ ವಿಚಾರವಿದೆ. ಬೇಲೂರಿನ ಗೋಣಿಸೋಮನಹಳ್ಳಿಯ ಶಾಸನದಲ್ಲಿ[೧೪೨] ಮಲ್ಲಿದೇವ ದಂಡನಾಯಕನು ನಾಗೇಶ್ವರ ದೇವರುಗಳ ಜೀರ್ಣೋದ್ಧಾರ ವೆಚ್ಚಕ್ಕೆ ವಿಜಯನರಸಿಂಹಪುರ ಗೋಳಿ(ಗೋಣಿ)ಯಸೋಮನಹಳ್ಳಿಯ ಊರ ಮುಂದಣ ಕೆರೆ ಕೆಳಗಣ ತೋಟವನ್ನು ಬಿಟ್ಟಿರುವಂತಿದೆ. ಈ ಶಾಸನದ ಕಾಲ ಕ್ರಿ.ಶ. ೧೨೭೩. ಚನ್ನರಾಯಪಟ್ಟಣದ ಕ್ರಿ.ಶ. ೧೨೭೬ರ ಬಾಳಗಂಚಿ ಶಾಸನದಲ್ಲಿ[೧೪೩] ಉದ್ಧವ ವಿಶ್ವನಾಥಪುರದ ಬ್ರಾಹ್ಮಣರು ಭೂಮಿಯನ್ನು ಪಂಚಕೇಶ್ವರ ದೇವರಿಗೆ ದತ್ತಿ ಬಿಟ್ಟರೆಂದು, ಕೆರೆ ಕಾಲುವೆ ನಿರ್ವಹಣೆಗೆ ಅದನ್ನು ಉಪಯೋಗಿಸಬಹುದೆಂದು, ಅದು ಅತ್ಯಂತ ಶ್ರೇಯಸ್ಕರ ಕಾರ್ಯವೆಂದು ಒತ್ತಿ ಹೇಳುತ್ತದೆ.

ಕುಂದೂರಿನ ಕ್ರಿ.ಶ. ೧೨೬೮ರ ಶಾಸನವೊಂದು[೧೪೪] ಪೆರುಮಾಳು ದಂಡನಾಯಕನು ಕುಂದೂರಿನಿಂದ ದಕ್ಷಿಣಕ್ಕೆ ಗ್ಯಾರಹಳ್ಳಿಯಿಂದ ಪಶ್ಚಿಮಕ್ಕೆ ಪೆರುಮಾಳ್ ಸಮುದ್ರ ಎಂಬ ಕೆರೆಯನ್ನು ಕಟ್ಟಿಸಿ, ವಿಜಯಮಾಧವ ಪುರವಾದ ಕುಂದೂರಿನಲ್ಲಿ ಪಂಚಕೇಶ್ವರ ದೇವರಿಗೆ ತಾನು ಕಟ್ಟಿಸಿದ ಕೆರೆಯ ಹಿಂದಿನ ಭೂಮಿಯನ್ನು ದತ್ತಿ ಬಿಡುತ್ತಾನೆ. ಇದೇ ವಿಷಯವನ್ನು ಗ್ಯಾರಹಳ್ಳಿಯ ಶಾಸನವು ಸ್ಪಷ್ಟಪಡಿಸುತ್ತದೆ. ಬೇಲೂರಿನ ಕ್ರಿ.ಶ. ೧೨೮೦ರ ಅಗಸರಹಳ್ಳಿಯ ಶಾಸನವೊಂದು[೧೪೫] ಪರಮೇಶ್ವರನಾಯಕರು ೨ ಹಳ್ಳಿಗಳ ಗದ್ದೆಗಳಿಗೆ ಅರಸೀಕೆರೆಯ ನೀರು ಹಾಯಿಸುವಂತೆ ವೊಡಂಬಡಿಸಿದ ವಿಷಯವನ್ನು ಪ್ರಸ್ತಾಪಿಸಿದೆ. ಅರಸೀಕೆರೆ ಎನ್ನುವುದು ಅಗಸರಹಳ್ಳಿಯ ಕೆರೆಯೇ ಆಗಿರಬಹುದು. ಕೆರೆಯ ನೀರು ಎರಡು ಹಳ್ಳಿಯ ಜಮೀನುಗಳಿಗೆ ಹಾಯಿಸಿಕೊಳ್ಳುವುದರಲ್ಲಿ ಅನ್ಯಾಯವಾಗದಂತೆ ಮಾಡಿಕೊಂಡ ಒಪ್ಪಂದವನ್ನು ತಿಳಿಸುತ್ತದೆ. ಚನ್ನರಾಯಪಟ್ಟಣ ತಾಲೂಕಿನ ಕ್ರಿ.ಶ. ೧೨೮೧–೮೨ರ ಶಾಸನದಲ್ಲಿ[೧೪೬] ಕೆಸಗೆರೆಯಗಾವುಂಡ ಕೆರೆಯ ಕಟ್ಟಿಸಿ, ದೇವಾಲಯ ನಿರ್ಮಿಸಿ, ಕೆರೆ ಕೆಳಗಿನ ಭೂಮಿಯನ್ನು ದಾನ ನೀಡಿದ ಮಾಹಿತಿ ಇದೆ. ಕೆರೆಯ ನಿರ್ಮಾಣದೊಂದಿಗೆ ದುರಸ್ತಿ ಕಾರ್ಯಗಳು ನಡೆಯುತ್ತಿದ್ದವು. ಕ್ರಿ.ಶ. ೧೨೮೬ರ ಅರಸೀಕೆರೆಯ ಶಾಸನದಲ್ಲಿ[೧೪೭] ಮೊಸಳೆ ಎಂಬ ಗ್ರಾಮದ ಕಾಲುವಳ್ಳಿ ಮಲ್ಲಯ್ಯನಹಳ್ಳಿಯ ಬಳ್ಳೆಯಕೆರೆಯು ಒಡೆಯುವುದರಿಂದ ಅಲ್ಲಿನ ಕೇಶವ ದೇವಾಲಯವು ಹಾಳಾಗಿದ್ದು, ದೇವಾಲಯದ ಜೀರ್ಣೋದ್ಧಾರದೊಂದಿಗೆ ಬಳ್ಳಿಯಕೆರೆಯ ಏರಿವನ್ನು ಕಟ್ಟಿಸಲಾಯಿತೆಂದು ಶಾಸನ ಹೇಳಿದೆ. ಮೂರನೆಯ ಬಲ್ಲಾಳನ ಕ್ರಿ.ಶ. ೧೩೦೬ರ ಬೇಲೂರು ಶಾಸನವೊಂದು[೧೪೮] ಮಾದಿಗೆದೇವ ದಂಡನಾಯಕರು ಸೋಮನಾಥದೇವರ ನಿತ್ಯ ನೈವೇದ್ಯಕ್ಕೆ ಸೋಯಣ್ಣ ಕೆರೆ ಏರಿಯ ಕೆಳಗಣ ಗದ್ದೆ ಬೆದ್ದಲನ್ನು ದಾನವಾಗಿ ನೀಡಿದ ಉಲ್ಲೇಖವಿದೆ. ಹಾಗೆಯೇ ಹೊಳೆನರಸೀಪುರದ ಕ್ರಿ.ಶ. ೧೩೧೦ರ ಶಾಸನದಲ್ಲಿ[೧೪೯] ಕುಂಚೆಯ ಮಹಾಜನರಿಂದ ಮಹಾಪ್ರಧಾನ ಮಾದಿಗೆ ದಣ್ಣಾಯಕನು ೨೩೦೦ ಗದ್ಯಾಣ ಮತ್ತು ೩ ಪಣ ಹೂಡಿಕೆ ಮಾಡಿ ನಾಲ್ಕು ಗ್ರಾಮಗಳಾದ ನಿರುವಳ್ಳಿ, ಕಾಳೇನಹಳ್ಳಿ, ಕಾಳುವೇಹಳ್ಳಿ ಮತ್ತು ಚೋಳನಹಳ್ಳಿಗಳಲ್ಲಿ ಕೆರೆಯನ್ನು ನಿರ್ಮಿಸಿದ ಉಲ್ಲೇಖವಿದೆ. ಇದೇ ಶಾಸನವು ಕೆರೆ ಕಟ್ಟಿಸಿದ ವೊಡ್ಡರಿಗೆ ಕೆರೆಬಂಡಿಯನ್ನು ನೀಡಿರುವ ವಿಷಯನ್ನು ಪ್ರಸ್ತಾಪಿಸಿದೆ.

ಹೊಯ್ಸಳರು ಹಳೇಬೀಡು ಮತ್ತು ಬೇಲೂರುಗಳನ್ನು ರಾಜಧಾನಿ ಮಾಡಿಕೊಂಡು ಆಳ್ವಿಕೆ ನಡೆಸಿದ್ದರು. ಬಹುಶಃ ಇದರಿಂದಾಗಿ ಈ ಪರಿಸರದಲ್ಲಿ ಹೊಯ್ಸಳ ಕಾಲದ ಹೆಚ್ಚಿನ ದೇವಾಲಯಗಳು, ವೀರಗಲ್ಲುಗಳು, ಶಾಸನಗಳು ಮತ್ತು ಕೆರೆಗಳು ಕಂಡುಬಂದಿರಬೇಕು.

ಹೊಯ್ಸಳ ವಂಶದ ಕೊನೆಯ ಪ್ರಸಿದ್ಧ ರಾಜನಾದ ಮುಮ್ಮಡಿ ಬಲ್ಲಾಳನು ಕ್ರಿ.ಶ. ೧೨೯೧ರಿಂದ ೧೩೪೨ರವರೆಗೆ ರಾಜ್ಯವಾಳಿದ. ಈತನ ಕಾಲದಲ್ಲಿಯೇ ದೆಹಲಿಯ ಸುಲ್ತಾನರು ಮತ್ತು ಮಧುರೆಯ ಸುಲ್ತಾನರು ಹೊಯ್ಸಳ ರಾಜ್ಯದ ಮೇಲೆ ದಾಳಿ ಮಾಡಿದರು. ಹೊಯ್ಸಳರ ಅವನತಿಯ ನಂತರ

ವಿಜಯನಗರ ಸಾಮ್ರಾಜ್ಯ ಅಧಿಕಾರಕ್ಕೆ ಬಂದಿತು. ಈ ಸಾಮ್ರಾಜ್ಯದ ಸ್ಥಾಪನೆಯು ದಕ್ಷಿಣಭಾರತದಲ್ಲಿ ಒಂದು ನೂತನ ತಿರುವನ್ನೇ ಪಡೆಯಿತು. ತಮ್ಮ ಆಳ್ವಿಕೆಯ ಕಾಲದಲ್ಲಿ ದಕ್ಷಿಣಭಾರತವು ಸೇರಿದಂತೆ ಹಲವಾರು ಭಾಗಗಳಲ್ಲಿ ಬೃಹತ್ ನೀರಾವರಿ ಯೋಜನೆಗಳನ್ನು ಜಾರಿಗೆ ತಂದರು. ಅವುಗಳಲ್ಲಿ ಮುಖ್ಯವಾಗಿ ಕಾವೇರಿ ಮುಖಜ ಭೂಮಿ ಯೋಜನೆ, ಸೂಳೆಕೆರೆ ಅಥವಾ ಶಾಂತಿಸಾಗರ ಕೆರೆ, ಮದಗ-ಮಾಸೂರು, ಪೊರುಮಾಮಿಲ್ಲ ಮತ್ತು ವ್ಯಾಸ ಸಮುದ್ರಗಳಂತಹ ಬೃಹದಾಕಾರದ ಜಲಾಶಯಗಳನ್ನು ನಿರ್ಮಿಸಿದರು.[೧೫೦] ಹಾಸನ ಜಿಲ್ಲೆಯು ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿತ್ತೆಂಬುದಕ್ಕೆ ಶಾಸನಗಳು ಸಾಕ್ಷಿಯಾಗಿವೆ. ಈ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಇವರ ಕಾಲದಲ್ಲಿ ನಿರ್ಮಾಣವಾದ ನೀರಾವರಿ ಕೆರೆಗಳ ಮಹತ್ವವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಜಿಲ್ಲೆಯಲ್ಲಿ ವಿಜಯನಗರ ಕಾಲದ ಕೆರೆಗಳು ಅಷ್ಟಾಗಿ ಕಂಡುಬಂದಿಲ್ಲ. ಬದಲಾಗಿ ನಿರ್ವಹಣೆಗೆ ಭೂಮಿ ಮತ್ತು ಬಂಡಿಗಳನ್ನು ಬಿಟ್ಟಿರುವುದು ಅನೇಕ ಶಾಸನಗಳಲ್ಲಿದೆ.

ವಡ್ಡ ವ್ಯವಹಾರಿ, ನಾನಾದೇಶಿಗಳು ಮುಂತಾದ ಹೆಸರುಗಳಿದ್ದ ವರ್ತಕರು ವಿಜಯನಗರ ಕಾಲದಲ್ಲಿ ನೀರಾವರಿ ಕಾರ್ಯಗಳನ್ನು ನಿರ್ವಹಿಸಿದ್ದಾರೆ. ಕ್ರಿ.ಶ. ೧೩೫೭ರ ಅರಕಲಗೂಡು ತಾಲೂಕಿನ ರುದ್ರಪಟ್ಟಣದ ಶಾಸನದಲ್ಲಿ[೧೫೧] ಹೇಳುವಂತೆ ಮಹಾದೇವರಸ ಎಂಬ ಹಿರಿಯ ವಡ್ಡ ವ್ಯವಹಾರಿ ನಾನಾದೇಶಿಗಳ ಎರಡೂ ಪಂಗಡಗಳ ಮುಖ್ಯಸ್ಥನಾಗಿದ್ದ. ಇವನು ಮೊದಲನೆಯ ಹರಿಹರನಿಗೆ ಪ್ರಾರ್ಥಿಸಲಾಗಿ, ಹರಿಹರನು ತನ್ನ ಸಹೋದರ ಮೊದಲನೆಯ ಬುಕ್ಕನಿಗೆ ಸಿಂಗಪಟ್ಟಣ-ಚಂಗುನಾಡಿನಲ್ಲಿ ಲೋಕೋಪಯೋಗಿ ಕಾರ್ಯಗಳನ್ನು ಕೈಗೊಳ್ಳುವಂತೆ ಆದೇಶ ನೀಡಿದನು. ಮಹಾದೇವಣ್ಣ(ಮಹಾದೇವರಸ)ನು ದೊರೆಯ ಅನುಮತಿಯಂತೆ ಲಕ್ಷ್ಮೀಪುರವೆಂಬ ಅಗ್ರಹಾರವನ್ನು, ಕೆರೆ ಮತ್ತು ಕಾಲುವೆ ಸ್ಥಾಪಿಸಿದ ಎಂಬ ಉಲ್ಲೇಖವಿದೆ. ಬುಕ್ಕರಾಯನ ಕ್ರಿ.ಶ. ೧೩೭೧ರ ಬೋಳಕ್ಯಾತನಹಳ್ಳಿಯ ಶಾಸನವು[೧೫೨] ಹೆಬ್ಬಾಳೆಯ ಉಪಗ್ರಾಮವಾದ ಬೋಳಕ್ಯಾತನಹಳ್ಳಿಗೆ ಸೇರಿದ ಭೂಮಿ ಹಾಗೂ ಹಲವು ಬಗೆಯ ತೆರಿಗೆಗಳನ್ನು ಹೆಬ್ಬಾಲೆಯ ಮಹಾಜನರು ಬೊಮ್ಮೇಗೌಡ ಮತ್ತು ಇತರರಿಗೆ ದಾನ ನೀಡಿ, ಕೆರೆಯ ನಿರ್ವಹಣೆಗಾಗಿ ನಾಲ್ಕು ಬಂಡಿಗಳನ್ನು ನಿರ್ವಹಿಸಲು ನೀಡಿದೆ. ದಾನ ಪಡೆದವರು ಕೋಣ, ಮರ, ಮುಟ್ಟು, ಕಬ್ಬಿಣ ಮತ್ತು ಗಾಡಿ ಎಣ್ಣೆಯನ್ನು ಇಟ್ಟುಕೊಂಡಿರುವಂತೆ ತಿಳಿಸಿದೆ. ಹಾಗೆಯೇ ಎರಡನೆಯ ಹರಿಹರನ ಕೆಲ್ಲಂಗೆರೆಯ ಕ್ರಿ.ಶ. ೧೩೬೭ರ ಶಾಸನವು[೧೫೩] ಕೆಲ್ಲಂಗೆರೆ ಗ್ರಾಮವನ್ನು 'ಹರಿಹರಪುರ' ಅಗ್ರಹಾರವೆಂದು ಕರೆಯಲಾಗಿದ್ದು, ಇಲ್ಲಿನ ಕೆರೆಯ ಬಂಡಿಯ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದ ವ್ಯಕ್ತಿಯೊಬ್ಬನ ಜೀವಿತಕ್ಕೆ ಮಹಾಜನರು ಅವಕಾಶ ಕಲ್ಪಿಸಿಕೊಟ್ಟಿದ್ದನ್ನು ತಿಳಿಸುತ್ತದೆ. ಅಲ್ಲಿನ ಕೆರೆ ನಿರ್ವಹಣೆ ಮಾಡುವವರು ದಾನ ಪಡೆದವರು ಹೆರೆಯ ಎಣ್ಣೆ, ಹಾರೆ, ಗುದ್ದಲಿ ಮುಂತಾದ ಕೆರೆಯ ಬಂಡಿಗೆ ಬೇಕಾಗಿರುವ ಸಾಮಾಗ್ರಿಗಳನ್ನು ಇಟ್ಟುಕೊಂಡಿರಬೇಕಾಗಿತ್ತು. ಮೂಲ ಒಕ್ಕಲಿಗರಲ್ಲಿ ಪ್ರತಿಯೊಬ್ಬನೂ ಹೇರಿಗೆ ೨ ತಾರಗಳನ್ನು(ಬೆಳ್ಳಿ)

ನೀಡಬೇಕಾಗಿತ್ತು. ಅಂದರೆ ಅಡಿಕೆ, ವೀಳ್ಯದೆಲೆ, ಕಿತ್ತಲೆಹಣ್ಣು ಮುಂತಾದ ಸಾಮಗ್ರಿಗಳ ಪ್ರತಿ ಹೇರಿಗೆ ೨ ತಾರಗಳನ್ನು ತೆರಬೇಕಾಗಿತ್ತೆಂಬುದಾಗಿ ದಾಖಲಿಸಲಾಗಿದೆ. ಬೇಲೂರು ತಾಲೂಕಿನ ಕ್ರಿ.ಶ. ೧೩೮೭ರ ಬಂಟೇನಹಳ್ಳಿ ಶಾಸನವು[೧೫೪] ಬಂಟಿಹಳ್ಳಿಯ ಮಹಾಜನರು ಸ್ವಂತ ವೆಚ್ಚದಿಂದ ಕೆರೆ, ಕೊಳ ನಿರ್ಮಿಸಿದ ಭೈರಣ್ಣನಿಗೆ ಕೊಡುಗೆಯಾಗಿ ಭೂಮಿ ನೀಡಿದ್ದನ್ನು ಉಲ್ಲೇಖಿಸಿದೆ. ಕ್ರಿ.ಶ. ೧೪ನೆಯ ಶತಮಾನದ ಪುಷ್ಪಗಿರಿ ಶಾಸನದಲ್ಲಿ[೧೫೫] ಪುಲ್ಲಖಂಡ ಸಿದ್ದರಾಜರು ಪಂಡಿತರಹಳ್ಳಿಯ ಕೆರೆ ಕೆಳಗಿನ ಗದ್ದೆ ಜಾಜಿಗೆಕೆರೆ ಕೆಳಗೆ ೧೨ ಕೊಳಗ ಭೂಮಿದಾನ ನೀಡಿದ್ದನ್ನು ಪ್ರಸ್ತಾಪಿಸಿದೆ. ಅರಸೀಕೆರೆ ತಾಲೂಕಿನ ಗಂಡಸಿಯ ಕ್ರಿ.ಶ. ೧೪೦೩ರ ಶಾಸನದಲ್ಲಿ[೧೫೬] ಬಾಯಣ್ಣನೆಂಬಾತನು ತನ್ನ ತಾಯಿಯ ಹೆಸರಿನಲ್ಲಿ ಮಹಾಪುರವೆಂಬ ಗ್ರಾಮವನ್ನು ನಿರ್ಮಿಸಿ, ಅಲ್ಲಿ ಮಂಗಸಮುದ್ರವೆಂಬ ಕೆರೆಯನ್ನು ಕಟ್ಟಿಸಿ, ದಕ್ಷಿಣ ಭಾಗದಲ್ಲಿ ಕೋಡಿಯನ್ನು ನಿರ್ಮಿಸಿದನು. ಹಿರಿಯ ಗಂಡಸಿಯ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿ ಅಲ್ಲಿನ ಹಿರಿಯ ಕೆರೆಗೆ ನಿರ್ಮಿಸಿದ ಕಾಲುವೆಗೆ ರಕ್ಷಣಾರ್ಥವಾಗಿ ಊರ ಮುಂದೆ ಹನುಮಂತ ದೇವರ ಪ್ರತಿಷ್ಠೆಯನ್ನು ಮಾಡಿಸಿದ ವಿಷಯವಿದೆ. ಈ ಶಾಸನದಲ್ಲಿ ತಮ್ಮ ಶ್ರೇಯಸ್ಸಿಗಾಗಿ, ಪುಣ್ಯಪ್ರಾಪ್ತಿಗಾಗಿ ತಂದೆ ತಾಯಿಯ ಹೆಸರಿನಲ್ಲಿ ಕೆರೆ ಕಟ್ಟಿಸಿರುವುದು ಕಂಡುಬಂದಿದೆ. ಅರಕಲಗೂಡಿನ ಉಳ್ಳೇನಹಳ್ಳಿ ಶಾಸನದಲ್ಲಿ[೧೫೭] ಭಾಸ್ಕರಪುರವೆನಿಸಿದ ಕೂಡಲೂರಿನ ಮಹಾಸಾಮಂತಾಧಿಪತಿ ವುಲ್ಲೇನಹಳ್ಳಿ ಗ್ರಾಮವನ್ನು ಕೆರೆಯು ಸೇರಿದಂತೆ ದಾನ ನೀಡಿದ ಉಲ್ಲೇಖವಿದೆ. ಈ ಶಾಸನದ ಕಾಲ ಕ್ರಿ.ಶ. ೧೪೦೩.

ಸಂಗಮ ವಂಶದ ಎರಡನೆಯ ದೇವರಾಯನ ಕಾಲಕ್ಕೆ ಸಂಬಂಧಿಸಿದಂತೆ ಅರಸೀಕೆರೆ ತಾಲೂಕಿನ ನೇರ್ಲಿಗೆ ಮತ್ತು ತಿಮ್ಮನಹಳ್ಳಿ ಗ್ರಾಮಗಳಲ್ಲಿ ೨ ಶಾಸನಗಳು ದೊರಕಿವೆ. ನೇರ್ಲಿಗೆಯ ಕ್ರಿ.ಶ. ೧೪೨೯ರ ಶಾಸನ[೧೫೮] ವಿರೂಪಣ್ಣ ನಾಯಕನು ನೇರ್ಲಿಗೆಯ ಹಿರಿಯ ಕೆರೆಯ ಬಂಡಿಯ ನಿರ್ವಹಣೆಗಾಗಿ ಚತುಸೀಮೆಯನ್ನು ಒಳಗೊಂಡ ಗದ್ದೆ ಬೆದ್ದಲು ತೋಟತುಡಿಕೆಗಳನ್ನು ದಾನವಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ. ಹಾಗೆಯೇ ತಿಮ್ಮನಹಳ್ಳಿ ಗ್ರಾಮದ ಕ್ರಿ.ಶ. ೧೪೩೨ರ ಶಾಸನದಲ್ಲಿ[೧೫೯] ಬಸವ ಶೆಟ್ಟಿನಾಯಕ ಎಂಬುವನು ನೇರ್ಲಿಗೆಯ ದೊಡ್ಡ ಕೆರೆಯ ಬಂಡಿ ನಿರ್ವಹಣೆಗಾಗಿ ಚತುಸೀಮೆಯನ್ನು ಒಳಗೊಂಡ ಭೂಮಿ ಬಿಟ್ಟಿರುವುದನ್ನು ಉಲ್ಲೇಖಿಸಿದೆ.

ಅಚ್ಯುತರಾಯನ ಕ್ರಿ.ಶ. ೧೫ ಮತ್ತು ೧೬ನೆಯ ಶತಮಾನದ ಯಲಹಂಕ ಶಾಸನದಲ್ಲಿ[೧೬೦] ವಿಶ್ವನಾಥ ದೀಕ್ಷಿತರಿಗೆ ಕೆರೆ ಕಟ್ಟಿಸಿದ ಕೊಡುಗೆಯಾಗಿ ದಂಡನಾಯಕ ಸಿಂಗಮ ಗುಮ್ಮಣ್ಣನು ತೆರಿಗೆಯಿಲ್ಲದೆ ಸರ್ವಮಾನ್ಯವಾಗಿ ಬೀಜವರಿ ಕೊಟ್ಟರು ಎಂದಿದೆ. ಅಚ್ಯುತರಾಯನ ಕಾಲದ ಕ್ರಿ.ಶ. ೧೫೩೫ರ ಮತ್ತೊಂದು ಶಾಸನವು[೧೬೧] ಚಿಕ್ಕಗಂಡಸಿಯನ್ನು ಧರ್ಮಗ್ರಾಮವೆಂದು ಬ್ರಾಹ್ಮಣನೊಬ್ಬನಿಗೆ ದಾನವಾಗಿ ನೀಡಿ ಕೆರೆಯನ್ನು ನಿರ್ಮಿಸಿದ್ದನ್ನು ತಿಳಿಸುತ್ತದೆ.

ಕ್ರಿ.ಶ. ೧೫೫೫ರ ಶಾಸನವು[೧೬೨] ರಾಮರಾಜ(ರಾಮರಾಯ)ನ ಆಳ್ವಿಕೆ ಅವಧಿಯಲ್ಲಿ ಹೊಳೆಯಗಾವುಂಡ ಮಾತಾಪಿತೃಗಳಿಗೆ ಪುಣ್ಯವಾಗಲೆಂದು ಕಣಿವೆಯ ರಾಮೇಶ್ವರ ದೇವಾಲಯವನ್ನು ಕಟ್ಟಿಸಿ ದೇವಾಲಯದ ನಿರ್ವಹಣೆಗಾಗಿ ಕೋಳಗುಂದದ ಹಿರಿಯ ಕೆರೆಯ ಭೂಮಿಯನ್ನು ದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ.

ಅರವೀಡು ವಂಶದ ಶ್ರೀರಂಗರಾಯನ ಬೇಲೂರಿನ ಕ್ರಿ.ಶ. ೧೬೬೦ರ ಶಾಸನದಲ್ಲಿ[೧೬೩] ನಾಗಿಹಳ್ಳಿಯ ಉಚ್ಚಮನಾಯಕ ಕೆರೆಯ ಕೆಳಗಿನ ೧೦ ಖಂಡುಗ ಭೂಮಿಯನ್ನು ವೆಂಕಟಾಚಾರ್ಯನಿಗೆ ದಾನ ನೀಡಿದ ಎಂದಿದೆ. ವಿಜಯನಗರದ ಅರಸರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಹಾಸನ ಪರಿಸರದಲ್ಲಿ ಕೆರೆಗಳ ನಿರ್ಮಾಣ ಮಾಡಿ ಅವುಗಳ ನಿರ್ವಹಣೆಗೆ ಆಸಕ್ತಿ ತೋರಿದ್ದಾರೆ. ಈ ಮನೆತನದ ಪ್ರತಿನಿಧಿಗಳಾಗಿ ನೇಮಿಸಲ್ಪಟ್ಟ ಅಧಿಕಾರಿಗಳು ಕೆರೆ ಮತ್ತು ದೇವಾಲಯಗಳನ್ನು ನಿರ್ಮಾಣ ಮಾಡುವ ಕಲ್ಯಾಣ ಕಾರ್ಯಗಳಲ್ಲಿ ಸಾಮ್ರಾಜ್ಯದ ಪರಂಪರೆಯನ್ನು ಮುಂದುವರಿಸಿದರು.

ಹೊಳೆನರಸೀಪುರ, ಅರಕಲಗೂಡು, ಹಾಸನ, ಆಲೂರು, ಬೇಲೂರು ಮತ್ತು ಸಕಲೇಶಪುರಗಳ ಶಾಸನ ಆಧಾರಗಳಿಂದ ಬೇಲೂರು ನಾಯಕರ ವಂಶಾವಳಿಯನ್ನು ನಿರೂಪಿಸಲಾಗಿದೆ. ಈ ಮನೆತನದ ಚರಿತ್ರೆಯು ಬಯ್ಯಪ್ಪನಾಯಕನ ಪುತ್ರ ಎರೆಕೃಷ್ಣಪ್ಪನಿಂದ ಆರಂಭವಾಗುತ್ತದೆ. ಇವರ ಆಳ್ವಿಕೆ ಅವಧಿಯಲ್ಲಿ ಕೆರೆ ಕಟ್ಟಿಸಿರುವುದರ ಮಾಹಿತಿ ದೊರೆತಿಲ್ಲ. ಬದಲಾಗಿ ಬೇಲೂರಿನ ಕ್ರಿ.ಶ. ೧೫೫೭ರ ಶಾಸನವು[೧೬೪] ತೆರಿಗೆ ಮತ್ತು ಅಗ್ರಹಾರದ ಒಂದು ವೃತ್ತಿಯನ್ನು ದೇವಾಲಯಕ್ಕೆ ದತ್ತಿ ನೀಡಿದ್ದಲ್ಲದೆ ಬಿಟ್ಟಿಸಮುದ್ರ ಕೆರೆಯ ದಕ್ಷಿಣ ತೋಟವನ್ನು ದತ್ತಿ ನೀಡಿದ್ದನ್ನು ಉಲ್ಲೇಖಿಸುತ್ತದೆ. ಇವರ ಸೋದರ ಸಂಬಂಧಿಗಳಾದ ಹೊಳೆನರಸೀಪುರದ ನಾಯಕರ ವಂಶವು ಹೊಳೆನರಸೀಪುರದಲ್ಲಿ ಆಳಿದೆ.

ಕ್ರಿ.ಶ. ೧೬ನೆಯ ಶತಮಾನದಿಂದ ಹೊಳೆನರಸೀಪುರದ ಪ್ರಭುಗಳ ರಾಜಕೀಯ ಇತಿಹಾಸ ಇಲ್ಲಿ ಆರಂಭವಾಗುತ್ತದೆ. ಕೃಷ್ಣಪ್ಪನಾಯಕ, ವೆಂಕಟಪ್ಪನಾಯಕ, ತಿರುಮಲನಾಯಕ, ವಿರೂಪನಾಯಕ, ಲಕ್ಷಪ್ಪನಾಯಕ, ನರಸಿಂಹನಾಯಕ ಮತ್ತು ರಂಗಪ್ಪನಾಯಕ ರಾಜ್ಯವಾಳಿದ್ದಾರೆ. ಕ್ರಿ.ಶ. ೧೬೬೭ರಲ್ಲಿ ಮೈಸೂರಿನ ಕಂಠೀರವ ನರಸರಾಜ ಒಡೆಯರು ರಂಗಪ್ಪನಾಯಕನ ಕಾಲದಲ್ಲಿ ಹೊಳೆನರಸೀಪುರದ ನಾಯಕನನ್ನು ಸೋಲಿಸಿ ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ಕ್ರಿ.ಶ. ೧೬ನೆಯ ಶತಮಾನದ ಹೊಳೆನರಸೀಪುರದ ಶಾಸನದಲ್ಲಿ[೧೬೫] ನಿಡುವಣಿ ಗ್ರಾಮದ ಕೆರೆಯ ನಿರ್ವಹಣೆಗಾಗಿ ಭೂಮಿಯನ್ನು ಬಿಟ್ಟು ಆ ಬಂಡಿಯ ನಿರ್ವಹಣೆಗೆ ರಾಚಯ್ಯ ಎಂಬುವವನಿಗೆ ಕೆರೆಯ ಅಚ್ಚುಕಟ್ಟಿನ ೫ ಗುಳ ತರಿ ಭೂಮಿಯನ್ನು ಮತ್ತು ೨೦ ಪಣ ನೀಡಿದ್ದನ್ನು ದಾಖಲಿಸಿದೆ.

ಅರಸೀಕೆರೆ ತಾಲೂಕಿನ ಜಾವಗಲ್‌ನಲ್ಲಿ ಕ್ರಿ.ಶ. ೧೫೧೫ರಿಂದ ಜಾವಗಲ್ ಪಾಳೆಯಗಾರರಾದ ಚನ್ನ, ಅವನ ಮಗ ತಿಮ್ಮ, ಇವನ ಮಗ ನಂಜೇಂದ್ರ ಉರುಪ್ ರಾಯಣ್ಣ ಮತ್ತು ಇವನ ಮಗ ಭೈರವ ಆಳಿದ್ದರು. ಇವರ ಕಾಲದಲ್ಲಿ ಜಾವಗಲ್ಲಿಗೆ ಯದುಕುಲ ಎಂದು ಕರೆಯುತ್ತಿದ್ದರು. ಈ ನಾಯಕರ ಆಳ್ವಿಕೆಯಲ್ಲಿಯೇ ಭೈರಸಮುದ್ರವೆಂಬ ಕೆರೆಯನ್ನು ಇಲ್ಲಿ ಕಟ್ಟಿಸಿದ ಉಲ್ಲೇಖ ಸಿಗುತ್ತದೆ. ಕ್ರಿ.ಶ. ೧೫೧೫ರ ಜಾವಗಲ್ ಶಾಸನದಲ್ಲಿ[೧೬೬] ಭೈರಭೂಪಾಲ ಸಮಸ್ತ ಪ್ರಾಣಿಗಳಿಗೂ ಉಪಯೋಗವಾಗುವಂತೆ ಜಾವಗಲ್‌ನ ದಕ್ಷಿಣಕ್ಕೆ ಬಯಿರಸಮುದ್ರವೆಂಬ ಮಹಾತಟಾಕವನ್ನು ನಿರ್ಮಿಸಿದ. ಹಾಗೂ ಹಳೆಯ ಚಿಕ್ಕಕೆರೆಯನ್ನು ವಿಸ್ತರಿಸಿ, ಹೊಸದಾಗಿ ಕಾಲುವೆಯನ್ನು ತೋಡಿಸಿದ ಬಗ್ಗೆಯೂ ತಿಳಿದುಬರುತ್ತದೆ. ಕೆರೆ ಕಟ್ಟಿಸಿದವರ ಹೆಸರು ಶಾಶ್ವತವಾಗಿ ಉಳಿಯಲೆಂದು ನಿರ್ಮಾತೃವಿನ ಹೆಸರಿನೊಂದಿಗೆ ಕರೆದಿರುವುದು ಗಮನಾರ್ಹ.

ಚನ್ನರಾಯಪಟ್ಟಣ ತಾಲೂಕಿನ ಶಾಸನಗಳಲ್ಲಿ ಮೈಸೂರು ಒಡೆಯ ಆಳ್ವಿಕೆಗೆ ಸೇರಿದ ಕೆಲವು ಶಾಸನಗಳು ಕಾನಕಾನಹಳ್ಳಿ ಪ್ರಭುಗಳನ್ನು ಉಲ್ಲೇಖಿಸುತ್ತವೆ. ಇವರಲ್ಲಿ ಚೆನ್ನವೀರಯ್ಯನ ಮಗ ದೊಡ್ಡಯ್ಯನು ೧ನೆಯ ಕಂಠೀರವ ನರಸರಾಜ ಒಡೆಯನ ಬೆಂಬಲಿಗನಾಗಿದ್ದನು. ಬಿಜಾಪುರ ಮತ್ತು ಪಿರಿಯಾಪಟ್ಟಣದ ಕಾಳಗದಲ್ಲಿ ಭಾಗವಹಿಸಿದ್ದನು. ಆತನ ನಿಷ್ಠೆ ಪರಾಕ್ರಮಗಳಿಂದ ಸುಪ್ರೀತನಾದ ಕಂಠೀರವ ನರಸರಾಜನು ಆತನಿಗೆ ಪ್ರತಿಫಲವಾಗಿ ಚನ್ನರಾಯಪಟ್ಟಣವನ್ನು ನೀಡಿದನು. ಆತನಿಗೆ ಚನ್ನವೊಡೆಯ ಮತ್ತು ಬಸಯ್ಯರೆಂಬ ಇಬ್ಬರು ಮಕ್ಕಳಿದ್ದು ಅವರು ಅನಂತರ ಕಾಲದ ಒಡೆಯರ ಅದೀನ ಅಧಿಕಾರಿಗಳಾಗಿ ದೇವಾಲಯ, ಕೆರೆ, ಕೊಳ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು. ಕ್ರಿ.ಶ. ೧೬೪೮ರ ಚನ್ನರಾಯಪಟ್ಟಣದ ಶಾಸನದಲ್ಲಿ[೧೬೬] ೩ ಅಂಕಣದ ದೇವಸ್ಥಾನ, ಮುಂಭಾಗದಲ್ಲಿ ಉಯ್ಯಾಲೆ ಕಂಬ, ಸಂಧ್ಯಾಮಂಟಪ, ಕೆರೆ ಮತ್ತು ಬಾವಿಗಳನ್ನು ಕಟ್ಟಿಸಿದುದರ ಮಾಹಿತಿಗಳಿವೆ. ಹೀಗೆ ಮೈಸೂರು ಒಡೆಯರ ಆಳ್ವಿಕೆಯ ಕಾಲದಲ್ಲಿ ಕಾನಕಾನಹಳ್ಳಿ ಪ್ರಭುಗಳು ಪ್ರಮುಖ ಪಾತ್ರ ವಹಿಸಿದರು.

ಜಿಲ್ಲೆಯಲ್ಲಿ ಕದಂಬರು ಮತ್ತು ಗಂಗರ ಕಾಲದ ಶಾಸನಗಳು ದೊರಕಿದ್ದು, ಹೊಯ್ಸಳರ ಪೂರ್ವದಲ್ಲಿ ಈ ಪರಿಸರದಲ್ಲಿ ಕೆರೆಕಟ್ಟೆಗಳು ನಿರ್ಮಾಣವಾಗಿದ್ದು, ಕೃಷಿಗೆ ಚಾಲನೆ ದೊರಕಿತ್ತು ಎಂಬುದು ಸ್ಪಷ್ಟವಾಗುತ್ತದೆ. ಮುಂದೆ ವಿನಯಾದಿತ್ಯ ಮತ್ತು ಎರೆಯಂಗರ ಕಾಲದ ಶಾಸನಗಳ ದಾನಗಳನ್ನು ಹೇಳುವಾಗ, ಹೊಸದಾಗಿ ನಿರ್ಮಾಣಗೊಂಡ ಕೆರೆಗಳೊಂದಿಗೆ ಅನೇಕ ಹಳೆಯ ಕೆರೆಕಟ್ಟೆಗಳ ಉಲ್ಲೇಖ ಮಾಡುತ್ತವೆ. ವಿನಯಾದಿತ್ಯನಿಂದ ಪ್ರಾರಂಭಿಸಿ, ಕೆರೆ ನಿರ್ಮಾಣ ಸಂಖ್ಯೆ ಹೆಚ್ಚುತ್ತಾ ಹೋಗಿ, ಇಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಈ ಪ್ರದೇಶದಲ್ಲಿ ಅದು ಗರಿಷ್ಠ ಸಂಖ್ಯೆಯನ್ನು ತಲುಪಿತು. ಇಮ್ಮಡಿ ನರಸಿಂಹನ ನಂತರದಲ್ಲಿ ಸ್ವಲ್ಪ ಕಡಿಮೆಯಾಗಿ, ಹಳೆಯ ಕೆರೆಗಳ ನಿರ್ವಹಣೆಯ

ಕಡೆಗೆ ಹೆಚ್ಚಿನ ಗಮನ ನೀಡಿರುವುದು ಕಂಡುಬರುತ್ತದೆ. ವಿಜಯನಗರದ ಅರಸರ ಕಾಲದಲ್ಲಿ ಮತ್ತೆ ಕೆರೆ ನಿರ್ಮಾಣ ಮತ್ತು ನಿರ್ವಹಣೆಗೆ ಹೆಚ್ಚಿನ ಚಾಲನೆ ದೊರೆತಂತೆ ಕಂಡುಬರುತ್ತದೆ. ಸ್ಥಳೀಯ ಪಾಳೆಗಾರರು ಕೂಡ ಕೆರೆ ನಿರ್ಮಾಣದ ಕಡೆ ಗಮನ ನೀಡಿರುವಂತೆ ತಿಳಿದುಬರುತ್ತದೆ.

ಒಟ್ಟಾರೆಯಾಗಿ ಈ ಮೇಲಿನ ಎಲ್ಲಾ ರಾಜಮನೆತನಗಳು, ಪಾಳೆಪಟ್ಟುಗಳು ಹಾಸನ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿ ನೀರಾವರಿಯಂತಹ ಜನಪರ ಕಾರ್ಯಗಳಲ್ಲಿ ತೊಡಗಿದ್ದರು. ಎಂಬುದಕ್ಕೆ ಅವರು ಬಿಟ್ಟು ಹೋಗಿರುವ ಕೆರೆಗಳು ಸಾಕ್ಷಿಯಾಗಿವೆ.

ಅಡಿಟಿಪ್ಪಣಿಗಳು

೧. ಮಳಲಿ ವಸಂತಕುಮಾರ್(ಪ್ರ.ಸಂ), ೧೯೯೬: ಹೊಯ್ಸಳ ಸಂಪದ, ಪು.೬

೨. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯ ವರದಿ, ೨೦೧೧-೧೨, ಹಾಸನ

೩. ಅಂಬಳಿಕೆ ಹಿರಿಯಣ್ಣ(ಪ್ರ.ಸಂ), ೨೦೦೯: ಕನ್ನಡ ವಿಷಯ ವಿಶ್ವಕೋಶ, ಭೂಗೋಳ ವಿಜ್ಞಾನ, ಪು.೧೧೬೧

೪. ಅದೇ

೫. ಗೊರೂರು ರಾಮಸ್ವಾಮಿ ಅಯ್ಯಂಗಾರ್, ೧೯೭೭: ಹಾಸನ ಜಿಲ್ಲೆ ದರ್ಶನ, ಪು.೧೨

೬. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯ ವರದಿ, ೨೦೧೧-೧೨, ಹಾಸನ

೭. ಅಂಬಳಿಕೆ ಹಿರಿಯಣ್ಣ(ಪ್ರ.ಸಂ), ಪೂರ್ವೋಕ್ತ, ಪು.೧೧೬೧

೮. ಸಣ್ಣ ನೀರಾವರಿ ಇಲಾಖೆಯ ವರದಿ, ೨೦೧೧, ಹಾಸನ

೯. ಉದಯರವಿ, ೨೦೧೦: ಹಾಸನ ಜಿಲ್ಲಾ ವೈಶಿಷ್ಟ್ಯ, ಪು.೨೧

೧೦. ಗೋಪಾಲ್ ಆರ್.(ಸಂ), ೨೦೧೦: ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.೫೭೧

೧೧. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೩, ೧೯೮೬ : ಪು.೬೩೫

೧೨. ಶಿವತಾರಕ್ ಕೆ.ಬಿ., ೨೦೦೧: ಕರ್ನಾಟಕ ಪುರಾತತ್ವ ನೆಲೆಗಳು, ಪು.೪

೧೩. ಅದೇ

೧೪. ಅದೇ, ಪು.೬೬೫, ೬೬೭

೧೫. ಅದೇ

೧೬. ಅದೇ

೧೭. ಅದೇ

೧೮. ಮಳಲಿ ವಸಂತಕುಮಾರ್(ಪ್ರ.ಸಂ), ಪೂರ್ವೋಕ್ತ, ಪು.೫೯

೧೯. ಅದೇ, ಪು.೬೦

೨೦. ಹನುಮನಾಯಕ, ೨೦೦೫: ಅರಸೀಕೆರೆ ತಾಲೂಕು ಚಲುವನಹಳ್ಳಿಯ ಬೃಹತ್ ಶಿಲಾಯುಗದ ನೆಲೆ, ಇತಿಹಾಸ ದರ್ಶನ, ಸಂ–೨೭, ಪು.೧

೨೧. ಪ್ರವೀಣ್ ಬೆಳ್ತಂಗಡಿ, ೨೦೧೨: ಅರಸೀಕೆರೆ ತಾಲೂಕಿನ ಪ್ರಾಗೈತಿಹಾಸಿಕ ನೆಲೆಗಳು, ಇತಿಹಾಸ ದರ್ಶನ, ಸಂ–೨೭, ಪು.೧೩

೨೨. ಮಳಲಿ ವಸಂತಕುಮಾರ್(ಪ್ರ.ಸಂ), ಪೂರ್ವೋಕ್ತ, ಪು.೫೪

೨೩. ಹನುಮನಾಯಕ, ೨೦೦೯: ಅರಸೀಕೆರೆ ತಾಲೂಕಿನ ಬಂಡೆ ಚಿತ್ರಗಳು, ಇತಿಹಾಸ ದರ್ಶನ, ಸಂ–೨೪, ಪು.೯–೧೦

೨೪. ವಾಸುದೇವನ್ ಸಿ.ಎಸ್., ೨೦೦೧: ಹಂಪಿ ಪರಿಸರದ ಕೆರೆಗಳು, ಪು.೬

೨೫. ಧ್ರುವನಾರಾಯಣ ಎಂ.(ಅನು), ೨೦೦೧: ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ(ಮೂಲ: ಕೊಟ್ರಯ್ಯ ಸಿ.ಟಿ.ಎಂ.), ಪು.೩

೨೬. ಅದೇ

೨೭. ಅದೇ, ಪು.೪

೨೮. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು.೮

೨೯. ಸಚ್ಚಿದಾನಂದ ಶಂಕರಭಾರತಿ ಸ್ವಾಮಿಗಳು, ೨೦೦೫: ಕೌಟಿಲ್ಯನ ಅರ್ಥಶಾಸ್ತ್ರ, ಪು.೮೫

೩೦. ಬಸವರಾಜು ಕುಂಚೂರು, ೨೦೦೯: ನಮ್ಮೂರ ಕೆರೆಗಳು, ಪು.೧೧

೩೧. ಧ್ರುವನಾರಾಯಣ ಎಂ.(ಅನು), ಪೂರ್ವೋಕ್ತ, ಪು.೬

೩೨. ಶಂಕರಪ್ಪ ಬಡಿಗೇರ, ೨೦೧೫: ಗದಗ ಜಿಲ್ಲೆಯ ಕೆರೆ ಮತ್ತು ಬಾವಿಗಳು(ಚಾರಿತ್ರಿಕ ಅಧ್ಯಯನ), ಪಿ.ಎಚ್.ಡಿ. ಅಪ್ರಕಟಿತ ಮಹಾಪ್ರಬಂಧ, ಪು.೬೮

೩೩. ಎಸ್.ಐ.ಐ. IX, i. 226 ; ಚಿದಾನಂದಮೂರ್ತಿ ಎಂ, ೧೯೯೬: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೪೦೮

೩೪. ಎ.ಕ. ಸಂ.೮, ೧೯೮೪: ಹಾಸನ ೧೪, ಪು.೨೪೮; ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು.೪೦೮

೩೫. ಶ್ರೀನಿವಾಸ ಸಿರನೂರಕರ್, ೨೦೦೫: ವಿಜ್ಞಾನೇಶ್ವರ ಮಿತಾಕ್ಷರ, ಪು.೭೩

೩೬. ಬಸವರಾಜು ಕುಂಚೂರು, ಪೂರ್ವೋಕ್ತ, ಪು.೫೮

೩೭. ಬಸವರಾಜು ಎಲ್, ೨೦೦೦: ಸರಳಸಿದ್ಧರಾಮಚರಿತೆ, ಪು.೪೪

೩೮. ಚಂದ್ರಶೇಖರಯ್ಯ ಬಿ.ಎಂ., ೨೦೦೫: ಕರ್ನಾಟಕ ಸಾಂಸ್ಕೃತಿಕ ಇತಿಹಾಸ ಪರಂಪರೆ, ಪು.೧೨೧

೩೯. ನೀಲತ್ತಹಳ್ಳಿ ಕಸ್ತೂರಿ(ಅನು), ೨೦೦೦: ಕರ್ನಾಟಕದಲ್ಲಿ ಕೆರೆ ನೀರಾವರಿ(ಮೂಲ : ದೀಕ್ಷಿತ್ ಜಿ.ಎಸ್., ಕುಪ್ಪುಸ್ವಾಮಿ ಜಿ.ಆರ್., ಮೋಹನ್ ಎಸ್.ಕೆ.), ಪು.೨೭

೪೦. ಧ್ರುವನಾರಾಯಣ ಎಂ.(ಅನು), ಪೂರ್ವೋಕ್ತ, ಪು.೩; ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು.೧೨

೪೧. ಹಯವದನರಾವ್ ಸಿ., ಮೈಸೂರು ಗ್ಯಾಸೆಟಿಯರ್, ಸಂ–೧, ಪು.೧೦; ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು.೧೨

೪೨. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು.೧೩

೪೩. ಅದೇ, ಪು.೧೫

೪೪. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪೂರ್ವೋಕ್ತ, ಪು.೭

೪೫. ಅದೇ

೪೬. ಅದೇ

೪೭. ಅದೇ

೪೮. ಎಂ.ಎ.ಆರ್. ೧೯೨೯: ನಂ.೧, ಪು.೨೧೧

೪೯. ಅದೇ

೫೦. ಎ.ಕ. ಸಂ.೭(ಹಳೆಯ), ಶಿವಮೊಗ್ಗ ೧೭೬; ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು.೪೦೮

೫೧. ನೀಲತ್ತಹಳ್ಳಿ ಕಸ್ತೂರಿ(ಅನು), ಪೂರ್ವೋಕ್ತ, ಪು.೨೯

೫೨. ಎ.ಕ. ಸಂ.೯, ೧೯೯೦: ಬೇಲೂರು ೨೩೬, ಪು.೨೨೨

೫೩. ಅದೇ, ಸಕಲೇಶಪುರ ೪೫, ಪು.೫೨೭

೫೪. ರಮೇಶ್ ಕೆ.ವಿ., ೧೯೮೪: ಇನ್ಸ್‌ಕ್ರಿಪ್ಷನ್ಸ್ ಆಫ್ ವೆಸ್ಟರ್ನ್ ಗಂಗಾಸ್, ಪು.೧೧೭, ೨೧೬, ೨೪೪, ೨೪೫, ೨೪೮

೫೫. ರಮೇಶ್ ಕೆ.ವಿ., ಪೂರ್ವೋಕ್ತ, ಪು.೧೧೪, ೧೧೭

೫೬. ಎಂ.ಎ.ಆರ್. ೧೯೧೦: ಪು.೧೭; ನೀಲತ್ತಹಳ್ಳಿ ಕಸ್ತೂರಿ(ಅನು), ಪೂರ್ವೋಕ್ತ, ಪು.೩೦

೫೭. ಬಸವರಾಜು ಕುಂಚೂರು, ೨೦೦೯: ಪೂರ್ವೋಕ್ತ, ಪು.೧೭

೫೮. ಎ.ಕ. ಸಂ.೧೨(ಹಳೆಯ), ೧೯೦೪: ತುಮಕೂರು ೧೪೦, ಪು.೭೦; ನಂಜುಂಡಸ್ವಾಮಿ(ಸಂ), ೨೦೦೨ : ಕಲ್ಪಸಿರಿ, ಪು.೧೧೫

೫೯. ಯೋಗೇಶ್ವರಪ್ಪ ಡಿ.ಎನ್., ೨೦೦೨: ಕೆರೆಗಳು, ಕಲ್ಪಸಿರಿ, ಪು.೧೧೫

೬೦. ಎ.ಕ. ಸಂ.೧೦, ೧೯೯೭: ಚನ್ನರಾಯಪಟ್ಟಣ ೭೭, ಪು.೫೧೯

೬೧. ಎ.ಇ. ೩೨, ೧೯೫೭–೫೮, ಪು.೩೧೩

೬೨. ಎಸ್.ಐ.ಐ. ೧೧(೧), ನಂ.೭, ಪು.೪

೬೩. ಅದೇ, ನಂ.೯, ಪು.೫

೬೪. ಎ.ಕ. ಸಂ.೮, ೧೯೮೪: ಹೊಳೆನರಸೀಪುರ ೫೦, ಪು.೨೯

೬೫. ಎ.ಕ. ಸಂ.೧೦, ಚನ್ನರಾಯಪಟ್ಟಣ ೧೪೦, ಪು.೫೮೯

೬೬. ಎ.ಕ. ಸಂ.೯, ಬೇಲೂರು ೧೯೦, ಪು.೧೭೭

೬೭. ಅದೇ, ಬೇಲೂರು ೨೪೫, ಪು.೨೩೫

೬೮. ಅದೇ, ಬೇಲೂರು ೨೪೯, ಪು.೨೩೭

೬೯. ಅದೇ, ಬೇಲೂರು ೧೯೨, ಪು.೧೮೦

೭೦. ಅದೇ, ಬೇಲೂರು ೫೪೯, ಪು.೪೭೩

೭೧. ಎ.ಕ. ಸಂ.೮, ಆಲೂರು ೧೦, ಪು.೪೩೯

೭೨. ಉದಯರವಿ, ೨೦೧೦: ಹಾಸನ ಜಿಲ್ಲಾ ವೈಶಿಷ್ಟ್ಯ, ಪು.೧೦

೭೩. ಎ.ಕ. ಸಂ.೮, ಹೊಳೆನರಸೀಪುರ ೧೩೫, ಪು.೯೬

೭೪. ಉದಯರವಿ, ಪೂರ್ವೋಕ್ತ, ಪು.೧೦

೭೫. ಅದೇ

೭೬. ಎ.ಕ. ಸಂ.೯, ಬೇಲೂರು ೩೨೦, ಪು.೨೯೬

೭೭. ಅದೇ, ಬೇಲೂರು ೩೩೮, ಪು.೩೧೭

೭೮. ಎ.ಕ. ಸಂ.೧೦, ಅರಸೀಕೆರೆ ೨೫೫, ಪು.೩೨೭

೭೯. ಅದೇ, ಅರಸೀಕೆರೆ ೨೫೪, ಪು.೩೨೬

೮೦. ಅದೇ, ಅರಸೀಕೆರೆ ೩೮, ಪು.೫೦

೮೧. ಎ.ಕ. ಸಂ.೯, ಬೇಲೂರು ೪೭೩, ಪು.೪೯೪

೮೨. ಅದೇ, ಬೇಲೂರು ೪೮೪, ಪು.೪೪೨

೮೩. ಎ.ಕ. ಸಂ.೧೦, ಅರಸೀಕೆರೆ ೭೦ ಪು.೫೦೨

೮೪. ಅದೇ, ಅರಸೀಕೆರೆ ೩೨೧, ಪು.೩೯೮

೮೫. ಅದೇ, ಅರಸೀಕೆರೆ ೫೭, ಪು.೮೩

೮೬. ಎ.ಕ. ಸಂ.೯, ಬೇಲೂರು ೧೬೮ ಪು.೧೨೪

೮೭. ಎ.ಕ. ಸಂ.೨(ಹಳೆಯ), ೧೯೭೩: ಶ್ರವಣಬೆಳಗೊಳ ೫೫೪, ಪು.೩೪೧

೮೮. ಅದೇ, ಶ್ರವಣಬೆಳಗೊಳ ೧೬೨

೮೯. ಎ.ಕ. ಸಂ.೧೦, ಅರಸೀಕೆರೆ ೭೩, ಪು.೯

೯೦. ಅದೇ, ಅರಸೀಕೆರೆ ೬೦, ಪು.೮೮

೯೧. ಎ.ಕ. ಸಂ.೯, ಬೇಲೂರು ೪೩೬, ಪು.೫೮೭

೯೨. ಅದೇ, ಬೇಲೂರು ೧೦೬, ಪು.೬೪

೯೩. ಎ.ಕ. ಸಂ.೨(ಹಳೆಯ), ಬೊಮ್ಮೇನಹಳ್ಳಿ, ಪು.೩೩೮

೯೪. ಎ.ಕ. ಸಂ.೮, ಹೊಳೆನರಸೀಪುರ ೯೮, ಪು.೬೧

೯೫. ಎ.ಕ. ಸಂ.೯, ಬೇಲೂರು ೩೪೦, ಪು.೩೧೯

೯೬. ಎ.ಕ. ಸಂ.೧೦, ಚನ್ನರಾಯಪಟ್ಟಣ ೬೪, ಪು.೪೯೧

೯೭. ಎ.ಕ. ಸಂ.೨, ಶ್ರವಣಬೆಳಗೊಳ ೫೦೪, ಪು.೩೧೭

೯೮. ಸ್ವಸ್ತಿ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಜಿ, ೧೯೮೮: ಶ್ರವಣಬೆಳಗೊಳದ ಶಾಸನಗಳು, ಪು.೧೧೦

೯೯. ಅದೇ, ಶ್ರವಣಬೆಳಗೊಳ ೫೫೭, ಪು.೩೪೦

೧೦೦. ಎ.ಕ. ಸಂ.೧೦, ಚನ್ನರಾಯಪಟ್ಟಣ ೧೩೦, ಪು.೫೬೬

೧೦೧. ಅದೇ, ಅರಸೀಕೆರೆ ೧೭೪, ಪು.೨೨೭

೧೦೨. ಅದೇ, ಅರಸೀಕೆರೆ ೧೪೦, ಪು.೧೮೪

೧೦೩. ಎ.ಕ. ಸಂ.೯, ಬೇಲೂರು ೪೧೧, ಪು.೩೮೯

೧೦೪. ಅದೇ, ಬೇಲೂರು ೪೫೬, ಪು.೪೨೩

೧೦೫.ಅದೇ, ಬೇಲೂರು ೧೩೬, ಪು.೯೩ ; ಎಂ.ಎ.ಆರ್. ೧೯೩೭: ನಂ.೨೮

೧೦೬. ಎ.ಕ. ಸಂ.೧೦, ಚನ್ನರಾಯಪಟ್ಟಣ ೭೬, ಪು.೫೦೮

೧೦೭. ಅದೇ, ಅರಸೀಕೆರೆ ೧೮೨, ಪು.೨೩೭

೧೦೮. ಅದೇ, ಅರಸೀಕೆರೆ ೯೬, ಪು.೧೩೦

೧೦೯. ಅದೇ, ಚನ್ನರಾಯಪಟ್ಟಣ ೭೫, ಪು.೫೦೩

೧೧೦. ಎ.ಕ. ಸಂ.೯, ಬೇಲೂರು ೨೨೫, ಪು.೨೦೮

೧೧೧. ಎ.ಕ. ಸಂ.೧೦, ಚನ್ನರಾಯಪಟ್ಟಣ ೧೯, ಪು.೪೨೪

೧೧೨. ಅದೇ, ಚನ್ನರಾಯಪಟ್ಟಣ ೧೮, ಪು.೪೨೦

೧೧೩. ಎ.ಕ. ಸಂ.೯, ಬೇಲೂರು ೨೪೦, ಪು.೨೨೬

೧೧೪. ಅದೇ, ಬೇಲೂರು ೪೩೮, ಪು.೪೮೯

೧೧೫. ಎ.ಕ. ಸಂ.೧೦, ಚನ್ನರಾಯಪಟ್ಟಣ ೧೨೨, ಪು.೫೫೫

೧೧೬. ಅದೇ, ಅರಸೀಕೆರೆ ೫೫, ಪು.೧೩೦; ಲಲಿತಾಂಬ ಎನ್.ಆರ್., ೨೦೧೧: ಮಧ್ಯಕಾಲೀನ ಕರ್ನಾಟಕದ ಸಾಮಾಜಿಕ ಸಂಚಲನ, ಪು.೬೨

೧೧೭. ಎ.ಕ. ಸಂ.೯, ಬೇಲೂರು ೨೪೪, ಪು.೨೩೪

೧೧೮. ಎ.ಕ. ಸಂ.೮, ಅರಕಲಗೂಡು ೧೩೨, ಪು.೧೮೫

೧೧೯. ಎ.ಕ. ಸಂ.೧೦, ಅರಸೀಕೆರೆ ೮೮, ಪು.೧೧೭

೧೨೦. ಅದೇ, ಅರಸೀಕೆರೆ ೨೮೯, ಪು.೩೬೯

೧೨೧. ಅದೇ, ಅರಸೀಕೆರೆ ೨೧೪, ಪು.೨೬೩

೧೨೨. ಅದೇ, ಅರಸೀಕೆರೆ ೨೬೨, ಪು.೩೩೧

೧೨೩.ಅದೇ, ಅರಸೀಕೆರೆ ೧೯೬, ಪು.೨೫೧

೧೨೪. ಎಂ.ಎ.ಆರ್. ೧೯೧೦ : ಪ್ಯಾರಾ ೧೧೦, ಪು.೫೧; ಎ.ಕ. ಸಂ.೯, ಬೇಲೂರು ೧೩೪, ಪು.೮೯

೧೨೫. ಎ.ಕ. ಸಂ.೧೦, ಅರಸೀಕೆರೆ ೧, ಪು.೯೦

೧೨೬. ಅದೇ, ಅರಸೀಕೆರೆ ೬೨, ಪು.೯೮

೧೨೭. ಅದೇ, ಚನ್ನರಾಯಪಟ್ಟಣ ೯೪, ಪು.೫೩೨

೧೨೮. ಎ.ಕ. ಸಂ.೮, ಅರಕಲಗೂಡು ೧೫೮, ಪು.೨೦೫

೧೨೯. ಎ.ಕ. ಸಂ.೧೦, ಅರಸೀಕೆರೆ ೧೧೮, ಪು.೧೫೫

೧೩೦. ಎ.ಕ. ಸಂ.೯, ಬೇಲೂರು ೪೦೩, ಪು.೩೬೯

೧೩೧. ಎ.ಕ. ಸಂ.೧೦, ಅರಸೀಕೆರೆ ೩೧೯, ಪು.೩೯೭

೧೩೨. ಎ.ಕ. ಅರಸೀಕೆರೆ ೨೨೬, ಪು.೨೭೭

೧೩೩. ಎ.ಕ. ಸಂ.೯, ಬೇಲೂರು ೪೨೦, ಪು.೩೯೮

೧೩೪. ಎ.ಕ. ಸಂ.೧೦, ಅರಸೀಕೆರೆ ೩೧೨, ಪು.೩೭೭

೧೩೫. ಎ.ಕ. ಸಂ.೮, ಅರಕಲಗೂಡು ೮೩, ಪು.೧೫೫

೧೩೬. ಅದೇ, ಹೊಳೆನರಸೀಪುರ ೭೧, ಪು.೩೯

೧೩೭. ಎ.ಕ. ಸಂ.೧೦, ಚನ್ನರಾಯಪಟ್ಟಣ ೧೧೨, ಪು.೫೪೮

೧೩೮. ಅದೇ, ಚನ್ನರಾಯಪಟ್ಟಣ ೧೧೧, ಪು.೫೪೬

೧೩೯. ಎ.ಕ. ಸಂ.೯, ಬೇಲೂರು ೨೫೬, ಪು.೨೪೧

೧೪೦. ಎ.ಕ. ಸಂ.೧೦, ಚನ್ನರಾಯಪಟ್ಟಣ ೭೦, ಪು.೪೯೮

೧೪೧. ಅದೇ, ಚನ್ನರಾಯಪಟ್ಟಣ ೪೬, ಪು.೪೭೨

೧೪೨. ಎ.ಕ. ಸಂ.೯, ಬೇಲೂರು ೪೨೨, ಪು.೩೯೮

೧೪೩. ಎ.ಕ. ಸಂ.೧೦, ಚನ್ನರಾಯಪಟ್ಟಣ ೧೩೪, ಪು.೫೮೩

೧೪೪. ಅದೇ, ಚನ್ನರಾಯಪಟ್ಟಣ ೫೩, ಪು.೪೮೨

೧೪೫. ಎ.ಕ. ಸಂ.೯, ಬೇಲೂರು ೨೨೨, ಪು.೨೦೭

೧೪೬. ಎ.ಕ. ಸಂ.೧೦, ಚನ್ನರಾಯಪಟ್ಟಣ ೧೨೯, ಪು.೫೬೬

೧೪೭. ಅದೇ, ಅರಸೀಕೆರೆ ೨೮೮, ಪು.೩೫೬

೧೪೮. ಎ.ಕ. ಸಂ.೯, ಬೇಲೂರು ೪೨೫, ಪು.೪೦೧

೧೪೯. ಎ.ಕ. ಸಂ.೮, ಹೊಳೆನರಸೀಪುರ ೪೨, ಪು.೨೦

೧೫೦. ನೀಲತ್ತಹಳ್ಳಿ ಕಸ್ತೂರಿ(ಅನು), ಪೂರ್ವೋಕ್ತ, ಪು.೫೦

೧೫೧. ಎ.ಕ. ಸಂ.೮, ಅರಕಲಗೂಡು ೧೦೭, ಪು.೧೭೩

೧೫೨. ಅದೇ, ಅರಕಲಗೂಡು ೧೧, ಪು.೧೦೮

೧೫೩. ಎ.ಕ. ಸಂ.೧೦, ಅರಸೀಕೆರೆ ೧೫೩, ಪು.೧೯೯

೧೫೪. ಎ.ಕ. ಸಂ.೯, ಬೇಲೂರು ೪೯೦, ಪು.೪೪೫

೧೫೫. ಅದೇ, ಬೇಲೂರು ೪೪೮, ಪು.೪೧೮

೧೫೬. ಎ.ಕ. ಸಂ.೧೦, ಅರಸೀಕೆರೆ ೧೯೮, ಪು.೫೫೩

೧೫೭. ಎ.ಕ. ಸಂ.೮, ಅರಕಲಗೂಡು ೧೧೩, ಪು.೧೭೭

೧೫೮. ಎ.ಕ. ಸಂ.೧೦, ಅರಸೀಕೆರೆ ೨೮೫, ಪು.೩೪೮

೧೫೯. ಅದೇ, ಅರಸೀಕೆರೆ ೨೮೦, ಪು.೩೪೪

೧೬೦. ಎ.ಕ. ಸಂ.೯, ಬೇಲೂರು ೪೭೫, ಪು.೪೩೫

೧೬೧. ಎ.ಕ. ಸಂ.೧೦, ಅರಸೀಕೆರೆ ೨೦೬, ಪು.೨೫೮

೧೬೨. ಅದೇ, ಅರಸೀಕೆರೆ ೨೬೧, ಪು.೩೮೯

೧೬೩. ಎ.ಕ. ಸಂ.೯, ಬೇಲೂರು ೧೭೫, ಪು.೧೫೬

೧೬೪. ಅದೇ, ಬೇಲೂರು ೧೪೮, ಪು.೧೦೯

೧೬೫. ಎ.ಕ. ಸಂ.೮, ಹೊಳೆನರಸೀಪುರ ೧೨೮, ಪು.೯೩

೧೬೬. ಎ.ಕ. ಸಂ.೧೦, ಅರಸೀಕೆರೆ ೧೭೩, ಪು.೩೩೯

೧೬೭. ಅದೇ, ಚನ್ನರಾಯಪಟ್ಟಣ ೧೪, ಪು.೪೧೯

ಅಧ್ಯಾಯ – ಮೂರು

ಕೆರೆಗಳು

ಅಧ್ಯಾಯ - ಮೂರು

ಕೆರೆಗಳು

ಹಾಸನ ಜಿಲ್ಲೆ ಬಡವರ ಊಟಿ ಎಂದೇ ಪ್ರಸಿದ್ಧವಾಗಿದೆ. ತನ್ನದೇ ಆದ ಇತಿಹಾಸ ಹೊಂದಿರುವ ಜಿಲ್ಲೆಯಲ್ಲಿ ಅಸಂಖ್ಯಾತ ಕೆರೆ, ಕಟ್ಟೆ ಮತ್ತು ಕುಂಟೆಗಳು ನಿರ್ಮಾಣಗೊಂಡಿವೆ. ಇವುಗಳಲ್ಲಿ ಬಹುಪಾಲು ಪ್ರಾಚೀನ ಕಾಲದವು. ಇಲ್ಲಿನ ಅನೇಕ ಕೆರೆಗಳು ಇಂದಿಗೂ ಕೃಷಿಗೆ ನೀರನ್ನು ಪೂರೈಸುತ್ತಿವೆ. ಇಲ್ಲಿ ಸುಮಾರು ೬೦೬೬ ಕ್ಕೂ ಮಿಗಿಲಾದ ಸಂಖ್ಯೆಯಲ್ಲಿ ಕೆರೆಗಳಿವೆ. ಹೆಚ್ಚಿನ ಕೆರೆಗಳು ಹೊಯ್ಸಳ ಕಾಲಕ್ಕೆ ಸಂಬಂಧಿಸಿದವುಗಳಾಗಿವೆ. ಈ ಕಾಲದ ಕೆರೆಗಳನ್ನು ಶಾಸನಾಧಾರ ಮತ್ತು ತೂಬುಗಳ ರಚನಾವಿಧಾನಗಳಿಂದ ಗುರುತಿಸಬಹುದು. ಇನ್ನುಳಿದ ಕೆಲವು ಕೆರೆಗಳು ವಿಜಯನಗರ ಮತ್ತು ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟಿವೆ. ಹೊಯ್ಸಳರ ಕಾಲದ ಕೆಲವು ತೂಬುಗಳ ಮೇಲೆ ಶಾಸನಸಹಿತ ಉಬ್ಬುಶಿಲ್ಪಗಳು ಇರುವುದು ಗಮನಾರ್ಹ ಸಂಗತಿ. ಅಲ್ಲಿನ ಭೌಗೋಳಿಕ ಅಂಶಗಳನ್ನು ಗಮನಿಸಿಕೊಂಡು ಕೆರೆಗಳ ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಹಾಸನ ಜಿಲ್ಲೆಯ ಕ್ಷೇತ್ರಕಾರ್ಯ ಕೈಗೊಂಡು, ಅಲ್ಲಿ ಲಭ್ಯವಿರುವ ಮಾಹಿತಿಗಳನ್ನು ಸಂಗ್ರಹಿಸಿ ಶಾಸನಾಧಾರಗಳಿಂದ ಚರ್ಚಿಸಲಾಗಿದೆ.

ಕೆರೆಗಳನ್ನು ಕಟ್ಟಿಸುವುದು ಧಾರ್ಮಿಕ ಕಾರ್ಯವೆಂದು, ದೇವಾಲಯ ನಿರ್ಮಾಣದಷ್ಟೆ ಮಹೋನ್ನತ ಕಾರ್ಯವೆಂದು ನಮ್ಮ ಪರಂಪರೆಯ ನಂಬಿಕೆಯಾಗಿತ್ತು. ಧಾರ್ಮಿಕ ಭಾವನೆಗಳಿಂದಾಗಿ ಅಂದಿನ ನೀರಾವರಿ ಕಾರ್ಯಕ್ಕೆ ಚಾಲನೆ ದೊರೆಯಿತು. ಕೆರೆಗಳನ್ನು ಕಟ್ಟಿಸಿ ಅದನ್ನು ಜನರಿಗೆ ಸಮರ್ಪಿಸುವಾಗ ಅದಕ್ಕೊಂದು ಹೆಸರಿಡುವುದು ಸಾಮಾನ್ಯವಾಗಿತ್ತು. ಆ ಹೆಸರುಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದಾಗಿದೆ.

೧. ಸಮುದ್ರ, ಸಾಗರದೊಂದಿಗೆ ಬೆಸೆದುಕೊಂಡ ಕೆರೆಯ ಹೆಸರುಗಳು.

೨. ಗಾತ್ರ ಮತ್ತು ಆಕೃತಿಗನುಗುಣವಾದ ಕೆರೆಯ ಹೆಸರುಗಳು.

೩. ಧಾರ್ಮಿಕ ಮೂಲದ ಕೆರೆಯ ಹೆಸರುಗಳು

೪. ಸ್ತ್ರೀಮೂಲದ ಕೆರೆಯ ಹೆಸರುಗಳು

೫. ಬಿರುದು ಸೂಚಕ ಕೆರೆಯ ಹೆಸರುಗಳು

೬. ಸಸ್ಯ ಮತ್ತು ಪ್ರಾಣಿ ಮೂಲದ ಕೆರೆಯ ಹೆಸರುಗಳು

೭. ವೃತ್ತಿಮೂಲದ ಕೆರೆಯ ಹೆಸರುಗಳು.

೮. ಶ್ರೀಸಾಮಾನ್ಯರ ಕೆರೆಯ ಹೆಸರುಗಳು

೯. ಊರಿನ ಹೆಸರಿನೊಂದಿಗೆ ಬೆಸೆದುಕೊಂಡ ಕೆರೆಯ ಹೆಸರುಗಳು

೧. **ಸಮುದ್ರ, ಸಾಗರದೊಂದಿಗೆ ಬೆಳೆದುಕೊಂಡ ಕೆರೆಯ ಹೆಸರುಗಳು:** ರಾಜಮಹಾರಾಜರು ಕಟ್ಟಿಸಿದ ಕೆರೆಗಳನ್ನು ವೈಭವೀಕರಿಸಿ ಕರೆಯುತ್ತಿರುವುದು ವಾಡಿಕೆ. ಗಾತ್ರದಲ್ಲಿ ದೊಡ್ಡದಿದ್ದಾಗ ಸಾಗರ, ಸಮುದ್ರವೆಂಬ ಹೋಲಿಕೆಯಿಂದ ಕರೆಯುವ ಪರಿಪಾಟವಿತ್ತು. ಪ್ರಾಚೀನ ಕಾಲದಿಂದಲೂ ಇಲ್ಲಿನ ಕೆರೆಗಳಿಗೆ ವಿವಿಧ ಹೆಸರುಳಿವೆ. ಅವುಗಳೆಂದರೆ ಕೆರೆ, ಕಟ್ಟೆ, ತಟಾಕ, ಸಮುದ್ರ ಮೊದಲಾದ ಪದಗಳು ಈ ಪ್ರದೇಶದಲ್ಲಿ ದೊರೆತ ಸುಮಾರು ೫೦ಕ್ಕೂ ಹೆಚ್ಚು ಶಾಸನಗಳಿಂದ ತಿಳಿದುಬಂದಿದೆ.[೧] ಕೆರೆಗಳನ್ನು ಕಟ್ಟಿಸಿದಾಗ ವ್ಯಕ್ತಿಯ ಹೆಸರಿನ ಜೊತೆಗೆ ಸಾಗರ, ಸಮುದ್ರವೆಂಬ ಹೆಸರನ್ನು ಸೇರಿಸುವುದು ರೂಢಿಯಲ್ಲಿತ್ತು. ಉದಾಹರಣೆಗೆ ಬಿಟ್ಟಿಸಮುದ್ರ, ಗಂಗಸಮುದ್ರ, ಅಚ್ಚುತಸಮುದ್ರ, ರುದ್ರಸಮುದ್ರ, ವೀರಸಮುದ್ರಗಳೆಂದು ಕರೆಯುತ್ತಾರೆ.

೨. **ಗಾತ್ರ ಮತ್ತು ಆಕೃತಿಗನುಗುಣವಾದ ಕೆರೆಯ ಹೆಸರುಗಳು:** ಕೆರೆಯ ವಿಸ್ತೀರ್ಣತೆಯನ್ನು ಸೂಚಿಸುವ ಕೆಲವೊಂದು ಪದಗಳು ಕೆರೆಯ ಹೆಸರಿನ ಜೊತೆಯಲ್ಲಿ ಬಳಕೆಯಲ್ಲಿವೆ. ಉದಾಹರಣೆಗೆ ಹಿರಿಯಕೆರೆ ಚಿಕ್ಕಕೆರೆ ಮತ್ತು ಕನ್ನೆಗೆರೆ ಎಂಬ ಪದಗಳು ಕಂಡುಬರುತ್ತವೆ. ಹಾಸನ ಪರಿಸರದ ಗ್ರಾಮಗಳಲ್ಲಿ ೪ರಿಂದ ೫ ಕೆರೆಗಳು ಇದ್ದು ಕೆರೆಯ ಗಾತ್ರವನ್ನು ಆಧರಿಸಿ ಚಿಕ್ಕಕೆರೆ ಮತ್ತು ದೊಡ್ಡಕೆರೆ ಎಂದು ಗುರುತಿಸಲಾಗಿದೆ. ಈ ಹೆಸರಿನಿಂದ ಕರೆಯುವ ಪದ್ಧತಿ ಅಲ್ಲಿಯ ಜನರಲ್ಲಿ ಇಂದಿಗೂ ಪ್ರಚಲಿತದಲ್ಲಿದೆ. ಪ್ರಾನ್ಸಿಸ್ ಬುಕಾನನ್ ಕೆರೆ ಮತ್ತು ಕಟ್ಟೆಗಳನ್ನು ಹೀಗೆ ಗುರುತಿಸಿದ್ದಾನೆ. ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ನಿರ್ಮಿಸಲ್ಪಟ್ಟ ಚಿಕ್ಕ ಸರೋವರವನ್ನು ಕಟ್ಟೆ ಎಂದು, ಕೃಷಿ ಭೂಮಿಗೆ ನೀರುಣಿಸುವ ದೊಡ್ಡ ಸರೋವರವನ್ನು ಕೆರೆ ಎಂದು ಕರೆದಿದ್ದಾನೆ.[೨] ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ 'ಕೆರೆ' ಎಂದರೆ ದೊಡ್ಡದು. 'ಕಟ್ಟೆ' ಎಂಬುದು ಕೆರೆಗಿಂತ ಚಿಕ್ಕದು. 'ಕುಂಟೆ' ಮೇಲೆ ಹೇಳಿದ ಎರಡಕ್ಕಿಂತ ಚಿಕ್ಕದು ಎಂದು ಸ್ಥಳೀಯ ಜನರಿಂದ ತಿಳಿದುಬರುತ್ತದೆ.

೩. **ಧಾರ್ಮಿಕ ಮೂಲದ ಕೆರೆಯ ಹೆಸರುಗಳು:** ದೇವಾಲಯಗಳ ಧಾರ್ಮಿಕ ಆಚರಣೆಯಲ್ಲಿ ಕೆರೆಗಳ ಪಾತ್ರ ದೊಡ್ಡದು. ಶಾಸನಗಳಲ್ಲಿ 'ವಾಸುದೇವ ತೀರ್ಥ'[೩] 'ತೀರ್ಥದ' ಕೆರೆಗಳೆಂಬ[೪] ಮಾಹಿತಿಗಳಿವೆ. ಕೆಲವು ಕೆರೆಗಳಿಗೆ ದೇವಾಲಯದ ಹೆಸರುಗಳು ರೂಢಿಯಲ್ಲಿವೆ. ಉದಾಹರಣೆಗೆ ದೇವಿಕೆರೆ, ದೇವಿರಮ್ಮನ ಕೆರೆ, ಹೊನ್ನಮ್ಮನ ಕೆರೆ, ನಾರಣಘಟ್ಟ, ಮಧುಸೂಧನ ಕೆರೆ ಇವುಗಳು ಆಯಾಯ ದೇವಾಲಯಗಳಿಗೆ ಮೀಸಲಾದ ಕೆರೆಗಳಂತಿವೆ.

೪. **ಸ್ತ್ರೀಮೂಲದ ಕೆರೆಯ ಹೆಸರುಗಳು:** ಸ್ತ್ರೀಮೂಲದ ಹೆಸರುಗಳು ಕೆರೆಗಳಿಗೆ ಇದ್ದವು. ಪುರುಷರಂತೆ ಸ್ತ್ರೀಯರು ಕೂಡ ಕೆರೆ ಕಟ್ಟಿಸುವುದರಲ್ಲಿ ಹಾಗೂ ಅವುಗಳ ಒಂದಿಲ್ಲೊಂದು ಕಾರ್ಯಗಳಲ್ಲಿ ತೊಡಗಿಕೊಂಡಿದ್ದ ಬಗೆಗೆ ಶಾಸನಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ ಅರಸೀಕೆರೆ, ಶಾಂತಿಗ್ರಾಮ ಕೆರೆ, ದಾಸಿಯಕೆರೆ, ಸೂಳೆಕೆರೆ ಎಂಬ ಇತ್ಯಾದಿ ಕೆರೆಗಳಿವೆ.

೫. **ಬಿರುದು ಸೂಚಕ ಕೆರೆಯ ಹೆಸರುಗಳು:** ಕೆರೆಗಳನ್ನು ಯಾರು ಯಾವಾಗ ನಿರ್ಮಿಸಿದರೆಂಬ ಮಾಹಿತಿಗಳಿಲ್ಲ. ನಿರ್ಮಾತೃವಿನ ಸೂಚಕವೆಂಬಂತೆ ಶಾಸನಗಳಲ್ಲಿ ಲಭ್ಯವಿದೆ. ಕ್ರಿ.ಶ. ೧೪೩೨ ತಿಮ್ಮನಹಳ್ಳಿಯ ಶಾಸನದಲ್ಲಿ[೫] ಬೆಂಕೊಂಡ ಮಹಾದೇವನಕೆರೆ, ಕೀರ್ತಿಜಲಧಿ, ಮೂರುರಾಯಬಸವ ಶಂಕರಶೆಟ್ಟಿ ನಾಯಕರ ಕೆರೆ ಎಂಬ ಮಾಹಿತಿ ಇದೆ.

೬. **ಸಸ್ಯ ಮತ್ತು ಪ್ರಾಣಿಮೂಲದ ಕೆರೆಯ ಹೆಸರುಗಳು:** ನಿಸರ್ಗ ಮತ್ತು ಪ್ರಾಣಿ ಮೂಲದ ಹೆಸರುಗಳ ಕೆರೆಗಳು ಬಹಳಷ್ಟಿವೆ. ಅರಳಿಕೆರೆ, ಮಣಲಕಡಹು, ವಡಗೆರೆ, ಕಲ್ಲಗುಂಡಿ, ಬೆಂಡೆಕೆರೆ, ತಾವರೆಕೆರೆ, ಇವುಗಳು ಕೆರೆಗಳ ಪ್ರಾಕೃತಿಕ ಲಕ್ಷಣಗಳನ್ನು ಹೇಳಿದರೆ, ಮತ್ತೆ ಕೆಲವು ಪ್ರಾಣಿಗಳೊಂದಿಗೆ ಸಂಬಂಧವನ್ನು ಸೂಚಿಸುತ್ತವೆ. ಹುಲ್ಲೇಕೆರೆ, ಆನೆಕೆರೆ, ಕರಡಿ ಕೆರೆ, ನವಿಲೆ ಕೆರೆ, ಕುದುರೆಗುಂಡಿ ಕೆರೆ, ಹುಲಿಕೆರೆ, ಮೊಸಳೆ ಕೆರೆ ಎಂಬ ಇತ್ಯಾದಿ ಹೆಸರುಗಳನ್ನು ಗಮನಿಸಬಹುದು.

೭. **ವೃತ್ತಿಮೂಲದ ಕೆರೆಯ ಹೆಸರುಗಳು:** ಬೇರೆ ಬೇರೆ ಜಾತಿ ಜನಾಂಗಗಳ ಬಳಕೆಗೆಂದೇ ಕೆಲವು ಪ್ರತ್ಯೇಕ ಕೆರೆಗಳಿದ್ದಂತೆ ತೋರುತ್ತವೆ. ಅಸಗನಕೆರೆ, ಬಿಲ್ಲಕೆರೆ[೬] ಇತ್ಯಾದಿ ಉಲ್ಲೇಖಗಳು ಅರಸೀಕೆರೆ ತಾಲೂಕಿನ ಶಾಸನಗಳಲ್ಲಿ ಕಂಡುಬರುತ್ತವೆ. ಹೊಲಗಟ್ಟ, ಹೊಲೆಗಟ್ಟ[೭] ಇವು ಬಹುಶಃ ಸಣ್ಣ ಹಳ್ಳಗಳಾಗಿದ್ದು ಅಸ್ಪೃಶ್ಯರ ಬಳಕೆಗಾಗಿ ಇದ್ದಂತೆ ತೋರುತ್ತವೆ ಎಂಬುದಾಗಿ ಕೆಲವು ಸಂಶೋಧಕರು ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ. ಆದರೆ ಹೊಲ+ಘಟ್ಟ ಅಂದರೆ ಹೊಲಗಳಿಗೆ ನೀರನ್ನು ಬಳಸಲು ಉಪಯೋಗಿಸುತ್ತಿದ್ದುದರಿಂದ ಈ ಹೆಸರುಗಳು ಬಂದಿರುವ ಸಾಧ್ಯತೆ ಇದೆ. ಹೊಲಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರ ಕೇರಿಗಳನ್ನು ಹೊಲಗೇರಿ ಎಂದು ಕರೆಯುತ್ತಿದ್ದಿರಬಹುದು. ಕೆಂಬಾಳುವಿನ ಶಾಸನವೊಂದರಲ್ಲಿ[೮] ಹೊಲಗೆರೆಯ ಉಲ್ಲೇಖವಿದೆ. ಈ ಗ್ರಾಮದ ಸುತ್ತಮುತ್ತ ಒಂದು ದೊಡ್ಡ ಕೆರೆಯಲ್ಲದೆ ನಾಲ್ಕಾರು ಸಣ್ಣ ಕಟ್ಟೆಗಳಿವೆ. ಅದರಲ್ಲಿಯ ಒಂದು ಹೊಲಗೆರೆಯಾಗಿರಬಹುದು. ಪ್ರಸ್ತುತ ಯಾವ ಕೆರೆ ಕಟ್ಟೆಯಾಗಲಿ ಈ ಹೆಸರಿನಿಂದ ಕರೆಯುತ್ತಿಲ್ಲ.

ಕೃಷಿ ಕಾರ್ಮಿಕರು ಬಹುಶಃ ಕಟ್ಟಿಸಿದ್ದರಿಂದಲೋ ಅಥವಾ ಬಳಸುತ್ತಿದ್ದರಿಂದಲೋ ಈ ಹೆಸರು ಬಂದಿರಬೇಕು. ದಿಂಡಗೂರಿನ ತಾಮ್ರಪಟ ಶಾಸನದಲ್ಲಿ[೯] ಹೊಲೆಯರ ಹಳ್ಳದ ಉಲ್ಲೇಖವಿದೆ.

ನುಗ್ಗೇಹಳ್ಳಿಯ ೧೨೪೬ರ ಶಾಸನದಲ್ಲಿ[೧೦] ಬಣಜಿಗನ ಕೆರೆಯ ಉಲ್ಲೇಖವಿದೆ. ಕೇಶವ ದೇವರ ಪ್ರತಿಷ್ಠಾಪನೆಯ ದಿನದಂದು ಹೊಯ್ಸಳ ದಂಡನಾಯಕ ಬೊಮ್ಮಣ್ಣನು ವೇದಾರ್ತ್ಥದ ಮಂಚಣ್ಣನಿಗೆ ಕಬ್ಬಳಿಯ ವಿತ್ತಿಯೊಳಗಿನ ಬಣಜಿಗನ ಕೆರೆಯನ್ನು ಪ್ರಾಯಶ್ಚಿತ್ತ ರೂಪದಲ್ಲಿ ಕೊಡುತ್ತಾನೆ. ಈ ಕೆರೆಯನ್ನು ಬಣಜಿಗ ಅಂದರೆ ವ್ಯಾಪಾರಿಗಳ ಪಂಗಡಕ್ಕೆ ಸೇರಿದ ಒಬ್ಬನು ಕಟ್ಟಿಸಿರಬಹುದು. ಇದು ಜಾತಿ ಸೂಚಕವಾಗಿರದೆ ವೃತ್ತಿಸೂಚಕವಾಗಿದ್ದಿರಬಹುದು.

೮. **ಶ್ರೀಸಾಮಾನ್ಯರ ಕೆರೆಯ ಹೆಸರುಗಳು:** ಕೆರೆಗಳ ಹೆಸರುಗಳನ್ನು ಗಮನಿಸಿದರೆ ರಾಜರುಗಳೇ ಅಲ್ಲದೆ ಊರಗೌಡರು ಮತ್ತು ಸಾಮಾನ್ಯ ಜನರು ಕಟ್ಟಿಸಿರುವಂತಿವೆ. ಉದಾಹರಣೆಗೆ ತಿಮ್ಮಪ್ಪನಾಯಕನ ಕೆರೆ, ಬೊಮ್ಮಶೆಟ್ಟಿ ಕೆರೆ, ಸುಬೇದಾರನ ಕಟ್ಟೆ, ಶಾಂತಪ್ಪನಾಯಕನ ಕಟ್ಟೆ, ನಾಚರಸನ ಕೆರೆ, ಬೊಪ್ಪಗೌಡನ ಕೆರೆ, ಮಾಕಗೌಡನ ಕೆರೆ, ಮಾನಪ್ಪನ ಕೆರೆ, ಕರಿಯಮ್ಮನ ಕಟ್ಟೆ, ಹೊಮ್ಮಗೌಡನ ಕೆರೆ, ಬೀರಜ್ಜನ ಕೆರೆ, ಜಕ್ಕಿವ್ವೆಯ ಕೆರೆ, ಗೌಡಗೆರೆಗಳೆಂಬ ಮುಂತಾದ ಕೆರೆಗಳಿವೆ.

೯. **ಊರಿನ ಹೆಸರಿನೊಂದಿಗೆ ಬೆಸೆದುಕೊಂಡ ಕೆರೆಯ ಹೆಸರುಗಳು:** ಈ ಪ್ರಕಾರದಲ್ಲಿ ಸಾಕಷ್ಟು ಕೆರೆಗಳಿರುವುದು ಕಂಡುಬರುತ್ತದೆ. ಅರಸೀಕೆರೆ ತಾಲೂಕಿನ ಅರಸೀಕೆರೆ, ಬೆಂಡೆಕೆರೆ, ಹಿರಿಯೂರು ಕೆರೆ, ನೇರ್ಲಿಗೆ ಕೆರೆ, ಹಾರನಹಳ್ಳಿ ಕೆರೆ, ಚನ್ನರಾಯಪಟ್ಟಣ ತಾಲೂಕಿನ ಬಾಳಗಂಚಿ ಕೆರೆ, ದಿಡಗ ಕೆರೆ, ಹಿರಿಸಾವೆ ಕೆರೆ, ಜಂಬೂರು ಕೆರೆ ಹಾಗೆಯೇ ಹಾಸನ ತಾಲೂಕಿನ ಜನಿವಾರ ಕೆರೆ, ದುದ್ದ ಕೆರೆ ಅಟ್ಟವರ ಮತ್ತು ಬೊಮ್ಮೇನಹಳ್ಳಿ ಕೆರೆಗಳಿವೆ.

ಕೆರೆಗಳಿಗೆ ನೀರನ್ನು ಒದಗಿಸುವ ಮೂಲಗಳ ಆಧಾರಗಳ ಮೇಲೆ ಕೆರೆಗಳನ್ನು ಎರಡು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಮೊದಲ ಪ್ರಕಾರದಂತೆ ನದಿ ಆಶ್ರಿತ ಕೆರೆಗಳು ಮತ್ತೊಂದು ಮಳೆ ಆಶ್ರಿತ ಕೆರೆಗಳು. ಶಾಸನಗಳಲ್ಲಿ 'ಕಾಡಾರಂಭ ಮತ್ತು ನೀರಾರಂಭ'ಗಳೆಂಬ ಉಲ್ಲೇಖಗಳಿವೆ.[೧೧] ಕರ್ನಾಟಕದ ಹಾಸನ ಜಿಲ್ಲೆಯ ಬಹುತೇಕ ಕೆರೆಗಳು ಮಳೆಯನ್ನು ಆಶ್ರಯಿಸಿವೆ. ಕೆಲವು ಕೆರೆಗಳು ಮಾತ್ರ ನದಿಯ ನೀರನ್ನು ಅವಲಂಬಿಸಿವೆ. ಹಾಸನ, ಬೇಲೂರು, ಅರಕಲಗೂಡು ಹೊಳೆನರಸೀಪುರ ಭಾಗಗಳಲ್ಲಿ ಹಲವು ಕೆರೆಗಳಿಗೆ ಹೇಮಾವತಿ ಮತ್ತು ಯಗಚಿ ಕಾಲುವೆಯ ಮುಖಾಂತರ ನೀರನ್ನು ಸಾಗಿಸಿ ಪ್ರಾಚೀನ ಕೆರೆಗಳನ್ನು ಜೀವಂತವಾಗಿಸಿದ್ದಾರೆ.

ನೀರಾವರಿ ತಂತ್ರಜ್ಞಾನ ಕುರಿತಂತೆ ನಮ್ಮಲ್ಲಿ ಪ್ರತ್ಯೇಕವಾದ ಪ್ರಾಚೀನ ಲಿಖಿತ ಗ್ರಂಥಗಳಿಲ್ಲ. ಹಾಗೆಂದಾಕ್ಷಣ ಅದರ ಕುರಿತು ನಮ್ಮ ಪೂರ್ವಜರಿಗೆ ತಿಳುವಳಿಕೆ ಇದ್ದಿಲ್ಲವೆಂದರ್ಥವಲ್ಲ. ಅವರಿಗೆ ಬರೆದಿಡುವ, ದಾಖಲಿಸುವ ಪರಿಪಾಟವಿರಲಿಲ್ಲ. ಭಾರತೀಯರದು ಮೌಖಿಕ ಪರಂಪರೆಯ ಜ್ಞಾನ ತಲೆಮಾರಿನಿಂದ ತಲೆಮಾರಿಗೆ ಹರಿದುಬಂದ ಜ್ಞಾನವೇ ಅವರ ಬದುಕಿಗೆ ದಾರಿದೀಪವಾಗಿತ್ತು.

ಅವರಿಗಿದ್ದ ನೀರಾವರಿ ತಂತ್ರಜ್ಞಾನವನ್ನು ಅಳಿದುಳಿದ ಅನೇಕ ಪ್ರಾಚೀನ ಜಲಾಶಯಗಳಲ್ಲಿ ಕಾಣಬಹುದು. ಕೆರೆಗಳನ್ನು ಕುರಿತು ನಮ್ಮ ಹಿರಿಯರಿಗಿದ್ದ ಜ್ಞಾನವನ್ನು ಕೆರೆಗಳನ್ನು ಸರಪಳಿ ವ್ಯವಸ್ಥೆಯಲ್ಲಿ ಕಟ್ಟಿರುವುದು, ಏರಿಯನ್ನು ಡೊಂಕಾಗಿ ಕಟ್ಟಿರುವುದು, ತೂಬು ಮತ್ತು ಕೋಡಿಗಳ ವಿನ್ಯಾಸದಲ್ಲಿ ಸ್ಪಷ್ಟವಾಗಿ ಕಾಣಬಹುದು. ಅಷ್ಟೇ ಏಕೆ? ಕೆರೆ ನಿರ್ಮಾಣದ ಸ್ಥಳದ ಆಯ್ಕೆಯಲ್ಲಿ ಅವರು ತೋರಿಸಿರುವ ಜಾಣ್ಮೆ ಇಂದಿಗೂ ಅನುಕರಣೀಯ. ಕೆರೆಯ ತಂತ್ರಜ್ಞಾನದ ವಿಷಯದಲ್ಲಿ ದಕ್ಷಿಣಭಾರತೀಯರು ಹೆಚ್ಚು ಪರಿಣತರಾಗಿದ್ದರೆಂಬುದಕ್ಕೆ ಆಂಧ್ರಪ್ರದೇಶದ ಕಡಪ ಜಿಲ್ಲೆಯ ಪೋರುಮಾಮಿಲ್ಲ ಶಾಸನವೇ ಸಾಕ್ಷಿ.[೧೨]

ಜಿಲ್ಲೆಯಲ್ಲಿ ಮಳೆ ನೀರನ್ನು ಆಶ್ರಯಿಸಿರುವ ಕೆರೆಗಳನ್ನು ನಿರ್ಮಿಸುವಾಗ ಪರಿಸರಕ್ಕೆ ಅನುಗುಣವಾಗಿ ಮೂರು ಅಥವಾ ನಾಲ್ಕು ಕೆರೆಗಳನ್ನು ಒಂದಕ್ಕೊಂದು ಹೊಂದಿಕೊಂಡಿರುವಂತೆ ಸಮೀಪದಲ್ಲಿಯೇ ಕಟ್ಟಿರುವುದನ್ನು ಗಮನಿಸಬಹುದು.

ಸರಣಿ ಕೆರೆಗಳು

ಪ್ರಾಚೀನ ಕಾಲದ ನಮ್ಮ ಪೂರ್ವಿಕರು ಭೂಮಿಯ ಮಟ್ಟ ಮತ್ತು ನೀರಿನ ಕೆಳಮುಖ ಹರಿವನ್ನು ಗಮನಿಸಿ ಸರಪಳಿಯಂತೆ ಕೆರೆಗಳ ಜಾಲವನ್ನು ನಿರ್ಮಿಸಿದ್ದಾರೆ. ಇದು ವಿಶಿಷ್ಟವಾದ ತಂತ್ರವಾಗಿದೆ. ಕೆರೆಯು ಕೋಡಿ ಬಿದ್ದು ಹೆಚ್ಚುವರಿ ನೀರು ಮತ್ತೊಂದು ಕೆರೆಯಲ್ಲಿ ಶೇಖರಗೊಳ್ಳಲು ಸಹಾಯಕವಾಗಿದೆ. ಶಾಸನಗಳಲ್ಲಿ ಉಕ್ತವಾಗಿರುವ ಕೆಲವು ಉದಾಹರಣೆಗಳನ್ನು ಇಲ್ಲಿ ನೋಡಬಹುದು. ಅರಸೀಕೆರೆಯ ದೇಶಾಣಿ ಗ್ರಾಮದ ಕ್ರಿ.ಶ. ೧೧೩೯ರ ಶಾಸನವು[೧೩] ಹೆಗ್ಗಡೆಯ ಕೆರೆಯೊಳಗಣ ಕಿರಿಕೆರೆಯನ್ನು ಹೇಳಿದೆ. ಹಾಸನದ ಕ್ರಿ.ಶ. ೧೧೪೭ರ ಮುಗಳೂರು ಶಾಸನದಲ್ಲಿ[೧೪] ಮುಗಳಿಯ ಅಗ್ರಹಾರದ ಜಿನಾಲಯಕ್ಕೆ ಹೊಯ್ಸಳ ನರಸಿಂಹದೇವ ಭೂದಾನಗಳನ್ನು ನೀಡಿ ವ್ಯಕ್ತಿಯೊಬ್ಬ ಕೆರೆ ಕಟ್ಟಿಸಿದನೆಂದಿದೆ. ಆ ವ್ಯಕ್ತಿಗೆ ಕೆರೆಯ ಅಚ್ಚುಕಟ್ಟಿನಲ್ಲಿ ದಾನ ನೀಡಿ ಗಡಿಗಳನ್ನು ಗುರುತಿಸುತ್ತಾ ದೊಡ್ಡ ಕೆರೆಯ ಕೆಳಗಿನ ತರಿ ಭೂಮಿ, ಪಶ್ಚಿಮಕ್ಕೆ ನೀರಿನ ಕೊಳ, ದಕ್ಷಿಣಕ್ಕೆ ಚಿಕ್ಕಕೊಳ ಮತ್ತು ಕಲ್ಲುಕಟ್ಟಿಸಿದ ದೊಡ್ಡಕೆರೆಯೆಂದು ಉಲ್ಲೇಖಿಸಿದೆ. ಅದೇ ತಾಲೂಕಿನ ಹಾಸನದ ಕ್ರಿ.ಶ. ೧೧೫೬–೫೭ರ ಶಾಸನದಲ್ಲಿ[೧೫] ಹಿರಿಯಕೆರೆ, ದೇವರಕೆರೆ, ಕನ್ನಿಗೆರೆ ಎಂಬ ಮೂರು ಕೆರೆಗಳಿದ್ದುದು ತಿಳಿಯುತ್ತದೆ. ಅರಸೀಕೆರೆಯ ಬಂದೂರಿನ ಕ್ರಿ.ಶ. ೧೧೬೮ರ ಶಾಸನವೊಂದರಲ್ಲಿ[೧೬] ಹಿರಿಯ ಕೆರೆಯ ಕೆಳಗೆ ಇನ್ನೊಂದು ಪಾರಿಸಗಟ್ಟದ ಕೆರೆಯನ್ನು ತಿಳಿಸುತ್ತದೆ. ಹಳೇಬೀಡಿನ ಕ್ರಿ.ಶ. ೧೨ನೆಯ ಶತಮಾನದ ಶಾಸನದಲ್ಲಿ[೧೭] ಹಿರಿಯ ಕೆರೆಯ ಬೋಳಗಟ್ಟದೊಳಗೆರೆಯ ಉಲ್ಲೇಖವಿದೆ. ಕ್ರಿ.ಶ. ೧೧೮೯ರ ಅರಕಲಗೂಡಿನ ಶಾಸನವು[೧೮] ಬೋಗೇಶ್ವರ ದೇವರಿಗೆ ಕೆರೆಯ ಕೆಳಗಣ ಗದ್ದೆ ಒಳಗೆರೆ ಬೆದ್ದಲನ್ನು ದಾನ ಬಿಟ್ಟಿರುವಂತೆ ಸೂಚಿಸಿದೆ. ಜಯಚಾಮರಾಜಪುರದ ಕ್ರಿ.ಶ. ೧೧೭೭ರ ಶಾಸನದಲ್ಲಿ[೧೯] ಹಿರಿಯಕೆರೆ, ಮತ್ತಿಕೆರೆ, ಬಬ್ಬಿಯಕೆರೆ, ಆಣೆಯಕೆರೆ ಮತ್ತು ದೇವರ ಮುಂದಣಕೆರೆ ಎಂಬ ಐದು

ಕೆರೆಗಳ ಮಾಹಿತಿ ಇದೆ. ಕಣಕಟ್ಟೆಯ ಕ್ರಿ.ಶ. ೧೨೦೮ರ ಹೊಯ್ಸಳ ೨ನೆಯ ವೀರಬಲ್ಲಾಳನ ಶಾಸನದಲ್ಲಿ[೨೦] ಹರಿಯೋಜನ ಕೆರೆ, ಮಹದೇವನ ಕೆರೆ, ಕನ್ನಿಗೆರೆ, ಬಿಟ್ಟಿಸಮುದ್ರ, ಮಂಗಯ್ಯನ ಕೆರೆಯನ್ನು ಕಟ್ಟಿರುವ ಉಲ್ಲೇಖಗಳಿವೆ. ಕ್ರಿ.ಶ. ೧೨೫೪ರ ಸೋಮೇಶ್ವರನ ಕಾಲದ ಹಿರಿಯೂರು ಶಾಸನವು[೨೧] ಮುತ್ತನ ಹೊಸ ಊರಿನ ಪರಿಸರದಲ್ಲಿ ಹಿರಿಯಕೆರೆ, ಹಿರಿಯಘಟ್ಟ, ಕಡಬಗಟ್ಟ, ಚಟ್ಟನಕೆರೆ, ಕರಿಯಬಮ್ಮಚ್ಚನ ಕೆರೆ, ಹಿರಿಯಹಳ್ಳಿ, ತಮ್ಮಡಿಕೆರೆ, ಎಳಗದಿಹಳ್ಳಿ ಅಂಕಾಡೆಯಕೆರೆ ಗೊಳಿಗನಹಳ್ಳಿ ಒಡಗೆರೆ ಕೆರೆ, ದಾನಿಯಕೆರೆ ಸವಣಹಳ್ಳಿ ಹೀಗೆ ೧೩ ಕೆರೆ ಇದ್ದುದನ್ನು ತಿಳಿಸುತ್ತದೆ. ಆಲೂರು ತಾಲೂಕಿನ ಪಾಳ್ಯ ಶಾಸನದಲ್ಲಿ[೨೨] ದೇವರಕಟ್ಟೆ, ಕರಡಿಕೆರೆವೊಳಕಟ್ಟೆ ಎಂಬ ಕೆರೆಗಳ ದಾಖಲೆಗಳಿವೆ. ಈ ಶಾಸನಗಳಲ್ಲಿ ದೊಡ್ಡ ಕೆರೆಯ ಕೆಳಗೆ ಒಳಗೆರೆಗಳು ಇರುತ್ತಿದ್ದನ್ನು ಹೇಳಿವೆ.

ಹಾಸನ ಪರಿಸರದಲ್ಲಿ ಅಲ್ಲಿನ ಭೌಗೋಳಿಕತೆಗೆ ಅನುಗುಣವಾಗಿ ಹಲವಾರು ಪ್ರಾಚೀನ ಕೆರೆಗಳಿದ್ದು, ಅವುಗಳ ವಿವಿಧ ಭಾಗಗಳು ಈ ಕೆಳಕಂಡಂತಿವೆ.

೩.೧. ಜಲಾನಯನ ಪ್ರದೇಶ(ಕ್ಯಾಚ್‌ಮೆಂಟ್ ಏರಿಯಾ)

ನೀರಾವರಿಗೆ ಬಳಸಲಾಗುವ ಎಲ್ಲಾ ನೀರಿನ ಮೂಲವೂ ಮಳೆಯೇ ಆಗಿದೆ. ಮಳೆ ಭೂಮಿಯ ಮೇಲೆ ಬಿದ್ದಾಗ ಅದರ ನೀರು ಹರಿದು ಹೋಗದಂತೆ ಅಲ್ಲಿನ ಸಸ್ಯವರ್ಗ ಅದನ್ನು ತಡೆಯುತ್ತದೆ. ನೀರಿನ ಸ್ವಲ್ಪ ಭಾಗ ಭೂಮಿಯಲ್ಲಿ ಇಂಗುವುದು. ಸ್ವಲ್ಪ ಭಾಗವನ್ನು ಗಿಡಮರಗಳ ಬೇರುಗಳು ಹೀರುತ್ತವೆ. ಮಿಕ್ಕ ನೀರು ಸಣ್ಣ ಸಣ್ಣ ಹಳ್ಳಗಳಾಗಿ ಹರಿದು ಒಂದುಗೂಡಿ ತನ್ನ ಮಟ್ಟವನ್ನು ತಾನೇ ಹುಡುಕುತ್ತಾ ಕೆಳಗಿಳಿಯುತ್ತ ದೊಡ್ಡ ಹಳ್ಳಗಳಾಗಿ ಹರಿಯುತ್ತವೆ. ಇಂತಹ ದೊಡ್ಡ ಹಳ್ಳಗಳಿಗೆ ಒಡ್ಡು ಕಟ್ಟುವುದರಿಂದ ಕೆರೆಗಳಾಗುತ್ತವೆ.

ಮಳೆ ಬಿದ್ದಾಗ ನೀರು ಎತ್ತರದ ಕಡೆಯಿಂದ ತಗ್ಗಿನತ್ತ ಹರಿಯುತ್ತದೆ. ಕೆರೆಗೆ ನೀರು ಹರಿದು ಬರುವ ಸ್ಥಳಕ್ಕೆ ಕ್ಯಾಚ್‌ಮೆಂಟ್ ಏರಿಯಾ ಎನ್ನುವರು. ಯಾವ ಪ್ರದೇಶವು ಮಳೆಯ ನೀರನ್ನು ಪಡೆದು ಕೆರೆ, ಹೊಳೆಗಳಿಗೆ ಅದನ್ನು ಸೇರಿಸುವ ಕೆಲಸ ಮಾಡುವುದೋ ಅದನ್ನು ಜಲಾನಯನ ಪ್ರದೇಶವೆನ್ನುವರು. ಮಳೆ ಬೀಳುವ ಪ್ರದೇಶ ಮತ್ತು ಕೆರೆಗೆ ಹರಿದುಬಂದು ಸೇರುವ ನೀರಿನ ಪ್ರಮಾಣಗಳು ಪರಸ್ಪರ ಸಂಬಂಧವನ್ನು ಹೊಂದಿರುತ್ತದೆ.

೩.೨. ಕೆರೆಯ ಅಂಗಳ

ಕೆರೆಗೆ ಅಡ್ಡಲಾಗಿ ಏರಿ ಕಟ್ಟಿದಾಗ, ಅದರ ಹಿಂದೆ ನೀರು ಸಂಗ್ರಹವಾಗುತ್ತದೆ. ಆ ಪ್ರದೇಶವೇ ಕೆರೆ ಅಂಗಳ. ಈ ಭಾಗವು ಸಾಮಾನ್ಯ ಭೂಪ್ರದೇಶವಾಗಿದ್ದು, ಇಲ್ಲಿ ನೀರು ಸಂಗ್ರಹಗೊಳ್ಳುತ್ತದೆ. ಕೆರೆಯ ಈ ಭಾಗದಲ್ಲಿ ಚಿಕ್ಕ ಹಳ್ಳಗಳಿಂದ ನೀರು ಹರಿದುಬಂದು ಶೇಖರಗೊಳ್ಳುತ್ತದೆ. ಹೆಚ್ಚು ಮಳೆಯಾಗಿ ಅಧಿಕ ನೀರು ಬಂದಂತೆ, ನೀರಿನ ಹರವು ವಿಸ್ತಾರಗೊಳ್ಳುವುದರೊಂದಿಗೆ, ಕೆರೆಯು

ತುಂಬುತ್ತಾ ಹೋಗುತ್ತದೆ. ಭೂಮಟ್ಟದಿಂದ ಕಟ್ಟೆಯ ಗರಿಷ್ಠ ಮಟ್ಟ ಮುಟ್ಟಿದೆಯೆನ್ನುತ್ತಾರೆ. ಕನಿಷ್ಠ ಮಟ್ಟದ ನೀರು ನಿಲ್ಲುವ ಕೆರೆಯ ಭೂಭಾಗಕ್ಕೆ ಅಂಗಳ ಎಂದು ಹೆಸರು.

ಕೆರೆ ತಳಭಾಗದ ಮಣ್ಣು ಜಿಗುಟಾಗಿದ್ದು ಜೇಡಿಮಣ್ಣಿನಿಂದ ಕೂಡಿದ್ದರೆ ಒಳಿತು. ಅಂಗಳದಲ್ಲಿ ನೀರು ಸೋರಿ ಹೋಗಬಾರದು ಮತ್ತು ನೀರು ನುಂಗಬಾರದು. ಅಂಗಳದಲ್ಲಿ ಅಲ್ಲಲ್ಲಿ ದಿನ್ನೆಗಳಿರಬಾರದು. ಕೆರೆ ಅಂಗಳದಲ್ಲಿ ಎಷ್ಟು ನೀರು ನಿಲ್ಲುವುದೋ ಅದು ಆ ಪ್ರದೇಶದ ನೀರಿನ ಹರವು. ಅದನ್ನೇ ಸಾಮಾನ್ಯವಾಗಿ ಕೆರೆಯ ಅಂಗಳ ಎನ್ನುತ್ತಾರೆ.

೩.೩. ಅಚ್ಚುಕಟ್ಟು ಪ್ರದೇಶ

ಕೆರೆಯ ಅಚ್ಚುಕಟ್ಟು ಪ್ರದೇಶವೆಂದರೆ ನೀರು ಸಂಗ್ರಹವಾಗುವ ವಿರುದ್ಧ ದಿಕ್ಕಿನ ಪ್ರದೇಶ. ಏರಿಯ ಹೊರಮುಖವೆಂತಲೂ ಹೇಳಬಹುದು. ಸಾಮಾನ್ಯವಾಗಿ ಈ ಪ್ರದೇಶದಲ್ಲಿಯೇ ವ್ಯವಸಾಯವನ್ನು ಮಾಡುತ್ತಾರೆ. ಕೆರೆಯ ನೀರಾವರಿಗೊಳಪಟ್ಟ, ಅಂದರೆ ಕೃಷಿ ಮಾಡಲ್ಪಡುವ ಪ್ರದೇಶಕ್ಕೆ ಆಯಕಟ್ಟು ಅಥವಾ ಅಚ್ಚುಕಟ್ಟು ಪ್ರದೇಶವೆಂದು ಹೆಸರು. ಇದು ಕೆರೆ ನೀರಾವರಿಗೆ ಒಳಪಟ್ಟ ಪ್ರದೇಶ. ಅಚ್ಚುಕಟ್ಟು, ಆಯಕಟ್ಟು ಪದ ಪ್ರಯೋಗವನ್ನು ಶಿಲಾಶಾಸನಗಳಲ್ಲಿ ಕಾಣಬಹುದು. ಅಚ್ಚುಕಟ್ಟು ಪ್ರದೇಶವನ್ನು ಅದರ ಗುಣಕ್ಕನುಗುಣವಾಗಿ ಉತ್ತಮ, ಮಧ್ಯಮ, ಕನಿಷ್ಠವೆಂದು ವಿಂಗಡಿಸುವ ರೂಢಿ ಇದ್ದುದು ಶಾಸನಗಳಿಂದ ತಿಳಿದುಬರುತ್ತದೆ.

೩.೪. ಏರಿ ನಿರ್ಮಾಣ

ಕೆರೆಯ ಒಂದು ಮುಖ್ಯವಾದ ಭಾಗವೆಂದರೆ ಏರಿ. ಇದನ್ನು ಒಡ್ಡು, ಅಡ್ಡಕಟ್ಟೆ ಎಂತಲೂ ಕರೆಯುವರು. ಏರಿ ನಿರ್ಮಾಣವಾದರೆ ಕೆರೆ ನಿರ್ಮಾಣವಾದಂತೆ, ಏರಿಗೆ ಮಣ್ಣನ್ನು ತುಂಬುವುದಕ್ಕೆ ಅನುಗುಣವಾಗಿ ಏರಿಯನ್ನು ಮೂರು ಪ್ರಕಾರಗಳಾಗಿ ವಿಂಗಡಿಸಬಹುದು.

* ಮೊದಲ ವಿಧದ ಏರಿಯ ಒಳ ಮತ್ತು ಹೊರಗೆ ಏಕಪ್ರಕಾರವಾಗಿ ಒಂದೇ ವಿಧದ ಮಣ್ಣನ್ನು ಹಾಕುವುದು. ಈ ರೀತಿಯ ಏರಿಗಳು ದಕ್ಷಿಣ ಭಾರತದಾದ್ಯಂತ ಬಳಕೆಯಲ್ಲಿವೆ.
* ಎರಡನೆಯ ವಿಧದ ಏರಿಯ ಒಳಭಾಗಕ್ಕೆ ಜಿಗುಟಾದ ಮಣ್ಣನ್ನು ತುಂಬಿ ಹೊರಭಾಗಕ್ಕೆ ಮರಳು ಮಿಶ್ರಿತ ಮಣ್ಣನ್ನು ತುಂಬುವುದು. ಈ ಪ್ರಕಾರದ ಏರಿಯ ನಿರ್ಮಾಣ ಮಹಾರಾಷ್ಟ್ರ, ಕರ್ನಾಟಕದ ಧಾರವಾಡ, ಬೆಳಗಾವಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕಂಡುಬಂದಿದೆ.
* ಮೂರನೆಯ ವಿಧದ ಏರಿಯಲ್ಲಿ ಏರಿಯ ಒಳಗೆ ಜೇಡಿಮಣ್ಣನ್ನು ಅಥವಾ ಕಲ್ಲುಗಾರೆಯಿಂದ ನಡುಗೋಡೆಯ ಕಟ್ಟೆ ಸುತ್ತಲೂ ಒಂದೇ ಗುಣಮಟ್ಟದ ಮಣ್ಣನ್ನು ಹಾಕುವುದು. ಈ ವಿಧದ ಏರಿಯನ್ನು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಪರಿಸರದಲ್ಲಿ ನೋಡಬಹುದು.[೨೩]

ಕರ್ನಾಟಕದಲ್ಲಿ ಕೆರೆಯ ಏರಿಯ ನಿರ್ಮಾಣಕ್ಕೆ ಉತ್ತರ ಕರ್ನಾಟಕವನ್ನು ಹೊರತುಪಡಿಸಿ ಉಳಿದ ಪ್ರದೇಶಗಳಲ್ಲಿ ಒಂದೇ ತೆರನಾದ ಮಣ್ಣನ್ನು ಬಳಸಿರುವುದು ರೂಢಿಯಲ್ಲಿದೆ.

ಹಾಸನ ಪರಿಸರದ ಎಲ್ಲಾ ಕೆರೆಗಳ ಏರಿಗಳು ಮಣ್ಣಿನಿಂದ ನಿರ್ಮಿಸಿದಂತಿವೆ. ಆದುದರಿಂದ ಈ ಭಾಗವನ್ನು ಅತ್ಯಂತ ಗಟ್ಟಿಯಾಗಿ ಕಟ್ಟಬೇಕಾಗುತ್ತದೆ. ಹೀಗೆ ಏರಿಯನ್ನು ನಿರ್ಮಿಸಲು ಮಣ್ಣನ್ನು ಹಾಕಿ ನೀರಿನಿಂದ ನೆನೆಸಿ ಗಟ್ಟಿ ಮಾಡಿ ಅದರ ಮೇಲೆ ಮತ್ತಷ್ಟು ಮಣ್ಣನ್ನು ಹಾಕುತ್ತಾ ಹೋಗುತ್ತಾರೆ. ಈ ರೀತಿ ಪದೇ ಪದೇ ಮಾಡುವುದರಿಂದ ಮಣ್ಣು ಚೆನ್ನಾಗಿ ಕೂಡಿಕೊಂಡು ಗಟ್ಟಿಯಾಗುತ್ತದೆ. ಏರಿಯನ್ನು ಕಟ್ಟಲು ಕೆರೆಯ ಕೆಳಭಾಗದ ಮಣ್ಣನ್ನು ಬಳಸಿಕೊಂಡು ಕೆರೆಯ ಆಳ ಮತ್ತು ಅಗಲವನ್ನು ವಿಸ್ತರಿಸಲಾಗಿದೆ. ಇದರಿಂದ ಕೆರೆಯಲ್ಲಿ ಹೆಚ್ಚಿನ ನೀರು ಸಂಗ್ರಹವಾಗುತ್ತದೆ. ಕೆರೆಯ ಏರಿಯ ಎರಡು ಬದಿಗಳು ಇಳಿಜಾರಾಗಿದ್ದು ಅದರ ಮೇಲೆ ನೀರು ನಿಲ್ಲದಂತೆ ಕಟ್ಟಲಾಗಿದೆ.

ಏರಿಯ ತಳಭಾಗದ ಅಗಲ ದೊಡ್ಡದಾಗಿದ್ದು, ಪಾರ್ಶ್ವದ ಇಳಿಜಾರುಗಳಿಗೆ ಅನುಗುಣವಾಗಿ ನಿರ್ಮಿಸಲಾಗಿದೆ. ಏರಿಯ ಮೇಲ್ಭಾಗದ ಅಗಲ ಕಿರಿದಾಗಿದ್ದು ಜನ, ದನ ಓಡಾಡುವಷ್ಟು ವಿಸ್ತಾರ ಇರುತ್ತಿತ್ತು. ಕೆಲವು ಕೆರೆಗಳ ಏರಿಗಳ ಮೇಲ್ಭಾಗದಲ್ಲಿ ವಾಹನಗಳು ಚಲಿಸುವಷ್ಟು ಅಗಲವಿದೆ. ಉದಾ: ಅರಸೀಕೆರೆ, ಉಂಡಿಗನಾಳು, ಗಂಡಸಿ, ಹಾಸನ ತಾಲೂಕಿನ ಕುದುರೆಗುಂಡಿ, ಕೋರವಂಗಲ, ಸೀಗೆಕೆರೆ, ಬೇಲೂರು ತಾಲೂಕಿನ ಹಳೇಬೀಡು, ಬೇಲೂರು, ಹಾಗೂ ಚನ್ನರಾಯಪಟ್ಟಣ ತಾಲೂಕಿನ ಜನಿವಾರ, ಹೊಸಹಳ್ಳಿ ಮತ್ತು ಚನ್ನರಾಯಪಟ್ಟಣ ಕೆರೆಗಳು. ಈ ರೀತಿಯಾಗಿ ಏರಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ನಿರ್ಮಿಸಲಾಗುತಿತ್ತು. ನೀರಿನ ಬದಿಯ ಏರಿ ಹೆಚ್ಚು ಲಂಬಾಕೃತಿಯನ್ನು ಹೊಂದಿರುತ್ತದೆ. ಈ ಬದಿಯನ್ನು ದೊಡ್ಡ ಬಂಡೆಗಳಿಂದ ಕಟ್ಟಲಾಗಿದೆ. ಆ ಕಲ್ಲು ಕಟ್ಟಡದ ಕಟ್ಟುವಾಡವು ನೀರಿನ ಅಲೆಗಳ ಹೊಡೆತದಿಂದ ಏರಿಗೆ ಅಪಾಯ ಉಂಟಾಗದಂತೆ ರಕ್ಷಣೆ ಒದಗಿಸಿದೆ. ಬಾಂಡು ಕಲ್ಲುಗಳನ್ನು ಆಯಕಟ್ಟಿಗೆ ಅಧಿಕವಾಗಿ ಉಪಯೋಗಿಸಿದ್ದಾರೆ. ಈ ಭಾಗವು ಇಳಿಜಾರಾಗಿದ್ದು ಇದನ್ನು ಕಟ್ಟುವಾಡ ಎನ್ನುವರು. ನೀರಿನ ಒತ್ತಡವನ್ನು ವಿರುದ್ಧ ದಿಕ್ಕಿನಿಂದ ತಡೆದು ಏರಿಗೆ ಸಾಕಷ್ಟು ಬಲವನ್ನು ಕೊಡುವಲ್ಲಿ ಸಹಾಯಕವಾಗಿರುತ್ತದೆ.

ಏರಿಯ ಹಿಂಬದಿಯ ಇಳಿಜಾರಿಗೆ ಭಾರಿ ಮಳೆ ಬಿದ್ದು ಮಣ್ಣು ಕೊಚ್ಚಿ ಹೋಗದಂತೆ ತಡೆಯಲು ಹುಲ್ಲು ಬೆಳೆಸಿ ರಕ್ಷಣೆ ನೀಡಿರುವುದು ಕಂಡುಬಂದಿದೆ. ಅರಸೀಕೆರೆ ತಾಲೂಕಿನ ಕ್ರಿ.ಶ. ೧೨ ಮತ್ತು ೧೩ನೆಯ ಶತಮಾನದ ಗೀಜಿಹಳ್ಳಿಯ ಶಾಸನದಲ್ಲಿ[೨೪] ಬಾಚಿಸೆಟ್ಟಿಯು ಬೊಮ್ಮಗೆ ಏರಿಯ ಮೇಲಣ ಸಸಿಯನಿಕ್ಕಿ ಸಾಕುವಂತಾಗಿ ಉಂಬಳಿ ನೀಡಿರುವಂತೆ ಉಲ್ಲೇಖವಿದೆ. ಪ್ರಸ್ತುತ ಕ್ಷೇತ್ರ ಕಾರ್ಯ ಕೈಗೊಂಡ ಸಂದರ್ಭದಲ್ಲಿ ಹಾಸನ ಪರಿಸರದ ಕೆರೆಗಳಲ್ಲಿ ಏರಿಯ ಪಾರ್ಶ್ವದ ಒಂದು ಭಾಗದಲ್ಲಿ ಕಟ್ಟುವಾಡ ಇರುವುದನ್ನು ಬಿಟ್ಟರೆ ಹೊರಪಾರ್ಶ್ವದಲ್ಲಿ ಕಂಡುಬಂದಿಲ್ಲ. ಎರಡು ಪಾರ್ಶ್ವದಲ್ಲಿ ಕಲ್ಲಿನ ರಚನೆಯು ವಿಜಯನಗರ ಕಾಲದ ಕೆಲವು ಕೆರೆಗಳಲ್ಲಿ ಕಂಡುಬಂದಿವೆ. ಉದಾ: ಹಂಪಿಯ ಹಳ್ಳಿಕೆರೆ ಮತ್ತು ಕಮಲಾಪುರ ಕೆರೆಗಳಲ್ಲಿ ಗಮನಿಸಬಹುದು.

ಏರಿಗಳನ್ನು ಲಂಬವಾಗಿ ಕಟ್ಟದೆ ಅಂಕುಡೊಂಕಾಗಿಯೇ 'S' ಆಕಾರದಲ್ಲಿ ಕಟ್ಟಿದ್ದಾರೆ. ಇದರಿಂದಾಗಿ ನೀರಿನಿಂದ ಏರಿಗೆ ಬೀಳುವ ಒತ್ತಡವು ಸಮನಾಗಿ ಹಂಚಿಕೆಯಾಗುತ್ತದೆ ಮತ್ತು ಏರಿ

ಒಡೆದಲ್ಲಿ ಅದನ್ನು ಸುಲಭವಾಗಿ ಸರಿಪಡಿಸಲು ಸಹಾಯಕವಾಗಿದೆ. ನಮ್ಮ ಪೂರ್ವಿಕರು ಏರಿ ಒಡೆಯುವುದನ್ನು ತಡೆಯಲು ಕೆರೆಯ ಅಂಗಳವನ್ನು ವಿಸ್ತರಿಸಿ, ಅವುಗಳ ಏರಿಗಳನ್ನು ಬಂದೋಬಸ್ತು ಮಾಡಿಸುತಿದ್ದರು. ಪದೇ ಪದೇ ಏರಿ ಒಡೆಯುತ್ತಿದ್ದ ಕೆರೆಗಳ ಸಮೀಪದಲ್ಲಿ ಮತ್ತೊಂದು ಕೆರೆಯನ್ನು ನಿರ್ಮಿಸಿ, ಹೆಚ್ಚಿನ ನೀರು ಹರಿದು ಅಲ್ಲಿ ಶೇಖರಗೊಳ್ಳುವಂತೆ ಕೋಡಿಗಳನ್ನು ಅಳವಡಿಸುತ್ತಿದ್ದರು. ದೇವಾಲಯದ ಜೀರ್ಣೋದ್ಧಾರದಲ್ಲಿ ತೊಡಗಿದಂತೆ, ಕೆರೆ ಒಡೆದರೆ ಏರಿ ನಿರ್ಮಾಣದ ಕಡೆಗೂ ಗಮನ ನೀಡಿರುವುದು ಶಾಸನದಲ್ಲಿದೆ. ಮೊಸಳೆ ಗ್ರಾಮದ ಕ್ರಿ.ಶ. ೧೨೮೭ರ ಶಾಸನವೊಂದು[೨೫] ಕಾಲುವಳ್ಳಿ ಮಲ್ಲಯ್ಯನ ಹಳ್ಳಿಯ ಬಳ್ಳಿಯ ಕೆರೆಯು ಒಡೆದದ್ದರಿಂದ ಅಲ್ಲಿಯ ಕೇಶವ ದೇವಾಲಯವು ಹಾಳಾಗಿದ್ದು, ದೇವಾಲಯದ ಜೀರ್ಣೋದ್ಧಾರದೊಂದಿಗೆ ಬಳ್ಳಿಯ ಕೆರೆಯ ಒಡ್ಡನ್ನು ಕಟ್ಟಿಸಲಾಯಿತೆಂದು ಹೇಳಿದೆ.

ಕೆರೆ ಏರಿ ಒಳಪಾರ್ಶ್ವದ ಬದಿಯಲ್ಲಿ ಸಾಮಾನ್ಯವಾಗಿ ಬಹುತೇಕ ಕೆರೆಗಳಲ್ಲಿ ಇತ್ತೀಚೆಗೆ ಮೆಟ್ಟಿಲುಗಳನ್ನು ಮಾಡಿರುವುದನ್ನು ನೋಡಬಹುದು. ಕ್ರಿ.ಶ. ೧೨೨೧ರ ಚಟಚಟನಹಳ್ಳಿಯ ಶಾಸನವೊಂದರಲ್ಲಿ[೨೬] ಮಹಾಜನರು ದಾಸಿಶೆಟ್ಟಿಕೆರೆಗೆ ಮೆಟ್ಟಲು ಇರಿಸಲು ಬೇಡಿಕೆ ಸಲ್ಲಿಸಿದಾಗ ಚೆಟ್ಟಯ್ಯ ಪೆರುಮಾಳುದೇವನು ೧೦೦ ಹೊನ್ನನ್ನು ಕೆರೆಯ ಮೆಟ್ಟಿಲುಗಳಿಗೆ ವಿನಿಯೋಗಿಸಿರುವುದು ಕಂಡುಬಂದಿದೆ. ಮೆಟ್ಟಿಲುಗಳು ಧಾರ್ಮಿಕ ಕಾರ್ಯಗಳಿಗೆ ಬಳಕೆಯಾಗುತ್ತಿವೆ.

೩.೫. ತೂಬುಗಳ ರಚನೆ

ತೂಬುಗಳು ಕೆರೆಯ ಅವಿಭಾಜ್ಯ ಅಂಗ. ತೂಬುಗಳೇ ಕೆರೆಯ ನೀರನ್ನು ಹೊರಗೆ ಹೋಗದಂತೆ ತಡೆದಿರುವ ಸಾಧನಗಳಾಗಿವೆ. ಒಂದೊಂದು ಕೆರೆಗೂ ಒಂದು ಅಥವಾ ಎರಡು ತೂಬುಗಳು ಇರುತ್ತಿದ್ದವು. ಕೆಲವೊಮ್ಮೆ ಮೂರು ಅಥವಾ ನಾಲ್ಕು ಇದ್ದುದು ಉಂಟು. ಕೆರೆಯ ಗಾತ್ರ ಸಾಮರ್ಥ್ಯದ ಆಧಾರದ ಮೇಲೆ ತೂಬುಗಳನ್ನು ಅಳವಡಿಸಿಕೊಳ್ಳಲಾಗಿದೆ. ಕೆರೆಯನ್ನು ಕಟ್ಟಲು ವೆಚ್ಚ ಭರಿಸಲಾಗದವರು ಕೇವಲ ತೂಬುಗಳನ್ನಿಟ್ಟು ಕೆರೆ ಸಂರಕ್ಷಣೆಗೆ ಮುಂದಾಗಿದ್ದಾರೆ. ಕ್ರಿ.ಶ. ೧೧೫೯ರ ಹೊಯ್ಸಳ ಸೋಮೇಶ್ವರನ ಅರಸೀಕೆರೆಯ ಶಾಸನದಲ್ಲಿ[೨೭] ತೂಬನ್ನು ಮಾಡಿಸಿದುದರ ಉಲ್ಲೇಖವಿದೆ. ಕ್ರಿ.ಶ. ೧೨ ಮತ್ತು ೧೩ನೆಯ ಶತಮಾನದ ಹೆರಗು ಶಾಸನವು[೨೮] ಹೆರಗಿನ ಒಡೆಯ ಓಟ್ಟಮಯ(ಹಟ್ಟಿನಾಯ್ಕ) ಕೆರೆಗೆ ತೂಬನ್ನು ಇಟ್ಟು, ದೇವಾಲಯವನ್ನು ನಿರ್ಮಿಸಿರುವಂತೆ ಸೂಚಿಸುತ್ತದೆ. ಇದೇ ಶಾಸನದಲ್ಲಿ 'ತೂಬುದೇಗುಲ' ಎಂಬ ಉಲ್ಲೇಖವಿದೆ. ತೂಬುಗಳನ್ನು ಪೂಜಿಸುವ ಪದ್ಧತಿ ಈಗಲೂ ಇದೆ. ಅದನ್ನು ಕೆರೆ ಲಕ್ಕಮ್ಮ ಎಂದು ಸಹ ಕರೆಯುತ್ತಾರೆ. (ಹೊಸಪೇಟೆ ತಾಲೂಕು, ಅನಂತಶಯನ ಗುಡಿ) ಕೆರೆ ಕಣ್ಮರೆಯಾದರೂ ತೂಬುಗಳನ್ನು ಯಾರೂ ಕೀಳುತ್ತಿರಲಿಲ್ಲ. ಹೀಗಾಗಿ ತೂಬುಗಳ ರಚನೆಯ ಕಾರ್ಯಕ್ಕೆ ಮಹತ್ವ ನೀಡಲಾಗಿತ್ತು. ಕ್ರಿ.ಶ. ೧೦೬೨-೬೩ರ ಹಳೇಬೀಡಿನ ಶಾಸನದಲ್ಲಿ[೨೯] ಹೊಯ್ಸಳ ವಿನಯಾದಿತ್ಯ ರಾಜ ಕೆರೆಗೆ ತೂಬನ್ನು ಮಾಡಿಸಿ, ರಕ್ಷಣೆಗೆ ಬಿತ್ತುವಟ್ಟವನ್ನು

ನೀಡಿರುವುದನ್ನು ತಿಳಿಸಿದೆ. ಅದೇ ರೀತಿ ಹಾಸನ ತಾಲೂಕಿನ ಕಿತ್ತನಕೆರೆ ಶಾಸನವು[೩೦] ರಾಯಣನಾಯ್ಕ ಕೆರೆಗೆ ತೂಬನ್ನು ನಿರ್ಮಿಸಿ, ಭೂಮಿಯನ್ನು ದಾನವಾಗಿ ಬಿಟ್ಟಿರುವುದನ್ನು ದಾಖಲಿಸಿದೆ. ಕೆರೆಯ ಸುತ್ತಲಿನ ಜಮೀನುಗಳ ಅಭಿವೃದ್ಧಿಗಾಗಿ ತೂಬುಗಳನ್ನು ಹಾಕಿಸಿರುವುದು ಕ್ರಿ.ಶ ೧೧೬೨ರ ಹುಲ್ಲೇಕೆರೆ ಶಾಸನದಲ್ಲಿದೆ.[೩೧] ತೂಬುಗಳು ನಾಶವಾಗದಂತೆ ಕಾಲಕಾಲಕ್ಕೆ ಜೀರ್ಣೋದ್ಧಾರ ಮಾಡಿದ್ದಾರೆ. ಅರಸೀಕೆರೆಯ ಕ್ರಿ.ಶ. ೧೧೯೪ರ ೩ನೆಯ ನರಸಿಂಹನ ಕಾಲದ ಶಾಸನದಲ್ಲಿ[೩೨] ಅರಸೀಕೆರೆಯನ್ನು ಜೀರ್ಣೋದ್ಧಾರ ಮಾಡಿಸಿ, ತೂಬುಗಳನ್ನು ಇಟ್ಟಿರುವಂತಿದೆ. ಅದೇ ರೀತಿ ಕ್ರಿ.ಶ. ೧೨೭೨ರ ಅರಸೀಕೆರೆಯ ಮತ್ತೊಂದು ಶಾಸನವು[೩೩] ಮಹಾಪ್ರಧಾನ ದಂಡನಾಯಕ ಅರಸೀಕೆರೆಯ ತೂಬನ್ನು ಜೀರ್ಣೋದ್ಧಾರ ಮಾಡಿಸಿರುವುದಾಗಿ ಹೇಳುತ್ತದೆ.

ಕ್ರಿ.ಶ. ೧೧೯೦ರ ಶಾಸನವು[೩೪] ಅರಸೀಕೆರೆಯನ್ನು ಕಟ್ಟಿ ತೂಬನ್ನು ಇಟ್ಟವರು ಸರಸ್ವತಿ ಗಣದಾಸಿಗಳೆಂದು ಪ್ರಸಿದ್ಧರಾದ ಕೇತೋಜ ಮತ್ತು ಪುಲಿಗೆರೆಯ ಏಚೋಜರನ್ನು ಉಲ್ಲೇಖಿಸುತ್ತದೆ. ಹಾಗೆಯೇ ಕ್ರಿ.ಶ. ೧೩೧೦ರ ಶಾಸನವು ತೂಬುಗಳನ್ನಿಟ್ಟ ಕಲ್ಲುಕುಟಿಗರನ್ನು ಕುರಿತದ್ದಾಗಿದೆ. ಕೆರೆಯನ್ನು ನಿರ್ಮಿಸಲು ಉತ್ತಮ ಕುಶಲ ಕೆಲಸಗಾರರು ಬೇಕು ಎಂಬುದನ್ನು ಕ್ರಿ.ಶ. ೧೩೬೯ರ ಪೊರುಮಾಮಿಲ್ಲ ಶಾಸನ[೩೫] ಉಲ್ಲೇಖಿಸಿರುವಂತೆ, ತೂಬುಗಳನ್ನು ಕಟ್ಟಲು ಕಲ್ಲು ಕೆಲಸಗಾರರನ್ನು ನೇಮಿಸಿಕೊಳ್ಳಲಾಗಿತ್ತು. ಇವರು ಕೆರೆಯ ನಿರ್ಮಾಣ ತಂತ್ರಜ್ಞಾನದಲ್ಲಿ ಪರಿಣತರಾಗಿರುವಂತೆ ತಿಳಿದುಬರುತ್ತದೆ.

ಪ್ರಾಚೀನ ತೂಬುಗಳು ಸಾಮಾನ್ಯವಾಗಿ ಸ್ಥಳೀಯವಾಗಿ ದೊರೆಯುವ ಕಲ್ಲಿನಿಂದ ನಿರ್ಮಿಸಿದ್ದು, ಎರಡು ಕಂಬಗಳಿಂದ ಕೂಡಿರುತ್ತವೆ. ಈ ಕಂಬಗಳಿಗೆ ತಲೆಯಲ್ಲಿ ಒಂದು, ನಡುವಿನಲ್ಲಿ ಒಂದು ಅಡ್ಡಗಲ್ಲನ್ನು ಇರಿಸಲಾಗುತ್ತದೆ. ಈ ಎರಡು ಅಡ್ಡಕಲ್ಲುಗಳ ಮಧ್ಯ ಭಾಗದಲ್ಲಿ ಸುಮಾರು ೨೫ ಸೆಂ.ಮೀ. ವ್ಯಾಸದ ಒಂದು ರಂಧ್ರವಿರುತ್ತದೆ. ಇದರ ಮೂಲಕವಾಗಿ ರಂಧ್ರದ ಅಳತೆಗೆ ತಕ್ಕ ವ್ಯಾಸವುಳ್ಳ ಮರದ ತುಂಡನ್ನು ಇಟ್ಟು ರಂಧ್ರವನ್ನು ಮುಚ್ಚಲಾಗುತ್ತದೆ. ಈ ಮರದ ದಿಮ್ಮಿಯನ್ನು ಮೇಲಕ್ಕೆತ್ತಿದ್ದಾಗ ನೀರು ಕಾಲುವೆಯ ಮುಖಾಂತರ ಹರಿದು ಅಚ್ಚುಕಟ್ಟು ಪ್ರದೇಶಕ್ಕೆ ಹರಿದುಹೋಗುತ್ತದೆ. ಮರದ ವಿಶೇಷತೆ ಏನೆಂದರೆ ಅದು ನೀರಿನಲ್ಲಿ ನೆನೆದು ಹಿಗ್ಗುತ್ತದೆ. ಈ ರೀತಿಯಾಗಿ ಹಿಗ್ಗಿದ ಮರದ ತುಂಡು ರಂಧ್ರದಲ್ಲಿ ಬಿಗಿಯಾಗಿ ಕುಳಿತು ನೀರು ಹರಿಯುವುದನ್ನು ಅದಷ್ಟು ತಡೆಯುತ್ತದೆ. ತೂಬಿನ ಅಂತರ್‌ಮಾರ್ಗದ ಇನ್ನೊಂದು ತುದಿಗೆ ತೊಟ್ಟಿಯ ನಿರ್ಮಾಣವಿದ್ದು, ಒಂದು ಅಥವಾ ಮೂರು ಕಾಲುವೆಯನ್ನು ಸಂಪರ್ಕಿಸುತ್ತದೆ. ಈ ಬಗೆಯ ತೂಬುಗಳನ್ನು ಏರಿಯಿಂದ ಸುಮಾರು ೧೦ರಿಂದ ೧೫ ಅಡಿ ದೂರದಲ್ಲಿ ಇರಿಸಿದ್ದಾರೆ. ಇದರಿಂದ ಏರಿ, ತೂಬು ಮತ್ತು ಕಾಲುವೆಗಳಿಗೆ ಯಾವುದೇ ವಿಧವಾದ ಅಪಾಯ ಉಂಟಾಗುತ್ತಿರಲಿಲ್ಲ. ಪ್ರಾಚೀನ ಕಾಲದಲ್ಲಿ ನೀರ್ಗಂಟಿಗಳು ಈಜಿಕೊಂಡು ತೂಬಿಗೆ ಹೋಗುತ್ತಿದ್ದರು. ತೂಬಿಗೆ ಹಾಗೂ ಏರಿಯ ಕೆಳಪಾರ್ಶ್ವದಲ್ಲಿ ಇರುವ

ಕಾಲುವೆಗೂ ನಡುವೆ ಏರಿಯ ಮುಖಾಂತರ ರಚಿಸಲಾದ ಒಂದು ಸುರಂಗದ ಸಂಪರ್ಕ ಇರುತ್ತದೆ. ಹಳೆಯ ಕೆರೆಗಳಲ್ಲಿ ಸುರಂಗ ಕಲ್ಲು ಕಟ್ಟಡದ್ದಾಗಿರುತ್ತದೆ. ಈಗ ಜೀರ್ಣೋದ್ಧಾರ ಮಾಡುವ ಕೆರೆಗಳಲ್ಲಿ ಕಾಂಕ್ರೀಟು ಕೊಳಾಯಿಗಳ ಜೋಡಣೆ ಇರುತ್ತದೆ.

ತೂಬಿನ ನಿರ್ಮಾಣದಲ್ಲಿ ಕಲ್ಲಿನ ಜೊತೆಗೆ ಇಟ್ಟಿಗೆಯ ಬಳಕೆಯು ಕಂಡುಬಂದಿದೆ. ಉದಾಹರಣೆಗೆ ಚನ್ನರಾಪಟ್ಟಣ ತಾಲೂಕಿನ ದಿಡಗ ಕೆರೆಯ ಹಳೆಯ ತೂಬು ಇಂದು ನಾಶವಾಗಿದ್ದು, ಅಲ್ಲಿ ತೂಬಿಗೆ ಬಳಸಿರುವ ಇಟ್ಟಿಗೆಯ ಅವಶೇಷಗಳು ಕಂಡುಬಂದಿವೆ. ಇತ್ತೀಚೆಗೆ ಕಾಂಕ್ರೀಟ್ ಇಲ್ಲವೆ, ಸೈಜುಗಲ್ಲುಗಳ ತೂಬುಗಳನ್ನು ಕಟ್ಟಿದ್ದಾರೆ. ಈ ರೀತಿಯಾದ ತೂಬುಗಳು ಬೇಲೂರು ಮತ್ತು ಹಳೇಬೀಡು ಕೆರೆಗಳಲ್ಲಿ ಕಂಡುಬಂದಿವೆ. ಪ್ರಾಚೀನ ಕಾಲದ ಕೆರೆಗಳನ್ನು ಪುನರುಜ್ಜೀವನಗೊಳಿಸುವ ಸಂದರ್ಭದಲ್ಲಿ ಸರ್ಕಾರದ ನೀರಾವರಿ ಇಲಾಖೆಯವರು ಮೂಲ ತೂಬಿಗೆ ಯಾವುದೇ ವಿಧದ ಧಕ್ಕೆ ಉಂಟಾಗದಂತೆ ಮರದ ತುಂಡನ್ನೇ ಬಳಸಿದ್ದಾರೆ. ಅಂದರೆ ಇಲಾಖೆಯವರು ತೂಬಿನ ರಂಧ್ರಕ್ಕೆ ಮರದ ತುಂಡು ಇಟ್ಟು ಅದರ ಮೇಲ್ಭಾಗಕ್ಕೆ ಕಬ್ಬಿಣದ ಸಲಾಕೆಯನ್ನು ಅಳವಡಿಸಿ ತಿರಚುವ ಮೂಲಕ ಯಾಂತ್ರೀಕರಿಸಿದ್ದಾರೆ. ಕೆರೆ ಏರಿಯಿಂದ ತೂಬಿರುವ ಜಾಗವನ್ನು ತಲುಪಲು ಸಿಮೆಂಟ್ ಮತ್ತು ಕಬ್ಬಿಣದ ಚಿಕ್ಕ ಸೇತುವೆಯನ್ನು ಕೆಲವು ಕೆರೆಗಳಲ್ಲಿ ಅಳವಡಿಸಿದ್ದಾರೆ. ಉದಾ: ಅರಸೀಕೆರೆ ತಾಲೂಕಿನ ಪುರಲ್ಲೇಹಳ್ಳಿ ಕೆರೆ, ತಿಮ್ಮಪ್ಪನಾಯಕನ ಕೆರೆ, ದುಮ್ಮೇನಹಳ್ಳಿ ಕೆರೆ, ಬೇಲೂರು ತಾಲೂಕಿನ ಹಳೇಬೀಡು ಕೆರೆಗಳಲ್ಲಿ ಕಂಡುಬಂದಿವೆ.

ತಿಮ್ಮಪ್ಪನಾಯಕನ ಕೆರೆಯಲ್ಲಿ ಎರಡು ತೂಬುಗಳಿದ್ದು, ಅವುಗಳನ್ನು ಏರಿಯಿಂದ ೮ ಅಡಿ ದೂರದಲ್ಲಿ ಇರಿಸಲಾಗಿದೆ. ಈ ತೂಬುಗಳು ನಾಲ್ಕು ಕಂಬಗಳ ಮೇಲ್ಭಾವಣಿ ಇರುವ ಮಂಟಪದಂತೆ ರಚನೆಯಾಗಿದೆ. ಹಾಸನ ಪರಿಸರದಲ್ಲಿನ ಹೊಯ್ಸಳ ನಂತರದ ಕಾಲದ ತೂಬುಗಳನ್ನು ಅವುಗಳ ವಿನ್ಯಾಸದಿಂದ ಸ್ಪಷ್ಟವಾಗಿ ಗುರುತಿಸಬಹುದು. ಈ ಮಾದರಿಯ ತೂಬುಗಳು ಏರಿಯ ಸಮೀಪದಲ್ಲಿದ್ದು ಸುಮಾರು ೧೨ ಮತ್ತು ೧೫ ಅಡಿ ಎತ್ತರವಾಗಿ ವೃತ್ತಾಕಾರದ ಬಾವಿಯಂತೆ ನಿರ್ಮಾಣವಾಗಿವೆ. ಇಂತಹ ತೂಬುಗಳನ್ನು ಅರಸೀಕೆರೆ ತಾಲೂಕಿನ ಹಾರನಹಳ್ಳಿ ಕೆರೆ, ಹಳೆನಾಯಕನ ಕೆರೆ, ಹಾಸನ ತಾಲೂಕಿನ ಮೊಸಳೆ ಕೆರೆ ಮತ್ತು ಅರಕಲಗೂಡು ತಾಲೂಕಿನ ಕೊಣನೂರು ಕೆರೆಗಳಲ್ಲಿ ನೋಡಬಹುದಾಗಿದೆ.

ಇತ್ತೀಚಿನ ದಿನಗಳಲ್ಲಿ ಕೆರೆಗಳನ್ನು ಜೀರ್ಣೋದ್ಧಾರ ಮಾಡುವಾಗ ಹಳೆಯ ತೂಬುಗಳನ್ನು ನವೀಕರಿಸುವ ಬದಲು ಏರಿಗೆ ತೂಬುಗಳನ್ನು ಅಳವಡಿಸಿರುವುದು ಸಾಮಾನ್ಯವಾಗಿದೆ. ಕೆಲವು ತೂಬುಗಳಿಗೆ ಮರದ ದಿಮ್ಮಿಗಳಿಗೆ ಬದಲು ಕಬ್ಬಿಣದ ಬಾಗಿಲನ್ನು ಬಳಸಿದ್ದಾರೆ. ಉದಾಹರಣೆಗೆ ಚನ್ನರಾಯಪಟ್ಟಣ ಕೆರೆ, ಆನೆಕೆರೆ ಮತ್ತು ಜನಿವಾರ ಕೆರೆಗಳಲ್ಲಿ ಕಂಡುಬರುತ್ತವೆ. ಸಕಲೇಶಪುರ ಪರಿಸರದಲ್ಲಿನ ತೂಬುಗಳು ಏರಿಗೆ ಇರಿಸಿದಂತಿವೆ. ಈ ತೂಬುಗಳಿಗೆ ಮೇಲ್ಮುಖವಾಗಿ ವಿವಿಧ

ಅಂತರಗಳಲ್ಲಿ ನೀರು ಅಚ್ಚುಕಟ್ಟು ಪ್ರದೇಶಕ್ಕೆ ಹೋಗುವಂತೆ ರಂಧ್ರಗಳನ್ನು ಮಾಡಲಾಗಿದೆ. ನೀರಿನ ಪ್ರಮಾಣಕ್ಕೆ ಅನುಗುಣವಾಗಿ ಮರಳುಮೂಟೆ ಹಾಕಿ ತೂಬುಗಳನ್ನು ಮುಚ್ಚುತ್ತಿದ್ದರು.

ನೀರ್ಗಂಟಿಗಳು(ನೀರಗಂಟಿಗಳು)

ನೀರ್ಗಂಟಿಗಳನ್ನು ಗಂಗಮತಸ್ಥರೆಂದು ಕರೆಯುತ್ತಾರೆ. ಕೆರೆಯನ್ನು ಕಾಯುವುದು, ನೀರು ಪೋಲಾಗದಂತೆ ಕಾಪಾಡುವುದು, ಅಗತ್ಯವಿದ್ದಾಗ ಗದ್ದೆಗಳಿಗೆ ನೀರು ಬಿಡುವುದು ಇವರ ಕರ್ತವ್ಯವಾಗಿರುತ್ತದೆ. ತಳವಾರರು ಊರಿನ ರಕ್ಷಣೆಯ ಕಾರ್ಯದಲ್ಲಿದ್ದರೆ, ನೀರ್ಗಂಟಿಯಾದವರು ಕೆರೆಯ ನೀರನ್ನು ರಕ್ಷಿಸುವ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು. ಬೇಸಿಗೆ ಕಾಲದಲ್ಲಿ ನೀರನ್ನು ಉಳಿಸಲು ಎಚ್ಚರವಹಿಸುತ್ತಿದ್ದರು. ಹಳ್ಳಿಯ ರೈತರಿಗೆ ಅವರ ಬೆಳೆಗಳಿಗೆ ಅಗತ್ಯವಾದ ನೀರನ್ನು ಹಂಚಿಕೆ ಮಾಡುವುದು ಅವನ ಕಾಯಕ. ನೀರು ಕಡಿಮೆಯಾದಾಗ, ನೀರನ್ನು ಕಳ್ಳತನದಲ್ಲಿ ವಿಲೇಮಾಡುತ್ತಿದ್ದ ಎಂಬ ಶಂಕೆ ಬಾರದಿರಲಿ ಎಂದು ಆತ ವ್ಯವಸ್ಥಾಪಕರಿಗೆ ಲೆಕ್ಕ ಒಪ್ಪಿಸುತ್ತಿದ್ದನು.[೩೭]

ಹಿಂದೆ ಗದ್ದೆಗಳಿಗೆ ನೀರನ್ನು ಹಂಚುವಾಗ ಕ್ರಮವಾಗಿ ಹಂಚುತ್ತಿದ್ದರು. ಒಂದು ಗದ್ದೆಗೆ ನೀರು ಪೂರೈಕೆಯಾಗುವ ತನಕ ಮತ್ತೊಂದು ಗದ್ದೆಯವರು ಆ ನೀರನ್ನು ಕದಿಯಬಾರದೆಂದು ಗದ್ದೆಯ ಒಡ್ಡಿಗೆ ಮುದ್ರೆ ಹಾಕುವ ಪದ್ಧತಿ ಇತ್ತು. "ತೋಟಿ ತಳವಾರ ನೀರ್ಗಂಟಿ... ಆ ಮುದ್ರೆ ಕೋಲನ್ನು ತೆಗೆದುಕೊಂಡು ಹೋಗಿ ಮುದ್ರೆ ಹಾಕುವಂತೆ ನಿಬಂಧನೆ ಮಾಡಿದರು."[೩೮] ಈ ಕಾರಣದಿಂದ ತಳವಾರರು, ನೀರ್ಗಂಟಿಯವರು ಗ್ರಾಮ ಮತ್ತು ನೀರಿನ ರಕ್ಷಣೆಗಾಗಿ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸುತ್ತಿದ್ದರು. ಈ ಮುದ್ರೆ ಹಾಕುವ ಪದ್ಧತಿ ಇಂದಿಗೂ ಬೆಳೆದುಬಂದಿದೆ ಎನ್ನುವುದಕ್ಕೆ ಅರಸೀಕೆರೆ ತಾಲೂಕಿನ ಕಣಕಟ್ಟೆ ಕೆರೆ, ಜಾವಗಲ್ ಕೆರೆ, ಕೆಲ್ಲಂಗೆರೆ, ಕಾಮಸಮುದ್ರ ಕೆರೆ, ಹಾಸನ ತಾಲೂಕಿನ ಕೌಶಿಕ ಕೆರೆ, ಕೋರಮಂಗಲ ಕೆರೆ, ಹಂದಿನ ಕೆರೆ, ಶಾಂತಿಗ್ರಾಮ ಕೆರೆ ಮತ್ತು ಬೊಮ್ಮೇನಹಳ್ಳಿ ಕೆರೆಗಳಲ್ಲಿ ನೀರ್ಗಂಟಿಗಳ ಕಾಯಕವು ಸ್ಪಷ್ಟ ಉದಾಹರಣೆಯಾಗಿದೆ. ಇವರ ಕೆಲಸ ಕೆರೆಯನ್ನು ನೋಡಿಕೊಳ್ಳುವುದು ಹಾಗು ತೂಬುಗಳನ್ನು ಎತ್ತುವುದರ ಮೂಲಕ ಕಾಲುವೆಗಳಿಗೆ ನೀರು ಬಿಡುವುದು. ಈ ಸೇವೆಗಾಗಿ ಅವರಿಗೆ ಉತ್ತಮ ಭೂಮಿ ಉಂಬಳಿ ಇರುತ್ತಿತ್ತು. ಕೆರೆಯ ನೀರು ಉಪಯೋಗಿಸಿಕೊಂಡು ಬೆಳೆದ ಬೆಳೆಯಲ್ಲಿ ಪಲಾನುಭವಿಗಳು ವರ್ಷದ ಕೊನೆಯಲ್ಲಿ ಅಂದರೆ ಸುಗ್ಗಿಯ ಕಾಲದಲ್ಲಿ ಹೊರೆಹುಲ್ಲು ಹಾಗೂ ಮೂರಾ ಭತ್ತವನ್ನೂ ಪಡೆಯುತ್ತಿದ್ದರು. ಹೊರೆ ಹುಲ್ಲು ಎಂದರೆ, ಅವನು ಹೊರುವಷ್ಟು ಹುಲ್ಲಿನ ಕಂತೆಗಳು ಎಂದರ್ಥ. ಮುರಾ ಭತ್ತ ಎಂದರೆ ಬೆಳೆದ ಭತ್ತದಲ್ಲಿ ಒಂದು ಪಾಲು ಎಂದು ತೋರುತ್ತದೆ.[೩೯] ಪ್ರತಿಯೊಂದು ಖಂಡುಗ ಅಥವಾ ೧೯೨೦ ಸೇರು ಹುಟ್ಟುವಳಿಗೂ ನೀರುಗಂಟಿಗೆ ೨೪ ಸೇರು ಸಂದಾಯವಾಗುತ್ತಿತ್ತು. ಅಂದರೆ ಸುಮಾರು ಶೇ.೧.೨೫ ಎಂದು ಬುಕಾನನ್ ತನ್ನ ದಿನಚರಿಯಲ್ಲಿ ಹೇಳುತ್ತಾನೆ.[೪೦]

ನೀರ್ಗಂಟಿಯನ್ನು ಕುರಿತ ಗೀಜಿಹಳ್ಳಿಯ ಕ್ರಿ.ಶ. ೧೨ ಮತ್ತು ೧೩ನೆಯ ಶತಮಾನದ ಶಾಸನವು[೪೧] ನೀರ್ಗಂಟಿಯನ್ನು 'ನೀರಯ್ಯ'ನೆಂದು ಉಲ್ಲೇಖಿಸಿದ್ದು, ಅವನಿಗೆ ಕೆರೆ ಕೆಳಗಿನ ಐದು

ಕೊಳಗ ಭೂಮಿ ನೀಡಿರುವುದನ್ನು ತಿಳಿಸಿದೆ. ಪಾರಂಪರಿಕವಾಗಿ ಗ್ರಾಮಾಧಿಕಾರಿಗಳು ರದ್ದಾಗಿಹೋಗಿ, ಕೆರೆ ನೀರಿನ ನಿರ್ವಹಣೆಯನ್ನು ನೀರಾವರಿ ಇಲಾಖೆಗೆ ನೇಮಿಸಿದರು. ಇತ್ತೀಚಿನ ದಿನಗಳಲ್ಲಿ ಹಾಸನ ಪರಿಸರದ ಹೆಚ್ಚಿನ ಗ್ರಾಮಗಳಲ್ಲಿ ನೀರ್ಗಂಟಿಗಳಿಲ್ಲ. ಬದಲಾಗಿ ಕೆರೆಗೆ ನೀರು ಬಂದರೆ ಗ್ರಾಮದ ಜನರೇ ತೂಬುಗಳನ್ನು ಎತ್ತಿ ಜಮೀನುಗಳಿಗೆ ನೀರನ್ನು ಹಾಯಿಸಿಕೊಳ್ಳುತ್ತಾರೆ. ಅಮಾನಿಕೆರೆಗಳಲ್ಲಿ ಮಾತ್ರ ನೀರಾವರಿ ಇಲಾಖೆಯವರು ಪ್ರತ್ಯೇಕ ವ್ಯಕ್ತಿಗಳನ್ನು ನೇಮಿಸಿ ಸರ್ಕಾರದಿಂದ ವೇತನ ಪಡೆದುಕೊಳ್ಳುವಂತೆ ಮಾಡಿದ್ದಾರೆ. ನೀರ್ಗಂಟಿಗಳು ಉತ್ತಮ ಈಜುಗಾರರಾಗಿರಬೇಕಾಗಿತ್ತು. ಊರಿನ ಜಮೀನುಗಳಿಗೆ ಕೆರೆಯ ನೀರನ್ನು ಹಾಯಿಸಿಕೊಳ್ಳುವುದರಲ್ಲಿ ಅನ್ಯಾಯವಾಗದಂತೆ ಮಾಡುವುದು ಇವನ ಕರ್ತವ್ಯವಾಗಿತ್ತು.

ಹಿಂದೆ ನೀರ್ಗಂಟಿಗಳು ವಂಶಪಾರಂಪರ್ಯವಾಗಿ ನೇಮಕವಾಗುತ್ತಿದ್ದರು. ಅವರು ಹೆಚ್ಚಾಗಿ ತಳವಾರ(ವಾಲ್ಮೀಕಿ) ಜಾತಿಗೆ ಸೇರಿದವರಾಗಿರುತ್ತಿದ್ದರು. ಶಿಕ್ಷಣ ಪಡೆದಂತೆ, ವೃತ್ತಿಗಳು ಬದಲಾಗತೊಡಗಿದವು. ಬೇರೆ ಜನಾಂಗದವರು ಕೂಡ ನೀರ್ಗಂಟಿ ವೃತ್ತಿ ಮಾಡತೊಡಗಿದರು. ಉದಾಹರಣೆಗೆ ಅರಸೀಕೆರೆ ತಾಲೂಕಿನ ಹಾರನಹಳ್ಳಿ ಕೆರೆಯಲ್ಲಿ ಅಮೀರ್‌ಸಾಹಿರ್ ಎಂಬ ಮುಸ್ಲಿಂ ವ್ಯಕ್ತಿ, ಹಾಸನ ತಾಲೂಕಿನ ಮೆಲಗೋಡು ಹಿರೆಕೆರೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಕರಿಯಯ್ಯ, ಚನ್ನಯ್ಯ ಹಾಗೆಯೇ ಹೊನ್ನಾವರ ಕೆರೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ರಂಗಸ್ವಾಮಿ ಎಂಬುವರು ಸರ್ಕಾರದಿಂದ ವೇತನ ಪಡೆದು ನೀರ್ಗಂಟಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ ಕರ್ತವ್ಯಕ್ಕಾಗಿ ಜಮೀನನ್ನು ಕೂಡ ಬಿಟ್ಟಿದ್ದಾರೆ.

ತೂಬುಗಳ ಮೇಲಿನ ಉಬ್ಬುಶಿಲ್ಪಗಳು

ಜಿಲ್ಲೆಯ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲೂಕಿನ ಹಲವು ಸ್ಥಳಗಳ ಕೆರೆಯ ತೂಬುಗಳ ಮೇಲೆ ಗಜಲಕ್ಷ್ಮಿ ಮತ್ತು ಇತರ ದೇವರುಗಳಿಗೆ ಸಂಬಂಧಿಸಿದ ಉಬ್ಬುಶಿಲ್ಪಗಳು ಹಾಗೂ ಜಲಚರ ಪ್ರಾಣಿ ಮತ್ತು ಶಿಬಾರದ ಚಿತ್ರಣವಿರುವ ಉಬ್ಬುಶಿಲ್ಪಗಳನ್ನು ನೋಡಬಹುದು. ಅವುಗಳಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವು ಹೆಚ್ಚು ತೂಬುಗಳ ಮೇಲೆ ಸಾಮಾನ್ಯವಾಗಿ ಕಂಡುಬಂದಿವೆ. ಈ ಉಬ್ಬುಶಿಲ್ಪಗಳನ್ನು ಗಮನಿಸಿದಾಗ ಬಹುಶಃ ಸಮೃದ್ಧಿಯ ಸಂಕೇತಿಕವಾಗಿ ಕೆತ್ತಿರಬಹುದು. ಗಜಲಕ್ಷ್ಮಿ ಉಬ್ಬುಶಿಲ್ಪಗಳ ಪ್ರಾಚೀನತೆಯು ಶುಂಗರ ಕಾಲದಿಂದ ಕಂಡುಬಂದಿರುವುದಾಗಿ ಚುಡಾಮಣಿ ನಂದಾಗೋಪಾಲ್ ಅವರು 'ಗಜಲಕ್ಷ್ಮಿಯ ಸಾಂಕೇತಿಕ ವಿನ್ಯಾಸ ಒಂದು ಅಧ್ಯಯನ' ಎಂಬ ಲೇಖನದಲ್ಲಿ ವಿವರಿಸಿದ್ದಾರೆ.[೪೨]

ಅರಸೀಕೆರೆ ಹೋಬಳಿಯಲ್ಲಿ ಬರುವ ಗ್ರಾಮ ಶಂಕರನಹಳ್ಳಿ. ಗ್ರಾಮದ ಪಶ್ಚಿಮಕ್ಕೆ ಕೆರೆ ಇದೆ. ಅದನ್ನು ಸಿಂಗಿನಕೆರೆ ಅಥವಾ ಊರಮುಂದಿನ ಕೆರೆ ಎಂದು ಕರೆಯುತ್ತಾರೆ. ಕೆರೆಯು ಯಾವಾಗ ನಿರ್ಮಾಣವಾಯಿತು ಎಂಬುದರ ಬಗೆಗೆ ಯಾವುದೇ ರೀತಿಯ ಶಾಸನಗಳ ದಾಖಲೆಗಳಿಲ್ಲ.

ತೂಬಿನ ರಚನೆ ಮತ್ತು ಅದರ ಮೇಲಿರುವ ಉಬ್ಬುಶಿಲ್ಪಗಳಿಂದ ಬಹುಶಃ ಹೊಯ್ಸಳ ಕಾಲದಲ್ಲಿ ನಿರ್ಮಾಣವಾಗಿರುವಂತೆ ಕಂಡುಬರುತ್ತದೆ. ಏರಿಯಿಂದ ಸುಮಾರು ೧೨ ಅಡಿ ದೂರದಲ್ಲಿ ಒಂದು ತೂಬನ್ನು ಇರಿಸಲಾಗಿದೆ. ಇಂದು ನಿರ್ವಹಣೆಯಿಲ್ಲದೆ ಹಾಳಾಗಿದೆ. ಈ ತೂಬಿನ ಒಂದು ಬದಿಯಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಅದರ ಮೇಲ್ಭಾಗದಲ್ಲಿ ನೃತ್ಯಭಂಗಿಯಲ್ಲಿರುವ ಉಬ್ಬುಶಿಲ್ಪಗಳಿವೆ. ತೂಬಿನ ಮತ್ತೊಂದು ಬದಿಯಲ್ಲಿ ಕಾಲ್ಪನಿಕ ಪ್ರಾಣಿಯ ಮೇಲೆ ಸ್ತ್ರೀ ಮತ್ತು ಪುರುಷಶಿಲ್ಪಗಳನ್ನು ಬಿಡಿಸಲಾಗಿದೆ. ಅದರ ಮೇಲಿನ ಪಟ್ಟಿಕೆಯಲ್ಲಿ ಗರುಡನ ಉಬ್ಬುಶಿಲ್ಪವಿದೆ. ತೂಬಿನಲ್ಲಿರುವ ಶಿಲ್ಪಗಳನ್ನು ಗಮನಿಸಿದಾಗ ಗಜಲಕ್ಷ್ಮಿ ಶಿಲ್ಪವು ಸಮೃದ್ಧಿಯ ಸಂಕೇತವಾಗಿದ್ದರೆ, ಗರುಡಶಿಲ್ಪವು ಶ್ರೀವೈಷ್ಣವ ಧರ್ಮವನ್ನು ಸೂಚಿಸುತ್ತದೆ. ಹಾಗೆಯೇ ನೃತ್ಯ ಭಂಗಿಯ ಶಿಲ್ಪಗಳು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಇಲ್ಲಿ ಕಾಲ್ಪನಿಕ ಪ್ರಾಣಿಯನ್ನು ಮಕರವೆಂದು ಅದರ ಮೇಲೆ ಕುಳಿತಿರುವ ಸ್ತ್ರೀ ಮತ್ತು ಪುರುಷಶಿಲ್ಪಗಳನ್ನು ವರುಣ ಮತ್ತು ಆತನ ಪತ್ನಿಯ ಶಿಲ್ಪಗಳೆಂದು ಗುರುತಿಸಲಾಗಿದೆ. ತೂಬು ಸವೆದಿರುವ ಕಾರಣ ಶಿಲ್ಪಗಳನ್ನು ಸ್ಪಷ್ಟವಾಗಿ ಗುರುತಿಸುವುದು ಕಷ್ಟಕರವಾಗಿದೆ.

ಶ್ರವಣಬೆಳಗೊಳದಿಂದ ೨ ಕಿ.ಮೀ. ದೂರದಲ್ಲಿರುವ ಹೊಸಹಳ್ಳಿ ಕೆರೆಯ ಏರಿಯಿಂದ ೧೨ ಅಡಿ ಅಂತರದಲ್ಲಿ ಒಂದು ಹಳೆಯ ತೂಬು ಇದೆ. ತೂಬಿನ ಒಂದು ಬದಿಯ ನಡುವೆ ಮುಕ್ಕೊಡೆ ಇರುವ ಜಿನತೀರ್ಥಂಕರನ ಶಿಲ್ಪವಿದ್ದು, ಅದರ ಎರಡು ಬದಿಯಲ್ಲಿ ಯಕ್ಷ ಯಕ್ಷಿಯರ ಉಬ್ಬುಶಿಲ್ಪಗಳು ಮತ್ತು ಶಾಸನವೊಂದು ಕಂಡುಬರುತ್ತದೆ. ಮತ್ತೊಂದು ಬದಿಯಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವನ್ನು ಚಿತ್ರಿಸಲಾಗಿದೆ. ಈ ತೂಬು ಇಂದು ಕಾರ್ಯ ನಿರ್ವಹಣೆಯಲ್ಲಿಲ್ಲ. ಕೆರೆಯ ಪಕ್ಕದಲ್ಲಿ ಜೈನ ಬಸದಿ ಇರುವುದರಿಂದ ಅದರ ಪ್ರತೀಕವಾಗಿ ತೂಬಿನ ಮೇಲೆ ಜೈನಶಿಲ್ಪವನ್ನು ಕೆತ್ತಿರಬಹುದು. ಹಾಗೆಯೇ ಗಜಲಕ್ಷ್ಮಿಯ ಶಿಲ್ಪವನ್ನು ಸಮೃದ್ಧಿಯ ಸಂಕೇತವಾಗಿ ಬಳಸಿರುವಂತೆ ಕಂಡುಬರುತ್ತದೆ.

ಅರಸೀಕೆರೆಯಿಂದ ೧೨ ಕಿ.ಮೀ. ದೂರದಲ್ಲಿ ಹಿರಿಯೂರು ಗ್ರಾಮವಿದೆ. ಗ್ರಾಮದ ಪಶ್ಚಿಮಕ್ಕೆ ಕೆರೆ ಇದ್ದು ೩ ತೂಬುಗಳನ್ನು ಹೊಂದಿದೆ. ಇದರಲ್ಲಿ ೨ ತೂಬುಗಳನ್ನು ಇತ್ತೀಚೆಗೆ ಏರಿಗೆ ಇರಿಸಲಾಗಿದೆ. ಒಂದು ಹಳೆಯ ತೂಬು ಇದ್ದು, ಅದರ ಮೇಲೆ ಗಜಲಕ್ಷ್ಮಿಯ ಉಬ್ಬುಶಿಲ್ಪವಿದ್ದು, ಶಿಲ್ಪದ ಎಡ ಬಲದಲ್ಲಿ ಕಲಶಗಳಿವೆ. ಬಲಭಾಗದ ಕಲಶದ ಪಕ್ಕ ಒಂದು ಚಕ್ರ ಇದೆ. ಎಡಭಾಗದ ಚಕ್ರವು ಕಾಣದಂತೆ ತೂಬು ಮುರಿದು ಹಾಳಾಗಿದೆ. ಈ ತೂಬಿನ ಉಬ್ಬುಶಿಲ್ಪಗಳು ಸಮೃದ್ಧಿಯನ್ನು ಸಂಕೇತಿಸುತ್ತವೆ. ಇಲ್ಲಿನ ಉಬ್ಬುಶಿಲ್ಪಗಳ ಮೇಲೆ ಶಾಸನವನ್ನು ಕೆತ್ತಲಾಗಿದೆ.

ದೇವಾಲಯದ ಶಿಖರದ ಮಾದರಿಯಂತೆ ತೂಬಿನ ರಚನೆ ಚನ್ನರಾಯಪಟ್ಟಣ ತಾಲೂಕಿನ ಸುಗ್ಗೇಹಳ್ಳಿ ಕೆರೆಯಲ್ಲಿ ಕಂಡುಬಂದಿದೆ. ಏರಿಯಿಂದ ಸುಮಾರು ೧೮ ಅಡಿ ದೂರದಲ್ಲಿದ್ದು, ಸುಮಾರು ೧೦ ಅಡಿಗಳಷ್ಟು ಎತ್ತರವಿದೆ. ದೇವಾಲಯದ ಶಿಖರದ ಮಾದರಿಯಂತೆ ಈ ತೂಬನ್ನು ನಿರ್ಮಿಸಲಾಗಿದೆ. ತೂಬಿನ ಮುಂಭಾಗದಲ್ಲಿ ಸಮೃದ್ಧಿಯ ಸಂಕೇತವಾಗಿ ಗಜಲಕ್ಷ್ಮಿಯ ಉಬ್ಬುಶಿಲ್ಪವನ್ನು

ಬಿಡಿಸಲಾಗಿದೆ. ಇದರ ಮೇಲ್ಭಾಗದ ಪಟ್ಟಿಕೆಯಲ್ಲಿ ನಡುವೆ ಯೋಗನರಸಿಂಹನ ಶಿಲ್ಪವಿದ್ದು, ಎಡಭಾಗದಲ್ಲಿ ವೇಣುಗೋಪಾಲ ಮತ್ತು ಲಕ್ಷ್ಮಿಯ ಉಬ್ಬುಶಿಲ್ಪಗಳಿವೆ. ಬಲಭಾಗದಲ್ಲಿ ಗೋವರ್ಧನ ಕೃಷ್ಣ ಮತ್ತು ಗರುಡನ ಉಬ್ಬುಶಿಲ್ಪಗಳಿವೆ. ತೂಬಿನ ಹಿಂಭಾಗದಲ್ಲಿ ನಡುವೆ ವಿಷ್ಣುಶಿಲ್ಪವಿದ್ದು, ಎಡಭಾಗದಲ್ಲಿ ಗರುಡ ಮತ್ತು ಲಕ್ಷ್ಮಿಯ ಶಿಲ್ಪವಿದ್ದರೆ ಬಲಭಾಗದಲ್ಲಿ ಕಾಳಿಂಗಮರ್ದನ ಕೃಷ್ಣ ಮತ್ತು ಗಣೇಶನ ಶಿಲ್ಪಗಳಿವೆ. ತೂಬು ಸವೆದಿರುವ ಕಾರಣ ಶಿಲ್ಪಗಳು ಸ್ಪಷ್ಟವಾಗಿ ಕಾಣಿಸುತ್ತಿಲ್ಲ. ಗ್ರಾಮದಲ್ಲಿ ಲಕ್ಷ್ಮೀನಾರಾಯಣ ದೇವಾಲಯವಿದೆ. ಆ ದೇವಾಲಯದಲ್ಲಿರುವ ಶಿಲ್ಪಗಳನ್ನು ಈ ತೂಬಿನ ಮೇಲೆ ಬಿಡಿಸಿದಂತೆ ಕಂಡುಬರುತ್ತದೆ. ಇದು ಶ್ರೀವೈಷ್ಣವ ಧರ್ಮವನ್ನು ಸೂಚಿಸುತ್ತದೆ. ಹಾಗೆಯೇ ಜಿಲ್ಲೆಯ ಅರಸೀಕೆರೆ ತಾಲೂಕಿಗೆ ಸೇರಿದ ನೇರ್ಲಿಗೆ ಕೆರೆಯು ೨ ತೂಬುಗಳನ್ನು ಹೊಂದಿದೆ. ದಕ್ಷಿಣ ದಿಕ್ಕಿನ ಕೋಡಿ ಸಮೀಪ ಒಂದು ತೂಬು ಇದೆ. ಅದರ ಮೇಲೆ ಗಜಲಕ್ಷ್ಮಿ ಶಿಲ್ಪ ಮತ್ತು ಕಲಶವನ್ನು ಸಮೃದ್ಧಿಯ ಸಂಕೇತವಾಗಿ ಕೆತ್ತಲಾಗಿದೆ. ಅವುಗಳ ಜೊತೆಗೆ ಕೆರೆಯ ನೀರಿನಲ್ಲಿ ವಾಸಿಸುವ ಜಲಚರ ಪ್ರಾಣಿಗಳಾದ ಆಮೆ ಮತ್ತು ಮೀನುಗಳ ಉಬ್ಬುಶಿಲ್ಪಗಳನ್ನು ತೂಬಿನ ಮೇಲೆ ಆಲಂಕಾರಿಕವಾಗಿ ಕಂಡರಿಸಲಾಗಿದೆ.

ತಾಲೂಕಿನಿಂದ ಸುಮಾರು ೧೦ ಕಿ.ಮೀ. ದೂರದಲ್ಲಿ ಬರುವ ಪುರಲ್ಲೇಹಳ್ಳಿ. ಗ್ರಾಮದ ಉತ್ತರದಿಕ್ಕಿಗೆ ಕೆರೆ ಇದೆ. ಕೆರೆಯು ಯಾವಾಗ ನಿರ್ಮಾಣವಾಯಿತು ಎಂಬುದರ ಬಗ್ಗೆ ಯಾವುದೇ ಶಾಸನಗಳ ಉಲ್ಲೇಖಗಳಿಲ್ಲ. ಕೆರೆಯ ಏರಿಯಿಂದ ಸುಮಾರು ೫ ಅಡಿ ದೂರದಲ್ಲಿ ಹಳೆಯ ತೂಬು ಇದ್ದು, ಪ್ರಸ್ತುತ ದಿನಗಳಲ್ಲಿ ನಿರ್ವಹಣೆಯಲ್ಲಿಲ್ಲ. ತೂಬಿನ ಮೇಲೆ ಶಿಬಾರದ ಸಂಕೇತವು ಕಂಡುಬಂದಿದೆ. ಈ ರೀತಿಯ ರಚನೆಯು ಉತ್ತರ ಕರ್ನಾಟಕದ ಬಳ್ಳಾರಿ, ಗದಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬಂದಿವೆ. ಇದನ್ನು ಮೈಲಾರ ಸಂಪ್ರದಾಯದವರು ಶಿಬಾರಕಟ್ಟೆ ಎಂದು ಕರೆಯುತ್ತಿದ್ದರು. ಕುರುಬ ಜನಾಂಗದವರು ಹೆಚ್ಚಾಗಿ ಮೈಲಾರನ ಆರಾಧನೆ ಮಾಡುತ್ತಿದ್ದರು. ಅದರ ಸಂಕೇತವಾಗಿ ಎರಡು ಕಲ್ಲುಗಳ ಮೇಲೆ ಒಂದು ಅಡ್ಡಪಟ್ಟಿ ಇಟ್ಟು ಅದರ ಎರಡು ಕೊನೆ ಅಂಚಿನಲ್ಲಿ ಕಲಶ ಮಾದರಿಯಂತೆ ಕೆತ್ತಿದ್ದು, ಮಧ್ಯದಲ್ಲಿ ತ್ರಿಶೂಲವನ್ನು ಕಂಡರಿಸಲಾಗಿದೆ. ಈ ಮಾದರಿಯನ್ನು ಶಿಬಾರಕಟ್ಟೆ ಎಂದು ಕರೆಯುತ್ತಾರೆ. ಈ ಮಾದರಿಯ ಸಂಕೇತವು ದಕ್ಷಿಣ ಕರ್ನಾಟಕದ ನಾಗಮಂಗಲ ಪರಿಸರದಲ್ಲಿಯೂ ಕಂಡುಬಂದಿವೆ. ಆದರೆ ತೂಬಿನ ಮೇಲೆ ಈ ಬಗೆಯ ರಚನೆ ಕಂಡುಬಂದಿರುವುದು ವಿಶೇಷ ಎನ್ನಬಹುದು. ಬಹುಶಃ ಈ ಪರಿಸರದಲ್ಲಿ ಹೆಚ್ಚಾಗಿ ಕುರುಬ ಜನಾಂಗ ಇರುವುದರಿಂದ ಮೈಲಾರ ಸಂಪ್ರದಾಯ ಇಲ್ಲಿಯೂ ಕೂಡ ಬೆಳೆದು ಬಂದಿರಬಹುದು. ಅದರ ಸಂಕೇತವಾಗಿ ತೂಬಿನ ಮೇಲೆ ಶಿಬಾರವನ್ನು ನಿರ್ಮಿಸಿರಬಹುದು.

೩.೬. ಕೋಡಿಗಳು

ಕೆರೆಯ ವಿವಿಧ ಭಾಗಗಳಲ್ಲಿ ಕೋಡಿಯು ಒಂದು. ಪ್ರತಿಯೊಂದು ಕೆರೆಯಲ್ಲಿಯೂ ತೂಬಿನ

ಜೊತೆಗೆ ಕಟ್ಟಡದ ಕೋಡಿಯೂ ಇರುತ್ತಿತ್ತು. ಕೆರೆಯ ಗಾತ್ರವನ್ನು ಆಧರಿಸಿ ಒಂದು ಮತ್ತು ಎರಡು ಕೋಡಿಗಳು ಕಂಡುಬರುತ್ತವೆ. ಇವುಗಳ ಮೂಲಕ ಕೆರೆಯಲ್ಲಿನ ಹೆಚ್ಚುವರಿ ನೀರು ಕೆಳಗಿನ ಇತರೆ ಕೆರೆಗಳಿಗೆ ಹರಿದುಹೋಗುತ್ತದೆ. ಕೋಡಿಗಳ ಅಗಲ ೩೦ರಿಂದ ೩೦೦ ಅಡಿಗಳವರೆಗೂ ಇರುತ್ತಿತ್ತು. ಹಾಸನ ತಾಲೂಕಿನ ಹೆರಗು ಕೆರೆ, ಹೊನ್ನಾವರ ಕೆರೆ, ಚಿಕ್ಕಕಡಲೂರು ಕೆರೆ ಮತ್ತು ಮೊಸಳೆ ಕೆರೆ ಅರಕಲಗೂಡು ತಾಲೂಕಿನ ರುದ್ರಪಟ್ಟಣ ಕೆರೆ, ಕಾಳೇನಹಳ್ಳಿ ಕೆರೆ, ಚನ್ನರಾಯಪಟ್ಟಣ ತಾಲೂಕಿನ ಕೆಂಬಾಳು ಕೆರೆ ಮತ್ತು ಚನ್ನರಾಯಪಟ್ಟಣ ಕೆರೆ ಕೋಡಿಗಳ ಅಗಲ ಸುಮಾರು ೧೦೦ ಅಡಿಗಳಷ್ಟು ಇದೆ. ಹೊಳೆನರಸೀಪುರ ತಾಲೂಕಿನ ಜೋಡಿಗುಬ್ಬಿ ಕೆರೆಯಲ್ಲಿ ಸುಮಾರು ೧೫೦ ಅಡಿ ಅಗಲದ ಕೋಡಿ ಇದ್ದರೂ, ಕೆರೆಯಲ್ಲಿ ಹೂಳು ತುಂಬಿರುವುದರಿಂದ ಕೋಡಿಯ ರಚನೆ ಸ್ಪಷ್ಟವಾಗಿ ಕಂಡುಬಂದಿಲ್ಲ.

ಕೋಡಿಯ ಕಟ್ಟಡವನ್ನು ಬಲವಾಗಿ ಕಟ್ಟದಿದ್ದರೆ ಕೋಡಿಯ ಮೇಲೆ ಹರಿಯುವ ನೀರಿನ ರಭಸಕ್ಕೆ ಎಲ್ಲವೂ ಕೊಚ್ಚಿಕೊಂಡು ಹೋಗುತ್ತದೆ. ಆದ್ದರಿಂದ ಕೋಡಿಗಳನ್ನು ಸುತ್ತಮುತ್ತ ಸಿಗುವ ದೊಡ್ಡ ದೊಡ್ಡ ಆಕಾರದ ಬಂಡೆಕಲ್ಲುಗಳಿಂದ ಭದ್ರಗೊಳಿಸಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಕೆರೆಗಳ ಕೋಡಿಗಳ ಆಕಾರ ಚಚ್ಚೌಕಾಕಾರವಾಗಿ ಕಂಡುಬಂದರೆ, ಅರಕಲಗೂಡು ತಾಲೂಕಿನ ಕೊಣನೂರು ಕೆರೆಯ ಕೋಡಿಯು ಅರ್ಧಚಂದ್ರಾಕೃತಿಯಲ್ಲಿದೆ. ಹೊಳೆನರಸೀಪುರದ ತಾತನಹಳ್ಳಿ ಕೆರೆಯ ಕೋಡಿಯನ್ನು ಕುದುರೆಯ ಲಾಳಾಕೃತಿಯಂತೆ ಕಟ್ಟಲಾಗಿದೆ. ಈ ಬಗೆಯ ಕೋಡಿಗಳನ್ನು ಗಮನಿಸಿದಾಗ ನೀರಿನ ಒತ್ತಡದಿಂದ ಕೋಡಿಗೆ ಹಾನಿಯಾಗಬಾರದೆಂಬ ಉದ್ದೇಶದಿಂದ ಈ ಮಾದರಿಯಲ್ಲಿ ರೂಪಿಸಿರಬಹುದು. ಕೋಡಿಗಳನ್ನು ಕೆರೆಗಳಿಗೆ ಅಳವಡಿಸಿರುವುದರಿಂದ ಕೆರೆಯಲ್ಲಿ ತೇಲಿಬಂದ ಮೃಗಗಳ ಶವ, ಗಿಡಗಂಟಿ, ಕಲ್ಮಷಗಳನ್ನು ಕೆರೆಯಿಂದ ಹೊರಗೆ ತಳ್ಳಿ ಕೆರೆಯನ್ನು ನಿರ್ಮಲಗೊಳಿಸುತ್ತದೆ. ಇಂತಹ ಕೋಡಿಗಳನ್ನು ಕೆರೆಯ ತಗ್ಗಿನ ಬದಿಯಲ್ಲಿ ಒಂದು ಮಟ್ಟದ ಎತ್ತರದಲ್ಲಿ ನಿರ್ಮಿಸಿರುತ್ತಾರೆ. ಇದರ ಉದ್ದ ಎಷ್ಟು ಇರುತ್ತದೆಯೋ ಅಷ್ಟೇ ಅಗಲವಿದ್ದು ತಲೆ ಭಾಗಕ್ಕೆ ಮೂರು ಅಡಿಗೆ ಒಂದರಂತೆ ಜೋಡಿಸಲಾಗದ ಕಲ್ಲುಗಳು ಇವೆ. ಕೋಡಿಯ ಮುಂಭಾಗದಲ್ಲಿ ಒಂದು ಮತ್ತು ಮೂರು ಅಡಿ ಎತ್ತರದ ಗೋಡೆ ಇದ್ದು, ಮಣ್ಣಿನ ಗುಣಕ್ಕೆ ತಕ್ಕಂತೆ ಅಳ ಮತ್ತು ಅದಕ್ಕೆ ಅನುಗುಣವಾಗಿ ನಾಲ್ಕುವರೆ ಅಡಿ ಮುಂಚಾಚುವಂತೆ ದೊಡ್ಡ ಕಲ್ಲುಗಳಿವೆ. ಕೋಡಿಗೆ ರಕ್ಷಣೆಯನ್ನು ಒದಗಿಸಲು ಗೋಡೆಯ ಪಕ್ಕದಲ್ಲಿ ಒರಟುಗಲ್ಲು ಮತ್ತು ಇಟ್ಟಿಗೆಗಳಿಂದ ಪಾರ್ಶ್ವಗೋಡೆಗಳನ್ನು ಕಟ್ಟಲಾಗಿದೆ. ಕೋಡಿಯ ಮೇಲೆ ಹರಿಯುವ ನೀರಿನ ರಭಸವನ್ನು ತಗ್ಗಿಸಲು ಗೋಡೆಯ ಕೆಳಪಾರ್ಶ್ವಕ್ಕೆ ಕಲ್ಲುಗಳನ್ನು ಸೂಕ್ತವಾದ ತಳಹದಿಯ ಮೇಲೆ ಇಳಿಜಾರಾದ ಹೊದಿಕೆಯಂತೆ ಕೋಡಿಯ ತಲೆಯಿಂದ ಕಂದರದ ಅಡಿಯವರೆಗೂ ಜೋಡಿಸಲಾಗಿದೆ. ಕೆಲವು ಕೋಡಿಗಳು ಕಂಬಗಳಿಂದ ಕೂಡಿವೆ. ಇವು ಕೋಡಿಯ ಮೇಲೆ ಹರಿಯುವ ನೀರಿನ ವೇಗವನ್ನು ತಡೆಗಟ್ಟಿ ಕೋಡಿಗೆ ಆಗಬಹುದಾದ ಅಪಾಯವನ್ನು ತಪ್ಪಿಸುತ್ತವೆ. ಕೆರೆಯಲ್ಲಿ ಹೆಚ್ಚು ನೀರು ಸಂಗ್ರಹ ಮಾಡಬೇಕೆಂದಾಗ ಈ ಕಂಬಗಳ ಮಧ್ಯ ಉಸುಗಿನ ಚೀಲ,

ಮರದ ತೊಪ್ಪಲು ಹಾಗೂ ಕೆಸರುಮಣ್ಣಿನಿಂದ ಮುಚ್ಚಿ ನೀರನ್ನು ಶೇಖರಿಸುತ್ತಾರೆ. ಈ ರೀತಿಯ ಕೋಡಿಗಳನ್ನು ಹಳೇಬೀಡು ಮತ್ತು ಬೇಲೂರು ಕೆರೆಗಳಿಗೆ ಅಳವಡಿಸಿದ್ದು ಇಂದು ಅವುಗಳ ಅವಶೇಷಗಳನ್ನು ಮಾತ್ರ ನೋಡಬಹುದು. ಕರ್ನಾಟಕದ ಅತ್ಯಂತ ದೊಡ್ಡ ಕೋಡಿಯು ಹಾವೇರಿ ಜಿಲ್ಲೆಯ ಮದಗ ಮಾಸೂರಿನ ಕೆರೆಯಲ್ಲಿ ಇದೆ.[೪೩]

ಕೋಡಿಗಳನ್ನು ವಿವಿಧ ದಿಕ್ಕುಗಳಲ್ಲಿ ಕಟ್ಟಿ ಭೂದಾನ ನೀಡಿರುವ ಉಲ್ಲೇಖಗಳು ಹಾಸನ ಜಿಲ್ಲೆಯ ಶಾಸನಗಳಲ್ಲಿವೆ. ಅರಸೀಕೆರೆ ತಾಲೂಕಿನ ಕಣಕಟ್ಟೆಯ ಕ್ರಿ.ಶ. ೧೧೭೩–೭೪ರ ಶಾಸನವು[೪೪] ಚಟ್ಟಬೋವನು ಲಿಂಗಪ್ರತಿಷ್ಠೆ ಮಾಡಿ, ದೇವಾಲಯ ಮತ್ತು ಕೆರೆಯನ್ನು ಕಟ್ಟಿಸಿ, ದೇವಾಲಯದ ನೈವೇದ್ಯಕ್ಕೆ ನಿಡುಗಟ್ಟದ ಕೆರೆಯ ಪಡುವಣ ಕೋಡಿಯ ಗದ್ದೆಯ ೩ ಸಲಗೆ ದತ್ತಿಬಿಟ್ಟಿರುವುದನ್ನು ತಿಳಿಸಿದೆ. ಹಾಸನದ ಕ್ರಿ.ಶ. ೧೨೧೭ರ ಹೆರಗು ಶಾಸನದಲ್ಲಿ[೪೫] ದಕ್ಷಿಣ ಕಾಶ್ಮೀರ ಸರಸ್ವತಿಪುರವಾದ ಹೆರಗಿನ ಆಶೇಷ ಮಹಾಜನಗಳು ಹಿರಿಯ ಕೆರೆಯ ತೆಂಕಣ ಕೋಡಿಯ ಗದ್ದೆಯ ಕೆಳಗೆ ೧೦, ಕೆರೆಯ ಬಡಗಣ ಕೋಡಿಯ ಗದ್ದೆ ಸಲಗೆ ೩ನ್ನು ಲಕ್ಷ್ಮೀನಾರಾಯಣ ದೇವಾಲಯಕ್ಕೆ ದಾನ ನೀಡಿರುವುದನ್ನು ಉಲ್ಲೇಖಿಸಿದೆ. ಅರಸೀಕೆರೆಯ ಕ್ರಿ.ಶ. ೧೧೯೦ರ ಶಾಸನದಲ್ಲಿ[೪೬] ವೀರಬಲ್ಲಾಳನ ಪಟ್ಟದರಸಿ ಉಮಾದೇವಿಯು ಕೆರೆಯ ಕೋಡಿಯ ಸಂರಕ್ಷಣೆಗಾಗಿ ತಿಪ್ಪೆಸುಂಕ. ಆಲೆವೆತ್ತ, ಮಾನೆಣ್ಣೆ, ಹಂದರವಣ ಪೊಡೆಮೆಳಸು, ಅರಿಶಿನ, ಅಡಕೆಯ ಹೇರು, ಸೀರೆಯ ಮಳವೆ, ಎಲೆಯ ಹೇರಿನ ಆಯಗಳನ್ನೆಲ್ಲಾ ನೀಡಿರುವುದು ಗಮನಾರ್ಹ. ವೀರಬಲ್ಲಾಳನ ಕಾಲದ ಕ್ರಿ.ಶ. ೧೨೪೮ರ ಬಾಗವಾಳು ಶಾಸನವು[೪೭] ಮಲ್ಲೆನಾಯಕನ ಮಗ ಮಾದಜಿಯ ಬೊಮ್ಮಯ್ಯ ಊರಿನ ಮೂಡಣಕೆರೆಗೆ ತೆಂಕಣಕೋಡಿಯನ್ನು ಕಟ್ಟಿಸಿದ್ದಕ್ಕಾಗಿ ಆ ಕೆರೆಯ ಸಮೀಪ ೧ ಸಲಗೆ, ೧೦ ಖಂಡುಗ ಗದ್ದೆಯನ್ನು ಆತನ ಕೆಲಸಕ್ಕೆ ಪ್ರತೀಕವಾಗಿ ಕೊಟ್ಟಿರುವುದನ್ನು ಸೂಚಿಸುತ್ತದೆ. ಕೆರೆಗಳನ್ನು ಕಾಲ ಕಾಲಕ್ಕೆ ಜೀರ್ಣೋದ್ಧಾರ ಮಾಡುವಾಗ ತೂಬು ಮತ್ತು ಕೋಡಿಗಳನ್ನು ನವೀಕರಿಸಿರುವುದು ಅರಸೀಕೆರೆಯ ಕ್ರಿ.ಶ. ೧೧೯೪ರ ಶಾಸನದಲ್ಲಿದೆ.[೪೮]

ವಿಜಯನಗರ ಕಾಲದಲ್ಲಿ ಕೆಲವು ತಜ್ಞರು ಕೋಡಿಯನ್ನು ಕಟ್ಟುವುದರಲ್ಲಿಯೇ ಪರಿಣತಿಯನ್ನು ಹೊಂದಿದ್ದರು ಎಂಬುದಾಗಿ ಒಂದು ಶಾಸನವು ತಿಳಿಸುತ್ತದೆ. ವೆಂಕಟಪತಿರಾಯನ ಕಾಲದ ರುದ್ರಪ್ಪನಾಯಿಡು ಎಂಬಾತನು ಕೋಡಿಯನ್ನು ಕಟ್ಟುವುದರಲ್ಲಿ ಪರಿಣತಿಯನ್ನು ಹೊಂದಿದ್ದು ಅವನು ಕೊಲ್ಲೂರು ಕೆರೆಗೆ ಮೂವತ್ತೂರು ಕಂಬಗಳಿರುವ ಕೋಡಿಯನ್ನು ನಿರ್ಮಿಸುತ್ತಾನೆಂದು ಶಾಸನವು ಉಲ್ಲೇಖಿಸಿದೆ.[೪೯] ಕೆಲವು ಕೆರೆಗಳಿಗೆ ಬೇರೆ ಬೇರೆ ದಿಕ್ಕಿನಲ್ಲಿ ಕೋಡಿಗಳು ಇದ್ದಂತೆ ತೋರುತ್ತದೆ. ಅರಸೀಕೆರೆ ತಾಲೂಕಿನ ಗಂಡಸಿಯ ಕ್ರಿ.ಶ. ೧೪೦೩ರ ಶಾಸನವು[೫೦] ವಿಜಯನಗರದ ಎರಡನೆಯ ಹರಿಹರನ ಕಾಲದ್ದು ಬಾಯಣ್ಣನು ತನ್ನ ತಾಯಿಯ ಹೆಸರಿನಲ್ಲಿ ಮಂಗಸಮುದ್ರವೆಂಬ ತಟಾಕವನ್ನು ಕಟ್ಟಿಸಿ, ಆ ತಟಾಕದ ದಕ್ಷಿಣ ಭಾಗದಲ್ಲಿ ಕೋಡಿಯನ್ನು ಇರಿಸಿರುವುದನ್ನು ಹೇಳಿದೆ. ಹಾಸನ ಪರಿಸರದ ಹೆಚ್ಚಿನ ಕೆರೆಗಳ ಕೋಡಿಗಳು ದಪ್ಪ ದಪ್ಪ ಕಲ್ಲು ಬಂಡೆಗಳಿಂದ ನಿರ್ಮಾಣವಾಗಿವೆ.

ಕೆಲವು ಕೋಡಿಗಳು ಸಿಮೆಂಟ್ ಕಟ್ಟಡದ ಎತ್ತರವಾದ ಗೋಡೆಯಂತೆ ಕಂಡುಬಂದಿವೆ. ಕೆಲವು ಕೋಡಿಗಳಿಗೆ ತೂಬುಗಳನ್ನು ಅಳವಡಿಸಿದ್ದಾರೆ.

೩.೭. ಕಾಲುವೆಗಳ ವ್ಯವಸ್ಥೆ

ಕೆರೆಯಲ್ಲಿ ಸಂಗ್ರಹವಾದ ನೀರನ್ನು ನಿಯಂತ್ರಿಸಿ ಅಚ್ಚುಕಟ್ಟು ಪ್ರದೇಶಕ್ಕೆ ಹಾಯಿಸುವ ಮಾರ್ಗಕ್ಕೆ 'ಕಾಲುವೆ' ಎಂದು ಹೆಸರು. ಕಾಲುವೆಯು ಕೆರೆಯ ಅವಿಭಾಜ್ಯ ಅಂಗಗಳಲ್ಲಿ ಒಂದು. ಕೆರೆಯ ನೀರನ್ನು ಕಾಲುವೆಗಳ ಮೂಲಕ ಏರಿಯ ಕೆಳಭಾಗದಿಂದ ವ್ಯವಸಾಯ ಭೂಮಿಗೆ ಹಾಯಿಸುತ್ತಿದ್ದರು. ಕಾಲುವೆಗಳಿಗೆ ತೂಬುಗಳನ್ನು ಇರಿಸಿ ಕೆರೆಯ ನೀರನ್ನು ನಿಯಂತ್ರಿಸುತ್ತಿದ್ದರು. ಕೆರೆಗೆ ನೀರು ಬರಲು ಕಾಲುವೆಗಳನ್ನು ಏರಿಯ ಕೆಳಭಾಗದಲ್ಲಿ ನಿರ್ಮಿಸಲಾಗುತ್ತಿತ್ತು. ಇವುಗಳನ್ನು ಕಲ್ಲುಗಳಿಂದ ಕಟ್ಟಲಾಗಿದೆ. ತುಮಕೂರು ಜಿಲ್ಲೆಯ ರಾಮಚಂದ್ರಹಳ್ಳಿಯ ಶಾಸನವು ಕಾಲುವೆಗೆ ಮರವನ್ನು ಬಳಸಿರುವುದಾಗಿ ತಿಳಿಸಿದೆ. ಇತ್ತೀಚಿನ ದಿನಗಳಲ್ಲಿ ಸಿಮೆಂಟ್ ಕಟ್ಟಡದ ಕಾಲುವೆಗಳನ್ನು ನೋಡಬಹುದು. ಒಂದು ಕೆರೆಗೆ ಒಂದು, ಎರಡು, ಮೂರು ಮತ್ತು ನಾಲ್ಕು ಕಾಲುವೆಗಳು ಸಹ ಇರುತ್ತಿದ್ದವು. ಕೆರೆಯಲ್ಲಿ ಮೇಲ್ಮಟ್ಟದ ಕಾಲುವೆ ಮತ್ತು ಕೆಳಮಟ್ಟದ ಕಾಲುವೆಗಳು ಇದ್ದವು. ಕೆರೆಯು ತುಂಬಿದಾಗ ಮೇಲ್ಮಟ್ಟದ ಕಾಲುವೆಯಿಂದ ನೀರನ್ನು ಹಾಯಿಸಲಾಗುತ್ತಿತ್ತು. ನೀರು ಕೆಳಮಟ್ಟ ಬಂದಾಗ ಕೆಳಮಟ್ಟದ ಕಾಲುವೆಯಿಂದ ನೀರನ್ನು ಹಾಯಿಸುತ್ತಿದ್ದರು. ಈ ರೀತಿಯ ವ್ಯವಸ್ಥೆಯು ಇಂದಿಗೂ ಪ್ರಚಲಿತದಲ್ಲಿದೆ. ನೀರಾವರಿ ಕಾರ್ಯಗಳಿಗಾಗಿ ನಿರ್ಮಿಸಲಾದ ಕೆರೆ ಮತ್ತು ಇತರ ಮೂಲಗಳಿಂದ ನೀರನ್ನು ಹರಿಸಲು ಕಾಲುವೆಗಳನ್ನು ರಕ್ಷಿಸುವುದು ಪ್ರಮುಖ ಕೆಲಸವಾಗಿದೆ. ಏಕೆಂದರೆ ಈ ಕಾಲುವೆಗಳು ಇಲ್ಲದೇ ಹೋದಲ್ಲಿ ನೀರಾವರಿ ವ್ಯವಸ್ಥೆಯೇ ಇಲ್ಲದಂತಾಗುತ್ತದೆ. ನೀರನ್ನು ಸಂಗ್ರಹಿಸುವ ಮತ್ತು ಅದರ ಸದುಪಯೋಗಕ್ಕೆ ಕಾಲುವೆಗಳ ನಿರ್ಮಾಣ ಕಾರ್ಯಗಳನ್ನು ಮಾಡುತ್ತಿದ್ದರು. ಈ ಕುರಿತು ಶಾಸನಗಳಲ್ಲಿ ಉಲ್ಲೇಖಗಳಿವೆ. ಉದಾಹರಣೆಗೆ ಕ್ರಿ.ಶ. ೧೫೯೬ರ ಅನಂತಪುರ ಜಿಲ್ಲೆಯ ಚಿನಕಟಲದ ಒಂದು ಶಾಸನವು[೫೧] ನೀರಾವರಿ ಕಾಲುವೆಯು ಮುಚ್ಚಿ ಹೋಗಿದ್ದು, ಅದನ್ನು ಪುನಃ ಅಗೆಸಲಾದ ಸಂಗತಿಯನ್ನು ತಿಳಿಸುತ್ತದೆ. ಹಾಸನ ಪರಿಸರದಲ್ಲಿ ಎರಡು ರೀತಿಯ ಕಾಲುವೆಗಳು ಕಂಡುಬಂದಿವೆ. ಒಂದು ಅಂತರ್‌ಕಾಲುವೆ ಮತ್ತೊಂದು ಹೊರಕಾಲುವೆ. ಅಂತರ್‌ಕಾಲುವೆಯ ಮೂಲಕ ಕೆರೆಗೆ ನೀರನ್ನು ಸಂಗ್ರಹಿಸಲಾಗುತ್ತದೆ. ಹೊರಕಾಲುವೆಗಳನ್ನು ಕೆರೆಗಳ ತೂಬಿಗೆ ಅನುಸಾರವಾಗಿ ನಿರ್ಮಿಸಿ ಅವುಗಳ ಮೂಲಕ ಆಯಕಟ್ಟು ಪ್ರದೇಶಕ್ಕೆ ನೀರನ್ನು ಹರಿಸಲಾಗುತ್ತದೆ. ಕಾಲುವೆಗಳ ರಚನೆಯನ್ನು ಕುರಿತ ಶಾಸನಗಳಿವೆ. ಕ್ರಿ.ಶ. ೧೮೫೫-೯೬ರ ನಿಟ್ಟೂರಿನ ಶಾಸನವು[೫೨] ಬೂವಗಾವುಣ್ಣನು ದೇವಾಲಯವನ್ನು ಕಟ್ಟಿಸಿ ಕೆರೆಗೆ ಕಾಲುವೆಯನ್ನು ನಿರ್ಮಿಸಿರುವುದನ್ನು ದಾಖಲಿಸಿದೆ. ಕೆರೆ ಮತ್ತು ಕಾಲುವೆಯ ನಿರ್ವಹಣೆಗೆ ದೇವಾಲಯದ ನಿಧಿಯನ್ನು ಬಳಸಿರುವುದು ಚನ್ನರಾಯಪಟ್ಟಣದ ಕ್ರಿ.ಶ. ೧೨೭೬ರ ಶಾಸನವು[೫೩] ತಿಳಿಸುತ್ತದೆ. ಬಾಳಗಂಚಿಯ ಈ ಶಾಸನದಲ್ಲಿ ಉದ್ಭವ ವಿಶ್ವನಾಥಪುರದ

ಬ್ರಾಹ್ಮಣರು ಭೂಮಿಯನ್ನು ಪಂಚಕೇಶ್ವರ ದೇವರಿಗೆ ದತ್ತಿ ಬಿಟ್ಟರೆಂದು ಕೆರೆ ಕಾಲುವೆ ನಿರ್ವಹಣೆಗೆ ಅದನ್ನು ಉಪಯೋಗಿಸಬೇಕೆಂದು ಹೇಳಿದೆ.

ಹೊಯ್ಸಳ ರಾಜಧಾನಿಗಳಾಗಿದ್ದ ಬೇಲೂರು ಮತ್ತು ಹಳೇಬೀಡುಗಳಿಗೆ ಹಾಗು ಅಲ್ಲಿನ ಸುತ್ತಮುತ್ತಲಿನ ಭೂಮಿಗಳಿಗೆ ನೀರಾವರಿ ಒದಗಿಸಲು ಅರಸರು ಮಹತ್ವ ಕೊಟ್ಟಿದ್ದಾರೆ. ಯಗಚಿ ಮತ್ತು ಅದಕ್ಕೆ ಸೇರುವ ಸಣ್ಣ ಪುಟ್ಟ ತೊರೆಗಳು ಹಲವಾರು ಸಣ್ಣ ಕಾಲುವೆಗಳಿಗೆ ನೀರು ಒದಗಿಸುತ್ತವೆ. ಭೂಮ್ಮಿದಹಳ್ಳನಾಲೆ ಮುಖ್ಯ ಹೊಳೆಯಿಂದ ಬಲದಂಡೆಯಲ್ಲಿ ೪–೫ ಮೈಲಿ ಹಾಯ್ದು ಬೇಲೂರಿನ ಬಳಿ ಕೊನೆಗೊಳ್ಳುತ್ತದೆ. ವಾಯವ್ಯದಲ್ಲಿ ಒಂದು ಸಣ್ಣ ತೊರೆಯಿಂದ ಹೊರಡುವ ಕಿತ್ತೂರುನಾಲೆ ಪಶ್ಚಿಮಕ್ಕೆ ಒಟ್ಟು ೧೫ ಮೈಲಿ ದೂರ ಹರಿಯುತ್ತದೆ. ಮರಿಘಟ್ಟನಾಲೆ ೨ ಮೈಲಿ ಉದ್ದವಿದ್ದು, ದಕ್ಷಿಣದ ಇನ್ನೊಂದು ಸಣ್ಣ ಹೊಳೆಯಿಂದ ಹೊರಡುತ್ತದೆ. ರಣಘಟ್ಟದಲ್ಲಿ ಒಂದು ಹಳೆಯ ಶಿಥಿಲವಾದ ಅಣೆ ಇದ್ದು, ಯಗಚಿ ನದಿಯಿಂದ ಹಳೇಬೀಡಿನ ಕೆರೆಗೆ ನೀರು ಸಾಗಿಸಲು ವ್ಯವಸ್ಥೆ ಕಲ್ಪಿಸಿದಂತಿದೆ. ಹಳೇಬೀಡಿನ ಬಳಿ ಸಿಕ್ಕ ೧೩೦೦ರ ಶಾಸನದಲ್ಲಿ[೫೪] ಎಲಚಿ(ಎಗಚಿ) ನದಿಯಲ್ಲಿ ತೋಡಲಾದ ಒಂದು ಕಾಲುವೆಯ ನೀರಿನಲ್ಲಿ ಎಲ್ಲಾ ಜನರು ಸ್ನಾನ ಮಾಡಬಹುದೆಂಬ ಮಾಹಿತಿ ಇದೆ. ಕೆರೆಯ ಮುಖ್ಯ ಭಾಗಗಳೆಲ್ಲವೂ ಕೆರೆ ಸಂರಕ್ಷಣೆಗಾಗಿ ನಮ್ಮ ಪೂರ್ವಜರು ತೆಗೆದುಕೊಳ್ಳುತ್ತಿದ್ದ ಕಾಳಜಿಗೆ ಸಾಕ್ಷಿಯಾಗಿವೆ.

೩.೮. ಕೆರೆಗಳ ನಿರ್ವಹಣೆ

ಕೆರೆಗಳ ನಿರ್ಮಾಣದ ಉದ್ದೇಶ ಸಫಲವಾಗಬೇಕಾದರೆ ವ್ಯವಸ್ಥಿತವಾದ ನಿರ್ವಹಣೆ ಅತ್ಯಗತ್ಯ. ಈ ಕಾರ್ಯಕ್ಕಾಗಿ ಕೆಳಗಿನ ಅಧಿಕಾರಿಗಳ ವರ್ಗ ಇರುವುದನ್ನು ಗಮನಿಸಬಹುದು.[೫೫]

ಶಾನುಬೋಗ	–	ಲೆಕ್ಕಿಗ
ಗೌಡ	–	ಮುಖ್ಯಸ್ಥ
ಕಮ್ಮಾರ	–	ಕಬ್ಬಿಣದ ಕೆಲಸಗಾರ
ಬಡಗಿ	–	ಮರಗೆಲಸದವನು
ಅಗಸ	–	ಮಡಿವಾಳ
ಪಂಚಾಂಗಿ	–	ಪಂಚಾಂಗ ಹೇಳುವವನು
ನಾಯಿಂದ	–	ಕ್ಷೌರಿಕ
ಮಾದಿಗ	–	ಚಪ್ಪಲಿ ಹೊಲಿಯುವವನು
ಅಕ್ಕಸಾಲಿ	–	ಚಿನ್ನ, ಬೆಳ್ಳಿ, ಕೆಲಸದವನು
ನೀರುಗಂಟಿ	–	ಕೆರೆ ಕಾವಲಿನಾಳು
ತಳಾರಿ	–	ಹಳ್ಳಿ ಕಾವಲಿನಾಳು
ಕುಂಬಾರ	–	ಮಡಿಕೆ ಮಾಡುವವನು

ಮೇಲಿನವರು ಗ್ರಾಮಸೇವಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅವರ ಅಧಿಕಾರ ವಂಶಪಾರಂಪರ್ಯವಾಗಿ ತಂದೆಯಿಂದ ಮಗನಿಗೆ ಹೋಗುತ್ತಿತ್ತು. ತಮಗೆ ತೊಂದರೆ ಉಂಟಾದಾಗ ತಮ್ಮ ಹುದ್ದೆಯನ್ನು ತ್ಯಜಿಸುವ ಇಲ್ಲವೆ ಅಡವಿಡುವ ಅಧಿಕಾರವಿತ್ತು. ಅವರಿಗೆ ಗ್ರಾಮದ ರೈತರು ತಾವು ಬೆಳೆದ ಬೆಳೆಯಲ್ಲಿ ಒಂದು ಪಾಲನ್ನು ಕೊಡುತ್ತಿದ್ದರು. ಕೆಲವು ಸಂದರ್ಭದಲ್ಲಿ ಅವರಿಗೆ ಮಾನ್ಯದ ಭೂಮಿಯೂ ಇರುತ್ತಿತ್ತು.

ನಿರ್ವಹಣೆಗೆ ಸಂಬಂಧಿಸಿದಂತೆ ಮುಖ್ಯವಾಗಿ 'ರಾಜನು' ಇವರ ಮೇಲಾಧಿಕಾರಿಯಾಗಿದ್ದನು. ಸ್ವಾತಂತ್ರ್ಯಪೂರ್ವದಲ್ಲಿಯ ಆಡಳಿತದಲ್ಲಿ ರಾಜನೇ ಶ್ರೇಷ್ಠ ಅಧಿಕಾರಿಯಾಗಿದ್ದನು. ನೀರಾವರಿ ವ್ಯವಸ್ಥೆಯು ಆತನ ಕೈ ಸೇರಿದ್ದರೂ ಕೆರೆಗಳ ನಿರ್ಮಾಣ, ಸಂರಕ್ಷಣೆ ಮತ್ತು ನಿರ್ವಹಣೆಯಲ್ಲಿ ಮಂತ್ರಿಗಳು, ಸಂಧಿವಿಗ್ರಹಿಗಳು, ಊರಗೌಡರು, ಜಲಸೂತ್ರಧಾರರು, ಶಾನುಬೋಗರು, ನೀರ್ಗಂಟಿಗಳು, ತಳವಾರರು, ಗ್ರಾಮಪಂಚಾಯಿತಿಯ ಪಂಚರು, ಸ್ಥಳೀಯ ಸಂಘಸಂಸ್ಥೆಗಳು ಮತ್ತು ಶ್ರೀಸಾಮಾನ್ಯರು ಪ್ರಮುಖ ಪಾತ್ರ ವಹಿಸುತ್ತಿದ್ದರು. ಅಧಿಕಾರ ವರ್ಗದವರು ಕೇವಲ ಕೆರೆಗಳನ್ನು ಕಟ್ಟುವಂತೆ ಹೇಳುತ್ತಿದ್ದರು. ಅವುಗಳನ್ನು ಕಟ್ಟುವವರು ಬೇರೆ ಜನಾಂಗದವರಾಗಿರುತ್ತಿದ್ದರು. ಅಂತೆಯೇ ಪ್ರತಿಯೊಂದು ಪ್ರದೇಶದಲ್ಲಿಯೂ ಕೆರೆಯನ್ನು ಕಟ್ಟುವ ಮಣ್ಣುವಡ್ಡರು, ಕುಶಲಿಗಳು ಆದ ಕಸುಬುದಾರ ಅನುಭವಿಗಳಿದ್ದರು. ಕುಶಲರಲ್ಲದ ಕೂಲಿಗಳನ್ನು ಮಣ್ಣುಕೆಲಸಕ್ಕೆ ಕಲ್ಲುಕೆಲಸಗಾರರನ್ನು ತೂಬುರಚನೆಗೂ ನೇಮಿಸಿಕೊಂಡು ಕೆರೆಗಳನ್ನು ಕಟ್ಟಲಾಗುತ್ತಿತ್ತು ಎಂದು ಶಾಸನಗಳಿಂದ ತಿಳಿದುಬರುತ್ತದೆ. ಉದಾ: ಹೊಳೆನರಸೀಪುರ ತಾಲೂಕಿನ ಕ್ರಿ.ಶ. ೧೩೧೦ರ ಶಾಸನವು[೩೬] ತೂಬುಗಳನ್ನಿಟ್ಟ ಕಲ್ಲುಕುಟಿಗರನ್ನು ಕುರಿತದ್ದಾಗಿದೆ. ಕ್ರಿ.ಶ. ೧೨ನೆಯ ಶತಮಾನದ ಗೀಜಿಹಳ್ಳಿಯ ಶಾಸನದಲ್ಲಿ[೩೭] ಕಲ್ಲುಕುಟಿಗ ಮಾದೋಜ ಮತ್ತು ಮಾಚೋಜನ ಉಲ್ಲೇಖವಿದೆ. ಮಾಲೂರು ತಾಲೂಕಿನ ಟೇಕಲ್ ಶಾಸನ[೩೮] ಕೆರೆ ಒಡೆದುದನ್ನು ಮತ್ತೆ ಅದನ್ನು ಕಟ್ಟಲು ಸ್ಥಳೀಯ ಕೆಲಸದವನಿಗೆ ಹೇಳಿದುದನ್ನು ತಿಳಿಸುತ್ತದೆ. ಕೆರೆಯನ್ನು ಕಟ್ಟಿಸಿದ ನಂತರ ಆ ಕೆರೆಯನ್ನು ಕಟ್ಟಿಸಿದವರಿಗೆ ಕೆರೆಯ ಅಚ್ಚುಕಟ್ಟಿನ ಪ್ರದೇಶದಲ್ಲೇ ಭೂಮಿ(ಗದ್ದೆ)ಯನ್ನು ನೀಡುತ್ತಿದ್ದರು. ಕೆಲವೊಮ್ಮೆ ರಾಜನು ತಾನೇ ಸ್ವತಃ ಕೊಂಡುಕೊಂಡಿದ್ದ ಭೂಮಿಯನ್ನು ದಾನ ಮಾಡುತ್ತಿದ್ದನು. ಕೆರೆಯನ್ನು ಕಟ್ಟಿಸುವುದು ಎಷ್ಟು ಮುಖ್ಯವಾಗಿತ್ತೊ ಸಂರಕ್ಷಿಸುವುದು ಅಷ್ಟೇ ಮುಖ್ಯವಾಗಿತ್ತು.. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕೆರೆ ಜತೆ ಬೇಸಾಯ ಮಾಡುವ ವ್ಯಕ್ತಿಗಳು ಅಥವಾ ಯಾವುದೇ ರೀತಿಯ ಕಂದಾಯವೂ ಇಲ್ಲದೆ ಭೂಮಿಯನ್ನು ಅನುಭವಿಸಲು ಅನುಮತಿ ಪಡೆದ ವ್ಯಕ್ತಿಗಳು, ಕೆರೆಯನ್ನು ಸಂರಕ್ಷಿಸಬೇಕು. ಇಲ್ಲವಾದರೆ ಅವರಿಗೆ ನಷ್ಟದ ಎರಡರಷ್ಟು ಜುಲ್ಮಾನೆಯ ಶಿಕ್ಷೆ ವಿಧಿಸುವಂತೆ ಹೇಳಿದೆ.

ಕೆರೆ ಅಚ್ಚುಕಟ್ಟು ಭೂಮಿಯ ಆದಾಯವನ್ನು ದೇವಾಲಯ ಮತ್ತು ಕೆರೆಯ ಸಂರಕ್ಷಣೆಯ ಕೈಂಕರ್ಯಗಳಿಗೆ ಬಳಸಲಾಗುತ್ತಿತ್ತು. ಕೆಲವು ವೇಳೆ ದೇವಾಲಯಗಳಿಗೆ ಬಿಟ್ಟ ದಾನದತ್ತಿ ಮತ್ತು ಧನವನ್ನು ಕೆರೆಯ ದುರಸ್ತಿ ಕಾರ್ಯಗಳಲ್ಲಿ ಬಳಸಲಾಗುತ್ತಿತ್ತೆಂಬುದು ಶಾಸನೋಕ್ತ ವಿಷಯ.

ಬೇಲೂರು ತಾಲೂಕಿನ ಕ್ಯಾತಲಾಪುರದ ಶಾಸನದಲ್ಲಿ ರಾಜನೊಬ್ಬ ಕೆರೆಯನ್ನು ಹಾಗು ಅದರ ಅಚ್ಚುಕಟ್ಟನ್ನು ದೇವಾಲಯದ ದುರಸ್ತಿ ಕಾರ್ಯಗಳಲ್ಲಿ ತೊಡಗಿಸಿರುವ ವಿಷಯದ ಪ್ರಸ್ತಾಪವಿದೆ.[೫೯] ಕ್ರಿ.ಶ. ೧೨೫೮ರ ಸಾಲುಗಾಮೆ ಶಾಸನವು[೬೦] ಬೋಗಯ್ಯನ ದಾಳಿಯಿಂದ ಕೆರೆಯು ಒಡೆದುಹೋಗಿ ದೇವಾಲಯ ಬಿದ್ದು ಹೋಗಿದ್ದು, ಅವುಗಳ ಜೀರ್ಣೋದ್ಧಾರಕ್ಕಾಗಿ ಮಾಯಣ್ಣನಾಯಕ ಕೈಗೊಂಡ ಕಾಮಗಾರಿಯ ಬಗೆಗೆ ಬೆಳಕು ಚೆಲ್ಲುತ್ತದೆ. ಹಾಗೆಯೇ ಕ್ರಿ.ಶ. ೧೨೮೭ರ ಅರಸೀಕೆರೆಯ ಶಾಸನದಲ್ಲಿ[೬೧] ಮೊಸಳೆ ಎಂಬ ಗ್ರಾಮ ಕಾಲುವಳ್ಳಿ ಮಲ್ಲಯ್ಯನಹಳ್ಳಿಯ ಬಳ್ಳೆಯಕೆರೆಯು ಒಡೆಯುವುದರಿಂದ ಅಲ್ಲಿನ ಕೇಶವ ದೇವಾಲಯವು ಹಾಳಾಗಿದ್ದು, ದೇವಾಲಯದ ಜೀರ್ಣೋದ್ಧಾರದೊಂದಿಗೆ ಬಳ್ಳೆಯಕೆರೆಯ ಒಡವನ್ನು ಕಟ್ಟಲಾಯಿತೆಂಬ ಉಲ್ಲೇಖವಿದೆ.

ಕೆರೆ ರಕ್ಷಣೆ ಮಾಡುವವರಿಗೆ ಭೂ ಮತ್ತು ಹಣವನ್ನು ದಾನ ನೀಡಿರುವಂತೆ ಶಾಸನವು ಸೂಚಿಸುತ್ತದೆ. ಕ್ರಿ.ಶ. ಹತ್ತನೆಯ ಶತಮಾನದ ಚನ್ನರಾಯಪಟ್ಟಣ ತಾಲೂಕಿನ ಬಸವಪುರ ಶಾಸನವು[೬೨] ಉತ್ತಮಗಾವುಂಡ ನಿರ್ಮಿಸಿದ್ದ ಕೆರೆಯ ನಿರ್ವಹಣೆಗಾಗಿ ಆರು ಖಂಡುಗ ಭೂಮಿಯನ್ನು ಗೋವಿಂದರಸ ದಾನವಾಗಿ ಕೊಟ್ಟಿರುವುದು ತಿಳಿದುಬಂದಿದೆ. ಬೇಲೂರು ತಾಲೂಕು ಮಾರೇನಹಳ್ಳಿಯ ಕ್ರಿ.ಶ. ೧೧೮೮ರ ಶಾಸನದಲ್ಲಿ[೬೩] ಮಾರವ್ವ ಕಂದಲಿಯ ಮಹಾರಾಜನರಿಗೆ ೮ ಹೊನ್ನು ಸಿದ್ದಾಯ ನೀಡಿದಲ್ಲದೆ ಕೆರೆ, ದೇವಾಲಯ ಮತ್ತು ಕಾವಲುಗಾರನ ನಿರ್ವಹಣೆಗಾಗಿ ೫೬೨ ಗದ್ಯಾಣ, ೩ ಪಣ ನೀಡಿದ್ದನ್ನು ದಾಖಲಿಸಿದೆ. ಈ ಬಗೆಯ ಶಾಸನಗಳು[೬೪] ಚನ್ನರಾಯಪಟ್ಟಣ ತಾಲೂಕಿನಲ್ಲಿ ಕಂಡುಬಂದಿವೆ.

ಕೆರೆ ನಿರ್ಮಾಣದ ವೆಚ್ಚ

ಕೆರೆಯನ್ನು ನಿರ್ಮಿಸಲು ಹಣ ವ್ಯಯ ಮಾಡಲಾಗುತ್ತಿತ್ತು. ಅವುಗಳ ನಿರ್ಮಾಣದ ವೆಚ್ಚವು ಶಾಸನಗಳಲ್ಲಿ ಉಲ್ಲೇಖವಾಗಿವೆ. ಕ್ರಿ.ಶ. ೧೨೨೧ರ ಚಟಚಟನಹಳ್ಳಿಯ ಶಾಸನದಲ್ಲಿ[೬೫] ಚಟ್ಟಯ್ಯ ಪೆರುಮಾಳ್‌ದೇವನು ೧೦೦ ಹೊನ್ನನ್ನು ಕೆರೆಯ ಮೆಟ್ಟಿಲುಗಳಿಗೆ ಉಪಯೋಗಿಸಿರುವುದು ಗಮನಾರ್ಹವಾಗಿದೆ. ಅದೇ ರೀತಿ ಅವ್ವೇರಹಳ್ಳಿಯ ಕ್ರಿ.ಶ. ೧೩೧೪ರ ಶಾಸನದಲ್ಲಿ[೬೬] ಮಹಾಪ್ರಧಾನ ಮಾಚಯ್ಯ ದಂಡನಾಯಕ ತನ್ನ ತಾಯಿ ಮಾಯಕ್ಕನವರ ಹೆಸರಿನಲ್ಲಿ ಕೆರೆಯನ್ನು ಕಟ್ಟಿಸಲು ದೇವರಹಳ್ಳಿ ಜನರಿಗೆ ಕ್ರಯವನ್ನು ಕೊಟ್ಟು, ಭೂಮಿ ಪಡೆದು ೩೪ ಸಾವಿರ ಹೊನ್ನುಗಳನ್ನು ವ್ಯಯಿಸಿ ಕೆರೆ ಕಟ್ಟಿಸಿದ ಎಂದಿದೆ. ಹಾಗೆಯೇ ಬೇಲೂರಿನ ಕ್ರಿ.ಶ. ೧೩೧೫ರ ಬಸ್ತಿಹಳ್ಳಿ ಶಾಸನದಲ್ಲಿ[೬೭] ಬಾವಿಕಲ್ಲಿಗೆ ಹೊಂದಿಕೊಂಡಿರುವ ಕೆರೆಯನ್ನು ೨೦ ಹೊನ್ನು ವೆಚ್ಚದಲ್ಲಿ ನಿರ್ಮಿಸಿರುವಂತಿದೆ. ಈ ಶಾಸನವು ೨೦ ಹೊನ್ನಿಗೆ ಕೆರೆ ಅಸ್ತಿತ್ವಕ್ಕೆ ಬಂದಿದ್ದರ ಬಗ್ಗೆ ಬೆಳಕನ್ನು ಚೆಲ್ಲುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ನಿರಂತರವಾಗಿ ನಿರ್ಮಾಣಗೊಳ್ಳುತ್ತಿದ್ದ ಕೆರೆಗಳಿಗೆ ತಗಲುತ್ತಿದ್ದ ವೆಚ್ಚದಿಂದ ಅವುಗಳ ವಿಸ್ತೀರ್ಣವನ್ನು ಅಂದಾಜು ಮಾಡಬಹುದು. ಅದರಂತೆ ಸಣ್ಣ ಮತ್ತು ದೊಡ್ಡ ಕೆರೆಗಳು ಅನುಕ್ರಮವಾಗಿ 'ಕಿರಿಯಕೆರೆ' ಮತ್ತು 'ಪಿರಿಯಕೆರೆ' ಎಂದು ಶಾಸನಗಳಲ್ಲಿ ಮಾಹಿತಿ ಸಿಗುತ್ತದೆ.

ಕೆರೆ ನಿರ್ಮಿಸಲು ಪಾಲಿಸಬೇಕಾದ ನಿಯಮಗಳು

ಕ್ರಿ.ಶ. ೧೩೬೯ರ ಪೊರುಮಾಮಿಲ್ಲ ಶಾಸನವು[೮] ಒಂದು ಕೆರೆಯನ್ನು ಕಟ್ಟಲು ಬೇಕಾದ ಹನ್ನೆರಡು ಅಗತ್ಯ ಅಂಶಗಳನ್ನು ಹಾಗು ಮಾಡಬಾರದ ಆರು ಬಗೆಯ ದೋಷಗಳನ್ನು ಹೇಳಿದೆ. ಕೆರೆಯ ನಿರ್ಮಾಣಕ್ಕೆ ಇರಬೇಕಾದ ಹನ್ನೆರಡು ಅಗತ್ಯಗಳು:

೧. ಧರ್ಮಾಸಕ್ತನೂ, ಧನವಂತನೂ, ಸುಖವಾಗಿರುವವನೂ, ಕೀರ್ತಿಯನ್ನು ಶಾಶ್ವತವಾಗಿ ಪಡೆಯುವ ಅಭಿಲಾಷೆ ಇರುವ ರಾಜನು ಕೆರೆ ನಿರ್ಮಾಣದಲ್ಲಿ ತೊಡಗಬೇಕು.

೨. ಜಲಶಾಸ್ತ್ರದಲ್ಲಿ ಪಾರಂಗತನಾದ ಬ್ರಾಹ್ಮಣನಿರಬೇಕು.

೩. ಗಟ್ಟಿಯಾದ ಜೇಡಿಮಣ್ಣಿನಿಂದ ಕೂಡಿದ ನೆಲದಲ್ಲಿ ಕೆರೆ ನಿರ್ಮಾಣವಾಗಬೇಕು.

೪. ಸಿಹಿ ನೀರನ್ನು ತರುವ ನದಿಯಿಂದ ಸುಮಾರು ಮೂರು ಯೋಜನೆಗಳಷ್ಟು ದೂರದಲ್ಲಿರಬೇಕು.

೫. ಬೆಟ್ಟಗಳ ನಡುವಿನ ಪ್ರದೇಶದಲ್ಲಿ ಬಿಗಿಯಾದ ಕಲ್ಲುಗೋಡೆ(ಏರಿ)ಯನ್ನು ಕಟ್ಟಬೇಕು.

೬. ಕೆರೆಯ ಸಮೀಪದಲ್ಲಿ ಫಲ ಕೊಡುವ ಭೂಮಿಯಿರಬೇಕು.

೭. ಕೆರೆಯ ಅಂಗಳ ವಿಸ್ತಾರವಾಗಿಯೂ ಆಳವಾಗಿಯೂ ಇರಬೇಕು.

೮. ಉದ್ದ ಮತ್ತು ಸಮನಾದ ಕಲ್ಲುಗಳು ದೊರೆಯುವ ಕಲ್ಲುಗಣಿಗಳಿರಬೇಕು.

೯. ಕೆರೆಯ ಅಚ್ಚುಕಟ್ಟು ಪ್ರದೇಶವು ಫಲವತ್ತಾಗಿರಬೇಕು. ಅಲ್ಲಿ ಹಣ್ಣು ಹಂಪಲುಗಳ ಮರಗಳಿರಬೇಕು.

೧೦. ತೂಬುಗಳು ಕೆರೆಯ ನೀರಿನ ಒತ್ತಡವನ್ನು ತಡೆಯುವಷ್ಟು ಭದ್ರವಾಗಿರಬೇಕು.

೧೧. ಕೆರೆ ನಿರ್ಮಾಣದಲ್ಲಿ ಕುಶಲರಾದ ಕೆಲಸಗಾರರಿರಬೇಕು.

ಸಂಭವಿಸದಂತೆ ಮುನ್ನೆಚ್ಚರಿಕೆಗೆ ಇರಬೇಕಾದ ಕ್ರಮಗಳು.

೧. ಕೆರೆಯಲ್ಲಿ ನೀರು ಜಿನುಗಬಾರದು.

೨. ಕೆರೆಯ ಮಣ್ಣು ಲವಣಾಂಶದಿಂದ ಕೂಡಿರಬಾರದು.

೩. ಎರಡು ರಾಜ್ಯಗಳ ಗಡಿಯಲ್ಲಿ ಕೆರೆ ನಿರ್ಮಿಸಬಾರದು.

೪. ಕೆರೆಯಂಗಳದ ಮಧ್ಯದಲ್ಲಿ ದಿಬ್ಬ(ಕೂರ್ಮ) ಇರಬಾರದು.

೫. ಕೆರೆಯಲ್ಲಿ ಕಡಿಮೆ ನೀರು ಮತ್ತು ಅಚ್ಚುಕಟ್ಟು ಹೆಚ್ಚು ಇರಬಾರದು.

೬. ಸ್ವಲ್ಪ ಭೂಮಿ(ಜಮೀನು)ಯಿದ್ದು ಅಧಿಕ ನೀರು ಬರುವಂತಹ ಸ್ಥಳವನ್ನು ಆರಿಸಬಾರದು.

ಕೆರೆಯ ಸಂರಕ್ಷಣೆಯ ಸಾಮಾನ್ಯ ಕ್ರಮಗಳು

* ಕೆರೆ ಮತ್ತು ಕಾಲುವೆಗಳಲ್ಲಿರುವ ಹೂಳನ್ನು ಕಾಲ ಕಾಲಕ್ಕೆ ತೆಗೆಸುವುದು.

* ಕೆರೆಯ ಏರಿ ಮಳೆ ಅಥವಾ ಇನ್ನಿತರ ಕಾರಣದಿಂದ ಹಾನಿಗೊಂಡಿದ್ದರೆ ಸರಿಪಡಿಸುವುದು.

* ತೂಬು ಮತ್ತು ಕೋಡಿ ಹಾನಿಗೊಂಡರೆ ಕಾಲಕಾಲಕ್ಕೆ ದುರಸ್ತಿ ಮಾಡುವುದು.

* ಕೆರೆಯಂಗಳ ಒತ್ತುವರಿಯಾಗದಂತೆ ತಡೆಯುವುದು.

* ಕೆರೆಯಂಗಳಕ್ಕೆ ಹೂಳುಬರದಂತೆ ರಕ್ಷಿಸುವುದು.

* ಕೆರೆಗೆ ಅವಶ್ಯವಿದ್ದಲ್ಲಿ ಮೆಟ್ಟಿಲುಗಳನ್ನು ನಿರ್ಮಿಸಿ ಗಾತ್ರವನ್ನು ವಿಸ್ತರಿಸುವುದು.

* ನೀರಿನ ಬಳಕೆಯನ್ನು ಕುರಿತಾದ ವಿವಾದವನ್ನು ಬಗೆಹರಿಸುವುದು. ಇವು ಒಂದು ಉತ್ತಮ ಕೆರೆ ನಿರ್ಮಿಸಲು ಪಾಲಿಬೇಕಾದ ನಿಯಮಗಳಾಗಿವೆ.

೩.೯. ಕೆರೆ–ತೆರಿಗೆ ಪದ್ಧತಿ

ಕೆರೆಯ ನಿರ್ಮಾಣ ಮತ್ತು ನಿರ್ವಹಣೆಯ ಕಾರ್ಯದಲ್ಲಿ ತೊಡಗುವವರಿಗೆ ವಿವಿಧ ರೂಪದ ಕೊಡುಗೆ ಹಾಗು ಕಂದಾಯದಲ್ಲಿ ರಿಯಾಯ್ತಿ ನೀಡುವ ವ್ಯವಸ್ಥೆಯಿದ್ದಿತು. ಇವರಿಗೆ ಧನ, ಧಾನ್ಯ, ದಾನ, ದತ್ತಿ ಮತ್ತು ಭೂಮಿಯನ್ನು ಕೊಡುಗೆಯಾಗಿ ನೀಡುತ್ತಿದ್ದರು. ಇದರ ಮೂಲಕ ಜನರನ್ನು ಪ್ರಜಾಹಿತಾತ್ಮಕ ಕಾರ್ಯದಲ್ಲಿ ತೊಡಗಿಸಿ, ಕೆರೆ ಸುಸ್ಥಿತಿಯಲ್ಲಿಡುವಲ್ಲಿ ಮುಂದಾಗುತ್ತಿದ್ದರು. ಹೀಗೆ ಕೆರೆ ಸಂರಕ್ಷಣೆಗೆ ನೀಡಿದ ಪ್ರೋತ್ಸಾಹ ಮತ್ತು ತೆರಿಗೆ ಪದ್ಧತಿಯನ್ನು ಶಾಸನಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಕೆರೆಬಂಡಿ

ಸಾಮಾನ್ಯವಾಗಿ ಕೆರೆ ಅಂಗಳದಲ್ಲಿ ರಭಸದಿಂದ ನೀರು ಹರಿದು ಬರುವಾಗ ಮಣ್ಣು ಶೇಖರವಾಗುವುದು. ಈ ಮಣ್ಣು ಕೆರೆಯ ತಳದಲ್ಲಿ ಜೇಡಿಮಣ್ಣು ಆಗಿ ನೀರಿನ ಮಟ್ಟವನ್ನು ಮೇಲೇರುವಂತೆ ಮಾಡುತ್ತದೆ. ಬೇಸಿಗೆಯಲ್ಲಿ ಕೆರೆಯ ಅಂಗಳದಿಂದ ಮಣ್ಣನ್ನು ಹೊರಕ್ಕೆ ತೆಗೆದು ಹಾಕದಿದ್ದರೆ ಹೂಳು ತುಂಬಿ ನೀರು ನಿಲ್ಲಲು ಸ್ಥಳವೇ ಇಲ್ಲದಂತಾಗುತ್ತದೆ. ಹಾಗಾಗಿ ಕಾಲ ಕಾಲಕ್ಕೆ ಹೂಳು ತೆಗೆಸಬೇಕು. ಈ ಕಾರ್ಯಗಳಿಗೆ ಎತ್ತಿನ ಗಾಡಿಗಳನ್ನು ಬಳಸುತ್ತಿದ್ದರು. ಅದಕ್ಕೆಂದು ಕೆರೆಬಂಡಿಗಳನ್ನು ಮಾನ್ಯವಾಗಿ ನೀಡಿರುವುದು ಶಾಸನಗಳಲ್ಲಿ ಉಕ್ತವಾಗಿದೆ. ಎತ್ತುಗಳು, ಎಮ್ಮೆಗಳು ಬಂಡಿಯನ್ನು ನಡೆಸುವವರ ಜೀವಿತಕ್ಕೆ ಅವಶ್ಯಕವಾದ ಹಣ ಮತ್ತು ಭೂಮಿಯನ್ನು ನೀಡುತ್ತಿದ್ದರು. ಇವುಗಳ ಜತೆಗೆ ಹೂಳೆತ್ತುವ ಸಾಮಗ್ರಿಗಳಾದ ಗಾಡಿ, ಎಣ್ಣೆ, ಮರ, ಮುಟ್ಟು ಮತ್ತು ಕಬ್ಬಿಣದ ವಸ್ತುಗಳನ್ನು ಒಳಗೊಂಡಿರುವುದು ಗಮನಾರ್ಹ ಸಂಗತಿ. ಕ್ರಿ.ಶ. ೧೨೨೩ರ ಅರಸೀಕೆರೆ ಶಾಸನವು[೬೯] ಒರಿಯ ಕೆರೆಯ ಬಂಡಿಯ ಆಳ ಜೀವಿತಕ್ಕೆ ಮತ್ತು ಎತ್ತಿನ ಆಹಾರಕ್ಕೆ ನಾಲ್ಕು ಕೊಳಗ ಭೂಮಿ. ಒಂದು ಗದ್ಯಾಣವನ್ನು ವರುಷಂ ಪ್ರತಿಯಾಗಿ ನೂರು. ಒಟ್ಟು ಗದ್ಯಾಣ ನೂರ ಇಪ್ಪತ್ತನ್ನು

ಹಿರಿಯಣ್ಣ ಎಂಬುವನಿಗೆ ಬಿಟ್ಟಿರುವುದನ್ನು ತಿಳಿಸಿದೆ. ೧೨ನೆಯ ಶತಮಾನದ ಹಾಸನ ತಾಲೂಕಿನ ಶಾಸನವೊಂದರಲ್ಲಿ[೭೦] ಕಾಮಕೂರಿನ ಕೆರೆಬಂಡಿಯ ನಿರ್ವಹಣೆಗಾಗಿ ಮಾಸಣಯ್ಯ ಎಂಬುವವನಿಗೆ ಭೂಮಿ ನೀಡಿದ ಉಲ್ಲೇಖವಿದೆ.

ಕ್ರಿ.ಶ. ೧೨೯೪ರ ಕೆಲ್ಲಂಗೆರೆಯ ಶಾಸನವು[೭೧] ದೇವಪ್ಪನವರ ಮಗ ನೋಟದ ಚಂದ್ರಪ್ಪನು ಕೆರೆಬಂಡಿಯನ್ನು ನಡೆಸುವುದಕ್ಕೆ ಅಲ್ಲಿನ ಮಹಾಜನಗಳು ಬಂಡಿ ನಡೆಸುವವನ ಆಳ ಜೀವಿತಕ್ಕೆ ಪುರಾಣಗದ್ದೆ ಮತ್ತು ಮಠದಗದ್ದೆಯ ೧ ಖಂಡುಗ, ೧೦ ಕೊಳಗ ಬೆದ್ದಲನ್ನು ನೀಡಿರುವುದನ್ನು ತಿಳಿಸುತ್ತದೆ. ಕೆಲ್ಲಂಗೆರೆಯ ಮತ್ತೊಂದು ಕ್ರಿ.ಶ. ೧೩೬೭ರ ಶಾಸನದಲ್ಲಿ[೭೨] ಕೆಲ್ಲಂಗೆರೆ ಮತ್ತು ಕಾಲುವಳ್ಳಿಗಳಲ್ಲಿನ ಎತ್ತು ಕೋಣಗಳ ಗುಗ್ಗರಿಗೆ ಹತ್ತು ಬಂಡಿಗೆ ಕೆಲವು ಆಯವನ್ನು ಬಿಡಲಾಗಿದೆ. ಅಲ್ಲಿನ ಮಹಾಜನಗಳು ಸರ್ವೇಕಮತ್ಯರಾಗಿ ಕೆರೆಯ ಬಂಡಿಯ ಕೋಣ, ಹೆರೆಯೆಣ್ಣೆ, ಆಳ ಜೀವಿತಕ್ಕೆ, ಹಾರೆ, ಗುದ್ದಲಿ ಮುಂತಾದ ಹೊಳೆತ್ತಲು ನೆರವಾಗುವ ಅವಶ್ಯಕ ಸಾಮಗ್ರಿಗಳಿಗೆ, ಬಂಡಿಯವನಿಗೆ ಮತ್ತು ಕೋಣಗಳಿಗೆ ಜೀವಿತ ಕಲ್ಪಿಸಿಕೊಟ್ಟಿರುವ ವಿಚಾರವಿದೆ. ಈ ಕಾರ್ಯಕ್ಕಾಗಿ ಅಡಿಕೆಯ ಹೇರು, ಎಲೆಯ ಹೇರು, ಕಿತ್ತಾಳೆಯ ಹಣ್ಣಿನ ಹೇರಿಗೆ ವಿಧಿಸಲಾಗಿದ್ದ ತೆರಿಗೆಯ ಮೊತ್ತವನ್ನು ಕೆರೆಬಂಡಿಗೆ ಬಿಟ್ಟಿರುವುದು ಕುತೂಹಲಕಾರಿಯಾದ ಸಂಗತಿ. ೧೩ನೇ ಶತಮಾನದ ಚಿಕ್ಕಮೇನಹಳ್ಳಿ ಶಾಸನದಲ್ಲಿ[೭೩] ೩ ಸಲಿಗೆ ಭೂಮಿಯನ್ನು ಕೆರೆಬಂಡಿಗಾಗಿ ನೀಡಿದುದು ಅಲ್ಲದೆ ಬಂಡಿ ಚಿತ್ರವನ್ನು ಬಿಡಿಸಿರುವುದು ವಿಶಿಷ್ಟವಾಗಿದೆ. ಅರಕಲಗೂಡು ತಾಲೂಕಿನ ಬೋಳಕ್ಯಾತನಹಳ್ಳಿಗೆ ಸೇರಿದ ಕ್ರಿ.ಶ. ೧೩೭೧ರ ಶಾಸನವು[೭೪] ಹೆಬ್ಬಾಲೆಯ ಉಪಗ್ರಾಮವಾದ ಬೋಳಕ್ಯಾತನಹಳ್ಳಿಗೆ ಸೇರಿದ ಭೂಮಿ ಹಾಗೂ ಹಲವು ಬಗೆಯ ತೆರಿಗೆಗಳನ್ನು ಹೆಬ್ಬಾಲೆಯ ಮಹಾಜನರು ಬೊಮ್ಮೆಗೌಡ ಮತ್ತು ಇತರರಿಗೆ ದಾನ ನೀಡುತ್ತಾ ಕೆರೆ ನಿರ್ವಹಣೆಗಾಗಿ ೪ ಬಂಡಿ ಬಿಟ್ಟಿರುವುದನ್ನು ಹೇಳಿದೆ. ಅಲ್ಲದೆ ದಾನ ಪಡೆದವರು ಕೋಣ, ಮರ, ಮುಟ್ಟು, ಕಬ್ಬಿಣ ಮತ್ತು ಗಾಡಿಗೆ ಎಣ್ಣೆಯನ್ನು ಇಟ್ಟುಕೊಳ್ಳಲು ತಿಳಿಸಲಾಗಿದೆ. ಹಾಗೆಯೇ ಕ್ರಿ.ಶ. ೧೪೨೨ರ ಶಾಸನವು[೭೫] ಕೊಂಗನಾಡ ತೆರಿಗೆ ಅಧಿಕಾರಿ ಗೌಡ ಪ್ರಜೆಯೊಬ್ಬರಿಗೆ ಕೆರೆ ಬಂಡಿಯ ನಿರ್ವಹಣೆಗಾಗಿ ಬೋಳಕ್ಯಾತನಹಳ್ಳಿಗೆ ಸೇರಿದ ಹಲವು ತೆರಿಗೆಗಳ ಆದಾಯವನ್ನು ದಾನ ನೀಡಿರುವುದನ್ನು ತಿಳಿಸಿದೆ. ವಿಜಯನಗರದ ಅರಸ ವೀರಪ್ರತಾಪದೇವರಾಯನ ಕಾಲದಲ್ಲಿ ಕೆರೆ ಬಂಡಿಗೆ ಸಂಬಂಧಿಸಿದ ವಿಷಯಗಳು ತಿಮ್ಮನಹಳ್ಳಿ ಮತ್ತು ನೇರ್ಲಿಗೆ ಶಾಸನಗಳಲ್ಲಿ ಕಂಡುಬಂದಿವೆ. ಕ್ರಿ.ಶ. ೧೪೨೯ರ ನೇರ್ಲಿಗೆಯ ಶಾಸನದಲ್ಲಿ[೭೬] ವಿರೂಪಣ್ಣ ನಾಯಕರ ಪಾಲನೆಯಲ್ಲಿ ನೇರ್ಲಿಗೆಯ ಹಿರಿಯ ಕೆರೆಬಂಡಿ ನಿರ್ವಹಣೆಗೆ ಗದ್ದೆ, ತೋಟ ತುಡಿಕೆಗಳನ್ನು ಕೊಟ್ಟ ಮಾಹಿತಿ ಇದೆ. ಹಾಗೆಯೇ ತಿಮ್ಮನಹಳ್ಳಿಯ ಕ್ರಿ.ಶ. ೧೪೩೨ರ ಶಾಸನವು[೭೭] ಬಸವ ಶಂಕರಶೆಟ್ಟಿನಾಯಕ ನೇರ್ಲಿಗೆಯ ಹಿರಿಯ ಕೆರೆಯ ನಿರ್ವಹಣೆಗೆ ಕೆರೆಯ ಬಂಡಿಯ ಜೀವಿತಕ್ಕೆ ಕೊಟ್ಟ ಭೂಮಿಯ ಬಗೆಗೆ ತಿಳಿಸಿದೆ. ಕ್ರಿ.ಶ. ೧೬ನೇ ಶತಮಾನದ ಶಾಸನದಲ್ಲಿ[೭೮] ಹೊಳೆನರಸೀಪುರದ ನಿಡುವಣಿ ಗ್ರಾಮದ ಕೆರೆಯ ನಿರ್ವಹಣೆಗಾಗಿ ಬಂಡಿಯನ್ನು ಬಿಟ್ಟು, ಆ

ಬಂಡಿಯ ನಿರ್ವಹಣೆಯನ್ನು ನೋಡಿಕೊಳ್ಳುವ ರಾಚಯ್ಯ ಎಂಬುವನಿಗೆ ಕೆರೆಯ ಅಚ್ಚುಕಟ್ಟಿನ ಐದು ಗುಳ ತರಿ ಭೂಮಿ ಜತೆಗೆ ೩೦ ಪಣ ನೀಡಿರುವುದು ಗಮನಾರ್ಹವಾಗಿದೆ. ಕೆರೆಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ನೀಡಲಾಗಿರುವ ಭೂಮಿಯ ಕೊಡುಗೆಗಳನ್ನು ಬಿತ್ತುವಟ್ಟ, ದಸವಂದ ಮತ್ತು ಕಟ್ಟುಕೊಡುಗೆ ಎಂದು ಶಾಸನಗಳಲ್ಲಿ ಉಲ್ಲೇಖವಾಗಿದೆ.

ಬಿತ್ತುವಟ್ಟ

ಕೆರೆಯ ನಿರ್ಮಾಣ ಅದರ ಸಂರಕ್ಷಣೆಯ ಕೆಲಸ ಮಾಡಿದ ವ್ಯಕ್ತಿಗಳಿಗೆ ಭೂಮಿಯನ್ನು ದಾನ ನೀಡುವುದಕ್ಕೆ 'ಬಿತ್ತುವಟ್ಟ' ಎಂದು ಅರ್ಥೈಸಲಾಗಿದೆ. ಈ ವಿಷಯವನ್ನು ಪ್ರಸ್ತಾಪಿಸುವ ಅನೇಕ ಶಾಸನಗಳು ದೊರಕಿವೆ. ಅರಕಲಗೂಡು ತಾಲೂಕಿನ ಕ್ರಿ.ಶ. ೧೦ನೆಯ ಶತಮಾನಕ್ಕೆ ಸೇರಿದ ಶಾಸನದಲ್ಲಿ[೭೯] ಪೊನ್ನಯ್ಯ ಮತ್ತು ಮಾಕಯ್ಯನಿಗೆ ಬಿತ್ತುವಟ್ಟ ಕೊಟ್ಟಿರುವ ಮಾಹಿತಿ ಇದೆ. ಕ್ರಿ.ಶ. ೧೦೬೨-೬೩ರ ಹಳೇಬೀಡಿನ ಶಾಸನದಲ್ಲಿ[೮೦] ವಿನಯಾದಿತ್ಯ ರಾಜ ಅಲ್ಲಿನ ಪ್ರಾಚೀನ ಕೆರೆಯನ್ನು ಕ್ರಿ.ಶ. ೧೦೬೨ರಲ್ಲಿ ಕಟ್ಟಿಸಿ, ಆ ಕೆರೆಗೆ ತೂಬನ್ನು ಮಾಡಿಸಿ, ಆ ಕೆರೆಯ ಸಂರಕ್ಷಣೆಗಾಗಿ ಬಿತ್ತುವಟ್ಟವನ್ನು ಬಿಟ್ಟಿರುವ ಉಲ್ಲೇಖವಿದೆ. ಚನ್ನರಾಯಪಟ್ಟಣ ತಾಲೂಕಿನ ಸಂತೆಶಿವರದ ೧೨ನೆಯ ಶತಮಾನದ ಶಾಸನದಲ್ಲಿ[೮೧] ನಾರಣಮಯ್ಯ ಮತ್ತು ಮುನಿಯಗಾವುಂಡ ಸೇರಿದಂತೆ ಗಂಡಸಿಯ ಎಲ್ಲಾ ಪ್ರಜೆಗಳು ದೊಡ್ಡಕೆರೆಯಿಂದ ಸಾಗುವಳಿಯಾಗುವ ಒಂದು ಖಂಡುಗ ಭೂಮಿಗೆ ೧ ಖಂಡುಗ ಬಿತ್ತುವಟ್ಟದ ಪ್ರಕಾರ 'ದರ' ನಿಗದಿ ಮಾಡುತ್ತಾರೆ. ಅಲ್ಲದೆ ಕೆರೆ ನಿರ್ವಹಣೆಗಾಗಿ ಹಲವು ಭೂಮಿಗಳನ್ನು ನಿಗದಿಪಡಿಸಿ ಹೊಣೆಗಾರಿಕೆ ವಹಿಸುತ್ತಾರೆ. ಹಾಗಾಗಿ ನಿರ್ವಹಣೆಯ ಜವಾಬ್ದಾರಿಗೆ ಹಲವು ರಿಯಾಯಿತಿ ಸೌಲಭ್ಯಗಳು ನೀಡುತ್ತಾ ಪ್ರೋತ್ಸಾಹಿಸಿವುದು ಕಂಡುಬರುತ್ತದೆ.

ದಸವಂದ

ಬಿತ್ತುವಟ್ಟದಂತೆ 'ದಸವಂದವೂ' ಕೆರೆಯ ನಿರ್ಮಾಣ ಮತ್ತು ದುರಸ್ತಿಗೆ ನೀಡಲಾಗುವ ಭೂಮಿಯನ್ನು ಸೂಚಿಸಲು ಬಳಸುವ ಸಾಮಾನ್ಯ ಶಬ್ದ. ಈ ಪದದ ಉಲ್ಲೇಖವು ವಿಜಯನಗರ ಕಾಲದ ತೆಲುಗು ಮತ್ತು ಕನ್ನಡ ಶಾಸನಗಳಲ್ಲಿ ಅಧಿಕವಾಗಿ ಕಂಡುಬರುತ್ತದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ದಸವಂದ ಎಂದರೆ ಹತ್ತನೆಯ ಒಂದು ಭಾಗವೆಂತಲೂ ಆ ಭಾಗದಷ್ಟು ಕೃಷಿ ಉತ್ಪನ್ನವನ್ನು ಜಮೀನ್ದಾರ ಮತ್ತು ಒಕ್ಕಲಿಗ ಹಂಚಿಕೊಳ್ಳಬೇಕು ಎಂದು ಹೇಳಿದೆ. 'ದಸವಂದ' ಪದದ ನಿಷ್ಪತ್ತಿಯನ್ನು ಶಾಸನಗಳ ಹಿನ್ನೆಲೆಯಲ್ಲಿ ಕೊಟ್ರಯ್ಯನವರು ವಿವರವಾಗಿ ವಿಶ್ಲೇಷಿಸಿದ್ದಾರೆ. ದಕ್ಷಿಣಭಾರತದಲ್ಲಿ ವಿಜಯನಗರ ಕಾಲದ ಶಾಸನಗಳು 'ದಸವಂದ' ಎಂಬ ಪದವನ್ನು ಬಳಸಿರುವುದು ಕೆರೆ ಅಥವಾ ನೀರಾವರಿ ಪದ್ಧತಿಯ ಸಂದರ್ಭದಲ್ಲಿಯೇ ಎಂಬುದು ಶಾಸನಗಳ ಅಧ್ಯಯನದಿಂದ ತಿಳಿದುಬರುತ್ತದೆ. ಉದಾಹರಣೆಗೆ ಕೋಲಾರ ಜಿಲ್ಲೆಯಲ್ಲಿ ದೊರೆತಿರುವ ಒಂದು ಶಾಸನದಂತೆ ಕೆರೆಯ ಕಟ್ಟುಕೊಡುಗೆಯು ಕೆರೆಯನ್ನು ಕಟ್ಟಿಸಿದವನಿಗೆ ನೀಡಿದ ಭೂಮಿಯು ೨:೧೦ ಮತ್ತು ೧:೫ರಷ್ಟು ಇತ್ತು ಎಂದು ಸೂಚಿಸುತ್ತದೆ.[೮೨]

ಕಟ್ಟುಕೊಡುಗೆ

ದಸವಂದ ಮತ್ತು ಕಟ್ಟುಕೊಡುಗೆಯು ಒಂದೇ ಆಗಿದ್ದು ಸೂಕ್ಷ್ಮವಾದ ಅಧ್ಯಯನದಿಂದ ಸ್ವಲ್ಪ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ. ಕಟ್ಟುಕೊಡುಗೆ ಶಬ್ದವು ಕೆರೆಯನ್ನು ಕಟ್ಟಿಸಿದವನಿಗೆ ಅದನ್ನು ಸುಸ್ಥಿತಿಯಲ್ಲಿ ರಕ್ಷಿಸಿದ ಸೇವೆಗಾಗಿ ಇಲ್ಲವೆ ಜೀರ್ಣೋದ್ಧಾರಕ್ಕಾಗಿ ನೀಡಲಾದ ಭೂಮಿದಾನ ಎಂಬ ಅರ್ಥ ಕೊಡುತ್ತದೆ. ಕೆರೆಕೊಡುಗೆಗಳಿಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ಉಲ್ಲೇಖವಿರುವುದನ್ನು ನೋಡಬಹುದು.

ವಡಗರಹಳ್ಳಿಯ ಕ್ರಿ.ಶ. ೧೧೯೬ರ ಶಾಸನದಲ್ಲಿ[೮೩] ಕೆರೆಯನ್ನು ಕಟ್ಟಿಸಿದ ಕೂಸದಲ್ಯಯನಿಗೆ ಸುತ್ತಮುತ್ತಲ ಅನೇಕ ಗೌಡರು ಸೇರಿ ಕೆರೆಕೊಡುಗೆ ಕೊಟ್ಟಿದ್ದಾರೆ. ಗೀಜಿಹಳ್ಳಿಯ ಕ್ರಿ.ಶ. ೧೨ನೆಯ ಶತಮಾನದ ಶಾಸನದಲ್ಲಿ[೮೪] ಕೆರೆ ನಿರ್ಮಾಣ ಕಾಮಗಾರಿಯಲ್ಲಿ ಮತ್ತು ಅದರ ನಿರ್ವಹಣೆಗೆ ಸಹಾಯಕವಾಗುವರೆಲ್ಲರಿಗೂ ನಿರ್ಮಾತೃ ತನಗೆ ದೊರೆತ ಕೆರೆಕೊಡುಗೆ ಭೂಮಿಯನ್ನು ಹಂಚಿಕೊಟ್ಟಿದ್ದಾನೆ. ಅವರು ಬ್ರಹ್ಮಚಾರಿ ಚಾವುಣ ಭಟ್ಟರಿಗೆ ೧ ಸಲಗೆ. ೫ ಕೊಳಗ ಭೂಮಿ, ಉಳಿದವರೆಲ್ಲರಿಗೂ ೫ ಕೊಳಗ ಭೂಮಿಯಂತೆ ಹಂಚಿಕೊಟ್ಟಿದ್ದಾನೆ. ಅವರು ಕೇಶವ ಭಟ್ಟನ ಮಾಚೆಯ್ಯ, ನೀರಯ್ಯ, ಬಲದೇವ, ಕೊಂಗಳಿನಾಡೈಯ್ಯ, ಚಿಮ್ಮಯ್ಯಂ ಮುಂತಾದವರಿಗೆ ನೀಡಲಾಗಿದೆ. ಕಲ್ಲುಕುಟಿಗ ಮಾದೋಜನಿಗೆ ೫ ಕೊಳಗವಾದರೆ, ಕಲ್ಲುಕುಟಿಗ ಮಾಚೋಜನಿಗೆ ೧೦ ಕೊಳಗ ನೀಡಿರುವುದು ಗಮನಾರ್ಹ. ಈ ರೀತಿಯ ವ್ಯತ್ಯಾಸ ಅವರ ಕಾರ್ಯದಕ್ಷತೆಗೆ ಅನುಸಾರವಾಗಿ ನೀಡಿರುವಂತಿದೆ.

ಕೆರೆಯ ನಿರ್ವಹಣೆಯಲ್ಲಿ ಅಂದಿನ ಗ್ರಾಮದ ಗೌಡರು ಮತ್ತು ಮಹಾಜನರು ವಹಿಸಿದ ಪಾತ್ರ ಪ್ರಧಾನವಾದುದಾಗಿದೆ.

ಕ್ರಿ.ಶ. ೧೩೧೪ರ ಹಾಸನ ಶಾಸನವೊಂದರಲ್ಲಿ[೮೫] ಊರಿನ ಮಹಾಜನರು ಒಂದಾಗಿ ಸಮಸ್ತ ಪ್ರಜೆಗಾವುಂಡಗಳನ್ನು ಮುಂದಿಟ್ಟುಕೊಂಡು ಆ ಕೆರೆಯ ಕೆಳಗೆ ಕೆರೆಕೊಡುಗೆಯಾಗಿ ಭೂಮಿಯನ್ನು ದಾನವಾಗಿ ಬಿಟ್ಟ ವಿಷಯ ತಿಳಿಯಬರುತ್ತದೆ. ಬಾಗವಾಳು ಗ್ರಾಮದಲ್ಲಿ ಕೆರೆ ಕಟ್ಟಿಸಿ ತೂಬನ್ನು ಇಕ್ಕಿಸಿದ ಬೊಮ್ಮಣನಿಗೆ ಆ ಗ್ರಾಮದ ಸಮಸ್ತ ಪ್ರಜೆಗಳು ಮತ್ತು ಗೌಡರು ಸೇರಿ ಕೆರೆಕೊಡುಗೆಗಳನ್ನು ನೀಡಿರುವುದು ಕ್ರಿ.ಶ. ೧೩೩೮ರ ಶಾಸನದಲ್ಲಿದೆ.[೮೬] ಕೆರೆ ಕಟ್ಟಿಸಿದ ನಿರ್ಮಾತೃಗಳಿಗೆ ಮಹಾಜನರು ಮತ್ತು ಪ್ರಜೆಗಳು ಸ್ವಂತ ವೆಚ್ಚದಿಂದ ಭೂಕೊಡುಗೆ ನೀಡಿರುವುದು ಕ್ರಿ.ಶ. ೧೩೮೭ರ ಬಂಟಿಹಳ್ಳಿಯ ಶಾಸನದಲ್ಲಿ ಉಲ್ಲೇಖವಾಗಿದೆ.[೮೭] ಕ್ರಿ.ಶ. ೧೪-೧೫ನೆಯ ಶತಮಾನದ ಶಾಸನವೊಂದು[೮೮] ವಿಶ್ವನಾಥ ದೀಕ್ಷಿತರಿಗೆ ಕೆರೆಕೊಡುಗೆಯಾಗಿ ದಂಣ್ಣಾಯಕ ಸಿಂಗಮ ಗುಮ್ಮಣ್ಣರು ತೆರಿಗೆಯಿಲ್ಲದೆ ಬಿಜಾವರಿ ಸರ್ವಮಾನ್ಯವಾಗಿ ಬಿಟ್ಟರು ಎಂದಿದೆ.

ಕೆರೆಗಳ ನಿರ್ಮಾಣ, ಸಂರಕ್ಷಣೆ, ನಿರ್ವಹಣೆಯ ಹೊಣೆಗಾರಿಕೆಯು ರಾಜನಿಂದ ಹಿಡಿದು ಜನಸಾಮಾನ್ಯರವರೆಗೆ ಜವಾಬ್ದಾರರಾಗಿದ್ದು ಇದರಲ್ಲಿ ಎಲ್ಲರ ಪಾತ್ರವು ತುಂಬ ಮಹತ್ವದ್ದಾಗಿದೆ.

ಹಿಂದೆ ಗ್ರಾಮದ ಮುಖ್ಯಸ್ಥನಾದ ಪಟೇಲ ಹಳ್ಳಿಯ ಮೇಲೆ ಸಂಪೂರ್ಣ ಅಧಿಕಾರವನ್ನು ಹೊಂದಿದ್ದ. ಕೆರೆ ಕೆಳಗಿನ ಜಮೀನು ಆತನಿಗೆ ಸೇರಿದ್ದರಿಂದ ಆತ ಕೆರೆಯ ಸಂರಕ್ಷಣೆ ಬಗ್ಗೆ ಇರುವಂತೆ ಎಚ್ಚರ ವಹಿಸುತ್ತಿದ್ದನು. ಕೆರೆಯು ಗ್ರಾಮ ಸಮುದಾಯದಿಂದ ಸರ್ಕಾರಕ್ಕೆ ಸೇರಿತು. ಕೆರೆ ಸಂರಕ್ಷಣೆಗಾಗಿ ಸರ್ಕಾರವು ೧೯೧೧ರಲ್ಲಿ ಕೆರೆ ಪಂಚಾಯಿತಿ ಶಾಸನವನ್ನು ಜಾರಿಗೆ ತಂದಿತು.[೮೯]

ಈ ಶಾಸನದ ಪ್ರಕಾರ ಯಾವುದೇ ಹಳ್ಳಿಯಲ್ಲಿ ಕೆರೆ ಕೆಳಗಿನ ತರಿ ಭೂಮಿಯಲ್ಲಿ ಅರ್ಧಕ್ಕೆ ಕಡಿಮೆ ಇಲ್ಲದಷ್ಟು, ಒಟ್ಟು ಹಿಡುವಳಿ ಉಳ್ಳ ರೈತರ ಪೈಕಿ ಮೂರನೆಯ ಎರಡಕ್ಕೆ ಕಡಿಮೆ ಇಲ್ಲದಷ್ಟು, ಜನ ಒಪ್ಪಿದಲ್ಲಿ ಅಂತಹ ಹಳ್ಳಿಯಲ್ಲಿ ಒಂದು ಕೆರೆ ಪಂಚಾಯಿತಿಯನ್ನು ರಚಿಸತಕ್ಕದ್ದು. ಪಂಚಾಯಿತಿಯಲ್ಲಿ ಹಳ್ಳಿಯ ಪಟೇಲ, ಶಾನುಭೋಗ ಹಾಗೂ ರೈತರಿಂದ ಆರಿಸಲಾದ ಸುಮಾರು ಮೂರು ಅಥವಾ ಹೆಚ್ಚಿನ ಸದಸ್ಯರು ಇರತಕ್ಕದ್ದು. ಚುನಾಯಿತ ಸದಸ್ಯರ ಅಧಿಕಾರದ ಅವಧಿ ಮೂರು ವರ್ಷವಿದ್ದು, ಹಳ್ಳಿಯ ಪಟೇಲನೇ ಪಂಚಾಯಿತಿಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳಬೇಕಾಗಿತ್ತು.

ವರ್ಷದಿಂದ ವರ್ಷಕ್ಕೆ ಕೆರೆ ಪಂಚಾಯಿತಿಗಳ ಸಂಖ್ಯೆ ಹೆಚ್ಚಾಗುತ್ತಾ ಹೋಯಿತು. ಸ್ವಾತಂತ್ರ್ಯಾನಂತರ ಈ ಪರಿಸ್ಥಿತಿಯು ಬಹುಪಾಲು ಪರಿವರ್ತನೆ ಆಯಿತು. ವಂಶಪಾರಂಪರ್ಯವಾಗಿದ್ದ ಪಟೇಲ, ಶಾನುಭೋಗರ ಹುದ್ದೆಗಳನ್ನು ರದ್ದುಗೊಳಿಸಲಾಯಿತು. ಈ ಹುದ್ದೆಗಳಿಗೆ ಬದಲಾಗಿ ಗ್ರಾಮಲೆಕ್ಕಿಗರನ್ನು ಸರ್ಕಾರವೇ ನೇಮಕ ಮಾಡಿತು. ಸಮುದಾಯ ನಿರ್ವಹಣಾ ಪದ್ಧತಿಗೆ ಸ್ಥಳವಿಲ್ಲದಾಯಿತು. ಹಣದ ಕೊರತೆ, ನಿರ್ವಹಣೆಯಲ್ಲಿ ವೈಜ್ಞಾನಿಕತೆಯ ಕೊರತೆ, ರೈತರನ್ನು ಕೆರೆಯ ನಿರ್ವಹಣೆಯಿಂದ ದೂರವಿಟ್ಟಿರುವುದು ಮುಂತಾದ ಕಾರಣಗಳಿಂದ ಕೆರೆಗಳು ದುಃಸ್ಥಿತಿಗೆ ಒಳಗಾದವು. ಜನಸಂಖ್ಯೆ ಹೆಚ್ಚಾದಂತೆ ಕೆರೆಗಳು ಮಾಯವಾಗಿ ನಗರಪ್ರದೇಶದಲ್ಲಿ ನಗರೀಕರಣಕ್ಕೆ ತುತ್ತಾಗುತ್ತಿದ್ದರೆ, ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಮೂಲಗಳಿಗೆ ಒತ್ತುವರಿಯಾಗುತ್ತಿವೆ. ಇದನ್ನು ತಡೆಯುವ ಉದ್ದೇಶದಿಂದ ಸರ್ಕಾರವು ಅನೇಕ ಕಾಯ್ದೆಗಳನ್ನು ಜಾರಿಗೆ ತಂದಿದೆ.

೩.೧೦. ಕೆರೆ ರಕ್ಷಣೆಯ ಕಾಯ್ದೆಗಳು

ಈ ಕಾಯ್ದೆಗಳು ಕೆರೆಗಳು ನಾಶವಾಗದಂತೆ ರಕ್ಷಣೆ ಮಾಡುವುದಕ್ಕೆ ಜನರು ಪಾಲಿಸಬೇಕಾದ ಕಾನೂನುಗಳಾಗಿವೆ.[೯೦]

* ೧೯೬೫ರ ನೀರಾವರಿ ಕಾಯಿದೆಯು ಜಾರಿಗೆ ಬಂದಿತು. ಈ ಕಾಯ್ದೆಯಲ್ಲಿ ನೀರಾವರಿ ಕೆಲಸಗಳ ರಚನೆ, ನಿರ್ವಹಣೆ, ನಿರ್ಮಾಣ, ವಿತರಣೆ, ತುರ್ತುಪರಿಸ್ಥಿತಿಯಲ್ಲಿ ಕೂಲಿಯಾಳುಗಳನ್ನು ಪಡೆಯುವ ವಿಷಯಗಳಿವೆ.

* ಸಂವಿಧಾನದ ೫೧(ಎ) ವಿಧಿಯು ಪ್ರತಿ ಪ್ರಜೆಯೂ ಕಾಡು, ಕೆರೆ, ನದಿ, ವನ್ಯಜೀವಿಗಳನ್ನು ರಕ್ಷಿಸಬೇಕು ಎಂದು ಹೇಳುತ್ತದೆ.

* ನಿರ್ದೇಶನ ಸೂತ್ರದ ೪೮(ಎ) ವಿಧಿಯೂ ಕೂಡ ಇದನ್ನೇ ಹೇಳುತ್ತದೆ.
* ೧೯೭೪ರ ನೀರು ಮಾಲಿನ್ಯ ನಿಯಂತ್ರಣ ಕಾಯ್ದೆ
* ೧೯೭೭ರ ನೀರು ಮಾಲಿನ್ಯ ನಿಯಂತ್ರಣ ಸೆಸ್ ಕಾಯ್ದೆ
* ೧೯೮೦ರ ಅರಣ್ಯ ಸಂರಕ್ಷಣಾ ಕಾಯ್ದೆ
* ೧೯೮೬ರ ಪರಿಸರ ಸಂರಕ್ಷಣಾ ಕಾಯ್ದೆ
* ೨೦೦೧ರ ರಾಷ್ಟ್ರೀಯ ಕೆರೆ ಸಂರಕ್ಷಣಾ ಕಾಯ್ದೆ
* ೨೦೦೨ರಲ್ಲಿ ಬೆಂಗಳೂರು ಹಾಗೂ ಇತರೆ ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ ಕೆರೆ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ.

ಈ ಕಾಯ್ದೆಯ ಪ್ರಕಾರ ಕೆರೆಯ ಒತ್ತುವರಿ ಮಾಡುವುದು ಮತ್ತು ಅನಧಿಕೃತವಾಗಿ ಕೆರೆ ನೀರಿನ ಬಳಕೆಯನ್ನು ನಿಷೇಧಿಸಿದೆ. ಕೆರೆಯ ಹೊರಗಿನ ಸರಹದ್ದಿನಿಂದ ೩೦ ಮೀಟರ್ ಒಳಗೆ ಯಾವುದೇ ವಾಣಿಜ್ಯ ಚಟುವಟಿಕೆ ನಡೆಸುವಂತಿಲ್ಲ. ಮನೆ ಕಟ್ಟುವಂತಿಲ್ಲ. ಕೆರೆಗಳಿಗೆ ತ್ಯಾಜ್ಯವಸ್ತುಗಳನ್ನು ಸುರಿಯುವಂತಿಲ್ಲ. ಕೆರೆ ಪ್ರದೇಶದಲ್ಲಿ ಒಡ್ಡು, ರಸ್ತೆ, ಸೇತುವೆ ನಿರ್ಮಾಣ ಮಾಡುವಂತಿಲ್ಲ. ಇವುಗಳನ್ನು ಉಲ್ಲಂಘಿಸಿದರೆ ೬ ತಿಂಗಳಿನಿಂದ ೨ ವರ್ಷದವರೆಗೆ ಜೈಲುಶಿಕ್ಷೆ ವಿಧಿಸಬಹುದು. ೧೦ ಸಾವಿರದಿಂದ ೨೦ ಸಾವಿರದವರೆಗೆ ದಂಡ ವಿಧಿಸಬಹುದು. ಒತ್ತುವರಿ ತೆರುವುಗೊಳಿಸಲು ಬರುವ ಅಧಿಕಾರಿಗಳಿಗೆ ಅಡ್ಡಿಯನ್ನುಂಟು ಮಾಡಿದರೆ ಶಿಕ್ಷೆ ವಿಧಿಸಬಹುದು. ಒತ್ತುವರಿ ತಡೆಯುವಲ್ಲಿ ವಿಫಲನಾಗುವ ನೌಕರರಿಗೂ ದಂಡ ವಿಧಿಸಲು ಅವಕಾಶವಿದೆ. ಕೆರೆಯ ಸಂರಕ್ಷಣೆಯಲ್ಲಿ ಸರ್ಕಾರ ಮತ್ತು ಇಲಾಖೆಯ ಪಾತ್ರ ಮಹತ್ವದ್ದಾಗಿದೆ.

೩.೧೧. ಪ್ರಮುಖ ಕೆರೆಗಳು

ಹಲ್ಮಿಡಿ ಕೆರೆ

ಬೇಲೂರಿನಿಂದ ಚಿಕ್ಕಮಗಳೂರಿಗೆ ಹೋಗುವ ಮಾರ್ಗದಲ್ಲಿ ಹಲ್ಮಿಡಿ ಗ್ರಾಮವಿದೆ. ತಾಲೂಕು ಸ್ಥಳವಾದ ಬೇಲೂರಿನಿಂದ ಸುಮಾರು ೨೦ ಕಿ.ಮೀ. ದೂರದಲ್ಲಿರುವ ಗ್ರಾಮದಲ್ಲಿ ಚಿಕ್ಕಕೆರೆ ಮತ್ತು ದೊಡ್ಡಕೆರೆ ಎಂಬ ೨ ಕೆರೆಗಳಿವೆ. ಇಲ್ಲಿನ ಕೆರೆಗಳನ್ನು ಯಾರು ನಿರ್ಮಿಸಿದರು ಎಂಬುದಕ್ಕೆ ಯಾವುದೇ ಸ್ಪಷ್ಟ ದಾಖಲೆಗಳಿಲ್ಲ. ಹಲ್ಮಿಡಿಯ ಕ್ರಿ.ಶ. ೪೫೦ರ ಶಾಸನದಲ್ಲಿ[11] ತರಿ ಭೂಮಿಯ ಹತ್ತನೆಯ ಒಂದು ಭಾಗವನ್ನು "ಪತ್ತೊಂದಿ" ಭಟ್ಟರಿಗೆ ಎಂದು ಉಲ್ಲೇಖವಾಗಿದೆ. ಈ ಕಾರಣದಿಂದ ಕದಂಬರ ಕಾಲದಲ್ಲಿಯೇ ಕೆರೆಗಳು ಇದ್ದಿರಬಹುದೆಂದು ಊಹಿಸಬಹುದು. ಹಲ್ಮಿಡಿ ಗ್ರಾಮದಿಂದ ೧ ಕಿ.ಮೀ. ದೂರದ ಉತ್ತರದಿಕ್ಕಿನಲ್ಲಿ ಹಲ್ಮಿಡಿ ದೊಡ್ಡಕೆರೆ ಇದೆ. ಏರಿಯು ಉತ್ತರದಿಕ್ಕಿನಿಂದ ದಕ್ಷಿಣಾಭಿಮುಖವಾಗಿದೆ. ಏರಿಯ ಮೇಲ್ಭಾಗದಲ್ಲಿ ಹಲ್ಮಿಡಿ ಗ್ರಾಮದಿಂದ ಹೆಜ್ಜೇಗನಹಳ್ಳಿಗೆ ಹೋಗಲು

ರಸ್ತೆ ನಿರ್ಮಿಸಲಾಗಿದೆ. ಏರಿಯು ಸುಮಾರು ೩೫೦ ಮೀ. ಉದ್ದ, ೭೫೦ ಮೀ. ಅಗಲ ಮತ್ತು ಒಳಭಾಗದ ಎತ್ತರ ೧೦ ಅಡಿ ಇದೆ. ಕೆರೆಗೆ ಎರಡು ತೂಬು ಎರಡು ಕೋಡಿಗಳಿವೆ. ಕೆರೆಯ ದಕ್ಷಿಣದಿಕ್ಕಿನ ಏರಿಯಿಂದ ಸುಮಾರು ೧೮ ಅಡಿ ದೂರದಲ್ಲಿ ಒಂದು ಹಳೆಯ ತೂಬು ಇದ್ದು, ಅದರ ಮೇಲೆ ಗಜಲಕ್ಷ್ಮಿಯ ಶಿಲ್ಪವಿದೆ. ಈ ತೂಬು ಇಂದು ಕಾರ್ಯ ನಿರ್ವಹಣೆಯಿಲ್ಲದೆ ಹಾಳಾಗಿದೆ. ಈ ಹಳೆಯ ತೂಬು ಮತ್ತು ಏರಿಯ ಮಧ್ಯ ಹೊಸ ತೂಬನ್ನು ಇರಿಸಲಾಗಿದೆ. ತೂಬನ್ನು ತಲುಪಲು ಸಿಮೆಂಟ್ ಕಟ್ಟಡದ ಸೇತುವೆ ಮಾಡಿದ್ದಾರೆ. ತೂಬಿನ ನಿರ್ವಹಣೆಯನ್ನು ಗ್ರಾಮದ ಜನರೆ ನೋಡಿಕೊಳ್ಳುತ್ತಾರೆ. ಕೆರೆಯ ಆಯಕಟ್ಟು ಪ್ರದೇಶವು ಈ ದಿನಗಳಲ್ಲಿ ಹೆಚ್ಚಾಗಿ ಒಕ್ಕಲಿಗ ಮತ್ತು ಪರಿಶಿಷ್ಟ ಪಂಗಡದವರಿಗೆ ಸೇರಿದೆ. ಇವರು ಕೆರೆಯ ನೀರನ್ನು ಬಳಸಿಕೊಂಡು ಭತ್ತ, ಕಬ್ಬು ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ.

ಹಲ್ಮಿಡಿ ಗ್ರಾಮದ ಉತ್ತರದಿಕ್ಕಿನಲ್ಲಿ ಮತ್ತೊಂದು ಕೆರೆ ಇದೆ. ಅದನ್ನು ಚಿಕ್ಕಕೆರೆ ಎಂದು ಕರೆಯುತ್ತಾರೆ. ಕೆರೆಯ ದಕ್ಷಿಣಭಾಗದಲ್ಲಿ ಪೂರ್ವಕ್ಕೆ ಮುಖಮಾಡಿದಂತೆ ಈಶ್ವರ ದೇವಸ್ಥಾನವಿದೆ. ಏರಿಯು ಉತ್ತರದಿಂದ ದಕ್ಷಿಣಾಭಿಮುಖವಾಗಿ ಮುಂದುವರಿದಿದೆ. ಸುಮಾರು ೫೨೦ ಮೀ. ಉದ್ದ ೬ ಮೀ. ಅಗಲ ಮತ್ತು ೮ ಅಡಿ ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಗೆ ಹೊಂದಿಕೊಂಡಂತೆ ಒಂದು ತೂಬನ್ನು ಇರಿಸಲಾಗಿದೆ. ಈ ತೂಬಿಗೆ ಅನುಸಾರವಾಗಿ ಏರಿಯ ಹೊರ ಮುಖದಲ್ಲಿ ಒಂದು ಕಾಲುವೆಯನ್ನು ಜೋಡಿಸಿ ಅದರ ಮೂಲಕ ಆಯಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆಯ ನೀರು ಪ್ರಾಣಿ, ಪಕ್ಷಿ, ಕೃಷಿ ಮತ್ತು ಧಾರ್ಮಿಕ ಆಚರಣೆಗಳಿಗೆ ಉಪಯುಕ್ತವಾಗುತ್ತಿದೆ. ಕೆರೆಯು ತಾರಾಪುರ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಒಳಪಟ್ಟಿದ್ದು ೨೦೧೧-೧೨ರಲ್ಲಿ ಕಾಮಗಾರಿ ಮಾಡಲಾಗಿದೆ.

ಹಾರನಹಳ್ಳಿ ಕೆರೆ

ಕಲ್ಪತರು ನಾಡೆಂದೇ ಹೆಸರಾಗಿರುವ ಅರಸೀಕರೆ ತಾಲೂಕಿನ ಪುರಾತನ ಇತಿಹಾಸ ಪ್ರಸಿದ್ಧವಾಗಿರುವ ಊರೆಂದರೆ ಹಾರನಹಳ್ಳಿ. ಹೊಯ್ಸಳ ಆಳ್ವಿಕೆಯಲ್ಲಿ ಬ್ರಾಹ್ಮಣರಿಗೆ ಅಗ್ರಹಾರವಾಗಿ ಈ ಗ್ರಾಮವನ್ನು ದತ್ತಿ ನೀಡಲಾಗಿತ್ತು. ಅಂದು ಈ ಊರಿಗೆ ಹಾರುವನಹಳ್ಳಿ ಎಂದು ಇದ್ದು, ನಂತರ ಲಕ್ಷ್ಮೀನರಸಿಂಹಪುರವೆಂದು, ಹಿರಿಯಸೋಮನಾಥಪುರವೆಂದು ಹೀಗೆ ಕೆಲವು ರಾಜರ ಆಳ್ವಿಕೆಯಲ್ಲಿ ಈ ಊರಿನ ಸ್ಥಳನಾಮ ಬದಲಾವಣೆಯಾಯಿತು. ಈಗ ಹಾರನಹಳ್ಳಿ ಎಂದು ಪ್ರಚಲಿತದಲ್ಲಿದೆ.

ಈ ಗ್ರಾಮದ ದಕ್ಷಿಣಕ್ಕೆ ದೊಡ್ಡಕೆರೆ ಇದೆ. ಹೊಯ್ಸಳ ಕಾಲದ ಕೆರೆಗಳಲ್ಲಿ ಹಾರನಹಳ್ಳಿಯ ಕೆರೆಯು ಒಂದಾಗಿದೆ. ಗ್ರಾಮದಲ್ಲಿ ಸೋಮೇಶ್ವರ ಎಂಬ ಹೊಯ್ಸಳ ರಾಜ ಕೋಟೆ ನಿರ್ಮಿಸಿ, ಅವನ ಸಹೋದರಿ ಹೆಸರಿನಲ್ಲಿ ನಾಗಾರ್ತಿಕೆರೆ ಕಟ್ಟಿಸಿದನು.[೨] ಆದ್ದರಿಂದ ಹಾರನಹಳ್ಳಿ ಕೆರೆಗೆ

ನಾಗಾರ್ತಿಕೆರೆ ಎಂಬ ಹೆಸರು ಬಂದಿರುವಂತೆ ತಿಳಿದುಬರುತ್ತದೆ. ಕೆರೆಯು ಹಿಂದಿನಿಂದಲೂ ಮಳೆ ನೀರನ್ನು ಆಶ್ರಯಿಸಿದೆ. ಸರ್.ಎಂ.ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾದಾಗ ಹಾರನಹಳ್ಳಿ ನಾಗಾರ್ತಿ ದೊಡ್ಡಕೆರೆಗೆ ಯಗಚಿ ನದಿ ಯೋಜನೆ ರೂಪಿಸಿದ್ದು, ಆ ನದಿ ನೀರನ್ನು ಹಾರನಹಳ್ಳಿ ಕೆರೆಗೆ ತರಲು ಪ್ರಯತ್ನ ನಡೆಸಿದರು. ದಿವಾನ ಪದವಿಯನ್ನು ಸರ್ ಮಿರ್ಜಾ ಇಸ್ಮಾಯಿಲ್‌ಗೆ ವರ್ಗಾಯಿಸಲಾಯಿತು. ಆ ಸಂದರ್ಭದಲ್ಲಿ ಈ ಯೋಜನೆ ಅಷ್ಟಕ್ಕೆ ನಿಂತು ಹೋಯಿತೆಂದು ಸ್ಥಳೀಯರು ತಿಳಿಸುತ್ತಾರೆ.

ಕೆರೆಯ ಏರಿಯು ಉತ್ತರದಿಕ್ಕಿನಿಂದ ದಕ್ಷಿಣಾಭಿಮುಖವಾಗಿದ್ದು, ೧೬೬೦.೦೦ ಮೀ. ಉದ್ದ, ೫ ಅಡಿ ಅಗಲ ಮತ್ತು ೧೫ ಅಡಿ ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಯಿಂದ ಸುಮಾರು ೧೨ ಅಡಿ ದೂರದಲ್ಲಿ ಒಂದು ಹಳೆಯ ತೂಬಿದ್ದು, ಇಂದು ಕಾರ್ಯ ನಿರ್ವಹಿಸುತ್ತಿಲ್ಲ. ಏರಿಯ ಮಧ್ಯದಲ್ಲಿ ಒಂದು ಬಾವಿಯಾಕಾರದ ತೂಬು ಇದೆ. ಅದರ ರಚನೆಯನ್ನು ನೋಡಿದಾಗ ಹೊಯ್ಸಳ ಕಾಲದ ನಂತರದಲ್ಲಿ ನಿರ್ಮಿಸಿದಂತಿದೆ. ತೂಬಿನ ನಿರ್ವಹಣೆಯನ್ನು ನೀರ್ಗಂಟಿಗಳು ನೋಡಿಕೊಳ್ಳುತ್ತಾರೆ. ಈ ಕಾರ್ಯಕ್ಕೆ ಸರ್ಕಾರದಿಂದ ವೇತನ ಮತ್ತು ಜಮೀನನ್ನು ಬಿಡಲಾಗಿದೆ. ಕೆರೆಯ ನೀರನ್ನು ಬಳಸಿಕೊಂಡು ಜೋಳ, ಕಡ್ಲೆ ಬೆಳೆಗಳನ್ನು ಬೆಳೆಯುತ್ತಾರೆ. ಅದೇ ರೀತಿ ಅಚ್ಚುಕಟ್ಟು ಪ್ರದೇಶದಲ್ಲಿರುವ ತೆಂಗಿನ ಮರಗಳಿಗೂ ಉಪಯುಕ್ತವಾಗುತ್ತಿದೆ.

ಕೆರೆಯಲ್ಲಿ ನೀರಿಲ್ಲದೇ ಹೋದಾಗ ಕೆರೆ ಅಂಗಳಲ್ಲಿ ಕಡಲೆ ಬೆಳೆಯುತ್ತಾರೆ. ಕೆರೆಯು ೧೨೭.೭೪ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಮತ್ತು ೧೫೭.೪೧ ಹೆಕ್ಟೇರ್ ಜಲಾವೃತ ಪ್ರದೇಶವನ್ನು ಹೊಂದಿದ್ದು, ೧೬೨.೬೬ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುವ ಸಾಮರ್ಥ್ಯವನ್ನು ಪಡೆದಿದೆ.

ಕೆರೆಯ ಕೋಡಿಯ ಹತ್ತಿರ ಕೋಡಿಯಮ್ಮನ ದೇವಸ್ಥಾನ ಮತ್ತು ಕೋಡಿಮಠವಿದೆ. ಏಪ್ರಿಲ್ ತಿಂಗಳಿನಲ್ಲಿ ಕೋಡಮ್ಮನ ಜಾತ್ರೆ ನಡೆಯುತ್ತದೆ. ಈ ಕೋಡಿಮಠದ ಸಮೀಪದಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿದ್ದಾಗ ಕೆರೆ ನೀರು ತುಂಬಿ ಪ್ರಯಾಣಕ್ಕೆ ತೊಂದರೆಯಾಗಬಾರದೆಂದು ಸೇತುವೆಯನ್ನು ನಿರ್ಮಿಸಿದ್ದರು. ಕೆರೆ ಏರಿಯ ಹಿಂಭಾಗದಲ್ಲಿ ಹಾಸನದಿಂದ ಅರಸೀಕೆರೆಗೆ ಹೋಗುವ ರಸ್ತೆ ಮಾರ್ಗವಿದೆ. ಕೆರೆಯು ತುಂಬಿ ಕೋಡಿ ಬಿದ್ದಾಗ ತೆಪ್ಪೋತ್ಸವ ಮಾಡುತ್ತಾರೆ. ಹಾರನಹಳ್ಳಿ ಕೆರೆ ಮತ್ತು ಅರಸೀಕೆರೆ ಎರಡು ಅಕ್ಕತಂಗಿಯರ ಕೆರೆಗಳೆಂದು ಸ್ಥಳೀಯರು ಹೇಳುತ್ತಾರೆ. ಕೆರೆಯು ಈ ದಿನಗಳಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಸೇರಿದ್ದು, ರಕ್ಷಣೆಯನ್ನು ಪಡೆದಿದೆ.

ಹಾಲೆಬೇಲೂರು ಕೆರೆ(ಹಳೆಬೇಲೂರು)

ಹಾಲೆಬೇಲೂರು ಗ್ರಾಮವು ಸಕಲೇಶಪುರ ತಾಲೂಕಿನಲ್ಲಿದ್ದು, ಉತ್ತರ ಕದಂಬರ ಆಳ್ವಿಕೆಗೆ

ಸಂಬಂಧಿಸಿದೆ. ಕ್ರಿ.ಶ. ೧೧೯೫ರ ಶಾಸನದಲ್ಲಿ[೯೩] ಕದಂಬರಸನಾದ ದುದ್ದ ಮಹಾರಾಜನಿಗೆ ಮೇಚಲರಸಿ (ಮಹಾದೇವಿ) ಎಂಬ ರಾಣಿಯ ಮೂರು ಮಕ್ಕಳಲ್ಲಿ ಕೊನೆಯವನಾದ ದಯಾಸಿಂಹ ಮಹಾರಾಜನು ತನ್ನ ತಾಯಿಯ ಹೆಸರಿನಲ್ಲಿ ಮೇಚಲಸಮುದ್ರವೆಂಬ ಕೆರೆಯನ್ನು ಕಟ್ಟಿಸಿದನು. ಕೇಶವ ಅಥವಾ ವಾಸುದೇವ ದೇವಾಲಯಗಳನ್ನು ನಿರ್ಮಿಸಿದನು. ಎರಡು ಗ್ರಾಮಗಳನ್ನು ದೇವಸ್ಥಾನಕ್ಕೆ ದತ್ತಿ ಬಿಟ್ಟು ೫ ಜನ ಹಾರುವರಿಗೆ ನೀಡಿದನು. ಅದೇ ಮುಂದೆ ಹಾರುವ ಬೆಲುಹೂರು ಹಾಲೆಬೇಲೂರಾಯಿತು. ಅಂದರೆ ಕೇವಲ ಬೇಲುಹೂರು ಆಗಿದ್ದ ಗ್ರಾಮವು ಹಾರವರ ದತ್ತಿ ಸ್ಮರಣಾರ್ಥ ಹೆಸರಿನೊಂದಿಗೆ ಹಾರವರ ಬೆಲುಹೂರು > ಹಾರುವ ಬೇಲುಹೂರು > ಹಾಲೆಬೇಲೂರು ಆಯಿತು.[೯೪] ಕೆಲವರು ಹಾಲೆ ಬೇಲೂರನ್ನು ಹಳೆಯ ಬೇಲೂರು ಎಂತಲೂ ಕರೆಯುತ್ತಾರೆ. ಹಳೆಯ ಎಂಬ ಪದ ಗ್ರಾಮದ ಪ್ರಾಚೀನತೆಯನ್ನು ಸೂಚಿಸುತ್ತದೆ. ಊರಿನ ಪೂರ್ವಕ್ಕೆ ಅರಸೀಕೆರೆ(ಊರಬಾಗಿಲಕೆರೆ) ಮತ್ತು ಮಕ್ಕಳ ಕಟ್ಟೆ ಎಂಬ ಎರಡು ಕೆರೆಗಳಿವೆ. ಅರಸೀಕೆರೆಯನ್ನು ಅರಸಿಯ ಹೆಸರಿನಲ್ಲಿ ಕಟ್ಟಿಸಿರುವುದರಿಂದ ಅರಸೀಕೆರೆ ಎಂಬ ಹೆಸರು ಬಂದಿರುವುದಾಗಿ ಸ್ಥಳೀಯರು ತಿಳಿಸುತ್ತಾರೆ. ಶಾಸನದಲ್ಲಿ ಉಲ್ಲೇಖವಿರುವ 'ಮೇಚಲಸಮುದ್ರ' ಈ ಅರಸೀಕೆರೆಯೇ ಇರಬಹುದು.

ಕೆರೆಯ ಏರಿಯು ಪೂರ್ವ ಪಶ್ಚಿಮಾಭಿಮುಖವಾಗಿ ಸುಮಾರು ೨೦೦ ಮೀ. ಉದ್ದ, ೩ ಮೀ. ಅಗಲ ಮತ್ತು ೧೫ ಅಡಿಗಳಷ್ಟು ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಯಿಂದ ಉತ್ತರಕ್ಕೆ ಕೆರೆಯ ಅಂಗಳವಿದೆ. ಕೆರೆಯ ಪಶ್ಚಿಮ ಬದಿಯ ಏರಿಯ ಒಳಬದಿಯಲ್ಲಿ ಒಂದು ಚಿಕ್ಕಗುಡಿ ಇದೆ. ಅದನ್ನು ಸ್ಥಳೀಯರು ಅರಸೀಗುಡಿ ಎಂದು ಹೇಳುತ್ತಾರೆ. ಈ ಗುಡಿಗೆ ದಿನನಿತ್ಯ ಪೂಜೆ ನಡೆಯುವುದಿಲ್ಲ. ಹರಕೆ ಮಾಡಿಕೊಂಡ ಸ್ತ್ರೀಯರು ಯಾವಾಗ ಬೇಕಾದರೂ ಬಂದು ಗಂಗಮ್ಮನ ಪೂಜೆ ಮಾಡಿಕೊಂಡು ಹೋಗುತ್ತಾರೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಕೆರೆಯ ಪೂರ್ವದಿಕ್ಕಿನಲ್ಲಿ ಒಂದು ಕೋಡಿ ಇದೆ. ಅದಕ್ಕೆ ಹೊಂದಿಕೊಂಡಂತೆ ಒಂದು ತೂಬನ್ನು ಇರಿಸಲಾಗಿದೆ. ಈ ದಿನಗಳಲ್ಲಿ ಅದು ಕಾರ್ಯ ನಿರ್ವಹಿಸುತ್ತಿಲ್ಲ. ಕೆರೆಯು ೦.೮೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೧೫.೬೫ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣ ಸಾಮರ್ಥ್ಯವನ್ನು ಹೊಂದಿದ್ದು, ೭೬.೦೦ ಹೆಕ್ಟೇರ್, ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುತ್ತದೆ.

ಹಳೇಬೀಡು ಕೆರೆ

ಬೇಲೂರಿನಿಂದ ೧೫ ಕಿ.ಮೀ. ಹಾಸನದಿಂದ ೨೮ ಕಿ.ಮೀ. ದೂರದಲ್ಲಿರುವ ಇತಿಹಾಸ ಪ್ರಸಿದ್ಧವಾದ ಸ್ಥಳವೇ ಹಳೇಬೀಡು. ಈ ಗ್ರಾಮಕ್ಕೆ ಮೊದಲು 'ದ್ವಾರಸಮುದ್ರ'ವೆಂಬ ಹೆಸರು ಇತ್ತು. ಹಳೇಬೀಡಿನ ಒಂದು ಶಾಸನದಲ್ಲಿ[೯೫] ದ್ವಾರಾವತಿ ಎಂಬುದಾಗಿ ಉಲ್ಲೇಖವಾಗಿದೆ. ಗ್ರಾಮದ ಪೂರ್ವಕ್ಕೆ ವಿಶಾಲವಾದ ಕೆರೆ ಇದ್ದುದರಿಂದ ದ್ವಾರಸಮುದ್ರವೆಂಬ ಹೆಸರು ಬಂದಿದೆ ಎನ್ನಬಹುದು. ಕ್ರಿ.ಶ. ೧೦೬೨ರ ಶಾಸನದಲ್ಲಿ[೯೬] ಹಳೇಬೀಡಿನ ಕೆರೆಯನ್ನು ಕಟ್ಟಿಸಿ, ತೂಬನ್ನು ಮಾಡಿಸಿ ಹಾಗು ಅದರ

ಸಂರಕ್ಷಣೆಗೆ ಬಿತ್ತುವಟ್ಟವನ್ನು ನೀಡಿರುವುದಾಗಿ ತಿಳಿದುಬರುತ್ತದೆ. ಈ ಸ್ಥಳವು ಮಲೆನಾಡು ಮತ್ತು ಬಯಲುಸೀಮೆಗೆ ಸಂಬಂಧ ಕಲ್ಪಿಸುವ ಆಯಕಟ್ಟಿನ ಪ್ರದೇಶವಾಗಿದೆ. ಸುತ್ತಲೂ ಬೆಟ್ಟಗುಡ್ಡಗಳಿಂದ ಆವರಿಸಿ ನಡುವೆ ವಿಶಾಲವಾದ ಕೆರೆಯನ್ನು ಹೊಂದಿದೆ. ಕ್ರಿ.ಶ. ೧೩೧೧ರಲ್ಲಿ ಅಲ್ಲಾವುದ್ದೀನನ ದಂಡನಾಯಕ ಮಲ್ಲಿಕಾಫರ್ ೩ನೆಯ ಬಲ್ಲಾಳನನ್ನು ಸೋಲಿಸಿ ದೇವಾಲಯವನ್ನು ನಾಶಗೊಳಿಸಿದನು. ಅನಂತರ ಈ ಗ್ರಾಮವನ್ನು ದ್ವಾರಸಮುದ್ರದ ಬದಲು ಹಳೇಬೀಡು ಎಂಬ ಹೆಸರಿನಿಂದ ಕರೆಯಲಾಯಿತು. ಇಂದಿಗೂ ಅದೇ ಹೆಸರು ಉಳಿದಿದೆ. ಸ್ಥಳೀಯ ಐತಿಹ್ಯದ ಪ್ರಕಾರ ದ್ವಾರಸಮುದ್ರವೆಂಬ ಕೆರೆಯನ್ನು ಬಲ್ಲಾಳರಾಯ ಕಟ್ಟಿಸಿದನು. ಅವನ ಕಾಲದಲ್ಲಿ ಬೆಂಕಿಮಳೆ ಬಂದು ದ್ವಾರಸಮುದ್ರ ಗ್ರಾಮ ಹಾಳಾಯಿತು. ನಂತರ ಆ ಸ್ಥಳಕ್ಕೆ ಹಳೇಬೀಡು ಎಂಬ ಹೆಸರು ಬಂದಿತು ಎಂದು ಸ್ಥಳೀಯ ಗ್ರಾಮಸ್ಥರು ತಿಳಿಸುತ್ತಾರೆ. ಮತ್ತೊಂದು ರೀತಿಯಲ್ಲಿ ಕ್ರಿ.ಶ. ೧೦ನೆಯ ಶತಮಾನದಲ್ಲಿ ಗಂಗ ಬೂತುಗನ ಭಾವ ದೋರ ಎಂಬಾತ ಕೆರೆ ಮತ್ತು ಊರನ್ನು ನಿರ್ಮಿಸಿದನೆಂದು ತಿಳಿದುಬಂದಿದೆ. ಕೆರೆಗೆ ಹೊಯ್ಸಳ ಕಾಲದಲ್ಲಿ ಯಗಚಿ ನದಿಯಿಂದ ಕಾಲುವೆಯ ಮೂಲಕ ನೀರನ್ನು ಹರಿಸಲಾಗುತ್ತಿತ್ತು ಎಂದು ತಿಳಿದುಬರುತ್ತದೆ. ಇದಕ್ಕೆ ಆಧಾರವೆಂಬಂತೆ ಹಳೇಬೀಡಿನ ೧೩ನೆಯ ಶತಮಾನದ ಶಾಸನದಲ್ಲಿ[೨] ಎಲಚಿ(ಯಗಚಿ) ನದಿಯಿಂದ ತೋಡಲಾದ ಕಾಲುವೆಯ ನೀರಿನಲ್ಲಿ ಎಲ್ಲಾ ಜನರು ಸ್ನಾನ ಮಾಡಬಹುದು ಎಂದಿದೆ. ಹಾಗೆಯೇ ರಣಘಟ್ಟದ ಬಳಿ ಯಗಚಿ ನದಿಗೆ ಕಟ್ಟಿದ ಕಟ್ಟಡದ ಅವಶೇಷವನ್ನು ಇಂದಿಗೂ ನೋಡಬಹುದು. ಈ ದಿನಗಳಲ್ಲಿ ಕೆರೆಗೆ ನಾಲೆ ನೀರು ಬರುತ್ತಿಲ್ಲ. ಮಳೆ ಬಂದಾಗ ಸುತ್ತಮುತ್ತಲಿನ ಗುಡ್ಡದ ನೀರು ಬಂದು ಸಂಗ್ರಹವಾಗುತ್ತದೆ. ಕೆರೆಯ ಹೆಚ್ಚುವರಿ ನೀರು ಕೋಡಿಯ ಮೂಲಕ ಬೆಳವಾಡಿ ಕೆರೆಗೆ ಹೋಗುತ್ತದೆ. ಕೆರೆಯ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳ ಎರಡು ಬದಿಯಲ್ಲಿ ಕೋಡಿಗಳಿವೆ. ಪಶ್ಚಿಮದಿಕ್ಕಿನ ಕೋಡಿಯು ಸುಮಾರು ೩೦ ಮೀ. ಇದ್ದು, ಅರ್ಧಚಂದ್ರಾಕೃತಿಯಲ್ಲಿದೆ.

ಏರಿಯು ಪಶ್ಚಿಮದಿಕ್ಕಿನಿಂದ ಪೂರ್ವದಿಕ್ಕಿಗೆ ಮುಂದುವರಿದಿದೆ. ಏರಿಯ ಮೇಲೆ ವಾಹನಗಳು ಹಾಸನದಿಂದ ಹಳೇಬೀಡಿಗೆ ಚಲಿಸುವಂತೆ ರಸ್ತೆ ನಿರ್ಮಿಸಲಾಗಿದೆ. ಏರಿಯು ೧೮೦೦ ಮೀ. ಉದ್ದ, ೭ ಮೀ. ಮೇಲ್ಭಾಗದ ಅಗಲವನ್ನು ಹೊಂದಿದೆ. ಏರಿಯ ಮೇಲೆ ಹಾಳು ಬಿದ್ದ ಈಶ್ವರ ದೇವಾಲಯದ ಅವಶೇಷಗಳಿವೆ. ಏರಿಯ ಹಿಂಭಾಗದಲ್ಲಿ ಬಸವಣ್ಣ ದೇವಸ್ಥಾನವಿದೆ. ಕೆರೆಗೆ ಎರಡು ತೂಬು ಮತ್ತು ಎರಡು ಕೋಡಿಗಳಿವೆ. ಪಶ್ಚಿಮದಿಕ್ಕಿನ ತೂಬು ಏರಿಯಿಂದ ಸುಮಾರು ೧೫ ಅಡಿಯಷ್ಟು ದೂರದಲ್ಲಿದೆ. ಇದು ಸುಮಾರು ೧೨ ಅಡಿಯಷ್ಟು ಎತ್ತರವಿದೆ. ಹಾಗೆಯೇ ಪೂರ್ವದಿಕ್ಕಿನಲ್ಲಿರುವ ತೂಬು ಏರಿಯಿಂದ ೧೫ ಅಡಿ ದೂರದಲ್ಲಿದ್ದು ಸುಮಾರು ೧೫ ಅಡಿಯಷ್ಟು ಎತ್ತರವನ್ನು ಹೊಂದಿದೆ. ಈ ಎರಡು ತೂಬುಗಳು ವಿವಿಧ ಎತ್ತರದಲ್ಲಿದ್ದು ತೂಬುಗಳನ್ನು ತಲುಪಲು ಸೇತುವೆಯನ್ನು ಮಾಡಲಾಗಿದೆ. ಏರಿಯ ಹೊರಬದಿಯಲ್ಲಿ ತೂಬುಗಳಿಗೆ ಹೊಂದಿಕೊಂಡಂತೆ ಎರಡು ಕಾಲುವೆಗಳನ್ನು ನಿರ್ಮಿಸಲಾಗಿದೆ. ಅವುಗಳ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು

ಹಾಯಿಸಿ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಫ್ರಾನ್ಸಿಸ್ ಬುಕಾನನ್ ಸುಮಾರು ಕ್ರಿ.ಶ. ೧೮೦೦ರಲ್ಲಿ ಈ ಕೆರೆಯನ್ನು ನೋಡಿ ಅದು ರಾಜಧಾನಿಯ ಕೇಂದ್ರಪ್ರದೇಶವಾಗಿತ್ತು ಮತ್ತು ಭತ್ತದ ಗದ್ದೆಗಳಿಗೆ ನೀರು ಒದಗಿಸಲಾಗುತ್ತಿತ್ತು. ಅಲ್ಲಿ ಕಬ್ಬು ಬೆಳೆಯುತ್ತಾರೆ ಎಂದು ಉಲ್ಲೇಖಿಸಿದ್ದಾನೆ.[೮] ಕೆರೆಯು ೧೦೦.೦೦ ಹೆಕ್ಟೇರ್ ಜಲವಿಸ್ತೀರ್ಣ, ೧೫೩.೬೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದ್ದು, ೨೮೪.೦೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯು ಸಣ್ಣ ನೀರಾವರಿ ಇಲಾಖೆಯಿಂದ ರಕ್ಷಣೆಯನ್ನು ಪಡೆದಿದೆ.

ಕೆರೆಯಲ್ಲಿ ಪ್ರವಾಸಿಗರಿಗಾಗಿ ಯಂತ್ರದ ಮತ್ತು ಹರಿಗೋಲಿನ ದೋಣಿವಿಹಾರದ ವ್ಯವಸ್ಥೆ ಇದೆ. ಕೆರೆಯ ಅಂಗಳದ ಮಧ್ಯೆ ಎರಡು ಮಣ್ಣಿನ ದಿಣ್ಣೆಗಳಿದ್ದು ಅವು ಪಕ್ಷಿಗಳ ವಾಸಸ್ಥಳವಾಗಿವೆ. ಆ ಸ್ಥಳವನ್ನು ಸ್ಥಳೀಯರು ಕಾಗೆದಿಣ್ಣೆಗಳೆಂದು ಗುರುತಿಸುತ್ತಾರೆ. ಹಾಗೆಯೇ ಮೀನುಗಾರಿಕೆಗೆ ಉಪಯುಕ್ತವಾಗಿದ್ದು, ವಾರ್ಷಿಕವಾಗಿ ವಿಲೇವಾರಿಯಾಗುತ್ತಿದೆ. ಈ ಕೆರೆಯಿಂದ ಅಷ್ಟೆಲ್ಲ ಅನುಕೂಲಗಳಿದ್ದರೂ ಸ್ವಚ್ಛತೆಯ ಕೊರತೆ ಇದೆ. ಕೆರೆಯ ಪಶ್ಚಿಮಕ್ಕೆ ಹೊಯ್ಸಳರ ಕಾಲದ ಹೊಯ್ಸಳೇಶ್ವರ ದೇವಾಲಯ ಮತ್ತು ವಸ್ತುಸಂಗ್ರಹಾಲಯದ ಮ್ಯೂಸಿಯಂ ಇದೆ. ಈ ದೇವಾಲಯ ನೋಡಲು ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಾರೆ. ಪ್ರವಾಸಿಗರಿಗಾಗಿ ಕೆರೆಯೂ ಕೂಡ ಒಂದು ಆಕರ್ಷಕತಾಣವಾಗಬೇಕು. ಪ್ರಸ್ತುತ ದಿನಗಳಲ್ಲಿ ಕೆರೆಯನ್ನು ನೋಡಿದರೆ ಕಸ, ಕಡ್ಡಿ ಕೊಳೆತು ನೀರು ಮಲಿನವಾಗಿದೆ. ಈ ಕೆರೆಯ ನೀರನ್ನು ಪ್ರಾಣಿಗಳು ಕುಡಿಯಲು ಹಿಂಜರಿಯುತ್ತಿವೆ. ಅಲ್ಲದೆ ಜನರು ಸಹ ಮಲ ಮೂತ್ರ ವಿಸರ್ಜಿಸುವ ಸ್ಥಳವನ್ನಾಗಿ ಮಾಡಿಕೊಂಡಿದ್ದಾರೆ. ಇತಿಹಾಸಪ್ರಸಿದ್ಧವಾದ ಕೆರೆಯನ್ನು ಉಳಿಸಲು ಸಣ್ಣ ನೀರಾವರಿ ಇಲಾಖೆ ಮತ್ತು ಸ್ಥಳೀಯ ಗ್ರಾಮದ ಜನರು ಕೆರೆಯ ಸುತ್ತ ತಂತಿ ಬೇಲಿ ಮತ್ತು ಉದ್ಯಾನವನ ಮಾಡುವತ್ತ ಗಮನ ಹರಿಸಬೇಕು.

ಅರಸೀಕೆರೆ

ಹಾಸನದಿಂದ ೪೩ ಕಿ.ಮೀ. ದೂರದಲ್ಲಿರುವ ಅರಸೀಕೆರೆ ಒಂದು ಪ್ರಮುಖ ರೈಲ್ವೆ ಜಂಕ್ಷನ್ ಹೊಂದಿದ್ದು, ರಾಜ್ಯ ಹೆದ್ದಾರಿಯಲ್ಲಿದೆ. ಅರಸೀಕೆರೆಯ ಕೆರೆಯು ನಗರದಿಂದ ಪೂರ್ವಕ್ಕೆ ಇದೆ. ಕೆರೆಯನ್ನು ಹೊಯ್ಸಳ ಅರಸಿಯೊಬ್ಬಳು ಕಟ್ಟಿಸಲಾಗಿ ಈ ನಗರಕ್ಕೆ ಅರಸೀಕೆರೆ ಎಂಬ ಹೆಸರು ಬಂದಿರುವಂತೆ ಅರಸೀಕೆರೆಯ ಒಂದು ಶಾಸನದಿಂದ ತಿಳಿದುಬರುತ್ತದೆ. ಎರೆಯಂಗನ ನಿಷ್ಠಾವಂತ ಅಧಿಕಾರಿ ಕಚ್ಚಪೆರ್ಗಡೆಯು ಮುನ್ನದಾರಿಗೆವನಾದ್ಯವೆನಿಸಿದ್ದ ಚೆನಾಳ್ವರಸಿಯ ಕೆರೆಯಲ್ಲಿ ಒಂದು ಕನ್ನೆಗೆರೆಯನ್ನು ಕಟ್ಟಿಸಿ, ೬೦೦ ಹೊನ್ನನ್ನು ವೆಚ್ಚ ಮಾಡಿ ತೂಬನ್ನು ಮಾಡಿಸುತ್ತಾನೆ. ಪುಲಿಗೆರೆಯ ಪ್ರಸಿದ್ಧ ರೂವಾರಿ ಏಚನು ಅರಸಿಯಕೆರೆ ತೂಂಬನ್ನಿಕ್ಕಿದ ಎಂದು ಕ್ರಿ.ಶ. ೧೧೯೦ರ ಶಾಸನದಲ್ಲಿ[೯] ಹೇಳಿರುವುದರಿಂದ ಕಚ್ಚಪೆರ್ಗಡೆಯು ಕಟ್ಟಿಸಿದ ಕೆರೆಯೇ ಇಂದಿನ ಅರಸೀಕೆರೆಯ ದೊಡ್ಡಕೆರೆಯೆಂದು ಹೇಳಬೇಕಾಗುತ್ತದೆ. ಕಾಡುಪ್ರದೇಶವಾಗಿದ್ದ ಈ ಪ್ರದೇಶದಲ್ಲಿ ಗ್ರಾಮ ಮತ್ತು ಕೆರೆಯ ನಿರ್ಮಾಣ

ಒಟ್ಟಾಗಿ ನಡೆದಿರಬಹುದೆಂದು ಊಹಿಸಬಹುದು. ಈ ಕೆರೆ ಮತ್ತು ಹಾರನಹಳ್ಳಿಯ ಕೆರೆಯನ್ನು ಅಕ್ಕ ತಂಗಿ ರಾಣಿಯರ ಕೆರೆಯೆಂದು ಸ್ಥಳೀಯರು ಕರೆಯುವುದರಿಂದ ಬಹುಶಃ ಇವು ಎರೆಯಂಗನ ಇಬ್ಬರು ರಾಣಿಯರಾದ ಏಚಲದೇವಿ ಮತ್ತು ಮಹಾದೇವಿಯರ ಹೆಸರಿನಲ್ಲಿ ನಿರ್ಮಾಣಗೊಂಡಂತೆ ತೋರುತ್ತವೆ. ೧೧ನೇ ಶತಮಾನದಲ್ಲಿ[೧೦೦] ಹೊಯ್ಸಳ ವಿನಯಾದಿತ್ಯನಿಗೆ ಈ ಪ್ರದೇಶ ಸೇರಿದ್ದು, ಹುಲಿಯನ್ನು ಕೊಲ್ಲುತ್ತಿರುವ ಲಾಂಛನವನ್ನು ಹೊಂದಿರುವುದರಿಂದ 'ಪುಲ್ಲರಸಿಕೆರೆ' ಅಥವಾ 'ನವದ್ವಾರತಿ' ಎಂದೂ ಇದನ್ನು ಕರೆಯಲಾಗಿದೆ. ಹೊಯ್ಸಳ ಕಾಲದಲ್ಲಿ ಈ ಪಟ್ಟಣವನ್ನು 'ಬಲ್ಲಾಳಪುರ' ಎಂದು ಕರೆಯಲಾಗುತ್ತಿದ್ದು, ಶಾಸನಗಳಲ್ಲಿ ರಾಜಧಾನಿ ಅರಸೀಕೆರೆ ಎಂದು ಉಲ್ಲೇಖಿಸಲಾಗಿದೆ.

ಅರಸೀಕೆರೆಯು ಹಿಂದಿನಿಂದಲೂ ಮಳೆಯ ನೀರನ್ನು ಆಶ್ರಯಿಸಿದೆ. ಇದು ೧೮೩.೫೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದೆ. ಕೆರೆಯ ಜಲಾನಯನ ಪ್ರದೇಶ ೧೭೯.೨೦ ಹೆಕ್ಟೇರ್ ಮತ್ತು ಅಚ್ಚುಕಟ್ಟು ಪ್ರದೇಶ ೧೭೧.೬೫ ಹೆಕ್ಟೇರ್‌ಗಳು. ಈ ಕೆರೆಯ ಏರಿಯು ಪೂರ್ವದಿಂದ ಪಶ್ಚಿಮಾಭಿಮುಖವಾಗಿದ್ದು, ಇದರ ಉದ್ದ ೧೭೧೦ ಮೀ., ಅಗಲ ಸುಮಾರು ೮.೦೦ ಮೀ. ಮತ್ತು ಎತ್ತರ ೧೨ ಅಡಿ ಇದೆ. ಕೆರೆಗೆ ನಾಲ್ಕು ತೂಬು, ಎರಡು ಕಾಲುವೆ ಮತ್ತು ಒಂದು ಕೋಡಿಯನ್ನು ಅಳವಡಿಸಲಾಗಿದೆ. ಕೆರೆಯ ನಾಲ್ಕು ತೂಬುಗಳಲ್ಲಿ ಮೂರು ತೂಬುಗಳು ಕಾರ್ಯ ನಿರ್ವಹಿಸುತ್ತಿದ್ದು, ಎರಡು ತೂಬುಗಳನ್ನು ಹೊಸದಾಗಿ ಏರಿಗೆ ಅಳವಡಿಸಲಾಗಿದೆ. ಏರಿಯಿಂದ ಸುಮಾರು ಮೂರು ಅಡಿ ದೂರದಲ್ಲಿರುವ ಮೂರನೆಯ ತೂಬಿನ ಮೇಲೆ ಗಜಲಕ್ಷ್ಮಿಯ ಶಿಲ್ಪವಿದೆ. ತೂಬುಗಳ ಹೊರಭಾಗದ ಏರಿಯ ಇಳಿಜಾರಿನಲ್ಲಿ ಕಾಲುವೆಗಳನ್ನು ನಿರ್ಮಿಸಿ, ಅವುಗಳ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಬಾಳೆ, ತೆಂಗು ಇನ್ನೂ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಬೇಸಿಗೆಯಲ್ಲಿ ಪ್ರಾಣಿಪಕ್ಷಿಗಳು ನೀರು ಕುಡಿಯುಲು ಅನುಕೂಲವಾಗುವಂತೆ ಇಲಾಖೆಯವರು ತೂಬುಗಳನ್ನು ಮುಚ್ಚಿದ್ದಾರೆ. ಕೆರೆಯ ಪಶ್ಚಿಮಕ್ಕೆ ಶನಿಮಹಾತ್ಮ ದೇವಸ್ಥಾನವಿದೆ. ಈ ದೇವಾಲಯದ ಮುಂಭಾಗದಲ್ಲಿ ಒಂದು ಕಲ್ಲಿನ ಶಾಸನವಿದ್ದು ಇದನ್ನು ಬೆಂಗಳೂರಿನಿಂದ ಅರಸೀಕೆರೆಗೆ ಹೋಗುವ ರಸ್ತೆ ಬದಿಯಲ್ಲಿ ನಿರ್ಮಿಸಲಾಗಿದೆ. ಹಾಗೆಯೇ ಪಶ್ಚಿಮದಿಕ್ಕಿನ ಕೆರೆಯ ಅಂಗಳದಲ್ಲಿ ಶ್ರೀದೊಡ್ಡಮ್ಮದೇವಿ ದೇವಸ್ಥಾನವಿದೆ. ಗುಂಡ್ಕಾನಹಳ್ಳಿ ಗ್ರಾಮದ ಜನರು ಈ ಕೆರೆಯ ನೀರನ್ನು ಉಪಯೋಗಿಸುವುದರಿಂದ ಕೆರೆಗೆ ಗುಂಡ್ಕಾನಹಳ್ಳಿ ಕೆರೆ ಎಂತಲೂ ಕರೆಯುತ್ತಾರೆ. ಕೆರಯು ನೀರಾವರಿ ಇಲಾಖೆಯ ವ್ಯಾಪ್ತಿಗೆ ಸೇರಿದ್ದು, ಇತ್ತೀಚಿನ ದಿನಗಳಲ್ಲಿ ಕೆರೆ ಮಧ್ಯದಲ್ಲಿ ಪಕ್ಷಿಗಳಿಗೆ ಅನುಕೂಲವಾಗುವಂತೆ ಕಟ್ಟಡ ನಿರ್ಮಿಸಿದ್ದಾರೆ. ಹಾಗೆಯೇ ಸಮೀಪದಲ್ಲಿ ಉದ್ಯಾನವನ್ನು ಮಾಡಿ ಬೆಳಿಗ್ಗೆ ಮತ್ತು ಸಂಜೆ ವೇಳೆ ನಗರದ ಜನರು ವಿಶ್ರಾಂತಿ ವಾಯುವಿಹಾರ ನಡೆಸಲು ಅನುಕೂಲಕರವಾಗಿದೆ.

ದೊಡ್ಡಬೆಮ್ಮತ್ತಿ ಕೆರೆ

ದೊಡ್ಡಬೆಮ್ಮತ್ತಿ ಕೆರೆ ಅರಕಲಗೂಡು ತಾಲೂಕು ಮಲ್ಲಪಟ್ಟಣ ಹೋಬಳಿಯಲ್ಲಿರುವ ಒಂದು ಕೆರೆಯಾಗಿದೆ. ಇಂದಿಗೂ ಅದು ಸುಸ್ಥಿತಿಯಲ್ಲಿದ್ದು ಜನರು ಅದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ದೊಡ್ಡಬೆಮ್ಮತ್ತಿಯ ಕ್ರಿ.ಶ.೧೯೧ರ ಶಾಸನದಲ್ಲಿ[೧೦೧] ರಾಯನ ಬೆಮ್ಮತ್ತಿಯ ಮಾಕಬ್ಬೆ ಕಟ್ಟಿಸಿದ ಆದಿತ್ಯ ದೇವರಿಗೆ ಕೊಂಗಾಳ್ವದೇವ ದೇವರ ನಿತ್ಯನೈವೇದ್ಯಕ್ಕಾಗಿ ಹಿರಿಯ ಕೆರೆಯ ಕೆಳಗಿನ ಭೂಮಿಯನ್ನು ಬಿಟ್ಟಿರುವುದಾಗಿ ಉಲ್ಲೇಖಿಸಲಾಗಿದೆ. ಶಾಸನದಲ್ಲಿರುವ ಹಿರಿಯ ಕೆರೆ ದೊಡ್ಡಬೆಮ್ಮತ್ತಿ ಕೆರೆಯೇ ಆಗಿರಬಹುದು. ಕೆರೆಯು ಮಳೆ ನೀರನ್ನು ಮಾತ್ರ ಅವಲಂಬಿಸಿದ್ದು ಹೆಚ್ಚುವರಿ ನೀರು ಇಲ್ಲಿಂದ ಕಟ್ಟೆಹಳ್ಳಕ್ಕೆ ಹೋಗುತ್ತದೆ. ಅದಕ್ಕಾಗಿ ಕೆರೆಯ ಉತ್ತರದಿಕ್ಕಿನಲ್ಲಿ ಸುಮಾರು ೩೦ ಮೀ. ಉದ್ದದ ಕೋಡಿಯನ್ನು ಹೊಂದಿಸಲಾಗಿದೆ. ಈ ಕೆರೆಯ ಜಲ ವಿಸ್ತೀರ್ಣ ೧೭.೦೦ ಹೆಕ್ಟೇರ್ ಮತ್ತು ೧೯.೨೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದ್ದು, ೪೫.೦೦ ಹೆಕ್ಟೇರ್ ಆಯಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಏರಿಯು ಉತ್ತರದಿಕ್ಕಿನಿಂದ ದಕ್ಷಿಣಾಭಿಮುಖವಾಗಿ ಅರ್ಧಭಾಗ ಇದ್ದು, ಕೊನೆಯ ಭಾಗವು ಪಶ್ಚಿಮದಿಕ್ಕಿನ ಕಡೆಗೆ ಮುಂದುವರೆದಿದೆ. ಏರಿಯಿಂದ ಪಶ್ಚಿಮದ ಕಡೆಗೆ ಕೆರೆಯ ಅಂಗಳವಿದೆ. ಏರಿಯ ಉದ್ದ ೫೦೦ ಮೀ. ಎತ್ತರ ೫ ಮೀ. ಮತ್ತು ಮೇಲ್ಭಾಗದ ಅಗಲ ೪ ಮೀ. ಇದೆ. ಏರಿಗೆ ಹೊಂದಿಕೊಂಡಂತೆ ಪಶ್ಚಿಮದಿಕ್ಕಿನ ಕಡೆ ಒಂದು ತೂಬು ಇದ್ದು, ಅದಕ್ಕೆ ಅನುಗುಣವಾಗಿ ಏರಿಯ ಹೊರಪಾರ್ಶ್ವದ ಇಳಿಜಾರಿನಲ್ಲಿ ೧ ಕಿ.ಮೀ. ಉದ್ದದ ಕಾಲುವೆ ಅಳವಡಿಸಲಾಗಿದೆ. ಅದರ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಭತ್ತವನ್ನು ಬೆಳೆಯುತ್ತಾರೆ. ಜಲಾಶಯದ ಆಸರೆಯಲ್ಲಿರುವ ಜಮೀನು ಹೆಚ್ಚಾಗಿ ಕುರುಬ ಜನಾಂಗಕ್ಕೆ ಸೇರ್ಪಡೆಯಾಗಿದೆ. ಕೆರೆಯ ಪೂರ್ವದಿಕ್ಕಿನ ಅಚ್ಚುಕಟ್ಟುಪ್ರದೇಶದಲ್ಲಿ ಬಿಲ್ವಗಿಡದ ಬುಡದಲ್ಲಿ ಈಶ್ವರಲಿಂಗ ಮತ್ತು ಸ್ವಲ್ಪ ದೂರದಲ್ಲಿ ಹಾಗಲಬಾವಿ ಎಂದು ಕರೆಯುವ ಕಲ್ಲುಬಾವಿ ಇದೆ. ಅದರ ನೀರನ್ನು ಕುಡಿಯಲು ಬಳಸುವುದಿಲ್ಲ. ಯಾರಾದರೂ ಕುಡಿದರೆ ಮರುದಿನವೇ ಬಾವಿಯ ನೀರು ಹಸಿರು ಬಣ್ಣ ಬರುತ್ತದೆ ಎಂಬ ನಂಬಿಕೆ ಇದೆ. ಈ ಬಾವಿಯ ಒಳಗಡೆ ಸುಮಾರು ೨೦ ಅಡಿ ಒಳಭಾಗದಲ್ಲಿ ಶಿವಲಿಂಗವಿದೆಯಂತೆ. ಪ್ರಸ್ತುತ ದಿನಗಳಲ್ಲಿ ಮಣ್ಣು ಮುಚ್ಚಿಕೊಂಡಿರುವುದರಿಂದ ಬಾವಿ ನೀರು ಬತ್ತಿ ಹೋದರೂ ಕಾಣುವುದಿಲ್ಲ ಎಂಬುದು ಸ್ಥಳೀಯರ ಹೇಳಿಕೆ. ಈಗಿನ ದಿನಗಳಲ್ಲಿ ಬಾವಿಯನ್ನು ನೋಡಿದಾಗ ಸುತ್ತಲೂ ಗಿಡಗಳು ಬೆಳೆದು ಒಂದು ಸಣ್ಣ ಕಟ್ಟೆಯಂತೆ ಕಾಣಿಸುತ್ತದೆ.

ಶಾಂತಿಗ್ರಾಮ ಕೆರೆ

ದುದ್ದ ಹೋಬಳಿಯಿಂದ ೧೩ ಕಿ.ಮೀ. ಮತ್ತು ಹಾಸನದಿಂದ ೪ ಕಿ.ಮೀ. ದೂರದಲ್ಲಿ ಶಾಂತಿಗ್ರಾಮವಿದೆ. ಈ ಊರಿಗೆ ಹಿಂದೆ ಯಾವ ಹೆಸರಿತ್ತು ಎಂಬುದು ಸ್ಪಷ್ಟವಾಗಿಲ್ಲ. ಹೊಯ್ಸಳ ವಿಷ್ಣುವರ್ಧನನ ರಾಣಿಯಾದ ಶಾಂತಲೆಯ ಹೆಸರಿನಿಂದ ಈ ಊರಿಗೆ ಶಾಂತಿಗ್ರಾಮ ಎಂಬ

ಹೆಸರು ಬಂದಿದೆ ಎಂದು ಸ್ಥಳೀಯರು ಹೇಳುತ್ತಾರೆ. ಗ್ರಾಮದ ಉತ್ತರದಿಕ್ಕಿಗೆ ಕೆರೆ ಇದೆ. ಕೆರೆಗೆ ಸಂಬಂಧಿಸಿದಂತೆ ಕ್ರಿ.ಶ. ೧೧ನೇ ಶತಮಾನದ ಶಾಸನದಲ್ಲಿ[೧೨] ದರಸಿಕಟ್ಟೆ ಎಂಬ ಕೆರೆಯ ನಿರ್ಮಾಣದ ಪ್ರಸ್ತಾಪವಿದೆ. ವಿಷ್ಣುವರ್ಧನ ತನ್ನ ರಾಣಿಯ ಹೆಸರಿನಲ್ಲಿ ಕೆರೆಯನ್ನು ಕಟ್ಟಿಸಿದನೆಂದು ಹೇಳುತ್ತಾರೆ. ಮತ್ತೊಂದು ಮೂಲದ ಪ್ರಕಾರ ಶಾಂತಲೆಯೇ ಕೆರೆಯನ್ನು ಕಟ್ಟಿಸಿದಳೆಂದು ಹೆಚ್ಚಾಗಿ ಸ್ಥಳೀಯ ಜನಪದರು ತಿಳಿಸುತ್ತಾರೆ. ಇದಕ್ಕೆ ಖಚಿತವಾದ ಸ್ಪಷ್ಟ ದಾಖಲೆಗಳಿಲ್ಲ.

ಕೆರೆಯ ಏರಿಯು ಉತ್ತರದಿಕ್ಕಿನಿಂದ ದಕ್ಷಿಣಾಭಿಮುಖವಾಗಿ ಅಂಕುಡೊಂಕಾಗಿ ರಚನೆಯಾಗಿದೆ. ಏರಿಯ ಮೇಲೆ ವಾಹನಗಳು ಓಡಾಡಲು ದುದ್ದದಿಂದ ಶಾಂತಿಗ್ರಾಮ ಮಾರ್ಗವಾಗಿ ಹಾಸನಕ್ಕೆ ಹೋಗಲು ರಸ್ತೆ ನಿರ್ಮಿಸಲಾಗಿದೆ. ಏರಿಯು ಕೆರೆಯ ಅಂಗಳದಿಂದ ಪೂರ್ವದಿಕ್ಕಿನಲ್ಲಿದ್ದು ೧೫೫೦ ಮೀ. ಉದ್ದ, ೨೦ ಅಡಿ ಅಗಲ ಮತ್ತು ೧೫ ಅಡಿ ಒಳ ಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಗೆ ಹೊಂದಿಕೊಂಡಂತೆ ಉತ್ತರದಿಕ್ಕಿನಲ್ಲಿ ಒಂದು ತೂಬನ್ನು ಹೊಸದಾಗಿ ಏರಿಗೆ ಅಳವಡಿಸಲಾಗಿದೆ. ಹಾಗೆಯೇ ದಕ್ಷಿಣದಿಕ್ಕಿನ ತೂಬನ್ನು ಏರಿಯಿಂದ ಒಳಭಾಗದ ೧೦ ಅಡಿ ದೂರದಲ್ಲಿ ನಿರ್ಮಿಸಲಾಗಿದೆ. ಈ ತೂಬನ್ನು ತಲುಪಲು ಸೇತುವೆ ಮಾಡುವ ಕಾಮಗಾರಿ ಕೆಲಸ ನಡೆಯುತ್ತಿದೆ. ತೂಬುಗಳಿಗೆ ಹೊಂದಿಕೊಂಡಂತೆ ಎರಡು ಕಾಲುವೆಗಳನ್ನು ಏರಿಯ ಹೊರಭಾಗದಲ್ಲಿ ನಿರ್ಮಿಸಲಾಗಿದೆ. ಅವುಗಳ ಮೂಲಕ ಆಯಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಭತ್ತ, ಕಡಲೆ ಮತ್ತು ಜೋಳವನ್ನು ಬೆಳೆಯುತ್ತಾರೆ. ಕೆರೆಯಲ್ಲಿ ನೀರಿದ್ದಾಗ ಭತ್ತದ ಎರಡು ಬೆಳೆ ತೆಗೆಯುತ್ತಾರೆ. ತೂಬಿನ ನಿರ್ವಹಣೆಯನ್ನು ಹಿಂದಿನಿಂದಲೂ ನೀರ್ಗಂಟಿಗಳು ನೋಡಿಕೊಳ್ಳುತ್ತಿದ್ದಾರೆ. ಇವರು ತೂಬನ್ನು ಎತ್ತುವಾಗ ಕೋಳಿ ಅಥವಾ ಕುರಿಯನ್ನು ಬಲಿ ಕೊಡುವ ಪದ್ಧತಿ ಆಚರಣೆಯಲ್ಲಿದೆ. ಕೆರೆಯ ಜಲವಿಸ್ತೀರ್ಣ ೭೩.೬೮ ಹೆಕ್ಟೇರ್ ಮತ್ತು ೬೭.೧೦ ಎಂ.ಸಿ.ಎಫ್.ಟಿ.ಯಷ್ಟು ಜಲ ಸಂಗ್ರಹಣಸಾಮರ್ಥ್ಯವನ್ನು ಹೊಂದಿದ್ದು, ೧೮೯.೦೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುತ್ತಿದೆ. ಕೆರೆಯು ಮಳೆ ನೀರನ್ನು ಮಾತ್ರ ಹೊಂದಿದ್ದು, ಬೆಕ್ಕನಕಟ್ಟೆಯು ತುಂಬಿ ಹೆಚ್ಚುವರಿ ನೀರು ಕಾಡಿನ ಮೂಲಕ ಶಾಂತಿಗ್ರಾಮ ಕೆರೆಗೆ ಬಂದು ಸಂಗ್ರಹವಾಗುತ್ತದೆ. ಈ ಕೆರೆಯ ಹೆಚ್ಚುವರಿ ನೀರು ಕೋಡಿಯ ಮೂಲಕ ಹೊಳಲು, ಮಣಿನೂರು ಕೆರೆಗೆ ಹೋಗುತ್ತದೆ. ಕೆರೆಯ ಪೂರ್ವಕ್ಕೆ ೫೪.೫ ಮೀ. ಉದ್ದದ ಒಂದು ಕೋಡಿಯನ್ನು ಅಳವಡಿಸಲಾಗಿದೆ.

ಕೆರೆಯ ದಕ್ಷಿಣಕ್ಕೆ ನರಸಿಂಹಸ್ವಾಮಿ ದೇವಸ್ಥಾನವಿದೆ. ಇದು ಮುಜರಾಯಿ ಇಲಾಖೆಗೆ ಸೇರಿದ್ದು, ರಾಮು ಎಂಬ ಬ್ರಾಹ್ಮಣರು ದೇವಾಲಯವನ್ನು ದಿನನಿತ್ಯ ಪೂಜೆ ಮಾಡುತ್ತಾರೆ. ಫೆಬ್ರವರಿ ತಿಂಗಳಿನಲ್ಲಿ ಜಾತ್ರೆ ನಡೆಯುತ್ತದೆ. ದೇವರ ಭಕ್ತಾಧಿಗಳು ವರ್ಷಕ್ಕೆ ಒಂದು ಬಾರಿ ಪರ ಮಾಡುತ್ತಾರೆ. ಹಾಗೆಯೇ ಏರಿಯ ಒಳಭಾದಲ್ಲಿ ಏರಿಗೆ ಅಂಟಿಕೊಂಡಂತೆ ಒಂದು ಚಿಕ್ಕ ದೇವಸ್ಥಾನವಿದೆ. ಕೆರೆಯ ಅಂಗಳದಲ್ಲಿ ನಿಂತು ನೋಡಿದರೆ ಅದು ದೇವಾಲಯದಂತೆ ಕಾಣದೆ ಮಣ್ಣಿನಿಂದ

ಮುಚ್ಚಿದ ದಿಣ್ಣೆಯಂತೆ ಕಂಡುಬರುತ್ತದೆ. ಈ ದೇವಾಲಯದ ಒಳಭಾಗದಲ್ಲಿ ಶಿವಲಿಂಗವಿದ್ದು ಹೊರಭಾಗದಲ್ಲಿ ಬಸವಣ್ಣನ ವಿಗ್ರಹವಿದೆ. ಈ ದೇವಾಲಯವನ್ನು ಸ್ಥಳೀಯರು ಗಂಗಮ್ಮನ ಗುಡಿ ಎಂದು ಕರೆಯುತ್ತಾರೆ. ಗ್ರಾಮದ ಜನರು ವರ್ಷಕ್ಕೊಮ್ಮೆ ದೇವಾಲಯವನ್ನು ಪೂಜೆ ಮಾಡುತ್ತಾರೆ. ಕೆರೆಯ ಆಯಕಟ್ಟು ಪ್ರದೇಶದಲ್ಲಿ ಒಂದು ಹಾಳು ಮಂಟಪವಿದ್ದು ಅದರ ಮುಂಭಾಗದಲ್ಲಿ ಹೂಳು ತುಂಬಿದ ಒಂದು ಪುಷ್ಕರಣಿ ಇದೆ. ಹಿಂದೆ ಈ ಪುಷ್ಕರಣಿಯ ನೀರಿನಲ್ಲಿ ಗ್ರಾಮದ ಚನ್ನಕೇಶವ ಮತ್ತು ನರಸಿಂಹಸ್ವಾಮಿ ದೇವರುಗಳನ್ನು ತೆಪ್ಪದ ಮೇಲೆ ಕುರಿಸಿ ತೆಪ್ಪೋತ್ಸವ ಮಾಡುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ಕೆರೆಯು ತುಂಬಿದರೆ ಕೆರೆಯಲ್ಲಿ ತೆಪ್ಪೋತ್ಸವ ಮಾಡುತ್ತಾರೆ.

ಕೆರೆಯು ಸಾಕಷ್ಟು ಒತ್ತುವರಿಯಾಗಿದೆ. ಇತ್ತೀಚೆಗೆ ಅಂದರೆ ೨೦೧೦-೧೧ರಲ್ಲಿ ಕೆರೆಯ ಕಾಮಗಾರಿ ನಡೆದು ಕೆರೆಯಲ್ಲಿ ಹೂಳೆತ್ತಿಸಿದ್ದಾರೆ. ಏರಿ, ತೂಬು ಮತ್ತು ಕೋಡಿಗಳನ್ನು ಪುನರ್ ನವೀಕರಿಸಲಾಗಿದೆ. ಕೆರೆಯು ಸಣ್ಣ ನೀರಾವರಿ ಇಲಾಖೆಯಿಂದ ರಕ್ಷಣೆಯನ್ನು ಪಡೆದಿದೆ. ಕೆರೆಯಲ್ಲಿ ನೀರು ಇಲ್ಲದೆ ಹೋದಾಗ ಕೆರೆಯ ಅಂಗಳಲ್ಲಿ ದನಕರುಗಳು ಮೇಯಲು ಸಹಾಯಕವಾಗಿದೆ. ಕೆರೆಯಲ್ಲಿ ನೀರು ಸಂಗ್ರಹವಾಗಿದ್ದರೆ ಕೃಷಿಗೆ, ಮೀನುಗಾರಿಕೆಗೆ ಮತ್ತು ಪ್ರಾಣಿಪಕ್ಷಿಗಳಿಗೆ ಹಾಗೂ ಧಾರ್ಮಿಕ ಕಾರ್ಯಗಳಿಗೆ ಉಪಯುಕ್ತವಾಗುತ್ತದೆ.

ನಿಟ್ಟೂರು ಕೆರೆ

ಬಾಗೇಶಪುರದಲ್ಲಿ ಹಾಸನ ಮಾರ್ಗದಲ್ಲಿ ನಿಟ್ಟೂರು ಗ್ರಾಮ ಬರುತ್ತದೆ. ಕುದುರೆಗುಂಡಿಯಿಂದ ೨ ಕಿ.ಮೀ. ದೂರದಲ್ಲಿದೆ. ಗ್ರಾಮದ ಪೂರ್ವದಿಕ್ಕಿಗೆ ನಿಟ್ಟೂರು ಕೆರೆ ಇದೆ. ಇಲ್ಲಿನ ಕ್ರಿ.ಶ. ೧೧೯೫-೯೬ರ ಶಾಸನದಲ್ಲಿ[೧೦೩] ಭೀಮಗಾವುಣ್ಡನು ದೇವಾಲಯ ಕಟ್ಟಿಸಿ, ಕೆರೆಗೆ ಕಾಲುವೆಯನ್ನು ಹಾಕಿಸಿರುವ ಮಾಹಿತಿ ಇದೆ. ಇದರಿಂದ ಕೆರೆಯು ಹೊಯ್ಸಳ ವಿನಯಾದಿತ್ಯನ ಕಾಲದಲ್ಲಿಯೇ ನಿರ್ಮಾಣವಾದಂತೆ ಕಂಡುಬರುತ್ತದೆ. ಈ ದಿನಗಳಲ್ಲಿ ಕೆರೆಯು ಜೀರ್ಣೋದ್ಧಾರವಾಗಿರುವುದರಿಂದ ಅದರ ರಚನೆಯನ್ನು ಗುರುತಿಸುವುದು ಕಷ್ಟಸಾಧ್ಯ. ಏರಿಯು ದಕ್ಷಿಣದಿಂದ ಉತ್ತರಕ್ಕೆ ಅರ್ಧಭಾಗ ಇದ್ದು, ನಂತರ ಪಶ್ಚಿಮಕ್ಕೆ ತಿರುಗಿ ಪುನಃ ದಕ್ಷಿಣದಿಕ್ಕಿಗೆ ಅಂಕುಡೊಂಕಾಗಿ ಮುಂದುವರಿದಿದೆ. ಏರಿಯಿಂದ ಉತ್ತರಕ್ಕೆ ಕೆರೆ ಅಂಗಳವಿದೆ. ಏರಿಯ ಪೂರ್ವ ಅಂಚಿನಲ್ಲಿ ಉಕ್ಕಿನಕಂತೆ ಉದ್ದೇಶ್ವರ ದೇವಸ್ಥಾನವಿದೆ. ಹಾಗೆಯೇ ಅಚ್ಚುಕಟ್ಟು ಪ್ರದೇಶದಲ್ಲಿ ಒಂದು ಮಠವಿದೆ. ಶಿವರಾತ್ರಿ ಹಬ್ಬದ ನಂತರದ ಪೌರ್ಣಮಿಯಲ್ಲಿ ಜಾತ್ರೆ ನಡೆಯುತ್ತದೆ.

ಕೆರೆಯು ೨೮.೪೦ ಹೆಕ್ಟೇರ್ ಜಲವಿಸ್ತೀರ್ಣ ಹೊಂದಿದ್ದು, ೫೩.೫೦ ಹೆಕ್ಟೇರ್ ಆಯಕಟ್ಟು ಪ್ರದೇಶಕ್ಕೆ ನೀರುಣಿಸುವ ಸಾಮರ್ಥ್ಯ ಪಡೆದಿದೆ. ಕೆರೆಯು ಹಿಂದಿನಿಂದಲೂ ಮಳೆ ನೀರನ್ನು ಆಶ್ರಯಿಸಿದೆ. ಎರಡು ತೂಬು, ಒಂದು ಕೋಡಿಯನ್ನು ಹೊಂದಿದೆ. ಕೆರೆಗೆ ಸೀಗೆ ಕೆರೆಯಿಂದ ನೀರು ಬಂದು ಸಂಗ್ರಹವಾಗುತ್ತದೆ. ಹೆಚ್ಚುವರಿ ನೀರು ಕುದುರೆಗುಂಡಿ ಕೆರೆಗೆ ಹೋಗುತ್ತದೆ. ಕೆರೆಯು

ಅಚ್ಚುಕಟ್ಟು ಪ್ರದೇಶದಲ್ಲಿ ತೆಂಗು ಮತ್ತು ಜೋಳದ ಬೆಳೆಗಳು ಹೆಚ್ಚಾಗಿ ಕಂಡುಬಂದಿವೆ. ಇದರಿಂದಾಗಿ ಗ್ರಾಮದ ಜನರು ಕೆರೆಯ ಸಂರಕ್ಷಣೆಯ ಕಡೆಗೆ ಅಷ್ಟಾಗಿ ಗಮನ ಹರಿಸಿಲ್ಲ. ಈ ಕಾರಣದಿಂದ ಕೆರೆಯು ಸಾಕಷ್ಟು ಒತ್ತುವರಿಯಾಗಿದ್ದು, ಹೂಳು ತುಂಬಿ ಮೈದಾನ ಪ್ರದೇಶದಂತಿದೆ.

ರಣಘಟ್ಟ ಕೆರೆ

ರಣಘಟ್ಟ ಗ್ರಾಮವು ಬೇಲೂರಿನಿಂದ ೮ ಕಿ.ಮೀ. ದೂರದಲ್ಲಿದೆ. ಗ್ರಾಮವನ್ನು ರನ್ನಘಟ್ಟ, ರಣಘಟ್ಟ ಎಂಬುದಾಗಿ ಕರೆಯುತ್ತಾರೆ. ಶಾಸನದಲ್ಲಿ ರಣಕಿಯಘಟ್ಟ ಎಂಬುದಾಗಿ ಉಲ್ಲೇಖವಾಗಿದೆ. ಗ್ರಾಮಕ್ಕೆ ರಣಘಟ್ಟ ಎಂಬ ಹೆಸರು ಬರುವುದಕ್ಕೆ ಸ್ಥಳೀಯ ಐತಿಹ್ಯ ಹೀಗಿದೆ. ಬೇಲೂರಿನಲ್ಲಿ ರಾಜ ರಾಣಿಯರು ವಾಸವಾಗಿದ್ದರು. ಒಮ್ಮೆ ಹಳೇಬೀಡಿನ ಕೆರೆಯಲ್ಲಿ ನೀರು ಇಲ್ಲದೇ ಹೋದಾಗ ರಾಜನು ರಣಘಟ್ಟ ಗ್ರಾಮದ ಬಳಿ ಯಗಚಿ ನದಿಗೆ ಸುಮಾರು ೪೦೦ ಮೀ. ಉದ್ದದ ಒಡ್ಡನ್ನು ನಿರ್ಮಿಸಿ ನೀರು ಹರಿಸುತ್ತಿದ್ದನು. ಅದೇ ಸಂದರ್ಭದಲ್ಲಿ ರಾಜನಿಗೆ ರಾಣಿಯು ಊಟ ತೆಗೆದುಕೊಂಡು ಹೋಗಿದ್ದಳಂತೆ. ಅದನ್ನು ನೋಡಿದ ರಾಜ ರಾಣಿಗೆ ಗಂಗೆ ಬಂದ ಹಾಗೆ ಬಂದಿರುವೇ ಬಾ ಎಂದು ಕರೆದನಂತೆ. ಅಂದಿನಿಂದ ಆ ಒಡ್ಡು ಕಟ್ಟಿದ ಸ್ಥಳವನ್ನು ರಾಣಿಕಟ್ಟೆ ಎಂದು ಕರೆಯುತ್ತಿದ್ದರಂತೆ. ಅನಂತರ ರಾಣಿಕಟ್ಟೆ ಹೋಗಿ ರಣಘಟ್ಟವಾಗಿದೆ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ. ಇಂದಿಗೂ ಕೂಡ ಗ್ರಾಮದಲ್ಲಿ ಯಗಚಿ ಹೊಳೆಗೆ ಕಟ್ಟಿರುವ ಒಡ್ಡನ್ನು ನೋಡಬಹುದು.

ರಣಘಟ್ಟ ಕೆರೆಯು ಪ್ರಸಾದಿಹಳ್ಳಿಯಿಂದ ಉತ್ತರಕ್ಕೆ ರಣಘಟ್ಟ ಗ್ರಾಮದಿಂದ ಪಶ್ಚಿಮದಿಕ್ಕಿನಲ್ಲಿದೆ. ಕೆರೆಗೆ ಸಂಬಂಧಿಸಿದಂತೆ ಕ್ರಿ.ಶ. ೧೧೯೬ರ ಶಾಸನದಲ್ಲಿ[೧೦೪] ಮಾದಲಗಟ್ಟದ ಭಾಸಗವುಂಡ ರಣಕಿಯ ಘಟ್ಟದ ಊರನ್ನು ಮಾಡಿಸಿ, ಬಳ್ಳಿಕೆರೆಯನ್ನು ಕಟ್ಟಿಸಿ, ಬಾಚೇಶ್ವರ ಎಂಬ ದೇವಾಲಯವನ್ನು ನಿರ್ಮಿಸಿದನು. ಆ ದೇವಾಲಯಕ್ಕೆ ಬಳ್ಳಿಕೆರೆಯ ಕೆಳಗಿನ ೧೦೦ ಬತ್ತದ ಭೂಮಿಯನ್ನು ದತ್ತಿ ಬಿಟ್ಟಿರುವುದು ಉಲ್ಲೇಖವಾಗಿದೆ. ಶಾಸನದಲ್ಲಿರುವ ಬಳ್ಳಿಕೆರೆ ರಣಘಟ್ಟ ಕೆರೆಯೇ ಆಗಿರಬಹುದು. ಕೆರೆಯ ದಕ್ಷಿಣಭಾಗದ ದಡದಲ್ಲಿ ಈಶ್ವರ ಮತ್ತು ಮಲ್ಲೇದೇವರ ದೇವಸ್ಥಾನಗಳಿವೆ. ಈಶ್ವರ ದೇವಸ್ಥಾನದ ಮುಂಭಾಗದಲ್ಲಿ ಹೊಯ್ಸಳ ಕಾಲದ ಎರಡು ಶಾಸನ ಕಲ್ಲುಗಳಿವೆ. ಇಲ್ಲಿನ ದೇವಾಲಯ ಮತ್ತು ಶಾಸನಗಳ ಆಧಾರದಿಂದ ಕೆರೆಯು ಹೊಯ್ಸಳ ಕಾಲದಲ್ಲಿ ನಿರ್ಮಾಣವಾಗಿದೆ ಎಂದು ಹೇಳಬಹುದು.

ಕೆರೆಯ ಏರಿಯು ಉತ್ತರದಿಕ್ಕಿನಿಂದ ದಕ್ಷಿಣದಿಕ್ಕಿನವರೆಗೆ ಮುಂದುವರೆದು ಕೊನೆಯ ಭಾಗವು ಪೂರ್ವದಿಕ್ಕಿಗೆ ಬಾಗಿದೆ. ಏರಿಯ ಉದ್ದ ಸುಮಾರು ೫೦೦ ಮೀ., ಅಗಲ ೫ ಮೀ. ಮತ್ತು ಒಳಪಾರ್ಶ್ವದ ಎತ್ತರ ೨ ಮೀ. ಇದೆ. ಏರಿಯನ್ನು ನೋಡಿದಾಗ ಹೊರಭಾಗಕ್ಕೆ ಮಣ್ಣಿನ ಏರಿಯಂತೆ ಕಂಡುಬರುತ್ತದೆ. ೧೦ ವರ್ಷಗಳ ಹಿಂದೆ ಏರಿಯು ಒಡೆದಿದ್ದು ಅದರ ಒಳಪಾರ್ಶ್ವಕ್ಕೆ ಕಲ್ಲುಗಳನ್ನು ಜೋಡಿಸಿ ಏರಿಯನ್ನು ಪುನರ್ ನವೀಕರಿಸಲಾಗಿದೆ. ಏರಿಗೆ ೨ ತೂಬುಗಳನ್ನು

ಇರಿಸಲಾಗಿದೆ. ಈ ತೂಬುಗಳಿಗೆ ಮರದ ದಿಮ್ಮಿ ಮತ್ತು ಕಬ್ಬಿಣದ ಬಾಗಿಲುಗಳನ್ನು ಅಳವಡಿಸುವುದರ ಬದಲು ಒಂದರ ಮೇಲೊಂದರಂತೆ ಮೂರು ರಂಧ್ರಗಳನ್ನು ಮಾಡಿದ್ದಾರೆ. ಕೆರೆಯ ನೀರಿನ ಗಾತ್ರಕ್ಕೆ ಅನುಗುಣವಾಗಿ ರಂಧ್ರಗಳನ್ನು ತೆಗೆಯುತ್ತಾರೆ. ತೂಬಿನ ನಿರ್ವಹಣೆಯನ್ನು ಗ್ರಾಮದ ಜನರೇ ನೋಡಿಕೊಳ್ಳುತ್ತಿದ್ದಾರೆ. ಹೋಲ್‌ಗಳಿಗೆ ಅನುಸಾರವಾಗಿ ಏರಿಯ ಹೊರಭಾಗದಲ್ಲಿ ಕಾಲುವೆಗಳನ್ನು ನಿರ್ಮಿಸಲಾಗಿದೆ. ಅವುಗಳ ಮೂಲಕ ಆಯಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಹೆಚ್ಚು ಕೃಷಿ ಪಡೆಯುತ್ತಾರೆ. ಅಂತಹ ಬೆಳೆಗಳಲ್ಲಿ ಭತ್ತದ ಗದ್ದೆ ಪ್ರಮುಖವಾಗಿ ಕಂಡುಬಂದಿದೆ.

ಕೆರೆಯು ೧೯.೦೦ ಹೆಕ್ಟೇರ್ ಜಲ ವಿಸ್ತೀರ್ಣ, ೪.೮೮ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದ್ದು, ೪೦.೧೫ ಹೆಕ್ಟೇರ್ ಅಚ್ಚುಕಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯ ಹೆಚ್ಚುವರಿ ನೀರು ಹೊರ ಹೋಗಲು ಕೆರೆಯ ಉತ್ತರದಿಕ್ಕಿಗೆ ಸುಮಾರು ೨೫ ಮೀ. ಉದ್ದದ ಕೋಡಿಯನ್ನು ನಿರ್ಮಿಸಲಾಗಿದೆ. ಕೋಡಿಯ ಸಮೀಪವೇ ಕೋಡಿಯಮ್ಮ ದೇವಸ್ಥಾನವಿದೆ. ಇದು ಗ್ರಾಮದ ಗ್ರಾಮದೇವತೆಯಾಗಿದೆ. ಶಿವರಾತ್ರಿಯಾದ ೧೨ ದಿನಕ್ಕೆ ಜಾತ್ರೆ ಮಾಡುತ್ತಾರೆ. ಕೆರೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದೆ. ಆದರೂ ಕೆರೆಯ ಅಂಗಳ ಸುಮಾರು ೧೦ ಎಕರೆಯಷ್ಟು ಒತ್ತುವರಿಯಾಗಿದೆ. ಇಲಾಖೆಯವರು ಒತ್ತುವರಿಯಾದ ಜಮೀನನ್ನು ಬಿಡಿಸಿದರೆ ಕೆರೆಯ ಅಂಗಳದಲ್ಲಿ ನೀರಿನ ಸಂಗ್ರಹಣಸಾಮರ್ಥ್ಯ ಜಾಸ್ತಿಯಾಗಿ ಅಚ್ಚುಕಟ್ಟು ಪ್ರದೇಶದಲ್ಲಿ ವಿವಿಧ ಬೆಳೆಗಳನ್ನು ಬೆಳೆಯಬಹುದು ಎನ್ನುವುದು ನನ್ನ ಆಶಯ.

ಬೇಲೂರು ಕೆರೆ

ಸಕಲೇಶಪುರದಿಂದ ಬೇಲೂರಿಗೆ ಹೋಗುವ ಮಾರ್ಗದಲ್ಲಿ ಬೇಲೂರು ಕೆರೆ ಇದೆ. ಇತಿಹಾಸ ಪ್ರಸಿದ್ಧವಾದ ಇಲ್ಲಿನ ಚನ್ನಕೇಶವ ದೇವಾಲಯದ ದಕ್ಷಿಣದಿಕ್ಕಿನಲ್ಲಿ ಬರುತ್ತದೆ. ಕೆರೆಗೆ ವಿಷ್ಣುಸಮುದ್ರ, ಬಿಟ್ಟಿಸಮುದ್ರ, ಬಿಷ್ಟಮ್ಮಕೆರೆ ಮತ್ತು ಬೇಲೂರು ದೊಡ್ಡಕೆರೆ ಎಂಬ ಮುಂತಾದ ಹೆಸರುಗಳಿವೆ. ಬೇಲೂರಿನ ಕ್ರಿ.ಶ. ೧೧೭೭ರ ಶಾಸನದಲ್ಲಿ[೧೦೫] ರಾಜ ದೊಡ್ಡ ಕೆರೆಯನ್ನು ನಿರ್ಮಿಸಿ 'ವಾಸುತೀರ್ಥ' ಎಂದು ಕರೆದಿರುವುದಾಗಿ ಉಲ್ಲೇಖವಾಗಿದೆ. ಕ್ರಿ.ಶ. ೧೧೯೬-೯೭ರ ಶಾಸನದಲ್ಲಿ[೧೦೬] ಮಹಾಪ್ರಧಾನ ಸಾವಂತರಾಯ ಎಲಿಹಕ್ಕ ಸಾವಂತಸಮುದ್ರ ಮತ್ತು ಬ್ರಹ್ಮಸಮುದ್ರವೆಂಬ ಎರಡು ಕೆರೆಗಳನ್ನು ಕಟ್ಟಿಸಿರುವುದು ದಾಖಲಾಗಿದೆ. ಹಾಗೆಯೇ ಬೇಲೂರು ತಾಲೂಕಿನ ಸಿಂಗಾಪುರ ಗ್ರಾಮದ ಕ್ರಿ.ಶ. ೧೬೫೯ರ ಶಾಸನದಲ್ಲಿ[೧೦೭] ವಿಷ್ಣುಸಮುದ್ರ ಉಲ್ಲೇಖವಿದೆ. ಹಳೇಬೀಡಿನ ಕ್ರಿ.ಶ. ೧೧೩೬ರ ಶಾಸನವು[೧೦೮] ಮಹಾಪಟ್ಟಣ ದೋರಸಮುದ್ರ ಮತ್ತು ಬೇಲೂರು ವಿಷ್ಣುಸಮುದ್ರದ ತಡಿಯಲ್ಲಿ ಬೀಡುಬಿಟ್ಟಿದ್ದ ವ್ಯಾಪಾರಿಗಳು ಮಾಣಿಕೇಶ್ವರ ದೇವರಿಗೆ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ. ಬಸ್ತಿಹಳ್ಳಿಯ ಕ್ರಿ.ಶ. ೧೧೩೩ರ ಶಾಸನದಲ್ಲಿ[೧೦೯] ಬೇಲೂರು ಕೆರೆಯ ಉಲ್ಲೇಖವಿರುವುದನ್ನು ಗಮನಿಸಬಹುದು. ಶಾಸನಗಳನ್ನು ನೋಡಿದಾಗ ಹೊಯ್ಸಳರ ಅವಧಿಯಲ್ಲಿ ಕೆರೆ ಇರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಬೇಲೂರಿನ

ಪ್ರಾಚೀನತೆಯನ್ನು ಗಮನಿಸಿದಾಗ ಶಿಲಾಯುಗದ ಕಾಲದಿಂದಲೇ ಈ ಪರಿಸರದಲ್ಲಿ ಜನವಸತಿ ಆರಂಭವಾಗಿದ್ದು, ಗಂಗರ ಕಾಲದಲ್ಲಿ ಬೇಲಹೂರು ಎಂಬ ಸಣ್ಣ ಗ್ರಾಮ ನಿರ್ಮಾಣವಾಗಿತ್ತು. ಗ್ರಾಮದ ದಕ್ಷಿಣದಿಕ್ಕಿನಲ್ಲಿ ಹರಿಯುವ ಯಗಚಿ ನದಿಯ ಉಪನದಿ ವೇದಾವತಿ ಎಂಬ ಹಳ್ಳಕ್ಕೆ ಅಂದಿನ ಜನರು ಅಡ್ಡಗಟ್ಟೆ ಹಾಕಿ ಒಂದು ಚಿಕ್ಕಕೆರೆಯನ್ನು ಕಟ್ಟಿದ್ದು, ನಂತರ ಬೇಲೂರನ್ನು ಹೊಯ್ಸಳ ವಿನಯಾದಿತ್ಯ ಎರೆಯಂಗನು ರಾಜಧಾನಿಯಾಗಿ ಮಾಡಿಕೊಂಡಾಗ ಕೆರೆಗೆ ರಕ್ಷಣೆಯನ್ನು ನೀಡಿರಬಹುದು. ಹಾಗೆಯೇ ವಿಷ್ಣುವರ್ಧನನ ಅವಧಿಯಲ್ಲಿ ಕೆರೆಗೆ ಹೆಚ್ಚಿನ ಮಹತ್ವ ನೀಡಿ ವಿಸ್ತಾರಗೊಳಿಸಿರಬೇಕು. ಇದಕ್ಕೆ ಪ್ರತೀಕವೆಂಬಂತೆ ಕೆರೆಯ ದಂಡೆಯಲ್ಲಿ ಒಂದು ರಾಜನ ಶಿಲ್ಪವಿದೆ. ಅದನ್ನು ವಿಷ್ಣುವರ್ಧನನ ಪ್ರತಿಮೆ ಎಂದು ಹೇಳುತ್ತಾರೆ. ಇದರಿಂದಾಗಿ ಕೆರೆಗೆ ವಿಷ್ಣುಸಮುದ್ರವೆಂಬ ಹೆಸರು ಬಂದಿರಬಹುದು.

ಕೆರೆಯ ಏರಿಯು ಉತ್ತರದಿಕ್ಕಿನಿಂದ ದಕ್ಷಿಣದಿಕ್ಕಿನ ಕಡೆಗೆ ಅಂಕುಡೊಂಕಾಗಿ ಮುಂದುವರಿದಿದೆ. ಏರಿಯು ಸುಮಾರು ೭೫೦ ಮೀ. ಉದ್ದ ೫ ಮೀ. ಮೇಲ್ಭಾಗದ ಅಗಲ ಮತ್ತು ಒಳಪಾರ್ಶ್ವದ ಎತ್ತರ ೧೨ ಅಡಿಯಷ್ಟು ಇದೆ. ಏರಿಯ ಮೇಲ್ಭಾಗದಲ್ಲಿ ಸಕಲೇಶಪುರದಿಂದ ಬೇಲೂರಿಗೆ ವಾಹನಗಳು ಚಲಿಸಲು ರಸ್ತೆ ನಿರ್ಮಾಣವಾಗಿದೆ. ಕೆರೆಯ ಉತ್ತರಬದಿಯಲ್ಲಿ ಏರಿಯಿಂದ ಸುಮಾರು ೫ ಅಡಿ ದೂರದಲ್ಲಿ ಒಂದರ ಹಿಂದೆ ಒಂದರಂತೆ ಮೂರು ಹಳೆಯ ತೂಬುಗಳಿವೆ. ಈ ದಿನಗಳಲ್ಲಿ ಅವು ಕಾರ್ಯ ನಿರ್ವಹಿಸುತ್ತಿಲ್ಲ. ಬದಲಾಗಿ ಅವುಗಳ ಹಿಂದೆ ಒಂದು ತೂಬನ್ನು ಇರಿಸಿ ಅದನ್ನು ತಲುಪಲು ಸೇತುವೆ ಮಾಡಲಾಗಿದೆ. ಹಾಗೆಯೇ ಕೆರೆಯ ದಕ್ಷಿಣ ಬದಿಯಲ್ಲಿ ಏರಿಯಿಂದ ಸುಮಾರು ೧೨ ಅಡಿ ದೂರದಲ್ಲಿ ಇನ್ನೊಂದು ತೂಬಿದೆ. ಏರಿಯ ಹೊರ ಭಾಗದಲ್ಲಿ ತೂಬುಗಳಿಗೆ ಹೊಂದಿಕೊಂಡಂತೆ ಕಾಲುವೆಗಳನ್ನು ನಿರ್ಮಿಸಿದ್ದಾರೆ. ಅವುಗಳ ಮೂಲಕ ಆಯಕಟ್ಟು ಪ್ರದೇಶಕ್ಕೆ ನಿರನ್ನು ಪೂರೈಸಲಾಗುತ್ತದೆ. ಕೆರೆಯ ನೀರನ್ನು ಬಳಸಿಕೊಂಡು ಭತ್ತ, ಸೂರ್ಯಕಾಂತಿ, ಮುಸುಕಿನ ಜೋಳ, ಆಲೂಗಡ್ಡೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆಗೆ ಸುತ್ತಮುತ್ತಲಿನ ಗುಡ್ಡದ ನೀರು ಬಂದು ಸಂಗ್ರಹವಾಗುತ್ತದೆ. ಹೆಚ್ಚುವರಿ ನೀರು ಹೊರಹೋಗಲು ಕೆರೆಯ ದಕ್ಷಿಣಬದಿಯಲ್ಲಿ ಸುಮಾರು ೩೦ ಮೀ. ಉದ್ದದ ಕೋಡಿ ಇದೆ. ಅದರ ಮೇಲ್ಭಾಗದಲ್ಲಿ ಹಿಂದೆ ಹಳೆಯ ಸೇತುವೆ ಇದ್ದು, ನಂತರದ ದಿನಗಳಲ್ಲಿ ಹೊಸ ಸೇತುವೆ ಮಾಡಿ ಮೇಲ್ಭಾಗದಲ್ಲಿ ಸಕಲೇಶಪುರದಿಂದ ಬೇಲೂರಿಗೆ ಓಡಾಡುವಂತೆ ರಸ್ತೆ ನಿರ್ಮಿಸಿದ್ದಾರೆ. ಕೆರೆಯು ೧೪.೯೦ ಎಂ.ಸಿ.ಎಫ್.ಟಿ.ರಷ್ಟು ನೀರನ್ನು ಸಂಗ್ರಹಿಸುವಸಾಮರ್ಥ್ಯ ಮತ್ತು ೭೯.೨೦ ಹೆಕ್ಟೇರ್ ಜಲ ವಿಸ್ತೀರ್ಣ ಹೊಂದಿದ್ದು ೪೩.೨೦ ಹೆಕ್ಟೇರ್ ಅಚ್ಚುಕಟ್ಟು ಭೂಮಿಗೆ ನೀರನ್ನು ಪೂರೈಸುತ್ತಿದೆ.

ಕೆರೆಯ ಉತ್ತರ ಬದಿಯಲ್ಲಿ ಚಚ್ಚೌಕಾಕಾರದ ಪುಷ್ಕರಣಿ ಇದೆ. ಬೇಲೂರಿನ ಕ್ರಿ.ಶ. ೧೫೨೪ರ ಶಾಸನದಲ್ಲಿ[೧೧೦] ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಆಡಳಿತ ಅಧಿಕಾರಿಯಾದ ಉತ್ಪಾತನಹಳ್ಳಿಯ

ಬಸಪ್ಪನಾಯಕ ತಮ್ಮ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಕೆರೆಯ ಉತ್ತರ ತುದಿಯ ಕೊಳವನ್ನು ನಿರ್ಮಿಸಿ, ಪುಷ್ಕರಣಿಯ ಮಧ್ಯದಲ್ಲಿ ವಸಂತಮಂಟಪವನ್ನು ಚನ್ನಕೇಶವ ಸ್ವಾಮಿಯ ತೆಪ್ಪೋತ್ಸವಕ್ಕಾಗಿ ನಿರ್ಮಿಸಿದನೆಂದು ತಿಳಿದುಬರುತ್ತದೆ. ಪುಷ್ಕರಣಿಯ ಬದಿಯಲ್ಲಿ ಪ್ರವಾಸಿ ಮಂಟಪಗಳಿವೆ. ಪಶ್ಚಿಮಬದಿಯಲ್ಲಿ ಮಧ್ಯದ ಮಂಟಪದಲ್ಲಿ ಹೊಯ್ಸಳ ಶೈಲಿಯ ಗರುಡಪೀಠದ ಮೇಲೆ ವಿಜಯನಗರ ಕಾಲದ ಆಂಜನೇಯ ಶಿಲ್ಪವಿದೆ. ಈ ಮಂಟಪದ ಹಿಂಭಾಗದಲ್ಲಿ ಅಮೃತೇಶ್ವರ ದೇವಾಲಯವಿದ್ದು, ಅದರ ಸ್ವಲ್ಪ ದೂರದಲ್ಲಿ ನಾಲ್ಕು ಕಂಬಗಳ ಮಂಟಪವಿದೆ. ಇದು ತೆಪ್ಪೋತ್ಸವದ ಅವಧಿಯಲ್ಲಿ ಉಪಯೋಗಿಸುತ್ತಿದ್ದ ನಿವೇದನ ಮಂಟಪವಾಗಿರಬೇಕು. ಇಂದು ಹರಕೆಯ ಮುಡಿ ತೆಗೆಯುವ ಸ್ಥಳವಾಗಿದೆ. ಕೆರೆಯ ಉತ್ತರ ಬದಿಯಲ್ಲಿ ಅರಳಿಕಟ್ಟೆಯಿದ್ದು, ಸುತ್ತಲೂ ನಾಗರಶಿಲ್ಪಗಳಿವೆ. ಅದರ ಸ್ವಲ್ಪ ದೂರದಲ್ಲಿ ಅರ್ಧಭಾಗ ಹೂತುಹೋಗಿರುವ ಶಾಸನಕಲ್ಲಿದೆ. ಪುಷ್ಕರಣಿಯ ಉತ್ತರ ಮತ್ತು ಪೂರ್ವಬದಿಯ ಎರಡು ಕಡೆ ಒಂದೊಂದು ಶಿಥಿಲಗೊಂಡಿರುವ ಪ್ರವಾಸಿ ಮಂಟಪಗಳಿವೆ. ಪೂರ್ವಭಾಗದ ಪ್ರವಾಸಿ ಮಂಟಪದ ಒಳಗಡೆ ಒಂದು ಹೊಯ್ಸಳ ಶಿಲ್ಪವಿದೆ.

ಕೆಂಬಾಳು ಕೆರೆ

ಚನ್ನರಾಯಪಟ್ಟಣ ತಾಲೂಕಿನ ಬಾಗೂರು ಹೋಬಳಿಯಲ್ಲಿ ಬರುವ ಒಂದು ಗ್ರಾಮ ಕೆಂಬಾಳು. ತಾಲೂಕಿನಿಂದ ಸುಮಾರು ೨೪ ಕಿ.ಮೀ. ಹಾಗೂ ಬಾಗೂರಿನಿಂದ ೧೨ ಕಿ.ಮೀ. ದೂರದಲ್ಲಿದೆ. ಗ್ರಾಮದಿಂದ ಉತ್ತರಕ್ಕೆ ಕೆರೆ ಇದೆ. ಕೆಂಬಾಳು ಕೆರೆ ಅಕ್ಕ, ಅಣತಿ ಕೆರೆ ತಂಗಿ ಎಂದು ಸ್ಥಳೀಯರು ಕರೆಯುತ್ತಾರೆ. ಕೆಂಬಾಳು ಕೆರೆ ಕೋಡಿ ಬಿದ್ದು, ಅಣತಿ ಕೆರೆ ಸೇರುತ್ತದೆ. ಕೆಂಬಾಳು ಮತ್ತು ಅಣತಿ ಕೆರೆಯ ನೀರನ್ನು ತೆಗೆದುಕೊಂಡು ತುಮಕೂರು ಜಿಲ್ಲೆಯ ತುರುವೇಕೆರೆ ತಾಲೂಕಿನಲ್ಲಿ ಬರುವ ಮಲ್ಲಾಘಟ್ಟ ಕೆರೆಗೆ ಹಾಕುವವರೆಗೆ ಆ ಕೆರೆ ಕೋಡಿ ಬೀಳುವುದಿಲ್ಲ ಎಂಬ ನಂಬಿಕೆ ಇತ್ತು. ಇತ್ತೀಚೆಗೆ ಹೇಮಾವತಿ ನಾಲೆಯ ನೀರು ಮಲ್ಲಾಘಟ್ಟ ಕೆರೆಗೆ ಬರುತ್ತಿರುವುರಿಂದ ಈ ಬಗೆಯ ಆಚರಣೆ ಇಲ್ಲದಂತಾಗಿದೆ. ಕೆರೆಯ ರಚನಾವಿನ್ಯಾಸವು ಹೊಯ್ಸಳ ಕಾಲದಲ್ಲಿ ನಿರ್ಮಾಣವಾದಂತಿದೆ. ಕೆಂಬಾಳುವಿನ ಕ್ರಿ.ಶ. ೧೦೯೮ರ ವಿನಯಾದಿತ್ಯನ ಶಾಸನವು[೧೧೧] ಕೆಂಬಾಳುವಿನ ಕಲ್ಲಗೌಡ(ಗಾವುಂಡ) ದೇವಾಲಯ ಮತ್ತು ಕೆರೆ ಕಟ್ಟಿಸಿ ಭೂದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ.

ಕೆರೆಯ ಏರಿಯು ದಕ್ಷಿಣದಿಕ್ಕಿನಿಂದ ಉತ್ತರದ ಕಡೆಗೆ ಅರ್ಧಭಾಗ ಇದ್ದು ನಂತರ ಪಶ್ಚಿಮದಿಕ್ಕಿನ ಕಡೆಗೆ ಅಂಕುಡೊಂಕಾಗಿ ಮುಂದುವರಿದಿದೆ. ಏರಿಯ ಉದ್ದ ಸುಮಾರು ೧೫೦೦ ಮೀ. ಅಗಲ ೩ ಮೀ. ಮತ್ತು ಒಳಪಾರ್ಶ್ವದ ಎತ್ತರ ಸುಮಾರು ೧೫ ಅಡಿ ಇದೆ. ಏರಿಯ ಮೇಲೆ ಓಡಾಡಲು ಸಾಧ್ಯವಾಗದಷ್ಟು ಪೊದರು ಗಿಡಗಳು ಬೆಳೆದಿವೆ. ಏರಿಗೆ ಹೊಂದಿಕೊಂಡಂತೆ ಎರಡು ತೂಬುಗಳಿವೆ. ಅವುಗಳಿಗೆ ಅನುಗುಣವಾಗಿ ಏರಿಯ ಹೊರಭಾಗದಲ್ಲಿ ಕಾಲುವೆಗಳನ್ನು ಅಳವಡಿಸಲಾಗಿದೆ. ಕಾಲುವೆಗಳ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಹಿಂದಿನಿಂದಲೂ

ಕೆರೆಯು ಮಳೆ ನೀರನ್ನು ಹೊಂದಿದೆ. ಕೆರೆಗೆ ಕೆಂಬಾಳ ಮುತ್ತಿ ಕಟ್ಟೆಯಿಂದ ನೀರು ಬರುತ್ತದೆ. ಹೆಚ್ಚುವರಿ ನೀರು ಅಣತಿಕೆರೆಗೆ ಹೋಗುತ್ತದೆ.

ತೂಬಿನ ನಿರ್ವಹಣೆ ಮಾಡಲು ನೀರ್ಗಂಟಿಗಳಿದ್ದಾರೆ. ಅವರಿಗೆ ಕೆರೆ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆದ ಬೆಳೆಗಳಲ್ಲಿ ಕುಂಟೆಗೆ ಇಂತಿಷ್ಟೆಂದು ಧಾನ್ಯವನ್ನು ಕೊಡುತ್ತಾರೆ. ನೀರ್ಗಂಟಿಗಳು ತೂಬು ಎತ್ತುವಾಗ ಕೆರೆಗೆ ಗಂಗಮ್ಮನ ಪೂಜೆ ಮಾಡಿ ಏರಿ ಮೇಲೆ ಪ್ರಾಣಿಬಲಿ ಕೊಟ್ಟು ತೂಬನ್ನು ಎತ್ತುವರು.

ಕೆರೆಯು ಸುಮಾರು ೩೦.೦೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಕೆರೆಯ ಎರಡು ದಿಕ್ಕಿನಲ್ಲಿ ಎರಡು ಕೋಡಿಗಳಿವೆ. ದಕ್ಷಿಣದಿಕ್ಕಿನ ಕೋಡಿ ಸುಮಾರು ೯೫ ಮೀ. ಇದೆ. ಈ ಕೋಡಿಯ ಮೇಲೆ ಬಸವಣ್ಣನ ವಿಗ್ರಹ ಇದೆ. ಈ ಸ್ಥಳದಲ್ಲಿ ಕೆರೆಯು ತುಂಬಿದಾಗ ಗ್ರಾಮದ ಜನರು ಗಂಗಮ್ಮನ ಪೂಜೆ ಮಾಡುತ್ತಾರೆ. ಪಶ್ಚಿಮದಿಕ್ಕಿನ ಕೋಡಿ ಕಾಣದಂತೆ ಕೆರೆಯು ಒತ್ತುವರಿಯಾಗಿದೆ. ಕೆರೆಗೆ ಸಂಬಂಧಿಸಿದ ಇಲಾಖೆಯು ಒತ್ತುವರಿ ಜಮೀನನ್ನು ಬಿಡಿಸಿ ಹೂಳೆತ್ತಿಸಿದರೆ, ಕೆರೆಯು ತನ್ನ ಆಳ ಮತ್ತು ಅಗಲವನ್ನು ಹೆಚ್ಚಿಸಿಕೊಳ್ಳುತ್ತದೆ. ಇದರಿಂದ ಕೆರೆಯು ಹೆಚ್ಚು ನೀರು ಸಂಗ್ರಹಿಸುವ ಸಾಮರ್ಥ್ಯವನ್ನು ಹೊಂದುತ್ತದೆ. ಪ್ರಸ್ತುತ ದಿನಗಳಲ್ಲಿ ಕೆರೆಯ ನೀರು ದನಕರುಗಳಿಗೆ, ಬಟ್ಟೆ ತೊಳೆಯಲು ಮತ್ತು ಕೃಷಿಗೆ ಉಪಯುಕ್ತವಾಗುತ್ತಿದೆ.

ಚನ್ನರಾಯಪಟ್ಟಣ ಕೆರೆ

ಚನ್ನರಾಯಪಟ್ಟಣವು ಹಾಸನ ಜಿಲ್ಲೆಯ ಒಂದು ತಾಲೂಕು ಹಾಗೂ ಆಡಳಿತ ಕೇಂದ್ರ, ಜಿಲ್ಲೆಯಿಂದ ೩೭ ಕಿ.ಮೀ. ಮತ್ತು ಬೆಂಗಳೂರಿನಿಂದ ೧೪೬ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಕಾಲದಲ್ಲಿ ಈ ತಾಲೂಕನ್ನು 'ಕೊಳತೂರು' ಎಂದು ಕರೆಯುತ್ತಿದ್ದು ಒಂದು ಅಗ್ರಹಾರವಾಗಿತ್ತು. ಈ ನಗರದ ಈಶಾನ್ಯದಿಕ್ಕಿನಲ್ಲಿ ಒಂದು ವಿಶಾಲವಾದ ಕೆರೆಯಿದ್ದು ಅದನ್ನು ಮಾಚಲದೇವಿ ಮತ್ತು ಶಾಂತಲದೇವಿ ಎಂಬ ಇಬ್ಬರು ನೃತ್ಯಗಾರ್ತಿಯರು ನಿರ್ಮಿಸಿದರೆಂದು ಹೇಳುತ್ತಾರೆ. ಕ್ರಿ.ಶ. ೧೨ನೆಯ ಶತಮಾನದ ಶಾಸನದಲ್ಲಿ[೧೨] ಮಾಚಿರಾಜನ ಮಡದಿ ಶಾಂತಲದೇವಿ ಕೊಳತೂರಿನಲ್ಲಿ "ಶಾಂತಿಸಮುದ್ರ"ವೆಂಬ ಕೆರೆಯನ್ನು ನಿರ್ಮಿಸಿರುವುದು ಉಲ್ಲೇಖಿತವಾಗಿದೆ. ಇಲ್ಲಿನ ಕೆರೆಯನ್ನು ಚನ್ನರಾಯಪಟ್ಟಣದ ಅಮಾನಿಕೆರೆಯೆಂದು ಕರೆಯುತ್ತಾರೆ. ಏರಿಯು ಪಶ್ಚಿಮದಿಂದ ಉತ್ತರಕ್ಕೆ ಸ್ವಲ್ಪ ಹೋಗಿ ನಂತರ ಪೂರ್ವದಿಕ್ಕಿಗೆ ಮುಂದುವರಿದಿದೆ. ಸುಮಾರು ೧ ಕಿ.ಮೀ. ಉದ್ದ ಮತ್ತು ೫ ಮೀ. ಮೇಲ್ಭಾಗದ ಅಗಲವಿದ್ದು, ೧೫ ಅಡಿಗಳಷ್ಟು ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ತೂಬುಗಳಿಗೆ ಮರದ ದಿಮ್ಮಿಗಳಿಗೆ ಬದಲಾಗಿ ಕಬ್ಬಿಣದ ಬಾಗಿಲನ್ನು ಅಳವಡಿಸಲಾಗಿದೆ. ಏರಿಯ ಇಳಿಜಾರಿನಲ್ಲಿ ತೂಬುಗಳಿಗೆ ಅನುಗುಣವಾಗಿ ಕಾಲುವೆಗಳಿದ್ದು ಅವುಗಳ ಮೂಲಕ ಅಚ್ಚುಕಟ್ಟು

ಪ್ರದೇಶಕ್ಕೆ ನೀರನ್ನು ಹಾಯಿಸಲಾಗುತ್ತದೆ. ಕೆರೆಯ ಆಯಕಟ್ಟು ಪ್ರದೇಶವು ಹೆಚ್ಚಾಗಿ ಒಕ್ಕಲಿಗ ಜನಾಂಗಕ್ಕೆ ಸೇರಿದ್ದು, ಇವರು ಕೆರೆಯ ನೀರನ್ನು ಬಳಸಿಕೊಂಡು ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಮುಖ್ಯವಾಗಿ ಭತ್ತದ ಬೆಳೆಯನ್ನು ವರ್ಷದಲ್ಲಿ ಎರಡು ಬೆಳೆ ಬೆಳೆಯುತ್ತಾರೆ.

ಕೆರೆಯ ಒಟ್ಟು ವಿಸ್ತೀರ್ಣ ೩೭೬ ಎಕರೆಗಳಷ್ಟಿದ್ದು, ಅದರಲ್ಲಿ ಸುಮಾರು ೧೦೦ ಎಕರೆಗಳಷ್ಟು ಒತ್ತುವರಿಯಾಗಿದೆ ಎಂಬುದು ಸ್ಥಳೀಯರ ಹೇಳಿಕೆ. ಕೆರೆಯು ಮಳೆ ನೀರಲ್ಲದೆ ಹೇಮಾವತಿ ನಾಲೆಯ ನೀರನ್ನು ಹೊಂದಿದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಕೆರೆಯ ಎರಡು ದಿಕ್ಕುಗಳಲ್ಲಿ ಎರಡು ಕೋಡಿಗಳನ್ನು ಅಳವಡಿಸಲಾಗಿದೆ. ಪೂರ್ವದಿಕ್ಕಿನ ಕೋಡಿಯು ಸುಮಾರು ೪೫ ಮೀ. ಇದ್ದು, ಕೋಡಿಗೆ ಹೊಂದಿಕೊಂಡಂತೆ ಒಂದು ತೂಬನ್ನು ಜೋಡಿಸಲಾಗಿದೆ. ಮತ್ತೊಂದು ಕೋಡಿಯು ಕೆರೆಯ ಪಶ್ಚಿಮದಿಕ್ಕಿನಲ್ಲಿದ್ದು ಸುಮಾರು ೫೦ ಮೀ. ಉದ್ದವಿದೆ. ಕೆರೆ ಅಂಗಳದಲ್ಲಿ ಸಂಧ್ಯಾಮಂಟಪವಿದ್ದು, ನಡುವೆ ಬಸವಣ್ಣ ವಿಗ್ರಹವಿದೆ. ಏರಿಯ ಕೆಳಭಾಗದಲ್ಲಿ ಗಣಪತಿಯ ದೇವಸ್ಥಾನವಿದೆ. ಕೆರೆಯ ಪಶ್ಚಿಮದಿಕ್ಕಿನ ದಡದಲ್ಲಿ ಎರಡು ಮಹಾಸತಿ ಕಲ್ಲುಗಳು ಮತ್ತು ಎರಡು ಶಾಸನ ಕಲ್ಲುಗಳಿವೆ. ಹಾಗೆಯೇ ಗ್ರಾಮದ ದಡದ ಕೆರೆ ಅಂಗಳದಲ್ಲಿ ವಳೆಗೇರಮ್ಮ ದೇವಸ್ಥಾನವಿದೆ. ಈ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದ್ದು, ದೀಪಾವಳಿ ಆದ ಎರಡು ದಿನಕ್ಕೆ ಜಾತ್ರೆ ನಡೆಯುತ್ತದೆ. ಕೆರೆಯ ನೀರು ಕೃಷಿ ಚಟುವಟಿಕೆಗಳಿಗೆ ಮಾತ್ರ ಉಪಯುಕ್ತವಾಗದೆ, ಧಾರ್ಮಿಕ ಆಚರಣೆ, ಮೀನುಗಾರಿಕೆ, ಜಾನುವಾರುಗಳಿಗೆ ಹಾಗೂ ಜನರು ಬಟ್ಟೆ ತೊಳೆಯಲು ಬಳಕೆಯಾಗುತ್ತಿದೆ. ಕೆರೆಯು ಒತ್ತುವರಿಯಾಗಿದ್ದರೂ ಕೆರೆಯಲ್ಲಿ ಹೂಳೆತ್ತಿಸಿದ್ದರಿಂದ ಕೆರೆಯು ತನ್ನ ಆಳ ಅಗಲವನ್ನು ಹೆಚ್ಚಿಸಿಕೊಂಡು ಹೆಚ್ಚು ನೀರು ಸಂಗ್ರಹವಾಗಿದೆ. ನೀರಾವರಿ ಇಲಾಖೆಯಿಂದ ರಕ್ಷಣೆಯನ್ನು ಪಡೆದಿದೆ.

ಕಾಟಿಕೆರೆ

ಅರಸೀಕೆರೆ ತಾಲೂಕಿನಲ್ಲಿ ಬರುವ ಹೊಯ್ಸಳ ಕಾಲದ ಕೆರೆಗಳಲ್ಲಿ ಕಾಟಿಕೆರೆಯೂ ಒಂದು. "ಕಾಟಿ" ಎಂದರೆ ಸಂಸ್ಕೃತದಲ್ಲಿ ಅಂಬಲಿ ಎಂದರ್ಥ. ಸಕಲ ಪ್ರಾಣಿಪಕ್ಷಿಗಳಿಗೆ ಉಪಯುಕ್ತವಾಗಲೆಂದು ಗ್ರಾಮದಲ್ಲಿ ಅಂಬಲಿ ಕುಡಿದು ಕಟ್ಟಿದ್ದರಂತೆ. ಹಾಗಾಗಿ ಈ ಕೆರೆಗೆ ಕಾಟಿಕೆರೆ ಎಂಬ ಹೆಸರು ಬಂದಿರುವಂತೆ ಹೇಳುತ್ತಾರೆ. ಊರಿನಿಂದ ನೈರುತ್ಯಕ್ಕೆ ಕೆರೆ ಇದೆ. ಕ್ರಿ.ಶ. ೧೧೦೦ರ ಕಾಟಿಕೆರೆ ಶಾಸನದಲ್ಲಿ[೧೧೩] ಎರೆಯಂಗನ ಮಹಾರಾಜನ ಪಟ್ಟದರಸಿ ಮಹಾದೇವಿಯ ಅಧಿಕಾರಿಗಳಾದ ಕಾಡುವಿಟ್ಟಿಯು ಸೋಜಿದೆಯಬ್ಬೆಯು ರಾಮಾನ್ಮತದಿಂದ ನಳಂ ಸೇತುವೆಂ ಕಟ್ಟುವಂತೆ ರಾಣಿಯ ಆಜ್ಞೆಯಂತೆ ಕೆರೆ ಕಟ್ಟಿಸಿದರು ಎಂದಿದೆ. ಇಲ್ಲಿ ಸ್ತ್ರೀಯ ಹೆಸರು ಉಲ್ಲೇಖಗೊಂಡಿರುವುದು ವಿಶೇಷವಾಗಿದೆ. ಸೋಜಿದೆಯಬ್ಬೆಯು ಕೆರೆ ನಿರ್ಮಾಣದಲ್ಲಿ ಪರಿಣತಿ ಹೊಂದಿರುವಂತೆ ಕಂಡುಬರುತ್ತದೆ. ಕ್ರಿ.ಶ. ೧೨ನೆಯ ಶತಮಾನದ ಇನ್ನೊಂದು ಶಾಸನದಲ್ಲಿ[೧೧೪]ಕೆರೆ ನಿರ್ವಹಣೆಗೆ ಬಿತ್ತುವಟ್ಟುವಾಗಿ ಭೂಮಿ ನೀಡಿದ ಮಾಹಿತಿ ಇದೆ.

ಕಾಟಿಕೆರೆಯ ಏರಿಯು ಪೂರ್ವ ಪಶ್ಚಿಮಾಭಿಮುಖವಾಗಿ ೩೦೦ ಮೀ. ಉದ್ದ, ೩ ಮೀ. ಮೇಲ್ಭಾಗದ ಅಗಲ, ೧೫ ಅಡಿ ಹೊರಪಾರ್ಶ್ವದ ಇಳಿಜಾರಿನ ಎತ್ತರ ಹಾಗೂ ೧೨ ಅಡಿ ಒಳಪಾರ್ಶ್ವದ ಇಳಿಜಾರಿನ ಎತ್ತರ ಹೊಂದಿದೆ. ಏರಿಯಿಂದ ದಕ್ಷಿಣಕ್ಕೆ ಅಂಗಳವಿದೆ. ಉತ್ತರಕ್ಕೆ ಏರಿ ಇದೆ. ಕೆರೆಗೆ ತೂಬುಗಳಿಲ್ಲ. ಪಶ್ಚಿಮಕ್ಕೆ ಒಂದು ಕೋಡಿ ಇದೆ. ಕೆರೆಯು ಹಿಂದಿನಿಂದಲೂ ಮಳೆ ನೀರನ್ನೇ ಆಶ್ರಯಿಸಿದೆ. ದಕ್ಷಿಣದಿಕ್ಕಿನ ಹಳ್ಳಗಳ ನೀರು ಬಂದು ಸಂಗ್ರಹವಾಗುತ್ತದೆ. ಹೆಚ್ಚುವರಿ ನೀರು ತಿಮ್ಮನಾಯಕನ ಕೆರೆಗೆ ಹೋಗುತ್ತದೆ. ಕೆರೆಯ ನೀರನ್ನು ಬಳಸಿಕೊಂಡು ಯಾವುದೇ ಬೆಳೆ ಬೆಳೆಯುವುದಿಲ್ಲ. ಅಂತರ್ಜಲ ಮಟ್ಟ ಅಭಿವೃದ್ಧಿಗೆ, ದನಕರುಗಳು ಕುಡಿಯಲು, ಬಟ್ಟೆ ತೊಳೆಯಲು ಬಳಸುತ್ತಾರೆ. ಕೆರೆ ಏರಿಯಿಂದ ಪಶ್ಚಿಮಕ್ಕೆ ಸೋಮೇಶ್ವರ ದೇವಸ್ಥಾನವಿದೆ. ದಿನನಿತ್ಯ ಪೂಜೆ ನಡೆಯುತ್ತದೆ. ಪ್ರತಿ ತಿಂಗಳು ಅಮಾವಾಸ್ಯೆ ಕಟ್ಟಳೆ ಮಾಡುತ್ತಾರೆ. ಕೆರೆ ಚಿಕ್ಕದಾಗಿದ್ದರೂ ಅಂತರ್ಜಲ ಮಟ್ಟ ಸುಧಾರಣೆಗೆ ಸಹಾಯಕವಾಗಿದೆ.

ನಾಗರನವಿಲೆ ಕೆರೆ

ಬಾಗೂರು ಹೋಬಳಿಯಲ್ಲಿ ಬರುವ ಒಂದು ಗ್ರಾಮ ನಾಗರನವಿಲೆ. ಚನ್ನರಾಯಪಟ್ಟಣ ತಾಲೂಕಿನಿಂದ ಸುಮಾರು ೨೦ ಕಿ.ಮೀ. ದೂರದಲ್ಲಿದೆ. ಗ್ರಾಮಕ್ಕೆ 'ಉರಗಮಯೂರಪುರ' ಎಂದು ಹೆಸರಿದ್ದು, ನಂತರ ಹೊಯ್ಸಳ ಕಾಲದಲ್ಲಿ ನಾಗರನವಿಲೆ ಆಗಿದೆ ಎಂಬುದು ಅಲ್ಲಿನ ಜನಪದರ ಹೇಳಿಕೆ. ಈ ಗ್ರಾಮವು ದ್ವಾಪರಯುಗದಲ್ಲಿ ಪಾಂಡವರು ನೆಲೆಸಿದಂತಹ ನಾಡಾಗಿತ್ತು ಎಂಬ ಪ್ರತೀತಿ ಇದೆ. ಗ್ರಾಮಕ್ಕೆ ಸಂಬಂಧಿಸಿದಂತೆ ಒಂದು ಕಥೆ ಇದೆ. ನವಿಲೆ ಕೆರೆ ಏರಿ ಹಿಂಭಾಗದಲ್ಲಿ ನಾಗೇಶ್ವರ ದೇವಾಲಯವಿದೆ. ಜಮದಗ್ನಿಮುನಿಯು ಈ ಸ್ಥಳಕ್ಕೆ ಬಂದಾಗ ಹಾವು ಮತ್ತು ನವಿಲುಗಳಿದ್ದವು. ಸರ್ಪವು ನವಿಲುಗಳ ಕಾಟ ತಡೆಯದೆ ಜಮದಗ್ನಿ ಮುನಿಗಳ ಮೊರೆ ಹೋಯಿತು. ಜಮದಗ್ನಿ ಮುನಿಯು ಶಾಪವನ್ನು ಕೊಟ್ಟರು. ಅಂದಿನಿಂದ ನವಿಲುಗಳು ಕಾಣುತ್ತಿಲ್ಲವಂತೆ. ಮತ್ತೊಂದು ಹೇಳಿಕೆ ಪ್ರಕಾರ ನವಿಲು ಪ್ರಸವದಿಂದ ನರಳುತ್ತಿತಂತೆ. ಇದನ್ನು ಕಂಡ ಸರ್ಪವು ಎಡೆಯನ್ನು ಬಿಚ್ಚಿ ನೆರಳು ಮಾಡಿತು. ಸರ್ಪ ಮತ್ತು ನವಿಲುಗಳ ಮೈತ್ರಿಯನ್ನು ನೋಡಿದ ಜಮದಗ್ನಿ ಮುನಿಯು ಗ್ರಾಮಕ್ಕೆ ನಾಗರನವಿಲೆ ಎಂದು ಕರೆದರೆಂದು ಸ್ಥಳೀಯರು ತಿಳಿಸುತ್ತಾರೆ.

ಗ್ರಾಮದ ಪೂರ್ವಕ್ಕೆ ಕೆರೆ ಇದೆ. ಅದರ ನಿರ್ಮಾಣವು ಹೊಯ್ಸಳಕಾಲದಲ್ಲಿ ರಚನೆಯಾದಂತಿದೆ. ಕ್ರಿ.ಶ. ೧೨ನೆಯ ಶತಮಾನದ ಶಾಸನದಲ್ಲಿ[೧೧೫] ಮಹಾದೇವ ಪಂಡಿತ, ರುದ್ರಶಿವಪಂಡಿತರು ದೇವಾಲಯ ಮತ್ತು ಕೆರೆಯನ್ನು ಕಟ್ಟಿಸಿದುದರ ಮಾಹಿತಿ ಇದೆ. ಗ್ರಾಮದಲ್ಲಿ ನಾಗೇಶ್ವರ, ಸೋಮೇಶ್ವರ, ಬ್ರಹ್ಮಲಿಂಗೇಶ್ವರ, ಸಿದ್ಧೇಶ್ವರ ಎಂಬ ಐದು ಲಿಂಗಗಳಿವೆ.

ಕೆರೆಯ ಏರಿಯನ್ನ ಪೂರ್ವದಿಂದ ಪಶ್ಚಿಮದಿಕ್ಕಿಗೆ ಅಂಕುಡೊಂಕಾಗಿ ನಿರ್ಮಿಸಲಾಗಿದೆ. ಏರಿಯು ೧೨೯೦ ಮೀ. ಇದ್ದು, ೨ ಮೀ. ಅಗಲ ಮತ್ತು ೧೫ ಅಡಿ ಒಳಪಾರ್ಶ್ವದ ಎತ್ತರವನ್ನು

ಹೊಂದಿದೆ. ಕೆರೆಯ ಏರಿಯ ಮೇಲೆ ಓಡಾಡಲು ಸಾಧ್ಯವಿಲ್ಲದಷ್ಟು ಗಿಡಗಳು ಬೆಳೆದಿವೆ. ಏರಿಯ ಕೆಳಭಾಗದಲ್ಲಿ ತಿಪಟೂರಿನಿಂದ ಚನ್ನರಾಯಪಟ್ಟಣಕ್ಕೆ ವಾಹನಗಳು ಹೋಗುವಂತೆ ರಸ್ತೆ ನಿರ್ಮಿಸಲಾಗಿದೆ. ಕೆರೆಯು ಎರಡು ತೂಬು, ಒಂದು ಕೋಡಿಯನ್ನು ಹೊಂದಿದೆ. ಕೆರೆಗೆ ಇತ್ತೀಚಿನ ದಿನಗಳಲ್ಲಿ ಹೇಮಾವತಿ ನಾಲೆಯ ನೀರು ಬರುತ್ತಿದೆ. ಇದರ ಉಪಯೋಗವನ್ನು ಜನರು ಪಡೆದು ವಿವಿಧ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಅದರಲ್ಲಿ ಭತ್ತ ಪ್ರಮುಖವಾದುದಾಗಿದೆ. ಕೆರೆಯು ೯೨.೫೧ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದೆ. ೩೯.೨೦ ಹೆಕ್ಟೇರ್ ಜಲ ವಿಸ್ತೀರ್ಣವನ್ನು ಹೊಂದಿದ್ದು, ೧೧೮.೭೮ ಹೆಕ್ಟೇರ್ ಆಯಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯ ಮುಂಭಾಗದಲ್ಲಿ ಕೆಂಪಮ್ಮ ಮತ್ತು ಚಿಕ್ಕಮ್ಮನ ದೇವಸ್ಥಾನಗಳಿವೆ. ಏರಿಯ ಹಿಂಭಾಗದಲ್ಲಿ ನಾಗೇಶ್ವರ, ಪಾರ್ವತಮ್ಮ ಮತ್ತು ಸೋಮೇಶ್ವರ ದೇವಸ್ಥಾನಗಳಿವೆ. ಏರಿಯ ಮೇಲೆ ವೀರಮಹಾಸತಿಕಲ್ಲು ಇದೆ. ಅದನ್ನು ಮಾಸ್ತಮ್ಮ ಎಂದು ಕರೆಯುತ್ತಾರೆ. ಪ್ರಸ್ತುತ ದಿನಗಳಲ್ಲಿ ಕೆರೆಯ ನೀರು ಮೀನುಗಾರಿಕೆಗೆ, ಕೃಷಿಗೆ, ಧಾರ್ಮಿಕ ಆಚರಣೆಗಳಿಗೆ ಉಪಯುಕ್ತವಾಗುತ್ತಿದೆ.

ಕೋರವಂಗಲ ಕೆರೆ

ದುದ್ದದಿಂದ ಹಿರೇಕಡಲೂರು ಮಾರ್ಗವಾಗಿ ಕೋರವಂಗಲಕ್ಕೆ ಹೋಗಬಹುದು. ಹಾಸನದಿಂದ ೧೨ ಕಿ.ಮೀ. ಮತ್ತು ದುದ್ದದಿಂದ ೫ ಕಿ.ಮೀ. ಇದೆ. ಕೋರ+ಅಂಗಲ ಸೇರಿ ಕೋರವಂಗಲವಾಗಿದೆ. ಗ್ರಾಮದ ಸುತ್ತಲೂ ಬಂಡೆಯೇ ಆವರಿಸಿದೆ. ಇದರಿಂದ ಗ್ರಾಮಕ್ಕೆ ಕೋರವಂಗಲ ಎಂಬ ಹೆಸರು ಬಂದಿರುವುದಾಗಿ ಸ್ಥಳೀಯ ಜನಪದರು ತಿಳಿಸುತ್ತಾರೆ. ಇಂದಿಗೂ ಕೂಡ ಗ್ರಾಮದಲ್ಲಿ ಬೋರ್‌ವೆಲ್ ಹಾಕಿಸಿದರೆ ನೀರು ಬರುವುದಿಲ್ಲ. ಹಾಗಾಗಿ ಕೆರೆಯ ಆಯಕಟ್ಟು ಪ್ರದೇಶದಲ್ಲಿ ಬೋರ್‌ವೆಲ್ ಹಾಕಿಸಿ ಅಲ್ಲಿಂದ ಪೈಪ್‌ಗಳ ಮೂಲಕ ಗ್ರಾಮಕ್ಕೆ ನೀರನ್ನು ಪಡೆಯುತ್ತಿದ್ದಾರೆ. ಗ್ರಾಮದ ಉತ್ತರದಿಕ್ಕಿಗೆ ಕೆರೆ ಇದೆ. ಕೋರವಂಗಲದ ಕ್ರಿ.ಶ. ೧೨ನೆಯ ಶತಮಾನದ ಶಾಸನದಲ್ಲಿ[೧೧೬] ಹೆಗ್ಗಡತಿ ಮಾಕಣವ್ವೆ ಮಾಕಸಮುದ್ರ ಎಂಬ ಕೆರೆಯನ್ನು ಕಟ್ಟಿಸಿದಳೆಂದು ಉಲ್ಲೇಖವಾಗಿದೆ. ಈ ಮಾಕಸಮುದ್ರ ಕೆರೆಯೇ ಕೋರವಂಗಲದ ದೊಡ್ಡಕೆರೆ ಆಗಿರಬೇಕು.

ಕೆರೆಯ ಏರಿಯು ಉತ್ತರದಿಂದ ದಕ್ಷಿಣಾಭಿಮುಖವಾಗಿ ಅರ್ಧಭಾಗವಿದ್ದು, ಮುಂದೆ ಹೋದಂತೆ ಪೂರ್ವದಿಕ್ಕಿನ ಕಡೆಗೆ ಹೋಗಿದೆ. ಏರಿಯು ಸುಮಾರು ೭೫೦ ಮೀ. ಉದ್ದ, ೫ ಮೀ. ಅಗಲ ಮತ್ತು ೧೦ ಅಡಿಗಳಷ್ಟು ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಯ ಮೇಲೆ ಜನ, ದನ ಹಾಗೂ ವಾಹನಗಳು ಓಡಾಡುವಷ್ಟು ಜಾಗವಿದೆ. ಕೆರೆಯು ಎರಡು ತೂಬು ಮತ್ತು ಎರಡು ಕೋಡಿಯನ್ನು ಹೊಂದಿದೆ. ಏರಿಯಿಂದ ಸುಮಾರು ೫ ಅಡಿ ದೂರದಲ್ಲಿ ೨ ಹೊಸ ತೂಬುಗಳನ್ನು ಇರಿಸಲಾಗಿದೆ. ಈ ತೂಬುಗಳನ್ನು ತಲುಪಲು ಕಲ್ಲಿನ ಸೇತುವೆಗಳನ್ನು ನಿರ್ಮಿಸಲಾಗಿದೆ. ದಕ್ಷಿಣಭಾಗದ ತೂಬಿನ ಮುಂಭಾಗದಲ್ಲಿ ಏರಿಯಿಂದ ೧೦ ಅಡಿ ದೂರದಲ್ಲಿ ಒಂದು ಹಳೆಯ ತೂಬು ಇದ್ದು

ಈಗ ನಿರ್ವಹಣೆಯಲ್ಲಿಲ್ಲ. ಈ ತೂಬಿನ ಸುತ್ತಲೂ ಇಟ್ಟಿಗೆಯಿಂದ ಕಟ್ಟಿದ ತೊಟ್ಟಿಯ ಅವಶೇಷಗಳಿವೆ. ತೂಬಿನ ನಿರ್ವಹಣೆಯನ್ನು ನೀರ್ಗಂಟಿಗಳು ನೋಡಿಕೊಳ್ಳುತ್ತಿದ್ದಾರೆ. ಇವರಿಗೆ ನಾಲ್ಕು ಎಕರೆ ಜಮೀನನ್ನು ಬಿಡಲಾಗಿದೆ. ಇಂದಿರಾಗಾಂಧಿ ಆಳ್ವಿಕೆಯ ಕಾಲದಲ್ಲಿ ಉಳುವವನೇ ಭೂಮಿಯ ಒಡೆಯ ಎಂದು ಬಂದಾಗ ಸ್ವಂತ ಮಾಡಿಕೊಂಡಿದ್ದಾರೆ.

ಕೆರೆಯ ಮುಂಭಾಗದಲ್ಲಿ ಹೊಯ್ಸಳ ಕಾಲದ ಭೈರವೇಶ್ವರ ಸೂರ್ಯನಾರಾಯಣ ಮತ್ತು ಬುಚೇಶ್ವರ ದೇವಾಲಯಗಳಿವೆ. ಹಾಗೆಯೇ ಏರಿಯ ಹಿಂಬದಿಯಲ್ಲಿ ನಾಗೇಶ್ವರ, ಮತ್ತು ಗೋವಿಂದೇಶ್ವರ ದೇವಾಲಯಗಳಿದ್ದು, ಒಳಭಾಗದಲ್ಲಿ ಮೂರ್ತಿಗಳಿಲ್ಲ. ಈ ದೇವಾಲಯಗಳು ಹಾಳು ಬಿದ್ದಿವೆ. ಇತ್ತೀಚೆಗೆ ಪ್ರಾಚ್ಯ ವಸ್ತು ಸಂಗ್ರಹಾಲಯಗಳಿಂದ ರಕ್ಷಣೆಯನ್ನು ಪಡೆದಿವೆ. ಹೀಗೆ ಕೆರೆಯ ಸಮೀಪ ಐತಿಹಾಸಿಕ ದೇವಾಲಯಗಳು ಇವೆ. ನೀರಾವರಿ ಇಲಾಖೆಯವರು ಕೆರೆಯ ಸುತ್ತ ಉದ್ಯಾನವನ್ನು ನಿರ್ಮಿಸಿದರೆ, ಕೆರೆಯು ಕೃಷಿಗೆ ಮಾತ್ರ ಬಳಕೆಯಾಗದೆ ಪ್ರವಾಸಿಗರಿಗೆ ವಿಶ್ರಾಂತಿ ತಾಣವಾಗುತ್ತದೆ ಎನ್ನುವುದು ನನ್ನ ಆಶಯ.

ಸಂತೆಶಿವರ ಕೆರೆ

ಚನ್ನರಾಯಪಟ್ಟಣ ತಾಲೂಕಿನಲ್ಲಿ ಬರುವ ಸಂತೆಶಿವರ ಗ್ರಾಮವನ್ನು ಮೊದಲು 'ಗಂಧಕಪುರ'ವೆಂದು ಕರೆಯುತ್ತಿದ್ದು, ನಂತರ ಗ್ರಾಮದಲ್ಲಿ ಸೋಮವಾರ ಸಂತೆ ನಡೆಯುತ್ತಿದ್ದರಿಂದ ಸಂತೆಶಿವರ ಎಂಬ ಹೆಸರು ಬಂತು ಎಂಬುದು ಸ್ಥಳೀಯರ ಹೇಳಿಕೆ. ಪ್ರಸ್ತುತ ದಿನಗಳಲ್ಲಿ ಸಂತೆ ನಡೆಯುತ್ತಿಲ್ಲ. ಕ್ರಿ.ಶ. ೧೨೩೬ರ ಶಾಸನದಲ್ಲಿ ಶಿವರ ಎಂಬುದಾಗಿ ಉಲ್ಲೇಖಿತವಾಗಿದೆ. ಈ ಗ್ರಾಮದ ಪೂರ್ವದಿಕ್ಕಿಗೆ ಕೆರೆ ಇದೆ. ಇಲ್ಲಿನ ೧೨ನೆಯ ಶತಮಾನದ ಶಾಸನದಲ್ಲಿ[೧೧೭] ಬಾಚರಸ ಹೊಸಕೆರೆಯನ್ನು ನಿರ್ಮಿಸಿರುವುದರ ಉಲ್ಲೇಖವಿದೆ. ಮತ್ತೊಂದು ಶಾಸನವು ನಾರಣಮಯ್ಯ ಮತ್ತು ಮುನಿಯಗಾವುಂಡ ಸೇರಿದಂತೆ ಗಂಡಸಿಯ ಎಲ್ಲಾ ಪ್ರಜೆಗಳು ದೊಡ್ಡ ಕೆರೆಯಿಂದ ಸಾಗುವಳಿಯಾಗುವ ಒಂದು ಖಂಡುಗ ಭೂಮಿಗೆ, ಒಂದು ಖಂಡುಗ 'ಬಿತ್ತುವಟ್ಟ' ದರ ನಿಗದಿ ಮಾಡಿರುವುದನ್ನು ತಿಳಿಸುತ್ತದೆ. ಇದರ ಕಾಲವು ೧೨ನೆಯ ಶತಮಾನವನ್ನು ಸೂಚಿಸುತ್ತದೆ.[೧೧೮] ಕೆರೆಯು ಹಿಂದಿನಿಂದಲೂ ಮಳೆ ನೀರನ್ನು ಅವಲಂಬಿಸಿದೆ. ಕೆರೆಯ ಏರಿಯ ಹಿಂಭಾಗದಲ್ಲಿ ಹೊಯ್ಸಳ ಕಾಲದ ಗಂಗೇಶ್ವರ ದೇವಸ್ಥಾನವಿದ್ದು, ಪಕ್ಕದಲ್ಲಿ ಮಜ್ಜನಬಾವಿ ಮತ್ತು ಶಾಸನ, ವೀರಗಲ್ಲುಗಳಿವೆ. ಹಾಗೆಯೇ ಕೆರೆ ಅಂಗಳದಲ್ಲಿ ಹೊಯ್ಸಳ ಕಾಲಕ್ಕೆ ಸಂಬಂಧಿಸಿದ ಮಲ್ಲೇಶ್ವರ ದೇವಸ್ಥಾನವಿದೆ. ಏರಿಯ ಮೇಲೆ ಬ್ರಹ್ಮದೇವರ ಒಂದು ಚಿಕ್ಕಗುಡಿ ಇದೆ. ಕೆರೆಯು ಒಂದು ತೂಬು ಒಂದು ಕೋಡಿಯನ್ನು ಹೊಂದಿದ್ದು, ೩೭.೩೧ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದೆ. ಕೆರೆಯ ನೀರು ಹಿಂದಿನಿಂದಲೂ ಕೃಷಿ ಮೂಲಗಳಿಗೂ ಬಳಕೆಯಾಗುತ್ತಿದೆ.

ಜನಿವಾರ ಅಮಾನಿಕೆರೆ

ಈ ಕೆರೆ ಚನ್ನರಾಯಪಟ್ಟಣದಿಂದ ಶ್ರವಣಬೆಳಗೊಳಕ್ಕೆ ಹೋಗುವ ಮಾರ್ಗದಲ್ಲಿ ಬರುತ್ತದೆ. ಚನ್ನರಾಯಪಟ್ಟಣದಿಂದ ೨.೫ ಕಿ.ಮೀ. ಶ್ರವಣಬೆಳಗೊಳದಿದ ೭.೫ ಕಿ.ಮೀ. ಇದೆ. ಹೊಯ್ಸಳ ಕಾಲದ ಕ್ರಿ.ಶ. ೧೨ನೆಯ ಶತಮಾನದ ಶಾಸನದಲ್ಲಿ[೧೯] ಜನಿವಾರ ಗ್ರಾಮವು ಜನ್ನವಾರ ಎಂದು ಉಲ್ಲೇಖವಾಗಿದೆ. ಈ ಗ್ರಾಮದಲ್ಲಿರುವ ಅಮಾನಿಕೆರೆ ಹೊಯ್ಸಳ ಬಲ್ಲಾಳ ಕಾಲದಲ್ಲಿಯೇ ನಿರ್ಮಾಣವಾದಂತೆ ಕಂಡುಬರುತ್ತದೆ. ಏರಿಯು ಉತ್ತರ ದಕ್ಷಿಣಾಭಿಮುಖವಾಗಿದ್ದು, ಅದರ ಮೇಲೆ ಚನ್ನರಾಯಪಟ್ಟಣದಿಂದ ಶ್ರವಣಬೆಳಗೊಳಕ್ಕೆ ವಾಹನಗಳು ಚಲಿಸಲು ರಸ್ತೆ ನಿರ್ಮಿಸಲಾಗಿದೆ. ಏರಿಗೆ ಹೊಂದಿಕೊಂಡಂತೆ ೩ ತೂಬುಗಳಿವೆ. ಇವುಗಳಿಗೆ ಮರದ ದಿಮ್ಮಿಗೆ ಬದಲು ಕಬ್ಬಿಣದ ಬಾಗಿಲುಗಳನ್ನು ಅಳವಡಿಸಲಾಗಿದೆ. ತೂಬುಗಳ ನಿರ್ವಹಣೆಯನ್ನು ನೋಡಿಕೊಳ್ಳಲು ಇಲಾಖೆಯವರು ನೀರ್ಗಂಟಿಗಳನ್ನು ನೇಮಿಸಿ ಸರ್ಕಾರದಿಂದ ವೇತನವನ್ನು ಪಡೆಯುವಂತೆ ಮಾಡಿದ್ದಾರೆ. ಈ ಕೆರೆಗೆ ಬೇಡಿಗನಹಳ್ಳಿ ಕೆರೆಯಿಂದ ನೀರು ಬಂದು ಸಂಗ್ರಹವಾಗುತ್ತದೆ. ಈ ಕೆರೆಯ ನೀರು ತುಂಬಿ ಬಿಸ್ಲಳ್ಳಿ ಕೆರೆಗೆ ಹೋಗುತ್ತದೆ. ಕೆರೆಯ ನೀರು ಭತ್ತ ಮತ್ತು ಕಬ್ಬಿನ ಬೆಳೆಗೆ ಉಪಯುಕ್ತವಾಗುತ್ತಿದೆ. ವಾರ್ಷಿಕವಾಗಿ ಭತ್ತದ ಎರಡು ಬೆಳೆ ತೆಗೆಯುತ್ತಾರೆ.

ಕೆರೆಯು ೧೪೩.೦೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೧೩೨.೪೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಎರಡು ಬದಿಯಲ್ಲಿ ಕೋಡಿಗಳಿವೆ. ಉತ್ತರದಿಕ್ಕಿನ ಏರಿಯ ಅಚ್ಚುಕಟ್ಟು ಪ್ರದೇಶದಲ್ಲಿ ಈಶ್ವರ ದೇವಾಲಯವಿದೆ. ಏರಿ ಮಧ್ಯದಲ್ಲಿ ಮಾರಮ್ಮ ದೇವಸ್ಥಾನವಿದ್ದು, ಶುಕ್ರವಾರ ಮತ್ತು ಮಂಗಳವಾರ ಕುರಿ-ಕೋಳಿಗಳನ್ನು ಬಲಿ ಕೊಟ್ಟು ಪೂಜೆ ಮಾಡುತ್ತಾರೆ. ಏರಿ ಒಡೆಯದಂತಿರಲಿ ಮತ್ತು ಗ್ರಾಮಕ್ಕೆ ಒಳ್ಳೆಯದಾಗಲೆಂದು ಗ್ರಾಮಸ್ಥರು ವರ್ಷಕ್ಕೊಮ್ಮೆ ಹಬ್ಬ ಮಾಡಿ ನೈವೇದ್ಯ ಮಾಡಿಕೊಂಡು ಹೋಗುತ್ತಾರೆ. ಕೆರೆಯು ಕೃಷಿ, ಪ್ರಾಣಿ, ಪಕ್ಷಿ ಮತ್ತು ಮೀನುಗಾರಿಕೆಗೆ ಬಳಕೆಯಾಗುತ್ತಿದೆ. ೨೦೧೩-೧೪ರಲ್ಲಿ ೧೧.೮೨೪ಕ್ಕೆ ವಿಲೇವಾರಿ ನಡೆದಿದೆ.

ಬೆಳಗುಂಬ ಕೆರೆ

ತಿಪಟೂರಿನಿಂದ ಅರಸೀಕೆರೆ ಮಾರ್ಗದಲ್ಲಿ ತೆರಳುವಾಗ ಬೆಳಗುಂಬ ಗ್ರಾಮ ಸಿಗುತ್ತದೆ. ಅರಸೀಕೆರೆಯಿಂದ ಸುಮಾರು ೮ ಕಿ.ಮೀ. ದೂರದಲ್ಲಿದೆ. ಈ ಊರಿನ ಜನರು ಹಿಂದೆ ಬೆಳ್ಳಿಕುಂಭದಲ್ಲಿ ಮೊಸರು ಮಾಡಿ ಮಾರಾಟ ಮಾಡುತ್ತಿದ್ದರಂತೆ. ಅದರಿಂದ ಗ್ರಾಮಕ್ಕೆ ಬೆಳ್ಳಿಕುಂಭ ಎಂಬ ಹೆಸರು ಇದ್ದು, ಅನಂತರ ಬೆಳಗುಂಬ ಆಗಿದೆ ಎನ್ನುತ್ತಾರೆ. ಬಹುಶಃ ಮೊಸರು ಬೆಳ್ಳಗೆ ಇದ್ದ ಕಾರಣ ಕುಂಭದಲ್ಲಿ ಅದನ್ನು ಮಾರಾಟ ಮಾಡುತ್ತಿದ್ದರಿಂದ ಬೆಳ್ಳಿಕುಂಭ ಹೋಗಿ ಬೆಳಗುಂಬ ಆಗಿರಬೇಕು. ಶಾಸನಗಳಲ್ಲಿ 'ಬೆಳಗುಂಬ' ಎಂಬ ಉಲ್ಲೇಖವಿದೆ. ಈ ಊರಿನ ದೇವಾಲಯಗಳ ನಿರ್ಮಾಣದೊಂದಿಗೆ

ಕೆರೆಯನ್ನು ನಿರ್ಮಿಸಿರುವ ಸಾಧ್ಯತೆಯನ್ನು ತಿಳಿಸುತ್ತದೆ. ಹೊಯ್ಸಳ ವೀರಬಲ್ಲಾಳನ ಆಳ್ವಿಕೆಯ ಅವಧಿಯಲ್ಲಿ ಬೆಳಗುಂಬದ ಮಹಾಪ್ರಭುಗಳಾದ ನಾಗಗಾವುಂಡ ಪುತ್ರ ಬ್ರಹ್ಮಗಾವುಂಡ ಆತನ ಮಗ ಮಾಳಗಾವುಂಡ ಮತ್ತು ಇತರರು ಕೆರೆಗಳನ್ನು ಕಟ್ಟಿ ದೇವಾಲಯಗಳನ್ನು ಕೆತ್ತಿಸಿದ ಮಾಹಿತಿ ಸಿಗುತ್ತದೆ.[೧೨೦]

ಗ್ರಾಮದ ಉತ್ತರಕ್ಕೆ ಬೆಳಗುಂಬ ಕೆರೆ ಇದೆ. ಏರಿಯು ಪೂರ್ವ ಪಶ್ಚಿಮಾಭಿಮುಖವಾಗಿ ಅಂಕುಡೊಂಕಾಗಿ ಮುಂದುವರಿದಿದೆ. ಏರಿಯ ಉದ್ದ ಸುಮಾರು ೧೧೧೭ ಮೀ., ಮೇಲ್ಭಾಗದ ಅಗಲ ೩ ಮೀ. ಇದೆ. ಏರಿಗೆ ಅಳವಡಿಸಿದಂತೆ ಎರಡು ತೂಬುಗಳಿವೆ. ಅವುಗಳಿಗೆ ಅನುಸಾರವಾಗಿ ಏರಿಯ ಹೊರಭಾಗದ ಇಳಿಜಾರಿನಲ್ಲಿ ಕಾಲುವೆಗಳನ್ನು ಮಾಡಲಾಗಿದೆ. ಮೊದಲನೇ ಕಾಲುವೆಯ ಉದ್ದ ೭೫೦ ಮೀ. ಎರಡನೇ ಕಾಲುವೆಯ ಉದ್ದ ೪೦೦ ಮೀ. ಇದೆ. ಅವುಗಳ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ.

ಕೆರೆಯು ೦.೦೧೩೦ ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಸಂಗ್ರಹಿಸುವ ಸಾಮಾರ್ಥ್ಯ ಹೊಂದಿದ್ದು, ೩೬.೦ ಹೆಕ್ಟೇರ್ ಆಯಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯ ಪಶ್ಚಿಮದಿಕ್ಕಿನಲ್ಲಿ ೨೫ ಮೀ. ಉದ್ದದ ಕೋಡಿ ಇದೆ. ಗ್ರಾಮಸ್ಥರು ಕೆರೆ ತುಂಬಿದಾಗ ಗಂಗಮ್ಮನ ಪೂಜೆ ಮಾಡಿ ಕುರಿಯನ್ನು ಬಲಿ ಕೊಟ್ಟು ತೂಬನ್ನು ಎತ್ತುತ್ತಾರೆ. ಕೆರೆಯನ್ನು ನೀರಾವರಿ ಇಲಾಖೆಯವರು ೨೦೦೬–೦೭ರಲ್ಲಿ ಕಾಮಗಾರಿ ಮಾಡಿದ್ದಾರೆ. ಈ ದಿನಗಳಲ್ಲಿ ಹೂಳು ತುಂಬಿ ಕೆರೆ ಅಂಗಳದಲ್ಲಿ ಜಾಲಿಗಿಡಗಳು ಬೆಳೆದಿವೆ. ಹಾಗೆಯೇ ಏರಿಯ ಮೇಲೆ ಓಡಾಡಲು ಸಾಧ್ಯವಾಗದಷ್ಟು ಪೊದರುಗಿಡಗಳಿಂದ ಕೂಡಿದೆ. ಕೆರೆ ಮುಂಭಾಗದಲ್ಲಿ ಒಂದು ವೀರಗಲ್ಲು ಇದೆ. ಅದನ್ನು ರಾಮಲಿಂಗೇಶ್ವರ ಎಂಬ ಹೆಸರಿನಿಂದ ಪೂಜಿಸುತ್ತಾರೆ. ದಕ್ಷಿಣಕ್ಕೆ ಉಡುಸಲಮ್ಮ ದೇವಸ್ಥಾನವಿದೆ. ಕೆರೆ ಅಂಗಳದಲ್ಲಿನ ಬಂಡೆಯ ಮೇಲೆ ಮೈಲಾರಲಿಂಗ ದೇವಾಲಯವಿದೆ. ಇದನ್ನು ವರ್ಷಕ್ಕೊಮ್ಮೆ ಪೂಜಿಸುತ್ತಾರೆ.

ಉದೇವಾರ ಕೆರೆ

ಬೆಳಗೋಡು ಹೋಬಳಿಯಲ್ಲಿ ಬರುವ ಒಂದು ಗ್ರಾಮ ಉದೇವಾರ. ಸಕಲೇಶಪುರ ಪಟ್ಟಣದಿಂದ ೧೫ ಕಿ.ಮೀ. ಅಂತರದಲ್ಲಿದೆ. ಗ್ರಾಮದಲ್ಲಿ ಊರಬಾಗಿಲು ಮತ್ತು ದೇವಿರಮ್ಮ ಕೆರೆ ಎಂಬ ಎರಡು ಕೆರೆಗಳಿವೆ. ಗ್ರಾಮದ ಈಶಾನ್ಯದಿಕ್ಕಿಗೆ ಊರಬಾಗಿಲಲ್ಲಿ ಕೆರೆ ಇರುವುದರಿಂದ ಊರಬಾಗಿಲ ಕೆರೆ ಎಂದು ಕರೆಯುತ್ತಾರೆ. ಈ ಕೆರೆಯ ಏರಿಯು ಪೂರ್ವದಿಂದ ಪಶ್ಚಿಮಾಭಿಮವಾಗಿದೆ. ಏರಿಯ ಮೇಲೆ ಓಡಾಡಲು ಸಾಧ್ಯವಾಗದಷ್ಟು ಗಿಡಗಳು ಬೆಳೆದಿವೆ. ಏರಿಯು ೫೦.೦೦ ಮೀ. ಉದ್ದ ೨ ಮೀ. ಅಗಲ ಮತ್ತು ೩ ಮೀ. ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಗೆ ಹೊಂದಿಕೊಂಡಂತೆ ಕೆರೆಯ ಪಶ್ಚಿಮದಿಕ್ಕಿಗೆ ಒಂದು ತೂಬನ್ನು ಏರಿಗೆ ಅಳವಡಿಸಲಾಗಿದೆ. ಈ ದಿನಗಳಲ್ಲಿ ತೂಬು ಹಾಳಾಗಿದ್ದು, ತೂಬಿಗೆ ಕಬ್ಬಿಣದ ಸಲಾಕೆಗೆ ಬದಲು ಮರವನ್ನು ಇರಿಸಿದ್ದಾರೆ. ಕೆರೆಯ ಅಚ್ಚುಕಟ್ಟು ಪ್ರದೇಶದ ಜಮೀನು ಹೆಚ್ಚಾಗಿ ಲಿಂಗಾಯತ ಜನಾಂಗಕ್ಕೆ ಸೇರಿದೆ.

ಕೆರೆಯು ಹಿಂದಿನಿಂದ ಮಳೆ ನೀರನ್ನು ಹೊಂದಿದ್ದು, ೦.೪೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೮.೩೩ ಎಂ.ಸಿ.ಎಫ್.ಟಿ.ರಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದ್ದು, ೪೦.೪೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಕೆರೆಯ ದಕ್ಷಿಣದಿಕ್ಕಿಗೆ ಕೋಡಿಯನ್ನು ಇರಿಸಲಾಗಿದೆ. ಇದರ ಮೂಲಕ ಹೇಮಾವತಿ ಹಳ್ಳಕ್ಕೆ ಹೋಗುತ್ತದೆ. ಈ ಪ್ರದೇಶವು ಮಲೆನಾಡು ಪ್ರದೇಶವಾಗಿರುವುದರಿಂದ ಕೆರೆಯಲ್ಲಿ ಹೂಳು ತುಂಬಿ ಜಂಡುಹುಲ್ಲಿನಿಂದ ತುಂಬಿದೆ. ಅಲ್ಲದೆ ಕೆರೆಯು ಸಾಕಷ್ಟು ಒತ್ತುವರಿಯಾಗಿದೆ. ಹೀಗೆಯೇ ಮುಂದುವರಿದರೆ ಕೆರೆ ಅಂಗಳವು ಸ್ವಲ್ಪ ವರ್ಷಗಳಲ್ಲಿ ಮುಚ್ಚಿ ಹೋಗಿ ಕಾಫಿ ಎಸ್ಟೇಟ್‌ಗಳಾಗಿ ಪರಿವರ್ತನೆಗಳಾಗುತ್ತದೆ. ಕೆರೆಯ ಹಿಂಭಾಗದಲ್ಲಿ ಕಾಫಿ ಎಸ್ಟೇಟ್‌ಗಳು ಇರುವುದರಿಂದ ಕೆರೆಯು ಇದ್ದರೂ ಇಲ್ಲದಂತಾಗಿದೆ. ಇದರ ಉಪಯೋಗವನ್ನು ಅಲ್ಲಿನ ಜನರು ಅಷ್ಟಾಗಿ ಪಡೆದುಕೊಳ್ಳುತ್ತಿಲ್ಲ. ಅದೇ ರೀತಿ ಗ್ರಾಮದ ಪೂರ್ವಕ್ಕೆ ದೇವಿರಮ್ಮ ಎಂಬ ಮತ್ತೊಂದು ಕೆರೆ ಇದೆ. ಇದನ್ನು ಸ್ಥಳೀಯರು ದೇವಿಕೆರೆ ಎಂದು ಗುರುತಿಸುತ್ತಾರೆ. ಏಕೆಂದರೆ ಕೆರೆಯ ಸಮೀಪ ದೇವಿರಮ್ಮ ಎಂಬ ಹೆಸರಿನ ದೇವಾಲಯವಿದೆ. ಇದು ವಿಜಯನಗರ ಮತ್ತು ಹೊಯ್ಸಳ ಶೈಲಿಯಲ್ಲಿ ರಚನೆಯಾದಂತಿದೆ.

ಕೆರೆಯ ಏರಿಯು ದಕ್ಷಿಣದಿಂದ ಉತ್ತರಾಭಿಮುಖವಾಗಿ ಅರ್ಧಭಾಗವಿದ್ದು, ಕೊನೆಯ ಭಾಗವು ಪಶ್ಚಿಮದಿಕ್ಕಿಗೆ ಮುಂದುವರಿದಿದೆ. ಏರಿಯು ಸುಮಾರು ೩೦೦ ಮೀ. ಉದ್ದ ಮತ್ತು ೩ ಮೀ. ಅಗಲವನ್ನು ಹೊಂದಿದೆ. ಏರಿಗೆ ಅಳವಡಿಸಿದಂತೆ ಎರಡು ತೂಬುಗಳಿವೆ. ಅವುಗಳಿಗೆ ಹೊಂದಿಕೊಂಡಂತೆ ಏರಿಯ ಹಿಂಭಾಗದಲ್ಲಿ ಕಾಲುವೆಗಳನ್ನು ಜೋಡಿಸಲಾಗಿದೆ. ಕಾಲುವೆಗಳ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಭತ್ತವನ್ನು ಬೆಳೆಯುತ್ತಾರೆ. ಕೆರೆಯ ಹೆಚ್ಚುವರಿ ನೀರು ಕೋಡಿಯ ಮೂಲಕ ಹೊರಹೋಗುತ್ತದೆ. ಈ ಕೋಡಿಯ ಸಮೀಪ ಒಂದು ಶಾಸನ ಕಲ್ಲು ಇದೆ. ಅದರ ಲಿಪಿಗಳು ಮಳೆ, ಗಾಳಿ, ಬಿಸಿಲಿಗೆ ಅಳಿಸಿಹೋಗಿವೆ. ಕೆರೆಯು ಒತ್ತುವರಿಯಾಗಿದ್ದು, ಇತ್ತೀಚಿನ ದಿನಗಳಲ್ಲಿ ಸಣ್ಣ ನೀರಾವರಿ ಇಲಾಖೆಯು ಕೆರೆಯ ಕಾಮಗಾರಿಯನ್ನು ಮಾಡಿದೆ. ಕೆರೆಯು ಧಾರ್ಮಿಕ ಮತ್ತು ಕೃಷಿಗೆ ಉಪಯುಕ್ತವಾಗುತ್ತಿದೆ.

ಕೆಳಗಲೆ ಕೆರೆ

ಕೆಳಗಲೆ ಗ್ರಾಮವು ಸಕಲೇಶಪುರದಿಂದ ೮ ಕಿ.ಮೀ. ದೂರದಲ್ಲಿದೆ. ಗ್ರಾಮದ ಪಶ್ಚಿಮಕ್ಕೆ ಕೆಳಗಲೆ ನಾಗಪ್ಪನ ಕೆರೆ ಇದೆ. ಏರಿಯು ಪೂರ್ವದಿಂದ ಪಶ್ಚಿಮಾಭಿಮುಖವಾಗಿದ್ದು, ೧೮೦ ಮೀ. ಉದ್ದ ೩ ಮೀ. ಅಗಲ ಮತ್ತು ೧೦ ಅಡಿ ಎತ್ತರವನ್ನು ಹೊಂದಿದೆ. ಕೆರೆಯ ಪಶ್ಚಿಮದ ಕಡೆ ಏರಿಗೆ ಒಂದು ತೂಬನ್ನು ಅಳವಡಿಸಲಾಗಿದೆ. ಈ ತೂಬಿಗೆ ಕೆಳಗಡೆಯಿಂದ ಮೇಲ್ಮುಖವಾಗಿ ವಿವಿಧ ಅಂತರದಲ್ಲಿ ನೀರು ಆಯಕಟ್ಟು ಪ್ರದೇಶಕ್ಕೆ ಹೋಗುವಂತೆ ರಂಧ್ರಗಳನ್ನು ಮಾಡಲಾಗಿದೆ. ನೀರಿನ ಪ್ರಮಾಣಕ್ಕೆ ಅನುಗುಣವಾಗಿ ಮರಳುಮೂಟೆ ಹಾಕಿ ತೂಬನ್ನು ಮುಚ್ಚುತ್ತಿದ್ದರು. ತೂಬಿನ

ನಿರ್ವಹಣೆಯನ್ನು ಮಾಡಲು ನೀರ್ಗಂಟಿಗಳು ಇಲ್ಲದೆ ಗ್ರಾಮದ ಜನರೆ ನೋಡಿಕೊಳ್ಳುತ್ತಿದ್ದರು. ಕೆರೆಯ ಹೆಚ್ಚುವರಿ ನೀರು ಹೊರ ಹೋಗಲು ಕೆರೆಯ ಪೂರ್ವದಿಕ್ಕಿಗೆ ೨೫ ಮೀ. ಉದ್ದದ ಕೋಡಿಯನ್ನು ನಿರ್ಮಿಸಲಾಗಿದೆ. ಈ ಕೋಡಿಗೆ ೨.೫ ಅಡಿ ವೃತ್ತಾಕಾರದ ರಂಧ್ರವನ್ನು ಮಾಡಿ ಅದರ ಮೂಲಕ ಹೆಚ್ಚುವರಿ ನೀರು ಹೊರಹೋಗುವಂತೆ ಮಾಡಲಾಗಿದೆ. ಕೆರೆಯು ಮಳೆ ನೀರನ್ನು ಮಾತ್ರ ಹೊಂದಿದ್ದು, ೦.೫೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೧೦.೨೯ ಎಂ.ಸಿ.ಎಫ್.ಟಿಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದೆ. ಇದರಿಂದ ೫೦.೦೦ ಹೆಕ್ಟೇರ್ ಆಯಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯ ಅಚ್ಚುಕಟ್ಟು ಪ್ರದೇಶದ ಜಮೀನು ಹೆಚ್ಚಾಗಿ ಒಕ್ಕಲಿಗ ಜನರಿಗೆ ಸೇರಿದ್ದು, ಕೆರೆಯಲ್ಲಿ ನೀರು ಇದ್ದಾಗ ಭತ್ತದ ಎರಡು ಬೆಳೆ ತೆಗೆಯುತ್ತಾರೆ. ಕೆರೆಯ ಉತ್ತರದಿಕ್ಕಿಗೆ ಮಾಕಳಮ್ಮ ದೇವಸ್ಥಾನವಿದೆ. ಇದರಿಂದಾಗಿ ಕೆರೆಗೆ ದೇವಿಕೆರೆ ಎಂತಲೂ ಕರೆಯುತ್ತಾರೆ. ಡಿಸೆಂಬರ್ ತಿಂಗಳ ಕೊನೆಯ ಭಾನುವಾರ ಜಾತ್ರೆ ನಡೆಯುತ್ತದೆ. ಈ ಸಂದರ್ಭದಲ್ಲಿ ಮಾಕಳಮ್ಮ ದೇವರು ಕೆರೆಗೆ ಗಂಗಾಸ್ನಾನಕ್ಕೆ ಹೋಗುತ್ತದೆ. ಕೆರೆಯ ನೀರು ಪವಿತ್ರವಾದುದು ಎಂಬ ಭಾವನೆ ಸ್ಥಳೀಯರಲ್ಲಿದೆ. ಹಾಗಾಗಿ ಯಾರು ಕೂಡ ಚಪ್ಪಲಿ ಹಾಕಿಕೊಂಡು ಹೋಗುವುದಾಗಲಿ, ಕಾಲನ್ನು ನೀರಿನಲ್ಲಿ ತೊಳೆಯುವುದಾಗಲಿ ಮಾಡುವುದಿಲ್ಲ. ಕೆರೆಯ ಮುಂಭಾಗದ ಆಯಕಟ್ಟು ಪ್ರದೇಶದಲ್ಲಿ ೭ ವೀರ ಮಹಾಸತಿಗಲ್ಲುಗಳಿವೆ. ಅದರಲ್ಲಿ ಐದು ವೀರಗಲ್ಲುಗಳಲ್ಲಿ ಕತ್ತಿ ಗುರಾಣಿಯನ್ನು ಹಿಡಿದಿರುವಂತೆ ಮತ್ತು ಪಕ್ಕದಲ್ಲಿರುವ ಮಹಾಸತಿಯ ತನ್ನ ಎರಡು ಕೈಗಳನ್ನು ಮೇಲಕ್ಕೆ ಎತ್ತಿರುವಂತೆ ಚಿತ್ರಿಸಲಾಗಿದೆ. ಮತ್ತೆರಡು ವೀರಗಲ್ಲುಗಳಲ್ಲಿ ಮಹಾಸತಿಯ ಜೊತೆ ವೀರ ಬಿಲ್ಲು ಬಾಣವನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಈ ವೀರ ಮಹಾಸತಿಗಲ್ಲುಗಳು ಊರಿನ ಒಳಿತಿಗಾಗಿ ಹೋರಾಡಿ ಮಡಿದ ವೀರನ ಜೊತೆ ಸತಿಯು ಮರಣ ಹೊಂದಿದ ನೆನಪಿಗಾಗಿ ಹಾಕಿಸಿದ ಕಲ್ಲುಗಳಿರಬೇಕು.

ಅಣತಿ ಕೆರೆ

ಬಾಗೂರು ಹೋಬಳಿಯಲ್ಲಿ ಬರುವ ಒಂದು ಗ್ರಾಮ ಅಣತಿ. ಚನ್ನರಾಯಪಟ್ಟಣದಿಂದ ಸುಮಾರು ೩೮ ಕಿ.ಮೀ. ಹಾಗೂ ಬಾಗೂರಿನಿಂದ ೧೬ ಕಿ.ಮೀ. ದೂರದಲ್ಲಿದೆ. ಗ್ರಾಮದ ಉತ್ತರಕ್ಕೆ ಕೆರೆ ಇದೆ. ಕೆರೆಯು ದ್ವೀಪದ ಆಕಾರದಂತಿದೆ. ಗ್ರಾಮದ ಸುತ್ತಲೂ ಕೆರೆಯ ನೀರು ಸುತ್ತುವರಿದಿದ್ದು ಒಂದು ಭಾಗದಲ್ಲಿ ಮಾತ್ರ ಗ್ರಾಮವಿದೆ. ಇದರಿಂದ ಗ್ರಾಮಕ್ಕೆ ಅಣತಿ ಎಂದು ಅಲ್ಲಿನ ಕೆರೆಗೆ ಅಣತಿಕೆರೆ ಎಂಬುದಾಗಿ ಕರೆಯುತ್ತಾರೆ. ಕೆರೆಗೆ ಎರಡು ತೂಬು, ಎರಡು ಕಾಲುವೆ ಮತ್ತು ಎರಡು ಕೋಡಿಗಳನ್ನು ಅಳವಡಿಸಲಾಗಿದೆ. ಕೆರೆಯ ಏರಿಯು ದಕ್ಷಿಣದಿಕ್ಕಿನಿಂದ ಉತ್ತರಾಭಿಮುಖವಾಗಿದೆ. ಕೆರೆಯಿಂದ ಏರಿಯು ಪೂರ್ವದಿಕ್ಕಿಗಿದೆ. ಏರಿಯ ಉದ್ದ ೧೭೧೦ ಮೀ., ಅಗಲ ೧೩ ಅಡಿ ಮತ್ತು ಒಳಪಾರ್ಶ್ವದ ಎತ್ತರ ಸುಮಾರು ೧೫ ಅಡಿ ಇದೆ. ಏರಿಗೆ ಹೊಂದಿಕೊಂಡಂತೆ ಎರಡು ಹೊಸ ತೂಬುಗಳನ್ನು ಇರಿಸಲಾಗಿದೆ. ಹಳೆಯ ತೂಬು ದಕ್ಷಿಣದಿಕ್ಕಿನ ಏರಿಯಿಂದ ಸುಮಾರು ೧೦ ಅಡಿ

ದೂರದಲ್ಲಿ ನಿರ್ಮಿಸಲಾಗಿದೆ. ಈ ತೂಬು ಸುಮಾರು ೧೨ ಅಡಿಯಷ್ಟು ಎತ್ತರವಾಗಿದ್ದು, ಪ್ರಸ್ತುತ ದಿನಗಳಲ್ಲಿ ಕಾರ್ಯ ನಿರ್ವಹಣೆ ಇಲ್ಲದೆ ಹಾಳಾಗಿದೆ. ಏರಿಗೆ ಜೋಡಿಸಿದ ಎರಡು ತೂಬುಗಳಿಗೆ ಅನುಗುಣವಾಗಿ ಹೊರಭಾಗದಲ್ಲಿ ಕಾಲುವೆಗಳಿಗೆ ಹೊಂದಿಕೊಂಡಂತೆ ತೊಟ್ಟಿಗಳಿವೆ. ಕೆರೆಯ ಆಯಕಟ್ಟು ಪ್ರದೇಶವು ಹೆಚ್ಚಾಗಿ ಒಕ್ಕಲಿಗ, ಲಿಂಗಾಯತ ಮತ್ತು ಬ್ರಾಹ್ಮಣರಿಗೆ ಸೇರಿದ್ದು, ಕಾಲುವೆಗಳ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಜೋಳ, ರಾಗಿ, ಕಡ್ಲೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಗ್ರಾಮದಲ್ಲಿ ಗಂಗಾಮತಸ್ಥರು ಅಥವಾ ಬೆಸ್ತ ಜನಾಂಗಕ್ಕೆ ಸೇರಿದ ಹನುಮಣ್ಣ ಕೆರೆ ತೂಬಿನ ನಿರ್ವಹಣೆ ಮಾಡುತ್ತಿದ್ದಾರೆ. ಕೆರೆ ತುಂಬಿದಾಗ ಏರಿಯ ಮೇಲೆ ಪ್ರಾಣಿಬಲಿ ಕೊಟ್ಟು ತೂಬನ್ನು ಎತ್ತುತ್ತಾರೆ. ಹಿಂದೆ ನೀರ್ಗಂಟಿಗೆ ಜಮೀನನ್ನು ಬಿಟ್ಟಿದ್ದರು. ಅಲ್ಲದೆ ಗ್ರಾಮದ ಜನರು ಕೆರೆ ನೀರನ್ನು ಉಪಯೋಗಿಸಿ ಬೆಳೆದ ಬೆಳೆಯಲ್ಲಿ ಧಾನ್ಯದ ರೂಪದಲ್ಲಿ ನೀರ್ಗಂಟಿಗಳಿಗೆ ಕೊಡುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ಈ ರೀತಿಯ ಪದ್ಧತಿ ಇಲ್ಲದೆ ಸರ್ಕಾರವೇ ಹಣವನ್ನು ಕೊಡುತ್ತಿದೆ. ಕೆರೆಯು ಹಿಂದಿನಿಂದಲೂ ಮಳೆಯ ನೀರನ್ನು ಹೊಂದಿದ್ದು ಇತ್ತೀಚೆಗೆ ಹೇಮಾವತಿಯ ನಾಲೆಯ ನೀರು ಬರುತ್ತಿದೆ. ೧೯೧.೫೭ ಎಂ.ಸಿ.ಎಫ್.ಟಿ.ಯಷ್ಟು ಕೆರೆಯು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದೆ. ಅದೇ ರೀತಿ ೧೮೫.೪೨ ಹೆಕ್ಟೇರ್ ಜಲವಿಸ್ತೀರ್ಣವನ್ನು ಹೊಂದಿದ್ದು, ೨೩೪.೮೭ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುತ್ತಿದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಕೆರೆಯ ಎರಡು ಭಾಗದಲ್ಲಿ ಕೋಡಿಯನ್ನು ನಿರ್ಮಿಸಲಾಗಿದೆ. ದಕ್ಷಿಣದಿಕ್ಕಿನ ಕೋಡಿಯು ಸುಮಾರು ೬೦ ಮೀ. ಇದೆ. ಈ ಕೋಡಿಯ ಸಮೀಪ ಇತ್ತೀಚೆಗೆ ಬಸವಣ್ಣ ವಿಗ್ರಹ ಇರುವ ಒಂದು ಸ್ತಂಭವನ್ನು ಸ್ಥಾಪಿಸಲಾಗಿದೆ. ಇದರಿಂದ ಈ ಕೋಡಿಯನ್ನು ಸ್ಥಳೀಯರು ಬಸವಣ್ಣನ ಕೋಡಿ ಎನ್ನುವರು. ಮತ್ತೊಂದು ಕೋಡಿಯು ಉತ್ತರದಿಕ್ಕಿನಲ್ಲಿ ಸುಮಾರು ೪೦ ಮೀ. ಉದ್ದವಿದೆ. ಕೆರೆಯ ಹೆಚ್ಚುವರಿ ನೀರು ಕೋಡಿಗಳ ಮೂಲಕ ಮಲ್ಲಾಪಟ್ಟಣ ಕೆರೆಯನ್ನು ಸೇರುತ್ತದೆ. ಕೋಡಿಯ ಸಮೀಪ ಅನಂತೇಶ್ವರ ದೇವಸ್ಥಾನವಿದೆ. ಕೆರೆಯ ಏರಿಯ ಮಧ್ಯೆ ಗಣಪತಿಯ ಚಿಕ್ಕಗುಡಿ ಇದೆ. ಹಾಗೆಯೇ ಕೆರೆಯ ದಕ್ಷಿಣದಿಕ್ಕಿನಲ್ಲಿ ಲಕ್ಷ್ಮೀದೇವಿ ದೇವಸ್ಥಾನ ಮತ್ತು ಅಚ್ಚುಕಟ್ಟು ಪ್ರದೇಶದಲ್ಲಿ ಸೋಮೇಶ್ವರ ದೇವಸ್ಥಾನವಿದ್ದು ಅದರ ಮುಂಭಾಗದಲ್ಲಿ ಒಂದು ಪುಷ್ಕರಣಿ ಇದೆ. ಕೆರೆ ಅಂಗಳದಲ್ಲಿ ದಕ್ಷಿಣಕ್ಕೆ ಮುಖ ಮಾಡಿರುವ ಆಂಜನೇಯ ದೇವಸ್ಥಾನವಿದೆ. ಹಾಗೆಯೇ ಕೆರೆಯ ಮುಂಭಾಗದಲ್ಲಿ ಒಂದು ಹಾಳು ಮಂಟಪವಿದೆ. ಲಕ್ಷ್ಮೀದೇವಿ ದೇವಾಲಯದ ಹಿಂಭಾಗದ ಅಂಗಳದಲ್ಲಿ ಎರಡು ಮಜ್ಜನ ಬಾವಿಗಳಿವೆ. ಇವುಗಳ ನೀರನ್ನು ದೇವರುಗಳ ಗಂಗಾಸ್ನಾನಕ್ಕೆ ಬಳಸುತ್ತಾರೆ. ಲಕ್ಷ್ಮೀದೇವಿ ಜಾತ್ರೆಯು ಜನವರಿ ತಿಂಗಳಲ್ಲಿ ನಡೆಯುತ್ತದೆ. ಜಾತ್ರೆಯ ಸಂದರ್ಭದಲ್ಲಿ ದೇವಿಯ ಗಂಗಾಸ್ನಾನಕ್ಕೆ ಈ ಬಾವಿಗಳ ಸಮೀಪ ಬರುತ್ತದೆ. ಪಶ್ಚಿಮದಿಕ್ಕಿನ ಕೆರೆಯ ಅಂಗಳದಲ್ಲಿ ಒಂದು ಮಂಟಪ ಮತ್ತು ಬೀರಲಿಂಗೇಶ್ವರ ಹಾಗೂ ಈಶ್ವರ ದೇವಸ್ಥಾನಗಳಿವೆ. ಈ ದೇವಾಲಯಗಳು ವಳಗೆರೆಹಳ್ಳಿ ಗ್ರಾಮಕ್ಕೆ ಸೇರಿವೆ.

ಕೆರೆಯು ನೀರಾವರಿ ಇಲಾಖೆಯಿಂದ ರಕ್ಷಣೆಯನ್ನು ಪಡೆದಿದ್ದರೂ ಕೂಡ ಏರಿಯ ರಚನೆ ಕಾಣದಂತೆ ಗಿಡಗಳು ಬೆಳೆದಿವೆ. ಕೆರೆಯ ಅಂಗಳದಲ್ಲಿ ಸ್ವಲ್ಪ ಭಾಗ ಕೃಷಿಗೆ ಒತ್ತುವರಿಯಾಗಿದೆ. ಕೆರೆಯಲ್ಲಿ ಹೂಳನ್ನೆತ್ತಿಸಿರುವುದರಿಂದ ಕೆರೆಯು ಆಳವಾಗಿ ಹೆಚ್ಚು ನೀರು ಸಂಗ್ರಹಿಸುವ ಸಾಮರ್ಥ್ಯವನ್ನು ಹೊಂದಿದೆ. ಕೆರೆಯ ನೀರು ಮೀನುಗಾರಿಕೆಗೆ, ಬಟ್ಟೆ ತೊಳೆಯಲು, ದನಕರುಗಳಿಗೆ ಉಪಯುಕ್ತವಾಗುತ್ತಿದೆ. ಅಷ್ಟೇ ಅಲ್ಲದೆ ಕೃಷಿ ಚಟುವಟಿಕೆಗಳಿಗೂ ಸಹಾಯಕವಾಗಿದೆ.

ಕೊಳ್ಳಂಗಿ ಕೆರೆ

ಅರಕಲಗೂಡು ತಾಲೂಕಿನ ಮಲ್ಲಪಟ್ಟಣ ಹೋಬಳಿಯಲ್ಲಿ ಬರುವ ಗ್ರಾಮ ಕೊಳ್ಳಂಗಿ. ಹಿಂದೆ ಇಲ್ಲಿನ ಜನರು ಕೈಯಿಂದಲೇ ಬಟ್ಟೆಯನ್ನು ಹೊಲಿಯುತ್ತಿದ್ದರಂತೆ. ಒಂದು ದಿನ ಕೊಳವೆಯಂತಹ ಬಟ್ಟೆಯನ್ನು ಹೊಲಿದು ಮಹಾರಾಜರಿಗೆ ನೀಡಿದರಂತೆ. ಅಂದಿನಿಂದ ಈ ಗ್ರಾಮಕ್ಕೆ ಕೊಳ್ಳಂಗಿ ಎಂಬ ಹೆಸರು ಅಸ್ತಿತ್ವಕ್ಕೆ ಬಂದಿರುವುದಾಗಿ ಸ್ಥಳೀಯರು ತಿಳಿಸುತ್ತಾರೆ. ಊರಿನ ದಕ್ಷಿಣದಿಕ್ಕಿನಲ್ಲಿ ಕೊಳ್ಳಂಗಿ ದೊಡ್ಡಕೆರೆ ಇದೆ. ಅದು ಯಾವಾಗ ನಿರ್ಮಾಣವಾಯಿತೆಂಬ ಶಾಸನಗಳ ದಾಖಲೆಗಳಿಲ್ಲ. ಕೆರೆಯ ಸಮೀಪದಲ್ಲಿರುವ ದೇವಾಲಯ ಮತ್ತು ಕೆರೆಯ ರಚನೆಯನ್ನು ಗಮನಿಸಿದಾಗ ಹೊಯ್ಸಳ ಕಾಲದಲ್ಲಿಯೇ ನಿರ್ಮಾಣವಾಗಿರುವಂತೆ ಕಂಡುಬರುತ್ತದೆ. ಕೆರೆಯ ಏರಿಯು ಪೂರ್ವದಿಕ್ಕಿನಿಂದ ಆರಂಭವಾಗಿ ಉತ್ತರ ದಕ್ಷಿಣಾಭಿಮುಖವಾಗಿ ಅರ್ಧಭಾಗವಿದ್ದು, ಪುನಃ ಪೂರ್ವದಿಕ್ಕಿನ ಕಡೆಗೆ ಮುಂದುವರಿದು ಅರ್ಧಚಂದ್ರಾಕೃತಿಯಲ್ಲಿದೆ. ಏರಿಯು ೩೫೦ ಮೀ. ಉದ್ದ ೬ ಮೀ. ಅಗಲ ಒಳ ಪಾರ್ಶ್ವದ ಎತ್ತರ ೧೨ ಅಡಿ ಮತ್ತು ಹೊರಪಾರ್ಶ್ವದ ಎತ್ತರ ೧೫ ಅಡಿ ಇದೆ. ಏರಿಯ ಮೇಲೆ ಕೊಳ್ಳಂಗಿಯಿಂದ ಮಲ್ಲಪಟ್ಟಣ ಮಾರ್ಗವಾಗಿ ಮಾಚಗೊಂಡನಹಳ್ಳಿಗೆ ಹೋಗಲು ರಸ್ತೆ ಮಾಡಲಾಗಿದೆ. ಏರಿಗೆ ಅಂಟಿಕೊಂಡಂತೆ ಒಂದು ತೂಬಿದ್ದು, ಅದರ ನಿರ್ವಹಣೆಯನ್ನು ಗ್ರಾಮದ ಜನರೆ ನೋಡಿಕೊಳ್ಳುತ್ತಿದ್ದಾರೆ. ತೂಬನ್ನು ಎತ್ತುವ ಸಂದರ್ಭದಲ್ಲಿ ಗಂಗಮ್ಮನ ಪೂಜೆ ಮಾಡಿ ಎತ್ತುತ್ತಾರೆ. ಅದರ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಭತ್ತವನ್ನು ಬೆಳೆಯುತ್ತಾರೆ. ಕೆರೆಯ ಅಚ್ಚುಕಟ್ಟು ಜಮೀನು ಹೆಚ್ಚಾಗಿ ಲಿಂಗಾಯತ ಜನರಿಗೆ ಸೇರಿದೆ. ಈ ಕೆರೆಗೆ ಮೇಲಿನ ಸೆತ್ತೆಕೆರೆ, ಶೇರುಕಟ್ಟೆ ಇನ್ನೂ ಮೂರು, ನಾಲ್ಕು ಕೆರೆಗಳಿಂದ ನೀರು ಬರುತ್ತದೆ. ಹೆಚ್ಚುವರಿ ನೀರು ಹೊರಗೆ ಹೋಗಲು ಕೆರೆಯ ಪೂರ್ವಬದಿಯಲ್ಲಿ ಸುಮಾರು ೧೦ ಮೀ. ಉದ್ದದ ಕೋಡಿ ಅಳವಡಿಸಲಾಗಿದೆ. ಅದರ ಮೂಲಕ ಹೇಮಾವತಿ ನಾಲೆಗೆ ಹರಿದುಬರುತ್ತದೆ. ಈ ಕೋಡಿಯ ಸಮೀಪದಲ್ಲಿ ಆಂಜನೇಯ ಮತ್ತು ಬಸವಣ್ಣನ ಗುಡಿಗಳಿವೆ. ಆಂಜನೇಯ ದೇವಸ್ಥಾನದ ಒಳಗಡೆ ಒಂದು ಅಪ್ರಕಟಿತ ಶಾಸನ ಕಲ್ಲು ಇದೆ.

ಕೆರೆಯು ೧೮.೨೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೨೧.೫೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದ್ದು, ೫೦.೦೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು

ಒದಗಿಸುತ್ತಿದೆ. ಕೆರೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು, ಈ ದಿನಗಳಲ್ಲಿ ಜನರು ಕೆರೆಯ ಉಪಯೋಗವನ್ನು ಪಡೆಯುತ್ತಿದ್ದಾರೆ.

ಮರಸು ಕೆರೆ

ಆಲೂರು ಪಟ್ಟಣ ವ್ಯಾಪ್ತಿಯಲ್ಲಿ ಬರುವ ಮರುಸು ಐತಿಹಾಸಿಕ ಮಹತ್ವ ಪಡೆದ ಗ್ರಾಮ. ತಾಲೂಕಿನಿಂದ ೧ ಕಿ.ಮೀ. ದೂರದ ತೊಗರನಹಳ್ಳಿಗೆ ಹೋಗುವ ಮಾರ್ಗದಲ್ಲಿದೆ. ಸ್ಥಳೀಯ ಐತಿಹ್ಯದ ಪ್ರಕಾರ ರಾಜರು ಈ ಸ್ಥಳಕ್ಕೆ ಯುದ್ಧಕ್ಕೆ ಆಗಮಿಸಿದಾಗ ಇಲ್ಲಿನ ನಿಸರ್ಗ ಸೌಂದರ್ಯಕ್ಕೆ ಮನಸೋತು ತಾವು ಎಲ್ಲಿಂದ ಬಂದೆವು ಎಂಬುದನ್ನು ಮರೆತು ಮೈ ಮರೆಯುತ್ತಿದ್ದರಂತೆ. ಹಾಗಾಗಿ ಗ್ರಾಮಕ್ಕೆ ಮರುಸು ಎಂಬ ಹೆಸರು ಬಂದಿರುವಂತೆ ಹೇಳುತ್ತಾರೆ. ಈಗಲೂ ಊರಿನ ಕೋಟೆಯ ಮುಂದಿನ ಮರವನ್ನು ರಾಜರು ನೆಟ್ಟ ಮರವೆಂದು ತೋರಿಸುತ್ತಾರೆ. ಇಲ್ಲಿ ಮಮಕ ರಾಜ ಆಳ್ವಿಕೆ ನಡೆಸಿರುವುದಾಗಿ ತಿಳಿದುಬರುತ್ತದೆ. ಈ ಗ್ರಾಮಕ್ಕೆ ಮರುಸು ಮತ್ತು ಮರಸು ಎಂಬ ಎರಡು ಹೆಸರುಗಳನ್ನು ಬಳಸಲಾಗಿದೆ. ಕೆರೆಯು ಮರುಸು ಗ್ರಾಮದ ಉತ್ತರದಿಕ್ಕಿಗಿದೆ. ಅದನ್ನು ಮರುಸು ದೊಡ್ಡಕೆರೆ ಎಂದು ಹೆಸರಿಸುತ್ತಾರೆ. ಕೆರೆಯು ಹೊಯ್ಸಳ ಕಾಲದಲ್ಲಿ ನಿರ್ಮಾಣವಾಗಿ ಆ ನಂತರದ ಪಾಳೆಯಗಾರರಿಂದ ರಕ್ಷಣೆಯನ್ನು ಪಡೆದಿರುವಂತೆ ಕಂಡುಬರುತ್ತದೆ. ಗ್ರಾಮದ ಕಲ್ಲೇಶ್ವರ ದೇವಾಲಯದಲ್ಲಿ ಹೊಯ್ಸಳ ೩ನೆಯ ನರಸಿಂಹನಿಗೆ ಸಂಬಂಧಿಸಿದ ಎರಡು ವೀರಗಲ್ಲುಗಳಿವೆ. ಅವುಗಳಲ್ಲಿ ಕೆರೆಗೆ ಸಂಬಂಧಿಸಿದಂತೆ ಉಲ್ಲೇಖಗಳಿಲ್ಲ. ಕೆರೆಯ ಕುಟ್ಟುವಾಡ ಮತ್ತು ತೂಬುಗಳ ರಚನೆಯನ್ನು ಗಮನಿಸಿದಾಗ ಜೀರ್ಣೋದ್ಧಾರವಾಗಿ ತೂಬುಗಳನ್ನು ಏರಿಗೆ ಇರಿಸಿದಂತಿದೆ.

ಕೆರೆಯ ಏರಿಯು ಪಶ್ಚಿಮದಿಂದ ಪೂರ್ವದಿಕ್ಕಿನ ಕಡೆಗೆ ಅರ್ಧಭಾಗವಿದ್ದು, ನಂತರ ಉತ್ತರ ದಿಕ್ಕಿನ ಕಡೆಗೆ ಮುಂದುವರಿದಿದೆ. ಏರಿಯು ಸುಮಾರು ೭೫೦ ಮೀ. ಉದ್ದ ಮತ್ತು ೫ ಮೀ. ಮೇಲ್ಭಾಗದ ಅಗಲವನ್ನು ಹೊಂದಿದೆ. ಕೆರೆಯು ೨ ತೂಬು ಮತ್ತು ೨ ಕೋಡಿಯನ್ನು ಹೊಂದಿದೆ. ಹೆಚ್ಚುವರಿ ನೀರು ಹೊರಹೋಗುವಂತೆ ಕೆರೆಯ ಎರಡು ದಿಕ್ಕುಗಳಲ್ಲಿ ಕೋಡಿ ಇರಿಸಲಾಗಿದೆ. ಪಶ್ಚಿಮದಿಕ್ಕಿನ ಕೋಡಿ ೨೫ ಮೀ. ಇದ್ದು, ಉತ್ತರದಿಕ್ಕಿನಲ್ಲಿ ಸೇತುವೆ ಕೆಳಗಡೆ ಪಶ್ಚಿಮದಿಕ್ಕಿಗೆ ನೀರು ಹರಿದು ಸಗಣಿ ಹೊಳೆ ಸೇರುತ್ತದೆ. ಕೆರೆಯು ಕೋಡಿ ಬಿದ್ದಾಗ ಪೂಜೆ ಮಾಡುತ್ತಾರೆ. ಉತ್ತರ ದಿಕ್ಕಿನಲ್ಲಿ ರಂಗನಾಥಸ್ವಾಮಿ ಮತ್ತು ಉಡುಸಲಮ್ಮ ದೇವಾಲಯಗಳಿವೆ. ಪ್ರತಿ ವರ್ಷ ವಿಜಯದಶಮಿಯಂದು ರಂಗನಾಥ ಸ್ವಾಮಿ ಕೆರೆಗೆ ಗಂಗಾಸ್ನಾನಕ್ಕೆ ಬರುತ್ತದೆ. ಈ ದೇವಾಲಯಗಳ ಮುಂದೆ ಫೆಬ್ರವರಿ ತಿಂಗಳಿನಲ್ಲಿ ವಿಜಯದಶಮಿ ದಸರಾ ಉತ್ಸವ ನಡೆಯುತ್ತದೆ. ಕೆರೆಯು ೨.೦೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಮತ್ತು ೧.೨೦ ಹೆಕ್ಟೇರ್ ಜಲವಿಸ್ತೀರ್ಣವನ್ನು ಹೊಂದಿದೆ. ಕೆರೆಯ ನೀರು ಕೃಷಿ, ಪ್ರಾಣಿ, ಪಕ್ಷಿಗಳಿಗೆ ಉಪಯುಕ್ತವಾದುದಲ್ಲದೆ, ದೇವರ ಕಾರ್ಯಗಳಿಗೂ ಬಳಕೆಯಾಗುತ್ತಿದೆ.

ಮೇರ್ವೆ ಕೆರೆ(ಮೇರವೆ)

ಆಲೂರು ತಾಲೂಕಿನ ಕುಂದೂರು ಹೋಬಳಿಯಲ್ಲಿ ಮೇರ್ವೆ ಕೆರೆ ಬರುತ್ತದೆ. ತಾಲೂಕಿನಿಂದ ೧೮ ಕಿ.ಮೀ ಮತ್ತು ಹೋಬಳಿಯಿಂದ ೫ ಕಿ.ಮೀ. ದೂರದಲ್ಲಿದೆ. ಹಿಂದೆ ಕೆರೆಯ ಸಮೀಪದಲ್ಲಿಯೇ ಗ್ರಾಮವಿತ್ತು. ಹೇಮಾವತಿ ಹೊಳೆನೀರಿನಿಂದ ಗ್ರಾಮವು ಮುಳುಗಡೆಯಾದ ನಂತರ ಕೆರೆಯಿಂದ ಸುಮಾರು ೧ ಕಿ.ಮೀ. ದೂರಕ್ಕೆ ಗ್ರಾಮವು ಸ್ಥಳಾಂತರಗೊಂಡಿದೆ. ಕೆರೆಗೆ ರಂಗನಬೆಟ್ಟ ಮತ್ತು ಕುಂದೂರು ಕೆರೆಯಿಂದ ನೀರು ಬರುತ್ತದೆ. ಬೆಟ್ಟದಿಂದ ಬಿದ್ದ ನೀರು ತಗ್ಗಾದ ಭಾಗಕ್ಕೆ ಅಂದರೆ ಪೂರ್ವದಿಕ್ಕಿನ ಕಡೆಗೆ ಹರಿಯುವುದರಿಂದ ಬೆಟ್ಟಕ್ಕೆ ಅಭಿಮುಖವಾಗಿ ಏರಿ ನಿರ್ಮಾಣವಾಗಿದೆ. ಏರಿಯು ಉತ್ತರ ದಕ್ಷಿಣಾಭಿಮುಖವಾಗಿ ಅರ್ಧಭಾಗವಿದ್ದು, ಪೂರ್ವದಿಕ್ಕಿನ ಕಡೆಗೆ ಮುಂದುವರಿದಿದೆ. ಸುಮಾರು ೭೫೦ ಮೀ. ಉದ್ದ, ೫ ಮೀ. ಮೇಲ್ಭಾಗದ ಅಗಲ ಹೊಂದಿದ್ದು, ಏರಿಯ ಮೇಲೆ ಕುಂದೂರಿನಿಂದ ಮೇರ್ವೆಗೆ ವಾಹನಗಳು ಸಂಚರಿಸುವಂತೆ ರಸ್ತೆ ಮಾಡಲಾಗಿದೆ. ಈ ಕೆರೆಯ ನಿರ್ಮಾಣದ ಕಾಲಘಟ್ಟವು ತಿಳಿದುಬಂದಿಲ್ಲ. ಕಟ್ಟುವಾಡದ ರಚನಾವಿನ್ಯಾಸದಿಂದ ಬಹುಶಃ ಹೊಯ್ಸಳರ ಅವಧಿಯಲ್ಲಿ ನಿರ್ಮಾಣವಾಗಿರಬೇಕೆಂದು ಹೇಳಬಹುದು. ಕೆರೆಗೆ ಎರಡು ತೂಬು ಮತ್ತು ಎರಡು ಕೋಡಿ ಇದೆ. ಕೆರೆಯ ಹೆಚ್ಚುವರಿ ನೀರು ಕೋಡಿಗಳ ಮೂಲಕ ಹೇಮಾವತಿ ಹೊಳೆಯನ್ನು ಸೇರುತ್ತದೆ.

ಕೆರೆಯು ೨೧.೪೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೫೨.೦೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದೆ. ಸುಮಾರು ೮೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವು ಹೇಮಾವತಿ ಜಲಾಶಯದಿಂದ ಮುಳುಗಡೆಯಾಗಿದೆ. ಬೇಸಿಗೆಯಲ್ಲಿ ಈ ಪ್ರದೇಶದಲ್ಲಿ ಕಡಲೆ ಮತ್ತು ಜೋಳಗಳನ್ನು ಬೆಳೆಯುತ್ತಾರೆ. ಏರಿಯ ಮೇಲೆ ಹಾಲಕ್ಕಮ್ಮನ ಚಿಕ್ಕಗುಡಿ ಇದೆ. ಅದಕ್ಕೆ ದಿನನಿತ್ಯ ಪೂಜೆ ನಡೆಯುತ್ತಿಲ್ಲ. ಗ್ರಾಮದಲ್ಲಿ ಹಬ್ಬ ಮಾಡಿದಾಗ ಅಥವಾ ಹರಕೆ ಮಾಡಿಕೊಂಡಿದ್ದರೆ ಪೂಜೆ ಮಾಡಿ ನೈವೇದ್ಯ ಮಾಡಿಕೊಂಡು ಹೋಗುತ್ತಾರೆ. ಪ್ರತಿ ವರ್ಷ ದೀಪಾವಳಿಯಲ್ಲಿ ಗ್ರಾಮದ ಜನರು ಕೆರೆಗೆ ಗಂಗೆ ಪೂಜೆ ಮಾಡಿ ತಮ್ಮ ಮನೆಗೆ ಗಂಗೆ ತೆಗೆದುಕೊಂಡು ಹೋಗುವ ಪದ್ಧತಿ ರೂಢಿಯಲ್ಲಿದೆ. ಬಹುಶಃ ಈ ರೀತಿಯ ಆಚರಣೆಗೆ ಗ್ರಾಮದ ರಕ್ಷಣೆಯ ಉದ್ದೇಶವಿರಬಹುದು. ಈ ಕೆರೆಯ ನೀರು ಕೃಷಿಗೆ ಬಳಕೆಯಾಗದೆ ದನಕರುಗಳಿಗೆ, ಬಟ್ಟೆ ತೊಳೆಯಲು ಹಾಗೂ ದೇವರ ಪೂಜೆಗೆ ಬಳಕೆಯಾಗುತ್ತಿರುವುದನ್ನು ಗಮನಿಸಬಹುದು.

ದೇವಿಕೆರೆ

ದೇವಿಕೆರೆಯು ಚನ್ನರಾಯಪಟ್ಟಣ ಪರಿಸರದ ಕೆರೆಗಳಲ್ಲಿ ಒಂದು. ತಾಲೂಕಿನಿಂದ ಸುಮಾರು ೧೦ ಕಿ.ಮೀ. ದೂರದಲ್ಲಿದೆ. ಹಿಂದೆ ಗ್ರಾಮದಲ್ಲಿ ದೇವತೆಗಳ ಸಂಖ್ಯೆ ಜಾಸ್ತಿ ಇದ್ದು, ನಂತರ ಬೇರೆ ಬೇರೆ ಊರಿಗೆ ಕೊಟ್ಟಿರುವಂತೆ ಹೇಳುತ್ತಾರೆ. ಹಾಗಾಗಿ ಊರಿಗೆ ದೇವಿಗೆರೆ ಎಂದಿದ್ದು, ಅಲ್ಲಿನ ಕೆರೆಗೆ

ದೇವಿಕೆರೆ ಎನ್ನುತ್ತಾರೆ. ಗ್ರಾಮದಿಂದ ದಕ್ಷಿಣಕ್ಕೆ ಕೆರೆ ಇದೆ. ಇದನ್ನು ಯಾರು ನಿರ್ಮಿಸಿದರು ಎಂಬುದರ ಬಗ್ಗೆ ಖಚಿತವಾದ ಮಾಹಿತಿಯು ದೊರೆಯುವುದಿಲ್ಲ. ಕೆರೆಯ ಸಮೀಪದಲ್ಲಿರುವ ದೇವಾಲಯದಿಂದ ಹೊಯ್ಸಳರ ಕಾಲದಲ್ಲಿಯೇ ನಿರ್ಮಾಣವಾಗಿರಬಹುದೆಂದು ಹೇಳಬಹುದು. ಕೆರೆಯು ನೀರಾವರಿ ಇಲಾಖೆಯ ವ್ಯಾಪ್ತಿಗೆ ಸೇರಿದ್ದು, ೨೦೦೮-೦೯ರಲ್ಲಿ ಕಾಮಗಾರಿ ಮಾಡಲಾಗಿದೆ. ಏರಿಯು ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಸುಮಾರು ೬೫೦ ಮೀ. ಉದ್ದವಿದೆ. ಅದರ ಮೇಲ್ಭಾಗದಲ್ಲಿ ಓಡಾಡಲು ಸಾಧ್ಯವಾಗದಷ್ಟು ಪೊದರು ಗಿಡಗಳು ಬೆಳೆದಿವೆ. ಏರಿಗೆ ಇರಿಸಿದಂತೆ ಒಂದು ತೂಬು ಇದೆ. ಕೆರೆಗೆ ಕಲ್ಕೆರೆಯಿಂದ ನೀರು ಹರಿದುಬರುತ್ತದೆ. ಹೆಚ್ಚುವರಿ ನೀರು ದಿಂಡಗೂರು ಕೆರೆಗೆ ಹೋಗುತ್ತದೆ.

ಕೆರೆಯು ೧೭.೦೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೪.೦೭ ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಸಂಗ್ರಹಿಸುವ ಸಾಮರ್ಥ್ಯವಿದ್ದು, ೭೭.೧೪ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರುಣಿಸುವ ಸಾಮರ್ಥ್ಯ ಹೊಂದಿದೆ. ಕೆರೆ ಅಂಗಳ ಸಾಕಷ್ಟು ಒತ್ತುವರಿಯಾಗಿದೆ. ಅಲ್ಲದೆ ಅಂಗಳವೇ ಕಾಣದಂತೆ ಪೊದರು ಗಿಡಗಳು ಬೆಳೆದು ಹೂಳು ತುಂಬಿದೆ. ಕೆರೆ ಅಂಗಳದಲ್ಲಿ ನೀರಿಲ್ಲದೆ ಇದ್ದಾಗ ಜಾನುವಾರುಗಳು ಮೇಯಲು ಬಳಕೆಯಾಗುತ್ತಿದೆ. ಕೆರೆಯ ಅಚ್ಚುಕಟ್ಟು ಪ್ರದೇಶವು ಹೆಚ್ಚಾಗಿ ಒಕ್ಕಲಿಗ ಜನರಿಗೆ ಸೇರಿದ್ದು, ಅಚ್ಚುಕಟ್ಟು ಪ್ರದೇಶದಲ್ಲಿನ ತೆಂಗಿನ ಮರಗಳಿಗೆ ಕೆರೆಯ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ.

ಕೆರೆ ಅಂಗಳದಲ್ಲಿ ಉತ್ತರದಿಕ್ಕಿಗೆ ದೊಡ್ಡಮ್ಮನ ಚಿಕ್ಕಗುಡಿ ಇದೆ. ವಾರಕ್ಕೊಮ್ಮೆ ಪೂಜೆ ಮಾಡುತ್ತಾರೆ. ದನಕರುಗಳಿಗೆ ಕಾಯಿಲೆ ಬಂದರೆ ಹರಕೆ ಮಾಡಿಕೊಳ್ಳುತ್ತಾರೆ. ಹಸು ಅಥವಾ ಎಮ್ಮೆ ಕರು ಹಾಕಿದಾಗ ಹಾಲಿನಿಂದ ಗಿಣ್ಣನ್ನು ಮಾಡಿ ನೈವೇದಶ್ಯ ಮಾಡುತ್ತಾರೆ. ಏರಿಯ ಹಿಂಬದಿಯ ಇಳಿಜಾರಿನಲ್ಲಿ ಮಣ್ಣಿನಿಂದ ಮುಚ್ಚಿದಂತೆ ಈಶ್ವರ ದೇವಾಲಯವಿದೆ. ನೈಸರ್ಗಿಕವಾದ ಪ್ರಕೃತಿವಿಕೋಪಗಳಿಂದ ದೇವಾಲಯದ ರಕ್ಷಣೆಯ ದೃಷ್ಟಿಯಿಂದ ಈ ರೀತಿ ಕಟ್ಟಿರಬಹುದು.

ದಿಂಡಗೂರು ಕೆರೆ

ದಿಂಡಗೂರು ಗ್ರಾಮದಿಂದ ಪೂರ್ವಕ್ಕೆ ಚನ್ನರಾಯಪಟ್ಟಣದಿಂದ ಸುಮಾರು ೧೨ ಕಿ.ಮೀ. ದೂರದಲ್ಲಿದೆ. ಇದು ಹೇಮಾವತಿ ನದಿಯಾಶ್ರಿತ ಹೊಯ್ಸಳ ಕಾಲದ ಕೆರೆಯಾಗಿದೆ. ದಿಂಡಗೂರು ನಿವಾಸಿಗಳು ಇದರ ಪ್ರಯೋಜನವನ್ನು ಹೊಂದುತ್ತಿದ್ದಾರೆ. ಈ ಕೆರೆಯ ನಿರ್ಮಾಣವನ್ನು ಖಚಿತತೆಯಿಂದ ಹೇಳಲು ಸಾಧ್ಯವಿಲ್ಲ. ಆದರೆ ಕೆರೆಯು ಹೊಯ್ಸಳ ಕಾಲದಲ್ಲಿಯೇ ಇತ್ತೆಂಬುದಕ್ಕೆ ಕೆರೆ ಅಂಗಳದಲ್ಲಿರುವ ಹೊಯ್ಸಳ ಕಾಲದ ದೇವಾಲಯಗಳೇ ಆಧಾರಗಳಂತಿವೆ.

ಏರಿಯ ಪೂರ್ವ ಪಶ್ಚಿಮಾಭಿಮುಖವಾಗಿ ೧ ಕಿ.ಮೀ. ಇದೆ. ಅದರ ಮೇಲ್ಭಾಗದ ಅಗಲ ೪ ಮೀ. ಇದ್ದು, ಓಡಾಡಲು ಸಾಧ್ಯವಾಗದಷ್ಟು ಗಿಡಗಳು ಬೆಳೆದಿವೆ. ಏರಿಗೆ ಇರಿಸಿದಂತೆ ೧ ತೂಬಿದೆ. ಅದಕ್ಕನುಗುಣವಾಗಿ ಏರಿಯ ಪಾರ್ಶ್ವದ ಇಳಿಜಾರಿನಲ್ಲಿ ಕಾಲುವೆ ಜೋಡಿಸಲಾಗಿದೆ.

ಕಾಲುವೆಯ ಮೂಲಕ ಆಯಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಅದರಲ್ಲಿ ಭತ್ತ ಪ್ರಮುಖ ಬೆಳೆಯಾಗಿದೆ. ಕೆರೆಯು ೧೬೮.೦೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೨೧೦.೮ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುವ ಸಾಮರ್ಥ್ಯ ಹೊಂದಿದೆ. ಕೆರೆಯ ಉತ್ತರಭಾಗದ ಅಂಗಳದ ದಡದಲ್ಲಿ ಕೇಶವ ಮತ್ತು ಈಶ್ವರ ದೇವಸ್ಥಾನಗಳಿವೆ. ಈಶ್ವರ ದೇವಾಲಯದ ಮುಂಭಾಗದಲ್ಲಿ ನಂದಿ ಶಿಲ್ಪವಿರುವ ಒಂದು ಸ್ತಂಭವಿದೆ. ಕೆರೆಯು ನೀರಾವರಿ ಇಲಾಖೆಯಿಂದ ರಕ್ಷಣೆಗೆ ಒಳಗಾಗಿದೆ. ಕೃಷಿ ಮತ್ತು ಮೀನುಗಾರಿಕೆಗೆ ಉಪಯುಕ್ತವಾಗುತ್ತಿದ್ದು, ೨೦೦೯-೧೦ರಲ್ಲಿ ೧೩,೮೯೨ಕ್ಕೆ ವಿಲೇವಾರಿ ಮಾಡಲಾಗಿದೆ.

ಕಾಮಸಮುದ್ರ ಕೆರೆ

ಅರಸೀಕೆರೆಯಿಂದ ಸುಮಾರು ೧೫ ಕಿ.ಮೀ. ದೂರದಲ್ಲಿ ಕಾಮಸಮುದ್ರ ಕೆರೆ ಇದೆ. ಕಾಮಕ್ಕ ಕೆರೆ ಕಟ್ಟಿಸಿದ್ದರಿಂದ ಕಾಮಸಮುದ್ರವೆಂಬ ಹೆಸರು ಬಂದಿರುವಂತೆ ಸ್ಥಳೀಯ ಜನಪದರು ಹೇಳುತ್ತಾರೆ. ಇದಕ್ಕೆ ಶಾಸನಗಳ ಉಲ್ಲೇಖಗಳಿಲ್ಲ. ಇಲ್ಲಿನ ದೊಡ್ಡಕೆರೆಯಿಂದ ಊರಿಗೆ ಕಾಮಸಮುದ್ರವೆಂಬ ಹೆಸರು ಬಂದಿರಬಹುದು. ಕೆರೆಯ ಏರಿಯು ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಅಂಕುಡೊಂಕಾಗಿ ಮುಂದುವರಿದಿದೆ. ಕೆರೆಗೆ ಮೂರು ತೂಬು, ಎರಡು ಕೋಡಿಗಳಿವೆ. ಎರಡು ತೂಬುಗಳು ಹೊಸದಾಗಿ ಏರಿಗೆ ಇರಿಸಿದಂತಿದ್ದು, ಒಂದು ಹಳೆಯ ತೂಬು ಕನ್ನೇರಮ್ಮನ ದೇವಾಲಯ ಮುಂಭಾಗದಲ್ಲಿ ಏರಿಯಿಂದ ೮ ಅಡಿ ದೂರದಲ್ಲಿದೆ. ಈ ತೂಬಿಗೆ ಕಬ್ಬಿಣದ ಸಲಾಖೆಗೆ ಬದಲು ಮರದ ಬಿದಿರನ್ನು ಜೋಡಿಸಲಾಗಿದೆ. ತೂಬಿನ ಮೇಲೆ ಆಲಂಕಾರಿಕವಾದ ಬಳ್ಳಿಗಳ ಕೆತ್ತನೆಗಳಿವೆ. ಏರಿ ಹಿಂಬದಿಯಲ್ಲಿ ಈಶ್ವರ ದೇವಾಲಯವಿದ್ದು ಬಿದ್ದುಹೋಗಿದೆ. ಇದನ್ನು ಹೊಸದಾಗಿ ನಿರ್ಮಾಣ ಮಾಡುತ್ತಿದ್ದಾರೆ. ಈ ದೇವಾಲಯದ ಮುಂಭಾಗದಲ್ಲಿ ಹೊಯ್ಸಳ ಕಾಲದ ಮೂರು ತ್ರುಟಿತ ಶಾಸನಕಲ್ಲುಗಳಿವೆ. ಕೆರೆಯ ತೂಬು, ಕಟ್ಟುವಾಡದ ರಚನಾ ವಿನ್ಯಾಸದಿಂದ ಕೆರೆಯು ಹೊಯ್ಸಳರ ಕಾಲದಲ್ಲಿಯೇ ನಿರ್ಮಾಣವಾಗಿದೆಯೆಂದು ಹೇಳಬಹುದು.

ಕೆರೆಗೆ ಹೊನ್ನವಳ್ಳಿ ಕೆರೆಯಿಂದ ಮಳೆನೀರು ಬಂದು ಸಂಗ್ರಹವಾಗುತ್ತದೆ. ಹೆಚ್ಚುವರಿ ನೀರು ಕಣಕಟ್ಟೆ ಕೆರೆಗೆ ಹೋಗುತ್ತದೆ. ಇತ್ತೀಚಿನ ದಿನಗಳಲ್ಲಿ ಹೇಮಾವತಿ ನಾಲೆ ನೀರು ಬರುವಂತೆ ಪೈಪ್ ಹಾಕಿದ್ದಾರೆ. ಕೆರೆಯ ಪಶ್ಚಿಮದಿಕ್ಕಿನಲ್ಲಿ ೭೫ ಮೀ. ಉದ್ದ ಒಂದು ಕೋಡಿ ಇದ್ದರೆ, ಪೂರ್ವದಿಕ್ಕಿನ ಕೋಡಿ ೫೦ ಮೀ. ಇದೆ. ಈ ಕೋಡಿಯ ಸಮೀಪ ಆಂಜನೆಯ ದೇವಾಲಯವಿದೆ. ಕೆರೆಯು ೧೪೦.೦೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೨೬.೦೫ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣ ಸಾಮರ್ಥ್ಯ ಹೊಂದಿದ್ದು, ೭೦.೮೧ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯ ಆಯಕಟ್ಟು ಪ್ರದೇಶವು ಹೆಚ್ಚಾಗಿ ಲಿಂಗಾಯತ ಮತ್ತು ಕುರುಬ ಜನಾಂಗದವರಿಗೆ ಸೇರಿದೆ. ಏರಿಯ ಹಿಂಬದಿಯಲ್ಲಿ ಉಡುಸಲಮ್ಮ ದೇವಸ್ಥಾನವಿದ್ದು, ಅದರ ಮುಂಭಾಗದಲ್ಲಿ ಒಂದು ಒಕ್ಕೈ

ಮಾಸ್ತಿಕಲ್ಲು ಇದೆ. ಏರಿಯ ಮೇಲೆ ಕನ್ನೇರಮ್ಮನ ಚಿಕ್ಕ ದೇವಾಲಯವಿದೆ. ಗುರುವಾರ, ಭಾನುವಾರ ಪೂಜೆ ನಡೆಯುತ್ತದೆ. ಕೆರೆಯು ತುಂಬಿದಾಗ ಗಂಗಮ್ಮನ ಪೂಜೆ ಮಾಡಿ, ತೆಪ್ಪೋತ್ಸವ ಮಾಡುತ್ತಾರೆ. ಕೆರೆಯ ನೀರು ಧಾರ್ಮಿಕವಾಗಿ, ಪ್ರಾಣಿ, ಪಕ್ಷಿಗಳಿಗೆ ಅಲ್ಲದೆ ಕೃಷಿ ಚಟುವಟಿಕೆಗಳಿಗೆ ಬಳಕೆಯಾಗುತ್ತಿದೆ. ಕೆರೆಯು ನೀರಾವರಿ ಇಲಾಖೆಯ ವ್ಯಾಪ್ತಿಗೆ ಸೇರಿ ರಕ್ಷಣೆ ಪಡೆದಿದೆ.

ದುಮ್ಮೇನಹಳ್ಳಿ ಕೆರೆ

ದುಮ್ಮೇನಹಳ್ಳಿ ಕೆರೆಯು ಅರಸೀಕೆರೆ ಪರಿಸರದ ಕೆರೆಗಳಲ್ಲಿ ಒಂದಾಗಿದೆ. ಗ್ರಾಮಕ್ಕೆ ಮೊದಲು ದುಮ್ಮರ ದುಮ್ಮೇನಹಳ್ಳಿ ಎಂದು ಇದ್ದು ನಂತರ ದುಮ್ಮೇನಹಳ್ಳಿ ಆಯಿತೆಂದು ಸ್ಥಳೀಯರು ಹೇಳುತ್ತಾರೆ. ಈ ಕೆರೆಯನ್ನು ಯಾರು ನಿರ್ಮಿಸಿದರು ಎಂಬುದಕ್ಕೆ ಶಾಸನಗಳ ದಾಖಲೆಗಳಿಲ್ಲ. ಕೆರೆಯ ಕಟ್ಟುವಾಡ ರಚನಾವಿನ್ಯಾಸವು ಹೊಯ್ಸಳರ ನಂತರ ಕಾಲದಲ್ಲಿ ನಿರ್ಮಾಣವಾದಂತೆ ಕಂಡುಬರುತ್ತದೆ. ಈ ಕೆರೆಯ ಏರಿಯು ಉತ್ತರ ದಕ್ಷಿಣಾಭಿಮುಖವಾಗಿ ೬೯೦ ಮೀ. ಉದ್ದವಿದೆ. ಏರಿಯ ಒಳಪಾರ್ಶ್ವವನ್ನು ದಪ್ಪ ದಪ್ಪ ಗುಂಡುಕಲ್ಲುಗಳನ್ನು ಜೋಡಿಸಿ ಕಲ್ಲು ಕಟ್ಟಡದಂತೆ ನಿರ್ಮಿಸಿದ್ದಾರೆ. ಹೊರಭಾಗವು ಮಣ್ಣಿನಿಂದ ನಿರ್ಮಾಣವಾಗಿದೆ. ಏರಿಯಿಂದ ೮ ಅಡಿ ದೂರದಲ್ಲಿ ಒಂದು ತೂಬು ಇದೆ. ಅದನ್ನು ತಲುಪಲು ಸಿಮೆಂಟ್‌ನಿಂದ ಮಾಡಿದ ಸೇತುವೆ ಅಳವಡಿಸಲಾಗಿದೆ. ಏರಿಯ ಮಧ್ಯದ ಹೊರಪಾರ್ಶ್ವದ ಇಳಿಜಾರಿನಲ್ಲಿ ಕನ್ನೇರಮ್ಮನ ಚಿಕ್ಕಗುಡಿ ಇದೆ. ಈ ದೇವಾಲಯದ ಒಳಭಾಗದಲ್ಲಿ ಸಪ್ತಮಾತೃಕೆಯರ ಶಿಲ್ಪಗಳಿವೆ. ಲಿಂಗಾಯತ ಮತ್ತು ಬ್ರಾಹ್ಮಣ ಜನಾಂಗದವರು ಸೋಮವಾರ ಮತ್ತು ಶುಕ್ರವಾರ ಪೂಜೆ ಮಾಡುತ್ತಾರೆ. ಕನ್ನೇರಮ್ಮನ ಗುಡಿಯ ಮುಂದೆ ಚಿಕ್ಕ ಬಾವಿ ಇದೆ. ದೇವಾಲಯದ ಪೂಜೆಗೆ ಈ ಬಾವಿಯ ನೀರನ್ನು ಬಳಸುತ್ತಾರೆ.

ಕೆರೆಯು ಹಿಂದಿನಿಂದಲೂ ಮಳೆಯ ನೀರನ್ನು ಹೊಂದಿದೆ. ೧೮.೫೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದ್ದು, ೪೦.೪೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯ ದಕ್ಷಿಣಭಾಗದಲ್ಲಿ ಅರ್ಧಚಂದ್ರಾಕೃತಿಯ ಸುಮಾರು ೭೫ ಮೀ. ಉದ್ದದ ಕೋಡಿ ಇದೆ. ಕೆರೆಯ ನೀರು ತೆಂಗು, ಅಡಕೆ ಬೆಳೆಗಳಿಗೆ ಉಪಯುಕ್ತವಾಗುತ್ತಿದೆ. ಕೆರೆಯ ಅಂಗಳದಲ್ಲಿ ಬೊಮ್ಮಲಿಂಗೇಶ್ವರ ದೇವಸ್ಥಾನವಿದೆ. ವರ್ಷಕ್ಕೊಮ್ಮೆ ಪೂಜೆ ನಡೆಯುತ್ತದೆ. ಕೆರೆಯ ದಕ್ಷಿಣ ಭಾಗದ ಅಂಗಳದಲ್ಲಿ ಜೀರ್ಣೋದ್ಧಾರವಾದ ಈಶ್ವರ ದೇವಾಲಯವಿದೆ. ಎರಡು ಮಹಾಸತಿಕಲ್ಲು ಮತ್ತು ಬಿಲ್ಲುಬಾಣ ಹಿಡಿದಿರುವ ಒಂದು ವೀರಗಲ್ಲು ಇದೆ. ಹಾಗೆಯೇ ಒಂದು ಪುಷ್ಕರಣಿ ಇದೆ. ಅದರ ಒಳಭಾಗದಲ್ಲಿ ಕೊಳವೆಬಾವಿ ಇರುವಂತೆ ಸ್ಥಳೀಯರು ಸೂಚಿಸುತ್ತಾರೆ. ಈ ದಿನಗಳಲ್ಲಿ ಪುಷ್ಕರಣಿಯಲ್ಲಿ ನೀರು ಇರುವುದರಿಂದ ಕೊಳವೆಬಾವಿ ಕಾಣಿಸುತ್ತಿಲ್ಲ. ಹಿಂದೆ ಪುಷ್ಕರಣಿಯ ನೀರನ್ನು ಗ್ರಾಮದ ಜನರು ಕುಡಿಯಲು ಬಳಸುತ್ತಿರುವುದಾಗಿ ಹೇಳುತ್ತಾರೆ. ಕೆರೆಯು ಸಣ್ಣ ನೀರಾವರಿ ಇಲಾಖೆಯಿಂದ ರಕ್ಷಣೆಯನ್ನು ಪಡೆದು ೨೦೦೭-೦೮ರಲ್ಲಿ ಕಾಮಗಾರಿ ಮಾಡಲಾಗಿದೆ. ಪ್ರಸ್ತುತವಾಗಿ ಕೆರೆಯ ನೀರು ಪ್ರಾಣಿ ಪಕ್ಷಿಗಳಿಗೆ, ಬಟ್ಟೆ ತೊಳೆಯಲು ಮತ್ತು ಕೃಷಿಗೆ ಬಳಕೆಯಾಗುತ್ತಿದೆ.

ಸತ್ಯಮಂಗಳ ಕೆರೆ

ಹಾಸನ ನಗರಕ್ಕೆ ಸೇರಿದಂತೆ ಸತ್ಯಮಂಗಳ ಗ್ರಾಮವಿದೆ. ಹಾಸನದ ಉತ್ತರದಿಕ್ಕಿಗೆ ಹೊಯ್ಸಳ ಕಾಲದ ಸತ್ಯಮಂಗಳ ಕೆರೆ ಇದೆ. ಕೆರೆಯ ಏರಿಯು ಅಂಕುಡೊಂಕಾಗಿ ವೃತ್ತಾಕಾರವಾಗಿ ನಿರ್ಮಾಣವಾದಂತಿದೆ. ಏರಿಯು ೯೫ ಮೀ. ಉದ್ದ, ೭ ಮೀ. ಅಗಲ ಮತ್ತು ಸುಮಾರು ೮ ಅಡಿಗಳಷ್ಟು ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಯ ಮೇಲೆ ವಾಹನಗಳು ಚಲಿಸುವಂತೆ ರಸ್ತೆ ಮಾಡಲಾಗಿದೆ. ಕೆರೆಯು ಎರಡು ತೂಬು ಒಂದು ಕೋಡಿಯನ್ನು ಹೊಂದಿದೆ. ಇತ್ತೀಚೆಗೆ ಕೆರೆಯ ಪಕ್ಕದಲ್ಲಿ ಉದ್ಯಾನವನ್ನು ಮಾಡಿ ಕೆರೆಯಲ್ಲಿನ ತೂಬುಗಳನ್ನು ಮುಚ್ಚಿ ಬೋಟಿಂಗ್ ವ್ಯವಸ್ಥೆ ಮಾಡುವ ಕಾಮಗಾರಿ ನಡೆಯುತ್ತಿದೆ. ಕೆರೆಯ ಕೋಡಿಯ ಸಮೀಪ ಉದ್ಭವ ಗಣೇಶನ ಶಿಲ್ಪವಿದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಸೇತುವೆಯನ್ನು ನಿರ್ಮಿಸಿ ಅದರ ಮೂಲಕ ಹೇಮಾವತಿ ನಾಲೆಗೆ ಹೋಗುವಂತೆ ಕಾಲುವೆ ಮಾಡಲಾಗಿದೆ. ಕೆರೆಯು ಹಿಂದಿನಿಂದಲೂ ಮಳೆ ನೀರನ್ನು ಹೊಂದಿದೆ. ೧೩.೦೦ ಹೆಕ್ಟೇರ್ ಜಲವಿಸ್ತೀರ್ಣ ಹಾಗೂ ೧೩.೦೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದ್ದು, ೪೪.೦೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಇಂದು ಕೆರೆಯು ಕೃಷಿಗೆ ಉಪಯುಕ್ತವಾಗುತ್ತಿಲ್ಲ. ಕೆರೆಯ ಹೆಚ್ಚಿನ ಭಾಗವು ಉದ್ಯಾನವನ ನಿರ್ಮಾಣಕ್ಕೆ ಒತ್ತುವರಿಯಾಗಿದೆ. ಹಾಗೆಯೇ ಹಾಸನ ನಗರಕ್ಕೆ ಹೊಂದಿಕೊಂಡಂತೆ ಚನ್ನಪಟ್ಟಣ ಎಂಬ ಗ್ರಾಮವಿದೆ. ಈ ಗ್ರಾಮದಲ್ಲಿ ಚನ್ನಪಟ್ಟಣ ಎಂಬ ಹೆಸರಿನ ಕೆರೆ ಇತ್ತು. ಇಂದು ಕೆರೆ ಇಲ್ಲದಂತೆ ಹಾಸನ ಹೊಸ ಬಸ್‌ಸ್ಟಾಪ್ ನಿರ್ಮಾಣವಾಗಿದೆ. ನಗರದಲ್ಲಿನ ಕೆರೆಗಳು ಮಾಯವಾಗಿ ನಗರೀಕರಣಕ್ಕೆ ತುತ್ತಾಗುತ್ತಿವೆ. ಇವುಗಳನ್ನು ಉಳಿಸಿಕೊಳ್ಳುವತ್ತ ಸಂಬಂಧಪಟ್ಟ ಇಲಾಖೆ ಮತ್ತು ನಗರದ ಜನರು ಒಲವು ತೋರಿಸಬೇಕು. ಇದರಿಂದ ನಗರದಲ್ಲಿ ಉತ್ತಮ ವಾತಾವರಣವನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ.

ಅನುಗವಳ್ಳಿ ಕೆರೆ

ಹೊನ್ನಾವರದಿಂದ ದುದ್ದಕ್ಕೆ ಹೋಗುವ ಮಾರ್ಗದಲ್ಲಿ ಅನುಗವಳ್ಳಿ ಗ್ರಾಮವಿದೆ. ದುದ್ದ ಹೋಬಳಿಯಿಂದ ೩ ಕಿ.ಮೀ. ಮತ್ತು ಹಾಸನದಿಂದ ೧೩ ಕಿ.ಮೀ. ದೂರದಲ್ಲಿ ಬರುತ್ತದೆ. ಗ್ರಾಮವನ್ನು ಮೊದಲು ಹನುಮನಪಲ್ಲಿ ಎಂದು ಕರೆಯುತ್ತಿದ್ದು ಆನಂತರ ಅನುಗವಳ್ಳಿ ಎಂಬ ಹೆಸರು ಬಂದಿದೆ ಎಂಬುದಾಗಿ ಸ್ಥಳೀಯ ಜನರು ಸೂಚಿಸುತ್ತಾರೆ. ಶಾಸನಗಳಲ್ಲಿ[೨೧] ಅಣಗವಳ್ಳಿ ಎಂಬುದಾಗಿ ಉಲ್ಲೇಖವಾಗಿದೆ. ಅನುಗವಳ್ಳಿ ಗ್ರಾಮದಲ್ಲಿ ಚಿಕ್ಕಕೆರೆ ಮತ್ತು ದೊಡ್ಡಕೆರೆ ಎಂಬ ಎರಡು ಕೆರೆಗಳಿವೆ. ಚಿಕ್ಕಕೆರೆಯು ಊರಿನ ಮುಂಭಾಗದಲ್ಲಿ ಇದೆ. ಕೆರೆಯ ಪಕ್ಕದಲ್ಲಿ ಹನುಮಂತನ ದೇವಸ್ಥಾನವಿದೆ. ಬಹುಶಃ ಈ ದೇವಾಲಯದಿಂದಲೇ ಗ್ರಾಮವನ್ನು ಹನುಮನಪಲ್ಲಿ ಅಥವಾ ಹನುಮಪಲ್ಲಿ ಎಂದು ಕರೆದಿರಬಹುದು. ಅನುಗವಳ್ಳಿ ಗ್ರಾಮದ ದಕ್ಷಿಣಕ್ಕೆ ಮತ್ತು ಕೋಡಿಹಳ್ಳಿ

ಗ್ರಾಮದ ಉತ್ತರದಿಕ್ಕಿಗೆ ದೊಡ್ಡಕೆರೆ ಇದೆ. ಈ ಕೆರೆಯ ನೀರು ಎರಡು ಹಳ್ಳಿಗೂ ಉಪಯುಕ್ತವಾಗಿರುವುದರಿಂದ ಕೆರೆಯನ್ನು ಕೋಡಿಹಳ್ಳಿ ಕೆರೆ ಅಥವಾ ಅನುಗವಳ್ಳಿ ದೊಡ್ಡಕೆರೆ ಎಂತಲೂ ಹೆಸರಿಸುತ್ತಾರೆ. ಕೆರೆಯು ಯಾವಾಗ ನಿರ್ಮಾಣವಾಯಿತು ಎಂಬುದರ ಬಗ್ಗೆ ಸ್ಪಷ್ಟ ಉಲ್ಲೇಖಗಳಿಲ್ಲ. ಕೆರೆಯ ಪೂರ್ವದಿಕ್ಕಿನ ಕೋಡಿಯ ಸಮೀಪ ಈಶ್ವರ ದೇವಸ್ಥಾನ ಮತ್ತು ಹೊಯ್ಸಳ ಕಾಲಕ್ಕೆ ಸಂಬಂಧಿಸಿದ ಶಾಸನವಿರುವ ಒಂದು ವೀರಗಲ್ಲು ಇದೆ. ಇವುಗಳಿಂದ ಇಲ್ಲಿಯ ಕೆರೆಯೂ ಹೊಯ್ಸಳ ಕಾಲದಲ್ಲಿಯೇ ರಚನೆಯಾಗಿರಬಹುದೆಂದು ಊಹಿಸಬಹುದಾಗಿದೆ.

ಕೆರೆಯ ಏರಿಯು ಉತ್ತರ ದಕ್ಷಿಣಾಭಿಮುಖವಾಗಿ ಅರ್ಧಭಾಗವಿದ್ದು, ನಂತರ ಪೂರ್ವದಿಕ್ಕಿಗೆ ಮುಂದುವರಿದಿದೆ. ಕೆರೆಯ ಅಂಗಳದಿಂದ ಏರಿಯು ಪೂರ್ವದಿಕ್ಕಿಗೆ ಇದೆ. ಏರಿಯು ಸುಮಾರು ೧೧೪೦.೦೦ ಮೀ. ಉದ್ದ ೩ ಮೀ. ಅಗಲ ಮತ್ತು ೧೨ ಅಡಿಗಳಷ್ಟು ಒಳಪಾರ್ಶ್ವದ ಎತ್ತರ ಹೊಂದಿದೆ. ಏರಿಯ ಮೇಲೆ ವಾಹನಗಳು ಅನುಗವಳ್ಳಿಯಿಂದ ಕೋಡಿಹಳ್ಳಿಗೆ ಓಡಾಡಲು ರಸ್ತೆ ನಿರ್ಮಿಸಲಾಗಿದೆ. ಕೆರೆಯು ಮೊದಲು ಮೂರು ಹಳೆಯ ತೂಬುಗಳನ್ನು ಹೊಂದಿದ್ದು, ಇವು ಇಂದು ಕಾರ್ಯಾಚರಣೆಯಲ್ಲಿಲ್ಲ. ಈ ತೂಬುಗಳು ಸುಮಾರು ಏರಿಯಿಂದ ೧೦ ಅಥವಾ ೧೨ ಅಡಿ ದೂರದಲ್ಲಿವೆ. ಈ ತೂಬುಗಳ ಮಧ್ಯದ ತೂಬಿನ ಮೇಲೆ ಗಜಲಕ್ಷ್ಮಿ ಶಿಲ್ಪವಿದೆ. ಇತ್ತೀಚಿನ ದಿನಗಳಲ್ಲಿ ಕೆರೆಯ ಕಾಮಗಾರಿ ಮಾಡಿ ಎರಡು ಹೊಸ ತೂಬುಗಳನ್ನು ಏರಿಗೆ ಇರಿಸಲಾಗಿದೆ. ತೂಬಿಗೆ ಅನುಸಾರವಾಗಿ ಏರಿಯ ಹೊರಭಾಗದಲ್ಲಿ ತೊಟ್ಟಿಗಳನ್ನು ನಿರ್ಮಿಸಿ ಅವುಗಳಿಗೆ ಕಾಲುವೆಗಳನ್ನು ಜೋಡಿಸಲಾಗಿದೆ. ಕಾಲುವೆಗಳ ಮೂಲಕ ಆಯಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ವಿವಿಧ ಬೆಳೆಗಳನ್ನು ಬೆಳೆಯಲಾಗುತ್ತದೆ. ಕೆರೆಯ ಹಿಂಭಾಗದ ಜಮೀನು ಬ್ರಾಹ್ಮಣರಿಗೆ ಸೇರಿದ್ದು, ಅನಂತರ ಬ್ರಾಹ್ಮಣರು ತಮ್ಮ ಜಮೀನುಗಳನ್ನು ಒಕ್ಕಲಿಗರಿಗೆ ಮಾರಿದ್ದರಿಂದ ಈ ದಿನಗಳಲ್ಲಿ ಜಮೀನುಗಳು ಒಕ್ಕಲಿಗ ಜನಾಂಗದವರಿಗೆ ಸೇರಿದೆ. ಇವರು ಕೆರೆಯಲ್ಲಿ ನೀರು ಇದ್ದಾಗ ಭತ್ತವನ್ನು ಬೆಳೆಯುತ್ತಾರೆ. ಇಲ್ಲದೆ ಹೋದಾಗ ಬೇಸಿಗೆ ಬೆಳೆಗಳಾದ ಶುಂಠಿ, ಜೋಳ ಮತ್ತು ಕಡಲೆ ಬೆಳೆಗಳನ್ನು ಬೆಳೆಯುತ್ತಾರೆ. ತೂಬಿನ ನಿರ್ವಹಣೆಯನ್ನು ಇಂದು ಗ್ರಾಮದ ಜನರೇ ನೋಡಿಕೊಳ್ಳುತ್ತಿದ್ದಾರೆ. ತೂಬನ್ನು ಎತ್ತುವಾಗ ಗಂಗಮ್ಮನ ಪೂಜೆ ಮಾಡಿ ಆಯಕಟ್ಟು ಪ್ರದೇಶಕ್ಕೆ ನೀರನ್ನು ಹರಿಸುತ್ತಾರೆ.

ಕೆರೆಯು ೭೮.೪೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೩೪.೦೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದ್ದು, ೫೮.೦೦ ಹೆಕ್ಟೇರ್ ಆಯಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುತ್ತಿದೆ. ಕೆರೆಯು ಹಿಂದಿನಿಂದಲೂ ಮಳೆನೀರನ್ನು ಮಾತ್ರ ಹೊಂದಿದೆ. ಕೆರೆಗೆ ಸುತ್ತಮುತ್ತಲಿನ ಗುಡ್ಡದ ನೀರು ಬಂದು ಸಂಗ್ರಹವಾಗುತ್ತದೆ. ಕೆರೆಯ ಹೆಚ್ಚುವರಿ ನೀರು ಕೋಡಿಯ ಮೂಲಕ ಹರಿದು ಹಿರೇಕಡಲೂರು ಕೆರೆಗೆ ಹೋಗುತ್ತದೆ. ಕೆರೆಯ ಗಾತ್ರಕ್ಕೆ ಅನುಸಾರವಾಗಿ ಕೆರೆಯ ಎರಡು ದಿಕ್ಕುಗಳಲ್ಲಿ ಎರಡು ಕೋಡಿಗಳಿವೆ. ದಕ್ಷಿಣದಿಕ್ಕಿನಲ್ಲಿ ಒಂದು ಕೋಡಿ ಇದ್ದರೆ ಮತ್ತೊಂದು ಪೂರ್ವದಿಕ್ಕಿನಲ್ಲಿದೆ. ಎರಡು ಕೋಡಿಗಳ ನೀರು ಪೂರ್ವದಿಕ್ಕಿನ ಕಡೆಗೆ ಹರಿದುಹೋಗುತ್ತವೆ.

ಪೂರ್ವದಿಕ್ಕಿನ ಕೋಡಿಯು ಸುಮಾರು ೪೦ ಮೀ. ಉದ್ದ ಇದೆ. ಈ ಕೋಡಿಯ ಸಮೀಪ ಈಶ್ವರ ದೇವಸ್ಥಾನವಿದ್ದು, ಒಳಭಾಗದಲ್ಲಿ ಶಿವಲಿಂಗ ಮತ್ತು ಬಸವಣ್ಣನ ವಿಗ್ರಹಗಳಿವೆ. ಮುಂಭಾಗದಲ್ಲಿ ಒಂದು ವೀರಗಲ್ಲು ಮತ್ತು ಪಾದಗಳ ಸುತ್ತ ಹಾವು ಸುತ್ತಿರುವ ಭೈರವನಪಾದವಿರುವ ಶಿಲ್ಪ ಫಲಕವಿದೆ. ಬಹುಶಃ ಗ್ರಾಮದಲ್ಲಿ ಭೈರವನ ದೇವಾಲಯವಿದ್ದು, ಅದು ನಾಶವಾದ ನಂತರ ಆ ಪಾದಗಳನ್ನು ಈ ದೇವಾಲಯದ ಬಳಿ ತಂದಿಟ್ಟಿರಬಹುದು.

ಕೆರೆಯು ಸಾಕಷ್ಟು ಒತ್ತುವರಿಯಾಗಿದ್ದು ಇಂದು ಸಣ್ಣ ನೀರಾವರಿ ಇಲಾಖೆಯವರು ಒತ್ತುವರಿಯಾದ ಜಮೀನುಗಳನ್ನು ಬಿಡಿಸಿ ಕೆರೆಯ ಸುತ್ತ ಕಾಲುವೆಗಳನ್ನು ನಿರ್ಮಿಸಿದ್ದಾರೆ. ಕೆರೆಯನ್ನು ಜೀರ್ಣೋದ್ಧಾರ ಮಾಡಿ ಕೆರೆಯಲ್ಲಿ ಹೂಳು ತೆಗೆಸಿರುವುದರಿಂದ ಕೆರೆಯು ತನ್ನ ವಿಸ್ತೀರ್ಣತೆಯನ್ನು ಹೆಚ್ಚಿಸಿಕೊಂಡಿದೆ. ಅಲ್ಲದೆ ಹೆಚ್ಚು ನೀರು ಸಂಗ್ರಹವಾಗಲು ಸಹಾಯಕವಾಗಿದೆ. ಕೆರೆಗೆ ನೀರು ಬಂದಾಗ ಜನಪದರು ಇದರ ಉಪಯುಕ್ತತೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಒಟ್ಟಾರೆ ಕೆರೆಯು ಸಣ್ಣ ನೀರಾವರಿ ಇಲಾಖೆಯಿಂದ ಸಂರಕ್ಷಣೆಯನ್ನು ಪಡೆದಿದೆ.

ಹೊಳಲು ಕೆರೆ

ಶಾಂತಿಗ್ರಾಮ ಹೋಬಳಿಯಲ್ಲಿ ಬರುವ ಗ್ರಾಮ ಹೊಳಲು. ಹಾಸನದಿಂದ ೧೮ ಕಿ.ಮೀ. ದೂರದಲ್ಲಿದೆ. ಗ್ರಾಮದ ಪೂರ್ವಕ್ಕೆ ಕೆರೆ ಇದೆ. ಕೆರೆಯ ಏರಿಯು ದಕ್ಷಿಣದಿಂದ ಉತ್ತರಾಭಿಮುಖವಾಗಿ ಹೋಗಿ ಮಧ್ಯಭಾಗವು ಪಶ್ಚಿಮದಿಕ್ಕಿನ ಕಡೆಗೆ ಅಂಕುಡೊಂಕಾಗಿ ಮುಂದುವರಿದು ಕೊನೆಯ ಭಾಗವು ಪುನಃ ದಕ್ಷಿಣದಿಕ್ಕಿಗೆ ಮುಂದುವರಿದಿದೆ. ಏರಿಯು ೧೨೬೦ ಮೀ. ಉದ್ದ, ೫ ಮೀ. ಅಗಲ ಮತ್ತು ೧೨ ಅಡಿಗಳಷ್ಟು ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಗೆ ಅಳವಡಿಸಿದಂತೆ ಎರಡು ಹೊಸ ತೂಬುಗಳಿವೆ. ದಕ್ಷಿಣದಿಕ್ಕಿನ ತೂಬಿನ ಮುಂಭಾಗದಲ್ಲಿ ಏರಿಯಿಂದ ಸುಮಾರು ೧೨ ಅಡಿ ದೂರದಲ್ಲಿ ಒಂದು ಹಳೆಯ ತೂಬಿದೆ. ಈ ತೂಬಿನ ಮೇಲೆ ಅಪ್ರಕಟಿತ ಎರಡು ಸಾಲಿನ ತ್ರುಟಿತ ಶಾಸನವಿದೆ. ತೂಬು ಇಂದು ಕಾರ್ಯಾಚರಣೆಯಲ್ಲಿಲ್ಲ. ತೂಬಿನ ನಿರ್ವಹಣೆಯನ್ನು ಹಿಂದಿನಿಂದಲೂ ಗಂಗಾಮತ ಜನಾಂಗಕ್ಕೆ ಸೇರಿದ ನೀರ್ಗಂಟಿಗಳು ನೋಡಿಕೊಳ್ಳುತ್ತಿದ್ದಾರೆ. ಇವರಿಗೆ ಜಮೀನನ್ನು ಬಿಟ್ಟಿದ್ದಾರೆ. ಕೆರೆಯು ೧೦೮.೮೦ ಹೆಕ್ಟೇರ್ ಜಲವಿಸ್ತೀರ್ಣ, ೮೦.೦೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದ್ದು, ೭೫.೦೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆ ಆಯಕಟ್ಟು ಜಮೀನು ಹೆಚ್ಚಾಗಿ ಒಕ್ಕಲಿಗ ಜನಾಂಗದವರಿಗೆ ಸೇರಿದೆ. ಇವರು ಕೆರೆಯ ನೀರನ್ನು ಬಳಸಿಕೊಂಡು ಕಬ್ಬು, ಭತ್ತ ಇನ್ನೂ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ.

ಕೆರೆಯು ಮಳೆ ನೀರನ್ನು ಮಾತ್ರ ಹೊಂದಿದೆ. ಕೆರೆಗೆ ಶಾಂತಿಗ್ರಾಮ, ಹೆರಗು ಕೆರೆಯಿಂದ ನೀರು ಬಂದು ಸಂಗ್ರಹವಾಗುತ್ತದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಕೆರೆಯ ದಕ್ಷಿಣದಿಕ್ಕಿನಲ್ಲಿ

ಸುಮಾರು ೩೫ ಮೀ. ಉದ್ದದ ಕೋಡಿಯನ್ನು ಅಳವಡಿಸಲಾಗಿದೆ. ಕೋಡಿಯ ಸಮೀಪ ಆಂಜನೇಯ ದೇವಸ್ಥಾನವಿದ್ದು, ವೈಷ್ಣವ ಜನಾಂಗಕ್ಕೆ ಸೇರಿದ ವೆಂಕಟೇಶ ಎಂಬ ವ್ಯಕ್ತಿಯು ಪ್ರತಿ ದಿನ ಪೂಜೆ ಮಾಡಿಕೊಂಡು ಹೋಗುತ್ತಾರೆ. ಹಾಗೆಯೇ ದೇವಮ್ಮ ಎಂಬ ಹೆಸರಿನ ಚಿಕ್ಕಗುಡಿಯು ಕೆರೆಯ ಏರಿಯಲ್ಲಿದೆ. ಅದು ಹೊರಭಾಗಕ್ಕೆ ಕಾಣದಂತೆ ಗಿಡಗಳು ಬೆಳೆದಿವೆ. ಈ ದೇವರು ಗ್ರಾಮದೇವತೆಯಾಗಿದೆ. ಬಸವಣ್ಣ ಎಂಬ ಲಿಂಗಾಯತ ವ್ಯಕ್ತಿಯು ಪ್ರತಿದಿನ ದೇವಮ್ಮನನ್ನು ಪೂಜೆ ಮಾಡುತ್ತಾರೆ. ದೇವಮ್ಮನಿಗೆ ಹೊಳಲು ತವರುಮನೆಯಾದರೆ ದೇವಳ್ಳಿ ಗಂಡನ ಮನೆಯಾಗಿದೆ ಎಂದು ಸ್ಥಳೀಯ ಜನರು ಅಭಿಪ್ರಾಯಪಡುತ್ತಾರೆ.

ಕೆರೆಯು ಇಂದು ಸಾಕಷ್ಟು ಒತ್ತುವರಿಯಾಗಿದೆ. ಸ್ಥಳೀಯರ ಪ್ರಕಾರ ೬೦೦ ಎಕರೆ ಕೆರೆಯಲ್ಲಿ ೭೦೦ ಎಕರೆಯಷ್ಟು ಕೆರೆಯು ಒತ್ತುವರಿಯಾಗಿದೆ ಎಂದು ಹೇಳುತ್ತಾರೆ. ಹೀಗೆಯೇ ಮುಂದುವರಿದರೆ ಮುಂದಿನ ಪೀಳಿಗೆಗೆ ಕೆರೆಯೇ ಇಲ್ಲದಂತೆ ಮುಚ್ಚಿಹೋಗುತ್ತದೆ. ಕೆರೆಗೆ ಸಂಬಂಧಪಟ್ಟ ಇಲಾಖೆಯು ಗಮನ ಹರಿಸಿ ಒತ್ತುವರಿಯಾದ ಜಮೀನನ್ನು ಬಿಡಿಸಿದರೆ ಕೆರೆಯು ತನ್ನ ವಿಸ್ತೀರ್ಣವನ್ನು ಹೆಚ್ಚಿಸಿಕೊಂಡು ಹೆಚ್ಚು ನೀರು ಸಂಗ್ರಹವಾಗಲು ಸಹಾಯಕವಾಗುತ್ತದೆ.

ಹೊಸಹಳ್ಳಿ ಕೆರೆ

ಹೊಸಹಳ್ಳಿ ಕೆರೆಯು ಶ್ರವಣಬೆಳಗೊಳದಿಂದ ೨ ಮೀ. ದೂರದಲ್ಲಿದೆ. ಕೆರೆಯ ದಕ್ಷಿಣದಿಕ್ಕಿಗೆ ಏರಿಕಾಳಮ್ಮ ದೇವಸ್ಥಾನವಿದ್ದರೆ, ಉತ್ತರದಿಕ್ಕಿಗೆ ಜೈನರ ಜಕ್ಕಳದಮ್ಮ ಬಸದಿ ಇದೆ. ಜಕ್ಕಿಯಬ್ಬೆ ಎಂಬುವಳು ಕೆರೆಯನ್ನು ಕಟ್ಟಿಸಿದಳೆಂದು ಸ್ಥಳೀಯರು ತಿಳಿಸುತ್ತಾರೆ. ಕ್ರಿ.ಶ. ೧೧೧೮ರ ಶ್ರವಣಬೆಳಗೊಳದ ಶಾಸನದಲ್ಲಿ[೨೨] ಗಂಗರಾಜನು 'ಗಂಗಸಮುದ್ರ'ವೆಂಬ ಕೆರೆಯನ್ನು ಕಟ್ಟಿಸಿದ ವಿಚಾರವಿದೆ. ಆತ ಹೊಯ್ಸಳ ವಿಷ್ಣುವರ್ಧನನ ದಂಡನಾಯಕನಾಗಿದ್ದನು. ಆತ ಕಟ್ಟಿಸಿದ ಕೆರೆ ಗಂಗಸಮುದ್ರದ ಉಲ್ಲೇಖವೇ ಸುಮಾರು ಹದಿನೈದು ಶಾಸನಗಳಲ್ಲಿದೆ. ಆತನ ವಂಶಾವಳಿಯನ್ನು ಜಿನನಾಥಪುರದ ಒಂದು ಶಾಸನದಿಂದ ಗುರುತಿಸಬಹುದಾಗಿದೆ. ಶಾಸನದಲ್ಲಿರುವ ಗಂಗಸಮುದ್ರ ಕೆರೆ ಹೊಸಹಳ್ಳಿಯ ದೊಡ್ಡಕೆರೆಯೇ ಇದ್ದಿರಬಹುದು. ಏರಿಯು ಉತ್ತರದಿಂದ ದಕ್ಷಿಣಕ್ಕೆ ಅರ್ಧಭಾಗವಿದ್ದು, ಪಶ್ಚಿಮದಿಕ್ಕಿಗೆ ಮುಂದುವರಿದಿದೆ. ಕೆರೆಯ ಅಂಗಳದಿಂದ ಏರಿಯು ಪಶ್ಚಿಮದಿಕ್ಕಿಗಿದೆ. ಏರಿಯ ಉದ್ದ ೬೦೦ ಮೀ. ಅಗಲ ೫ ಮೀ. ಮತ್ತು ಒಳಪಾರ್ಶ್ವದ ಎತ್ತರ ೨೦ ಅಡಿ ಇದೆ. ಏರಿಯ ಮೇಲೆ ಜನ, ದನ ಮತ್ತು ವಾಹನಗಳು ಓಡಾಡುವಷ್ಟು ಜಾಗವಿದೆ. ಏರಿಯ ಕೆಳಭಾಗದಲ್ಲಿ ಶ್ರವಣಬೆಳಗೊಳದಿಂದ ಪರಮ ಗ್ರಾಮಕ್ಕೆ ವಾಹನಗಳು ಚಲಿಸುವಂತೆ ರಸ್ತೆ ನಿರ್ಮಿಸಲಾಗಿದೆ. ಏರಿಯಿಂದ ಒಳಗೆ ಸುಮಾರು ೧೨ ಅಡಿ ಅಂತರದಲ್ಲಿ ಒಂದು ಹಳೆಯ ತೂಬಿದೆ. ತೂಬಿನ ಒಂದು ಬದಿಯಲ್ಲಿ ಜಿನತೀರ್ಥಂಕರನ ಶಿಲ್ಪವಿದ್ದರೆ ಮತ್ತೊಂದು ಬದಿಯಲ್ಲಿ ಶಾಸನಸಹಿತ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ. ಈ ತೂಬು ನಿರ್ವಹಣೆಯಲ್ಲಿಲ್ಲ. ಮತ್ತೊಂದು ತೂಬನ್ನು ಏರಿಯಿಂದ ಸುಮಾರು ೫ ಅಡಿ ದೂರದಲ್ಲಿ

ಇರಿಸಲಾಗಿದೆ. ಈ ತೂಬನ್ನು ತಲುಪಲು ಸಿಮೆಂಟ್ ಸೇತುವೆಯನ್ನು ಮಾಡಲಾಗಿದೆ. ಏರಿಯ ಇಳಿಜಾರಿನಲ್ಲಿ ಕಾಲುವೆಯನ್ನು ನಿರ್ಮಿಸಿ, ಅದರ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸಲಾಗುತ್ತಿದೆ. ಅಚ್ಚುಕಟ್ಟು ಪ್ರದೇಶವು ಹೆಚ್ಚಾಗಿ ಒಕ್ಕಲಿಗ ಜನಾಂಗದವರಿಗೆ ಸೇರಿದೆ. ತೂಬಿನ ನಿರ್ವಹಣೆಯನ್ನು ಗಂಗಾಮತಸ್ಥರಾದ ನಿಂಗಪ್ಪ, ಶಿವರಾಜು ನೋಡಿಕೊಳ್ಳುತ್ತಿದ್ದಾರೆ. ಗ್ರಾಮದ ಜನರು ನೀರ್ಗಂಟಿಗಳಿಗೆ ಎಕರೆಗೆ ಇಂತಿಷ್ಟು ಎಂದು ಭತ್ತವನ್ನು ಕೊಡುತ್ತಾರೆ. ಏರಿಯ ಹಿಂಬದಿಯಲ್ಲಿ ಸಪ್ತಮಾತೃಕೆಯರ ಶಿಲ್ಪಗಳಿವೆ.

ಕೆರೆಯು ಹಿಂದಿನಿಂದಲೂ ಮಳೆನೀರನ್ನು ಹೊಂದಿದ್ದು ಬೆಟ್ಟಗುಡ್ಡಗಳ ನೀರು ಬಂದು ಸಂಗ್ರಹವಾಗುತ್ತದೆ. ಅಲ್ಲದೆ ಸುಂಡಹಳ್ಳಿ ಕೆರೆಯ ನೀರು ಬರುತ್ತದೆ. ಕೆರೆ ತುಂಬಿ ಹೆಚ್ಚುವರಿ ನೀರು ಬೆಕ್ಕ ಕೆರೆಗೆ ಹೋಗುತ್ತದೆ. ಕೆರೆಯು ೫೧.೮೨ ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದಿದೆ. ೫೧.೮೨ ಹೆಕ್ಟೇರ್ ಜಲವಿಸ್ತೀರ್ಣವನ್ನು ಹೊಂದಿದ್ದು, ೫೬.೫೬ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುತ್ತಿದೆ. ಕೆರೆಯು ನೀರಾವರಿ ಇಲಾಖೆಯಿಂದ ರಕ್ಷಣೆಯನ್ನು ಪಡೆದಿದೆ.

ದೊಡ್ಡಕುಂಚೆ ಅಮಾನಿಕೆರೆ

ಹೊಳೆನರಸೀಪುರ ತಾಲೂಕಿನ ಹಳೆಕೋಟೆ ಹೋಬಳಿಯಿಂದ ಸುಮಾರು ೮ ಕಿ.ಮೀ. ದೂರದಲ್ಲಿ ದೊಡ್ಡಕುಂಚೆ ಗ್ರಾಮವಿದೆ. ತಾಲೂಕಿನಿಂದ ೧೨ ಕಿ.ಮೀ. ದೂರವಿದೆ. ಊರಿನಿಂದ ವಾಯವ್ಯಕ್ಕೆ ದೊಡ್ಡಕುಂಚೆ ಅಮಾನಿಕೆರೆ ಇದ್ದು, ಅದಕ್ಕೆ ಹೇಮಾವತಿ ನಾಲೆಯನ್ನು ಅಳವಡಿಸಲಾಗಿದೆ. ನಾಲೆಯು ಪಶ್ಚಿಮದ ಕಡೆಯಿಂದ ಪೂರ್ವದ ಕಡೆಗೆ ಕೆರೆಯ ಮೂಲಕ ಹೊರಹೋಗುತ್ತದೆ. ಕೆರೆಯು ಹೊಯ್ಸಳ ಕಾಲದಲ್ಲಿಯೇ ನಿರ್ಮಾಣವಾದಂತೆ ಕಂಡುಬರುತ್ತದೆ. ಕ್ರಿ.ಶ. ೧೧೩೯ರ ದೊಡ್ಡಕುಂಚದ ಶಾಸನದಲ್ಲಿ[೧೨೩] ಚಿಕ್ಕಗಾವುಂಡ ಮತ್ತು ಮೂವರು ನಾಲ್ಕು ಸಲಗೆ ತರಿ ಭೂಮಿ ಮತ್ತು ೧೦ ಕೊಳಗ ಖುಷ್ಕಿ ಭೂಮಿಯನ್ನು ದೇವಾಲಯಕ್ಕೆ ದತ್ತಿ ನಿಡಿರುವುದು ದಾಖಲಾಗಿದೆ.

ಕೆರೆಯ ಏರಿಯು ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಮುಂದುವರಿದಿದೆ. ಏರಿಯು ಸುಮಾರು ೫೦೦ ಮೀ. ಉದ್ದ ಮತ್ತು ಮೇಲ್ಭಾಗದ ಅಗಲ ೭ ಮೀ. ಇದೆ. ಏರಿಯ ಮೇಲೆ ವಾಹನಗಳು ಚಲಿಸಲು ದೊಡ್ಡಕುಂಚೆಯಿಂದ ಹರಿಹರಪುರಕ್ಕೆ ಹೋಗಲು ರಸ್ತೆ ಮಾಡಲಾಗಿದೆ. ಏರಿಗೆ ಅಳವಡಿಸಿದಂತೆ ೩ ತೂಬುಗಳಿವೆ. ಅವುಗಳಿಗೆ ಮರದ ದಿಮ್ಮಿಗಳಿಗೆ ಬದಲು ಕಬ್ಬಿಣದ ಬಾಗಿಲುಗಳನ್ನು ಅಳವಡಿಸಲಾಗಿದೆ. ತೂಬುಗಳ ಹೊರಭಾಗದಲ್ಲಿ ಕಾಲುವೆಗಳನ್ನು ಮಾಡಿ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹರಿಸಲಾಗುತ್ತದೆ. ಕೆರೆ ಆಯಕಟ್ಟು ಜಮೀನು ಹೆಚ್ಚಾಗಿ ಒಕ್ಕಲಿಗ ಜನಾಂಗದವರಿಗೆ ಸೇರಿದ್ದು, ಅವರು ಕೆರೆನೀರನ್ನು ಬಳಸಿಕೊಂಡು ಕಬ್ಬು, ಭತ್ತ ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ. ಬೇಸಿಗೆ ಕಾಲದಲ್ಲಿ ಕೆರೆಗೆ ನೀರು ಬಂದರೆ ಭತ್ತದ ಬೆಳೆಯನ್ನು ವಾರ್ಷಿಕವಾಗಿ ೨ ಬೆಳೆ ತೆಗೆಯುತ್ತಾರೆ.

ಕೆರೆಯು ೨೦.೦೦ ಹೆಕ್ಟೇರ್ ಜಲವಿಸ್ತೀರ್ಣ, ೯.೬೨ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದ್ದು ೨೨.೦೦ ಹೆಕ್ಟೇರ್ ಆಯಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯ ಪಶ್ಚಿಮದಿಕ್ಕಿನಲ್ಲಿ ೩೦ ಮೀ. ಉದ್ದದ ಕೋಡಿ ಇದ್ದು ಹೆಚ್ಚುವರಿ ನೀರು ಅದರ ಮೂಲಕ ಹೊರಹೋಗುತ್ತದೆ. ಈ ಕೋಡಿಯ ಸಮೀಪ ಕನ್ನಂಬಡಮ್ಮ ಗುಡಿ ಇದೆ. ಇಲ್ಲಿ ಪ್ರತಿ ಶುಕ್ರವಾರ ಪೂಜೆ ನಡೆಯುತ್ತದೆ. ಗ್ರಾಮಕ್ಕೆ ಒಳಿತಾಗಲೆಂದು ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಜನರನ್ನು ಸಂರಕ್ಷಿಸಲು ವರ್ಷಕ್ಕೊಮ್ಮೆ ಗ್ರಾಮದ ಜನರು ಬಂಡಿಹಬ್ಬ ಮಾಡುತ್ತಾರೆ.

ಪೂಮಗಾಮೆ ಕೆರೆ

ಪೂಮಗಾಮೆ ಗ್ರಾಮವು ಕುದುರೆಗುಂಡಿಯಿಂದ ದುದ್ದ ಗ್ರಾಮಕ್ಕೆ ಹೋಗುವ ಮಾರ್ಗದಲ್ಲಿ ಬರುತ್ತದೆ. ದುದ್ದದಿಂದ ೫ ಕಿ.ಮೀ. ಮತ್ತು ಹಾಸನದಿಂದ ೧೮ ಕಿ.ಮೀ. ಇದೆ. ಗ್ರಾಮದ ಉತ್ತರಕ್ಕೆ ಪೂಮಗಾಮೆ ಕೆರೆ ಇದೆ. ಇದನ್ನು ೨೦೧೨ರಲ್ಲಿ ಕಾಮಗಾರಿ ಮಾಡಿಸಿ ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಲಾಗಿದೆ. ಕ್ರಿ.ಶ. ೧೧೩೯ರ ಪೂಮಗಾಮೆಯ ಶಾಸನದಲ್ಲಿ[೧೨೪] ಬಸವಯ್ಯ ಪೂಮಗಾಮೆಯ ದೇವಾಲಯವನ್ನು ಮಾಡಿಸಿ, ಕಲಿದೇವರ ನೈವೇದ್ಯಕ್ಕೆ ಹಿರಿಕೆರೆಯ ಮೊದಲೇರಿಯ ಗದ್ದೆ ಖಂಡುಗ ೧, ದೇವರ ಮೂಡಣ ಕಿರುಕೆರೆಯ ಹೂವಿನ ತೋಟ, ಊರ ದಕ್ಷಿಣ, ಪೂರ್ವಭಾಗದ ಬೆದ್ದಲೆಯನ್ನು ದತ್ತಿ ಬಿಟ್ಟಿರುವ ವಿಷಯದ ಉಲ್ಲೇಖವಿದೆ. ಶಾಸನದಲ್ಲಿ ಉಲ್ಲೇಖವಾಗಿರುವ ಹಿರಿಯಕೆರೆ ಗ್ರಾಮದ ಉತ್ತರಕ್ಕಿರುವ ಪೂಮೆಗಾಮೆಯ ಕೆರೆಯೇ ಇರಬಹುದು. ಕಿರುಕೆರೆ ಎಂದರೆ ಪೂಮೆಗಾಮೆ ಕೆರೆಯ ಪಕ್ಕದಲ್ಲಿ ಕಟ್ಟೆಯಂತಿರುವ ಚಿಕ್ಕಕೆರೆಯೇ ಆಗಿರಬೇಕು.

ಪೂಮಗಾಮೆ ಕೆರೆಯ ಏರಿಯು ದಕ್ಷಿಣದಿಕ್ಕಿನಿಂದ ಉತ್ತರದ ಕಡೆಗೆ ಅರ್ಧಭಾಗವಿದ್ದು, ನಂತರ ಪೂರ್ವ ಪಶ್ಚಿಮಾಭಿಮುಖವಾಗಿ ಅಂಕುಡೊಂಕಾಗಿ ಮುಂದುವರಿದಿದೆ. ಕೆರೆ ಅಂಗಳದಿಂದ ಉತ್ತರಕ್ಕೆ ಏರಿಯಿದ್ದು, ದಕ್ಷಿಣಕ್ಕೆ ಅಂಗಳವಿದೆ. ಕೆರೆ ಮುಂಭಾಗದಲ್ಲಿನ ಆಯಕಟ್ಟು ಪ್ರದೇಶವು ಹೆಚ್ಚಾಗಿ ಹಿಂದೆ ಬ್ರಾಹ್ಮಣರಿಗೆ ಸೇರಿತ್ತು. ಇಂದಿರಾಗಾಂಧಿ ಕಾಲದಲ್ಲಿ ಉಳುವವನೇ ಭೂಮಿಯ ಒಡೆಯ ಎಂದು ಕಾನೂನು ಬಂದಾಗ ಒಕ್ಕಲಿಗರಿಗೆ ಸೇರಿತು. ಈ ದಿನಗಳಲ್ಲಿ ಅಚ್ಚುಕಟ್ಟು ಪ್ರದೇಶದಲ್ಲಿ ತೆಂಗಿನಮರಗಳು ಕಂಡುಬಂದಿವೆ. ಹಾಗಾಗಿ ಕೆರೆಯ ನೀರು ಅಷ್ಟಾಗಿ ಕೃಷಿಗೆ ಬಳಕೆಯಾಗುತ್ತಿಲ್ಲ. ಕೆಲವೊಮ್ಮೆ ಶುಂಠಿ, ಆಲೂಗಡ್ಡೆ, ರಾಗಿ ಬೆಳೆಗಳಿಗೆ ಉಪಯುಕ್ತವಾಗುತ್ತಿತ್ತು. ಕೆರೆಯು ಒಂದು ತೂಬು, ಒಂದು ಕೋಡಿಯನ್ನು ಹೊಂದಿದೆ. ಕೆರೆಯ ಪಶ್ಚಿಮದಿಕ್ಕಿಗೆ ಇದ್ದ ಈಶ್ವರ ದೇವಾಲಯವನ್ನು ಪೂರ್ವದಿಕ್ಕಿನ ಕಡೆಗೆ ಪುನರ್‌ನಿರ್ಮಾಣ ಮಾಡಲಾಗಿದೆ.

ಪೂಮಗಾಮೆ ಕೆರೆ ಸಮೀಪದಲ್ಲಿ ಒಂದು ಚಿಕ್ಕಕೆರೆ ಇದೆ. ಅದನ್ನು ಕಟ್ಟೆ ಎಂತಲೂ ಕರೆಯುತ್ತಾರೆ. ಸ್ಥಳೀಯ ಐತಿಹ್ಯದಂತೆ ಮೈಸೂರು ಒಡೆಯರು ಕಟ್ಟೆ ಕಟ್ಟಿಸಿ ಅರಳಿಮರಗಳನ್ನು ಕೆರೆ ಸುತ್ತಲೂ ಹಾಕಿಸಿರುವಂತೆ ಹೇಳುತ್ತಾರೆ. ಇದಕ್ಕೆ ಸಾಕ್ಷಿ ಎಂಬಂತೆ ಕೆರೆ ಸಮೀಪದಲ್ಲಿ ಅರಳಿ

ಮರಗಳು ಸಿಗುತ್ತವೆ. ಈ ಕೆರೆ ನೀರನ್ನು ಹಿಂದೆ ಬ್ರಾಹ್ಮಣ ಜನಾಂಗದವರು ಮಾತ್ರ ಬಳಸುತ್ತಿದ್ದರು. ಆ ಜನಾಂಗದ ಸ್ತ್ರೀಯರು ಸ್ನಾನ ಮಾಡುತ್ತಿರುವಂತೆ ತಿಳಿಸುತ್ತಾರೆ. ಒಂಬತ್ತು ವರ್ಷಗಳ ಹಿಂದೆ ಈ ಕೆರೆ ನೀರನ್ನು ಕುಡಿಯಲು ಬಳಸುತ್ತಿದ್ದರಂತೆ. ಈ ದಿನಗಳಲ್ಲಿ ಕೆರೆ ಅಂಗಳದಲ್ಲಿ ಹೂಳು ತುಂಬಿ ದನಕರುಗಳು ಮೇಯಲು ಬಳಕೆಯಾಗುತ್ತಿದೆ. ಕೆರೆ ಅಂಗಳದಲ್ಲಿ ಒಂದು ತೂಬಿದ್ದು ಹಾಳಾಗಿದೆ. ಇದರಿಂದ ಬ್ರಾಹ್ಮಣರು ತಮ್ಮ ಅಚ್ಚುಕಟ್ಟು ಪ್ರದೇಶಗಳಿಗೆ ಈ ಕೆರೆಯ ನೀರನ್ನು ಉಪಯೋಗಿಸಿರಬೇಕು ಎನ್ನುವುದು ನನ್ನ ಒಂದು ಗ್ರಹಿಕೆಯಾಗಿದೆ.

ಉಂಡಿಗನಾಳು ಕೆರೆ

ಉಂಡಿಗನಾಳು ಗ್ರಾಮವು ಅರಸೀಕೆರೆಯಿಂದ ೨೦ ಕಿ.ಮೀ., ಜಾವಗಲ್ ಹೋಬಳಿಯಿಂದ ೧೦ ಕಿ.ಮೀ. ದೂರದಲ್ಲಿದೆ. ಕಾಡುಬೆಟ್ಟದ ತಪ್ಪಲಿನಲ್ಲಿರುವ ಈ ಗ್ರಾಮ ಕಳ್ಳಕಾರರ ತಾಣವಾಗಿತ್ತು. ಹಾಗಾಗಿ ಇಲ್ಲಿ ಸಾಗಿಬರುವ ವ್ಯಾಪಾರಿ ಸರಕುಗಳಿಗೆ ಮತ್ತು ಪ್ರಯಾಣಿಕರಿಗೆ ಮಾರಣಾಂತಿಕವಾಗಿತ್ತು. ಇಂತಹ ಜಾಗವನ್ನು ಆರಿಸಿ ರಹದಾರಿ ನೆಲೆಯನ್ನಾಗಿ ಮಾಡಿ ಅದರ ಅಭಿವೃದ್ಧಿ, ಸುಭದ್ರತೆಗೆ ಹೊಯ್ಸಳರು ಗಮನ ನೀಡಿದರು. ಕ್ರಿ.ಶ. ೧೧೩೯ರ ಶಾಸನವು[೨೫] ವಿಷ್ಣುವರ್ಧನನ ಕಾರುಣ್ಯದಿಂದ ಉಂಡಿಗೆಹಾಳನ್ನೂ ಹಾಗೂ ಚಲುವಜೀವನಹಳ್ಳಿ(ಚಲುವನಹಳ್ಳಿ)ಯನ್ನು ಜಟ್ಟಿಗಳು ಆಳುತ್ತಿದ್ದರೆಂದು ಹೇಳುತ್ತದೆ.

ಗುಜರಾತಿನ ಕಡೆಯ ಜಟ್ಟಿಗಳು ವಿಷ್ಣುವರ್ಧನನ ಕಾಲದಲ್ಲಿ ವಲಸೆ ಬಂದು ಇಲ್ಲಿ ನೆಲಸಿದವರೆಂದು ಕೆಲವು ಐತಿಹಾಸಿಕ ಆಧಾರಗಳಿಂದ ತಿಳಿದುಬರುತ್ತದೆ. ಇಲ್ಲಿನ ಐತಿಹ್ಯವೂ ಇದನ್ನೇ ಪೋಷಿಸುತ್ತದೆ. ಜಟ್ಟಿಗಳು ಗುಜರಾತಿನ ಕಾಥೇವಾಡ ಎಂಬ ಊರಿನ ವಾಸಿಗಳಾಗಿದ್ದು, ನಿಂಬಜಾದೇವಿಯ ಆರಾಧಕರಾಗಿದ್ದ ಜಟ್ಟಿಗಳು ಅಲ್ಲಿ ತಮಗೆ ಉಂಟಾದ ತೊಂದರೆಯಿಂದ ತಮ್ಮ ದೇವರೊಂದಿಗೆ ದಕ್ಷಿಣಕ್ಕೆ ವಲಸೆ ಹೊರಟರು. ವಿಷ್ಣುವರ್ಧನ ಇವರ ಶೌರ್ಯ ಪರಾಕ್ರಮಗಳನ್ನು ಗುರುತಿಸಿ ಅವರಿಗೆ ರಾಜ್ಯ ಕೊಟ್ಟು ಸಾಮಂತರನ್ನಾಗಿ ಮಾಡಿದನು. ಅಂದಿನಿಂದ ಈ ಗ್ರಾಮ ಜಟ್ಟಿ ವಂಶಕ್ಕೆ ಸೇರಿತ್ತೆಂದು ಹೇಳುತ್ತಾರೆ. ಐತಿಹ್ಯಗಳಲ್ಲಿ ಮುನಿಜಟ್ಟಿಯ ಹೆಸರನ್ನು ಉಲ್ಲೇಖಿಸುತ್ತಾರೆ. ಶಾಸನಗಳಲ್ಲಿ ಮುನಿಜಟ್ಟಿಯ ಬಗ್ಗೆ ಮಾಹಿತಿಗಳಿಲ್ಲ. ಮುನಿಜಟ್ಟಿಯು ಕಟ್ಟಿಸಿದನೆಂದು ಹೇಳುವ ನಿಂಬಜಾದೇವಿ ದೇವಾಲಯವು ಕ್ರಿ.ಶ. ೧೧೩೯ರ ಶಾಸನದಲ್ಲಿ ಉಲ್ಲೇಖವಿರುವಂತೆ ಮಲ್ಲಿಜಟ್ಟಿ ಎಂಬುವವನು ಕಟ್ಟಿಸಿದ ದೇವಾಲಯವೇ ಆಗಿರಬೇಕು. ಜಟ್ಟಿಗಳ ಪರಾಕ್ರಮ ನಿಷ್ಠೆಗಳಿಗೆ ಈ ಗ್ರಾಮದಲ್ಲಿರುವ ಮಹಾಸತಿಯ ಕಲ್ಲು, ವೀರಮಾಸ್ತಿ ಕಲ್ಲು, ಹಂದಿ ಬೇಟೆ ವೀರಗಲ್ಲುಗಳು ಮೂಲ ಸಾಕ್ಷಿಗಳಾಗಿವೆ.

ಕೆಳದಿ ಅರಸರ ಕಾಲದಲ್ಲಿ ಮೈಸೂರು ಒಡೆಯರಿಗೆ ನಿಷ್ಠರಾಗಿದ್ದ, ಈ ಉಂಡಿಗನಾಳಿನ ಸಾಮಂತ ಜಟ್ಟಿಗಳ ಮೇಲೆ ಕೆಳದಿರಾಣಿ ಚೆನ್ನಮ್ಮಾಜಿ ನವರಾತ್ರಿ ಸಂಭ್ರಮದಲ್ಲಿದ್ದ ಜಟ್ಟಿಗಳನ್ನು

ಹಠಾತ್ತಾಗಿ ಮುತ್ತಿದಾಗ ಕೆಲವರು ಮಕ್ಕಳೊಂದಿಗೆ ಕೆರೆಗೆ ಹಾರಿಕೊಂಡರೆಂಬ ಪ್ರತೀತಿಯೂ ಕೂಡ ಇದೆ. ಇಲ್ಲಿನ ಶಾಸನ ಮತ್ತು ಐತಿಹ್ಯಗಳನ್ನು ಗಮನಿಸಿದಾಗ ಜಟ್ಟಿಗಳ ಆಳ್ವಿಕೆಯ ಅವಧಿಯಲ್ಲಿ ಗ್ರಾಮದಲ್ಲಿ ಕೆರೆಗಳು ಇದ್ದಿರುವುದು ಸ್ಪಷ್ಟವಾಗುತ್ತದೆ. ಗ್ರಾಮದಲ್ಲಿ ಉಂಡಿಗನಾಳು ಊರ ಮುಂದಿನ ಕೆರೆ ಮತ್ತು ಹಳೆನಾಯಕ ಕೆರೆಗಳೆಂಬ ಎರಡು ಕೆರೆಗಳಿವೆ. ಇವುಗಳ ನಿರ್ಮಾಣದ ಬಗ್ಗೆ ಸ್ಪಷ್ಟ ದಾಖಲೆಗಳಿಲ್ಲ. ಗ್ರಾಮದ ಉತ್ತರದಿಕ್ಕಿನಲ್ಲಿ ಊರಮುಂದೆ ದೊಡ್ಡಕೆರೆ ಇದೆ. ಇದರ ರಚನಾ ವಿನ್ಯಾಸವು ಹೊಯ್ಸಳ ಕಾಲದಲ್ಲಿಯೇ ನಿರ್ಮಾಣವಾದಂತಿದೆ. ಏರಿಯಾ ಪೂರ್ವ ಪಶ್ಚಿಮಾಭಿಮುಖವಾಗಿದ್ದು, ೧೫೦೦ ಮೀ. ಉದ್ದ, ೬ ಮೀ. ಅಗಲ ಮತ್ತು ೧೨ ಅಡಿ ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಯ ಮೇಲೆ ವಾಹನಗಳು ಜಾವಗಲ್‌ನಿಂದ ಹಾರನಹಳ್ಳಿಗೆ ಹೋಗಲು ರಸ್ತೆ ನಿರ್ಮಿಸಲಾಗಿದೆ.

ಏರಿಯಿಂದ ಸ್ವಲ್ಪ ಅಂತರದಲ್ಲಿ ಹಳೆಯ ತೂಬು ಇದೆ. ಇದು ಕಾರ್ಯ ನಿರ್ವಹಣೆಯಿಲ್ಲದೆ ಹಾಳಾಗಿದೆ. ೨೦೦೮-೦೯ರಲ್ಲಿ ಕೆರೆಯ ಕಾಮಗಾರಿ ಮಾಡಿ ಏರಿಗೆ ಇರಿಸಲಾಗಿದೆ. ಅಂತರ್ಜಲ ಮಟ್ಟ ಹೆಚ್ಚಿಸಲು, ಪ್ರಾಣಿಪಕ್ಷಿಗಳ ಉಪಯುಕ್ತತೆಗೆ ನೀರನ್ನು ಸಂಗ್ರಹಿಸಲು ಹೊಸ ತೂಬನ್ನು ಕೂಡ ಬಂದ್ ಮಾಡಿದ್ದಾರೆ. ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಹೆಚ್ಚಾಗಿ ತೆಂಗಿನ ಮರಗಳಿವೆ. ಹಾಗಾಗಿ ಕೆರೆಯ ನೀರು ಅಷ್ಟಾಗಿ ಕೃಷಿಗೆ ಬಳಕೆಯಾಗುತ್ತಿಲ್ಲ. ಕೆರೆಯ ಸುತ್ತಮುತ್ತಲಿನ ಗುಡ್ಡದ ನೀರು ಬಂದು ಸಂಗ್ರಹವಾಗುತ್ತದೆ. ಹೆಚ್ಚುವರಿ ನೀರು ನೇರ್ಲಿಗೆ ಕೆರೆಗೆ ಹೋಗುತ್ತದೆ. ಕೆರೆಯ ಏರಿಯ ಎರಡು ಬದಿಯ ಕೊನೆಯ ಅಂಚಿನಲ್ಲಿ ಕೋಡಿಯನ್ನು ಅಳವಡಿಸಲಾಗಿದೆ. ಕೆರೆಯು ೬೭.೪೫ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೩೪.೦೩ ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದಿದ್ದು, ೫೩.೩೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯ ಪೂರ್ವದಿಕ್ಕಿನಲ್ಲಿ ಆಂಜನೇಯ ದೇವಾಲಯವಿದ್ದು, ಮುಜರಾಯಿ ಇಲಾಖೆಗೆ ಸೇರಿದೆ. ಈ ದೇವಾಲಯದ ನಿರ್ವಹಣೆಗೆ ೨ ಎಕರೆ ಜಮೀನನ್ನು ಕೂಡ ಬಿಟ್ಟಿದ್ದಾರೆ. ಕೆರೆ ತುಂಬಿದಾಗ ಪಂಚಾಯಿತಿಯವರು ಗಂಗಮ್ಮನ ಪೂಜೆ ಮಾಡುತ್ತಾರೆ.

ಉಂಡಿಗನಾಳು ಗ್ರಾಮಕ್ಕೆ ಸೇರಿದ ಇನ್ನೊಂದು ಕೆರೆ ಹಳೆನಾಯಕನ ಕೆರೆ. ಏರಿಯು ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಮುಂದುವರಿದಿದೆ. ೧೫೦೦ ಮೀ. ಉದ್ದ, ಮೇಲ್ಭಾಗದ ಅಗಲ ೨ ಮೀ. ಮತ್ತು ಒಳಪಾರ್ಶ್ವದ ಇಳಿಜಾರಿನ ಎತ್ತರ ೧೨ ಅಡಿ ಇದೆ. ಏರಿಗೆ ಅಳವಡಿಸಿದಂತೆ ಬಾವಿಯಾಕಾರದ ಒಂದು ತೂಬು ಇದೆ. ಇದರ ರಚನಾವಿನ್ಯಾಸದಿಂದ ಹೊಯ್ಸಳ ನಂತರ ಕಾಲದಲ್ಲಿ ನಿರ್ಮಾಣವಾಗಿದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಕೆರೆಯು ೧೧.೪ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೭.೧೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದ್ದು, ೫೧.೦೦ ಹೆಕ್ಟೇರ್ ಆಯಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುತ್ತಿದೆ. ಕೆರೆಯ ಮುಂಭಾಗದ

ಜಮೀನು ಹೆಚ್ಚಾಗಿ ಲಿಂಗಾಯತರಿಗೆ ಸೇರಿದೆ. ಕೆರೆ ನೀರನ್ನು ಬಳಸಿಕೊಂಡು ಭತ್ತ, ತೆಂಗಿನ ಬೆಳೆಯನ್ನು ಬೆಳೆಯುತ್ತಾರೆ.

ಕೆರೆಯ ದಂಡೆಯಲ್ಲಿ ಎರಡು ಕಲ್ಲುಗಳಿವೆ. ಅವುಗಳನ್ನು ಗ್ರಾಮಸ್ಥರು ಧರ್ಮಸ್ಥಳದಿಂದ ತಂದಿರುವಂತೆ ಹೇಳುತ್ತಾರೆ. ಆ ಕಲ್ಲುಗಳು ನಮ್ಮನ್ನು ಬಿಡಿ ಹೋಗುತ್ತೇವೆ ಎಂದವಂತೆ. ಆಗ ಗ್ರಾಮಸ್ಥರು ಕೆರೆ ದಂಡೆಯಲ್ಲಿ ಇಟ್ಟಿರುವಂತೆ ತಿಳಿಸುತ್ತಾರೆ. ವರ್ಷಕ್ಕೊಮ್ಮೆ ಗಂಗಮ್ಮನ ಪೂಜೆ ಮತ್ತು ಪರ್ವ ಮಾಡುತ್ತಾರೆ. ಎರಡು ಕೆರೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು ರಕ್ಷಣೆ ಪಡೆದಿವೆ.

ಚಿಕ್ಕಕಡಲೂರು ಕೆರೆ

ಹೊಯ್ಸಳ ಕಾಲದ ಕೆರೆಗಳಲ್ಲಿ ಚಿಕ್ಕಕಡಲೂರು ಕೆರೆಯೂ ಒಂದು. ಇದನ್ನು ಸ್ಥಳೀಯರು ಹೆಗ್ಗೆರೆಕೆರೆ ಎಂತಲೂ ಕರೆಯುತ್ತಾರೆ. ಚಿಕ್ಕಕಡಲೂರಿನ ಕ್ರಿ.ಶ. ೧೧೫೬ರ ಶಾಸನವು[೧೫] ಗೋವಿಂದಪುರದ ಮಹಾರಾಜರು ಹೊನ್ನಾಜಿಯ ಎಂಬುವನಿಗೆ ದೇವಾಲಯ ನಿರ್ಮಿಸಿ, ಕೆರೆ ಕಟ್ಟಿಸಿದ್ದಕ್ಕಾಗಿ ಭೂದಾನಗಳನ್ನು ಕೊಟ್ಟಿರುವುದಾಗಿ ತಿಳಿಸಿದೆ. ಈ ಕೆರೆಯ ಏರಿಯು ದಕ್ಷಿಣದಿಕ್ಕಿನಿಂದ ಅಂಕುಡೊಂಕಾಗಿ ಉತ್ತರದಿಕ್ಕಿನ ಕಡೆ ಬಾಗಿದೆ. ಏರಿಗೆ ಇರಿಸಿದಂತೆ ಎರಡು ತೂಬುಗಳಿವೆ. ಏರಿಯ ಉತ್ತರದಿಕ್ಕಿನ ಕಡೆ ಪೂರ್ವದಿಕ್ಕಿಗೆ ನೀರು ಹರಿಯುವಂತೆ ಒಂದು ಕೋಡಿ ಇರಿಸಲಾಗಿದೆ. ಕೆರೆಯ ಅಂಗಳದಲ್ಲಿ ಹೂಳು ತುಂಬಿರುವುದರಿಂದ ಕೋಡಿಯು ಸಮತಟ್ಟಾದ ಅಂಗಳಕ್ಕೆ ಹೊಂದಿಕೊಂಡಂತಿದೆ. ಕೆರೆಯು ೨೮.೪೦ ಹೆಕ್ಟೇರ್ ಜಲವಿಸ್ತೀರ್ಣವನ್ನು ಹೊಂದಿದ್ದು, ೪೦.೨೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುವ ಸಾಮರ್ಥ್ಯ ಹೊಂದಿದೆ. ಈ ದಿನಗಳಲ್ಲಿ ಕೆರೆಯು ಸುಮಾರು ಮೂರು ನಾಲ್ಕು ಎಕೆರೆಯಷ್ಟು ಒತ್ತುವರಿಯಾಗಿದ್ದು, ಕೃಷಿ, ಪ್ರಾಣಿ, ಪಕ್ಷಿಗಳಿಗೆ ಉಪಯುಕ್ತವಾಗುತ್ತಿದೆ.

ಕಳಸದ ಕೆರೆ

ಬೇಲೂರಿನಿಂದ ಮೂಡಿಗೆರೆಗೆ ಹೋಗುವ ಮಾರ್ಗದಲ್ಲಿ ಕಳಸದ ಕೆರೆ ಬರುತ್ತದೆ. ಈ ಕೆರೆಯನ್ನು ಬೇಲೂರಿನ ಚಿಕ್ಕಕೆರೆ, ಕಳಸಿನಕೆರೆ, ಕಳಸದಕೆರೆ ಎಂಬುದಾಗಿ ಕರೆಯುತ್ತಾರೆ. ಬೇಲೂರು ಗ್ರಾಮದ ಉತ್ತರದಿಕ್ಕಿಗೆ ಕೆರೆಯಿದೆ. ಕೆರೆಯ ನೀರಿನಲ್ಲಿ ಚನ್ನಕೇಶವ ದೇವಾಲಯದ ಗೋಪುರದ ಮೇಲಿನ ಕಲಶದ ಪ್ರತಿಬಿಂಬ ಕೆರೆಯಲ್ಲಿ ಕಾಣಿಸುತ್ತಿದ್ದುದರಿಂದ ಕೆರೆಗೆ ಕಳಸದ ಕೆರೆ ಎಂಬ ಹೆಸರು ಬಂದಿರುವುದಾಗಿ ಸ್ಥಳೀಯರು ತಿಳಿಸುತ್ತಾರೆ. ಕೆರೆಯ ದಕ್ಷಿಣ ಬದಿಯಲ್ಲಿ ಚನ್ನಕೇಶವ ದೇವಸ್ಥಾನವಿದೆ. ಕಳಸದ ಕೆರೆಯು ಯಾವಾಗ ನಿರ್ಮಾಣವಾಯಿತು ಎಂಬುದಕ್ಕೆ ಯಾವುದೇ ಶಾಸನಾಧಾರಗಳಿಲ್ಲ. ಬೇಲೂರಿನ ಕ್ರಿ.ಶ. ೧೧೬೪ರ ಶಾಸನದಲ್ಲಿ[೧೬] ಬಿಟ್ಟಿಬೋವನು ಸಾವಿರ ಹೊನ್ನುಗಳ ವೆಚ್ಚದಲ್ಲಿ ಹೋಸಣ(ಹೊಯ್ಸಳ) ಸಮುದ್ರವೆಂಬ ಕೆರೆಯ ಹೂಳು ತೆಗೆಸಿ, ಬಡಗಣದಿಕ್ಕಿನ ಕೋಡಿಯ ಸಮೀಪ ತೂಬು ಇರಿಸಿರುವುದಾಗಿ ಉಲ್ಲೇಖವಾಗಿದೆ. ಬಹುಶಃ ಹೋಸಣ ಸಮುದ್ರ ಎಂದು

ಹೇಳಿರುವುದು ಈ ಕೆರೆಯೇ ಇರಬಹುದು. ಕೆರೆಯ ಏರಿಯು ಉತ್ತರ ದಕ್ಷಿಣಾಭಿಮುಖವಾಗಿದೆ. ಏರಿಯು ಸುಮಾರು ೫೦೦ ಮೀ. ಉದ್ದ ೫ ಮೀ. ಅಗಲ ಮತ್ತು ೧೨ ಅಡಿಗಳಷ್ಟು ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಯ ಮೇಲೆ ಜನ, ದನ ಮತ್ತು ವಾಹನಗಳು ಚಲಿಸಲು ರಸ್ತೆ ನಿರ್ಮಿಸಲಾಗಿದೆ. ಕೆರೆಯು ಎರಡು ತೂಬು ಮತ್ತು ಒಂದು ಕೋಡಿಯನ್ನು ಹೊಂದಿದೆ. ೪.೦೯ ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಮತ್ತು ೧.೩೦ ಹೆಕ್ಟೇರ್ ಜಲ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ನೀರು ಭತ್ತ, ತೆಂಗು ಮತ್ತು ಅಡಕೆ ತೋಟಗಳಿಗೆ ಉಪಯುಕ್ತವಾಗುತ್ತಿದೆ. ಅಲ್ಲದೆ ಪ್ರಾಣಿ ಪಕ್ಷಿಗಳಿಗೆ ಹಾಗೂ ಜನರು ಬಟ್ಟೆ ತೊಳೆಯಲು ಬಳಸುತ್ತಾರೆ.

ಕೆರೆಯ ಉತ್ತರಬದಿಯಲ್ಲಿ ಸ್ವಲ್ಪ ಎತ್ತರವಾದ ಗುಡ್ಡವಿದೆ. ಅದರ ಮೇಲೆ ಬೂತಪ್ಪನ ಚಿಕ್ಕಗುಡಿ ಇದೆ. ಪಕ್ಕದಲ್ಲಿ ನಾಲ್ಕು ಕಲ್ಲು ಗುಂಡುಗಳಿದ್ದು, ಅವುಗಳ ಮಧ್ಯದಲ್ಲಿ ದೊಡ್ಡ ಮೀಸೆ ಇರುವ ರುಂಡ ಶಿಲ್ಪವಿದೆ. ಇವುಗಳಿಗೆ ನಿತ್ಯ ಪೂಜೆ ಇಲ್ಲ. ಸುತ್ತಮುತ್ತಲಿನ ಗ್ರಾಮದ ಭಕ್ತರು ಹಬ್ಬಗಳಲ್ಲಿ ಹರಕೆ ಮಾಡಿಕೊಂಡವರು ಇತರೆ ದಿನಗಳಲ್ಲಿ ಬಂದು ಕೋಳಿಯನ್ನು ಬಲಿ ಕೊಟ್ಟು ಪೂಜೆ ಮಾಡಿಕೊಂಡು ಹೋಗುತ್ತಾರೆ. ಕೆರೆಯ ಏರಿಯ ಮೇಲೆ ಆಂಜನೇಯ ಗುಡಿ ಇದೆ. ಅದನ್ನು ಸಿಡಿಲು ಆಂಜನೇಯ ಗುಡಿ ಎಂದು ಕರೆಯುತ್ತಾರೆ. ಈ ಗುಡಿಯನ್ನು ೨೦೧೦ರಲ್ಲಿ ಕಿತ್ತು ಹಾಕಿ ಹೊಸದಾಗಿ ಕೆರೆಯ ಉತ್ತರಬದಿಯಲ್ಲಿ ಕಟ್ಟುತ್ತಿದ್ದಾರೆ. ಹಾಗೆಯೇ ಕಳಸದ ಕೆರೆಯ ಪಶ್ಚಿಮ ದಂಡೆಯಲ್ಲಿ ಹೊಯ್ಸಳ ಶೈಲಿಯ ಶಿವ ದೇವಾಲಯವಿದ್ದು, ಸ್ಥಳೀಯರು ಅದನ್ನು ಶಂಕರೇಶ್ವರ ಎಂದು ಹೆಸರಿಸುತ್ತಾರೆ. ಬೇಲೂರಿನ ಕ್ರಿ.ಶ. ೧೧೬೪ರ ಶಾಸನದಲ್ಲಿ ಉಲ್ಲೇಖವಾಗಿರುವ ಬಿಟ್ಟೇಶ್ವರ ದೇವಾಲಯ ಇದೇ ಆಗಿರಬಹುದು. ಈ ದೇವಾಲಯದ ಮುಂಭಾಗದ ಮಂಟಪದಲ್ಲಿ ದೊಡ್ಡ ನಂದಿ ವಿಗ್ರಹವಿದೆ. ಮಂಟಪದ ಪಕ್ಕ ದೀಪಸ್ತಂಭವಿದೆ. ದೇವಾಲಯದ ಉತ್ತರಭಾಗದಲ್ಲಿ ಪಾರ್ವತಿಯ ಗುಡಿ ಇದೆ. ಶಂಕರೇಶ್ವರ ದೇವಾಲಯದ ಸ್ವಲ್ಪ ದೂರದಲ್ಲಿ ಒಂದು ಮಜ್ಜನ ಬಾವಿ ಇದೆ. ಕೆರೆಯ ಗದ್ದೆ ಬಯಲಿನ ದಿಬ್ಬದ ಮೇಲೆ ಒಂದು ಮಂಟಪವಿದೆ. ಅದನ್ನು ಸೂಳೆಮಂಟಪ ಎನ್ನುತ್ತಾರೆ. ಹಿಂದೆ ಇಲ್ಲಿಗೆ ಚನ್ನಕೇಶವನ ಉತ್ಸವ ಇಲ್ಲಿಗೆ ಬರುತ್ತಿತ್ತಂತೆ. ಈ ದಿನಗಳಲ್ಲಿ ಈ ಬಗೆಯ ಆಚರಣೆ ನಡೆಯುತ್ತಿಲ್ಲ. ಇಂದು ದಿಬ್ಬವನ್ನು ಉದ್ಯಾನವನವಾಗಿ ಮಾಡಲಾಗಿದೆ.

ದೊಡ್ಡಮಗ್ಗೆ ಕೆರೆ

ಅರಕಲಗೂಡು ತಾಲೂಕಿನಲ್ಲಿ ಬರುವ ಒಂದು ಹೋಬಳಿ ದೊಡ್ಡಮಗ್ಗೆ. ತಾಲೂಕಿನಿಂದ ಸುಮಾರು ೧೫ ಕಿ.ಮೀ. ದೂರದಲ್ಲಿದೆ. ಗ್ರಾಮದ ಪೂರ್ವದ ಕಡೆಗೆ ದೊಡ್ಡಮಗ್ಗೆ ಕೆರೆಯಿದೆ. ಇದು ಗಾತ್ರದಲ್ಲಿ ಸಣ್ಣ ಕೆರೆಯಾಗಿದೆ. ಅದನ್ನು ನಿರ್ಮಾಣ ಮಾಡಿದುದರ ಕುರಿತು ಸ್ಪಷ್ಟವಾದ ವಿವರಗಳಿಲ್ಲ. ಇಲ್ಲಿನ ಕ್ರಿ.ಶ. ೧೧೭೫ರ ಶಾಸನ[೨೮] ಬಿಲ್ಲ ಕೊಂಗಾಳ್ವನ ಆಳ್ವಿಕೆಯಲ್ಲಿ ಅಮೃತೇಶ್ವರ

ದೇವರಿಗೆ ಮಗ್ಗೆಯ ಚಿಕೆಯನಾಯಕ ಅಂಕೆಯಕನು ಊರ ಮುಂದಿನ ಕೆರೆಯ ಕೆಳಗಿನ ಗದ್ದೆಯನ್ನು ಬಿಟ್ಟಿರುವುದನ್ನು ತಿಳಿಸಿದೆ. ಹೀಗಾಗಿ ಬಹುಶಃ ಕ್ರಿ.ಶ. ೧೧ನೆಯ ಶತಮಾನದಲ್ಲಿಯೇ ಕೆರೆ ನಿರ್ಮಾಣವಾಗಿರಬಹುದೆನ್ನಲಾಗಿದೆ.

ಕೆರೆಗೆ ಮಳೆನೀರಲ್ಲದೆ ನಾಲೆಯ ನೀರು ಬರುತ್ತದೆ. ಹೆಚ್ಚುವರಿ ನೀರು ಹೊರಗೆ ಹರಿದು ಹೋಗಲು ಪಶ್ಚಿಮದಿಕ್ಕಿನಲ್ಲಿ ಕೋಡಿ ಇರಿಸಲಾಗಿದೆ. ಕೆರೆಯು ೨.೪೨ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೨.೦೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದೆ. ಏರಿಯು ಪಶ್ಚಿಮದಿಕ್ಕಿನಿಂದ ಪೂರ್ವದಿಕ್ಕಿನ ಕಡೆಗೆ ಅಂಕುಡೊಂಕಾಗಿ ಮುಂದುವರಿದಿದೆ. ಏರಿಯ ಮೇಲೆ ಜನ, ದನ ಓಡಾಡುವಷ್ಟು ಜಾಗವಿದ್ದು, ಏರಿಯೇ ಕಾಣದಂತೆ ಗಿಡಗಳು ಬೆಳೆದಿವೆ. ಏರಿಯು ಸುಮಾರು ೫೦೦ ಮೀ. ಉದ್ದ, ೩ ಮೀ. ಅಗಲ, ೧೫ ಅಡಿ ಹೊರ ಮತ್ತು ೧೨ ಅಡಿ ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಕೆರೆಗೆ ತೂಬುಗಳಿಲ್ಲ. ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಕೋಡಿಗೆ ಸಣ್ಣ ಸಣ್ಣ ಕಾಲುವೆಗಳನ್ನು ಅಳವಡಿಸಿ ಅವುಗಳ ಮೂಲಕ ಹಾಯಿಸಿಕೊಳ್ಳುತ್ತಾರೆ. ಈ ಪ್ರದೇಶದಲ್ಲಿ ಹೆಚ್ಚು ತೆಂಗು, ಅಡಕೆ ತೋಟಗಳಿವೆ. ಹಾಗಾಗಿ ಕೆರೆಯ ನೀರು ಅಷ್ಟಾಗಿ ಕೃಷಿಗೆ ಬಳಕೆಯಾಗುತ್ತಿಲ್ಲ. ಕೆರೆಯ ಅಚ್ಚುಕಟ್ಟು ಪ್ರದೇಶದ ಭೂಮಿಯು ಹೆಚ್ಚಾಗಿ ಒಕ್ಕಲಿಗ ಜನಾಂಗಕ್ಕೆ ಸೇರಿದೆ.

ಕೆರೆಯ ಪಶ್ಚಿಮಕ್ಕೆ ಮಗ್ಗೆಯಮ್ಮ ದೇವಸ್ಥಾನವಿದೆ. ಈ ದೇವರನ್ನು ಊರ ಕಾಯುವ ದೇವತೆ ಎನ್ನುತ್ತಾರೆ. ಊರಿನಲ್ಲಿ ದಡಾರ, ಪ್ಲೇಗ್ ಬಂದಾಗ ದೇವತೆಗೆ ಮಂಗಳಾರತಿ ಮಾಡಿಸುತ್ತಾರೆ. ವರ್ಷಕ್ಕೊಮ್ಮೆ ಯುಗಾದಿಯಲ್ಲಿ ಎಡೆ ಮಾಡಿ ಮೀಸಲು ಇಡುತ್ತಾರೆ. ಈ ದೇವಾಲಯದ ಪಕ್ಕದಲ್ಲಿ ಹಾಳುಬಿದ್ದ ವೀರಭದ್ರ ದೇವಾಲಯ ಮತ್ತು ಈಶ್ವರ ದೇವಸ್ಥಾನಗಳಿವೆ. ಅವುಗಳ ಮುಂಭಾಗದಲ್ಲಿ ಶಾಸನ, ವೀರ ಮಹಾಸತಿಯ ಕಲ್ಲುಗಳು ಬಿದ್ದಿವೆ. ಕೆರೆಯ ದಕ್ಷಿಣದಿಕ್ಕಿಗೆ ವೇಣುಗೋಪಾಲ ದೇವಸ್ಥಾನವಿದ್ದು ಪ್ರತಿ ವರ್ಷ ಫೆಬ್ರವರಿ ತಿಂಗಳಿನಲ್ಲಿ ಜಾತ್ರೆ ನಡೆಯುತ್ತದೆ. ಕೆರೆಗೆ ಸಂಬಂಧಿಸಿದಂತೆ ಯಾವುದೇ ಆಚರಣೆಗಳಿಲ್ಲ. ಕೆರೆಯು ಅಂಗಳ ಸಾಕಷ್ಟು ಒತ್ತುವರಿಯಾಗಿದೆ.

ವೀರದೇವನಹಳ್ಳಿ ಕೆರೆ

ಹಳೇಬೀಡು ಮತ್ತು ಬೇಲೂರಿಗೆ ಹೋಗುವ ಮಾರ್ಗದಲ್ಲಿ ವೀರದೇವನಹಳ್ಳಿ ಎಂಬ ಗ್ರಾಮ ಇದೆ. ಹೊಯ್ಸಳ ಕಾಲದಲ್ಲಿ ನಿರ್ಮಾಣವಾದ ವೀರನಾರಾಯಣ ದೇವಸ್ಥಾನ ಊರಿನಲ್ಲಿರುವುದರಿಂದ ಗ್ರಾಮಕ್ಕೆ ವೀರದೇವನಹಳ್ಳಿ ಎಂಬ ಹೆಸರು ಬಂದಿರಬಹುದು. ಗ್ರಾಮದ ಸುತ್ತಲೂ ನಾಲ್ಕು ಕೆರೆಗಳಿದ್ದು, ಅವುಗಳಲ್ಲಿ ಗ್ರಾಮಕ್ಕೆ ಸಂಬಂಧಿಸಿದಂತೆ ಎರಡು ಕೆರೆಗಳು ಪ್ರಮುಖವಾಗಿವೆ. ವೀರದೇವನಹಳ್ಳಿಯ ಕ್ರಿ.ಶ. ೧೧೮೬ರ ಶಾಸನದಲ್ಲಿ[೧೯] ವೀರಯ್ಯ ದಂಡನಾಯಕ ಕಾಡನ್ನು ಕಡಿದು ನಾಡನ್ನು ವಿಸ್ತರಿಸಿ ವೀರಬಲ್ಲಾಳಪುರ ಎಂಬ ನಗರ ನಿರ್ಮಿಸಿದನು. ಅಲ್ಲದೆ ರುದ್ರಸಮುದ್ರ,

ಗಂಗಸಮುದ್ರ, ಅಚ್ಚುತಸಮುದ್ರ ಮತ್ತು ವೀರಸಮುದ್ರವೆಂಬ ನಾಲ್ಕು ಕೆರೆಗಳನ್ನು ನಿರ್ಮಿಸಿ, ಅಗ್ರಹಾರಕ್ಕೆ ದಾನಗಳನ್ನು ನೀಡಿದನೆಂದೂ ಆ ಕೆರೆಗಳನ್ನು ತೋಡಿದವರಿಗೆ ಹನ್ನೆರಡು ವರ್ಷಗಳ ಕಾಲ ತೆರಿಗೆಗಳಿಂದ ವಿನಾಯಿತಿ ನೀಡಿ ನಂತರದ ವರ್ಷಗಳಿಗೆ ೧೦ ಸಲಿಗೆ ನಿಗದಿ ಮಾಡಿದ್ದನ್ನು ದಾಖಲಿಸಿದೆ. ಇಲ್ಲಿನ ಕೆರೆಗಳನ್ನು ಸ್ಥಳೀಯರು ಬಲದಯ್ಯನ ಕೆರೆ, ಊರಮುಂದಿನ ಕೆರೆ, ಚನ್ನೇನಹಳ್ಳಿ ಕೆರೆ, ಗೂಡಸಾಮಿ ಕೆರೆ ಎಂದು ಗುರುತಿಸುತ್ತಾರೆ. ಕೆರೆಗಳಿಗೆ ಯಾವುದೇ ರೀತಿಯ ಸ್ಥಳೀಯ ಐತಿಹ್ಯವಾಗಲೀ, ಇತಿಹಾಸವಾಗಲೀ ಹಾಗೂ ಶಾಸನದಲ್ಲಿ ಉಲ್ಲೇಖವಾದ ಹೆಸರುಗಳಾಗಲೀ ಇಲ್ಲದೆ ಇರುವುದರಿಂದ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟ ಕೆರೆಗಳಿವೆ ಎಂದು ಸ್ಪಷ್ಟವಾಗಿ ಗುರುತಿಸುವುದು ಕಷ್ಟಕರವಾಗಿದೆ. ಶಾಸನವು ಗ್ರಾಮದಲ್ಲಿನ ವೀರನಾರಾಯಣ ದೇವಾಲಯ ಮುಂಭಾಗದಲ್ಲಿ ನೆಟ್ಟ ಕಲ್ಲಿನಲ್ಲಿರುವುದರಿಂದ ಬಹುಶಃ ಗ್ರಾಮದ ಜನರು ತಮ್ಮ ಅನುಕೂಲಕ್ಕೆ ತಕ್ಕಂತೆ ಕೆರೆಗಳ ಹೆಸರುಗಳನ್ನು ಇಟ್ಟಿರಬಹುದು.

ಗ್ರಾಮಕ್ಕೆ ಸಂಬಂಧಿಸಿದಂತೆ ಊರಿನ ಮುಂಭಾಗದ ಪೂರ್ವದಿಕ್ಕಿನಲ್ಲಿ ಒಂದು ಕೆರೆ ಇದೆ. ಅದನ್ನು ಊರಮುಂದಿನ ಕೆರೆ ಎಂದು ಕರೆಯುತ್ತಾರೆ. ಕೆರೆಯು ೫೨.೦೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಮತ್ತು ೦.೬೦ ಹೆಕ್ಟೇರ್ ಜಲವಿಸ್ತೀರ್ಣವನ್ನು ಹೊಂದಿದೆ. ಏರಿಯು ಉತ್ತರ ಮತ್ತು ದಕ್ಷಿಣಾಭಿಮುಖವಾಗಿದ್ದು ಸುಮಾರು ೫೦೦ ಮೀ. ಉದ್ದ ಮತ್ತು ೪ ಮೀ. ಮೇಲ್ಭಾಗದ ಅಗಲವಿದೆ. ಕೆರೆಗೆ ಬೇಲೂರು ಕೆರೆಯಿಂದ ನೀರು ಬಂದು ಸಂಗ್ರಹವಾಗುತ್ತದೆ. ಹೆಚ್ಚುವರಿ ನೀರು ಕೋಡಿಯ ಮೂಲಕ ಹಳೇಬೀಡು ಕೆರೆಗೆ ಹೋಗುತ್ತದೆ. ಹಾಗೆಯೇ ಗ್ರಾಮದ ವಾಯವ್ಯದಿಕ್ಕಿನ ಗುಡ್ಡದ ಕೆಳಗೆ ವೀರದೇವನ ಹಳ್ಳಿಗೆ ಸೇರಿದ ಮತ್ತೊಂದು ಕೆರೆ ಇದೆ. ಅದನ್ನು ಬಲದಯ್ಯನ ಕೆರೆ ಎನ್ನುವರು. ಕೆರೆಯು ಹಳೇಬೀಡಿನಿಂದ ವೀರದೇವನಹಳ್ಳಿಗೆ ಹೋಗುವ ಮಾರ್ಗದ ಬಲ ಬದಿಯ ಗುಡ್ಡದ ಕೆಳಗೆ ಕಂಡುಬರುತ್ತದೆ. ಕೆರೆಯು ೦.೪೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದ್ದು, ೦.೨೬ ಹೆಕ್ಟೇರ್ ಜಲವಿಸ್ತೀರ್ಣವನ್ನು ಹೊಂದಿದೆ. ಏರಿಯು ಉತ್ತರದಿಕ್ಕಿನಿಂದ ದಕ್ಷಿಣದಿಕ್ಕಿಗೆ ಮುಂದುವರಿದಿದೆ. ಏರಿಯ ಮೇಲ್ಭಾಗದ ಅಗಲ ೫ ಮೀ. ಮತ್ತು ಉದ್ದ ಸುಮಾರು ೫೦೦ ಮೀ. ಇದೆ. ಕೆರೆಗೆ ಗುಡ್ಡದ ನೀರು ಬಂದು ಸಂಗ್ರಹವಾಗುತ್ತದೆ. ಪ್ರಸ್ತುತ ದಿನಗಳಲ್ಲಿ ಕೆರೆಯನ್ನು ನೋಡಿದಾಗ ಕೆರೆಯ ಏರಿಯು ಕಾಣದಂತೆ ಗಿಡಗಳು ಬೆಳೆದಿವೆ. ಕೆರೆಯ ನೀರು ಹೆಚ್ಚಾಗಿ ಕೃಷಿಗೆ ಬಳಕೆಯಾಗದೆ ಪ್ರಾಣಿಪಕ್ಷಿಗಳು ಕುಡಿಯಲು ಹಾಗೂ ಜನರು ಬಟ್ಟೆ ತೊಳೆಯಲು ಉಪಯುಕ್ತವಾಗುತ್ತಿದೆ. ವೀರದೇವನಹಳ್ಳಿಯಲ್ಲಿ ಕಂಡುಬರುವ ಕೆರೆಗಳನ್ನು ಗಮನಿಸಿದಾಗ ಊರಮುಂದಿನ ಕೆರೆಯು ಹೆಚ್ಚಾಗಿ ಕೃಷಿಗೆ ಬಳಕೆಯಾಗುತ್ತಿರುವುದು ಕಂಡುಬಂದಿದೆ. ಇವೆರಡು ಚಿಕ್ಕಕೆರೆಗಳಾಗಿದ್ದರೂ ಕೂಡ ಉಪಯುಕ್ತತೆ ಪಡೆದಿವೆ.

ಕಬಳಿ ಕೆರೆ

ಚನ್ನರಾಯಪಟ್ಟಣದ ಹಿರೇಸಾವೆ ಹೋಬಳಿಯಲ್ಲಿ ಬರುವ ಒಂದು ಗ್ರಾಮ ಕಬಳಿ. ತಾಲೂಕಿನಿಂದ ಸುಮಾರು ೨೫ ಕಿ.ಮೀ. ದೂರದಲ್ಲಿದೆ. ಗ್ರಾಮದ ದಕ್ಷಿಣಕ್ಕೆ ಕೆರೆ ಇದೆ. ಈ

ಕೆರೆಯನ್ನು ಕಬಳಿ ಕೆರೆ ಎಂದು ಕರೆಯುವರು. ಕ್ರಿ.ಶ. ೧೧೮೬ರ ಶಾಸನದಲ್ಲಿ[೧೬೦] ಹೊನ್ನಜೀಯ ಹೊಸಕೆರೆಯನ್ನು ಕಟ್ಟಿಸಿ, ದೇವಾಲಯವನ್ನು ಮಾಡಿಸಿದುದರ ಉಲ್ಲೇಖವಿದೆ. ಕೆರೆಯ ಏರಿಯು ಪೂರ್ವದಿಂದ ದಕ್ಷಿಣದಿಕ್ಕಿನ ಕಡೆಗೆ ನಿರ್ಮಾಣವಾಗಿದೆ. ಏರಿಯ ಉದ್ದ ಸುಮಾರು ೧೭೦೦ ಮೀ., ಮೇಲ್ಭಾಗದ ಅಗಲ ೩ ಮೀ. ಮತ್ತು ಒಳಪಾರ್ಶ್ವದ ಎತ್ತರ ೧೫ ಅಡಿ ಇದೆ. ಏರಿಗೆ ಹೊಂದಿಕೊಂಡಂತೆ ಒಂದು ತೂಬಿದೆ. ಏರಿಯ ಮೇಲೆ ಓಡಾಡಲು ಸಾಧ್ಯವಾಗದಂತೆ ಗಿಡಗಳು ಬೆಳೆದಿರುವುದರಿಂದ ತೂಬು ಸ್ಪಷ್ಟವಾಗಿ ಕಾಣುತ್ತಿಲ್ಲ. ಏರಿಯ ಹಿಂಭಾಗದಲ್ಲಿ ಮಲ್ಲೇಶ್ವರ ದೇವಸ್ಥಾನವಿದೆ. ಈ ದೇವಾಲಯವನ್ನು ಮಣ್ಣಿನಿಂದ ಮುಚ್ಚಿದಂತಿದೆ. ಬಹುಶಃ ಗಾಳಿ, ನೀರು, ಬಿಸಿಲು ಮಳೆಗಳಿಂದ ನಾಶವಾಗಬಾರದು ಎಂಬ ಉದ್ದೇಶದಿಂದ ಈ ರೀತಿ ಮಾಡಿರಬಹುದು. ಈ ಬಗೆಯ ದೇವಾಲಯಗಳು ಹಾಸನ ತಾಲೂಕಿನ ಶಾಂತಿಗ್ರಾಮ ಕೆರೆ, ಚನ್ನರಾಯಪಟ್ಟಣ ತಾಲೂಕಿನ ದೇವಿಗೆರೆ, ಹೊಳೆನರಸೀಪುರ ತಾಲೂಕಿನ ಜೋಡಿಗುಬ್ಬಿ ಕೆರೆಗಳ ಸಮೀಪದಲ್ಲಿ ನೋಡಬಹುದು. ಕೆರೆಯು ೨.೩೫ ಎಂ.ಸಿ.ಎಫ್.ಟಿಯಷ್ಟು ನೀರನ್ನು ಸಂಗ್ರಹಿಸುವ ಸಾಮರ್ಥ್ಯವನ್ನು ಹೊಂದಿದ್ದು, ೧೦.೧೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಈ ದಿನಗಳಲ್ಲಿ ಕೆರೆಯ ನೀರು ಕೃಷಿಗೆ ಅಷ್ಟಾಗಿ ಬಳಕೆಯಾಗುತ್ತಿಲ್ಲ. ಕೆರೆ ಅಂಗಳ ಕಾಣದಂತೆ ಗಿಡಮರಗಳು ಬೆಳೆದು ಹೂಳು ತುಂಬಿದೆ. ಕೃಷಿಗೆ ಸಾಕಷ್ಟು ಒತ್ತುವರಿಯಾಗಿದೆ. ಇದಕ್ಕೆ ಸಂಬಂಧಪಟ್ಟ ಇಲಾಖೆ ಮತ್ತು ಗ್ರಾಮಸ್ಥರು ಗಮನ ಹರಿಸಬೇಕು ಇಲ್ಲದಿದ್ದರೆ ಕೆರೆಯು ಸಂಪೂರ್ಣವಾಗಿ ಒತ್ತುವರಿಯಾಗಿ ಮುಂದಿನ ಪೀಳಿಗೆಗೆ ಕೆರೆಯೇ ಇಲ್ಲದಂತಾಗುತ್ತದೆ.

ಆನೆಕೆರೆ

ಆನೆಕೆರೆಯು ಒಂದು ಐತಿಹಾಸಿಕ ಗ್ರಾಮವಾಗಿದ್ದು ದಂಡಿಗನಹಳ್ಳಿ ಹೋಬಳಿಗೆ ಸೇರಿದೆ. ಚನ್ನರಾಯಪಟ್ಟಣದಿಂದ ಸುಮಾರು ೧೦ ಕಿ.ಮೀ. ದೂರದಲ್ಲಿದೆ. ಗ್ರಾಮದಲ್ಲಿ 'ಚಿಕ್ಕಕೆರೆ' ಮತ್ತು 'ದೊಡ್ಡಕೆರೆ' ಎಂಬ ಎರಡು ಕೆರೆಗಳಿವೆ. ಇಲ್ಲಿಗೆ ಆನೆಗಳು ನೀರು ಕುಡಿಯಲು ಬರುತ್ತಿದ್ದರಿಂದ ಆನೆಕೆರೆ ಎಂಬ ಹೆಸರು ಬಂದಿದೆ ಎಂದು ಗ್ರಾಮಸ್ಥರು ಹೇಳುತ್ತಾರೆ. ಶಾಸನಗಳಲ್ಲಿ 'ಆನೆಗನಕೆರೆ' ಎಂದಿದ್ದು ಕಾಲಾಂತರದಲ್ಲಿ ಮಧ್ಯದ 'ಗನ' ಅಕ್ಷರಗಳು ಹೋಗಿ ಆನೆಕೆರೆ ಆಗಿದೆ. ಕ್ರಿ.ಶ. ೧೧೮೯ರ ಹೊಯ್ಸಳರ ಕಾಲದ ಶಾಸನದಲ್ಲಿ[೧೬೧] ಈ ಪ್ರದೇಶಕ್ಕೆ 'ಕಬ್ಬುಹ ನಾಡೆಂದೂ' 'ಕೇಶವಪುರ'ವೆಂಬುದಾಗಿ ಉಲ್ಲೇಖವಾಗಿದೆ. ಗ್ರಾಮವು ಅಗ್ರಹಾರವೂ ಆಗಿರುವುದಾಗಿ ತಿಳಿದುಬರುತ್ತದೆ.

ಗ್ರಾಮದ ವಾಯವ್ಯಕ್ಕೆ ಕೆರೆ ಇದೆ. ಅದು ಯಾವಾಗ ನಿರ್ಮಾಣವಾಯಿತು ಎಂಬುದಕ್ಕೆ ಶಾಸನಗಳ ದಾಖಲೆಗಳಿಲ್ಲ. ಕೆರೆಯ ಏರಿಯು ಪೂರ್ವದಿಕ್ಕಿನಿಂದ ಅಂಕುಡೊಂಕಾಗಿ ದಕ್ಷಿಣದಿಕ್ಕಿಗೆ ಇದೆ. ಏರಿಯು ಸುಮಾರು ೮೫೦ ಮೀ. ಉದ್ದ, ೪ ಮೀ. ಅಗಲ ಮತ್ತು ಒಳಪಾರ್ಶ್ವದ ಎತ್ತರ ೧೫ ಅಡಿ ಇದೆ. ಏರಿಗೆ ಹೊಂದಿಕೊಂಡಂತೆ ಎರಡು ತೂಬುಗಳನ್ನು ಹೊಸದಾಗಿ ಏರಿಗೆ ಇರಿಸಲಾಗಿದೆ. ತೂಬುಗಳಿಗೆ ಮರದ ತುಂಡುಗಳಿಗೆ ಬದಲಾಗಿ ಕಬ್ಬಿಣದ ಬಾಗಿಲನ್ನು ಅಳವಡಿಸಲಾಗಿದೆ.

ತೂಬಿನ ನಿರ್ವಹಣೆಯನ್ನು ಇತ್ತೀಚೆಗೆ ಕೆರೆಗೆ ಸಂಬಂಧಪಟ್ಟ ಇಲಾಖೆ ನೋಡಿಕೊಳ್ಳುತ್ತಿದೆ. ತೂಬಿನಿಂದ ಸುರಂಗದ ಮಾರ್ಗವಾಗಿ ಏರಿಯ ಹಿಂದಿನ ತೊಟ್ಟಿಗೆ ಹೋಗಿ ಅಲ್ಲಿಂದ ಕಾಲುವೆಗಳ ಮುಖಾಂತರ ಜಮೀನುಗಳಿಗೆ ಹೋಗುತ್ತದೆ. ಕೆರೆಯ ಅಚ್ಚುಕಟ್ಟು ಪ್ರದೇಶವು ಮೊದಲು ಬ್ರಾಹ್ಮಣರಿಗೆ ಸೇರಿದ್ದು, ನಂತರದ ದಿನಗಳಲ್ಲಿ ಬ್ರಾಹ್ಮಣರು, ಒಕ್ಕಲಿಗ ಜನಾಂಗದವರಿಗೆ ತಮ್ಮ ಜಮೀನನ್ನು ಮಾರಾಟ ಮಾಡಿದ್ದಾರೆ. ಇದರಿಂದ ಒಕ್ಕಲಿಗ ಜನಾಂಗದವರೇ ಅಚ್ಚುಕಟ್ಟು ಪ್ರದೇಶವನ್ನು ಉಳುಮೆ ಮಾಡಿ ಭತ್ತ, ಕಬ್ಬು ಇನ್ನೂ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಕೆರೆಗೆ ನಾಲೆಯ ನೀರು ಬಂದಾಗ ಭತ್ತದ ಎರಡು ಬೆಳೆ ಬೆಳೆದರೆ, ನಾಲೆ ನೀರು ಇಲ್ಲದೆ ಕೇವಲ ಮಳೆ ನೀರು ಸಂಗ್ರಹವಾಗಿದ್ದರೆ ಒಂದು ಬೆಳೆ ಬೆಳೆಯುತ್ತಾರೆ. ಕೆರೆಯು ೧೧೯ ಹೆಕ್ಟೇರ್ ಜಲವಿಸ್ತೀರ್ಣ ಹೊಂದಿದ್ದು, ೫೪.೮೦ ಹೆಕ್ಟೇರ್ ಆಯಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಲಾಗುತ್ತಿದೆ.

ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಪೂರ್ವಕ್ಕೆ ಮುಖಮಾಡಿರುವ ಶಂಬುಲಿಂಗೇಶ್ವರ ದೇವಸ್ಥಾನವಿದೆ. ಈ ದೇವಾಲಯದ ಮುಂಭಾಗದಲ್ಲಿ ಒಂದು ಪುಷ್ಕರಣಿ ಇದೆ. ಪ್ರತಿ ದಿನ ಈ ದೇವಾಲಯಕ್ಕೆ ಪೂಜೆ ಮಾಡಲು ಬರುವ ಅರ್ಚಕರು ದೇವಾಲಯದ ಮುಂಭಾಗದಲ್ಲಿರುವ ಪುಷ್ಕರಣಿ ನೀರಿನಿಂದ ಸ್ನಾನ ಮಾಡಿ, ಪೂಜೆಗೆ ಪುಷ್ಕರಣಿಯ ನೀರನ್ನು ಬಳಸುತ್ತಾರೆ. ಯಾರೂ ಕೂಡ ಪುಷ್ಕರಣಿಯ ನೀರನಲ್ಲಿ ಕಾಲನ್ನು ಅದ್ದುವಂತಿಲ್ಲ. ಒಂದು ಪಾತ್ರೆಯ ಮೂಲಕ ನೀರನ್ನು ಹೊರಗೆ ತೆಗೆದುಕೊಂಡು ತೊಳೆಯಬೇಕು ಎಂಬ ಕಟ್ಟುಪಾಡು ಬೆಳೆದುಬಂದಿದೆ. ಬಹುಶಃ ನಮ್ಮ ಪೂರ್ವಿಕರು ಪುಷ್ಕರಣಿಯ ನೀರನ್ನು ಕುಡಿಯಲು ಮತ್ತು ಧಾರ್ಮಿಕ ಆಚರಣೆಗೆ ಬಳಸುತ್ತಿದ್ದಿರಬಹುದು. ಈ ಪುಷ್ಕರಣಿಗೆ ಮಕ್ಕಳಿಲ್ಲದವರು ಋತುಮತಿ ಸಮಸ್ಯೆಗಳಿರುವವರು ಮತ್ತು ಮದುವೆಯಾಗದವರು ಬಂದು ಗಂಗಮ್ಮನ ಪೂಜೆ ಮಾಡಿದರೆ ಫಲ ದೊರೆಯುತ್ತದೆ ಎಂಬ ನಂಬಿಕೆ ಇದೆ. ಶಂಭುಲಿಂಗೇಶ್ವರ ದೇವಸ್ಥಾನದ ಜಾತ್ರೆಯು ಕಾರ್ತಿಕ ಮಾಸದ ನಾಲ್ಕನೇ ವಾರದ ಸೋಮವಾರದಂದು ನಡೆಯುತ್ತದೆ. ಆನೆಕೆರೆಯ ಪೂರ್ವಕ್ಕೆ ಚಿಕ್ಕಕೆರೆ ಇದೆ. ಕೆರೆಯ ಏರಿಯು ಪೂರ್ವ ಕಡೆಯಿಂದ ಪಶ್ಚಿಮಕ್ಕೆ ಅರ್ಧಭಾಗ ಇದ್ದು ಕೊನೆಯ ಭಾಗ ದಕ್ಷಿಣದಿಕ್ಕಿಗೆ ತಿರುಗಿದೆ. ಏರಿಯ ಉದ್ದ ೭೫೦ ಮೀ., ಅಗಲ ೫ ಮೀ. ಮತ್ತು ಒಳಪಾರ್ಶ್ವದ ಎತ್ತರ ೧೫ ಅಡಿ ಇದೆ. ಏರಿಗೆ ಹೊಂದಿಕೊಂಡಂತೆ ಎರಡು ತೂಬುಗಳನ್ನು ಅಳವಡಿಸಲಾಗಿದೆ. ಕೆರೆಗೆ ಆನೆಕೆರೆಯಿಂದ ನೀರು ಬರುತ್ತದೆ. ಹೆಚ್ಚುವರಿ ನೀರು ಹೊರ ಹೋಗಲು ಕೆರೆಯ ಎರಡು ದಿಕ್ಕಿನಲ್ಲಿ ಎರಡು ಕೋಡಿಗಳನ್ನು ಮಾಡಲಾಗಿದೆ. ದಕ್ಷಿಣದಿಕ್ಕಿನ ಕೋಡಿ ೫೦ ಮೀ. ಇದ್ದರೆ, ಉತ್ತರದಿಕ್ಕಿನ ಕೋಡಿ ಸುಮಾರು ೩೦ ಮೀ. ಇದೆ. ಕೆರೆಯ ದಡದಲ್ಲಿ ಪೂರ್ವಕ್ಕೆ ಮುಖ ಮಾಡಿರುವ ಆನೆಕೆರೆಯಮ್ಮ ಮತ್ತು ಚಿಕ್ಕಮ್ಮ ದೇವಸ್ಥಾನಗಳಿವೆ. ಯುಗಾದಿಯಾದ ೧೫ ದಿನಕ್ಕೆ ಆನೆಕೆರೆಯಮ್ಮನ ಜಾತ್ರೆ ೩ ದಿನಗಳು ನಡೆಯುತ್ತದೆ. ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಸೋಮದೇವರ ಗುಡಿಯಿದ್ದು ಪ್ರಸ್ತುತ ದಿನಗಳಲ್ಲಿ ನಾಶ ಹೊಂದಿದೆ.

ಕೆರೆಯು ಸುಮಾರು ೧೪೮ ಎಕರೆಯಷ್ಟು ವಿಸ್ತೀರ್ಣವನ್ನು ಹೊಂದಿದ್ದು, ಇದರಲ್ಲಿ ೧೦ ಎಕರೆಯಷ್ಟು ಒತ್ತುವರಿಯಾಗಿದೆ ಎಂಬುದು ಸ್ಥಳೀಯರ ಹೇಳಿಕೆ. ಕೆರಗೆ ಸಂಬಂಧಪಟ್ಟ ಇಲಾಖೆ ಗ್ರಾಮಸ್ಥರು ಇತ್ತಕಡೆ ಗಮನ ಹರಿಸಿ ಜಮೀನನ್ನು ಬಿಡಿಸಿ ಹೂಳು ತೆಗೆಸಿದರೆ ಕೆರೆಯಲ್ಲಿ ನೀರಿನ ಸಂಗ್ರಹಣಸಾಮರ್ಥ್ಯ ಹೆಚ್ಚಾಗಿ ವಿವಿಧ ಬೆಳೆಗಳನ್ನು ಬೆಳೆಯಲು ಅನುಕೂಲಕರವಾಗುತ್ತದೆ. ಕೆರೆಯು ನೋಡಲು ಆನೆಯ ಆಕಾರದಂತೆ ಕಾಣುತ್ತದೆ. ಬಹುಶಃ ಇದರಿಂದ ಕೆರೆಗೆ ಆನೆಕೆರೆ ಎಂಬ ನಾಮ ರೂಢಿಯಲ್ಲಿರಬೇಕು.

ಬೊಮ್ಮೇನಹಳ್ಳಿ ಕೆರೆ

ಅರಸೀಕೆರೆಯಿಂದ ಸುಮಾರು ೫ ಕಿ.ಮೀ. ದೂರದಲ್ಲಿ ಬೊಮ್ಮೇನಹಳ್ಳಿ ಗ್ರಾಮವಿದೆ. ಕ್ರಿ.ಶ. ೧೧೯೪ರ ಹೊಯ್ಸಳ ಕಾಲದ ಶಾಸನದಲ್ಲಿ[೧೩೨] ಈ ಗ್ರಾಮವು ತೋಟ, ಕಾಲುವೆ, ಕೆರೆ, ದೇವಾಲಯ ಹಾಗೂ ಜನಸಮೂಹಗಳಿಂದ ಕೂಡಿರುವಂತಿದೆ. ಇದರಿಂದ ಈ ಗ್ರಾಮದಲ್ಲಿನ ದೊಡ್ಡಕೆರೆಯು ಹೊಯ್ಸಳ ಅವಧಿಯಲ್ಲಿಯೇ ನಿರ್ಮಾಣವಾಗಿದೆ ಎಂದು ಹೇಳಬಹುದು. ಕೆರೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಸೇರಿ ರಕ್ಷಣೆ ಪಡೆದಿದೆ. ೨೦೦೭-೦೮ರಲ್ಲಿ ಕಾಮಗಾರಿ ಮಾಡಲಾಗಿದೆ.

ಕೆರೆಯ ಜಲವಿಸ್ತೀರ್ಣ ೫೪.೮೮ ಹೆಕ್ಟೇರ್ ಮತ್ತು ೩೪.೦೩ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದ್ದು, ೪೪.೫೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುತ್ತಿದೆ. ಕೆರೆಯ ಏರಿಯು ಸುಮಾರು ೧೧೧೦ ಮೀ. ಉದ್ದ ಮತ್ತು ಮೇಲ್ಭಾಗದ ಅಗಲ ೩ ಮೀ. ಇದೆ. ಏರಿಯಿಂದ ಸುಮಾರು ೮ ಅಡಿ ದೂರದಲ್ಲಿ ೨ ಹಳೆಯ ತೂಬು ಇದ್ದು, ಈ ದಿನಗಳಲ್ಲಿ ನಾಶ ಹೊಂದಿದೆ. ಬದಲಾಗಿ ೨ ಹೊಸ ತೂಬುಗಳನ್ನು ಏರಿಗೆ ಅಳವಡಿಸಿದಂತೆ ಇರಿಸಲಾಗಿದೆ. ಇವುಗಳ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಬಿಡಲು ೨ ಕಾಲುವೆಗಳನ್ನು ತೂಬಿಗೆ ಅನುಗುಣವಾಗಿ ಏರಿಯ ಹೊರಬದಿಯ ಇಳಿಜಾರಿನಲ್ಲಿರುವ ತೊಟ್ಟಿಗೆ ಜೋಡಿಸಲಾಗಿದೆ. ಬಲದಂಡೆಯ ನಾಲೆಯ ಉದ್ದ ೨೦೦೦ ಮೀ. ಇದ್ದು, ಎಡದಂಡೆಯ ನಾಲೆಯ ಉದ್ದ ೧೫೦೦ ಮೀ. ಇದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗುವಂತೆ ಕೆರೆಯ ಉತ್ತರದಿಕ್ಕಿನಲ್ಲಿ ಸುಮಾರು ೫೦ ಮೀ. ಉದ್ದದ ಕೋಡಿಯನ್ನು ಪಶ್ಚಿಮಕ್ಕೆ ನೀರು ಹರಿಯುವಂತೆ ನಿರ್ಮಿಸಲಾಗಿದೆ. ಕೆರೆಯ ನೀರು ಇಂದು ಪ್ರಾಣಿಪಕ್ಷಿಗಳಿಗೆ ಅಲ್ಲದೆ ಗ್ರಾಮದ ಜನರು ಬಟ್ಟೆ ತೊಳೆಯಲು ಬಳಕೆಯಾಗುತ್ತಿದೆ. ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಹೆಚ್ಚಾಗಿ ತೆಂಗಿನ ತೋಟ ಇರುವುದರಿಂದ ಭತ್ತದ ಬೆಳೆ ಕಡಿಮೆ ಇದೆ. ಕೆರೆ ಅಂಗಳದಲ್ಲಿ ಹೂಳು ತುಂಬಿ ನೀರಿನ ಶೇಖರಣ ಸಾಮರ್ಥ್ಯ ಕಡಿಮೆಯಾಗುತ್ತಿದೆ.

ರಾಜನಸಿರಿಯೂರು ಕೆರೆ

ಹಾಸನ ಜಿಲ್ಲೆಯ ಬೇಲೂರು ತಾಲೂಕಿನಿಂದ ಹಳೇಬೀಡು ಹೋಬಳಿಯಲ್ಲಿ ಬರುವ ಒಂದು ಗ್ರಾಮ ರಾಜನಸಿರಿಯೂರು. ತಾಲೂಕಿನಿಂದ ೨೩ ಕಿ.ಮೀ. ಮತ್ತು ಹೋಬಳಿಯಿಂದ ೫೮

ಕಿ.ಮೀ. ದೂರದಲ್ಲಿದೆ. ಕೆರೆಯು ಗ್ರಾಮದ ದಕ್ಷಿಣದಿಕ್ಕಿನಲ್ಲಿದೆ. ಕೆರೆಯ ಪೂರ್ವಕ್ಕೆ ಕಲ್ಲುಶೆಟ್ಟಿಹಳ್ಳಿ ಮತ್ತು ಉತ್ತರಕ್ಕೆ ಕೋಡಿಹಳ್ಳಿ ಗ್ರಾಮಗಳಿವೆ. ರಾಜನಸಿರಿಯೂರು ಗ್ರಾಮದಲ್ಲಿ ಹೊಯ್ಸಳ ಕಾಲದ ರಾಣಿಯರು ವಾಸವಾಗಿದ್ದು, ರಾಜರು ಮಾತ್ರ ಬೇಲೂರಿನಲ್ಲಿ ನೆಲೆಸಿದರು. ರಾಣಿಯರನ್ನು ನೋಡಲು ರಾಜರು ಆಗಾಗ್ಗೆ ಈ ಗ್ರಾಮಕ್ಕೆ ಬರುತ್ತಿದ್ದರಿಂದ ಗ್ರಾಮಕ್ಕೆ ರಾಜನಸಿರಿಯೂರು ಎಂಬ ಹೆಸರು ಬಂದಿರುವಂತೆ ಸ್ಥಳೀಯ ಗ್ರಾಮಸ್ಥರು ಅಭಿಪ್ರಾಯಪಡುತ್ತಾರೆ. ಕೆರೆಯು ಯಾವಾಗ ನಿರ್ಮಾಣವಾಯಿತು ಎಂಬುದರ ಬಗ್ಗೆ ಸ್ಪಷ್ಟ ದಾಖಲೆಗಳಿಲ್ಲ. ರಾಜನಸಿರಿಯೂರಿನ ಹೊಯ್ಸಳ ಕಾಲದ ಶಾಸನದಲ್ಲಿ ದೇವಾಲಯದ ಪೂಜೆಗೆ ಗದ್ದೆಯನ್ನು ದಾನವಾಗಿ ಬಿಟ್ಟಿರುವ ಉಲ್ಲೇಖವಿದೆ.[೧೩೩] ಇದರಿಂದ ಕೆರೆಯು ಹೊಯ್ಸಳ ಕಾಲದಲ್ಲಿಯೇ ನಿರ್ಮಾಣವಾಗಿರುವಂತೆ ಕಂಡುಬರುತ್ತದೆ.

ಕೆರೆಯ ಏರಿಯು ದಕ್ಷಿಣಭಾಗದಿಂದ ಅಂಕುಡೊಂಕಾಗಿ ಉತ್ತರದಿಕ್ಕಿಗೆ ಮುಂದುವರಿದಿದೆ. ಏರಿಯ ಮೇಲೆ ಜನ, ದನ ಓಡಾಡುವಷ್ಟು ಜಾಗವಿದೆ. ಏರಿಯು ೧೧೪೦ ಮೀ. ಉದ್ದ, ೩ ಮೀ. ಮೇಲ್ಭಾಗದ ಅಗಲ ಮತ್ತು ಹೊರಪಾರ್ಶ್ವದ ಇಳಿಜಾರಿನ ಎತ್ತರ ೨೦ ಅಡಿ ಮತ್ತು ಒಳಪಾರ್ಶ್ವದ ಎತ್ತರ ೧೨ ಅಡಿ ಇದೆ. ಏರಿಗೆ ಹೊಂದಿಕೊಂಡಂತೆ ಇತ್ತೀಚೆಗೆ ಒಂದು ತೂಬನ್ನು ಇರಿಸಲಾಗಿದೆ. ಏರಿಯ ಹೊರಭಾಗದಲ್ಲಿ ತೂಬಿಗೆ ಅನುಸಾರವಾಗಿ ತೊಟ್ಟಿಯನ್ನು ನಿರ್ಮಿಸಿ ಅದಕ್ಕೆ ಕಾಲುವೆಯನ್ನು ಜೋಡಿಸಲಾಗಿದೆ. ಕಾಲುವೆಯ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಕಬ್ಬು, ಭತ್ತ ಬೆಳೆಯುತ್ತಾರೆ. ಕೆರೆಯಲ್ಲಿ ನೀರಿಲ್ಲದೆ ಹೋದಾಗ ಬೇಸಿಗೆ ಬೆಳೆಗಳಾದ ಸೂರ್ಯಕಾಂತಿ, ಹತ್ತಿ ಬೆಳೆಗಳನ್ನು ಬೆಳೆಯುತ್ತಾರೆ.

ಕೆರೆಯು ಹಿಂದಿನಿಂದಲೂ ಮಳೆನೀರನ್ನು ಹೊಂದಿದ್ದು, ಕೆರೆಗೆ ಸುತ್ತಮುತ್ತಲಿನ ಗುಡ್ಡದ ನೀರು ಬಂದು ಸಂಗ್ರಹವಾಗುತ್ತದೆ. ಕೆರೆಯ ಹೆಚ್ಚುವರಿ ನೀರು ಕೋಡಿಯ ಮೂಲಕ ಬೆಳವಡಿ ಕೆರೆಯಿಂದ ಮಾರಿಕಣಿವೆಗೆ ಹೋಗುತ್ತದೆ. ಕೆರೆಯ ಉತ್ತರದಿಕ್ಕಿನಲ್ಲಿ ಸುಮಾರು ೨೦ ಮೀ. ಉದ್ದದ ಒಂದು ಕೋಡಿಯನ್ನು ಅರ್ಧಚಂದ್ರಾಕೃತಿಯಲ್ಲಿ ನಿರ್ಮಿಸಲಾಗಿದೆ. ಈ ಕೋಡಿಯ ಸಮೀಪದಲ್ಲಿ ಬೂತಪ್ಪನ ಚಿಕ್ಕಗುಡಿ ಇದೆ. ಅದನ್ನು ಸಾಮಾನ್ಯವಾಗಿ ಕೋಡಿ ಬೂತಪ್ಪ ಎಂದು ಕರೆಯುತ್ತಾರೆ.

ಕೆರೆಯ ಕಾಮಗಾರಿಯು ೨೦೧೦-೨೦೧೧ರಲ್ಲಿ ನಡೆದು ತೂಬು, ಕೋಡಿ ಮತ್ತು ಕಾಲುವೆಯನ್ನು ಜೀರ್ಣೋದ್ಧಾರ ಮಾಡಲಾಗಿದೆ. ಕೆರೆಯು ೫೪.೦೦ ಹೆಕ್ಟೇರ್ ಜಲವಿಸ್ತೀರ್ಣ, ೭೦.೯೫ ಎಂ.ಸಿ.ಎಫ್.ಟಿಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದ್ದು, ೧೨೮ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯು ಈ ದಿನಗಳಲ್ಲಿ ಸಾಕಷ್ಟು ಒತ್ತುವರಿಯಾಗಿದ್ದು ಕೆರೆಯ ಅಂಗಳದಲ್ಲಿ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆಗೆ ಸಂಬಂಧಪಟ್ಟ ಇಲಾಖೆ ಮತ್ತು ಗ್ರಾಮದ ಜನರು ಇತ್ತ ಗಮನ ಹರಿಸಬೇಕು. ಒತ್ತುವರಿಯಾದ ಜಮೀನನ್ನು ಬಿಡಿಸಿದರೆ, ಕೆರೆ ಅಂಗಳ ಹೆಚ್ಚು ವಿಶಾಲವಾಗಿ ಹೆಚ್ಚು ನೀರು ಸಂಗ್ರಹಿಸಲು ಸಹಾಯಕವಾಗುತ್ತದೆ. ಇದರಿಂದ ಪ್ರಾಣಿ, ಪಕ್ಷಿ ಮತ್ತು ಕೃಷಿ ಬಳಕೆಗೆ ಉಪಯುಕ್ತವಾಗುತ್ತದೆ.

ಕೆರೆಗೆ ಸಂಬಂಧಿಸಿದಂತೆ ಸ್ಥಳೀಯ ಐತಿಹ್ಯ ಹೀಗಿದೆ. ಬೆಲವಡಿ ಕೆರೆಗೆ ರಾಜನಸಿರಿಯೂರಿನ ಕೆರೆಯಿಂದ ನೀರು ಹೋಗಬೇಕಾಗಿತ್ತು. ರಾಜಸಿರಿಯೂರಿನಲ್ಲಿ ಒಬ್ಬ ರಾಜನು ಕೆರೆಯನ್ನು ಕಟ್ಟಿಸುತ್ತಿದ್ದ. ಹಾಗೆಯೇ ಬೆಳವಡಿ ಗ್ರಾಮದಲ್ಲಿಯೂ ಒಬ್ಬ ವ್ಯಕ್ತಿಯು ಕೆರೆಯನ್ನು ನಿರ್ಮಿಸುತ್ತಿದ್ದನು. ರಾಜನಸಿರಿಯೂರಿನ ರಾಜನು ಬೆಳವಡಿ ಕೆರೆಗೆ ನೀರು ಕೊಡುವುದಿಲ್ಲವೆಂದು ಕೆರೆಯ ಎರಡು ಭಾಗದಲ್ಲಿರುವ ಬೆಟ್ಟಗಳಿಗೆ ಹೊಂದಿಕೊಂಡಂತೆ ಏರಿ ನಿರ್ಮಿಸಿ ಹೆಚ್ಚು ನೀರು ಸಂಗ್ರಹಿಸುವಂತೆ ವಡ್ಡರಿಗೆ ತಿಳಿಸಿದನು. ಇದರಿಂದ ಬೆಳವಡಿ ಕೆರೆಯನ್ನು ಕಟ್ಟಿಸುತ್ತಿದ್ದ ವ್ಯಕ್ತಿಯು ಕೋಪಗೊಂಡು ರಾಜನಸಿರಿಯೂರಿನ ಕೆರೆಯನ್ನು ಕಟ್ಟಿಸುತ್ತಿದ್ದ ರಾಜನನ್ನು ಕೊಂದನು. ರಾಜನ ಮರಣಾನಂತರ ಅವನ ಹೆಂಡತಿ ತನ್ನ ಮೂಗುತಿಯನ್ನು ಮಾರಿ ಸಕಲ ಪ್ರಾಣಿ ಪಕ್ಷಿಗಳಿಗೂ ಉಪಯುಕ್ತವಾಗಲೆಂದು ಕೆರೆಯನ್ನು ಕಟ್ಟಿಸಿದಳೆಂದು ಹೇಳುತ್ತಾರೆ. ಮತ್ತೊಂದು ಹೇಳಿಕೆಯ ಪ್ರಕಾರ ಕಾಳಿಂಗರಾಯ ಎಂಬ ಪಾಳೆಗಾರ ಕೆರೆ ಕಟ್ಟಿಸಿದನೆಂದು ತಿಳಿಸುತ್ತಾರೆ. ಇದಕ್ಕೆ ಯಾವುದೇ ಸ್ಪಷ್ಟ ದಾಖಲೆಗಳಿಲ್ಲ.

ಚಟಚಟನಹಳ್ಳಿ ಕೆರೆ

ಹಾಸನ ಜಿಲ್ಲೆಯ ಹಳೇಬೀಡು ಹೋಬಳಿಯಲ್ಲಿ ಬರುವ ಒಂದು ಗ್ರಾಮ ಚಟಚಟನಹಳ್ಳಿ. ಹಾಸನದಿಂದ ೩೫ ಕಿ.ಮೀ. ಮತ್ತು ಬೇಲೂರಿನಿಂದ ೨೦ ಕಿ.ಮೀ. ಹಾಗೂ ಹೋಬಳಿಯಿಂದ ೫ ಕಿ.ಮೀ. ದೂರದಲ್ಲಿ ಬರುತ್ತದೆ. ಗ್ರಾಮಕ್ಕೆ ಸಂಬಂಧಿಸಿದಂತಹ ಸ್ಥಳನಾಮ ಹೀಗಿದೆ. ಗ್ರಾಮದಲ್ಲಿ ಹಿಂದೆ ಚೊಟ್ಟಪ್ಪನಾಯಕ ಎಂಬ ರಾಜನು ಆಳ್ವಿಕೆ ಮಾಡುತ್ತಿದ್ದನಂತೆ. ಅವರ ಕಾಲದಲ್ಲಿ ೧.೫ ಸಾವಿರ ಮನೆಗಳ ಗ್ರಾಮವಾಗಿತ್ತು. ಅವುಗಳಲ್ಲಿ ಹೆಚ್ಚಾಗಿ ಮಡಕೆ ಮಾಡುವ ಕುಂಬಾರ ಮನೆತನದವರಿದ್ದರು. ಇದಕ್ಕೆ ಆಧಾರವೆಂಬಂತೆ ಪ್ರಸ್ತುತ ದಿನಗಳಲ್ಲಿ ಅವರ ಕಾಲಕ್ಕೆ ಸಂಬಂಧಿಸಿದ ಮಡಕೆ ಚೂರುಗಳು ಹೊಲ ಉಳುವಾಗ, ಮನೆ ಅಥವಾ ದೇವಾಲಯದ ಪಾಯ ತೆಗೆಯುವಾಗ ಸಿಗುತ್ತಿವೆ. ಆದರೆ ಇಂದು ಗ್ರಾಮದಲ್ಲಿ ಮಡಕೆ ಮಾಡುವ ಕುಂಬಾರ ಕುಟುಂಬಗಳಿಲ್ಲ. ಬದಲಿಗೆ ಉಪ್ಪಾರರು, ಒಕ್ಕಲಿಗರು, ಲಿಂಗಾಯತರು ಮತ್ತು ಮಡಿವಾಳ ಜನಾಂಗದವರಿದ್ದಾರೆ. ಗ್ರಾಮದಲ್ಲಿ ಆಳ್ವಿಕೆ ಮಾಡಿದ ಚೊಟ್ಟಪ್ಪನಾಯಕನಿಂದಲೇ ಗ್ರಾಮಕ್ಕೆ ಚಟಚಟನಹಳ್ಳಿ ಎಂಬ ಹೆಸರು ಬಂದಿರುವುದಾಗಿ ಸ್ಥಳೀಯರು ಅಭಿಪ್ರಾಯಪಡುತ್ತಾರೆ.

ಚಟಚಟನಹಳ್ಳಿಯಲ್ಲಿ ಎರಡು ಕೆರೆಗಳಿವೆ. ಗ್ರಾಮದ ಉತ್ತರದಿಕ್ಕಿನಲ್ಲಿ ಒಂದು ಚಿಕ್ಕಕೆರೆ ಇದೆ. ಅದನ್ನು ಯಾವಾಗ ನಿರ್ಮಿಸಿದರು ಎಂಬುದಕ್ಕೆ ಯಾವುದೇ ಸ್ಪಷ್ಟವಾದ ದಾಖಲೆಗಳಿಲ್ಲ. ಹಾಗೆಯೇ ಗ್ರಾಮಕ್ಕೆ ಸಂಬಂಧಿಸಿದ ಮತ್ತೊಂದು ಕೆರೆ ದ್ಯಾಮಪ್ಪನಹಳ್ಳಿ ಸಮೀಪ ಇದೆ. ಈ ಕೆರೆಯನ್ನು ದ್ಯಾಮಪ್ಪನ ಕೆರೆ ಅಥವಾ ಚಟಚಟನಹಳ್ಳಿ ದೊಡ್ಡಕೆರೆಯೆಂದು ಕರೆಯುತ್ತಾರೆ. ಕೆರೆಗೆ ಸಂಬಂಧಿಸಿದಂತೆ ಹೊಯ್ಸಳ ಕಾಲದ ಶಾಸನದಲ್ಲಿ ಉಲ್ಲೇಖವಾಗಿದೆ. ಗ್ರಾಮದಲ್ಲಿ ಚಟ್ಟೇಶ್ವರ ಎಂಬ ಹೊಯ್ಸಳ ಕಾಲದ ದೇವಾಲಯವಿದೆ. ಬಹುಶಃ ಚಿಕ್ಕಕೆರೆಯೂ ಹೊಯ್ಸಳ ಕಾಲದಲ್ಲಿಯೇ ನಿರ್ಮಾಣವಾದಂತೆ ಕಂಡುಬರುತ್ತದೆ.

ಪ್ರಸ್ತುತ ದಿನಗಳಲ್ಲಿ ಊರ ಮುಂದಿನ ಚಿಕ್ಕಕೆರೆ ಅಂಗಳದಲ್ಲಿ ಕೆರೆಯೇ ಕಾಣದಂತೆ ಗಿಡಗಳು ಬೆಳೆದು ಹೂಳು ತುಂಬಿದೆ. ಅಲ್ಲದೆ ಪ್ರಾಣಿಗಳ ಸಗಣಿ ಹಾಕಿ ತಿಪ್ಪೆ ಮಾಡಿದ್ದಾರೆ. ಸ್ಥಳೀಯರ ಪ್ರಕಾರ ಕೆರೆಯು ೩೫ ಎಕೆರೆ ಇದ್ದು, ಅದರಲ್ಲಿ ಸುಮಾರು ೧೫ ಎಕರೆಯಷ್ಟು ಒತ್ತುವರಿ ಮಾಡಿರುವುದಾಗಿ ತಿಳಿಸುತ್ತಾರೆ. ಏರಿಯು ೫೦೦ ಮೀ. ಉದ್ದ, ೮ ಮೀ. ಅಗಲವಿದ್ದು ಮೇಲ್ಭಾಗದಲ್ಲಿ ವಾಹನಗಳು ಚಲಿಸುತ್ತವೆ. ಇತ್ತೀಚೆಗೆ ಏರಿಗೆ ಒಂದು ತೂಬನ್ನು ಅಳವಡಿಸಲಾಗಿದೆ. ಕೆರೆಯ ಪಕ್ಕದಲ್ಲಿ ಕರಿಯಮ್ಮನ ದೇವಸ್ಥಾನವಿದೆ. ಯುಗಾದಿಯಾದ ೮-೯ ದಿನಕ್ಕೆ ಕರಿಯಮ್ಮನ ಜಾತ್ರೆ ಮಾಡುತ್ತಾರೆ. ಜಾತ್ರೆಯಲ್ಲಿ ಕುರಿ ಕೋಳಿಯನ್ನು ಬಲಿ ಕೊಡುತ್ತಾರೆ. ಕೆರೆಗೆ ಸಂಬಂಧಿಸಿದಂತೆ ಯಾವುದೇ ಆಚರಣೆಗಳು ನಡೆಯುವುದಿಲ್ಲ. ಕೆರೆಗೆ ಸುತ್ತಮುತ್ತಲಿನ ಗುಡ್ಡದ ನೀರು ಬಂದು ಸಂಗ್ರಹವಾಗುತ್ತದೆ. ಇತ್ತೀಚೆಗೆ ಹಳೇಬೀಡು ಕೆರೆಯಿಂದ ನೀರು ಬರುವಂತೆ ಸರ್ವೇ ಮಾಡಿದ್ದಾರೆ. ಕೆರೆಯ ಹೆಚ್ಚುವರಿ ನೀರು ಕೆಂಪೇಗೌಡನ ಕಟ್ಟೆಗೆ ಹೋಗುತ್ತದೆ.

ದ್ಯಾಮಪ್ಪನ ಕೆರೆಗೆ ಸಂಬಂಧಿಸಿದಂತೆ ಚಟಚಟನಹಳ್ಳಿಯ ಕ್ರಿ.ಶ.೧೨೨೧ರ ಶಾಸನದಲ್ಲಿ[೧೩೪] ಚಟ್ಟಯ್ಯಪೆರುಮಾಳ್ ದೇವನು ೧೦೦ ಹೊನ್ನನ್ನು ಅಗ್ರಹಾರಕ್ಕೆ ವಿನಿಯೋಗಿಸಲು ಪೋಷಿಸಿದಾಗ ಅಲ್ಲಿನ ಮಹಾಜನರು ದಾಸಿಶೆಟ್ಟಿ ಕೆರೆಗೆ ಮೆಟ್ಟಿಲುಗಳನ್ನು ಇರಿಸಲು ಬೇಡಿಕೆ ಸಲ್ಲಿಸಿದಾಗ ೧೦೦ ಹೊನ್ನನ್ನು ಕೆರೆಯ ಕೆಲಸಕ್ಕೆ ವಿನಿಯೋಗಿಸಿದರು. ಇದರಿಂದ ಸಂತೋಷಗೊಂಡ ಮಹಾಜನರು ಕೆರೆಗೆ ಪಿರಿಯಸಮುದ್ರವೆಂದು ಹೆಸರಿಟ್ಟು ಕೆರೆ ಕೆಳಗಿನ ೧೬೦ ಕಂಬ ತೋಟದ ಸ್ಥಳವನ್ನು ಚಟ್ಟಯ್ಯ ಪೆರುಮಾಳ್ ದೇವನಿಗೆ ದಾನವಾಗಿ ನೀಡಿದುದರ ಉಲ್ಲೇಖವಿದೆ.

ಕೆರೆಯಿಂದ ಪೂರ್ವಕ್ಕೆ ಲಿಂಗಪ್ಪನ ಕೊಪ್ಪಲು ಪಶ್ಚಿಮಕ್ಕೆ ದ್ಯಾಮಪ್ಪನಹಳ್ಳಿ ಇದೆ. ಕೆರೆಗೆ ಅಡುಗೂರು ಕೆರೆಯಿಂದ ನೀರು ಬರುತ್ತದೆ. ಹೆಚ್ಚುವರಿ ನೀರು ಜಾವಗಲ್ ಕೆರೆಗೆ ಹೋಗುತ್ತದೆ. ಕೆರೆಯ ಪಶ್ಚಿಮದಿಕ್ಕಿನಲ್ಲಿ ಸೇತುವೆ ಮಾಡಲಾಗಿದ್ದು, ಅದರ ಕೆಳಭಾಗದಲ್ಲಿ ಕೆರೆಗೆ ನೀರು ಬರುವಂತೆ ಕಾಲುವೆ ನಿರ್ಮಿಸಲಾಗಿದೆ. ಹಾಗೆಯೇ ಹೆಚ್ಚುವರಿ ನೀರು ಹೊರಹೋಗಲು ಪೂರ್ವದಿಕ್ಕಿನಲ್ಲಿ ೨೫ ಮೀ. ಕೋಡಿ ಅಳವಡಿಸಲಾಗಿದೆ. ಏರಿಯು ಪಶ್ಚಿಮದಿಕ್ಕಿನಿಂದ ಅಂಕುಡೊಂಕಾಗಿ ಪೂರ್ವದಿಕ್ಕಿಗೆ ಮುಂದುವರಿದಿದೆ. ಏರಿಯು ೭೫೦ ಮೀ. ಉದ್ದ, ೩ ಮೀ. ಅಗಲ ಮತ್ತು ಒಳಪಾರ್ಶ್ವದ ಎತ್ತರ ೧೨ ಅಡಿ ಇದೆ. ಏರಿಗೆ ಒಂದು ಹೊಸ ತೂಬನ್ನು ಇರಿಸಲಾಗಿದೆ. ಹಳೆಯ ತೂಬು ಕಾರ್ಯ ನಿರ್ವಹಣೆ ಇಲ್ಲದೆ ಹಾಳಾಗಿದೆ. ಕೆರೆಯಲ್ಲಿ ನೀರು ಇದ್ದಾಗ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆಯಲ್ಲಿ ನೀರು ಇಲ್ಲದೆ ಹೋದಾಗ ಕೆರೆಯ ಅಂಗಳದಲ್ಲಿ ಜೋಳದ ಬೆಳೆಯನ್ನು ಬೆಳೆಯುತ್ತಾರೆ. ಕೆರೆಯು ೫೧.೩೨ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೩೬.೦೬ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದ್ದು, ೮೬.೩೫ ಹೆಕ್ಟೇರ್ ಆಯಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯ ಕಾಮಗಾರಿಯು ೨೦೦೮ ಮತ್ತು ೨೦೦೯ರಲ್ಲಿ ನಡೆದಿದೆ.

ಕುದುರೆಗುಂಡಿ ಕೆರೆ

ಹಾಸನ ತಾಲೂಕಿನ ದುದ್ದ ಹೋಬಳಿಯಲ್ಲಿ ಬರುವ ಒಂದು ಗ್ರಾಮ ಕುದುರೆಗುಂಡಿ. ಹೋಬಳಿಯಿಂದ ೧೮ ಕಿ.ಮೀ. ದೂರದಲ್ಲಿದೆ. ಗ್ರಾಮವನ್ನು ಮೊದಲು ಸಣ್ಣ ಬಾಗೂರು ಎಂದು ಕರೆಯುತ್ತಿದ್ದರು. ಅನಂತರ ಕುದುರೆಗುಂಡಿ ಎಂಬ ಹೆಸರು ಬಂದಿದೆ. ಈ ಗ್ರಾಮಕ್ಕೆ ಸಂಬಂಧಿಸಿದಂತೆ ಐತಿಹ್ಯಗಳು ಹೀಗಿವೆ. ಹಿಂದೆ ರಾಜರು ಒಳ್ಳೆಯ ತಳಿಯ ಕುದುರೆಗಳನ್ನು ತರಿಸಿ ತರಬೇತಿಗೊಳಿಸುತ್ತಿದ್ದುದರಿಂದ ಕುದುರೆಗುಂಡಿಯಾಗಿದೆ ಎಂದು ಸ್ಥಳೀಯ ಜನಪದರ ಅಭಿಪ್ರಾಯವಾಗಿದೆ. ಮತ್ತೊಂದು ಹೇಳಿಕೆ ಪ್ರಕಾರ ಹಿಂದೆ ಗ್ರಾಮದಲ್ಲಿ ಕುದುರೆಗಳು ಇದ್ದವು. ಬ್ರಾಹ್ಮಣರು ಬಟ್ಟೆ ತೊಳೆದು ಹಾಕಿದ್ದರು. ಕುದುರೆಗಳು ಆ ಬಟ್ಟೆಗಳನ್ನು ತುಳಿದು ಹಾಕಿದ್ದರಿಂದ ಗ್ರಾಮಕ್ಕೆ ಕುದುರೆಗುಂಡಿ ಎಂಬ ಹೆಸರು ಬಂದಿದೆ. ಇನ್ನೊಂದು ಮೂಲದ ಪ್ರಕಾರ ಹಿಂದೆ ಈ ಊರಿನಲ್ಲಿ ಶೂರನಾದ ನಾಯಕನೊಬ್ಬನಿದ್ದ. ಅವನನ್ನು ಯಾರಿಂದಲೂ ಗೆಲ್ಲಲಾಗಿರಲಿಲ್ಲ. ಕುದುರೆ ಮೇಲೆ ಕುಳಿತು ಯುದ್ಧ ಮಾಡುವುದರಲ್ಲಿ ಬಹಳ ನಿಪುಣನಾಗಿದ್ದನು. ಊರಿನಲ್ಲಿ ಕೆಲವರು ಅವನನ್ನು ಕೊಲ್ಲಲು ಹೊಂಚು ಹಾಕಿ ಪರ ಊರಿನವರನ್ನು ಕರೆಸಿದರಂತೆ. ಕತ್ತಲಲ್ಲಿ ಕುದುರೆ ಏರಿ ಬರುವ ನಾಯಕನಿಗೆ ಈ ಮೊದಲೇ ಅನುಮಾನ ಬಂದಿತು ಮತ್ತು ಕುದುರೆಯು ಹಿಂದೆ ಹಿಂದೆ ಹೋಗುತ್ತಿತ್ತು. ಮರದ ಮರೆಯಲ್ಲಿದ್ದ ಜನ ಕತ್ತಿಗಳನ್ನು ಹಿಡಿದು ಬಂದರು. ತಕ್ಷಣ ನಾಯಕ ಕುದುರೆಗಳನ್ನು ಹುರಿದುಂಬಿಸಿ ನೆಗೆಸಿ ನಾಗಾಲೋಟದಿಂದ ಓಡಿಸಿ ಪ್ರಾಣಾಪಾಯದಿಂದ ಪಾರಾದನಂತೆ. ಆದ ಕಾರಣ ಕುದುರೆ ಆಸೆ ಬಿಟ್ಟು ನೆಗೆದ ಸ್ಥಳ ಕುದುರೆಗುಂಡಿಯೆಂದು ಪಡೆದುಕೊಂಡಿತು.[೧೫]

ಈ ಗ್ರಾಮದಲ್ಲಿ ದೊಡ್ಡಕೆರೆ ಇದ್ದು ಹಿಂದಿನಿಂದಲೂ ಮಳೆಯ ನೀರನ್ನು ಹೊಂದಿದೆ. ಕೆರೆಗೆ ನಿಟ್ಟೂರು ಕೆರೆಯಿಂದ ನೀರು ಬರುತ್ತದೆ. ಈ ಕೆರೆಯ ಹೆಚ್ಚುವರಿ ನೀರು ಕೋಡಿಹಳ್ಳಿ ಮತ್ತು ದುದ್ದ ಕೆರೆಗೆ ಹೋಗುತ್ತದೆ. ಕೆರೆಯು ೯೨.೮೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೫೧.೨೩ ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಸಂಗ್ರಹಿಸುವ ಸಾಮರ್ಥ್ಯವನ್ನು ಹೊಂದಿದ್ದು, ೧೭೨.೪೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯ ಏರಿಯು ಅಂಕುಡೊಂಕಾಗಿ ಉತ್ತರ ದಕ್ಷಿಣಾಭಿಮುಖವಾಗಿ ಮುಂದುವರಿದಿದೆ. ಕೆರೆಯ ಅಂಗಳದಿಂದ ಏರಿಯು ಪೂರ್ವಕ್ಕೆ ಇದೆ. ಏರಿಯು ೧೧೭೦ ಮೀ. ಉದ್ದ, ೪ ಮೀ. ಮೇಲ್ಭಾಗದ ಅಗಲ ಮತ್ತು ಒಳಪಾರ್ಶ್ವದ ಎತ್ತರ ೧೫ ಅಡಿ ಇದೆ. ಏರಿಯ ಮೇಲೆ ಜನ, ದನ ಮತ್ತು ವಾಹನಗಳು ಓಡಾಡುವಷ್ಟು ಜಾಗವಿದೆ. ಏರಿಗೆ ಹೊಂದಿಕೊಂಡಂತೆ ಎರಡು ಹೊಸ ತೂಬುಗಳನ್ನು ಅಳವಡಿಸಿದ್ದಾರೆ. ಇದರಲ್ಲಿ ಕೆರೆಯ ದಕ್ಷಿಣದಿಕ್ಕಿನ ತೂಬಿಗೆ ಮರದ ದಿಮ್ಮಿಗೆ ಕಬ್ಬಿಣದ ಸಲಾಕೆಯನ್ನು ಜೋಡಿಸಲಾಗಿದೆ. ಹಳೆಯ ತೂಬು ನಿರ್ವಹಣೆಯಲಿಲ್ಲ. ಈ ತೂಬನ್ನು ಏರಿಯಿಂದ ಸುಮಾರು ೧೦ ಅಡಿ ದೂರದಲ್ಲಿ ನಿರ್ಮಿಸಲಾಗಿದೆ. ಹಾಗೆಯೇ ಉತ್ತರದಿಕ್ಕಿನ ತೂಬನ್ನು ಏರಿಗೆ ಇರಿಸಲಾಗಿದೆ. ಈ ತೂಬಿನ ಸ್ವಲ್ಪ ಅಂತರದಲ್ಲಿ ಹಳೆಯ ತೂಬಿದ್ದು, ಅದರ

ಮೇಲೆ ಶಂಖ, ಚಕ್ರವಿರುವ ಎರಡು ಸಾಲಿನ ಅಪ್ರಕಟಿತ ತ್ರುಟಿತ ಶಾಸನವಿದೆ. ಇದು ವೈಷ್ಣವ ಧರ್ಮವನ್ನು ಸೂಚಿಸುತ್ತದೆ. ಲಿಪಿಗಳು ಹಾಳಾಗಿವೆ. ಈ ದಿನಗಳಲ್ಲಿ ತೂಬು ಕಾಣದಂತೆ ಗಿಡಗಳು ಬೆಳೆದಿವೆ. ಹೊಸ ತೂಬುಗಳಿಗೆ ಅನುಸಾರವಾಗಿ ಏರಿಯ ಹೊರಭಾಗದಲ್ಲಿ ಕಾಲುವೆಗಳನ್ನು ನಿರ್ಮಿಸಿ, ಅವುಗಳ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿದೆ. ಆಯಕಟ್ಟು ಪ್ರದೇಶವು ಹೆಚ್ಚಾಗಿ ಒಕ್ಕಲಿಗ ಜನಾಂಗದವರಿಗೆ ಸೇರಿದ್ದು, ಇವರು ಕೆರೆಯಲ್ಲಿ ನೀರು ಇದ್ದಾಗ ಭತ್ತ, ಕಬ್ಬು, ಶುಂಠಿ ಮತ್ತು ಜೋಳ ಇನ್ನೂ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ.

ತೂಬಿನ ನಿರ್ವಹಣೆಯನ್ನು ಈ ದಿನಗಳಲ್ಲಿ ಗುರುಸ್ವಾಮಿ ಎಂಬ ನೀರ್ಗಂಟಿ ನೋಡಿಕೊಳ್ಳುತ್ತಿದ್ದಾರೆ. ಇವರಿಗೆ ಸರ್ಕಾರವು ಜೀವನೋಪಾಯಕ್ಕಾಗಿ ಭೂಮಿಯನ್ನು ಒದಗಿಸಿಕೊಟ್ಟಿದೆ. ಇವರು ತೂಬನ್ನು ಎತ್ತುವ ಮೊದಲು ಕೆರೆಗೆ ಬಾಗಿನವನ್ನು ಅರ್ಪಣೆ ಮಾಡುತ್ತಿದ್ದರು. ಈ ಬಗೆಯ ಆಚರಣೆ ಹಿಂದಿನಿಂದಲೂ ಬೆಳೆದುಬಂದಿದೆ. ಕೆರೆಯು ಕೋಡಿ ಬಿದ್ದಾಗ ಗ್ರಾಮದಲ್ಲಿರುವ ರಂಗನಾಥ ಸ್ವಾಮಿಯ ತೆಪ್ಪೋತ್ಸವ ಮಾಡುತ್ತಾರೆ.

ಏರಿಯ ಮೇಲ್ಭಾಗದಲ್ಲಿ ಒಂದು ಗುಂಡು ಕಲ್ಲು ಇದೆ. ಅದನ್ನು ಸ್ಥಳೀಯರು ಬ್ರಹ್ಮದೇವರು ಎಂದು ಕರೆಯುತ್ತಾರೆ. ಈ ದೇವರಿಗೆ ಸೋಮವಾರ ಮತ್ತು ಪೌರ್ಣಮಿಯಲ್ಲಿ ಪೂಜೆ ಮಾಡುತ್ತಾರೆ. ಬ್ರಹ್ಮದೇವರ ಸ್ವಲ್ಪ ದೂರದಲ್ಲಿ ಚಿಕ್ಕಗುಡಿ ಇದೆ. ಅದರ ಒಳಭಾಗದಲ್ಲಿ ಇತ್ತೀಚೆಗೆ ನಿರ್ಮಿಸಿದ ನಾಗರಕಲ್ಲುಗಳು ಮತ್ತು ಗಣೇಶನ ಆಕಾರವಿರುವ ಒಂದು ಕಲ್ಲನ್ನು ಇಟ್ಟು ಪೂಜಿಸುತ್ತಾರೆ. ಹಾಗೆಯೇ ಭೈರವನ ಪಾದಶಿಲ್ಪ ಫಲಕವಿರುವ ಒಂದು ಕಲ್ಲನ್ನು ಬೇರೆ ಕಡೆಯಿಂದ ತಂದು ಈ ಗುಡಿಯಲ್ಲಿ ಇಟ್ಟಿದ್ದಾರೆ. ಕೆರೆ ಏರಿಯ ಮೇಲೆ ನಾಗರಕಲ್ಲುಗಳನ್ನು ಪ್ರತಿಷ್ಠಾಪಿಸಿ ಪೂಜಿಸಿದರೆ ನಾಗರದೋಷ ಪರಿಹಾರವಾಗುತ್ತದೆ ಎಂಬ ನಂಬಿಕೆ ಇದೆ. ಕೆರೆಯು ಸಾಕಷ್ಟು ಒತ್ತುವರಿಯಾಗಿದ್ದು ಈ ದಿನಗಳಲ್ಲಿ ಒತ್ತುವರಿಯಾದ ಜಮೀನನ್ನು ಬಿಡಿಸಿ ಕೆರೆಯಲ್ಲಿ ಹೂಳೆತ್ತಿಸಿದ್ದಾರೆ. ಇದರಿಂದ ಕೆರೆ ತನ್ನ ಆಳ ಮತ್ತು ಅಗಲವನ್ನು ಹೆಚ್ಚಿಸಿಕೊಂಡಿದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಕೆರೆಯ ದಕ್ಷಿಣದಿಕ್ಕಿಗೆ ಕೋಡಿಯನ್ನು ಅಳವಡಿಸಲಾಗಿದೆ.

ಕಣಕಟ್ಟೆ ಕೆರೆ

ಕಣಕಟ್ಟೆ ಕೆರೆಯು ಹೊಯ್ಸಳ ಕಾಲದ ಕೆರೆಗಳಲ್ಲಿ ಒಂದಾಗಿದ್ದು, ಅರಸೀಕೆರೆಯಿಂದ ೩೨ ಕಿ.ಮೀ. ದೂರದಲ್ಲಿದೆ. ಕೆರೆಯು ಊರಿನಿಂದ ಪೂರ್ವದಿಕ್ಕಿಗೆ ಇದೆ. ಕೆರೆಗೆ ಸಂಬಂಧಿಸಿದಂತೆ ಇಲ್ಲಿನ ಅನೇಕ ಶಾಸನಗಳಲ್ಲಿ ಮಾಹಿತಿ ಇದೆ. ಕ್ರಿ.ಶ. ೧೧೫೩ರ ಶಾಸನದಲ್ಲಿ[೧೩೬] ಚಟ್ಟಬೋವನ ಸಿಲೇಶ್ವರ ದೇವರ ಲಿಂಗಪ್ರತಿಷ್ಠೆ ಮಾಡಿ, ದೇವಾಲಯವನ್ನು ಕಟ್ಟಿಸಿ, ಕೆರೆಯನ್ನು ಕಟ್ಟಿಸಿರುವ ಉಲ್ಲೇಖವಿದೆ. ಹಾಗೆಯೇ ಕ್ರಿ.ಶ. ೧೨೦೮ ಕಣಕಟ್ಟೆಯ ಶಾಸನವು[೧೩೭] ಕುಮಾರ ಪಂಡಿತಯ್ಯ ದಣ್ನಾಯಕರ ಮಗ ಒಡೆಯ ಬಿಟ್ಟಯ್ಯ ಕಲಿದೇವರ ದೇವಾಲಯದಿಂದ ಬಡಗಲು ಕನ್ನೆಗೆರೆಯಂ

ಕಟ್ಟಿಸಿದಕ್ಕಾಗಿ ಗದ್ದೆಯನ್ನು ಕೆರೆಕೊಡುಗೆಯಾಗಿ ನೀಡಿರುವುದನ್ನು ತಿಳಿಸುತ್ತದೆ. ಮತ್ತೊಂದು ಕ್ರಿ.ಶ. ೧೨೨೦ರ ಶಾಸನವು[೧೩೮] ಕಣಕಟ್ಟೆಯ ಎಲ್ಲಾ ಜಗತೀಶ್ವರರು ಸೇರಿ ಜಗತೀಶ್ವರ ದೇವಾಲಯ ಮತ್ತು ಕೆರೆಯನ್ನು ನಿರ್ಮಿಸಿರುವಂತೆ ಹೇಳಿದೆ. ಊರಿನ ಉತ್ತರದಿಕ್ಕಿನ ಹಾಳುಬಿದ್ದ ದೇವಾಲಯದ ಹತ್ತಿರ ಕ್ರಿ.ಶ. ೧೧೪೩ರ ಶಾಸನದಲ್ಲಿ[೧೩೯] ಆಶ್ವಭಟ್ಟ ಎಂಬಾತನು ಈ ಕೆರೆಗೆ ತೂಬನ್ನಿರಿಸಿ ಎತ್ತರವಾದ ಭೂಮಿಯನ್ನು ಮೇಲುಮಕ್ಕಿ ಗದ್ದೆಯಾಗಿ ಪರಿವರ್ತಿಸಿದನೆಂದು ಉಲ್ಲೇಖಿಸಲಾಗಿದೆ. ಈ ಮೇಲಿನ ಶಾಸನಗಳನ್ನು ಗಮನಿಸಿದಾಗ ಆರಂಭಿಕ ಹಂತದಲ್ಲಿ ಚಿಕ್ಕಕೆರೆಯಾಗಿದ್ದು, ನಂತರ ಬಂದವರು ಕೆರೆಗೆ ಹೆಚ್ಚು ಮಹತ್ವವನ್ನು ಕೊಟ್ಟು ವಿಸ್ತಾರಗೊಳಿಸಿದಂತೆ ಕಂಡುಬರುತ್ತದೆ.

ಕೆರೆಯು ಹಿಂದಿನಿಂದಲೂ ಮಳೆಯ ನೀರನ್ನು ಆಶ್ರಯಿಸಿದೆ. ೪೫.೦೨ ಎಂ.ಸಿ.ಎಫ್.ಟಿಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದೆ. ಕೆರೆಯ ಜಲವಿಸ್ತೀರ್ಣ ೯೬.೭೧ ಹೆಕ್ಟೇರ್ ಮತ್ತು ಅಚ್ಚುಕಟ್ಟು ಪ್ರದೇಶ ೧೫೬.೭೫ ಹೆಕ್ಟೇರ್‌ಗಳು. ಏರಿಯು ಉತ್ತರದಿಂದ ದಕ್ಷಿಣದಿಕ್ಕಿಗೆ ಅರ್ಧಭಾಗ ಇದ್ದು, ನಂತರ ಪಶ್ಚಿಮದಿಕ್ಕಿಗೆ ಮುಂದುವರಿದು ಕೊನೆಯ ಭಾಗವು ವೃತ್ತಾಕಾರವಾಗಿ ಬಾಗಿದೆ. ಏರಿಯ ಉದ್ದ ೧೯೦೦ ಮೀ. ಇದ್ದು ಎತ್ತರ ೪.೭೮ ಮೀ. ಮತ್ತು ಏರಿಯ ಮೇಲ್ಭಾಗದ ಅಗಲ ೮ ಮೀ. ಇದೆ. ಇದರ ಮೇಲೆ ವಾಹನಗಳು ಚಲಿಸುತ್ತವೆ. ಏರಿಯ ಹೊರ ಭಾಗವು ಮಣ್ಣಿನಿಂದ ಕೂಡಿದ್ದರೆ. ಒಳಭಾಗವು ದಪ್ಪದಪ್ಪ ಕಲ್ಲುಗಳಿಂದ ಕಟ್ಟಿರುವ ಕಟ್ಟಡದಂತೆ ರಚನೆಯಾಗಿದೆ. ಪ್ರಸ್ತುತ ದಿನಗಳಲ್ಲಿ ಈ ಕಲ್ಲಿನ ರಚನೆ ಕಾಣದಂತೆ ಗಿಡಗಳು ಏರಿಯ ಒಳಭಾಗದಲ್ಲಿ ಬೆಳೆದಿರುವುದರಿಂದ ಮಣ್ಣಿನ ಏರಿಯಂತೆ ಗೋಚರಿಸುತ್ತದೆ. ಕೆರೆಯಲ್ಲಿ ಮೂರು ತೂಬು, ಎರಡು ಕಾಲುವೆ ಮತ್ತು ಮೂರು ಕೋಡಿಗಳಿವೆ. ಒಂದು ತೂಬನ್ನು ಜೀರ್ಣೋದ್ಧಾರ ಮಾಡಿ ಕೆರೆಯ ಪಶ್ಚಿಮದಿಕ್ಕಿನ ಏರಿಗೆ ಅಳವಡಿಸಲಾಗಿದೆ. ಹಳೆಯ ತೂಬು ಏರಿಯಿಂದ ೮ ಅಡಿ ದೂರದಲ್ಲಿದ್ದು ಕಾರ್ಯಾಚರಣೆಯಲ್ಲಿಲ್ಲ. ಮತ್ತೊಂದು ತೂಬನ್ನು ಉತ್ತರದಿಕ್ಕಿನ ಏರಿಯಿಂದ ಸುಮಾರು ೫ ಅಡಿ ದೂರದಲ್ಲಿ ಇರಿಸಲಾಗಿದೆ. ಮಧ್ಯದ ತೂಬು ಕಾರ್ಯಾಚರಣೆ ಮಾಡುತ್ತಿಲ್ಲ. ಈ ತೂಬುಗಳಿಂದ ನೀರು ಹಾಯಿಸುವ ಕಾರ್ಯವನ್ನು ನೀರ್ಗಂಟಿಗಳು ಮಾಡುತ್ತಾರೆ. ತೂಬಿಗೆ ಅನುಗುಣವಾಗಿ ಏರಿಯ ಹೊರಭಾಗದಲ್ಲಿ ಕಾಲುವೆಗೆ ಹೊಂದಿಕೊಂಡಂತೆ ತೊಟ್ಟಿಯನ್ನು ಕಟ್ಟಲಾಗಿದೆ. ಇದರ ಮೂಲಕ ವಿವಿಧ ದಿಕ್ಕುಗಳ ಆಯಕಟ್ಟು ಪ್ರದೇಶಗಳಿಗೆ ನೀರನ್ನು ಒದಗಿಸಲು ಸಹಾಯಕವಾಗುತ್ತದೆ. ಇಂತಹ ವ್ಯವಸ್ಥೆ ಇಂದಿಗೂ ಅಸ್ತಿತ್ವದಲ್ಲಿದ್ದು ಆಯಕಟ್ಟು ಪ್ರದೇಶಗಳಿಗೆ ನೀರನ್ನು ಪೂರೈಸುತ್ತಿದೆ. ಈ ಮೂಲಕ ವಿವಿಧ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಮುಖ್ಯವಾಗಿ ಭತ್ತದ ಗದ್ದೆಯನ್ನು ಮಳೆಗಾಲದಲ್ಲಿ ಬೆಳೆಯುತ್ತಾರೆ. ಕೆರೆಯ ಸುತ್ತಲಿನ ಅಚ್ಚುಕಟ್ಟು ಪ್ರದೇಶವು ಬ್ರಾಹ್ಮಣರು, ಲಿಂಗಾಯತರು ಹಾಗೂ ಇತರೆ ಜನಾಂಗದವರಿಗೆ ಸೇರಿದೆ. ಕೆರೆಗೆ ಮೂರು ಕೋಡಿಯನ್ನು ಇರಿಸಲಾಗಿದೆ. ಉತ್ತರದಿಕ್ಕಿನ ಕೋಡಿಯು ಸುಮಾರು ೧೦೦ ಮೀ. ಉದ್ದ ಇದೆ. ಕೆರೆಯ ಹೆಚ್ಚುವರಿ ನೀರು ಈ ಕೋಡಿಗಳ ಮೂಲಕ ಹೊರಹೋಗುತ್ತದೆ. ಮೀನುಗಾರಿಕೆಗೆ ಕೆರೆಯು ಅನುಕೂಲಕರವಾಗಿದ್ದು, ವಾರ್ಷಿಕವಾಗಿ ಏಲೇವಾರಿಯಾಗುತ್ತಿದೆ. ಈ

ಕೆರೆಯಲ್ಲಿ ಹೂಳೆತ್ತುವ ಕಾರ್ಯ ನಡೆದು ಕೆರೆಯು ತನ್ನ ಆಳ ಮತ್ತು ಅಗಲವನ್ನು ಹೆಚ್ಚಿಸಿಕೊಂಡಿದೆ. ನೀರಾವರಿ ಇಲಾಖೆಯಿಂದ ರಕ್ಷಣೆಯನ್ನು ಪಡೆದಿದೆ.

ಕೆರೆಯ ಬಳಿ ಸೋಪಾನಗಳ ಕಾಶೀ ವಿಶ್ವೇಶ್ವರ ಎಂಬ ಪುಟ್ಟ ದೇವಾಲಯವಿದೆ. ಸಾತನಕೆರೆಗೆ ಹೋಗುವ ಕೆರೆಯ ರಸ್ತೆ ಬದಿಯಲ್ಲಿ ಹಾದಿ ಆಂಜನೇಯ ದೇವಸ್ಥಾನವಿದೆ. ಇದರ ಮುಂಭಾಗದಲ್ಲಿ ಗ್ರಾಮದ ಜನರಿಗೆ ನೀರಿನ ಬಳಕೆಗಾಗಿ ಮೆಟ್ಟಿಲುಗಳಿವೆ. ಹಾಗೆಯೇ ದೇವಾಲಯದ ಪೂಜೆಗೆ ಈ ಕೆರೆಯ ನೀರನ್ನು ಬಳಸುತ್ತಿದ್ದರು. ಇಲ್ಲಿ ಕೆರೆಗೆ ಹೊಂದಿಕೊಂಡಂತೆ ಒಂದು ಸಾರ್ವಜನಿಕ ಬಾವಿ ಇದೆ. ದಿಬ್ಬೂರು ರಸ್ತೆಯ ಪಕ್ಕದಲ್ಲಿ ಕೆರೆಯ ಬಳಿ ಕರಿಯಮ್ಮನ ಗುಡಿ ಇದೆ. ಈ ದೇವಾಲಯದಿಂದ ಸುಮಾರು ೧೦೦ ಮೀ. ದೂರದ ಕೆರೆಯ ಅಂಗಳದಲ್ಲಿ ಒಂದು ಪುಷ್ಕರಣಿ ಇದೆ. ಇದನ್ನು ಏರಿಯ ಮೇಲೆ ನಿಂತು ನೋಡಿದರೆ ಪೊದರು ಗಿಡಗಳು ಕೆರೆಯ ಅಂಗಳದಲ್ಲಿ ಬೆಳೆದಂತೆ ಕಾಣುತ್ತದೆ. ಕೆರೆ ಏರಿಯ ಕೋಡಿ ಬದಿಯ ಸಮೀಪದಲ್ಲಿ ದುರ್ಗಮ್ಮ ದೇವಸ್ಥಾನವಿದೆ. ಕೆರೆಯ ಏರಿಯ ಪಶ್ಚಿಮದಿಕ್ಕಿನ ಕೆರೆಯ ಅಂಗಳದಲ್ಲಿ ಹೊಯ್ಸಳರ ಕಾಲದ ಜಗತೀಶ್ವರ ಮತ್ತು ಸಿಂಹನಾಥೇಶ್ವರ ದೇವಾಲಯಗಳಿದ್ದು ಎದುರಿಗೆ ದೀಪಸ್ತಂಭಗಳಿವೆ. ಈ ದೇವಾಲಯಗಳ ಬದಿಯಲ್ಲಿ ಶಾಸನ ಮತ್ತು ವೀರಗಲ್ಲುಗಳಿವೆ. ನಡುವೆ ಕೆರೆಯ ದಡದಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಮಟೇಶ್ವರ ದೇವಸ್ಥಾನವಿದೆ. ಈ ದೇವಾಲಯವು ಒಂದು ಗರ್ಭಗೃಹ ಮತ್ತು ಮೂರು ದಿಕ್ಕಿಗೂ ಪ್ರವೇಶದ್ವಾರವುಳ್ಳ ನವರಂಗವನ್ನು ಹೊಂದಿದೆ. ನವರಂಗದ ಸ್ತಂಭಗಳ ನಡುವಿನ ಅಂಕಣದಲ್ಲಿ ಗಂಟೆ ಸರಪಳಿ ಇರುವ ನಂದಿ ಶಿಲ್ಪವಿದೆ. ಇದರಿಂದ ಈ ದೇವಾಲಯಕ್ಕೆ ಸಂಕೋಲೆ ಬಸವ ಅಥವಾ ಬಸವಣ್ಣನ ಗುಡಿ ಎಂದು ಕರೆಯುತ್ತಾರೆ. ದೇವಾಲಯದ ಬದಿಯಲ್ಲಿ ಶಾಸನ ಮತ್ತು ವೀರಗಲ್ಲುಗಳಿವೆ. ದೇವಾಲಯದ ಎದುರಿಗೆ ಪುಷ್ಕರಣಿ ಇದೆ. ಇದನ್ನು ಮಜ್ಜನಬಾವಿ ಎಂದು ಸ್ಥಳೀಯರು ಕರೆಯುತ್ತಾರೆ.

ರಾಮನಾಥಪುರ ಕೆರೆ

ಹಾಸನದಿಂದ ದಕ್ಷಿಣಕ್ಕೆ ೫೦ ಕಿ.ಮೀ. ಅರಕಲಗೂಡಿನಿಂದ ೧೯ ಕಿ.ಮೀ. ದೂರದಲ್ಲಿ ಕಾವೇರಿ ನದಿ ದಡದಲ್ಲಿ ನೆಲೆಗೊಂಡಿರುವ 'ದಕ್ಷಿಣಕಾಶಿ' ಎಂದು ಪ್ರಖ್ಯಾತಿಗೊಂಡಿರುವುದೇ ರಾಮನಾಥಪುರ.[೧೪೦] ಈ ಸ್ಥಳದಲ್ಲಿ ಸುಬ್ರಹ್ಮಣೇಶ್ವರ, ಅಗಸ್ತ್ಯೇಶ್ವರ, ಪ್ರಸನ್ನರಾಮೇಶ್ವರ, ಪಟ್ಟಾಭಿರಾಮಚಂದ್ರ, ಲಕ್ಷ್ಮೀನರಸಿಂಹ ಮತ್ತು ದುರ್ಗಾ ಪರಮೇಶ್ವರಿ ಹಾಗೂ ಇತರ ದೇವಾಲಯಗಳಿವೆ. ಇಲ್ಲಿನ ರಾಮೇಶ್ವರ ದೇವಾಲಯದಿಂದಲೇ ಗ್ರಾಮಕ್ಕೆ ರಾಮನಾಥಪುರ ಎಂದು ಹೆಸರು ಬಂದಿರುವುದಾಗಿ ಸ್ಥಳೀಯರು ತಿಳಿಸುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಒಂದು ಐತಿಹ್ಯವಿದೆ. ದೇವಾಲಯವನ್ನು ಕೃತಯುಗದಲ್ಲಿ ಸಂವರ್ತಿಕೇಶ್ವರ, ತ್ರೇತಾಯುಗದಲ್ಲಿ ವಾಸುಕೇಶ್ವರ, ದ್ವಾಪರಯುಗದಲ್ಲಿ ವಹ್ನಿಕೇಶ್ವರ ಮತ್ತು ಕಲಿಯುಗದಲ್ಲಿ ರಾಮೇಶ್ವರನಾಗಿ ಚತುರ್ಯುಗ ರಾಮೇಶ್ವರನಾದ ಶ್ರೀರಾಮನು ಪೂಜಿಸಿದ ಲಿಂಗವಾದುದರಿಂದ ಈ ದೇವಾಲಯಕ್ಕೆ ರಾಮೇಶ್ವರ ಎಂದು ಕ್ಷೇತ್ರಕ್ಕೆ 'ರಾಮನಾಥಪುರ, ಎಂಬ

ಹೆಸರು ರೂಢಿಗೆ ಬಂತೆಂದು ಹೇಳುತ್ತಾರೆ. ಹಾಗೆಯೇ ದೇವಾಲಯ ವಿಜಯನಗರ ಮತ್ತು ಪಾಳೆಯಗಾರರ ಅವಧಿಯಲ್ಲಿ ಜೀರ್ಣೋದ್ಧಾರವಾಗಿರುವಂತೆ ಸೂಚಿಸುತ್ತಾರೆ.

ಗ್ರಾಮದ ಪೂರ್ವದಿಕ್ಕಿಗೆ ಕೆರೆ ಇದೆ. ಅದನ್ನು ರಾಮನಾಥಪುರದ ಕೆರೆ ಅಥವಾ ದಳವಾಯಿ ಕೆರೆ ಎಂದು ಹೆಸರಿಸುತ್ತಾರೆ. ಕೆರೆಯ ನಿರ್ಮಾಣದ ಬಗೆಗೆ ದಾಖಲೆಗಳಿಲ್ಲ. ಇಲ್ಲಿನ ಕ್ರಿ.ಶ. ೧೨೨೦ರ ಶಾಸನದಲ್ಲಿ[೧೪೧] ಶ್ರೀಮನುಮಹಾಪಸಾಯಿತಿರುಮಪ್ಪ ಪೆಂಡಾರ ದೇವನ ಮಗ ನಿಂಗಣ್ಣನವರು ಹಾಸನದ ಸಹಸ್ರಲಿಂಗದ ಶ್ರೀ ರಾಮನಾಥದೇವರಿಗೆ ಮುಂಡಗೋಡಿನಲ್ಲಿ ಬಂಡಿಗಡಿದ ಕೆರೆಯ ಕೆಳಗೆ ಆ ರಾಮನಾಥದೇವರ ಅಮೃತಪಡಿಗೆ ಖಂಡುಗ ಗದ್ದೆಯ ಕೊಟ್ಟರು ಎಂಬ ಉಲ್ಲೇಖವಿದೆ. ಇದರಿಂದ ಹೊಯ್ಸಳ ಕಾಲದಲ್ಲಿಯೇ ಕೆರೆ ನಿರ್ಮಾಣವಾಗಿರುವುದು ತಿಳಿಯುತ್ತದೆ. ಕೆರೆಯು ೪.೮೫ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೮.೦೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದೆ. ಕೆರೆಗೆ ನಾಲೆಯ ನೀರು ಬರುತ್ತದೆ. ಹೆಚ್ಚುವರಿ ನೀರು ಪುನಹ ಕಾವೇರಿ ಹೊಳೆಗೆ ಹೋಗುತ್ತದೆ. ಕೆರೆಯ ನೀರು ಕೃಷಿ ಮತ್ತು ಪ್ರಾಣಿಪಕ್ಷಿಗಳಿಗೆ ಬಳಕೆಯಾಗುತ್ತಿದೆ. ಏರಿಯು ಪೂರ್ವದಿಕ್ಕಿನಿಂದ ಪಶ್ಚಿಮದಿಕ್ಕಿನ ಕಡೆಗೆ ಇದ್ದು, ಸುಮಾರು ೩೦೦ ಮೀ. ಉದ್ದ, ೧೦ ಮೀ. ಅಗಲ ಮತ್ತು ೮ ಅಡಿಯಷ್ಟು ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಯ ಮೇಲೆ ಜನ, ದನ ಓಡಾಡುವಷ್ಟು ಜಾಗವಿದ್ದು, ಉಳಿದ ಭಾಗವು ಗಿಡಗಳಿಂದ ಕೂಡಿದೆ. ಕೆರೆಗೆ ತೂಬುಗಳಿಲ್ಲ. ಹೆಚ್ಚುವರಿ ನೀರು ನಾಲೆಗೆ ಸೇರುವಂತೆ ಕೆರೆಯ ಪೂರ್ವದಿಕ್ಕಿನಲ್ಲಿ ಸುಮಾರು ೫೦ ಅಡಿ ಉದ್ದದ ೧ ಕೋಡಿ ನಿರ್ಮಿಸಲಾಗಿದೆ. ಕೆರೆಯ ಅಚ್ಚುಕಟ್ಟು ಪ್ರದೇಶಕ್ಕೆ ಕಾಲುವೆಗಳ ಮೂಲಕ ನಿರುಣಿಸಲಾಗುತ್ತದೆ. ಜಲಾಶಯದ ಸುತ್ತಲಿನ ಜಮೀನು ಲಿಂಗಯತ, ಅಯ್ಯನಾರು ಮತ್ತು ಕುರುಬ ಜನಾಂಗದವರಿಗೆ ಸೇರಿದೆ. ಈ ಗ್ರಾಮದಲ್ಲಿ ಕಾವೇರಿ ನದಿ ಹರಿಯುತ್ತಿರುವುದರಿಂದ ಕೆರೆಯು ಚಿಕ್ಕದಾಗಿದ್ದರೂ ಕೃಷಿಗೆ ಬಳಕೆಯಾಗುತ್ತಿದೆ. ಆದರೆ ಕೆರೆಗೆ ನಾಲೆಯ ನೀರು ಬರುವುದರಿಂದ ಕೆರೆಯಲ್ಲಿ ಹೂಳು ತುಂಬಿ ಕೆರೆಯೇ ಕಾಣದಂತೆ ಗಿಡಗಳು ಬೆಳೆದಿವೆ. ಕೆರೆಗೆ ಸಂಬಂಧಪಟ್ಟ ಇಲಾಖೆ ಮತ್ತು ಗ್ರಾಮದ ಜನ ಇತ್ತ ಕಡೆ ಗಮನ ಹರಿಸಬೇಕು. ಇಲ್ಲದಿದ್ದರೆ ಕೆರೆಯು ಹೂಳು ತುಂಬಿ ಒತ್ತುವರಿಯಾಗಿ ನೀರಿನ ಸಂಗ್ರಹಣಸಾಮರ್ಥ್ಯ ಕಡಿಮೆಯಾಗುತ್ತದೆ. ಗ್ರಾಮದಲ್ಲಿ ಹೊಳೆ ನೀರು ಹೆಚ್ಚಾಗಿ ಕೃಷಿಗೆ ಬಳಕೆಯಾಗುತ್ತಿರುವುದರಿಂದ ಕೆರೆಯ ರಕ್ಷಣೆಯ ಕಡೆಗೆ ಗಮನ ಹರಿಸಿಲ್ಲ.

ಕೋಳಗುಂದ ಕೆರೆ

ಅರಸೀಕೆರೆ ತಾಲೂಕಿನಲ್ಲಿ ಬರುವ ಹೊಯ್ಸಳ ಕೆರೆಗಳಲ್ಲಿ ಕೋಳಗುಂದ ಕೆರೆಯು ಒಂದು. ಗ್ರಾಮದ ಪೂರ್ವಕ್ಕೆ ದೊಡ್ಡಕೆರೆ ಇದೆ. ಪ್ರಸ್ತುತ ದಿನದಲ್ಲಿ ಅದನ್ನು ಕೋಗುಂದ ಅಥವಾ ಕೋಳಗುಂದ ದೊಡ್ಡಕೆರೆ ಎಂತಲೂ ಕರೆಯುತ್ತಾರೆ. ಏರಿಯು ಪೂರ್ವ-ಪಶ್ಚಿಮವಾಗಿ ಅಂಕುಡೊಂಕಾಗಿದ್ದು, ದೂರಕ್ಕೆ ಮಣ್ಣಿನ ಏರಿಯಂತೆ ಕಂಡುಬರುತ್ತದೆ. ಏರಿಯ ಒಳಪಾರ್ಶ್ವದ

ಇಳಿಜಾರಿಗೆ ಹಾಕಿರುವ ಕಲ್ಲುಗಳು ಮಣ್ಣಿನಿಂದ ಮುಚ್ಚಿದಂತಿದ್ದು, ಅಲ್ಲಲ್ಲಿ ಪೊದರು ಗಿಡಗಳು ಬೆಳೆದಿವೆ. ಸುಮಾರು ೧೨೫೦ ಮೀ. ಉದ್ದ, ತಳದ ಅಗಲ ೩೦ ಅಡಿ ಇದ್ದು, ಮೇಲ್ಭಾಗದ ಅಗಲ ೬ ಮೀ. ಇದೆ. ಎತ್ತರ ಒಳಭಾಗದಲ್ಲಿ ೧೨ ಅಡಿ ಇದ್ದು, ಹೊರಭಾಗದಲ್ಲಿ ೧೮ ಅಡಿಗಳಷ್ಟು ಎತ್ತರ ಹೊಂದಿದೆ. ಏರಿಗೆ ಎರಡು ತೂಬುಗಳನ್ನು ಹೊಸದಾಗಿ ಇರಿಸಲಾಗಿದೆ. ಹಳೆಯ ತೂಬು ಏರಿಯಿಂದ ಸ್ವಲ್ಪ ಅಂತರದಲ್ಲಿದ್ದು ಭಗ್ನಗೊಂಡಿವೆ. ಈ ಹಳೆಯ ಒಂದು ತೂಬಿನ ಮೇಲೆ ಗಜಲಕ್ಷ್ಮಿಯ ಶಿಲ್ಪವಿದೆ. ಏರಿಯಿಂದ ದಕ್ಷಿಣಕ್ಕೆ ಕೆರೆ ಅಂಗಳವಿದ್ದು, ಉತ್ತರಕ್ಕೆ ಏರಿ ಇದೆ. ಹೊಯ್ಸಳ ಕಾಲದ ಕೆರೆಗಳ ಒಡ್ಡಿನಂತೆ ಈ ಕೆರೆಯನ್ನು ಸಹ ನಿರ್ಮಿಸಿದ್ದಾರೆ. ಕ್ರಿ.ಶ. ೧೨೩೪ರ ಶಾಸನದಲ್ಲಿ[೯೨] ಬಂಟಗವುಡ ಮತ್ತು ಮಾರುಗವುಡರು ಕನ್ನೆಗೆರೆಯನ್ನು ನಿರ್ಮಾಣ ಮಾಡಿದ್ದಕ್ಕೆ ಕೆರೆಕೊಡುಗೆ ನೀಡಿರುವುದನ್ನು ದಾಖಲಿಸಿದೆ.

ಕೆರೆಯ ವಿಸ್ತೀರ್ಣ ೨೨.೯೫ ಹೆಕ್ಟೇರ್ ಇದೆ. ೪೦.೩೧ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದ್ದು, ೬೧.೦೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುತ್ತಿದೆ. ಕೆರೆಗೆ ಗುಡ್ಡದ ನೀರು, ಮಾದನಹಳ್ಳಿ ಕೆರೆ ಮತ್ತು ಸಿಂಗನಹಳ್ಳಿ ಕೆರೆ ನೀರು ಬಂದು ಸಂಗ್ರಹವಾಗುತ್ತವೆ. ಹೆಚ್ಚುವರಿ ನೀರು ಬೆಳುವಳ್ಳಿ ಕೆರೆಗೆ ಹೋಗುತ್ತದೆ. ಏರಿಯ ಎರಡು ದಿಕ್ಕಿನಲ್ಲಿ ಎರಡು ಕೋಡಿ ಇವೆ. ಪಶ್ಚಿಮದಿಕ್ಕಿನ ಕೋಡಿ ೧೦ ಮೀ. ಇದ್ದು, ಪೂರ್ವದಿಕ್ಕಿನ ಕೋಡಿ ೩೦ ಮೀ. ಇದೆ. ಕೆರೆಯ ನೀರು ಭತ್ತ, ಸೂರ್ಯಕಾಂತಿ ಮತ್ತು ಜೋಳದ ಬೆಳೆಗಳಿಗೆ ಬಳಕೆಯಾಗುತ್ತದೆ. ಕೆರೆ ಹಿಂಭಾಗದ ಜಮೀನು ಲಿಂಗಾಯತ ಮತ್ತು ದೇವಾಂಗಶೆಟ್ಟರಿಗೆ ಹೆಚ್ಚಾಗಿ ಸೇರಿದೆ. ಅಚ್ಚುಕಟ್ಟು ಪ್ರದೇಶಕ್ಕೆ ಕೆರೆ ತುಂಬಿದಾಗ ತೂಬನ್ನು ಎತ್ತಲು ನೀರ್ಗಂಟಿಗಳಿದ್ದಾರೆ. ಅವರಿಗೆ ೩ ಎಕರೆ ಜಮೀನನ್ನು ಈ ಕಾರ್ಯ ನಿರ್ವಹಿಸಲು ಬಿಡಲಾಗಿದೆ. ಕೆರೆಯ ಸುತ್ತಲೂ ಪ್ರಾಚೀನ ದೇವಾಲಯಗಳು ಕಂಡುಬರುತ್ತವೆ. ಕೆರೆ ಅಂಗಳದಲ್ಲಿ ಕೇತೇಶ್ವರ, ಸೋಪಾನದಲ್ಲಿ ಬಂಟೇಶ್ವರ ದೇವಸ್ಥಾನಗಳಿವೆ. ಪಶ್ಚಿಮದಿಕ್ಕಿನಲ್ಲಿ ಗಣಪತಿ ಮತ್ತು ಆಂಜನೇಯ ದೇವಾಲಯಗಳಿದ್ದರೆ, ಉತ್ತರಕ್ಕೆ ಬ್ರಹ್ಮದೇವರ ಗುಡಿ, ಬಸವಣ್ಣ ಮತ್ತು ಕಲ್ಲೇಶ್ವರ ದೇವಸ್ಥಾನಗಳಿವೆ. ಹಾಗೆಯೇ ದಕ್ಷಿಣಕ್ಕೆ ಹೊನ್ನಮ್ಮದೇವರ ದೇವಸ್ಥಾನವಿದ್ದು, ಮುಜರಾಯಿ ಇಲಾಖೆಗೆ ಸೇರಿದೆ. ಬಸವಣ್ಣ ದೇವಸ್ಥಾನ ಜಾತ್ರೆ ಫೆಬ್ರವರಿಯಲ್ಲಿ ನಡೆದರೆ, ಹೊನ್ನಮ್ಮದೇವಿಯ ಜಾತ್ರೆ ಜೂನ್‌ನಲ್ಲಿ ನಡೆಯುತ್ತದೆ. ಕೆರೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಸೇರಿದ್ದರೂ ಕೂಡ ಕೆರೆಯಲ್ಲಿ ಹೂಳು ತುಂಬಿದೆ. ಪ್ರಸ್ತುತ ದಿನದಲ್ಲಿ ಕೆರೆಯ ಅಂಗಳ ಸಮತಟ್ಟಾದ ಭೂಮಿಯಂತೆ ಕಾಣುತ್ತದೆ. ಇದೇ ರೀತಿ ಮುಂದುವರಿದರೆ ಮುಂದಿನ ಪೀಳಿಗೆಗೆ ಕೆರೆಯು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ.

ನುಗ್ಗೇಹಳ್ಳಿ ಕೆರೆ

ಚನ್ನರಾಯಪಟ್ಟಣದಿಂದ ಸುಮಾರು ೧೮ ಕಿ.ಮೀ. ದೂರದಲ್ಲಿ ನುಗ್ಗೇಹಳ್ಳಿ ಗ್ರಾಮವಿದೆ.

ಕ್ರಿ.ಶ. ೧೪೩೫ರ ನುಗ್ಗೇಹಳ್ಳಿ ಶಾಸನದಲ್ಲಿ[೧೪೩] ಸೋಮನಾಥಪುರ ಅಗ್ರಹಾರವೆಂದು ಅಥವಾ ನುಗ್ಗೇಹಳ್ಳಿ ಎಂದು ಉಲ್ಲೇಖಿಸಲಾಗಿದೆ. ಪ್ರಸ್ತುತ ಗ್ರಾಮವನ್ನು ಸ್ಥಳೀಯರು ನುಗ್ಗಿಹಳ್ಳಿ ಮತ್ತು ನುಗ್ಗೇಹಳ್ಳಿ ಎಂದು ಸಹ ಕರೆಯುತ್ತಾರೆ. ಗ್ರಾಮದ ಉತ್ತರಕ್ಕೆ ಹಿರಿಯಕೆರೆ ಇದೆ. ಕ್ರಿ.ಶ. ೧೨೫೨ರ ಶಾಸನದಲ್ಲಿ[೧೪೪] ಕಮ್ಮಟದ ಬಸವಣ್ಣ ಬ್ರಾಹ್ಮಣರಿಗೆ ಛತ್ರ ನಿರ್ಮಿಸಿ 'ಬ್ರಹ್ಮಸಮುದ್ರ' ಎಂಬ ಕೆರೆ ಕಟ್ಟಿಸಿದನು. ಇದೇ ವ್ಯಕ್ತಿ ಪುನಃ ೧೨ ಜನ ಬ್ರಾಹ್ಮಣರಿಗೆ ಅನ್ನದಾನಕ್ಕಾಗಿ ಭೂದಾನಗಳನ್ನು ನೀಡಿ ಕೆರೆಯನ್ನು ಮತ್ತಷ್ಟು ವಿಸ್ತರಿಸಿ ಕಟ್ಟಿಗೆ ಕಲ್ಲುಗಳನ್ನು ಹೊಂದಿಸಿದನೆಂದು ದಾಖಲಿಸಿದೆ. ಬ್ರಾಹ್ಮಣರಿಗಾಗಿಯೇ ಕೆರೆಯನ್ನು ಕಟ್ಟಿಸಿರುವುದು ಗಮನಾರ್ಹ. ನುಗ್ಗೇಹಳ್ಳಿಯ ಮತ್ತೊಂದು ಶಾಸನವು[೧೪೫] ಲಕ್ಕವ್ವೆ ಎಂಬುವಳು ಕೆರೆಯನ್ನು ಕಟ್ಟಿಸಿ ದತ್ತಿಬಿಟ್ಟಿದನ್ನು ಉಲ್ಲೇಖಿಸುತ್ತದೆ. ಕೆರೆಯ ಸಮೀಪ ಸದಾಶಿವ ದೇವಾಲಯವಿದ್ದು. ಇದರ ಪಕ್ಕದಲ್ಲಿ ಆರೆಕಟ್ಟೆ ಎಂಬ ಒಂದು ಚಿಕ್ಕಕೆರೆ ಇದೆ. ಈ ಕೆರೆಯಿಂದ ನೀರು ದೊಡ್ಡಕೆರೆಗೆ ಹೋಗಲು ಒಂದು ತೂಬನ್ನು ಅಳವಡಿಸಲಾಗಿದೆ. ಚಿಕ್ಕಕೆರೆಯ ಪಕ್ಕದಲ್ಲಿ ಎರಡು ಪುಷ್ಕರಣಿಗಳಿವೆ. ಈ ಬಾವಿಗಳ ನೀರನ್ನು ಹಿಂದೆ ಕುಡಿಯಲು ಬಳಸುತ್ತಿದ್ದರಿಂದ ಸರ್ಕಾರಕ್ಕೆ ಕಂದಾಯವನ್ನು ಕಟ್ಟುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ಬಾವಿಗಳು ನಾಶವಾಗಿದ್ದರೂ ಕೂಡ ಬಾವಿಗಳಲ್ಲಿ ಸಂಗ್ರಹವಾದ ನೀರು ಹಾಳಾಗದಂತೆ ಸರ್ಕಾರದಿಂದ ರಕ್ಷಣೆಯನ್ನು ಪಡೆದಿವೆ.

ಕೆರೆಯ ಏರಿಯು ಪೂರ್ವದಿಂದ ಪಶ್ಚಿಮಾಭಿಮುಖವಾಗಿದೆ. ಏರಿಯ ಉದ್ದ ಸುಮಾರು ೧೨೯೦ ಮೀ., ಅಗಲ ೧.೮೦ ಮೀ. ಮತ್ತು ಒಳಪಾರ್ಶ್ವದ ಎತ್ತರ ೨೦ ಅಡಿ ಇದೆ. ಏರಿಯಿಂದ ಒಳಗಾದಂತೆ ಸುಮಾರು ೧೮ ಅಡಿ ದೂರದಲ್ಲಿ ಒಂದು ತೂಬನ್ನು ಇರಿಸಲಾಗಿದೆ. ಈ ತೂಬು ಸುಮಾರು ೧೦ ಅಡಿಗಳಷ್ಟು ಎತ್ತರವಿದ್ದು. ದೇವಾಲಯದ ಶಿಖರದ ಮಾದರಿಯಲ್ಲಿ ನಿರ್ಮಿಸಲಾಗಿದೆ. ಪ್ರಸ್ತುತ ಈ ತೂಬು ನಿರ್ವಹಣೆಯಲ್ಲಿಲ್ಲ. ಇತ್ತೀಚೆಗೆ ತೂಬನ್ನು ಹೊಸದಾಗಿ ಏರಿಗೆ ಇರಿಸಲಾಗಿದೆ. ಕೆರೆಯು ಹಿಂದಿನಿಂದಲೂ ಮಳೆನೀರನ್ನು ಹೊಂದಿದೆ. ಕೆರೆಯ ನೀರಿನ ಸಂಗ್ರಹಣಸಾಮರ್ಥ್ಯ ೩೩.೪೫ ಎಂ.ಸಿ.ಎಫ್.ಟಿ.ಯಷ್ಟು ಇದೆ. ಜಲವಿಸ್ತೀರ್ಣ ೫೧.೮೨ ಹೆಕ್ಟೇರ್ ಇದ್ದು, ೫೦.೧೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಗಳಿಗೆ ನೀರನ್ನು ಪೂರೈಸುತ್ತಿದೆ. ತೂಬಿನ ನಿರ್ವಹಣೆಯನ್ನು ನೀರ್ಗಂಟಿಗಳು ಮಾಡುತ್ತಾರೆ. ಕೆರೆ ತುಂಬಿದಾಗ ನೀರ್ಗಂಟಿಗಳು ಗಂಗಮ್ಮನ ಪೂಜೆ ಮಾಡಿ ತೂಬನ್ನು ಎತ್ತುತ್ತಾರೆ. ಹಿಂದೆ ನೀರ್ಗಂಟಿಗಳಿಗೆ ಕೆರೆ ಕೆಳಗಿನ ಜಮೀನನ್ನು ಬಿಟ್ಟಿದ್ದರು. ಇತ್ತೀಚೆಗೆ ಕೆರೆ ನೀರನ್ನು ಬಳಸಿಕೊಂಡು ಬೆಳೆದ ಬೆಳೆಯಲ್ಲಿ ಸ್ವಲ್ಪ ಭಾಗವನ್ನು ನಿರ್ಗಂಟಿಗಳಿಗೆ ಕೊಡುತ್ತಾರೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಕೆರೆಯ ಪಶ್ಚಿಮದಿಕ್ಕಿಗೆ ಸುಮಾರು ೩೫ ಮೀ. ಉದ್ದದ ಕೋಡಿಯನ್ನು ಅಳವಡಿಸಲಾಗಿದೆ. ಇದರ ಮೂಲಕ ಕೆರೆಯ ಹೆಚ್ಚುವರಿ ನೀರು ಚನ್ನಕಟ್ಟೆಗೆ ಹೋಗುತ್ತದೆ. ಕೆರೆಯ ನೀರನ್ನು ಹಿಂದೆ ದೇವಾಲಯಗಳ ಪೂಜೆಗೆ ಬಳಸುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ಕೃಷಿ ಜಾನುವಾರುಗಳಿಗೆ ಮತ್ತು ಬಟ್ಟೆ ತೊಳೆಯಲು ಉಪಯೋಗವಾಗುತ್ತಿದೆ.

ರಂಗಸಮುದ್ರ ಕೆರೆ

ಚನ್ನರಾಯಪಟ್ಟಣ ತಾಲೂಕಿನಲ್ಲಿ ಬರುವ ಒಂದು ಗ್ರಾಮ ಗೊಲ್ಲರಹೊಸಹಳ್ಳಿ. ಗ್ರಾಮವು ತಾಲೂಕಿನಿಂದ ೨೫ ಕಿ.ಮೀ. ದೂರದಲ್ಲಿದೆ. ಗ್ರಾಮದಲ್ಲಿ ಊರಮುಂದಿನ ಕೆರೆ ಮತ್ತು ರಂಗಸಮುದ್ರ ಕೆರೆ ಎಂದು ಎರಡು ಕೆರೆಗಳಿವೆ. ಗ್ರಾಮದ ಮುಂಭಾಗದಲ್ಲಿರುವ ಕೆರೆಯನ್ನು ಊರಮುಂದಿನ ಕೆರೆ ಎಂದು ಊರಿನಿಂದ ದಕ್ಷಿಣಕ್ಕೆ ೫೦೦ ಮೀ. ದೂರದಲ್ಲಿರುವ ಕೆರೆಯನ್ನು ರಂಗಸಮುದ್ರ ಕೆರೆ ಎಂದು ಕರೆಯುತ್ತಾರೆ. ಕ್ರಿ.ಶ. ೧೨೬೮ರ ರಂಗಸಮುದ್ರ ಶಾಸನದಲ್ಲಿ[೧೪೬] ಬೆಟ್ಟಗಾವುಂಡನ ಮಗ ಪಾಂಡುಗಾವುಂಡ ಕೆರೆಯನ್ನು ಕಟ್ಟಿಸಿ, ದೇವಾಲಯವನ್ನು ಮಾಡಿಸಿದುದರ ವಿಷಯವಿದೆ. ಕೆರೆಗಳು ಹೊಯ್ಸಳರ ಕಾಲದಲ್ಲಿಯೇ ನಿರ್ಮಾಣವಾಗಿದ್ದು, ಪ್ರಸ್ತುತ ದಿನಗಳಲ್ಲಿ ಜೀರ್ಣೋದ್ಧಾರವಾಗಿರುವಂತೆ ಕಂಡುಬರುತ್ತದೆ. ರಂಗಸಮುದ್ರ ಕೆರೆಯ ಏರಿಯು ಹೊಡೆದು ಕೆರೆಯ ನೀರು ಸಮುದ್ರದಂತೆ ಗ್ರಾಮದ ರಂಗನಾಥ ದೇವಾಲಯದವರೆಗೂ ನಿಲ್ಲುತ್ತಿತ್ತು. ಅಂದಿನಿಂದ ಕೆರೆಗೆ ರಂಗಸಮುದ್ರವೆಂಬ ಹೆಸರು ರೂಢಿಗೆ ಬಂದಿರುವುದಾಗಿ ಸ್ಥಳೀಯರು ಹೇಳುತ್ತಾರೆ. ಕೆರೆಯ ಏರಿಯು ಹೊಡೆದು ಹೋದ ನಂತರ ಕೆರೆ ಅಂಗಳದ ಸ್ವಲ್ಪ ಭಾಗವನ್ನು ಅಚ್ಚುಕಟ್ಟು ಪ್ರದೇಶವಾಗಿ ಮಾಡಿಕೊಂಡರು. ಏರಿಗೆ ಹೆಚ್ಚು ಒತ್ತಡ ಬೀಳದಂತೆ ಅಂಕುಡೊಂಕಾಗಿ ಜೀರ್ಣೋದ್ಧಾರ ಮಾಡಿದ್ದಾರೆ. ಏರಿಯು ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಹೊರಟು ನಂತರ ದಕ್ಷಿಣಕ್ಕೆ ತಿರುಗಿ ಪುನಹ ಪೂರ್ವಾಭಿಮುಖವಾಗಿ ಮುಂದುವರಿದಿದೆ. ಏರಿಯ ರಚನೆ ಅರ್ಧಚಂದ್ರಾಕಾರದಂತೆ ಕಾಣುತ್ತದೆ. ಏರಿಯ ಉದ್ದ ೯೯೦ ಮೀ., ಅಗಲ ೪ ಮೀ. ಮತ್ತು ೧೫ ಅಡಿ ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಗೆ ಹೊಂದಿಕೊಂಡಂತೆ ಎರಡು ತೂಬುಗಳನ್ನು ಜೀರ್ಣೋದ್ಧಾರ ಮಾಡಿ ಅಳವಡಿಸಲಾಗಿದೆ. ಈ ಎರಡು ತೂಬುಗಳಿಗೂ ಮರದ ದಿಮ್ಮಿಗೆ ಬದಲು ಕಬ್ಬಿಣದ ಬಾಗಿಲನ್ನು ಇಟ್ಟಿದ್ದಾರೆ. ಏರಿಯ ಹೊರಭಾಗದ ಇಳಿಜಾರಿನಲ್ಲಿ ತೂಬುಗಳಿಗೆ ಅನುಗುಣವಾಗಿ ಕಾಲುವೆಗಳನ್ನು ಜೋಡಿಸಲಾಗಿದೆ. ಅವುಗಳ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಭತ್ತ, ಕಬ್ಬು ಬೆಳೆಗಳನ್ನು ಬೆಳೆಯುತ್ತಿದ್ದರು. ಕೆರೆ ತುಂಬಿದಾಗ ಗ್ರಾಮದ ಜನರೇ ತೂಬನ್ನು ಎತ್ತಿ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿಕೊಳ್ಳುತ್ತಾರೆ.

ಕೆರೆಯು ಹಿಂದಿನಿಂದಲೂ ಮಳೆಯ ನೀರನ್ನು ಅವಲಂಬಿಸಿತ್ತು. ಪ್ರಸ್ತುತ ದಿನಗಳಲ್ಲಿ ಹೇಮಾವತಿ ನಾಲೆಯ ನೀರು ಬರುವಂತೆ ಪೈಪ್ ಹಾಕಿದ್ದಾರೆ. ಕೆರೆಯ ನೀರಿನ ಸಂಗ್ರಹ ಸಾಮರ್ಥ್ಯವು ೨೩.೫೭ ಎಂ.ಸಿ.ಎಫ್.ಟಿ.ಯಷ್ಟು ಇದ್ದು, ೪೦.೯೪ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರುಣಿಸುತ್ತದೆ. ಕೆರೆಯು ೫೬.೮೮ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ಹೆಚ್ಚುವರಿ ನೀರು ಹೊರ ಹೋಗಲು ಕೆರೆಯ ಎರಡು ದಿಕ್ಕಿನಲ್ಲಿ ಕೋಡಿಯನ್ನು ಅಳವಡಿಸಲಾಗಿದೆ. ಏರಿಯು ಅರ್ಧಚಂದ್ರಾಕೃತಿಯಲ್ಲಿ ಇರುವುದರಿಂದ ಎರಡು ಕೋಡಿಗಳು ಸಹ ಪೂರ್ವದಿಕ್ಕಿನಲ್ಲಿ ಬರುತ್ತವೆ.

ಇದರಲ್ಲಿ ಒಂದು ಕೋಡಿ ೨೫ ಮೀ. ಇದ್ದರೆ, ಮತ್ತೊಂದು ಕೋಡಿ ೫೦ ಮೀ. ಇದೆ. ಪೂರ್ವ ಕಾಲದಲ್ಲಿ ದೊಡ್ಡಕೆರೆಯಾಗಿದ್ದು ಪ್ರಸ್ತುತ ದಿನಗಳಲ್ಲಿ ಒತ್ತುವರಿಯಾಗಿದೆ.

ಬಾಳಗಂಚಿ ಕೆರೆ

ತುರುವೇಕೆರೆಯಿಂದ ದಬ್ಬೇಘಟ್ಟ ಮಾರ್ಗವಾಗಿ ಚನ್ನರಾಯಪಟ್ಟಣಕ್ಕೆ ಹೋಗುವ ಮಾರ್ಗದಲ್ಲಿ ಬಾಳಗಂಚಿ ಗ್ರಾಮವಿದೆ. ಹಿರಿಸಾವೆಯಿಂದ ಸುಮಾರು ೧೦ ಕಿ.ಮೀ. ಮತ್ತು ಚನ್ನರಾಯಪಟ್ಟಣದಿಂದ ಸುಮಾರು ೩೦ ಕಿ.ಮೀ. ದೂರದಲ್ಲಿದೆ. ಗ್ರಾಮವು ಬ್ರಾಹ್ಮಣರ ಅಗ್ರಹಾರವಾಗಿತ್ತು. ಕ್ರಿ.ಶ. ೧೨೬೮ರ ಶಾಸನದಲ್ಲಿ[೧೪೭] ಉದ್ಭವ ವಿಶ್ವನಾಥಪುರವೆಂದು ಉಲ್ಲೇಖಿತವಾಗಿದೆ. ಗ್ರಾಮದಲ್ಲಿ ಬೆಟ್ಟೇಶ್ವರ, ಮಲ್ಲೇಶ್ವರ, ಕಲ್ಲೇಶ್ವರ, ಸೋಮೇಶ್ವರ ಮತ್ತು ವಿಶ್ವನಾಥೇಶ್ವರ ಎಂಬ ಹೆಸರಿನ ಐದು ಈಶ್ವರ ದೇವಾಲಯಗಳಿವೆ. ಅಲ್ಲದೆ ಒಂದು ಮಠವಿದೆ. ಇದಕ್ಕೆ ಸಂಬಂಧಿಸಿದಂತೆ 'ಬಾಳೋದಾದರೆ ಬಾಳು ಬಾಳದಿದ್ದರೆ ಬಾಳಗಂಚಿಮಠ ಸೇರು' ಎಂಬ ಗಾದೆಯೂ ಕೂಡ ಇದೆ. ಗ್ರಾಮಕ್ಕೆ ಮೊದಲು 'ಬಾಳ್ಗಚ್ಚಿ' ಎಂಬ ಹೆಸರು ಇದ್ದು ನಂತರ ಬಾಳಗಂಚಿಯಾಗಿದೆ ಎಂಬುದು ಸ್ಥಳೀಯರ ಅಭಿಪ್ರಾಯ. ಬಾಳ್ಗಚ್ಚಿ ಎಂದರೆ ಯುದ್ಧದಲ್ಲಿ ಗೆದ್ದ ವೀರರಿಗೆ ಅರಸನು ಹತ್ತಾರು ಜನರ ಸಮ್ಮುಖದಲ್ಲಿ ಅವನ ಕತ್ತಿಯನ್ನು ತೊಳೆದು ದಾನ-ದತ್ತಿ ಪುರಸ್ಕಾರಗಳನ್ನು ನೀಡುವ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಇದಕ್ಕೆ ಪೂರಕವಾಗಿ ಗ್ರಾಮದಲ್ಲಿ ಯುದ್ಧದಲ್ಲಿ ಹೋರಾಟ ಮಾಡಿ ಮಡಿದ ವೀರರ ನೆನಪಿಗಾಗಿ ಹಾಕಿಸಿದ ಅನೇಕ ವೀರಗಲ್ಲುಗಳಿವೆ.

ಗ್ರಾಮದ ಪೂರ್ವ ಮತ್ತು ದಕ್ಷಿಣದಿಕ್ಕಿನ ಕಡೆ ಎರಡು ಕೆರೆಗಳಿವೆ. ಇವುಗಳ ಗಾತ್ರದಿಂದ ಚಿಕ್ಕಕೆರೆ ಮತ್ತು ದೊಡ್ಡಕೆರೆಯೆಂದು ಗುರುತಿಸುತ್ತಾರೆ. ಕ್ರಿ.ಶ. ೧೧೩೩ರ ಶಾಸನವು[೧೪೮] ಕುತ್ತರಜೀಯ ಎಂಬುವನು ದೇವಾಲಯ ಮತ್ತು ಕೆರೆ ಕಟ್ಟಿಸಿದನೆಂದು ಉಲ್ಲೇಖಿಸಿದೆ. ಗ್ರಾಮದ ಪೂರ್ವಕ್ಕೆ ಚಿಕ್ಕಕೆರೆ ಇದೆ. ಏರಿಯು ಪೂರ್ವದಿಕ್ಕಿನಿಂದ ಪಶ್ಚಿಮಾಭಿಮುಖವಾಗಿ ಹೋಗಿ ಕೊನೆಯ ಭಾಗವು ವೃತ್ತಾಕಾರವಾಗಿದೆ. ಏರಿಯ ಉದ್ದ ಸುಮಾರು ೫೦೦ ಮೀ. ಅಗಲ ೪ ಮೀ. ಮತ್ತು ಒಳಪಾರ್ಶ್ವದ ಎತ್ತರ ೧೨ ಅಡಿ ಇದೆ. ಕೆರೆಗೆ ಒಂದು ತೂಬು ಮತ್ತು ಒಂದು ಕೋಡಿಯನ್ನು ಅಳವಡಿಸಲಾಗಿದೆ. ಕೆರೆಯು ೨೧.೪೩ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದ್ದು, ೮೧.೦೧ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯು ಸುಮಾರು ೬೦ ಎಕರೆಯಷ್ಟು ಒತ್ತುವರಿಯಾಗಿದೆ ಎಂಬುದು ಸ್ಥಳೀಯರ ಹೇಳಿಕೆ. ಕೆರೆಯ ಸಮೀಪ ಪಶ್ಚಿಮಕ್ಕೆ ಮುಖ ಮಾಡಿರುವ ಹೊಯ್ಸಳರ ಕಾಲದ ಈಶ್ವರ ದೇವಸ್ಥಾನವಿದೆ. ಇದರ ಮುಂಭಾಗದಲ್ಲಿ ಬಸವಣ್ಣನ ಶಿಲ್ಪವಿದೆ. ಕೆರೆಗೆ ಬಾಳಗಂಚಿ ದೊಡ್ಡಕೆರೆಯಿಂದ ನೀರು ಬರುತ್ತದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಕೆರೆಯ ಪಶ್ಚಿಮದಿಕ್ಕಿನಲ್ಲಿ ಒಂದು ಕೋಡಿಯನ್ನು ನಿರ್ಮಿಸಲಾಗಿದೆ. ಈ ಕೋಡಿಯ ಸಮೀಪ ಒಂದು ವೀರಗಲ್ಲು ಇದೆ. ಹಾಗೆಯೇ ಗ್ರಾಮದ

ದಕ್ಷಿಣದಿಕ್ಕಿನ ಕಡೆಗೆ ದೊಡ್ಡಕೆರೆ ಇದೆ. ಕೆರೆಯ ಮುಂಭಾಗದಲ್ಲಿ ಸೋಮೇಶ್ವರ ದೇವಸ್ಥಾನವಿದೆ. ಕೆರೆಯ ಏರಿಯು ಉತ್ತರದಿಕ್ಕಿನಿಂದ ದಕ್ಷಿಣದಿಕ್ಕಿನ ಕಡೆಗೆ ಅಂಕುಡೊಂಕಾಗಿ ನಿರ್ಮಿಸಲಾಗಿದೆ. ಏರಿಗೆ ಹೊಂದಿಕೊಂಡಂತೆ ೨ ತೂಬುಗಳಿವೆ. ಏರಿಯ ಉದ್ದ ಸುಮಾರು ೧೬೦೦ ಮೀ., ಅಗಲ ೩ ಮೀ. ಮತ್ತು ಒಳಪಾರ್ಶ್ವದ ಎತ್ತರ ೧೨ ಅಡಿ ಇದೆ. ಏರಿಯ ಮೇಲೆ ಓಡಾಡಲು ಜಾಗವಿಲ್ಲದಷ್ಟು ಪೊದರು ಗಿಡಗಳು ಬೆಳೆದಿವೆ. ಏರಿಯ ಹೊರಭಾಗದ ಇಳಿಜಾರಿನಲ್ಲಿ ತೂಬಿಗೆ ಅನುಗುಣವಾಗಿ ಕಾಲುವೆಯನ್ನು ನಿರ್ಮಿಸಿ, ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಭತ್ತ, ರಾಗಿ, ಅವರೆ, ಹುರುಳಿ ಮತ್ತು ತೆಂಗು ಬೆಳೆಗಳನ್ನು ಬೆಳೆಯುತ್ತಾರೆ. ಕೆರೆಯ ಆಯಕಟ್ಟು ಪ್ರದೇಶವು ಹೆಚ್ಚಾಗಿ ಒಕ್ಕಲಿಗ ಮತ್ತು ಬ್ರಾಹ್ಮಣ ಜನಾಂಗಕ್ಕೆ ಸೇರಿದೆ. ಕೆರೆಗೆ ಹಿರಿಸಾವೆ ಕೆರೆಯಿಂದ ನೀರು ಬಂದು ಸಂಗ್ರಹವಾಗುತ್ತದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಕೆರೆಯ ಉತ್ತರದಿಕ್ಕಿಗೆ ಸುಮಾರು ೨೫ ಮೀ. ಉದ್ದದ ಕೋಡಿಯನ್ನು ಮಾಡಲಾಗಿದೆ. ಈ ಕೋಡಿಯ ಮೂಲಕ ಕೆರೆಯ ಹೆಚ್ಚುವರಿ ನೀರು ಯರಿಗೇನಹಳ್ಳಿ ಕೆರೆಗೆ ಹೋಗುತ್ತದೆ. ದೊಡ್ಡಕೆರೆಯು ಸಣ್ಣ ನೀರಾವರಿ ಇಲಾಖೆಯಿಂದ ರಕ್ಷಣೆಯನ್ನು ಪಡೆದಿದೆ.

ರುದ್ರಪಟ್ಟಣದ ಕೆರೆ

ಅರಕಲಗೂಡು ತಾಲೂಕಿನ ರಾಮನಾಥಪುರ ಹೋಬಳಿಯಲ್ಲಿ ಬರುವ ಒಂದು ಗ್ರಾಮ. ಈ ದಿನಗಳಲ್ಲಿ ಸಂಗೀತಗಾರರ ನೆಲೆಯಾಗಿದೆ. ಹಿಂದೆ ಈ ಸ್ಥಳದಲ್ಲಿ ರುದ್ರ ಎಂಬ ವ್ಯಕ್ತಿ ಆಳ್ವಿಕೆ ಮಾಡುತ್ತಿದ್ದ ಅಂದಿನಿಂದ ಅನೇಕ ರಾಜರು ಒಟ್ಟಿಗೆ ಸೇರಿ ರುದ್ರಮಹಾಯಾಗ ನಡೆಸುತ್ತಿದ್ದರು. ಹಾಗಾಗಿ ಗ್ರಾಮಕ್ಕೆ ರುದ್ರಪಟ್ಟಣ ಎಂಬ ಹೆಸರು ಬಂದಿರುವಂತೆ ಸ್ಥಳೀಯರು ಸೂಚಿಸುತ್ತಾರೆ. ಇಲ್ಲಿನ ಕೆರೆಯನ್ನು ರುದ್ರಪಟ್ಟಣ ಕೆರೆ ಮತ್ತು ಹನ್ಯಾಳಮ್ಮನ ಕೆರೆ ಎಂಬ ಎರಡು ಹೆಸರುಗಳಿಂದ ಗುರುತಿಸಲಾಗುತ್ತದೆ. ರುದ್ರಪಟ್ಟಣದಿಂದ ದಕ್ಷಿಣಕ್ಕೆ ಮತ್ತು ಹನ್ಯಾಳು ಗ್ರಾಮದ ಉತ್ತರದಿಕ್ಕಿಗೆ ಕೆರೆ ಇದೆ. ಈ ಎರಡೂ ಗ್ರಾಮದಲ್ಲಿ ಜನರು ಇಂದು ಕೆರೆಯ ಉಪಯೋಗವನ್ನು ಪಡೆಯುತ್ತಿದ್ದಾರೆ. ಕೆರೆಯು ಹೊಯ್ಸಳ ಕಾಲದ ಕೆರೆಗಳಲ್ಲಿ ಒಂದಾಗಿದೆ. ಕೆರೆಯ ಕಟ್ಟಿದುದರ ಬಗೆಗೆ ಸ್ಪಷ್ಟ ಉಲ್ಲೇಖವಿಲ್ಲದಿದ್ದರೂ ಕ್ರಿ.ಶ. ೧೨೯೬-೯೭ ರುದ್ರಪಟ್ಟಣದ ಶಾಸನದಲ್ಲಿ[೧೪೯] ಮಹದೇವರಸರಿಗೆ ಕೆರೆ ಕೆಳಗಿನ ಗದ್ದೆ ಭೂಮಿಯನ್ನು ಬಿಟ್ಟಿರುವ ಉಲ್ಲೇಖವಿದೆ. ಕೆರೆಯ ಏರಿಯು ಸುಮಾರು ೭೫೦ ಮೀ. ಉದ್ದ ಮತ್ತು ಮೇಲ್ಭಾಗದ ಅಗಲ ೮ ಮೀ. ಇದ್ದು, ಏರಿಯ ಮೇಲೆ ವಾಹನಗಳು ಓಡಾಡಲು ರಸ್ತೆ ಮಾಡಲಾಗಿದೆ. ಏರಿಯು ಉತ್ತರದಿಂದ ದಕ್ಷಿಣಾಭಿಮುಖವಾಗಿ ಮುಂದುವರಿದು ಕೊನೆಯ ಭಾಗವು ಪಶ್ಚಿಮದಿಕ್ಕಿನ ಕಡೆಗೆ ತಿರುಗಿದೆ. ಕೆರೆಯು ನಾಲ್ಕು ತೂಬು ಎರಡು ಕೋಡಿಯನ್ನು ಹೊಂದಿದೆ. ಅದರಲ್ಲಿ ೩ ತೂಬುಗಳು ಏರಿಗೆ ಅಳವಡಿಸಿದಂತೆ ಇದ್ದು, ೧ ತೂಬು ಏರಿಯಿಂದ ಸುಮಾರು ೧೦ ಅಡಿ ದೂರದಲ್ಲಿದೆ. ಈ ತೂಬು ಕಾರ್ಯ ನಿರ್ವಹಿಸುತ್ತಿಲ್ಲ. ತೂಬಿನ ನಿರ್ವಹಣೆಗೆ ನೀರ್ಗಂಟಿಗಳಿಲ್ಲದೆ ಗ್ರಾಮದ ಜನರೇ ನೀರು ಬೇಕಾದಾಗ ತೂಬು ಎತ್ತಿಕೊಳ್ಳುತ್ತಾರೆ. ಕೆರೆಯು

ಜೀರ್ಣೋದ್ಧಾರವಾಗಿದೆ. ೩೬.೦೩ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೭೪.೦೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದೆ. ಕೆರೆಯ ನೀರು ಬಟ್ಟೆ ತೊಳೆಯಲು, ಪ್ರಾಣಿಪಕ್ಷಿ ಹಾಗು ಕೃಷಿಗೆ ಬಳಕೆಯಾಗುತ್ತಿದೆ. ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಭತ್ತದ ಬೆಳೆಯನ್ನು ಸರ್ವ ಕಾಲದಲ್ಲಿಯೂ ಬೆಳೆಯುತ್ತಾರೆ. ಕೆರೆಗೆ ಹಾರಂಗಿ ನಾಲೆಯ ನೀರು ಬರುತ್ತದೆ. ಇಲ್ಲಿಂದ ಹೆಚ್ಚುವರಿ ನೀರು ಕಟ್ಟೆಪುರ ಕಾವಲಿಗೆ ಹೋಗುತ್ತದೆ. ಹೆಚ್ಚುವರಿ ನೀರು ಕೆರೆಯಿಂದ ಹೊರ ಹರಿದು ಹೋಗಲು ಕೆರೆಯ ಎರಡು ದಿಕ್ಕುಗಳಲ್ಲಿಯೂ ಕೋಡಿಗಳಿವೆ. ಉತ್ತರದಿಕ್ಕಿನ ಕೋಡಿ ಸುಮಾರು ೮೦ ಅಡಿ ಉದ್ದವಿದ್ದು. ಈ ಕೋಡಿಗೆ ನಾಲ್ಕು ಕಬ್ಬಿಣದ ಬಾಗಿಲನ್ನು ಒಳಗೊಂಡ ತೂಬುಗಳನ್ನು ಜೋಡಿಸಲಾಗಿದೆ. ಹಾಗೆಯೇ ಪಶ್ಚಿಮದಿಕ್ಕಿನ ಕೋಡಿ ೩೫ ಅಡಿ ಉದ್ದವಿದೆ. ಈ ಕೋಡಿಯ ಹತ್ತಿರ ಜೀರ್ಣೋದ್ಧಾರ ಮಾಡಿದ ಹನ್ಯಾಳಮ್ಮನ ದೇವಸ್ಥಾನವಿದೆ. ದೇವರನ್ನು ಗ್ರಾಮದ ಜನರು ಮಂಗಳವಾರ ಮತ್ತು ಶುಕ್ರವಾರ ಬಂದು ಪೂಜೆ ಮಾಡಿಕೊಂಡು ಹೋಗುತ್ತಾರೆ.

ದುದ್ದ ಕೆರೆ

ದುದ್ದ ಕೆರೆ ಹಾಸನದಿಂದ ಅರಸೀಕೆರೆಗೆ ಹೋಗುವ ಮಾರ್ಗದಲ್ಲಿದೆ. ಇದು ಮಳೆಯಾಶ್ರಿತವಾದ ಹೊಯ್ಸಳ ಕಾಲದ ಕೆರೆಯಾಗಿದೆ. ಸ್ಥಳೀಯ ಐತಿಹ್ಯದ ಪ್ರಕಾರ ದುದ್ದ ಗ್ರಾಮಕ್ಕೆ ರುದ್ರಾಕ್ಷಿಪಟ್ಟಣವೆಂಬ ಹೆಸರಿತ್ತು. ಈ ಪಟ್ಟಣವನ್ನು ಹೊನ್ನಮ್ಮದೇವಿಯ ಭಕ್ತರಾದ ಪಾಳೆಯಗಾರರು ಆಳುತ್ತಿದ್ದರು. ಆ ಹೊನ್ನಮ್ಮದೇವಿಗೆ ಆರು ಅಕ್ಕತಂಗಿಯರಿದ್ದರು. ಅದರಲ್ಲಿ ಕೊನೆಯವಳಾದ ಹೊನ್ನಮ್ಮಳಿಗೆ ಮಕ್ಕಳಿರಲಿಲ್ಲ. ಆ ಕೊರಗಿನಿಂದ ರುದ್ರಾಕ್ಷಿಪಟ್ಟಣದ ಕೆರೆಯ ಬಳಿ ನೆಲೆಸಿದ್ದಳು. ಐತಿಹ್ಯದಲ್ಲಿರುವ ರುದ್ರಾಕ್ಷಿಪಟ್ಟಣ ಕೆರೆ ದುದ್ದದ ಈಗಿನ ದೊಡ್ಡಕೆರೆಯೇ ಆಗಿರಬೇಕು. ಅದನ್ನು ಮಾಯಿಸಮುದ್ರ ಕೆರೆ ಎಂತಲೂ ಕರೆಯುತ್ತಾರೆ. ಒಂದು ದಿನ ಶತ್ರುಗಳು ರುದ್ರಾಕ್ಷಿಪಟ್ಟಣದ ಕೋಟೆಗೆ ನುಗ್ಗಿದಾಗ ಸೈನ್ಯವೆಲ್ಲ ನಾಶವಾಯಿತು. ಅಪಾರ ಸಾವು–ನೋವುಗಳು ಸಂಭವಿಸಿತು. ಅಳಿದುಳಿದ ಜನರು ಈ ಹೊನ್ನಮ್ಮನಿಗೆ ಮೊರೆ ಹೋದರು. ಜನರ ಕಷ್ಟಗಳನ್ನು ಮನಗಂಡ ಹೊನ್ನಮ್ಮ ಕಾಳಿ ಅವತಾರ ತಾಳಿ ಶತ್ರುಗಳನ್ನು ನಿರ್ನಾಮ ಮಾಡಿ, ಹಿಂತಿರುಗಿ ಬರುತ್ತಿದ್ದಾಗ ಅವಳ ಸ್ಥಿತಿಯನ್ನು ಕಂಡ ಗಂಡ ಗಂಗಾಧರನು ತಲ್ಲಣಗೊಂಡನಂತೆ. ಆಗ ಹೊನ್ನಮ್ಮ ರೌದ್ರಾವತಾರದಿಂದ ಸೌಮ್ಯಮೂರ್ತಿಯಾಗಿ ಪಾರ್ವತಿಯಾಗಿದ್ದಳು. ಅವಳ ರೌದ್ರ ಅವತಾರದಿಂದ ಆ ಸ್ಥಳಕ್ಕೆ ರುದ್ರಪಟ್ಟಣವೆಂಬ ಹೆಸರು ಬಂದಿತು. ಈ ರುದ್ರಪಟ್ಟಣದ ರುದ್ರಾಕ್ಷಿಯು ರುದ್ರ > ದುದ್ದ ಆಗಿದೆ ಎಂದು ಇಲ್ಲಿಯ ಜನರು ಸ್ಥಳೀಯ ಐತಿಹ್ಯ ಮಾಡಿದ್ದಾರೆ. ಇಲ್ಲಿ ಆಳ್ವಿಕೆ ನಡೆಸಿದ ಅರಸ ದುದ್ದರಸನಾಗಿದ್ದರಿಂದ ಸ್ಥಳಕ್ಕೂ ವ್ಯಕ್ತಿಯ ಹೆಸರೇ ಜೊತೆಯಲ್ಲಿ ಬಂದಿದೆ. ಇವಳ ಹೊಯ್ಸಳ ಕಡೆಯ ಸಾಮಂತ ದೊರೆಯಾಗಿರುವಂತೆ ಶಾಸನಗಳಿಂದ ತಿಳಿದುಬರುತ್ತದೆ.[೧೫೦]

ದುದ್ದಕೆರೆ ದುದ್ದ ಗ್ರಾಮದ ದಕ್ಷಿಣಕ್ಕೆ, ಮಾಯಿಸಮುದ್ರ ಗ್ರಾಮದ ಉತ್ತರದಿಕ್ಕಿಗಿದೆ. ಎರಡು ಗ್ರಾಮದ ನಿವಾಸಿಗಳು ಇದರ ಪ್ರಯೋಜನವನ್ನು ಹೊಂದುತ್ತಿದ್ದಾರೆ. ಈ ಕೆರೆಯು ನೀರಾವರಿ

ಇಲಾಖೆಯವರ ಅಧೀನದಲ್ಲಿದೆ. ಸಾಕಷ್ಟು ಆಧಾರಗಳು ದೊರೆಯದ ಕಾರಣ ಈ ಕೆರೆಯ ನಿರ್ಮಾತೃ ಯಾರೆಂಬುದನ್ನು ಖಚಿತತೆಯಿಂದ ಹೇಳಲು ಸಾಧ್ಯವಿಲ್ಲ.

ಈ ಕೆರೆಯ ಏರಿಗೆ ಅಳವಡಿಸಿದಂತೆ ಎರಡು ಹೊಸ ಮಾದರಿಯ ತೂಬುಗಳಿವೆ. ಹಳೆಯ ತೂಬುಗಳು ಏರಿಯಿಂದ ೧೨ ಅಡಿ ದೂರದಲ್ಲಿದ್ದು ಹಾಳಾಗಿವೆ. ಏರಿಯು ಸುಮಾರು ೯೫೦ ಮೀ. ಉದ್ದವಿದೆ. ಇದರ ಮೇಲ್ಭಾಗದಲ್ಲಿದುದ್ದರಿಂದ ಶಾಂತಿಗ್ರಾಮಕ್ಕೆ ಹೋಗಲು ರಸ್ತೆ ನಿರ್ಮಿಸಲಾಗಿದೆ. ಕೆರೆ ನೀರಿನ ಸಂಗ್ರಹಣಸಾಮರ್ಥ್ಯವು ೧೦೭.೦೦ ಎಂ.ಸಿ.ಎಫ್.ಟಿ.ಯಷ್ಟು ಇದ್ದು, ೧೭೯.೭೬ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರುಣಿಸುತ್ತದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಉತ್ತರದಿಕ್ಕಿಗೆ ಒಂದು, ಪೂರ್ವಕ್ಕೆ ಎರಡು ಕೋಡಿಗಳನ್ನು ಇರಿಸಲಾಗಿದೆ. ಕೆರೆ ತುಂಬಿದಾಗ ಭತ್ತ ಬೆಳೆಯುತ್ತಾರೆ. ನೀರಿಲ್ಲದೆ ಹೋದಾಗ ಕೆರೆ ಅಂಗಳದಲ್ಲಿ ಜೋಳ, ರಾಗಿ, ಕಡ್ಲೆ ಬೆಳೆಯನ್ನು ಬೆಳೆಯುತ್ತಾರೆ. ಕೆರೆ ಏರಿ ಹೊರಪಾರ್ಶ್ವದ ಇಳಿಜಾರಿನಲ್ಲಿ ಪೂರ್ವಕ್ಕೆ ಮುಖ ಮಾಡಿರುವಂತೆ ಕಲ್ಲೇಶ್ವರ ದೇವಾಲಯವಿದೆ. ಅದರ ಮುಂಭಾಗದಲ್ಲಿ ಎರಡು ವೀರಗಲ್ಲುಗಳಿವೆ. ದಿನನಿತ್ಯ ಪೂಜೆ ನಡೆಯುತ್ತದೆ. ಕೆರೆ ತುಂಬಿ ಕೋಡಿ ಬಿದ್ದಾಗ ನೀರ್ಗಂಟಿಗಳು ತೂಬಿಗೆ ಮರಿ ಬಲಿ ಕೊಟ್ಟು ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಬಿಡುತ್ತಾರೆ.

ಸೀಗೆಕೆರೆ

ಸೀಗೆ ಗುಡ್ಡ ಗ್ರಾಮವು ಸಾಲುಗಾಮೆ ಹೋಬಳಿಯಿಂದ ಸುಮಾರು ೩ ಕಿ.ಮೀ. ಮತ್ತು ಹಾಸನದಿಂದ ೧೦ ಕಿ.ಮೀ. ದೂರದಲ್ಲಿದೆ. ಹಾಗೆಯೇ ಕಲ್ಲವತ್ತಿ ಹಳ್ಳಿಯಿಂದ ೨ ಕಿ.ಮೀ. ದೂರದಲ್ಲಿ ಬರುತ್ತದೆ. ಗ್ರಾಮದ ಸಮೀಪದಲ್ಲಿ ಮಳೆ ಮಾದೇಶ್ವರ ಬೆಟ್ಟವಿದೆ. ಇದನ್ನು ಮಾದಲು ಹಿಂದೂಕೀಲ್ ಪರ್ವತ ಎಂದು ಕರೆಯುತ್ತಿದ್ದರು. ಇತ್ತೀಚೆಗೆ ಸೀಗೆ ಗುಡ್ಡ ಎಂದು ಹೇಳುತ್ತಾರೆ. ಸೀಗೆ ಮೆಳೆಗಳಿಂದ ಆವೃತವಾಗಿರುವ ಗುಡ್ಡ ಹಾಗೂ ಅರಣ್ಯಪ್ರದೇಶ. ಸೀಗೆ ಯಥೇಚ್ಛವಾಗಿ ಬೆಳೆದ ಕಾರಣ ಸುತ್ತಲಿನ ಊರು, ನಾಡು, ಹಳ್ಳಿ, ಅರಣ್ಯ ಎಲ್ಲವೂ ಈ ಹೆಸರಿನಿಂದಲೇ ಕೂಡಿವೆ. ಇದರಿಂದಾಗಿ ಗ್ರಾಮವನ್ನು ಸೀಗೆನಾಡು ಎಂದು ಗುರುತಿಸುವರು. ಗ್ರಾಮಕ್ಕೆ ಸಂಬಂಧಿಸಿದಂತೆ ಒಂದು ಐತಿಹ್ಯವಿದೆ. ಗ್ರಾಮದಲ್ಲಿ ಗ್ರಾಮ ದೇವತೆಯಾದ ದೇವಿರಮ್ಮನ ದೇವಸ್ಥಾನವಿದೆ. ಈ ಸ್ಥಳಕ್ಕೆ ಒಂದು ದಿನ ಋಷಿ ಬಂದು ತಂಗಿದನು. ಋಷಿಯು ಗ್ರಾಮದ ಪಟೇಲನನ್ನು ದೇವಾಲಯದ ಹತ್ತಿರ ಬರುವಂತೆ ಹೇಳಲು ತಳವಾರನನ್ನು ಕಳುಹಿಸಿದನು. ಪಟೇಲನು ಜಂಬದಿಂದ ತಳವಾರನ ಮಾತನ್ನು ಕೇಳಿ ಸ್ನಾನ, ದೇವರ ಪೂಜೆ, ಊಟ, ತಾಂಬೂಲ ಮತ್ತು ವಿಶ್ರಾಂತಿ ಪಡೆದು ಅನಂತರ ಬರುವುದಾಗಿ ಹೇಳಿ ಕಳುಹಿಸಿದನು. ಪಾಟೀಲನು ತಳವಾರ ಬಂದಾಗಲೆಲ್ಲಾ ಏನೇನೋ ಕೆಲಸದ ನೆಪ ಹೇಳಿ ಕಳುಹಿಸುತ್ತಿದ್ದನು. ಇದನ್ನು ಕೇಳಿ ಋಷಿಗೆ ಕೋಪ ಬಂದು 'ದೇಶ ದೇಶ ಕೆಟ್ಟರೂ ದೇಶಾಣಿ ಕೆಡಬಾರದು' 'ಸೀಗೆನಾಡು ಕೆಟ್ಟರೆ ಹೊಲದ ಹಸಿರು ಮನೆಗೆ ಬಡತನ' ಎಂದು

ಶಾಪ ಕೊಟ್ಟರಂತೆ. ಅಂದಿನಿಂದ ಗ್ರಾಮದಲ್ಲಿ ಎಷ್ಟು ಬೆಳೆ ಬೆಳೆದರೂ ಬಡತನವಿದೆ ಎಂಬುದು ಸ್ಥಳೀಯರ ನಂಬಿಕೆ. ಋಷಿಯು ಕೋಪದಿಂದ ತನ್ನ ಕೈಯಲ್ಲಿದ್ದ ದಂಡುಗೋಲನ್ನು ನೆಲಕ್ಕೆ ನೆಟ್ಟು ಈ ಕೋಲು ಒಣಗಿದರೆ ನಾನು ಸತ್ತಂತೆ ಎಂಬುದಾಗಿ ತಿಳಿಯಿರಿ ಎಂದು ಹೇಳಿದನಂತೆ. ಈ ಕೋಲು ಒಣಗದೆ ಚಿಗುರಿದೆ. ಅದನ್ನು ಗ್ರಾಮದ ಹಿರಿಯರು ಸೂಲದಮರ ಎಂದು ಹೇಳುತ್ತಾರೆ. ಗ್ರಾಮದಲ್ಲಿ ಯಾರಾದರು ಕಳ್ಳತನ ಅಥವಾ ಸುಳ್ಳು ನುಡಿದಾಗ ಈ ಮರದ ಬಳಿ ಕರೆದುಕೊಂಡು ಬರುತ್ತಾರೆ. ಈ ಸ್ಥಳದಲ್ಲಿ ಇಂದಿಗೂ ಕೂಡ ಯಾರೂ ಪ್ರಮಾಣ ಮಾಡುವುದಿಲ್ಲ. ಹಾಗೆ ಮಾಡಿದರೆ ಅವರಿಗೆ ತೊಂದರೆಯಾಗುತ್ತದೆ ಎಂಬ ನಂಬಿಕೆ ಇದೆ.

ಗ್ರಾಮದ ಈಶಾನ್ಯಕ್ಕೆ ಕೆರೆ ಇದೆ. ಅದನ್ನು ಗ್ರಾಮನಾಮದಿಂದ ಸೀಗೆಕೆರೆ ಎಂದು ಕರೆಯುತ್ತಾರೆ. ಕೆರೆಯ ಏರಿಯ ಹಿಂಭಾಗದಲ್ಲಿ ಒಂದು ಚಿಕ್ಕಗುಡಿ ಇದ್ದು, ಅದರ ಒಳಭಾಗದಲ್ಲಿ ವೀರಗಲ್ಲು ಇದೆ. ಇದನ್ನು ಸ್ಥಳೀಯ ಕೆಲವು ಜನಪದರು ಗಂಗಮ್ಮನ ಗುಡಿ ಎಂದು ಕರೆದರೆ ಮತ್ತೆ ಕೆಲವರು ಬ್ರಹ್ಮದೇವರ ಗುಡಿ ಎಂದು ಗುರುತಿಸುತ್ತಾರೆ. ಈ ಕೆರೆಯು ಯಾವಾಗ ನಿರ್ಮಾಣವಾಯಿತು ಎಂಬುದಕ್ಕೆ ಶಾಸನಗಳ ದಾಖಲೆಗಳಿಲ್ಲ. ಇಲ್ಲಿನ ಕೆರೆಯ ವಿನ್ಯಾಸವನ್ನು ನೋಡಿದಾಗ ವಿಜಯನಗರದ ಪೂರ್ವದಲ್ಲಿಯೇ ನಿರ್ಮಾಣವಾದಂತೆ ಕಂಡುಬರುತ್ತದೆ.

ಕೆರೆಯ ಏರಿಯ ಮೇಲೆ ಜನ, ದನ ಮತ್ತು ವಾಹನಗಳು ಓಡಾಡುವಷ್ಟು ಜಾಗವಿದೆ. ಏರಿಯ ಮೇಲೆ ಕೊಂಡಜ್ಜಿ ಗ್ರಾಮಕ್ಕೆ ಹೋಗಲು ರಸ್ತೆ ನಿರ್ಮಿಸಲಾಗಿದೆ. ಏರಿಯು ಪೂರ್ವದಿಂದ ಪಶ್ಚಿಮಕ್ಕೆ ಅರ್ಧಭಾಗವಿದ್ದು, ನಂತರ ದಕ್ಷಿಣದಿಕ್ಕಿಗೆ ಬಾಗಿದೆ. ಏರಿಯ ಉದ್ದ ೯೦೦ ಮೀ. ಅಗಲ ೫ ಮೀ. ಮತ್ತು ಒಳಪಾರ್ಶ್ವದ ಎತ್ತರ ೧೦ ಅಡಿ ಇದೆ. ಏರಿಗೆ ಹೊಂದಿಕೊಂಡಂತೆ ಒಂದು ಹೊಸ ತೂಬನ್ನು ಏರಿಗೆ ಅಳವಡಿಸಲಾಗಿದೆ. ಏರಿಯ ಹೊರಭಾಗದಲ್ಲಿ ತೂಬಿಗೆ ಅನುಸಾರವಾಗಿ ಕಾಲುವೆಗಳನ್ನು ಜೋಡಿಸಲಾಗಿದೆ. ಅವುಗಳ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆಯಲ್ಲಿ ನೀರು ಇದ್ದಾಗ ಭತ್ತವನ್ನು ಬೆಳೆದರೆ, ಕೆರೆಯಲ್ಲಿ ನೀರು ಇಲ್ಲದ ವೇಳೆಯಲ್ಲಿ ಬೇಸಿಗೆ ಬೆಳೆಗಳಾದ ಜೋಳ, ಶುಂಠಿ ಮತ್ತು ಉರುಳಿ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆ ಹಿಂಭಾಗದ ಅಚ್ಚುಕಟ್ಟು ಪ್ರದೇಶವು ಹೆಚ್ಚಾಗಿ ಲಿಂಗಾಯತ ಮತ್ತು ಒಕ್ಕಲಿಗ ಜನಾಂಗದವರಿಗೆ ಸೇರಿದೆ. ತೂಬಿನ ನಿರ್ವಹಣೆಯನ್ನು ಹಿಂದೆ ನೀರ್ಗಂಟಿಗಳು ಮಾಡುತ್ತಿದ್ದರು. ಇಂದು ನೀರ್ಗಂಟಿಗಳಿಲ್ಲದೆ ಗ್ರಾಮದ ಜನರು ಒಟ್ಟಿಗೆ ಸೇರಿ ಕೆರೆಗೆ ನೀರು ಬಂದಾಗ ತೂಬನ್ನು ಎತ್ತಿ ಆಯಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿಕೊಳ್ಳುತ್ತಾರೆ.

ಕೆರೆಯು ೩೪.೪೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೨೪.೯೬ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದ್ದು, ೬೯.೬೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಗೆ ಸೀಗೆಗುಡ್ಡದ ನೀರು ಬಂದು ಸಂಗ್ರಹವಾಗುತ್ತದೆ. ಕೆರೆಯ ಹೆಚ್ಚುವರಿ ನೀರು

ಹೊರಹೋಗಲು ಕೆರೆಯ ಪೂರ್ವದಿಕ್ಕಿಗೆ ಸುಮಾರು ೨೫ ಮೀ. ಉದ್ದದ ಕೋಡಿಯನ್ನು ನಿರ್ಮಿಸಲಾಗಿದೆ. ಕೆರೆಯು ಇಂದಿನಿಂದಲೂ ಸಾಕಷ್ಟು ಒತ್ತುವರಿಯಾಗಿದ್ದು, ಇತ್ತೀಚೆಗೆ ಒತ್ತುವರಿಯಾದ ಕೆರೆ ಅಂಗಳವನ್ನು ಬಿಡಿಸಿ ಹೂಳನ್ನು ತೆಗೆಸಿದ್ದಾರೆ. ಇದರಿಂದ ಕೆರೆಯು ತನ್ನ ವಿಸ್ತೀರ್ಣವನ್ನು ಹೆಚ್ಚಿಸಿಕೊಂಡಿದೆ. ಹಾಗೆಯೇ ಸಣ್ಣ ನೀರಾವರಿ ಇಲಾಖೆಯಿಂದ ರಕ್ಷಣೆಯನ್ನು ಪಡೆದಿದೆ.

ಯಲಹಂಕ ಕೆರೆ

ಹಳೇಬೀಡು ಹೋಬಳಿಗೆ ಸೇರಿದ ಯಲಹಂಕ ಗ್ರಾಮದಲ್ಲಿ ಒಂದು ದೊಡ್ಡಕೆರೆ ಮತ್ತು ಎರಡು ಚಿಕ್ಕಕೆರೆಗಳಿವೆ. ಇಲ್ಲಿನ ಕೆರೆಗಳಿಗೆ ಸಂಬಂಧಿಸಿದಂತೆ ಯಲಹಂಕ ಗ್ರಾಮದ ಕ್ರಿ.ಶ. ೧೫ನೆಯ ಶತಮಾನದ ಶಾಸನದಲ್ಲಿ[೫೧] ವಿಶ್ವನಾಥ ದೀಕ್ಷಿತರಿಗೆ ದಂಡನಾಯಕ ಸಿಂಗಮಗುಮ್ಮಣ್ಣರು ಕೆರೆ ಕಟ್ಟಿಸಿ ಕೊಡುಗೆಯಾಗಿ ನೀಡಿದುದರ ಉಲ್ಲೇಖವಿದೆ. ಇದನ್ನಾಧರಿಸಿ ಬಹುಶಃ ಇಲ್ಲಿನ ಕೆರೆಗಳು ೧೫ನೆಯ ಶತಮಾನದ ಕಾಲಾವಧಿಯಲ್ಲಿ ನಿರ್ಮಾಣವಾಗಿರಬೇಕು. ಶಾಸನದಲ್ಲಿ ಈ ಕೆರೆಗಳ ಹೆಸರುಗಳ ಉಲ್ಲೇಖವು ಇಲ್ಲದಿರುವುದರಿಂದ ಕೆರೆಗಳನ್ನು ಯಾರು ನಿರ್ಮಿಸಿದರು ಎಂದು ಗುರುತಿಸುವುದು ಕಷ್ಟಕರವಾಗಿದೆ.

ಗ್ರಾಮದ ಉತ್ತರದಿಕ್ಕಿನಲ್ಲಿ ದೊಡ್ಡಕೆರೆ ಇದ್ದು, ಅದನ್ನು ಬ್ಯಾಡರಹಳ್ಳಿ ಕೆರೆ ಅಥವಾ ಯಲಹಂಕ ದೊಡ್ಡಕೆರೆ ಎಂದು ಕರೆಯುತ್ತಾರೆ. ಬ್ಯಾಡರಹಳ್ಳಿಯಿಂದ ದಕ್ಷಿಣದಿಕ್ಕಿಗೆ ಈ ಕೆರೆ ಬರುತ್ತದೆ. ಎರಡೂ ಗ್ರಾಮಗಳ ಜನರು ಕೆರೆಯ ಉಪಯೋಗ ಪಡೆಯುತ್ತಿದ್ದಾರೆ. ಕೆರೆ ಏರಿಯು ಉತ್ತರದಿಂದ ದಕ್ಷಿಣಾಭಿಮುಖವಾಗಿ ಅಂಕುಡೊಂಕಾಗಿ ಮುಂದುವರಿದಿದೆ. ಏರಿಯ ಮೇಲೆ ವಾಹನಗಳು ಓಡಾಡುವಷ್ಟು ಜಾಗವಿದ್ದು, ಬ್ಯಾಡರಹಳ್ಳಿಯಿಂದ ಯಲಹಂಕ ಗ್ರಾಮಕ್ಕೆ ಹೋಗಲು ರಸ್ತೆ ನಿರ್ಮಿಸಲಾಗಿದೆ. ಏರಿಯು ಸುಮಾರು ೪೦೦ ಮೀ. ಉದ್ದ, ೫ ಮೀ. ಅಗಲ ಮತ್ತು ೧೫ ಅಡಿಗಳಷ್ಟು ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಯಿಂದ ೮ ಅಡಿ ದೂರದಲ್ಲಿ ೨ ಹಳೆ ತೂಬುಗಳಿದ್ದು ಇಂದು ಕಾರ್ಯ ನಿರ್ವಹಣೆಯಲ್ಲಿಲ್ಲ. ಅವುಗಳ ಬದಲಿಗೆ ಎರಡು ಹೊಸ ತೂಬುಗಳನ್ನು ಏರಿಗೆ ಇರಿಸಲಾಗಿದೆ. ತೂಬುಗಳ ನಿರ್ವಹಣೆಯನ್ನು ಗ್ರಾಮದ ಜನರೆ ನೋಡಿಕೊಳ್ಳುತ್ತಾರೆ. ಕೆರೆಯ ಆಯಕಟ್ಟು ಪ್ರದೇಶವು ಹೆಚ್ಚಾಗಿ ಲಿಂಗಾಯತ ಜನಾಂಗದವರಿಗೆ ಸೇರಿದ್ದು, ಕೆರೆಯ ನೀರನ್ನು ಬಳಸಿಕೊಂಡು ಮುಖ್ಯವಾಗಿ ಜೋಳ, ಶುಂಠಿ ಮತ್ತು ಬಾಳೆ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆಯು ೬.೭೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೬.೬೮ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದ್ದು, ೬೧.೬೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಗೆ ಇಬ್ಬೀಡು ಕೆರೆಯಿಂದ ನೀರು ಬರುತ್ತದೆ. ಹೆಚ್ಚುವರಿ ನೀರು ಉತ್ತರದಿಕ್ಕಿನ ಕೋಡಿಯ ಮೂಲಕ ಪಂಡಿತನಹಳ್ಳಿ ಕೆರೆಗೆ ಸೇರುತ್ತದೆ. ಕೆರೆಯ ಏರಿಯ ಮೇಲೆ ಬೂತಪ್ಪ ಅಥವಾ ಬ್ರಹ್ಮದೇವರು ಎಂದು ಗುರುತಿಸುವ ಚಿಕ್ಕಗುಡಿ ಇದೆ. ಈ ದೇವರಿಗೆ ಗ್ರಾಮದ ಲಿಂಗಾಯತ ಜನರು ಹಸು ಕರು ಹಾಕಿದಾಗ ಅದರ

ಹಾಲಿನಿಂದ ಗಿಣ್ಣನ್ನು ಮಾಡಿ ನೈವೇದ್ಯ ಮಾಡಿಕೊಂಡು ಹೋಗುತ್ತಾರೆ. ಹೆಚ್ಚಾಗಿ ಶುಕ್ರವಾರದಂದು ಈ ರೀತಿಯ ಪೂಜೆ ನಡೆಸುತ್ತಾರೆ.

ಕೆರೆಯ ಆಯಕಟ್ಟು ಪ್ರದೇಶದಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಶಿಲಾಗೋರಿಗಳಿವೆ. ಇವುಗಳನ್ನು ಕುರಿತು ಚಂದ್ರಶೇಖರ್ ಮಾಲೇಖರ್ ಎಂಬ ವಿದ್ವಾಂಸರು 'ಹೊಯ್ಸಳ ಸಂಪದ' ಎಂಬ ಗ್ರಂಥದಲ್ಲಿ ಲೇಖನವನ್ನು ಪ್ರಕಟಿಸಿದ್ದಾರೆ.[೧೫೨] ಪ್ರಸ್ತುತ ದಿನಗಳಲ್ಲಿ ಈ ರೀತಿಯ ಶಿಲಾವೃತ್ತ ಸಮಾಧಿಗಳು ನಾಶ ಹೊಂದದೇ ಉಳಿದಿರುವುದನ್ನು ಗಮನಿಸಿದಾಗ ಬೃಹತ್ ಶಿಲಾಯುಗದ ಕಾಲದಲ್ಲಿ ಮಾನವನ ನೀರಿನ ಆಸರೆಯಾಗಿ ಇಲ್ಲಿ ಸಣ್ಣ ಕೆರೆ ಇದ್ದಿರಬೇಕು. ಅನಂತರದ ಕಾಲದಲ್ಲಿ ಕೆರೆಯು ವಿಸ್ತರಣೆಯಾಗಿರಬಹುದು ಎನ್ನುವುದು ನನ್ನ ಗ್ರಹಿಕೆಯಾಗಿದೆ.

ಯಲಹಂಕ ಗ್ರಾಮದಲ್ಲಿ ಬರುವ ಇನ್ನೆರಡು ಕೆರೆಗಳನ್ನು ಊರಮುಂದಿನ ಕೆರೆ ಮತ್ತು ಗೌಡನ ಕಟ್ಟೆ ಎಂದು ಹೆಸರಿಸುತ್ತಾರೆ. ಗ್ರಾಮದ ಉತ್ತರದಿಕ್ಕಿನಲ್ಲಿ ಊರಮುಂದಿನ ಕೆರೆ ಅಥವಾ ಚಿಕ್ಕಕೆರೆ ಇದೆ. ಕೆರೆಯು ಇಂದು ಕಾಣದಂತೆ ಅಂಗಳದಲ್ಲಿ ಹೂಳು ತುಂಬಿ ಗಿಡಗಳು ಬೆಳೆದಿವೆ. ಏರಿಯು ಪೂರ್ವದಿಂದ ಪಶ್ಚಿಮಾಭಿಮುಖವಾಗಿದೆ. ಏರಿಯ ಮೇಲೆ ಜನ, ದನ ಓಡಾಡಲು ಸಾಧ್ಯವಾಗದಂತೆ ಪೊದರು ಗಿಡಗಳು ಬೆಳೆದಿವೆ. ಏರಿಗೆ ಅಳವಡಿಸಿದಂತೆ ೧ ತೂಬು ಇದ್ದು ಕಾರ್ಯ ನಿರ್ವಹಣೆಯಲ್ಲಿಲ್ಲದೆ ನಾಶ ಹೊಂದಿದೆ. ಕೆರೆಯು ೧.೬೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೦.೫೨ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದೆ. ಕೆರೆಯು ಸಾಕಷ್ಟು ಒತ್ತುವರಿಯಾಗಿದ್ದು, ಜನರು ಅಷ್ಟಾಗಿ ಇದರ ಉಪಯೋಗವನ್ನು ಪಡೆಯುತ್ತಿಲ್ಲ.

ಯಲಹಂಕ ಗ್ರಾಮದಲ್ಲಿನ ಮತ್ತೊಂದು ಕೆರೆಯಾದ ಗೌಡನ ಕಟ್ಟೆ ಗ್ರಾಮದ ದಕ್ಷಿಣದಿಕ್ಕಿಗಿದೆ. ಈ ಕೆರೆಯನ್ನು ಒಬ್ಬ ಗೌಡ ಕಟ್ಟಿಸಿದುದರಿಂದ ಗೌಡ ಕಟ್ಟೆ ಎಂದು ಸ್ಥಳೀಯರು ಗುರುತಿಸುತ್ತಾರೆ. ಇದರ ಬಗೆಗೆ ಯಾವುದೇ ಸ್ಪಷ್ಟ ಮಾಹಿತಿಗಳು ಲಭ್ಯವಿಲ್ಲ. ಏರಿಯು ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಮುಂದುವರಿದಿದೆ. ಕೆರೆ ಅಂಗಳ ಏರಿಯಿಂದ ದಕ್ಷಿಣದಿಕ್ಕಿಗಿದೆ. ಏರಿಯು ೧೦೦ ಮೀ. ಉದ್ದ ಮತ್ತು ೩.೫ ಮೀ. ಅಗಲವನ್ನು ಹೊಂದಿದ್ದು, ಏರಿಯ ಮೇಲೆ ಜನ, ದನ ಓಡಾಡುವಷ್ಟು ಜಾಗವಿದೆ. ಕೆರೆಯು ೨.೦೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೦.೨೬ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದೆ. ಕೆರೆಗೆ ವೀರಪುರ ಕೆರೆಯಿಂದ ನೀರು ಬರುತ್ತದೆ. ಹೆಚ್ಚುವರಿ ನೀರು ಪೂರ್ವದಿಕ್ಕಿನ ಕೋಡಿಯ ಮೂಲಕ ದೇವಿಹಳ್ಳಿ ಕೆರೆಗೆ ಹೋಗುತ್ತದೆ. ಕೆರೆಯ ನೀರು ದನಕರುಗಳಿಗೆ, ಕೃಷಿಗೆ ಮತ್ತು ಬಟ್ಟೆ ತೊಳೆಯಲು ಸಹಾಯಕವಾಗಿದೆ. ಕೆರೆಗೆ ತೂಬುಗಳಿಲ್ಲ. ಧಾರ್ಮಿಕ ಆಚರಣೆಗೆ ಸಂಬಂಧಿಸಿದಂತೆ ಗೌರಿಹಬ್ಬವಾದ ೧೦ ದಿನಗಳ ನಂತರ ಈ ಕೆರೆಗೆ ಗಣೇಶನನ್ನು ವಿಸರ್ಜನೆ ಮಾಡುತ್ತಾರೆ. ಕೆರೆಯು ಸುಮಾರು ೫ ಎಕರೆಗಳಷ್ಟು ಒತ್ತುವರಿಯಾಗಿರುವುದಾಗಿ ಸ್ಥಳಿಯರು ಹೇಳುತ್ತಾರೆ.

ಗಂಡಸಿ ಕೆರೆ

ಅರಸೀಕೆರೆ ತಾಲೂಕಿಗೆ ಸೇರಿದ ಒಂದು ಹೋಬಳಿ ಗಂಡಸಿ. ಕ್ರಿ.ಶ. ೧೩೨೪ರ ಶಾಸನದಲ್ಲಿ ಅಗ್ರಹಾರ ಬಲ್ಲಾಳಪುರವಾದ ಹಿರಿಯ ಗಂಡಸಿ ಎಂದು ಉಲ್ಲೇಖವಾಗಿದೆ. ಗ್ರಾಮದಲ್ಲಿ ಮಳೆ ಆಶ್ರಿತವಾದ ದೊಡ್ಡಕೆರೆ ಇದ್ದು, ೪೧.೬೨ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದೆ. ಕೆರೆಯ ಜಲಾನಯನ ಪ್ರದೇಶ ೭೦.೮೧ ಹೆಕ್ಟೇರ್ ಮತ್ತು ಅಚ್ಚುಕಟ್ಟು ಪ್ರದೇಶ ೯೩.೨೬ ಹೆಕ್ಟೇರ್‌ಗಳು. ಏರಿಯು ಪೂರ್ವ ಪಶ್ಚಿಮಾಭಿಮುಖವಾಗಿ ೧೨೯೦ ಮೀ. ಉದ್ದ ಮತ್ತು ೫ ಮೀ. ಮೇಲ್ಭಾಗದ ಅಗಲವಿದೆ. ಅದರ ಮೇಲ್ಭಾಗದಲ್ಲಿ ವಾಹನಗಳು ಚಲಿಸಲು ರಸ್ತೆ ಮಾಡಲಾಗಿದೆ. ಕೆರೆಯು ಎರಡು ತೂಬು, ಎರಡು ಕೋಡಿಯನ್ನು ಹೊಂದಿದೆ. ಏರಿಯ ಪಶ್ಚಿಮದ ಕೆರೆ ಅಂಗಳದಲ್ಲಿ ಹನುಮಂತನ ದೇವಾಲಯ ಮತ್ತು ಶಾಸನ ಕಲ್ಲುಗಳಿವೆ. ಕೆರೆಯ ರಚನೆಯನ್ನು ಕುರಿತಂತೆ ಎರಡನೇ ಹರಿಹರನ ಕಾಲಕ್ಕೆ ಸೇರಿದ ಗಂಡಸಿಯ ಕ್ರಿ.ಶ. ೧೪೦೩ರ ಶಾಸನವು[೧೫೩] ಬಾಯಣ್ಣನೆಂಬಾತನು ತನ್ನ ತಾಯಿಯ ಹೆಸರಿನಲ್ಲಿ ಮಂಗಾಪುರವೆಂಬ ಗ್ರಾಮವನ್ನು ನಿರ್ಮಿಸಿ, ಅಲ್ಲಿ ಮಂಗಸಮುದ್ರವೆಂಬ ಕೆರೆಯನ್ನು ಕಟ್ಟಿಸಿದನು. ಆ ಕೆರೆಯ ದಕ್ಷಿಣಭಾಗದಲ್ಲಿ ಕೋಡಿಯನ್ನು ನಿರ್ಮಿಸಿ, ಅಗ್ರಹಾರವಾದ ಹಿರಿಯ ಗಂಡಸಿ ಗ್ರಾಮವನ್ನು ಜೀರ್ಣೋದ್ಧಾರ ಮಾಡಿ, ಹಿರಿಯ ಕೆರೆಗೆ ನಿರ್ಮಿಸಿದ ಕಾಲುವೆಗೆ ರಕ್ಷಣಾರ್ಥವಾಗಿ ಹನುಮಂತದೇವರ ಪ್ರತಿಷ್ಠೆ ಮಾಡಿಸಿದ ವಿಷಯವನ್ನು ತಿಳಿಸಿದೆ. ಕೆರೆ ಏರಿಯ ಮೇಲೆ ಸುಮಾರು ೧೦ನೆಯ ಶತಮಾನದ ಈಶ್ವರ ದೇವಾಲಯದ ಕಂಬಗಳ ಅವಶೇಷಗಳಿವೆ. ಈ ದಿನಗಳಲ್ಲಿ ಪಾಳುಬಿದ್ದ ಮಂಟಪದಂತೆ ಕಾಣುತ್ತದೆ. ಸ್ಥಳೀಯರು ಕೂಡ ಮಂಟಪವೆಂದೇ ಹೇಳುತ್ತಾರೆ.

ಇಲ್ಲಿನ ಕಂಬಗಳು ಕುಳ್ಳಾಗಿದ್ದು, ವಿವಿಧ ಭಾಗಗಳಿಂದ ಕೂಡಿವೆ. ಕಂಬಗಳಲ್ಲಿ ಪಿಂಡಿ ಭಾಗವು ಮಣ್ಣಿನಿಂದ ಮುಚ್ಚಿದ್ದು, ಅದರ ಮೇಲೆ ದುಂಡಾದ ಶಲಾಕೆ, ಎಡಗಟ್ಟು, ಕೊಡ(ಕುಂಭ) ಮುಚ್ಚಳ ಮತ್ತು ಬೋದಿಗೆಗಳಿವೆ. ಇವುಗಳ ರಚನಾವಿನ್ಯಾಸವು ಗಂಗರ ಕಲಾಶೈಲಿಯನ್ನು ಹೋಲುತ್ತದೆ. ಗಂಡಸಿಯ ಪಾಳು ಈಶ್ವರ ದೇವಾಲಯದ ಪಕ್ಕದಲ್ಲಿ ಸುಮಾರು ೨೫ ಮೀ. ಉದ್ದದ ಕೋಡಿ ಇದೆ. ಅದರ ಹಾಸುಬಂಡೆಗಲ್ಲಿನ ಮೇಲೆ ಗಳಿಯಗಡಿಬವನ್ನು ನಿಖರ ಅಳತೆಯೊಂದಿಗೆ ಹೇಳುವ ಕ್ರಿ.ಶ. ೧೨೩೦ರ ಶಾಸನವಿದೆ.[೧೫೪] ಈ ದೇವಾಲಯದ ಕೆರೆಯ ಅಂಗಳದಲ್ಲಿ ಒಂದು ಚಿಕ್ಕ ಕಟ್ಟೆ ಇದೆ. ಅಲ್ಲಿನ ಸ್ಥಳೀಯರು ಈ ಕೆರೆಯು ನಿರ್ಮಾಣವಾಗುವುದಕ್ಕಿಂತ ಮೊದಲೇ ಈ ಕಟ್ಟೆ ಇದ್ದುದಾಗಿ ತಿಳಿಸುತ್ತಾರೆ. ಕೆರೆ ಪಕ್ಕದಲ್ಲಿ ದೇವಾಲಯಗಳು ಇರುವುದು ಸಾಮಾನ್ಯವಾಗಿದೆ. ಬಹುಶಃ ನಮ್ಮ ಪೂರ್ವಿಕರು ಪ್ರಾಣಿ, ಪಕ್ಷಿಗಳಿಗೆ ಅಥವಾ ಧಾರ್ಮಿಕವಾಗಿ ದೇವಾಲಯ ಕಟ್ಟುವ ಸಂದರ್ಭದಲ್ಲಿ ಈ ಕಟ್ಟೆಯನ್ನು ತೆಗೆಸಿರಬೇಕು. ನಂತರ ಬಂದ ರಾಜರು ನೀರಾವರಿಗೆ ಹೆಚ್ಚಿನ ಮಹತ್ವ ನೀಡಿ ದೊಡ್ಡಕೆರೆಯನ್ನು ಕಟ್ಟಿಸಿರಬಹುದು.

ಹಳೇಪಾಳ್ಯ ಕೆರೆ

ಹಾಸನದಿಂದ ೨೫ ಕಿ.ಮೀ. ಆಲೂರಿನಿಂದ ೬ ಕಿ.ಮೀ. ದೂರದಲ್ಲಿ ಪಾಳ್ಯ ಹೋಬಳಿಗೆ ಸೇರಿದಂತೆ ಎರಡು ಕೆರೆಗಳಿವೆ. ಪಾಳ್ಯದ ದಕ್ಷಿಣಕ್ಕೆ ೧ ಕಿ.ಮೀ. ದೂರದಲ್ಲಿ ಹಳೇಪಾಳ್ಯ ಗ್ರಾಮವಿದೆ. ಊರಿನಿಂದ ಉತ್ತರಕ್ಕೆ ಹಳೇಪಾಳ್ಯ ಚಿಕ್ಕಕೆರೆ ಇದೆ. ಅದರ ಏರಿಯು ಪೂರ್ವ ಪಶ್ಚಿಮಾಭಿಮುಖವಾಗಿ ಅರ್ಧಭಾಗ ಇದ್ದು, ಉತ್ತರದ ಕಡೆಗೆ ಮುಂದುವರಿದಿದೆ. ಏರಿಗೆ ಅಳವಡಿಸಿದಂತೆ ಎರಡು ತೂಬುಗಳಿವೆ. ಏರಿಯ ಮೇಲೆ ಜನ, ದನ ಮತ್ತು ವಾಹನಗಳು ಓಡಾಡಲು ರಸ್ತೆ ನಿರ್ಮಿಸಲಾಗಿದೆ. ಏರಿಯು ಸುಮಾರು ೭೫೦ ಮೀ. ಉದ್ದ ಮತ್ತು ೫ ಮೀ. ಮೇಲ್ಭಾಗದ ಅಗಲ ಹೊಂದಿದೆ. ಕೆರೆಯು ೪.೦೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೭.೦೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದೆ. ಕೆರೆಗೆ ಹೊಸಹಳ್ಳಿ ಕೆರೆಯಿಂದ ನೀರು ಬರುತ್ತದೆ. ಹೆಚ್ಚುವರಿ ನೀರು ಹೊರ ಹರಿಯಲು ಕೆರೆಯ ಪೂರ್ವದಿಕ್ಕಿನ ಹಂಚಿನಲ್ಲಿ ಸೇತುವೆ ಕೆಳಗಡೆ ನೀರು ಹರಿದು ಪದ್ಮಾವತಿ ಹಳ್ಳ ಸೇರುತ್ತದೆ. ಈ ಕೆರೆಯ ಸಮೀಪದಲ್ಲಿ ಹೊಯ್ಸಳ ಕಾಲದ ಪಾಳೆಗಾರರಿಂದ ಕಟ್ಟಲ್ಪಟ್ಟ ಜನಾರ್ದನಸ್ವಾಮಿ ದೇವಾಲಯವಿದೆ. ಇದಕ್ಕೆ ಸಂಬಂಧಿಸಿದಂತೆ ಪುರಾಣ ಕಥೆ ಹೀಗಿದೆ. ಪದ್ಮಾವತಿಪುರದ ವಿತಂಟಕನೆಂಬ ರಾಕ್ಷಸನು ರಾಮನಾಥಪುರ ಶ್ರೀರಾಮೇಶ್ವರನನ್ನು ಕುರಿತು ಘೋರ ತಪಸ್ಸನ್ನಾಚರಿಸುವಾಗ ಅವನ ತಲೆಯಲ್ಲಿ ಹೊಗೆ ಏಳಲಾರಂಭಿಸಿತು. ಆಗ ಪ್ರತ್ಯಕ್ಷನಾದ ರಾಮೇಶ್ವರ ವರವನ್ನು ಬೇಡುವಂತೆ ಕೇಳಿದಾಗ ವಿತಂಟಕನು ಎಲ್ಲಾ ದೇವತೆಗಳಿಗಿಂತ ಬಲಿಷ್ಠನಾಗಬೇಕೆಂದು ವರವನ್ನು ಕೋರಿದನು. ನಂತರ ವಿತಂಟಕನು ವರ ಬಲದಿಂದ ಸೈನ್ಯಸಮೇತವಾಗಿ ಮಹಾದೇವನ ಮೇಲೆ ದಂಡೆತ್ತಿ ಹೋದಾಗ ವಿಷ್ಣುವು ತ್ರಿಮೂರ್ತಿಯ ಅವತಾರದಲ್ಲಿ ರಾಕ್ಷಸರನ್ನು ಸಂಹರಿಸಿ ಈ ಸ್ಥಳಕ್ಕೆ ಬಂದು ನೆಲೆಸಿದನೆಂಬ ಪ್ರತೀತಿ ಇದೆ. ಇಂದ್ರನಿಗೆ ಬ್ರಹ್ಮಹತ್ಯಾದೋಷ ತಗುಲಿದಾಗ ಇಲ್ಲಿನ ಜನಾರ್ದನಸ್ವಾಮಿ ದರ್ಶನ ಪಡೆದನಂತೆ ಅಂದಿನಿಂದ ಈ ಊರಿಗೆ ಇಂದ್ರಪ್ರಸ್ಥಪುರವೆಂಬ ಹೆಸರು ಬಂದಿರುವಂತೆ ಉಲ್ಲೇಖಿಸುತ್ತಾರೆ. ಗ್ರಾಮದ ಬಲಗಡೆ ಶಂಕರತೀರ್ಥ ಮತ್ತು ಎಡಗಡೆ ಚಕ್ರತೀರ್ಥ ಎಂಬ ೨ ಹಳ್ಳಗಳು ಪಾಳ್ಯದ ಬಳಿ ಕೂಡಿ ಪದ್ಮಾವತಿ ಎಂಬ ಹೆಸರಿನ ಹೊಳೆಯಾಗಿ ಹರಿಯುತ್ತದೆ. ಈ ಎರಡು ಹಳ್ಳದ ಮಧ್ಯ ಗ್ರಾಮವಿದೆ. ಅದಕ್ಕೆ ಹಿಂದೆ 'ದಕ್ಷಿಣಕಾಶಿ' ಎಂತಲೂ ಕರೆಯುತ್ತಿದ್ದುದಾಗಿ ತಿಳಿಸುತ್ತಾರೆ.

ಪಾಳ್ಯ ಗ್ರಾಮದ ಕ್ರಿ.ಶ. ೧೩೬೦ರ ಶಾಸನವು[೧೫೫] ತಿಪ್ಪಣ್ಣ ಒಡೆಯರು ಜನಾರ್ದನಸ್ವಾಮಿ ದೇವಾಲಯ ಕಾರ್ಯಕ್ಕೆ ದೇವರ ಕಟ್ಟೆ, ಕರಡಿ ಕೆರೆ, ವೂಳಕಟ್ಟೆ, ಸಗಣಿಹಳ್ಳದ ಕಾಲುವೆಯ ಕೆಳಗಿನ ಗದ್ದೆ ಬೆದ್ದಲು, ತೋಟ ತುಡಿಕೆಗಳನ್ನು ದತ್ತಿ ಬಿಟ್ಟಿರುವುದನ್ನು ಉಲ್ಲೇಖಿಸಿದೆ. ಬಹುಶಃ ಶಾಸನದಲ್ಲಿರುವ ದೇವಸ ದೇವರಕಟ್ಟೆ ಎಂದರೆ ಪಾಳ್ಯಕ್ಕೆ ಸೇರಿದ ದ್ಯಾಮನ ಕಟ್ಟೆಯೇ ಇರಬಹುದು. ಈ ಕೆರೆಯು ೩.೧೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೫.೦೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದೆ. ಏರಿಯು ಪೂರ್ವದಿಂದ ಪಶ್ಚಿಮಕ್ಕೆ ಸ್ವಲ್ಪ ದೂರ ಹೋಗಿ ನಂತರ ಉತ್ತರಕ್ಕೆ ತಿರುಗಿ

ಪುನಹ ಪೂರ್ವಕ್ಕೆ ಅಂಕುಡೊಂಕಾಗಿ ಅರ್ಧಚಂದ್ರಾಕೃತಿಯಲ್ಲಿದೆ. ಏರಿಗೆ ಅಳವಡಿಸಿದಂತೆ ೨ ತೂಬುಗಳಿವೆ. ಕೆರೆಯ ಹೆಚ್ಚುವರಿ ನೀರು ಪಾಳ್ಯ ಚಿಕ್ಕ ಕೆರೆಗೆ ಹೋಗುತ್ತದೆ. ಈ ದಿನಗಳಲ್ಲಿ ಕೆರೆಯ ಉಪಯುಕ್ತತೆಯನ್ನು ಪಡೆಯುತ್ತಿದ್ದು ಮಳೆಗಾಲದಲ್ಲಿ ಭತ್ತವನ್ನು ಬೆಳೆಯುತ್ತಾರೆ.

ಕೆಲ್ಲಂಗೆರೆ ಕೆರೆ

ಅರಸೀಕೆರೆ ಹೋಬಳಿಯಲ್ಲಿ ಬರುವ ಒಂದು ಗ್ರಾಮ ಕೆಲ್ಲಂಗೆರೆ. ಕ್ರಿ.ಶ. ೧೩೬೭ರ ಶಾಸನದಲ್ಲಿ[೧೫೬] ಕೆಲ್ಲಂಗೆರೆ ಗ್ರಾಮವನ್ನು 'ಹರಿಹರ ಪುರ' ಅಗ್ರಹಾರವೆಂದು ಕರೆಯಲಾಗಿದ್ದು, ಇಲ್ಲಿನ ಕೆರೆಬಂಡಿಯ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದ ವ್ಯಕ್ತಿಯೊಬ್ಬನ ಜೀವಿತಕ್ಕೆ ಮಹಾಜನರು ಅವಕಾಶ ಕಲ್ಪಿಸಿಕೊಟ್ಟಿದ್ದನ್ನು ಈ ಶಾಸನ ತಿಳಿಸುತ್ತದೆ. ಅಲ್ಲಿನ ಕೆರೆ ನಿರ್ವಹಣೆ ಮಾಡುವವರು ದಾನ ಪಡೆದವರು ಹೆರೆಯ ಎಣ್ಣೆ, ಹಾರೆ, ಗುದ್ದಲಿ ಮುಂತಾದ ಕೆರೆಯ ಬಂಡಿಯಲ್ಲಿ ಅಡಕವಾಗಿರುವ ಸಾಮಗ್ರಿಗಳನ್ನು ಇಟ್ಟಿರಬೇಕಾಗಿತ್ತು. ಮೂಲ ಒಕ್ಕಲುಗಳಲ್ಲಿ ಪ್ರತಿಯೊಬ್ಬನೂ ಹೇರಿಗೆ ಎರಡು ತಾರಗಳನ್ನು(ಬೆಳ್ಳಿನಾಣ್ಯ) ನೀಡಬೇಕೆಂಬ ನಿಬಂಧನೆಯೂ ಇತ್ತು. ಅಂದರೆ ಅಡಿಕೆ, ವೀಳ್ಯೆದೆಲೆ, ಕಿತ್ತಲೆ ಹಣ್ಣು ಮುಂತಾದ ಸಾಮಗ್ರಿಗಳ ಪ್ರತಿ ಹೇರಿಗೆ ಎರಡು ತಾರ(ಬೆಳ್ಳಿನಾಣ್ಯ)ಗಳನ್ನು ತೆರಬೇಕಾಗಿತ್ತೆಂಬುದಾಗಿ ದಾಖಲಿಸಲಾಗಿದೆ. ಕೆರೆಯನ್ನು ಕೆಂಗಲ್ ನಾಯಕ ಎಂಬುವನು ಕಟ್ಟಿಸಿದ. ಅದ್ದರಿಂದ ಈ ಊರಿಗೆ ಕೆಲ್ಲಂಗೆರೆ ಎಂದು ಇಲ್ಲಿನ ಕೆರೆಗೆ ಕೆಲ್ಲಂಗೆರೆ ಕೆರೆ ಎಂಬ ಪ್ರತೀತಿ ಇದೆ.

ಗ್ರಾಮದ ಉತ್ತರದಿಕ್ಕಿಗೆ ಕೆಲ್ಲಂಗೆರೆ ದೊಡ್ಡಕೆರೆ ಇದೆ. ಕೆರೆಯು ಹಿಂದಿನಿಂದಲೂ ಮಳೆಯ ನೀರನ್ನು ಆಶ್ರಯಿಸಿದೆ. ೬೪.೪೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದೆ. ಕೆರೆಯ ಜಲಾನಯನ ಪ್ರದೇಶವು ೯೯.೫೪ ಹೆಕ್ಟೇರ್ ಮತ್ತು ಅಚ್ಚುಕಟ್ಟು ಪ್ರದೇಶವು ೧೧೧.೬೬ ಹೆಕ್ಟೇರ್‌ಗಳು. ಈ ಕೆರೆಯ ಏರಿಯು ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಅರ್ಧಭಾಗ ಇದ್ದು, ನಂತರ ಉತ್ತರದಿಕ್ಕಿಗೆ ಮುಂದುವರಿದಿದೆ. ಇದರ ಉದ್ದ ೧೪೧೦.೦೦ ಮೀ. ಅಗಲ ೪.೦೦ ಮೀ. ಮತ್ತು ಎತ್ತರ ೬.೫೦ ಮೀ. ಹಿಂಭಾಗದಲ್ಲಿ ಈಶ್ವರ ದೇವಸ್ಥಾನ ನಿರ್ಮಿಸಲಾಗಿದೆ. ಈ ದೇವಾಲಯದ ಪಕ್ಕದಲ್ಲಿ ಹೊಯ್ಸಳರ ಕಾಲದ ಒಂದು ಶಾಸನ ಕಲ್ಲು ಇದ್ದು, ಮತ್ತೊಂದು ಬದಿಯಲ್ಲಿ ಮಹಾಸತಿಯ ಕಲ್ಲು ಬಿದ್ದಿದೆ. ಏರಿಯ ಮಧ್ಯದಲ್ಲಿ ಪೂರ್ವಕ್ಕೆ ಮುಖ ಮಾಡಿರುವ ಏಳುಮಕ್ಕಳ ತಾಯಿ ಎಂದು ಕರೆಯುವ ಗಂಗಮ್ಮ ಗುಡಿ ಇದೆ. ಏರಿಯ ಉತ್ತರದಿಕ್ಕಿನ ಹಿಂಭಾಗದಲ್ಲಿ ಮೂರು ಶಿವಲಿಂಗಗಳು, ಎರಡು ಬಸವಣ್ಣ ವಿಗ್ರಹಗಳು ಮತ್ತು ಸಮಾಧಿಗಳಿವೆ. ಈ ಸ್ಥಳವನ್ನು ಮಾದೇಶ್ವರ ದೇವಸ್ಥಾನ ಎಂದು ಕರೆಯುತ್ತಾರೆ. ಇಂದು ದೇವಾಲಯ ಬಿದ್ದು, ನಾಶವಾಗಿ ಶಿವಲಿಂಗಗಳು ಮಾತ್ರ ಉಳಿದಿವೆ. ಲಿಂಗಗಳಿಗೆ ಶಿವರಾತ್ರಿಯ ಸಂದರ್ಭದಲ್ಲಿ ಲಿಂಗಾಭಿಷೇಕ ಮಾಡಿ ಇದರ ಮುಂಭಾಗದಲ್ಲಿ ಪ್ರತಿ ವರ್ಷ ಪರ ಮಾಡುತ್ತಾರೆ. ಇದಕ್ಕಾಗಿ ಗ್ರಾಮದ ಎಲ್ಲಾ ಮನೆಗಳಿಂದ ಆಹಾರಧಾನ್ಯಗಳನ್ನು ಸಂಗ್ರಹಿಸುತ್ತಾರೆ. ಈ ರೀತಿಯಾಗಿ ಸಂಗ್ರಹಿಸಿದ ಆಹಾರ

ಧಾನ್ಯಗಳಿಂದ ಅನ್ನ, ಮುದ್ದೆ ಮತ್ತು ಪಾಯಸಗಳನ್ನು ಮಾಡಿ ದೇವರಿಗೆ ನೈವೇದ್ಯ ಮಾಡಿ ನಂತರ ಊರಿನ ಎಲ್ಲಾ ಜನರು ಒಟ್ಟಿಗೆ ಸೇರಿ ಊಟ ಮಾಡುತ್ತಿದ್ದರು.

ಕೆರೆಗೆ ಎರಡು ತೂಬು, ಎರಡು ಕಾಲುವೆ ಮತ್ತು ಒಂದು ಕೋಡಿಯನ್ನು ಅಳವಡಿಸಲಾಗಿದೆ. ಕೆರೆಯ ಎರಡು ತೂಬುಗಳಲ್ಲಿ ಒಂದು ತೂಬು ಪಶ್ಚಿಮದಿಕ್ಕಿನ ಏರಿಯಿಂದ ೫ ಅಡಿ ದೂರದಲ್ಲಿದ್ದರೆ ಮತ್ತೊಂದು ತೂಬು ಉತ್ತರದಿಕ್ಕಿನ ಏರಿಯಿಂದ ೫ ಅಡಿ ಅಂತರದಲ್ಲಿ ನಿರ್ಮಿಸಲಾಗಿದೆ. ನಂತರ ದಿನಗಳಲ್ಲಿ ಎರಡು ತೂಬುಗಳನ್ನು ನವೀಕರಿಸಿ ಏರಿಗೆ ಅಳವಡಿಸಲಾಗಿದೆ. ತೂಬಿನ ಹೊರಭಾಗದ ಏರಿಯ ಇಳಿಜಾರಿನಲ್ಲಿ ತೊಟ್ಟಿಯನ್ನು ನಿರ್ಮಿಸಿ ಕಾಲುವೆಗೆ ಸೇರಿಸಲಾಗಿದೆ. ಈ ಕಾಲುವೆಗಳ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಭತ್ತ, ಕಬ್ಬು, ರಾಗಿ, ಜೋಳ, ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆ ನಿರ್ಮಾಣವಾದಾಗಿನಿಂದಲೂ ನೀರ್ಗಂಟಿಗಳು ತೂಬಿನ ನಿರ್ವಹಣೆಯನ್ನು ಮಾಡುತ್ತಾ ಬಂದಿದ್ದಾರೆ. ಈ ಜನರನ್ನು ಗಂಗಾಮತಸ್ಥರು ಎಂದು ಕರೆಯುತ್ತಾರೆ. ಗ್ರಾಮದ ಜನರು ಹಿಂದೆ ತಾವು ಬೆಳೆದ ಬೆಳೆಗಳಲ್ಲಿ ಸ್ವಲ್ಪ ಭಾಗವನ್ನು ದಾನದ ರೂಪದಲ್ಲಿ ನೀರ್ಗಂಟಿಗಳಿಗೆ ನೀಡುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ನೀರ್ಗಂಟಿಗಳ ವೇತನವನ್ನು ಕೆರೆಗೆ ಸಂಬಂಧಪಟ್ಟ ಇಲಾಖೆಯು ನೋಡಿಕೊಳ್ಳುತ್ತದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಸುಮಾರು ೩೦ ಮೀ. ಉದ್ದದ ಕೋಡಿಯನ್ನು ಏರಿಯ ಪಶ್ಚಿಮದಿಕ್ಕಿನ ಅಂಚಿನಲ್ಲಿ ನಿರ್ಮಿಸಲಾಗಿದೆ. ಕೆರೆಯು ಕೃಷಿ ಮತ್ತು ಧಾರ್ಮಿಕ ಕಾರ್ಯಗಳಿಗೆ ಬಳಕೆಯಾಗುತ್ತಿದೆ. ನೀರಾವರಿ ಇಲಾಖೆಯವರು ಒತ್ತುವರಿಯಾದ ಜಮೀನನ್ನು ಬಿಡಿಸಿ ಕೆರೆಗೆ ರಕ್ಷಣೆ ನೀಡಿದ್ದಾರೆ.

ನೇರ್ಲಿಗೆ ಕೆರೆ

ಜಾವಗಲ್ ಹೋಬಳಿ ಸೇರಿದ ನೇರ್ಲಿಗೆ ಕೆರೆಯು ಅರಸೀಕೆರೆಯಿಂದ ಸುಮಾರು ೩೫ ಕಿ.ಮೀ. ದೂರದಲ್ಲಿದೆ. ಕೆರೆಯು ನೇರ್ಲಿಗೆ ಗ್ರಾಮದ ಪೂರ್ವಕ್ಕೆ ಮತ್ತು ತಿಮ್ಮನಹಳ್ಳಿಯ ಪಶ್ಚಿಮದಿಕ್ಕಿಗೆ ಇದೆ. ಕೆರೆಯನ್ನು ಯಾರು ಕಟ್ಟಿಸಿದರು ಎಂಬುದಕ್ಕೆ ಯಾವುದೇ ಮಾಹಿತಿಗಳು ದೊರೆತಿಲ್ಲ. ಕೆರೆಯ ರಚನೆಯನ್ನು ನೋಡಿದಾಗ ವಿಜಯನಗರ ಪೂರ್ವದಲ್ಲಿಯೇ ಕೆರೆ ನಿರ್ಮಾಣವಾದಂತಿದೆ. ಕೆರೆಯ ನಿರ್ವಹಣೆಗೆ ಸಂಬಂಧಿಸಿದಂತೆ ನೇರ್ಲಿಗೆಯ ಕ್ರಿ.ಶ. ೧೪೨೯ರ ಶಾಸನವು[೫೭] ವಿರೂಪಣ್ಣನಾಯಕನು ನೇರ್ಲಿಗೆಯ ಹಿರಿಯಕೆರೆ ಬಂಡಿಯ ನಿರ್ವಹಣೆಗಾಗಿ ಚತುಸೀಮೆಯೊಳಗೊಂಡ ತೋಟ ತುಡಿಕೆಗಳನ್ನು ದಾನ ನೀಡಿರುವುದನ್ನು ದಾಖಲಿಸಿದೆ. ಹಾಗೆಯೇ ತಿಮ್ಮನಹಳ್ಳಿಯ ಕ್ರಿ.ಶ. ೧೪೩೮ರ ಶಾಸನದಲ್ಲಿ[೫೮] ಬಸಪ್ಪಶೆಟ್ಟಿ ನಾಯಕ ಎಂಬುವನು ನೇರ್ಲಿಗೆಯ ದೊಡ್ಡಕೆರೆಯ ಬಂಡಿ ನಿರ್ವಹಣೆಗಾಗಿ ಚತುಸ್ಸೀಮೆಯನ್ನು ಒಳಗೊಂಡ ಭೂಮಿಯನ್ನು ದಾನ ನೀಡಿರುವುದನ್ನು ಉಲ್ಲೇಖಿಸಲಾಗಿದೆ.

ಕೆರೆಯ ಏರಿಯು ಉತ್ತರ ದಕ್ಷಿಣಾಭಿಮುಖವಾಗಿದ್ದು, ಸುಮಾರು ೭೫೦ ಮೀ. ಉದ್ದ ಮತ್ತು ಮೇಲ್ಭಾಗದ ಅಗಲ ೪.೫೦ ಮೀ. ಬಾಗಿದ ಎತ್ತರ ೬.೦೭ ಮೀ. ಇದೆ. ಕೆರೆಯಲ್ಲಿ ಎರಡು

ತೂಬುಗಳಿವೆ. ಒಂದು ತೂಬು ಮರದ ದಿಮ್ಮಿಯಿಂದ ಕೂಡಿದೆ. ಈ ತೂಬನ್ನು ಏರಿಯಿಂದ ಸುಮಾರು ೧೫ ಅಡಿ ದೂರದಲ್ಲಿ ಇರಿಸಲಾಗಿದೆ. ಕೆರೆ ಏರಿಯಿಂದ ತೂಬು ಇರುವ ಜಾಗವನ್ನು ತಲುಪಲು ಸಿಮೆಂಟಿನ ಚಿಕ್ಕ ಸೇತುವೆಯನ್ನು ಸಹ ಅಳವಡಿಸಿರುತ್ತಾರೆ. ಮತ್ತೊಂದು ತೂಬು ದಕ್ಷಿಣದಿಕ್ಕಿನ ಕೋಡಿಯ ಸಮೀಪ ಇದೆ. ಈ ತೂಬಿನ ಮೇಲೆ ಗಜಲಕ್ಷ್ಮಿ ಶಿಲ್ಪ, ಕಲಶ, ಮೀನು ಮತ್ತು ಆಮೆಗಳ ಚಿತ್ರಗಳನ್ನು ಕೆತ್ತಿರುವುದು ಕಂಡುಬಂದಿದೆ. ತೂಬಿಗೆ ಅನುಗುಣವಾಗಿ ಏರಿಗೆ ಹೊಂದಿಕೊಂಡಂತೆ ಒಂದು ಕಾಲುವೆ ಇದೆ. ಇದರಿಂದ ಆಯಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಭತ್ತ, ತೆಂಗು, ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆ ಸುತ್ತಲಿನ ಅಚ್ಚುಕಟ್ಟು ಪ್ರದೇಶವು ಲಿಂಗಾಯತ, ಒಕ್ಕಲಿಗ, ಮರಾಠಿ(ಕ್ಷತ್ರಿಯ) ಜನಾಂಗಕ್ಕೆ ಸೇರಿದೆ. ಕೆರೆಯು ೧೪೩.೭೯ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದೆ. ೧೪೮.೬೧ ಹೆಕ್ಟೇರ್‌ಗಳಷ್ಟು ಜಲ ವಿಸ್ತೀರ್ಣ ಇದ್ದು, ೧೦೯.೮೯ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಗಳಿಗೆ ನೀರನ್ನು ಪೂರೈಸುತ್ತಿದೆ. ಈ ಕೆರೆ ಮೇಲ್ಭಾಗದಲ್ಲಿ ಹಲವಾರು ಕೆರೆ ಕುಂಟೆಗಳಿದ್ದು, ಅವುಗಳಲ್ಲಿ ಉಂಡಿಗನಾಳು ಕೆರೆಯಿಂದ ಹೆಚ್ಚುವರಿಯಾದ ನೀರು ಈ ಕೆರೆಯಲ್ಲಿ ಸಂಗ್ರಹವಾಗುತ್ತದೆ. ಈ ಕೆರೆಯು ತುಂಬಿ ಹೆಚ್ಚುವರಿಯಾದ ನೀರು ಮಾರಿಕಣಿವೆಗೆ ಸೇರುತ್ತದೆ. ಏರಿಯ ಎರಡು ಕೊನೆಯಂಚಿನಲ್ಲಿ ಎರಡು ಕೋಡಿಗಳಿವೆ. ದಕ್ಷಿಣದಿಕ್ಕಿನ ಕೋಡಿ ಸಮೀಪ ಬಸವಣ್ಣ ದೇವಸ್ಥಾನವಿದೆ. ಹಾಗೆಯೇ ಏರಿ ಮೇಲಿನ ಒಂದು ಚಿಕ್ಕ ಗುಡಿಯೊಳಗೆ ಲಿಂಗದ ರೀತಿಯಲ್ಲಿ ಕಲ್ಲು ಇದೆ. ಅದನ್ನು ಸ್ಥಳೀಯ ಗಂಗಮ್ಮನ ಗುಡಿ ಎನ್ನುತ್ತಾರೆ. ಕೆರೆಯ ನೀರು ಇಂದು ಬಟ್ಟೆ ತೊಳೆಯಲು, ಜಾನುವಾರುಗಳಿಗೆ ಮತ್ತು ಮೀನುಗಾರಿಕೆಗೆ ಹೆಚ್ಚು ಬಳಕೆಯಾಗುತ್ತಿದೆ. ಕೆರೆಯಲ್ಲಿರುವ ಜಲಚರಪ್ರಾಣಿಗಳಿಗೆ ಆಸರೆಯಾಗಿದೆ.

ನಿಡುವಣಿ ಕೆರೆ

ಹೊಳೆನರಸೀಪುರ ತಾಲೂಕಿನ ಹಳ್ಳಿ ಮೈಸೂರು ಹೋಬಳಿಯಲ್ಲಿ ನಿಡುವಣಿ ಗ್ರಾಮವಿದೆ. ತಾಲೂಕಿನಿಂದ ೧೮ ಕಿ.ಮೀ. ಮತ್ತು ಹೋಬಳಿಯಿಂದ ೮ ಕಿ.ಮೀ. ದೂರವಿದೆ. ಗ್ರಾಮದಲ್ಲಿ ಎರಡು ಕೆರೆಗಳಿವೆ. ಅವುಗಳ ಗಾತ್ರಕ್ಕೆ ಅನುಗುಣವಾಗಿ ಚಿಕ್ಕಕೆರೆ ಮತ್ತು ದೊಡ್ಡಕೆರೆ ಎಂದು ಹೆಸರಿಸುತ್ತಾರೆ. ಚಿಕ್ಕಕೆರೆಗೆ ಬೊಮ್ಮರಸರ ಕಟ್ಟೆಯೆಂದು ಕರೆಯುತ್ತಿದ್ದರಂತೆ. ಪ್ರಸ್ತುತ ದಿನಗಳಲ್ಲಿ ಕೆರೆಯು ಇಲ್ಲದಂತೆ ತೋಟಗಳಾಗಿರುವುದನ್ನು ಕಾಣಬಹುದು. ದೊಡ್ಡಕೆರೆಯು ಗ್ರಾಮದ ಪೂರ್ವದಿಕ್ಕಿಗಿದ್ದು ಅದರ ಉಪಯೋಗವನ್ನು ಜನರು ಪಡೆಯುತ್ತಿದ್ದಾರೆ. ಈ ಕೆರೆಯ ನಿರ್ಮಾಣದ ಬಗೆಗೆ ಯಾವುದೇ ದಾಖಲೆಗಳಿಲ್ಲ. ಆದರೆ ನಿರ್ವಹಣೆಗೆ ಸಂಬಂಧಿಸಿದಂತೆ ಕ್ರಿ.ಶ. ೧೬ನೆಯ ಶತಮಾನದ ನಿಡುವಣಿ ಶಾಸನದಲ್ಲಿ[೧೫೯] ಗ್ರಾಮದ ಕೆರೆಯ ನಿರ್ವಹಣೆಗಾಗಿ ಬಂಡಿಯೊಂದನ್ನು ಬಿಟ್ಟು ಆ ಬಂಡಿಯ ನಿರ್ವಹಣೆಗೆ ಕಾಚಯ್ಯ ಎಂಬುವವನಿಗೆ ಕೆರೆಯ ಕೆಳಗಿನ ಗದ್ದೆಯನ್ನು ನೀಡಿರುವುದು ಉಲ್ಲೇಖವಾಗಿದೆ.

ಏರಿಯು ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಅರ್ಧಚಂದ್ರಾಕೃತಿಯಲ್ಲಿದೆ. ಏರಿಯು ೧೫೦ ಮೀ. ಉದ್ದ ಮತ್ತು ೩ ಮೀ. ಅಗಲವಿದ್ದು ಏರಿಯ ಮೇಲೆ ಓಡಾಡಲು ಜಾಗವಿಲ್ಲದಂತೆ ಗಿಡಗಳು ಬೆಳೆದಿವೆ. ಕೆರೆಯ ಪೂರ್ವದಿಕ್ಕಿನ ಕಡೆ ಒಂದು ತೂಬನ್ನು ಏರಿಗೆ ಇರಿಸಲಾಗಿದೆ. ಅದರ ಮೂಲಕ ಆಯಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆಯ ಅಚ್ಚುಕಟ್ಟು ಪ್ರದೇಶವು ಹೆಚ್ಚಾಗಿ ಲಿಂಗಾಯತ ಜನಾಂಗಕ್ಕೆ ಸೇರಿದೆ. ಕೆರೆಗೆ ಮಳೆ ಮತ್ತು ಹೇಮಾವತಿ ನಾಲೆಯ ನೀರು ಬರುತ್ತದೆ. ಹೆಚ್ಚುವರಿ ನೀರು ದಕ್ಷಿಣದಿಕ್ಕಿನ ಕೋಡಿಯ ಮೂಲಕ ಬಿದರಕ್ಕ ಕೆರೆಯನ್ನು ಸೇರುತ್ತದೆ. ಕೆರೆಯು ೮.೪೦ ಹೆಕ್ಟೇರ್ ಜಲವಿಸ್ತೀರ್ಣ, ೩.೩೮ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಮತ್ತು ೩೧.೬೬ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ. ಕೆರೆಯ ಅಟ್ಟುಕಟ್ಟು ಪ್ರದೇಶದಲ್ಲಿ ಜೀರ್ಣೋದ್ಧಾರ ಮಾಡಿದ ಈಶ್ವರ ದೇವಸ್ಥಾನವಿದೆ. ಸುತ್ತಲೂ ವಿರೂಪಗೊಂಡ ಶಾಸನವಿರುವ ವೀರಗಲ್ಲುಗಳಿವೆ. ಈ ದೇವಾಲಯದ ಬಳಿ ಗ್ರಾಮದ ಜನ ವರ್ಷಕ್ಕೊಮ್ಮೆ ಪರ ಮಾಡುತ್ತಾರೆ. ದೇವರಿಗೆ ದಿನನಿತ್ಯ ಪೂಜೆ ನಡೆಯುತ್ತದೆ. ಅದಕ್ಕಾಗಿ ೫ ಕುಂಟೆ ಜಮೀನನ್ನು ಬಿಟ್ಟಿದ್ದಾರೆ. ಇಂದಿರಾಗಾಂಧಿ ಕಾಲಾವಧಿಯಲ್ಲಿ ಉಳುವವನೇ ಭೂಮಿಯ ಒಡೆಯ ಎಂಬ ಕಾನೂನು ಬಂದಾಗ ದೇವಾಲಯ ಪೂಜೆ ಮಾಡುವ ಅರ್ಚಕರಿಗೆ ಜಮೀನು ಸೇರಿದೆ.

ಕಿತ್ತಾನೆ ಕೆರೆ

ಹಾಸನದ ಕಟ್ಟಾಯ ಹೋಬಳಿಯಲ್ಲಿ ಬರುವ ಒಂದು ಗ್ರಾಮ ಕಿತ್ತಾನೆ. ಹಾಸನದಿಂದ ೧೨ ಕಿ.ಮೀ. ಮತ್ತು ಕಟ್ಟಾಯ ಹೋಬಳಿಯಿಂದ ೫ ಕಿ.ಮೀ ದೂರದಲ್ಲಿದೆ. ಗ್ರಾಮಕ್ಕೆ ಸಂಬಂಧಿಸಿದಂತೆ ಐತಿಹ್ಯಗಳಿವೆ. ಕಿತ್ತಾನೆ ಗ್ರಾಮದ ಪಕ್ಕದಲ್ಲಿ ಯಾರಾನೆ ಎಂಬ ಗ್ರಾಮವಿದೆ. ಈ ಎರಡು ಗ್ರಾಮಗಳಲ್ಲಿ ಒಂದೊಂದು ಆನೆಯನ್ನು ಬಿಟ್ಟಿದ್ದರು. ಯಾರಾನೆ ಗ್ರಾಮದಲ್ಲಿ ಹಿರಿಆನೆ, ಕಿತ್ತಾನೆ ಗ್ರಾಮದಲ್ಲಿ ಕಿರಿಆನೆ ಇದ್ದವಂತೆ. ಹೀಗಾಗಿ ಗ್ರಾಮಗಳಿಗೆ ಯಾರಾನೆ ಮತ್ತು ಕಿತ್ತಾನೆ ಎಂಬ ಹೆಸರು ಬಂದಿರುವುದಾಗಿ ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಮತ್ತೊಂದು ಮೂಲದ ಪ್ರಕಾರ ಕ್ರಿ.ಶ. ೧೫೧೫ರಲ್ಲಿ ಕೃಷ್ಣದೇವರಾಯ ತನ್ನ ಆಳ್ವಿಕೆಯ ಕಾಲದಲ್ಲಿ ಈ ಗ್ರಾಮಕ್ಕೆ ತನ್ನ ಹೆಂಡತಿ ತಿರುಮಲಾಂಬೆ ಹೆಸರಿನಲ್ಲಿ ತಿರುಮಲಾಪುರ ಎಂಬುದಾಗಿ ಇಡಬೇಕೆಂದಿದ್ದರು. ಈ ಹೆಸರು ಚಾಲ್ತಿಗೆ ಬಂದಿಲ್ಲವಾದುದರಿಂದ ಕಿತ್ತಾನೆ ಎಂಬ ಹೆಸರೇ ಇದೆ ಎಂದು ಹೇಳುತ್ತಾರೆ. ಹಾಗೆಯೇ ಕೃಷ್ಣದೇವರಾಯ ತನ್ನ ದಿಗ್ವಿಜಯದ ನೆನಪಿಗಾಗಿ ಕಿತ್ತಾನೆ ಕೊಪ್ಪಲು, ಎರೆಹಳ್ಳಿ, ಮಾದಪುರ, ಸಕಲೇನಹಳ್ಳಿ, ಜೀಕನಹಳ್ಳಿ, ಲಕ್ಕನಾಯಕನಹಳ್ಳಿಗಳನ್ನು ಒಳಗೊಂಡ ೭ ಹಳ್ಳಿಗಳನ್ನು ಸರ್ವಮಾನ್ಯವಾಗಿ ಬ್ರಾಹ್ಮಣರಿಗೆ ನೀಡಿರುವುದರ ಉಲ್ಲೇಖ ತಾಮ್ರಶಾಸನದಲ್ಲಿ ಇರುವುದಾಗಿ ತಿಳಿಸುತ್ತಾರೆ.[೬೦]

ಗ್ರಾಮಕ್ಕೆ ಸಂಬಂಧಿಸಿದಂತೆ ಒಂದು ಕಥೆ ಇದೆ. ವಿಜಯನಗರ ಅರಸರ ಕಾಲದಲ್ಲಿ ಈ ಊರಿನಲ್ಲಿ ಲಿಂಗಾಯತರು ಮಾತ್ರ ವಾಸವಾಗಿದ್ದರು. ಒಂದು ಸಾರಿ ನಾಲ್ವರು ಬ್ರಾಹ್ಮಣರು ಬಂದು

ಮಠದ ಸ್ವಾಮಿಯಲ್ಲಿ ಅಂದಿನ ಸೌಕರ್ಯಕ್ಕೆ ಸಹಾಯವನ್ನು ಕೇಳಿದರು. ಮಠದ ಸ್ವಾಮಿಯು ಪಕ್ಕದ ತೋಟದಲ್ಲಿ ಅಡುಗೆ ಮಾಡಿಕೊಳ್ಳುವಂತೆ ಹೇಳಿದನು. ಅದೇ ತೋಟದಲ್ಲಿ ಬಾವಿ ಇತ್ತು. ಊಟಕ್ಕೆ ಮುಂಚೆ ಬಾವಿಯಲ್ಲಿ ಸ್ನಾನ ಮಾಡಿದರು. ತೋಟದಲ್ಲಿದ್ದ ಬಾಳೆಗಿಡಗಳಿಂದ ಬಾಳೆ ಎಲೆಗಳನ್ನು ಊಟಕ್ಕೆ ಕೊಯ್ದು ತಂದರು. ಇದನ್ನು ಕಂಡ ತೋಟದ ಆಳುಗಳು ಬಾವಿಯ ನೀರನ್ನು ಮಲಿನ ಮಾಡಿ ಬಾಳೆ ಎಲೆಯನ್ನು ಕೊಯ್ದಿದ್ದಾರೆ ಎಂದು ಮಠಾಧಿಪತಿಯಲ್ಲಿ ದೂರು ಹೇಳಿದರು. ಇದನ್ನು ಕೇಳಿದ ಮಠದ ಸ್ವಾಮಿ ಕೂಡಲೇ ತೋಟಕ್ಕೆ ಬಂದು ಅವರು ಪೂಜೆ ಮಾಡುತ್ತಿರುವುದನ್ನು ಲೆಕ್ಕಿಸದೆ ಮಾಡಿದ ಅಡುಗೆಯನ್ನು, ದೇವರನ್ನು ಎಡಗಾಲಿನಿಂದ ಒದ್ದರು. ಇದನ್ನು ಕಂಡ ಬ್ರಾಹ್ಮಣರು ಈ ಗ್ರಾಮವನ್ನು ವಶಪಡಿಸಿಕೊಂಡು ಮಠವಿರುವ ಜಾಗದಲ್ಲಿ ಹೊಲಗೇರಿ ಮಾಡುವವರೆಗೆ ಜುಟ್ಟು ಕಟ್ಟುವುದಿಲ್ಲ ಊಟ ಮಾಡುವುದಿಲ್ಲವೆಂದು ಶಪಥ ಮಾಡಿದರು. ರಾಜನಲ್ಲಿ ಹೋಗಿ ಅಡ್ಡ ಬಿದ್ದು ವಿಚಾರವೆಲ್ಲವನ್ನು ತಿಳಿಸಿದರು. ಅಪಮಾನವಾಯಿತೆಂದು ಅದಕ್ಕೆ ಪ್ರತೀಕಾರವಾಗಿ ಆ ಊರನ್ನು ಜಾಗೀರಿ ಹಾಕಿಸಿಕೊಡಿ ಎಂದು ಹೇಳಿದರು. ರಾಜನು ಅದಕ್ಕೊಪ್ಪಿ ಅಳತೆಯವರನ್ನು ಕಳುಹಿಸಿ ಅವರೊಪ್ಪಿದ ಜಾಗವನ್ನು ಅವರಿಗೆ ಆಳತೆ ಮಾಡಿಸಿಕೊಟ್ಟನು. ಆಗ ಅಲ್ಲಿದ್ದ ಸ್ವಾಮಿಯನ್ನು ಓಡಿಸಿ ಮಠ ಕಿತ್ತು ಹೊಲಗೇರಿ ಮಾಡಿದರು. ಈ ವಿಷಯವೂ ಕೂಡ ತಾಮ್ರ ಶಾಸನದಲ್ಲಿ ಉಲ್ಲೇಖವಾಗಿರುವುದಾಗಿ ಹೇಳುತ್ತಾರೆ.[೧೬] ಇಲ್ಲಿ ಜಾತಿ ಜಾತಿಗಳ ನಡುವೆ ಸಂಘರ್ಷ ನಡೆದಿರುವುದನ್ನು ಗಮನಿಸಬಹುದು.

ಕಿತ್ತಾನೆ ಗ್ರಾಮದಲ್ಲಿ ಎರಡು ಕೆರೆಗಳಿವೆ. ಇವು ಯಾವಾಗ ನಿರ್ಮಾಣವಾದವು ಎಂಬುದಕ್ಕೆ ಯಾವುದೇ ಸ್ಪಷ್ಟ ದಾಖಲೆಗಳಿಲ್ಲ. ಇಲ್ಲಿನ ತಾಮ್ರಶಾಸನದಲ್ಲಿ ಕೃಷ್ಣದೇವರಾಯನ ಉಲ್ಲೇಖವಿರುವುದರಿಂದ ಬಹುಶಃ ವಿಜಯನಗರ ಕಾಲಾವಧಿಯಲ್ಲಿಯೇ ಕೆರೆಗಳು ನಿರ್ಮಾಣವಾಗಿರಬಹುದು. ಗ್ರಾಮದ ಪೂರ್ವಕ್ಕೆ ಚಿಕ್ಕಕೆರೆ ಇದೆ. ಕೆರೆಯ ಏರಿಯು ದಕ್ಷಿಣದಿಂದ ಉತ್ತರಾಭಿಮುಖವಾಗಿ ೧೦೦ ಮೀ. ಹೋಗಿ ನಂತರ ಈಶಾನ್ಯದಿಕ್ಕಿಗೆ ಮುಂದುವರಿದಿದೆ. ಏರಿಯು ಸುಮಾರು ೫೦೦ ಮೀ. ಉದ್ದ, ೫ ಮೀ. ಅಗಲ ಮತ್ತು ೮ ಅಡಿಗಳಷ್ಟು ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಏರಿಯ ಮೇಲೆ ವಾಹನಗಳು ಕಿತ್ತಾನೆ ಕೊಪ್ಪಲಿನಿಂದ ಕಿತ್ತಾನೆ ಗ್ರಾಮಕ್ಕೆ ಓಡಾಡಲು ರಸ್ತೆ ಮಾಡಲಾಗಿದೆ. ಕೆರೆಯ ಪಶ್ಚಿಮದಿಕ್ಕಿನಲ್ಲಿ ಈಶ್ವರ ದೇವಸ್ಥಾನವಿದ್ದು, ಪಕ್ಕದಲ್ಲಿ ಮೂರು ವೀರಗಲ್ಲುಗಳಿವೆ. ಅವುಗಳು ಇಂದು ಕಾಣದಂತೆ ಭೂಮಿಯಲ್ಲಿ ಹೂತುಹೋಗಿವೆ. ಕೆರೆಯು ಒಂದು ತೂಬು ಮತ್ತು ಒಂದು ಕೋಡಿಯನ್ನು ಹೊಂದಿದೆ. ಹೆಚ್ಚುವರಿ ನೀರು ಹೊರ ಹೋಗಲು ಕೆರೆಯ ದಕ್ಷಿಣದಿಕ್ಕಿನಲ್ಲಿ ಸೇತುವೆ ನಿರ್ಮಿಸಿ ಕೆಳಭಾಗದಲ್ಲಿ ನೀರು ಹೋಗುವಂತೆ ಮಾಡಲಾಗಿದೆ.

ಕಿತ್ತಾನೆ ಗ್ರಾಮದ ದಕ್ಷಿಣಕ್ಕೆ ಮತ್ತು ಮಾದಲಾಪುರ ಗ್ರಾಮದ ವಾಯವ್ಯಕ್ಕೆ ದೊಡ್ಡಕೆರೆ ಇದೆ. ಕೆರೆಯು ಎರಡು ಗ್ರಾಮಕ್ಕೆ ಸೇರಿದ್ದರಿಂದ ಮಾದಲಾಪುರ ಕೆರೆ ಅಥವಾ ಕಿತ್ತಾನೆಯ ದೊಡ್ಡಕೆರೆ ಎಂತಲೂ ಕರೆಯುತ್ತಾರೆ. ಕೆರೆಯ ಏರಿಯು ಉತ್ತರದಿಂದ ದಕ್ಷಿಣಾಭಿಮುಖವಾಗಿ ಅಂಕುಡೊಂಕಾಗಿ

ಮುಂದುವರಿದಿದೆ. ಏರಿಯು ೮೭೦ ಮೀ. ಉದ್ದ, ೪ ಮೀ. ಅಗಲ ಮತ್ತು ೧೨ ಅಡಿಗಳಷ್ಟು ಒಳಪಾರ್ಶ್ವದ ಎತ್ತರವನ್ನು ಹೊಂದಿದೆ. ಕೆರೆಯು ಎರಡು ತೂಬು ಮತ್ತು ಎರಡು ಕೋಡಿಯನ್ನು ಹೊಂದಿದೆ. ಎರಡು ತೂಬುಗಳನ್ನು ಏರಿಗೆ ಅಂಟಿಕೊಂಡಂತೆ ನಿರ್ಮಿಸಲಾಗಿದೆ. ಈ ತೂಬುಗಳಿಗೆ ಅನುಸಾರವಾಗಿ ಏರಿಯ ಹೊರ ಬದಿಯಲ್ಲಿ ಕಾಲುವೆಗಳನ್ನು ಜೋಡಿಸಲಾಗಿದೆ. ಅವುಗಳ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆಯ ಅಚ್ಚುಕಟ್ಟು ಪ್ರದೇಶವು ಹೆಚ್ಚಾಗಿ ಬ್ರಾಹ್ಮಣರು ಮತ್ತು ಒಕ್ಕಲಿಗ ಜನಾಂಗದವರಿಗೆ ಸೇರಿದೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಏರಿಯ ಎರಡು ಬದಿಯ ಕೊನೆಯಲ್ಲಿ ಕೋಡಿಗಳನ್ನು ಇಡಲಾಗಿದೆ. ಉತ್ತರದಿಕ್ಕಿನ ಕೋಡಿಯ ಸಮೀಪ ಉಡುಸಲಮ್ಮ ದೇವಸ್ಥಾನವಿದೆ. ಕೆರೆಯು ೨೪.೦೦ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೧೨.೨೫ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದ್ದು, ೪೧.೨೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯು ಹಿಂದಿನಿಂದಲೂ ಮಳೆನೀರನ್ನು ಹೊಂದಿದೆ. ಕೆರೆಗೆ ಲಕ್ಕನಾಯಕನಹಳ್ಳಿ, ಯಾರಾನೆಯ ಕೆರೆಗಳು ತುಂಬಿದಾಗ ನೀರು ಬರುತ್ತವೆ. ಈ ಕೆರೆಯ ಹೆಚ್ಚುವರಿ ನೀರು ಮೊಸಳೆ ಕೆರೆಗೆ ಹೋಗುತ್ತದೆ. ಕಿತ್ತಾನೆ ಗ್ರಾಮದ ಚಿಕ್ಕಕೆರೆ ಮತ್ತು ದೊಡ್ಡಕೆರೆಗಳೆರಡು ಕೂಡ ಹೂಳು ತುಂಬಿವೆ. ಕೆರೆಗಳ ಕಾಮಗಾರಿ ಮಾಡಿ ಹೂಳೆತ್ತಿಸಿದರೆ ಕೆರೆಗಳಲ್ಲಿ ಹೆಚ್ಚು ನೀರು ಸಂಗ್ರಹವಾಗುತ್ತದೆ.

ಜಾವಗಲ್ ಕೆರೆ

ಜಾವಗಲ್ ಕೆರೆಯು ಅರಸೀಕೆರೆ ಪರಿಸರದ ಕೆರೆಗಳಲ್ಲಿ ಒಂದಾಗಿದೆ. ತಾಲೂಕಿನಿಂದ ೩೦ ಕಿ.ಮೀ. ದೂರದಲ್ಲಿರುವ ಜಾವಗಲ್ ಒಂದು ಹೋಬಳಿ ಕೇಂದ್ರ. ಜಾವಗಲ್ ಎಂಬ ಹೆಸರು ಬರಲು ನೀಲಗಿರಿ ಕಾವಲಿನಲ್ಲಿ ನರಸಿಂಹಸ್ವಾಮಿಯನ್ನು ಬೆಳಗಿನ ಜಾವದಲ್ಲಿ ಪ್ರತಿಷ್ಠಾಪನೆ ಮಾಡಿದ್ದರಿಂದ ಈ ಊರಿಗೆ ಜಾವಗಲ್ ಎಂದು ಕರೆಯುತ್ತಿದ್ದರು. ನಂತರ ಜಾವಗಲ್ ಆಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ಜಾವಗಲ್ ಗ್ರಾಮದ ಪೂರ್ವಕ್ಕೆ ಕೆರೆ ಮತ್ತು ಹೊಯ್ಸಳ ಕಾಲದ ಗಂಗಾಧರೇಶ್ವರ ದೇವಸ್ಥಾನ ಹಾಗೂ ನಾಲ್ಕು ಕಂಬಗಳಿಂದ ಕೂಡಿದ ಮಂಟಪ ಇದೆ. ಕ್ರಿ.ಶ. ೧೫೧೫ರ ಶಾಸನದಲ್ಲಿ[೧೭] ಗ್ರಾಮದ ಮುಖ್ಯಸ್ಥ ಬೈರಭೂಪನು ಗ್ರಾಮದ ಸಮಸ್ತ ಪ್ರಾಣಿಗಳಿಗೂ ಉಪಕಾರವಾಗುವ ಹಾಗೆ ಜಾವಗಲ್ಲಿನ ದಕ್ಷಿಣಭಾಗಕ್ಕೆ ಬಯಿರಸಮುದ್ರವೆಂಬ ಮಹಾತಟಾಕವನ್ನು ಕಟ್ಟಿಸಿ, ಆ ತಟಾಕದ ಕೆಳಗೆ ಹಲವು ಕೆರೆಗಳನ್ನು ನಿರ್ಮಿಸಿ, ಪೂರ್ವದ ಕೆರೆಗೆ ಕಾಲುವೆ ತೋಡಿಸಿದ್ದನ್ನು ದಾಖಲಿಸಿದೆ. ಇದರಿಂದ ಇಲ್ಲಿನ ಕೆರೆಗೆ ಭೈರಸಾಗರ ಅಥವಾ ಜಾವಗಲ್‌ಕೆರೆ ಎಂದು ಕರೆಯುತ್ತಾರೆ.

ಕೆರೆಯ ಏರಿಯ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಅರ್ಧಭಾಗ ಇದ್ದು, ನಂತರ ಉತ್ತರದ ಕಡೆಗೆ ತಿರುಗಿದೆ. ಏರಿಯ ಉದ್ದ ೧೨೯೦ ಮೀ. ಇದ್ದು, ಅಗಲ ೫ ಮೀ. ಮತ್ತು ಒಳಪಾರ್ಶ್ವವನ್ನು ದಪ್ಪ ದಪ್ಪ ಕಲ್ಲುಗಳಿಂದ ಜೋಡಿಸಿ ಕಲ್ಲುಕಟ್ಟಡದಂತೆ ನಿರ್ಮಿಸಿದ್ದಾರೆ. ಹೊರಭಾಗವು

ಮಣ್ಣಿನಿಂದ ನಿರ್ಮಾಣವಾಗಿದೆ. ಏರಿಯ ಮಧ್ಯಭಾಗದಲ್ಲಿ ಕೆಂಚಪ್ಪ ಎಂಬ ಹೆಸರಿನ ಚಿಕ್ಕಗುಡಿ ಇದೆ. ಈ ಗುಡಿಯ ಒಳಭಾಗದಲ್ಲಿ ಎರಡು ಕಲ್ಲುಗಳಿವೆ. ಇದೇ ರೀತಿಯ ಗುಡಿಗಳು ಅರಸೀಕೆರೆಯ ಚಿಕ್ಕಯರಗನಾಳು, ಹುಲ್ಲೇಕೆರೆ, ಮೇಣೆಕೆರೆ ಇತರ ಕೆರೆಗಳ ಏರಿಗಳ ಮೇಲೆ ಕಂಡುಬಂದಿವೆ.

ಗ್ರಾಮಗಳಲ್ಲಿ ಈ ಗುಡಿಗಳಿಗೆ ಬೊಮ್ಮಪ್ಪ, ಭೂತಪ್ಪ, ಬ್ರಹ್ಮಪ್ಪ ಮತ್ತು ಬ್ರಹ್ಮೇಶ್ವರ ಎಂಬ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಕೆರೆಯ ಅಂಗಳದಲ್ಲಿ ಒಂದು ಸಮುದಾಯ ಭವನ ಇದೆ. ಅದರ ಪಕ್ಕದಲ್ಲಿ ಕೈಮುಗಿದು ನಿಂತಿರುವ ಒಬ್ಬ ವ್ಯಕ್ತಿಯ ಶಿಲ್ಪವು ಕಲ್ಲಿನಲ್ಲಿ ಕೊರೆದಂತೆ ಕೆತ್ತಲಾಗಿದೆ. ಈ ಶಿಲ್ಪದ ಮೇಲ್ಭಾಗದಲ್ಲಿ ಲಿಂಗವನ್ನು ಇರಿಸಲಾಗಿದೆ. ಶಿಲ್ಪವನ್ನು ಅಲ್ಲಿಯ ಸ್ಥಳೀಯ ಜನರು ಕೆರೆ ಕಟ್ಟಿಸಿದ ರಾಜನ ಶಿಲ್ಪ ಎಂದು ಹೇಳುತ್ತಾರೆ. ಈ ಶಿಲ್ಪವನ್ನು ನೋಡಿದಾಗ ದೇವಾಲಯ ಅಥವಾ ಕೆರೆ ಕಟ್ಟಿದ ವ್ಯಕ್ತಿಯು ಲಿಂಗೈಕ್ಯವಾದಂತೆ ಕಂಡುಬರುತ್ತದೆ.

ಕೆರೆಯು ಹಿಂದಿನಿಂದಲೂ ಮಳೆಯ ನೀರನ್ನು ಆಶ್ರಯಿಸಿದೆ. ೬೭.೨೮ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದೆ. ಜಲವಿಸ್ತೀರ್ಣ ೧೦೩.೯ ಹೆಕ್ಟೇರ್ ಇದ್ದು, ೫೮.೯೮ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಗಳಿಗೆ ನೀರನ್ನು ಪೂರೈಸುತ್ತಿದೆ. ಕೆರೆಯಲ್ಲಿ ಒಂದು ತೂಬಿದ್ದು, ಅದನ್ನು ಉತ್ತರದಿಕ್ಕಿನ ಏರಿಯಿಂದ ೮ ಅಡಿ ದೂರದಲ್ಲಿ ಇರಿಸಲಾಗಿದೆ. ಏರಿಗೆ ಹೊಂದಿಕೊಂಡಂತೆ ಒಂದು ಕಾಲುವೆ ಇದೆ. ಅದರ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸುತ್ತಿದ್ದರು. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಕೆರೆಯ ಎರಡು ಕಡೆ ಕೋಡಿಗಳಿವೆ. ಉತ್ತರದಿಕ್ಕಿನ ಕೋಡಿಯು ಸುಮಾರು ೨೫ ಮೀ. ಉದ್ದ ಇದೆ. ಪಶ್ಚಿಮದಿಕ್ಕಿನ ಕೋಡಿಗೆ ಸೇತುವೆ ಮಾಡಿ ಕೆಳಭಾಗದಲ್ಲಿ ನೀರು ಸಿಂಗನಾಯಕನ ಕೆರೆಗೆ ಹೋಗಿ ಅಲ್ಲಿಂದ ಮಾರಿ ಕಣಿವೆ ಜಲಾಶಯವನ್ನು ಸೇರುತ್ತದೆ. ಕೆರೆಯ ಸುತ್ತಮುತ್ತಲಿನ ಅಚ್ಚುಕಟ್ಟು ಪ್ರದೇಶವು ಹೆಚ್ಚಾಗಿ ಬ್ರಾಹ್ಮಣ ಗಂಗಾಮತಸ್ಥರು ಮತ್ತು ಇತರ ಜನಾಂಗದವರಿಗೆ ಸೇರಿದ್ದು, ವಿವಿಧ ಬೆಳೆಗಳನ್ನು ಬೆಳೆಯಲು ಅನುಕೂಲಕರವಾಗಿದೆ. ಹಾಗೆಯೇ ಮೀನುಸಾಕಾಣಿಕೆಗೆ ಉಪಯುಕ್ತವಾಗಿದೆ.

ಚಿಕ್ಕಗಂಡಸಿ ಕೆರೆ

ಅರಸೀಕೆರೆ ತಾಲೂಕಿನ ಗಂಡಸಿ ಹೋಬಳಿಯಲ್ಲಿ ಬರುವ ಒಂದು ಗ್ರಾಮ ಚಿಕ್ಕಗಂಡಸಿ. ಕ್ರಿ.ಶ. ೧೫೩೫ನೆಯ ಅಚ್ಚುತರಾಯನ ಕಾಲದ ಶಾಸನದಲ್ಲಿ[೧೩] ತಿಮ್ಮರಸನ ಮಗ ರಾಮಪ್ಪನು ಚಿಕ್ಕಗಂಡಸಿ ಗ್ರಾಮದಲ್ಲಿ ಕೆಲವು ಭೂಮಿ ಕಾಣಿಕೆಗಳನ್ನು ಪಂಡಿತರಿಗೆ ನೀಡಿದನೆಂದು ತಿಳಿಸುತ್ತದೆ. ಅಲ್ಲದೆ ಚಿಕ್ಕಗಂಡಸಿಗೆ ಲಖಸಮುದ್ರವೆಂಬ ಪ್ರತಿನಾಮಧೇಯವನ್ನು ನೀಡಲಾಯಿತು. ಇಲ್ಲಿ ವಿಶಾಲವಾದ ಕೆರೆಯಿಂದ ಗ್ರಾಮಕ್ಕೆ ಲಖಸಮುದ್ರ ಎಂಬ ಹೆಸರು ಉಲ್ಲೇಖವಾಗಿರಬಹುದು. ನಂತರದ ಕಾಲದಲ್ಲಿ ವಿಸ್ತರಿಸಿದಂತೆ ಕಂಡುಬರುತ್ತದೆ. ಕೆರೆಯ ದಕ್ಷಿಣಭಾಗದ ಕೋಡಿಯ ಸಮೀಪ ಒಂದು ಚಿಕ್ಕಗುಡಿ ಇದೆ. ಅದನ್ನು ಸ್ಥಳೀಯರು ಹಿರಿಯರ ಗುಡಿಯೆಂದು ಕರೆದಿದ್ದಾರೆ. ದೇವರಕೊಂಡಾರೆಡ್ಡಿಯವರು

ಹಿರಿಯ ಗುಡಿಯ ರಚನಾವಿನ್ಯಾಸವನ್ನು ನೋಡಿ ಗಂಗರ ಕಾಲದ ವೀರರ ಗುಡಿಗಳಿರಬೇಕೆಂದು ತಿಳಿಸುತ್ತಾರೆ. ಇದಕ್ಕೆ ಆಧಾರವೆಂಬಂತೆ ಚಿಕ್ಕಗಂಡಸಿಯಿಂದ ೨ ಕಿ.ಮೀ. ದೂರದಲ್ಲಿರುವ, ಗಂಡಸಿಯ ದೊಡ್ಡಕೆರೆ ಏರಿಯ ಮೇಲೆ ಗಂಗರ ಕಾಲದ ಕಂಬಗಳ ರಚನಾವಿನ್ಯಾಸವುಳ್ಳ ತ್ರುಟಿತ ದೇವಾಲಯವಿದೆ. ಇದರಿಂದ ಚಿಕ್ಕಗಂಡಸಿಯೂ ಕೂಡ ಗಂಗರ ಪ್ರಭಾವಕ್ಕೆ ಒಳಗಾಗಿರಬಹುದುದೆಂದು ಹೇಳಬಹುದು. ವೀರರ ಗುಡಿಯ ಹಿಂಬದಿಯಲ್ಲಿ ಯುದ್ಧದಲ್ಲಿ ಹೋರಾಡಿ ಮಡಿದವರ ವೀರರ ಕಲ್ಲುಗಳಿವೆ.

ಕೆರೆಯು ೫೭.೪೫ ಹೆಕ್ಟೇರ್ ಜಲವಿಸ್ತೀರ್ಣ ಮತ್ತು ೨೭.೨೮ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯ ಹೊಂದಿದ್ದು, ೪೮.೫೫ ಹೆಕ್ಟೇರ್ ಆಯಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುವ ಸಾಮರ್ಥ್ಯ ಹೊಂದಿದೆ. ಏರಿಯು ದಕ್ಷಿಣದಿಂದ ಪಶ್ಚಿಮಾಭಿಮುಖವಾಗಿ ಅಂಕುಡೊಂಕಾಗಿ ಮುಂದುವರಿದಿದೆ. ಸುಮಾರು ೧೬೫೦ ಮೀ. ಉದ್ದ ಮತ್ತು ೩ ಮೀ. ಮೇಲ್ಭಾಗದ ಅಗಲ ಹೊಂದಿದೆ. ಏರಿಗೆ ಅಳವಡಿಸಿದಂತೆ ೨ ತೂಬುಗಳಿವೆ. ಹಳೆಯ ತೂಬುಗಳು ಏರಿಯಿಂದ ೮ ಅಡಿ ದೂರದಲ್ಲಿದ್ದು, ಪ್ರಸ್ತುತ ದಿನಗಳಲ್ಲಿ ಕಾರ್ಯನಿರ್ವಹಣೆಯಿಲ್ಲದೆ ಹಾಳಾಗಿವೆ. ಕೆರೆಯ ಹೆಚ್ಚುವರಿ ನೀರು ಹೊರಹೋಗಲು ದಕ್ಷಿಣದಿಕ್ಕಿಗೆ ಒಂದು ಕೋಡಿ ಇದೆ. ಕೆರೆಯ ಅಂಗಳದಲ್ಲಿ ಮಹಾಲಿಂಗೇಶ್ವರ ದೇವಾಲಯವಿದೆ. ಈ ದೇವಾಲಯದ ಮುಂಭಾಗದಲ್ಲಿ ಸುಮಾರು ೧.೫ ಅಡಿ ಅಗಲ, ೧ ಅಡಿ ಉದ್ದದ ನೆಲಕ್ಕೆ ಹಾಸಿದ ಕಲ್ಲಿನ ಮೇಲೆ ಭೈರವನಪಾದ ಶಿಲ್ಪಫಲಕಗಳಿವೆ. ಗ್ರಾಮದ ಸ್ಥಳೀಯರೊಬ್ಬರು ಈ ಶಿಲ್ಪಫಲಕವು ಮೊದಲು ಗ್ರಾಮದ ಭೈರವ ದೇವಾಲಯದ ಮುಂಭಾಗದಲ್ಲಿತ್ತು. ನಂತರ ದೇವಾಲಯವನ್ನು ಜೀರ್ಣೋದ್ಧಾರ ಮಾಡುವ ಸಂದರ್ಭದಲ್ಲಿ ಮಹಾಲಿಂಗೇಶ್ವರ ದೇವಸ್ಥಾನದ ಹತ್ತಿರ ತಂದುಹಾಕಿರುವಂತೆ ತಿಳಿಸಿದ್ದಾರೆ. ಈ ಶಿಲ್ಪಫಲಕದ ಪಾದಗಳ ಸುತ್ತ ನಾಗಸರ್ಪ ಸುತ್ತಿದೆ. ಇದರ ಎರಡು ಬದಿಯಲ್ಲಿ ಬೋರಲಾಗಿ ಮಲಗಿದ ಭಂಗಿಯಲ್ಲಿರುವ ಎರಡು ಕತ್ತರಿಸಿದ ವ್ಯಕ್ತಿಗಳ ಮುಂಡ ಮತ್ತು ರುಂಡಗಳು ಇದ್ದು, ಎಡಭಾಗದ ವ್ಯಕ್ತಿ ಮುಂಡದ ಕೆಳಗೆ ಪ್ರಾಣಿ ಮುಂಡ ಮತ್ತು ರುಂಡ ಇದೆ. ಆದರೆ ಈ ಶಿಲ್ಪಫಲಕದಲ್ಲಿ ಪ್ರತ್ಯೇಕಿಸಿದ ರುಂಡವು ಸ್ಪಷ್ಟವಾಗಿ ಗೋಚರಿಸಿಲ್ಲ.

ಕೆರೆಯು ನೀರಾವರಿ ಇಲಾಖೆಯಿಂದ ರಕ್ಷಣೆಯನ್ನು ಪಡೆದಿದೆ. ಆದರೆ ಗ್ರಾಮದ ಜನರು ಕೆರೆಯ ವಿಸ್ತೀರ್ಣದಲ್ಲಿ ತಿಪ್ಪೆಗೊಬ್ಬರವನ್ನು ಹಾಕಿ ಕೆರೆಯ ನೈರ್ಮಲ್ಯವನ್ನು ಹಾಳುಮಾಡುತ್ತಿದ್ದಾರೆ. ಊರಿನ ಗ್ರಾಮಸ್ಥರು ಇತ್ತಕಡೆ ಗಮನ ಹರಿಸಿದರೆ ಗ್ರಾಮದ ಮತ್ತು ಕೆರೆಯ ಸೌಂದರ್ಯವನ್ನು ಹೆಚ್ಚಿಸಬಹುದು. ಗ್ರಾಮದಲ್ಲಿ ಯಾವುದೇ ರೋಗಗಳು ಹರಡದಂತೆ ತಡೆಯಬಹುದು ಎಂಬುದು ನನ್ನ ಅನಿಸಿಕೆಯಾಗಿದೆ.

ಹಿರಿಸಾವೆ ಕೆರೆ

ಹಿರಿಸಾವೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಒಂದು ಗ್ರಾಮ ಮತ್ತು ಹೋಬಳಿ ಕೇಂದ್ರ. ಚನ್ನರಾಯಪಟ್ಟಣದಿಂದ ಈಶಾನ್ಯಕ್ಕೆ ೧೯ ಕಿ.ಮೀ. ದೂರದಲ್ಲಿದೆ. ಚನ್ನರಾಯಪಟ್ಟಣ

ಮತ್ತು ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿ ಬರುತ್ತದೆ. ಈ ಊರು ಹೊಳೆನರಸೀಪುರ, ಚನ್ನರಾಯಪಟ್ಟಣ ಮತ್ತು ನುಗ್ಗೇಹಳ್ಳಿ ಪಾಳೆಯಗಾರರ ಆಡಳಿತಕ್ಕೆ ಒಳಪಟ್ಟಿದ್ದಂತೆ ತಿಳಿಯುತ್ತದೆ. ಹದಿನಾರನೇ ಶತಮಾನದ ಅನಂತರ ಮೈಸೂರು ಆಳ್ವಿಕೆಗೆ ಸೇರಿತು. ಹಿಂದೆ ಇಬ್ಬರು ಶ್ರೀಮಂತ ಅಕ್ಕತಂಗಿಯರಿಬ್ಬರು ಅದರಲ್ಲಿ ಹಿರಿಯವಳು ತನ್ನ ಸೇವಾರ್ಥ ಹಿರಿಸೇವೆಯನ್ನು, ಕಿರಿಯವಳು ಈ ಗ್ರಾಮದ ಸಮೀಪದಲ್ಲಿ ಕಿರಿಸೇವೆಯನ್ನು ಕಟ್ಟಿಸಿದರೆಂಬ ಐತಿಹ್ಯಗಳಿವೆ.

ಗ್ರಾಮದಲ್ಲಿ ಒಂದು ದೊಡ್ಡಕೆರೆಯಿದ್ದು, ಇದನ್ನು ಆ ಗ್ರಾಮನಾಮವಾದ ಹಿರಿಸಾವೆಯಿಂದ, ಹಿರಿಸಾವೆ ಊರಮುಂದಿನ ಕೆರೆಯೆಂದು ಕರೆಯಲಾಗುತ್ತದೆ. ಈ ಕೆರೆಯನ್ನು ಯಾರು ನಿರ್ಮಿಸಿದರು ಎಂಬುದರ ಬಗ್ಗೆ ಖಚಿತವಾದ ಮಾಹಿತಿಯು ದೊರೆಯುವುದಿಲ್ಲ. ಗ್ರಾಮದ ಜನರ ಪ್ರಚಲಿತವಾದ ನಂಬಿಕೆಗಳಂತೆ ಈ ಕೆರೆಯು ಪಾಳೆಯಗಾರರಿಗಿಂತ ಮೊದಲೇ ನಿರ್ಮಾಣವಾಗಿರುವುದಾಗಿ ತಿಳಿಸುತ್ತಾರೆ. ಕೆರೆಯು ಜೀರ್ಣೋದ್ಧಾರವಾಗಿರುವುದರಿಂದ ಕಾಲಘಟ್ಟವನ್ನು ಸ್ಪಷ್ಟವಾಗಿ ಗುರುತಿಸುವುದು ಕಷ್ಟಸಾಧ್ಯ.

ಈ ಕೆರೆಯ ಏರಿಯು ೧೩೦೦ ಮೀ. ಉದ್ದವಿದ್ದು, ಅದರ ಮೇಲ್ಭಾಗದಲ್ಲಿ ವಾಹನಗಳು ಚಲಿಸುವಷ್ಟು ಅಗಲವನ್ನು ಹೊಂದಿದೆ. ಏರಿಗೆ ಇರಿಸಿದಂತೆ ಎರಡು ತೂಬುಗಳಿದ್ದು, ಕಾರ್ಯ ನಿರ್ವಹಿಸುತ್ತಿವೆ. ಕೆರೆಯು ೮೩.೮೦ ಹೆಕ್ಟೇರ್ ಜಲವಿಸ್ತೀರ್ಣ ಹಾಗೂ ೫೮.೦೨ ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಸಂಗ್ರಹಿಸುವಸಾಮರ್ಥ್ಯವನ್ನು ಹೊಂದಿದ್ದು, ೧೦೭.೦೫ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರುಣಿಸುವ ಸಾಮರ್ಥ್ಯ ಹೊಂದಿದೆ. ಈ ಕೆರೆಗೆ ಜನಿವಾರ ಕೆರೆಯಿಂದ ನೀರು ಬರುತ್ತದೆ. ಹೆಚ್ಚುವರಿ ನೀರು ಬಾಳಗಂಚಿ ಕೆರೆಗೆ ಹೋಗುತ್ತದೆ. ಕೆರೆಯು ಕೋಡಿಬಿದ್ದಾಗ ತೂಬಿಗೆ ಬಲಿಯನ್ನು ಕೊಟ್ಟು ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸುತ್ತಾರೆ. ಕೆರೆ ಹಿಂಭಾಗದ ಅಟ್ಟುಕಟ್ಟು ಪ್ರದೇಶದ ಜಮೀನು ಹೆಚ್ಚಾಗಿ ಒಕ್ಕಲಿಗ, ಲಿಂಗಾಯತ ಮತ್ತು ಬ್ರಾಹ್ಮಣರಿಗೆ ಸೇರಿದೆ. ಇವರು ಕೆರೆಯಲ್ಲಿ ನೀರು ಇದ್ದರೆ ವರ್ಷಕ್ಕೆ ಎರಡು ಬಾರಿ ಭತ್ತ ಬೆಳೆಯುತ್ತಾರೆ. ಏರಿಯ ಉತ್ತರದ ಕಡೆ ಊರಿನ ಗ್ರಾಮದೇವತೆ ಚೌಡೇಶ್ವರಿ ದೇವಾಲಯವಿದೆ. ವರ್ಷಕ್ಕೊಮ್ಮೆ ಮಾರ್ಚ್–ಏಪ್ರಿಲ್ ತಿಂಗಳಿನಲ್ಲಿ ಜಾತ್ರೆ ನಡೆಯುತ್ತದೆ. ಕೆರೆ ಹಿಂಭಾಗದ ಅಚ್ಚುಕಟ್ಟು ಪ್ರದೇಶದಲ್ಲಿ ಈಶ್ವರ ದೇವಸ್ಥಾನವಿದೆ. ಏರಿ ಮಧ್ಯೆ ಒಳ ಅಂಚಿನ ಬದಿಯಲ್ಲಿ ಬ್ರಹ್ಮದೇವರ ಗುಡಿ ಇದೆ.

ಮೊಸಳೆ ಕೆರೆ

ಮೊಸಳೆ ಗ್ರಾಮವು ಹಾಸನದಿಂದ ಹೊಳೆನರಸೀಪುರಕ್ಕೆ ಹೋಗುವ ಮಾರ್ಗದಲ್ಲಿ ಬರುತ್ತದೆ. ಹಾಸನದಿಂದ ೧೦ ಕಿ.ಮೀ. ಮೊಸಳೆ ಹೊಸಹಳ್ಳಿಯಿಂದ ೧ ಕಿ.ಮೀ. ಹಾಗೂ ಕಟ್ಟಾಯ ಹೋಬಳಿಯಿಂದ ೫ ಮೀ. ದೂರದಲ್ಲಿದೆ. ಸ್ಥಳಪುರಾಣದಂತೆ ಇದು ಪ್ರಾಚೀನ ಕಾಲದಲ್ಲಿ ಜಮದಗ್ನಿ ಋಷಿಯ ಆಶ್ರಯವಾಗಿತ್ತು. ಗ್ರಾಮಕ್ಕೆ ಮೊದಲು ಮುಸುಲಿಪಟ್ಟಣ ಎಂಬ ಹೆಸರಿದ್ದು, ಅನಂತರ ಮೊಸಳೆಯೆಂಬ ಹೆಸರು ಬಂದಿದೆ. ಗ್ರಾಮದಲ್ಲಿ ಬಸಳೆಸೊಪ್ಪು ಹೆಚ್ಚಾಗಿ ಸಿಗುತ್ತಿದ್ದುದರಿಂದ

ಬಸಳೆ ಹೋಗಿ ಮೊಸಳೆ ಎಂಬ ಹೆಸರು ಬಂದಿದೆ ಎಂದು ಗ್ರಾಮದ ಸ್ಥಳೀಯರು ಹೇಳುತ್ತಾರೆ. ಪಕ್ಕದ ಕೆರೆಯಿಂದ ಮೊಸಳೆಯೊಂದು ಊರಿಗೆ ನುಗ್ಗಿತ್ತು, ಅದಕ್ಕಾಗಿ ಮೊಸಳೆ ಎಂಬ ಸ್ಥಳನಾಮ ಬಂದಿರುವಂತೆ ಐತಿಹ್ಯ ಮಾಡಿದ್ದಾರೆ.[೧೬೪] ಗ್ರಾಮದ ಉತ್ತರದಿಕ್ಕಿಗೆ ಕೆರೆ ಇದೆ. ಈ ಕೆರೆಗೆ ಸಂಬಂಧಿಸಿದಂತೆ ಕ್ರಿ.ಶ. ೧೫೭೭ರ ಶಾಸನದಲ್ಲಿ[೧೬೫] ಎರ ಕೃಷ್ಣಪ್ಪನಾಯಕ ಮಗ ವೆಂಕಟಾದ್ರಿನಾಯಕರಿಗೆ ಮೊಸಳೆಯ ಚನ್ನಕೇಶವ ದೇವರು ನಾಗೇಶ್ವರ ದೇವರು, ಹನುಮಂತದೇವರು ಹಾಗು ಕಲ್ಲಿನಾಥದೇವರ ಗದ್ದೆ ಬೆದ್ದಲು ಮನೆ, ತೋಟ ಹಾಗೂ ಕೆರೆಯನ್ನು ಸರ್ವಮಾನ್ಯವಾಗಿ ನೀಡಿರುವುದನ್ನು ತಿಳಿಸಿದೆ.

ಕೆರೆಯ ಏರಿಯು ೧೩.೨೦ ಮೀ. ಉದ್ದ, ೫ ಮೀ. ಅಗಲ, ಒಳಪಾರ್ಶ್ವದ ಎತ್ತರ ೧೪ ಅಡಿ, ಮತ್ತು ಹೊರಪಾರ್ಶ್ವದ ಎತ್ತರ ೨೩ ಅಡಿ ಇದೆ. ಏರಿಯ ಮೇಲೆ ವಾಹನಗಳು ಮೊಸಳೆಯಿಂದ ಬಸ್ತಿಹಳ್ಳಿಗೆ ಹೋಗಲು ರಸ್ತೆ ನಿರ್ಮಿಸಲಾಗಿದೆ. ಕೆರೆಯು ಎರಡು ತೂಬು ಮತ್ತು ಎರಡು ಕೋಡಿಯನ್ನು ಹೊಂದಿದೆ. ಏರಿಗೆ ಹೊಂದಿಕೊಂಡಂತೆ ಬಾವಿಯ ಆಕಾರದ ಎರಡು ತೂಬುಗಳನ್ನು ಇರಿಸಲಾಗಿದೆ. ಈ ತೂಬುಗಳು ಸುಮಾರು ೧೪ ಅಡಿಗಳಷ್ಟು ಎತ್ತರವಾಗಿವೆ. ತೂಬುಗಳಿಗೆ ಹೊಂದಿಕೊಂಡಂತೆ ಏರಿಯ ಹೊರಬದಿಯಲ್ಲಿ ಕಾಲುವೆಗಳನ್ನು ಅಳವಡಿಸಲಾಗಿದೆ. ಅವುಗಳ ಮೂಲಕ ಆಯಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಭತ್ತ, ರಾಗಿ, ಜೋಳ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆಯ ಮುಂಭಾಗದ ಜಮೀನು ಹೆಚ್ಚಾಗಿ ಬ್ರಾಹ್ಮಣರು, ಲಿಂಗಾಯತರು, ಹಾಗೂ ಒಕ್ಕಲಿಗ ಜನಾಂಗದವರಿಗೆ ಸೇರಿದೆ. ಇಂದು ತೂಬಿನ ನಿರ್ವಹಣೆಯನ್ನು ಗ್ರಾಮದ ಜನರೇ ನೋಡಿಕೊಳ್ಳುತ್ತಿದ್ದಾರೆ. ಕೆರೆ ತುಂಬಿದಾಗ ಗಂಗಮ್ಮನ ಪೂಜೆ ಮಾಡಿ ತೂಬನ್ನು ಎತ್ತಿಕೊಳ್ಳುತ್ತಾರೆ. ಕೆರೆಯು ೪೩.೨೦ ಹೆಕ್ಟೇರ್ ಜಲವಿಸ್ತೀರ್ಣವನ್ನು ಹಾಗೂ ೨೭.೫೦ ಎಂ.ಸಿ.ಎಫ್.ಟಿ.ಯಷ್ಟು ನೀರಿನ ಸಂಗ್ರಹಣಸಾಮರ್ಥ್ಯವನ್ನು ಹೊಂದಿದ್ದು, ೬೨.೦೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಪೂರೈಸುತ್ತಿದೆ. ಕೆರೆಯು ಹಿಂದಿನಿಂದಲೂ ಮಳೆನೀರನ್ನು ಹೊಂದಿದೆ. ಈ ಕೆರೆಗೆ ಕಿತ್ತಾನೆ ಕೆರೆಯಿಂದ ನೀರು ಬಂದು ಸಂಗ್ರಹವಾಗುತ್ತದೆ. ಹೆಚ್ಚುವರಿ ನೀರು ಹೊರಹೋಗಲು ಕೆರೆಯ ಎರಡು ಬದಿಯಲ್ಲಿ ಕೋಡಿಯನ್ನು ನಿರ್ಮಿಸಲಾಗಿದೆ. ಅವುಗಳ ಮೂಲಕ ಹೆಬ್ಬಾಳ ಮಾರ್ಗವಾಗಿ ಹೇಮಾವತಿ ನಾಲೆಯನ್ನು ಸೇರುತ್ತದೆ.

ಕೆರೆಯ ದಕ್ಷಿಣದಿಕ್ಕಿನ ಕೋಡಿಯ ಸಮೀಪ ಆಂಜನೇಯ ಶಿಲ್ಪವಿದ್ದು, ಅದರ ಅರ್ಧಭಾಗ ಏರಿಯ ಮಣ್ಣಿನಿಂದ ಹೂತುಹೋಗಿದೆ. ಈ ಶಿಲ್ಪವು ಕೋಡಿಯಲ್ಲಿ ಇರುವ ಕಾರಣ ಕೋಡಿ ಆಂಜನೇಯ ಎಂದು ಗುರುತಿಸುತ್ತಾರೆ. ಹಾಗೆಯೇ ಏರಿಯ ಮೇಲೆ ಒಂದು ಕಲ್ಲುಗುಂಡು ಇದೆ. ಏರಿಯ ಮೇಲ್ಭಾಗದಲ್ಲಿ ವಾಹನಗಳು ಓಡಾಡುವುದರಿಂದ ರಕ್ಷಣೆಯ ದೃಷ್ಟಿಯಿಂದ ಕಲ್ಲುಗುಂಡಿನ ಸುತ್ತಲೂ ಚಪ್ಪಟೆಕಲ್ಲುಗಳನ್ನು ಜೋಡಿಸಿದ್ದಾರೆ. ಈ ಕಲ್ಲುಗುಂಡನ್ನು ಸ್ಥಳೀಯರು ಬ್ರಹ್ಮದೇವರು ಎಂದು ಕರೆಯುತ್ತಾರೆ. ಕೆರೆಯ ಉತ್ತರದಿಕ್ಕಿನಲ್ಲಿ ಮೊಸಳಮ್ಮನ ದೇವಸ್ಥಾನವಿದೆ. ಅದು ಪೂರ್ವದಿಕ್ಕಿನ ಕೋಡಿಗೆ ಸಮೀಪವಾಗಿದ್ದರಿಂದ ಇತ್ತೀಚೆಗೆ ಕೋಡಿಯಮ್ಮ ಎಂತಲೂ ಕರೆಯುತ್ತಾರೆ. ಈ ದೇವರು

ಇಂದು ಮೊಸಳೆ ಗ್ರಾಮದ ಗ್ರಾಮದೇವತೆಯಾಗಿದೆ. ಇತ್ತೀಚೆಗೆ ದೇವಾಲಯ ನಿರ್ಮಿಸಿದ್ದಾರೆ. ಇದರ ಮುಂಭಾಗದಲ್ಲಿ ಭೂತಪ್ಪ ಎಂಬ ಹೆಸರಿನ ನಾಲ್ಕು ಚಿಕ್ಕ ಚಿಕ್ಕ ಗುಡಿಗಳಿವೆ. ಮೊಸಳೆಯಮ್ಮ ದೇವರಿಗೆ ಸಿಹಿ ನೈವೇದ್ಯ ಮಾಡಿ ತೆರೆ ಬಿಟ್ಟು ಹೊರಭಾಗದಲ್ಲಿರುವ ಭೂತಪ್ಪ ದೇವರುಗಳಿಗೆ ಕುರಿ, ಕೋಳಿಗಳನ್ನು ಬಲಿ ಕೊಡುತ್ತಾರೆ. ಮಂಗಳವಾರ ಮತ್ತು ಶುಕ್ರವಾರ ವಿಶೇಷ ಪೂಜೆ ನಡೆಯುತ್ತದೆ. ಮೊಸಳಮ್ಮ ದೇವರಿಗೆ ಸಂಬಂಧಿಸಿದಂತೆ ಮೂರು ಎಕರೆ ಜಮೀನು ಇದೆ. ಅದನ್ನು ದೇವರು ಪೂಜೆ ಮಾಡುವ ಗಂಗಾಮತ ಜನಾಂಗದವರೇ ಉಳುಮೆ ಮಾಡುತ್ತಿದ್ದಾರೆ.

ಕೆರೆಯ ಕಾಮಗಾರಿಯು ೨೦೦೮-೨೦೦೯ರಲ್ಲಿ ನಡೆದಿದೆ. ಕೆರೆಯು ಒತ್ತುವರಿಯಾಗಿದ್ದು, ಇತ್ತೀಚಿನ ದಿನಗಳಲ್ಲಿ ಒತ್ತುವರಿಯಾದ ಜಮೀನುಗಳನ್ನು ಬಿಡಿಸಿದ್ದಾರೆ. ಕೆರೆಯ ಉಪಯೋಗವನ್ನು ಇಂದು ಪಡೆಯುತ್ತಿತ್ತು. ಕೃಷಿಗೆ, ಮೀನುಗಾರಿಕೆ, ದನಕರುಗಳಿಗೆ ಮತ್ತು ಧಾರ್ಮಿಕ ಕಾರ್ಯಗಳಿಗೆ ಉಪಯುಕ್ತವಾಗುತ್ತಿದೆ. ಕೆರಯಲ್ಲಿ ನೀರು ಕಡಿಮೆಯಾದಾಗ ಕೆರ ಅಂಗಳದ ಮಣ್ಣಿನಿಂದ ಇಟ್ಟಿಗೆ ಮಾಡಲು ಹಾಗೂ ಜಾನುವಾರುಗಳು ಮೇಯಲು ಅನುಕೂಲಕರವಾಗಿದೆ.

ಕೊಣನೂರು ಕೆರೆ

ಕಾವೇರಿ ನದಿಯ ಎಡದಂಡೆಯ ಮೇಲೆ ನೆಲೆಗೊಂಡಿರುವ ಕೊಣನೂರು ವ್ಯಾಪಾರ ಕೇಂದ್ರ ಅರಕಲಗೂಡಿನಿಂದ ಸುಮಾರು ೧೮ ಕಿ.ಮೀ. ದೂರದಲ್ಲಿದೆ. ಇಲ್ಲಿ ಕೊಳಲು ಗೋಪಾಲಕೃಷ್ಣನ ದೇವಾಲಯವಿದ್ದು, ಕೊಳಲು ಮುಂದೆ ಕೊಣಲು ಆಗಿ ಆಡು ಮಾತಿನಲ್ಲಿ ಕೊಣನೂರು ಆಗಿರಬೇಕು. ಸ್ಥಳೀಯ ಐತಿಹ್ಯ ಹೀಗಿದೆ. ಕೋಣ ಮತ್ತು ಬಸವ ಎರಡು ಗುದ್ದಾಡಿ ಕೋಣ ಈ ಕಡೆ ಬಸವ ಆ ಕಡೆ ಬಿದ್ದವು. ಕೋಣ ಬಿದ್ದ ಸ್ಥಳವು ಕೊಣನೂರಾಯಿತು ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ. ಇನ್ನೊಂದು ರೀತಿಯಲ್ಲಿ ಮೈಸೂರು ವಿಜಯನಗರ ಆಳ್ವಿಕೆಯ ಕಾಲದಲ್ಲಿ ಇಲ್ಲಿ ಕೋಟೆ ನಿರ್ಮಾಣ ಕಾರ್ಯ ನಡೆದಿದ್ದು, ಕೋಟೆಯ ಒಳಗೆ ನೀರಿನ ಸಂಗ್ರಹಣಕ್ಕಾಗಿ ಕೊಳವೊಂದನ್ನು ತೊಡಿದರೆಂದೂ ಕೊಳದ ಊರು ಮುಂದೆ ಕೊಣನೂರು ಆಗಿದೆ. ಕ್ರಿ.ಶ. ೧೬೩೨ರ ಶಾಸನದಲ್ಲಿ[೧೬] ನಲ್ಲೂರಿಗೆ ಬಿದ್ರೂರು ಕ್ಯಾತೇಗೌಡರು, ಕೊಣನೂರಿಗೆ ಮರದೆಲೆ ಸುಬ್ರಾಯರು ಪಾಳೇಗಾರರಾಗಿದ್ದರೆಂತಲೂ ಈ ಎರಡೂ ಪ್ರದೇಶಗಳನ್ನು ಒಟ್ಟುಗೂಡಿಸಿ ಕೊಣನೂರು ಎಂದು ನಾಮಕರಣ ಮಾಡಿದರೆಂಬ ಉಲ್ಲೇಖವು ತಿಳಿದುಬರುತ್ತದೆ.

ಗ್ರಾಮದ ಪಶ್ಚಿಮದ ಕಡೆಗೆ ಕೊಣನೂರು ಕೆರೆ ಇದೆ. ಕೆರೆಯ ನಿರ್ಮಾಣವು ಯಾವಾಗ ಆಯಿತು ಎಂಬುದಕ್ಕೆ ದಾಖಲೆಗಳಿಲ್ಲ. ಕೆರೆಯ ವಿನ್ಯಾಸ ತೂಬು ಮತ್ತು ಕೋಡಿಯ ಪಕ್ಕದಲ್ಲಿರುವ ಕೆರೆ ಕೋಡಿಯಮ್ಮನ ದೇವಸ್ಥಾನದ ರಚನೆಯನ್ನು ಗಮನಿಸಿದಾಗ ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿರುವಂತೆ ಕಂಡುಬರುತ್ತದೆ. ಕೆರೆಯ ಏರಿಯು ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಅಂಕುಡೊಂಕಾಗಿ ಮುಂದುವರಿದಿದೆ. ಏರಿಯು ೭೫೦ ಮೀ. ಉದ್ದ ಮತ್ತು ೧೦ ಮೀ.

ಮೇಲ್ಭಾಗದ ಅಗಲ ಹೊಂದಿದ್ದು, ಏರಿಯ ಮೇಲೆ ಜನ, ದನ ಮತ್ತು ವಾಹನಗಳು ಚಲಿಸಲು ರಸ್ತೆ ಮಾಡಲಾಗಿದೆ. ಏರಿಯಿಂದ ಉತ್ತರದಿಕ್ಕಿನ ಕಡೆಗೆ ಕೆರೆಯ ಅಂಗಳವಿದೆ. ಕೆರೆಯ ನೀರನ್ನು ಅಚ್ಚುಕಟ್ಟು ಪ್ರದೇಶಕ್ಕೆ ಬಳಸಲು ಅನುಕೂಲವಾಗುವಂತೆ ಏರಿಯ ಒಳಪಾರ್ಶ್ವದ ಇಳಿಜಾರಿನ ಕೆಳಗಡೆ ಬಾವಿಯಾಕಾರದ ಒಂದು ತೂಬನ್ನು ಇರಿಸಲಾಗಿದೆ. ಅದರ ಮೂಲಕ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಿ ಅಡಕೆ, ತೆಂಗು ಮತ್ತು ಭತ್ತವನ್ನು ಬೆಳೆಯುತ್ತಾರೆ. ಕೆರೆಯ ಸುತ್ತಮುತ್ತಲಿನ ಜಮೀನು ಹೆಚ್ಚಾಗಿ ಬ್ರಾಹ್ಮಣ, ಕುರುಬ ಜನಾಂಗದವರಿಗೆ ಸೇರಿದೆ. ತೂಬಿನ ನಿರ್ವಹಣೆಯನ್ನು ನೀರ್ಗಂಟಿಗಳು ನೋಡಿಕೊಳ್ಳುತ್ತಾರೆ. ಈ ಕೆಲಸಕ್ಕೆ ಸಂಭಾವನೆಯಾಗಿ ಸರ್ಕಾರದಿಂದ ವೇತನ ಪಡೆಯುತ್ತಾರೆ. ಕೆರೆಗೆ ಮಳೆ ಮತ್ತು ಹೇಮಾವತಿ ನಾಲೆಯ ನೀರು ಬಂದು ಸಂಗ್ರಹಣೆಯಾಗುತ್ತದೆ. ಹೆಚ್ಚುವರಿ ನೀರು ಹೊರಹೋಗಲು ಕೆರೆಯ ಪೂರ್ವದಿಕ್ಕಿನಲ್ಲಿ ಅರ್ಧಚಂದ್ರಾಕೃತಿಯಲ್ಲಿ ಕೋಡಿಯನ್ನು ನಿರ್ಮಿಸಲಾಗಿದೆ. ಇಲ್ಲಿ ಕೆರೆ ಕೋಡಿಯಮ್ಮ ಮತ್ತು ಕೊತ್ತಲ ಗಣಪತಿ ದೇವಸ್ಥಾನಗಳಿವೆ. ಹಿಂದೆ ಕೆರೆ ಕೋಡಿಯಮ್ಮನಿಗೆ ಬಸಶಂಕರಿಯಮ್ಮ ಎಂಬ ಹೆಸರಿದ್ದು ಅನಂತರ ಕೋಡಿಯ ಸಮೀಪ ದೇವಾಲಯ ಇದ್ದುದರಿಂದ ಕೆರೆ ಕೋಡಿಯಮ್ಮ ಎಂಬ ಹೆಸರು ಪ್ರಚಲಿತವಾಗಿದೆ. ಈ ದೇವರಿಗೆ ೫–೬ ವರ್ಷಕ್ಕೊಮ್ಮೆ ಯುಗಾದಿ ನಂತರದಲ್ಲಿ ಬಂಡಿಹಬ್ಬ ಮಾಡಿ ಕುರಿ, ಆಡುಗಳನ್ನು ಬಲಿ ಕೊಡುತ್ತಾರೆ. ದೇವಸ್ಥಾನದ ಪೂಜೆಗೆ ೪ ಎಕರೆ ಜಮೀನನ್ನು ಬಿಡಲಾಗಿದೆ. ಕೊತ್ತಲ ಗಣಪತಿಯ ಜಾತ್ರೆಯು ಕಾರ್ತಿಕ ಮಾಸದ ಕೊನೆಯಲ್ಲಿ ನಡೆಯುತ್ತದೆ. ಪ್ರತಿ ವರ್ಷ ನವರಾತ್ರಿಯಲ್ಲಿ ಕೆರೆಯಲ್ಲಿ ತೆಪ್ಪೋತ್ಸವ ಮಾಡುತ್ತಾರೆ.

ಈ ಮೇಲಿನ ಕೆರೆಗಳು ಹಾಸನ ಪರಿಸರದ ಪ್ರಮುಖ ಕೆರೆಗಳಾಗಿದ್ದು, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಧಾರ್ಮಿಕವಾಗಿ ಬಳಕೆಯಾಗುತ್ತಿದ್ದವು. ಇವುಗಳಿಗೆ ಸಂಬಂಧಿಸಿದ ಐತಿಹ್ಯಗಳನ್ನು ಮುಂದಿನ ಅಧ್ಯಾಯದಲ್ಲಿ ನೀಡಲಾಗಿದೆ.

ಅಡಿಟಿಪ್ಪಣಿಗಳು

೧. ಎ.ಕ. ಸಂ.೨(ಹಳೆಯ), ೧೯೭೩: ಶ್ರವಣಬೆಳಗೊಳ ೪೪೩, ೫೬೪, ೧೬೨, ೫೫೮; ಎ.ಕ. ಸಂ.೮, ೧೯೮೪: ಹೊಳೆನರಸೀಪುರ ೪೨, ಅರಕಲಗೂಡು ೧೫೮, ಆಲೂರು ೧೦, ಹಾಸನ ೧೩೨; ಎ.ಕ. ಸಂ.೯, ೧೯೯೦: ಸಕಲೇಶಪುರ ೪೫, ಬೇಲೂರು ೧೬೮, ೧೦೬, ೪೧೦, ೧೩೬, ೨೨೩, ೨೮೧, ೪೯೦, ೧೪೮, ೪೬೧, ೪೩೮, ೧೩೪; ಎ.ಕ. ಸಂ.೧೦, ೧೯೯೭: ಅರಸೀಕೆರೆ ೫೯, ೫೭, ೨೨೫, ೨೬೮, ೨೭೩, ೨೦೬, ೭೨, ಚನ್ನರಾಯಪಟ್ಟಣ ೧೮, ೯೪, ೧೧೧, ೫೩

೨. ಬುಕಾನನ್ ಫ್ರಾನ್ಸಿಸ್, ೧೮೦೭: ಜರ್ನಿ ಫ್ರಮ್ ಮದ್ರಾಸ್ ಥ್ರೋದ ಕಂಟ್ರೀಸ್ ಮೈಸೂರು, ಕೆನರಾ ಆ್ಯಂಡ್ ಮಲಬಾರ್, ಪು.೮೫

೩. ಎ.ಕ. ಸಂ.೯, ಬೇಲೂರು ೧೬೮, ಪು.೧೨೫

೪. ಎ.ಕ. ಸಂ.೮, ಹಾಸನ ೬೭, ಪು.೨೮೦

೫. ಎ.ಕ. ಸಂ.೧೦, ಅರಸೀಕೆರೆ ೨೮೦, ಪು.೩೪೪; ಲಲಿತಾಂಬ ಎನ್.ಆರ್., ೨೦೧೧: ಮಧ್ಯಕಾಲೀನ ಕರ್ನಾಟಕದ ಸಾಮಾಜಿಕ ಸಂಚಲನ, ಪು.೬೫

೬. ಅದೇ, ಅರಸೀಕೆರೆ ೧೨೮, ಪು.೧೬೭

೭. ಅದೇ, ಅರಸೀಕೆರೆ ೧೨೯, ಪು.೧೭೦

೮. ಅದೇ, ಚನ್ನರಾಯಪಟ್ಟಣ ೭೦, ಪು.೪೯೫

೯. ಅದೇ, ಚನ್ನರಾಯಪಟ್ಟಣ ೪೦, ಪು.೪೫೨

೧೦. ಅದೇ, ಚನ್ನರಾಯಪಟ್ಟಣ ೧೧೩, ಪು.೫೫೨

೧೧. ಎ.ಕ. ಸಂ.೮, ಅರಕಲಗೂಡು ೧೬, ೨೦, ಪು.೧೧೧, ೧೨೪

೧೨. ಬಸವರಾಜು ಕುಂಚೂರು, ೨೦೦೯: ನಮ್ಮೂರ ಕೆರೆಗಳು, ಪು.೩೯

೧೩. ಎ.ಕ. ಸಂ.೧೦, ಅರಸೀಕೆರೆ ೨೫೩, ಪು.೩೨೫

೧೪. ಎ.ಕ. ಸಂ.೮, ಹಾಸನ ೧೪, ಪು.೨೪೭

೧೫. ಅದೇ, ಹಾಸನ ೧೧೩, ಪು.೩೨೪

೧೬. ಎ.ಕ. ಸಂ.೧೦, ಅರಸೀಕೆರೆ ೨೬೮, ಪು.೩೩೬

೧೭. ಎ.ಕ. ಸಂ.೯, ಬೇಲೂರು ೨೮೧, ಪು.೨೬೬

೧೮. ಎ.ಕ. ಸಂ.೮, ಅರಕಲಗೂಡು ೧೩೨, ಪು.೧೮೬

೧೯. ಎ.ಕ. ಸಂ.೧೦, ಅರಸೀಕೆರೆ ೯೬, ಪು.೧೩೦

೨೦. ಅದೇ, ಅರಸೀಕೆರೆ ೭೨, ಪು.೯೭

೨೧. ಅದೇ, ಅರಸೀಕೆರೆ ೩೧೭, ೩೧೮, ಪು.೩೯೨, ೩೯೪

೨೨. ಎ.ಕ. ಸಂ.೮, ಆಲೂರು ೪೧, ಪು.೪೫೮

೨೩. ಮೂರ್ತಿ ಎನ್.ಎನ್., ೧೯೭೬ : ನೀರಾವರಿ, ಪು.೨೩

೨೪. ಎ.ಕ. ಸಂ.೧೦, ಅರಸೀಕೆರೆ ೨೨೪, ಪು.೨೭೫

೨೫. ಅದೇ, ಅರಸೀಕೆರೆ ೨೮೮, ಪು.೩೫೬

೨೬. ಎ.ಕ. ಸಂ.೯, ಬೇಲೂರು ೨೫೬, ಪು.೨೪೧

೨೭. ಎ.ಕ. ಸಂ.೧೦, ಅರಸೀಕೆರೆ ೪೦, ಪು.೫೪

೨೮. ಎ.ಕ. ಸಂ.೮, ಹಾಸನ ೧೫೨, ಪು.೩೮೨

೨೯. ಎ.ಕ. ಸಂ.೯, ಬೇಲೂರು ೩೩೮, ಪು.೩೧೭

೩೦. ಎ.ಕ. ಸಂ.೮, ಹಾಸನ ೧೦೪, ಪು.೩೧೩

೩೧. ಎ.ಕ. ಸಂ.೧೦, ಅರಸೀಕೆರೆ ೧೮೪, ಪು.೨೪೨

೩೨. ಅದೇ, ಅರಸೀಕೆರೆ ೪೦, ಪು.೫೪

೩೩. ಅದೇ, ಅರಸೀಕೆರೆ ೪೧, ಪು.೫೫

೩೪. ಎ.ಕ. ಸಂ.೧೦, ಅರಸೀಕೆರೆ ೩೮, ಪು.೫೦

೩೫. ಎ.ಇ. ಸಂ.XIV, ಪು.೧೦೮–೧೯; ನೀಲತ್ತಹಳ್ಳಿ ಕಸ್ತೂರಿ(ಅನು), ೨೦೦೦: ಕರ್ನಾಟಕದಲ್ಲಿ ಕೆರೆ ನೀರಾವರಿ(ಮೂಲ: ದೀಕ್ಷಿತ್ ಜಿ.ಎಸ್., ಕುಪ್ಪುಸ್ವಾಮಿ ಜಿ.ಆರ್., ಮೋಹನ್ ಎಸ್.ಕೆ.), ಪು.೧೦೬

೩೬. ಎ.ಕ. ಸಂ.೮, ಹೊಳೆನರಸೀಪುರ ೪೨, ಪು.೨೦

೩೭. ನೀಲತ್ತಹಳ್ಳಿ ಕಸ್ತೂರಿ(ಅನು), ಪೂರ್ವೋಕ್ತ, ಪು.೧೪೮

೩೮. ಸೋಮೇಶ ಎಂ., ೨೦೧೧: ಡಣಾಯಕನ ಕೆರೆ, ಪು.೭೪

೩೯. ನೀಲತ್ತಹಳ್ಳಿ ಕಸ್ತೂರಿ, ಪೂರ್ವೋಕ್ತ, ಪು.೧೪೮

೪೦. ಬುಕಾನನ್ ಫ್ರಾನ್ಸಿಸ್, ಪೂರ್ವೋಕ್ತ, ಪು.೪೧೮

೪೧. ಎ.ಕ. ಸಂ.೧೦, ಅರಸೀಕೆರೆ ೨೨೪, ಪು.೨೭೫

೪೨. ಚೂಡಾಮಣಿ ನಂದಗೋಪಾಲ್, ೧೯೯೨: ಗಜಲಕ್ಷ್ಮಿಯ ಸಾಂಕೇತಿಕ ವಿನ್ಯಾಸ ಒಂದು ಅಧ್ಯಯನ, ಇತಿಹಾಸ ದರ್ಶನ, ಸಂ.೭, ಪು.೪೬–೪೯

೪೩. ದೇವರಕೊಂಡಾರೆಡ್ಡಿ(ಸಂ), ೨೦೦೬: ಹಂಪಿ ಸಂಪುಟ, ಪು.೪೭೦

೪೪. ಎ.ಕ. ಸಂ.೧೦, ಅರಸೀಕೆರೆ ೮೬, ಪು.೧೦೮

೪೫. ಎ.ಕ, ಸಂ.೮, ಹಾಸನ ೧೪೪, ಪು.೩೬೭

೪೬. ಎ.ಕ. ಸಂ.೧೦, ಅರಸೀಕೆರೆ ೩೬, ಪು.೪೫

೪೭. ಅದೇ, ಅರಸೀಕೆರೆ ೧೯೧, ಪು.೨೪೮

೪೮. ಅದೇ, ಅರಸೀಕೆರೆ ೪೧, ಪು.೫೫

೪೯. ದೇವರಕೊಂಡಾರೆಡ್ಡಿ(ಸಂ), ಪೂರ್ವೋಕ್ತ, ಪು.೪೭೦

೫೦. ಎ.ಕ. ಸಂ.೧೦, ಅರಸೀಕೆರೆ ೧೯೮, ಪು.೨೫೩

೫೧. ಧ್ರುವನಾರಾಯಣ ಎಂ.(ಅನು), ೨೦೦೧: ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ(ಮೂಲ: ಕೊಟ್ರಯ್ಯ ಸಿ.ಟಿ.ಎಂ.), ಪು.೧೧೯

೫೨. ಎ.ಕ. ಸಂ.೮, ಹಾಸನ ೭೧, ಪು.೨೮೩

೫೩. ಎ.ಕ. ಸಂ.೧೦, ಚನ್ನರಾಯಪಟ್ಟಣ ೧೩೪, ಪು.೫೮೩

.೫೪. ಎ.ಕ. ಸಂ.೯, ಬೇಲೂರು ೩೨೦ ಪು.೨೪೬

೫೫. ನೀಲತ್ತಹಳ್ಳಿ ಕಸ್ತೂರಿ(ಅನು), ಪೂರ್ವೋಕ್ತ, ಪು.೧೪೭

೫೬. ಎ.ಕ. ಸಂ.೮, ಹೊಳೆನರಸೀಪುರ ೪೨, ಪು.೨೦

೫೭. ಎ.ಕ. ಸಂ.೧೦, ಅರಸೀಕೆರೆ ೨೨೪, ಪು.೨೭೪-೨೭೫

೫೮. ರಾಜಾರಾಮ ಹೆಗಡೆ(ಸಂ), ೨೦೦೨: ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಪು.೩೭

೫೯. ಎ.ಕ. ಸಂ.೯, ಬೇಲೂರು ೪೫೬, ಪು.೪೨೩

೬೦. ಎ.ಕ. ಸಂ.೮, ಹಾಸನ ೫೮, ಪು.೨೭೩

೬೧. ಎ.ಕ. ಸಂ.೧೦, ಅರಸೀಕೆರೆ ೨೮೮, ಪು.೩೫೬

೬೨. ಅದೇ, ಚನ್ನರಾಯಪಟ್ಟಣ ೭೭, ಪು.೫೦೯

೬೩. ಎ.ಕ. ಸಂ.೯, ಬೇಲೂರು ೨೪೪, ಪು.೨೩೪

೬೪. ಎ.ಕ. ಸಂ.೧೦, ಚನ್ನರಾಯಪಟ್ಟಣ ೭೪, ೧೯, ಪು.೫೦೨, ೪೨೫

೬೫. ಎ.ಕ. ಸಂ.೯, ಬೇಲೂರು ೨೫೬, ಪು.೨೪೧

೬೬. ಎ.ಕ. ಸಂ.೮, ಹಾಸನ ೧೮೭, ಪು.೪೧೬

೬೭. ಎ.ಕ. ಸಂ.೯, ಬೇಲೂರು ೩೯೪, ಪು.೩೬೧

೬೮. ಎ.ಇ. ಸಂ.XIV, ಪೂರ್ವೋಕ್ತ, ಪು.೧೦೮-೧೧೯; ನೀಲತ್ತಹಳ್ಳಿ ಕಸ್ತೂರಿ(ಅನು), ಪೂರ್ವೋಕ್ತ, ಪು.೧೦೬

೬೯. ಎ.ಕ. ಸಂ.೧೦, ಅರಸೀಕೆರೆ ೩೭, ಪು.೪೮

೭೦. ಎ.ಕ. ಸಂ.೮, ಹಾಸನ ೧೩೫, ಪು.೩೫೬

೭೧. ಎ.ಕ. ಸಂ.೧೦, ಅರಸೀಕೆರೆ ೧೫೬, ಪು.೨೦೩

೭೨. ಅದೇ, ಅರಸೀಕೆರೆ ೧೫೩, ಪು.೧೯೯

೭೩. ಎ.ಕ. ಸಂ.೮, ಹಾಸನ ೮೭, ಪು.೩೦೧

೭೪. ಅದೇ, ಅರಕಲಗೂಡು ೧೧, ಪು.೧೦೨

೭೫. ಅದೇ, ಅರಕಲಗೂಡು ೧೨, ಪು.೧೧೯

೭೬. ಎ.ಕ. ಸಂ.೧೦, ಅರಸೀಕೆರೆ ೨೮೫, ಪು.೩೪೫

೭೭. ಅದೇ, ಅರಸೀಕೆರೆ ೨೮೦, ಪು.೩೪೪

೭೮. ಎ.ಕ. ಸಂ.೮, ಹೊಳೆನರಸೀಪುರ ೧೨೪, ಪು.೯೩

೭೯. ಅದೇ, ಅರಕಲಗೂಡು ೮೫, ಪು.೧೬೧

೮೦. ಎ.ಕ. ಸಂ.೯, ಬೇಲೂರು ೩೩೮, ಪು.೩೧೭

೮೧. ಎ.ಕ. ಸಂ.೧೦, ಚನ್ನರಾಯಪಟ್ಟಣ ೮೭, ಪು.೫೨೩

೮೨. ವಾಸುದೇವನ್ ಸಿ.ಎಸ್., ೨೦೦೧: ಹಂಪಿ ಪರಿಸರದ ಕೆರೆಗಳು, ಪು.೮೦

೮೩. ಎ.ಕ. ಸಂ.೧೦, ಅರಸೀಕೆರೆ ೧೯೬, ೨೫೧, ೨೨೨, ೭೨, ೧೯೭

೮೪. ಅದೇ, ಅರಸೀಕೆರೆ ೨೨೪, ಪು.೨೭೪

೮೫. ಎ.ಕ. ಸಂ.೮, ಹಾಸನ ೨೦೬, ಪು.೪೨೮

೮೬. ಎ.ಕ. ಸಂ.೧೦, ಅರಸೀಕೆರೆ ೧೬೫, ಪು.೨೫೦

೮೭. ಎ.ಕ. ಸಂ.೯, ಬೇಲೂರು ೪೯೦, ಪು.೪೪೫

೮೮. ಅದೇ, ಬೇಲೂರು ೪೭೫, ಪು.೪೩೫

೮೯. ನೀಲತ್ತಹಳ್ಳಿ ಕಸ್ತೂರಿ(ಅನು), ಪೂರ್ವೋಕ್ತ, ಪು.೧೩೩

೯೦. ಪ್ರಜಾವಾಣಿ ದಿನಪತ್ರಿಕೆ, ದಿನಾಂಕ ೨.೮.೨೦೧೪, ಪು.೬

೯೧. ಎ.ಕ. ಸಂ.೯, ಬೇಲೂರು ೨೩೬, ಪು.೨೨೨

೯೨. ಸೌಮ್ಯಶ್ರೀ ಎಸ್.ಜಿ., ೨೦೧೧: ಹಾರನಹಳ್ಳಿ ಚನ್ನಕೇಶವ ದೇವಾಲಯ ಅಧ್ಯಯನ, ಎಂ.ಎ. ಪದವಿಯ ಕಿರು ಸಂಶೋಧನಾ ಪ್ರಬಂಧ, ಅಪ್ರಕಟಿತ ಪು.೫೦; ಸೇಸುನಾಥನ್ ಐ., ೨೦೦೬: ಕರ್ನಾಟಕ ಪ್ರವಾಸಿ ತಾಣಗಳು, ಭಾಗ–೧, ಪು.೨೩೯

೯೩. ಎ.ಕ. ಸಂ.೯, ಸಕಲೇಶಪುರ ೪೫, ಪು.೫೨೭

೯೪. ಅದೇ, ; ಸಕಲೇಶ್ ಮ., ೨೦೦೨: ಹೊಯ್ಸಳೋದಯ ಸಂಶೋಧನ, ಪು.೨೯

೯೫. ಎ.ಕ. ಸಂ.೯, ಬೇಲೂರು ೨೬೮, ಪು.೨೫೮

೯೬. ಅದೇ, ಬೇಲೂರು ೩೩೮, ಪು.೩೧೭

೯೭. ಅದೇ, ಬೇಲೂರು ೩೨೦, ಪು.೨೯೬

೯೮. ಬುಕಾನನ್ ಫ್ರಾನ್ಸಿಸ್, ಸಂ.೩, ಪೂರ್ವೋಕ್ತ, ಪು.೩೯೧; ನೀಲತ್ತಹಳ್ಳಿ ಕಸ್ತೂರಿ(ಅನು), ಪೂರ್ವೋಕ್ತ, ಪು.೪೨

೯೯. ಎ.ಕ. ಸಂ.೧೦, ಅರಸೀಕೆರೆ ೩೮, ಪು.೫೦

೧೦೦. ಅದೇ, ಅರಸೀಕೆರೆ ೩೮, ಪು.೨

೧೦೧. ಎ.ಕ. ಸಂ.೮, ಅರಕಲಗೂಡು ೧೫೧, ಪು.೧೯

೧೦೨. ಅದೇ, ಹಾಸನ ೧೬೮, ಪು.೩೯

೧೦೩. ಅದೇ, ಹಾಸನ ೭೧, ಪು.೨೮೪

೧೦೪. ಎ.ಕ. ಸಂ.೯, ಬೇಲೂರು ೪೮೪, ಪು.೪೪೨

೧೦೫. ಅದೇ, ಬೇಲೂರು ೧೬೮, ಪು.೧೨೪

೧೦೬. ಅದೇ, ಬೇಲೂರು ೧೩೪, ಪು.೧೮೯

೧೦೭. ಅದೇ, ಬೇಲೂರು೧೯೪, ಪು.೧೮೩

೧೦೮. ಅದೇ, ಬೇಲೂರು ೩೨೮, ಪು.೩೧೦

೧೦೯. ಅದೇ, ಬೇಲೂರು ೩೮೯, ಪು.೩೫೬

೧೧೦. ಅದೇ, ಬೇಲೂರು ೧೬೯, ೧೮೨, ಪು.೧೧೬, ೧೭೨

೧೧೧. ಎ.ಕ. ಸಂ.೧೦, ಚನ್ನರಾಯಪಟ್ಟಣ ೭೦, ಪು.೫೦೨

೧೧೨. ಅದೇ, ಚನ್ನರಾಯಪಟ್ಟಣ ೧೮, ಪು.೪೨೪

೧೧೩. ಅದೇ, ಅರಸೀಕೆರೆ ೩೨೧, ಪು.೩೯೮

೧೧೪. ಅದೇ, ಅರಸೀಕೆರೆ ೩೨೨

೧೧೫. ಅದೇ, ಚನ್ನರಾಯಪಟ್ಟಣ ೬೪, ಪು.೪೯೧

೧೧೬. ಎ.ಕ. ಸಂ.೮, ಹಾಸನ ೧೩೨, ಪು.೩೫೨

೧೧೭. ಎ.ಕ. ಸಂ.೧೦, ಚನ್ನರಾಯಪಟ್ಟಣ ೮೫, ಪು.೫೨೦

೧೧೮. ಅದೇ, ಚನ್ನರಾಯಪಟ್ಟಣ ೮೭, ಪು.೫೨೩

೧೧೯. ಅದೇ, ಚನ್ನರಾಯಪಟ್ಟಣ ೧೪೨, ಪು.೫೯೧

೧೨೦. ಅದೇ, ಅರಸೀಕೆರೆ ೧೭೫, ಪು.೨೨೯

೧೨೧. ಎ.ಕ. ಸಂ.೮, ಹಾಸನ ೯೧, ಪು.೩೦೪

೧೨೨. ಎ.ಕ. ಸಂ.೨(ಹಳೆಯ), ಶ್ರವಣಬೆಳಗೊಳ ೫೫೮, ಪು.೩೪೧

೧೨೩. ಎ.ಕ. ಸಂ.೮, ಹೊಳೆನರಸೀಪುರ ೯೮, ಪು.೬೧

೧೨೪. ಅದೇ, ಹಾಸನ ೮೮, ಪು.೩೦೨

೧೨೫. ಎ.ಕ. ಸಂ.೧೦, ಅರಸೀಕೆರೆ ೨೪೬, ಪು.೩೧೮

೧೨೬. ಎ.ಕ. ಸಂ.೮, ಹಾಸನ ೧೧೩, ಪು.೩೨೫

೧೨೭. ಎ.ಕ. ಸಂ.೯, ಬೇಲೂರು ೧೩೬, ಪು.೯೩; ಶ್ರೀವತ್ಸ ಎಸ್. ವಟಿ, ೨೦೧೧: ಬೇಲೂರ ಮೇಲೆ ಹೊಸ ಬೆಳಕು, ಪು.೧೬೦

೧೨೮. ಎ.ಕ. ಸಂ.೮, ಅರಕಲಗೂಡು ೩೫, ಪು.೧೩೬

೧೨೯. ಎ.ಕ. ಸಂ.೯, ಬೇಲೂರು ೪೩೮, ಪು.೪೮೯

೧೩೦. ಎ.ಕ. ಸಂ.೧೦, ಚನ್ನರಾಯಪಟ್ಟಣ ೧೨೨, ಪು.೫೨೯

೧೩೧. ಅದೇ, ಚನ್ನರಾಯಪಟ್ಟಣ ೩೩. ಪು.೪೪

೧೩೨. ಅದೇ, ಅರಸೀಕೆರೆ ೧೫೯, ಪು.೧೭೯-೧೮೩

೧೩೩. ಎ.ಕ. ಸಂ.೯, ಬೇಲೂರು ೨೫೯, ಪು.೨೨೪

೧೩೪. ಅದೇ, ಬೇಲೂರು ೨೫೬, ಪು.೨೪೧

೧೩೫. ಗೋಪಾಲ್ ಆರ್.(ಸಂ), ೨೦೧೦: ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.೫೮೮

೧೩೬. ಎ.ಕ. ಸಂ.೧೦, ಅರಸೀಕೆರೆ ೮೬, ಪು.೧೦೯

೧೩೭. ಅದೇ, ಅರಸೀಕೆರೆ ೭೨, ಪು.೪೮

೧೩೮. ಅದೇ, ಅರಸೀಕೆರೆ ೮೮, ಪು.೧೧೪

೧೩೯. ಅದೇ, ಅರಸೀಕೆರೆ ೯೫, ಪು.೧೨೫

೧೪೦. ಉದಯರವಿ, ೨೦೧೦: ಹಾಸನ ಜಿಲ್ಲಾ ವೈಶಿಷ್ಟ್ಯ, ಪು.೪೨

೧೪೧. ಎ.ಕ. ಸಂ.೮, ಅರಕಲಗೂಡು ೪೭,ಪು.೧೪೬

೧೪೨. ಎ.ಕ. ಸಂ.೧೦, ಅರಸೀಕೆರೆ ೩೧೨, ಪು.೩೭೭

೧೪೩. ಅದೇ, ಚನ್ನರಾಯಪಟ್ಟಣ ೧೦೩, ಪು.೫೪೨

೧೪೪. ಅದೇ, ಚನ್ನರಾಯಪಟ್ಟಣ ೧೧೨, ಪು.೫೪೮

೧೪೫. ಅದೇ, ಚನ್ನರಾಯಪಟ್ಟಣ ೧೧೧, ಪು.೫೪೬

೧೪೬. ಅದೇ, ಚನ್ನರಾಯಪಟ್ಟಣ ೪೬, ಪು.೪೭೨

೧೪೭. ಅದೇ, ಚನ್ನರಾಯಪಟ್ಟಣ ೧೩೪, ಪು.೫೮೫

೧೪೮. ಅದೇ, ಚನ್ನರಾಯಪಟ್ಟಣ ೧೩೬, ಪು.೫೮೭

೧೪೯. ಎ.ಕ. ಸಂ.೮, ಅರಕಲಗೂಡು ೧೦೭, ಪು.೧೭೩

೧೫೦. ಗೋಪಾಲ್ ಆರ್.(ಸಂ), ಪೂರ್ವೋಕ್ತ, ಪು.೫೯೩

೧೫೧. ಎ.ಕ. ಸಂ.೯, ಬೇಲೂರು ೪೭೫, ಪು.೪೩೫

೧೫೨. ಮಳಲಿ ವಸಂತಕುಮಾರ್(ಸಂ), ೧೯೯೬: ಹೊಯ್ಸಳ ಸಂಪದ, ಪು.೫೪

೧೫೩. ಎ.ಕ. ಸಂ.೧೦, ಅರಸೀಕೆರೆ ೧೯೮, ಪು.೨೫೩

೧೫೪. ಅದೇ, ಅರಸೀಕೆರೆ ೨೦೦, ಪು.೨೫೪

೧೫೫. ಎ.ಕ. ಸಂ.೮, ಆಲೂರು ೪೧, ಪು.೪೫೭

೧೫೬. ಎ.ಕ. ಸಂ.೧೦, ಅರಸೀಕೆರೆ ೧೫೩, ಪು.೧೯೯

೧೫೭. ಅದೇ, ಅರಸೀಕೆರೆ ೨೮೫, ಪು.೩೪೮

೧೫೮. ಅದೇ, ಅರಸೀಕೆರೆ ೨೮೦, ಪು.೩೪೪

೧೫೯. ಎ.ಕ. ಸಂ.೮, ಹೊಳೆನರಸೀಪುರ ೧೨೮, ಪು.೯೩

೧೬೦. ಗೋಪಾಲ್ ಆರ್.(ಸಂ), ಪೂರ್ವೋಕ್ತ, ಪು.೫೯೨

೧೬೧. ಅದೇ

೧೬೨. ಎ.ಕ. ಸಂ.೧೦, ಅರಸೀಕೆರೆ ೨೭೩, ಪು.೩೫೯

೧೬೩. ಅದೇ, ಅರಸೀಕೆರೆ ೨೦೬, ಪು.೨೫೮

೧೬೪. ಗೋಪಾಲ್ ಆರ್.(ಸಂ), ಪೂರ್ವೋಕ್ತ, ಪು.೫೯೩

೧೬೫. ಎ.ಕ. ಸಂ.೮, ಹಾಸನ ೧೭೬, ಪು.೪೧೨

೧೬೬. ಗೊರೂರು ಅನಂತರಾಜು, ೨೦೦೯: ಹಾಸನ ಜಿಲ್ಲೆಯ ದೇವಾಲಯಗಳ ದರ್ಶನ, ಪು.೫೪

ಅಧ್ಯಾಯ – ನಾಲ್ಕು

ಐತಿಹ್ಯಗಳು

ಅಧ್ಯಾಯ – ನಾಲ್ಕು

ಐತಿಹ್ಯಗಳು

ಐತಿಹ್ಯ ಎಂಬುದು ನಿರ್ದಿಷ್ಟ ಸ್ಥಳವೊಂದಕ್ಕೆ ಸಂಬಂಧಿಸಿದ್ದು ಪ್ರಾಚೀನವಾದದ್ದು. ಪ್ರಾಸ್ತಾವಿಕ ಘಟನೆಯೊಂದರ ಆಧಾರದ ಮೇಲೆ ಕಾಲ್ಪನಿಕ ಅಂಶವನ್ನು ಒಳಗೊಂಡು ಬೆಳೆದುನಿಂತಿರುವ ಪರಂಪರಾಗತವಾಗಿ ಜನಪದರು ನಂಬಿಕೊಂಡು ಬಂದ ವಿಶೇಷ ಸಂಗತಿಯಾಗಿದೆ. ಐತಿಹ್ಯಗಳನ್ನು ನಿರೂಪಿಸುವ ವಕ್ತೃಗಳು ಅವು ವಾಸ್ತವಿಕ ಘಟನೆಗಳ ಆಧಾರದ ಮೇಲೆ ರೂಪಿತವಾಗಿವೆ ಎಂಬ ನಂಬಿಕೆಯನ್ನು ಕೇಳುಗರಲ್ಲಿ ಉಂಟುಮಾಡಿ, ಮತ್ತಷ್ಟು ಆಸಕ್ತಿಯನ್ನು ಅರಳಿಸುತ್ತಾರೆ. ಇವು ನಾಡಿನ ಸಾಂಸ್ಕೃತಿಕ ಅಧ್ಯಯನದಲ್ಲಿ ಗಮನಾರ್ಹವಾದ ಪಾತ್ರವನ್ನು ನಿರ್ವಹಿಸುತ್ತವೆ.[೧]

ಮಾನವ ಜನಾಂಗವು ತನ್ನ ವಿಕಾಸದ ನಿರ್ದಿಷ್ಟ ಹಂತಕ್ಕೆ ತಲುಪಿದ ನಂತರ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿಕೊಂಡಿತು. ಅನಂತರದಿಂದೀಚೆಗೆ ಜೀವಿಸಿದ್ದ ಜನತೆಯನ್ನು 'ಜನಪದ' ಮತ್ತು 'ಶಿಷ್ಟಪದ' ಎಂಬೆರಡು ಪ್ರಭೇದಗಳಿಂದ ಗುರುತಿಸುವ ಪ್ರವೃತ್ತಿ ಬೆಳೆದುಬಂದಿದೆ. 'ಜನಪದ' ಎಂದರೆ 'ಜನಸಮೂಹ' ಎಂಬ ವಿಶಾಲಾರ್ಥವಿದ್ದರೂ ಪ್ರಸ್ತುತ ಸಂದರ್ಭದಲ್ಲಿ ನಮಗಿಂತ ಒಂದೆರಡು ತಲೆಮಾರುಗಳಷ್ಟು ಹಿಂದೆ ಬದುಕಿದ್ದ ಅಶಿಕ್ಷಿತರಾದ ಹಳ್ಳಿಯ ಶ್ರಮಿಕ ವರ್ಗ ಎಂದು ತಿಳಿಯಲಾಗುತ್ತದೆ. 'ಶಿಷ್ಟಪದ' ಎಂದರೆ ಶ್ರಮಿಕರಲ್ಲದ ಜನವರ್ಗ ಸುಶಿಕ್ಷಿತರು ಎಂದು ಪರಿಭಾವಿಸಲಾಗುತ್ತದೆ. ಇಲ್ಲಿ ಜನಪದರದು ದೈಹಿಕ ಶ್ರಮವಾದರೆ, ಶಿಷ್ಟಪದರದು ಬೌದ್ಧಿಕ ಶ್ರಮ. ಈ ಎರಡು ವರ್ಗದವರಿಗೂ ವಿಶಿಷ್ಟವಾದ ಸಂಸ್ಕೃತಿಗಳಿದ್ದವು. ಜನಪದರು ಅಶಿಕ್ಷಿತರಾಗಿದ್ದುದರಿಂದ ಅವರ ಸಂಸ್ಕೃತಿಯ ಕುರುಹುಗಳು ಲಿಖಿತ ರೂಪಕ್ಕಿಳಿಯಲಿಲ್ಲ. ಅವು ಮೌಖಿಕ ಪರಂಪರೆಯಲ್ಲಿ, ಆಚರಣೆ ಅನುಷ್ಠಾನಗಳಲ್ಲಿ ಉಳಿದು ಬೆಳೆದು ಬರಬೇಕಾಯಿತು. ಸುಶಿಕ್ಷಿತರಾಗಿದ್ದ ಶಿಷ್ಟಪದರ ಸಂಸ್ಕೃತಿಯ ಕುರುಹುಗಳು ಲಿಖಿತ ರೂಪದಲ್ಲಿ ಲಭ್ಯವಿದೆ. ಹಾಗಾಗಿ ಶಿಷ್ಟಸಂಸ್ಕೃತಿಯನ್ನು ಅವರ ಇತಿಹಾಸವನ್ನು ತಿಳಿದುಕೊಳ್ಳುವುದು ಸುಲಭವೆನಿಸಿದೆ. ಅಂತಹ ಇತಿಹಾಸವು ಹೆಚ್ಚು ವಾಸ್ತವವಾದುದು

ಎಂಬ ನಂಬಿಕೆ ನಮ್ಮಲ್ಲಿದೆ.[೨] ಮೌಖಿಕ ಪರಂಪರೆಯಲ್ಲಿ ಉಳಿದು, ಬೆಳೆದುಬಂದ ಜನಪದ ಕುರುಹುಗಳಲ್ಲಿ ಜನಪದ ಸಾಹಿತ್ಯವೂ ಒಂದಾಗಿದೆ. ಈ ಸಾಹಿತ್ಯದಲ್ಲಿ ಐತಿಹ್ಯವೆಂಬುದು ಒಂದು ಪ್ರಕಾರ.

ಕೆರೆ, ಬಾವಿ, ಬೆಟ್ಟ, ಮತ್ತು ದೈವಗಳಿಗೆ ಸ್ಥಳೀಯ ರೀತಿಯ ಐತಿಹ್ಯಗಳಿರುವುದು ಸಾಮಾನ್ಯ. ಐತಿಹ್ಯಗಳು ಅಧ್ಯಯನದ ಶಿಸ್ತಿನಲ್ಲಿ ಸ್ಥಳೀಯ ಹಾಗೂ ಸಂಚಾರಿ ಐತಿಹ್ಯಗಳೆಂದು ಎರಡು ರೀತಿಯಿಂದ ವರ್ಗೀಕರಿಸುತ್ತಾರೆ. ಬಲಿದಾನದ ನಾಡಿನ ಗಡಿಯಲ್ಲಿ ವೀರರನ್ನು ಹೂಳುವ, ಯುದ್ಧಸಂಬಂಧವಾದ ನಂಬಿಕೆಗಳಿಗೆ ಸಂಬಂಧಿಸಿದ, ದೃಷ್ಟಿಭ್ರಮೆಯಿಂದ ಜನಿಸಿದ, ಧ್ವನಿಗೆ ಮತ್ತು ಗುಪ್ತನಿಧಿಗೆ ಸಂಬಂಧಿಸಿದ, ಸ್ಥಳನಾಮಗಳಿಗೆ ಸಂಬಂಧಿಸಿದ ಐತಿಹ್ಯಗಳು ಸ್ಥಳೀಯ ಐತಿಹ್ಯಗಳೆಂದು ವಿದ್ವಾಂಸರು ಗುರುತಿಸಿದ್ದಾರೆ.[೩] ಹಾಗೆಯೇ ಪ್ರಕೃತಿಯಲ್ಲಿ ಸಾಮಾನ್ಯವಲ್ಲದ ವಸ್ತುವೊಂದು ಕಣ್ಣಿಗೆ ಬಿದ್ದರೆ ಕೆಲವರಲ್ಲಿ ಅದು ಯಾಕೆ ಹಾಗಿದೆ ಎನ್ನುವ ಕುತೂಹಲದ ಪ್ರಶ್ನೆ ಮೂಡುವುದು ಸಹಜ. ಅದಕ್ಕೆ ಉತ್ತರವಾಗಿ ಯಾರಾದರೂ ಪ್ರತಿಭಾವಂತ ವ್ಯಕ್ತಿ ರಂಜನೀಯವಾದ ಕಥೆಯನ್ನು ಕಟ್ಟಿ ಹೇಳಬಲ್ಲ. ಆ ಕಥೆಯಲ್ಲಿ ತಾನು ಕೇಳಿ ತಿಳಿದ ಇತಿಹಾಸದ ಅಂಶಗಳು ಸಹಜವಾಗಿ ಸೇರಿ ಒಂದು ಐತಿಹ್ಯ ಸಿದ್ಧವಾಗುತ್ತದೆ. ಒಂದೂರಿನಲ್ಲಿ ಇದ್ದ ಸೃಷ್ಟಿಯ ವೈಚಿತ್ರ, ಅದೇ ಮಾದರಿಯಲ್ಲಿ ಇನ್ನೊಂದೆಡೆಯೂ ಇರುವುದಕ್ಕೆ ಸಾಧ್ಯತೆ ಇದೆ. ಇಂತಹ ಐತಿಹ್ಯಗಳನ್ನು ಸಂಚಾರಿ ಐತಿಹ್ಯಗಳೆಂದು ಕರೆದಿದ್ದಾರೆ.[೪]

ಐತಿಹ್ಯಗಳಲ್ಲಿ ಎರಡು ವಿಧದ ಪ್ರಕ್ರಿಯೆಗಳು ನಡೆಯುತ್ತವೆ. ಚಾರಿತ್ರಿಕ ಐತಿಹ್ಯ ಎಂದು ನಾವು ಯಾವುದನ್ನು ಕರೆಯುತ್ತೇವೆಯೋ ಅಲ್ಲಿ ಚಾರಿತ್ರಿಕ ಅಂಶ ಮಸುಕಾಗಿದ್ದು, ಕಾಲ್ಪನಿಕ ಅಂಶವೇ ಪ್ರಧಾನವಾಗಿರುತ್ತದೆ. ಇದು ನೇರವಾಗಿ ಚರಿತ್ರೆಗೆ ಸಂಬಂಧಿಸಿದ್ದು, ಎಂದಾದರೂ ಅಲ್ಲಿ ಸಿಗುವ ಚಾರಿತ್ರಿಕ ಅಂಶ ತೀರ ಕಡಿಮೆ. ಚರಿತ್ರೆಯ ಬಹುತೇಕ ಅಂಶ ವಿರೂಪಗೊಂಡಿರುವುದೇ ಇಲ್ಲಿ ಕಂಡುಬರುತ್ತದೆ. ಇದಕ್ಕೆ ಪ್ರತಿಯಾಗಿ ಚರಿತ್ರೆಗೂ ಐತಿಹ್ಯಕ್ಕೂ ಏನೇನೂ ಸಂಬಂಧವಿಲ್ಲವೆಂದು ಕಂಡುಬರುವ ಐತಿಹ್ಯಗಳಲ್ಲಿ ಚರಿತ್ರೆಕಾರರಿಗೆ, ವಿಜ್ಞಾನಿಗಳಿಗೆ, ಸಮಾಜವಿಜ್ಞಾನಿಗಳಿಗೆ ಬೇರೆಡೆ ದೊರಕದ ಅಮೂಲ್ಯ ಆಧಾರಗಳು ಅಡಗಿರುತ್ತವೆ. ಇಂದು ಜನರಲ್ಲಿ ಪ್ರಚಲಿತವಿರುವ ಅನೇಕ ನಂಬಿಕೆ, ಆಚಾರ ವಿಚಾರಗಳ ಹಿನ್ನೆಲೆಯನ್ನು ನಮಗೆ ಯಾವ ಚರಿತ್ರೆಯ ಪುಸ್ತಕಗಳೂ ತಿಳಿಸಲಾರವು. ಆದರೆ ಐತಿಹ್ಯಗಳು ಅಂತಹ ಪ್ರಮುಖ ಕೆಲಸ ಮಾಡುತ್ತವೆ. ಅವು ತಮ್ಮದೇ ಆದ ರೀತಿಯಲ್ಲಿ ಸಾಮಾಜಿಕ ಕಟ್ಟುಪಾಡುಗಳನ್ನು ಉಳಿಸಿಕೊಂಡು ಬರುತ್ತವೆ.[೫]

ಜನಪದ ಗದ್ಯಕತೆಗಳಲ್ಲಿ 'ಐತಿಹ್ಯ' ಒಂದು ಮುಖ್ಯವಾದ ಪ್ರಕಾರ. ರೂಪದಲ್ಲಿ ತೀರಾ ಸರಳವಾಗಿದ್ದು ಒಂದು ನಿರ್ದಿಷ್ಟ ವ್ಯಕ್ತಿ, ಸ್ಥಳ ಅಥವಾ ಘಟನೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಕತೆಗಳನ್ನು 'ಐತಿಹ್ಯ' ಎನ್ನುತ್ತೇವೆ. 'ಐತಿಹ್ಯ' ಮತ್ತು 'ಇತಿಹಾಸ' ಒಂದೇ ಮೂಲದ ಎರಡು

ಪದಗಳು. ಇತಿಹಾಸಕ್ಕೆ ಈಗಿನ ಚರಿತ್ರೆ ಎಂಬ ಪದ ಸಂವಾದಿಯಾಗಿದೆ. ಇತಿಹಾಸ ವಾಸ್ತವಾಂಶಗಳನ್ನು ನಿರೂಪಿಸುತ್ತದೆ. ಇಲ್ಲಿ ಕಲ್ಪನೆಗೆ ಎಡೆಯಿಲ್ಲ. ಐತಿಹ್ಯಗಳನ್ನು ಜನಪದರು ನಿಜವಾಗಿ ನಡೆದವೆಂದೇ ನಿರೂಪಿಸುತ್ತಾರಾದರೂ ಇವುಗಳಿಗೆ ಯಾವುದೇ ಲಿಖಿತ ಆಧಾರಗಳು ಇರುವುದಿಲ್ಲ. ಇವು ಕಂಠಸ್ಥ ರೂಪದಲ್ಲಿ ಬೆಳೆಯುತ್ತ ಬಂದಿವೆ. ಇತಿಹಾಸ ಒಂದು ಘಟನೆ ಖಚಿತವಾಗಿ ನಡೆದದ್ದು ಎಂಬುದನ್ನು ಆಧಾರಗಳಿಂದ ಸ್ಪಷ್ಟವಾಗಿ ತಿಳಿಸುತ್ತದೆ. ಆದರೆ ಐತಿಹ್ಯದಲ್ಲಿ ನಿರೂಪಿತವಾಗುವ ವಿಷಯಗಳೆಲ್ಲವೂ ನಿಜವೆಂದು ಹೇಳುವುದಕ್ಕೆ ಗಟ್ಟಿಯಾದ ಆಧಾರಗಳು ಸಿಗುವುದಿಲ್ಲ. ಎಲ್ಲ ಐತಿಹ್ಯಗಳಲ್ಲಿ ಸತ್ಯಾಂಶ ಹಾಗೂ ಕಾಲ್ಪನಿಕ ಎಂಬುದನ್ನು ವಿಶ್ಲೇಷಣೆಯಿಂದ ಕಂಡುಕೊಳ್ಳಬಹುದು.[೬]

ಸಂಪ್ರದಾಯ ಹಾಗೂ ನಂಬಿಕೆಗಳಿಗೆ ನಿಕಟ ಸಂಬಂಧವಿರುವಂತೆ, ನಂಬಿಕೆ ಮತ್ತು ಐತಿಹ್ಯಗಳಿಗೂ ಸಂಬಂಧವಿದೆ. ನಂಬಿಕೆ ಒಂದು ರೀತಿಯಲ್ಲಿ ಸಂಪ್ರದಾಯವನ್ನು ಪ್ರತಿನಿಧಿಸಿದರೆ, ಐತಿಹ್ಯಗಳು ಜನಪರ ನಂಬಿಕೆ ಮತ್ತು ಮೂಢನಂಬಿಕೆಗಳನ್ನು ಉದಾಹರಣೆಗಳ ಸಹಿತ ಸ್ಪಷ್ಟಪಡಿಸುತ್ತವೆ. ಐತಿಹ್ಯ ನಿರ್ದಿಷ್ಟ ಘಟನೆಯೊಂದನ್ನು ಆಧರಿಸಿದಂತೆ ನಿರೂಪಿತವಾಗಿರುತ್ತದೆ. ಯಾವುದೋ ಒಂದು ವಸ್ತುವನ್ನು ನಿರ್ದೇಶಿಸಿಯೇ ಐತಿಹ್ಯ ಕತೆಯನ್ನು ಹೇಳುತ್ತದೆ. ಐತಿಹ್ಯ ನಿಸರ್ಗದ ವರ್ಣಮಯ, ವೈವಿಧ್ಯಮಯ ನೆಲೆಗಟ್ಟಿನ ಮೇಲೆ ಕಟ್ಟಿದ ಕಲ್ಪನೆಯ ಭವ್ಯ ಕಾವ್ಯ. ಐತಿಹ್ಯ ಜನಪದ ನಂಬಿಕೆಯೊಂದನ್ನು ವಿವರವಾಗಿ ನಿರೂಪಿಸುತ್ತದೆ. ಐತಿಹ್ಯದಲ್ಲಿ ಘಟನೆಯೊಂದನ್ನು ಮೊದಲು ನಂಬುತ್ತಾರೆ. ಆ ನಂತರ ಆ ನಂಬಿಕೆಗೆ ಸರಿಹೊಂದುವಂತೆ ಕಲ್ಪನೆಯ ಅಂಶವನ್ನು ಸೇರಿಸಿ ಕತೆಯನ್ನು ಕಟ್ಟುತ್ತಾರೆ. ಉದಾ: ಅಕ್ಕ ತಂಗಿಯರಿಬ್ಬರು ಕಟ್ಟಿಸಿದ ಎರಡು ಕೆರೆ ಅಕ್ಕಪಕ್ಕದಲ್ಲಿಯೇ ಇವೆ. ಆದರೆ ತಂಗಿ ಕಟ್ಟಿಸಿದ ಕೆರೆಯಲ್ಲಿ ಉಪ್ಪುನೀರು, ಅಕ್ಕ ಕಟ್ಟಿಸಿದ ಕೆರೆಯಲ್ಲಿ ಸಿಹಿನೀರು. ಇದಕ್ಕೆ ಕಾರಣ ತಂಗಿ ಖರ್ಚಾಯಿತಲ್ಲ ಎಂದು ಗೊಣಗಿದ್ದು, ಅಕ್ಕ ಸಂತೋಷದಿಂದ ಹಾಗೂ ಶ್ರದ್ಧೆಯಿಂದ ಕಟ್ಟಿಸಿದ್ದು. ಇಲ್ಲಿ ನಂಬಿಕೆಯ ಅಂಶವನ್ನು ಜನ ಮೊದಲು ನಂಬುತ್ತಾರೆ. ಹಾಗೆ ನಂಬಿದ ನಂಬಿಕೆಗೆ ಆ ನಂತರ ಒಂದು ವಿವರಣೆ ನೀಡುತ್ತಾರೆ.[೭]

ಈ ಬಗೆಯ ನಂಬಿಕೆ ಮತ್ತು ಕಥೆಗಳು ಜನಪದರಲ್ಲಿ ಇದ್ದವು. ಅವು ಸಾಹಿತ್ಯ ರೂಪವನ್ನು ಪಡೆದು ಜನಪದ ಗೀತೆಗಳಾಗಿ ಇಂದಿಗೂ ಮೌಖಿಕ ಆಕರಗಳಾಗಿವೆ. ಕೆಲವು ಶಕ್ತಿಶಾಲಿ ನಂಬಿಕೆಗಳು, ಸಂಪ್ರದಾಯಗಳು, ವಿಧಿಕ್ರಿಯೆಗಳು, ಆಚರಣೆ ಮುಂತಾದವು ಸಾಮಾಜಿಕ ಮೌಲ್ಯಗಳಾಗಿವೆ. ಅವು ಜನಪದ ಆಶಯಗಳಾಗಿ ಬೆಳೆದುಬರುತ್ತವೆ. ಅಂತ ಆಶಯಗಳಲ್ಲಿ 'ಕೆರೆಗೆ ಹಾರ'ವೂ ಒಂದು. ಕೆರೆಗಳ ವಿಷಯ ಮಾತನಾಡುವಾಗ ಕೆರೆಕಟ್ಟೆಯ ಸ್ಥಿರತೆಗಾಗಿ ಬಲಿಯಾದ ಜನಪದರನ್ನು ಕನ್ನಡ ಜನಪದ ಸಾಹಿತ್ಯದಲ್ಲಿ ಉದಾಹರಿಸಲಾಗಿದೆ. ಕಲ್ಲನಕೇರಿಯಲ್ಲಿ ಮಲ್ಲನಗೌಡನೆಂಬುವನು ಒಂದು ಕೆರೆ ಕಟ್ಟಿಸಿದ. ಆದರೆ ಆ ಕೆರೆಯ ಒಡ್ಡು(ಏರಿ) ನಿಲ್ಲದೇ ಹೋದಾಗ, ಒಬ್ಬ ಜ್ಯೋತಿಷಿಯನ್ನು ಕೇಳಿದರು. ಅವನು ಕೆರೆಯು ಮಾನವನ(ನರ) ಬಲಿ ಬೇಡುತ್ತಿದೆ ಎಂದು ತಿಳಿಸುತ್ತಾನೆ. ಈ ಕಾರ್ಯಕ್ಕೆ ಊರ ಜನರು ಯಾರೂ ಮುಂದೆ ಬರುವುದಿಲ್ಲ. ಆಗ ಸಾರ್ವಜನಿಕ ಹಿತರಕ್ಷಣೆಯನ್ನು

ಗಮನದಲ್ಲಿರಿಸಿಕೊಂಡು ಮಲ್ಲನಗೌಡನ ಕಿರಿಯ ಸೊಸೆ ಭಾಗೀರಥಿ ಕೆರೆಗೆ ಆಹುತಿಯಾಗುತ್ತಾಳೆ. ನಂತರ ಕೆರೆಯ ಏರಿಯೂ ಭದ್ರವಾಗಿ ನಿಲ್ಲುತ್ತದೆ. ಜನರು ಆಹುತಿಯಾದ ಭಾಗೀರಥಿಗೆ ಒಂದು ಚಿಕ್ಕಗುಡಿಯನ್ನು ಕೆರೆಯ ಸಮೀಪದಲ್ಲಿ ಕಟ್ಟಿ ಅವಳ ಮೂರ್ತಿಯನ್ನು ಸ್ಥಾಪಿಸಿ ಪೂಜಿಸುತ್ತಾರೆ ಎಂಬುದು ಜಾನಪದ ಸಾಹಿತ್ಯದಿಂದ ತಿಳಿದುಬರುತ್ತದೆ.[೮] ಇದು ಒಂದು ಜನಪ್ರಿಯ ಲಾವಣಿ.

ಕಲ್ಲನಕೇರಿ ಮಲ್ಲನಗೌಡ ಕೆರೆಯೊಂದ ಕಟ್ಟಿಸ್ಯಾನ

ಕೆರೆಯೊಂದ ಕಟ್ಟಿಸ್ಯಾನು ಸೆರೆಮುಕ್ಕ ನೀರಿಲ್ಲ

ಸೆರೆಮುಕ್ಕ ನೀರಿಲ್ಲ ಹೊತ್ತಿಗೆ ತೆಗೆಸ್ಯಾರು

ಹೊತ್ತಿಗೆ ತೆಗೆಸ್ಯಾರು ಜೋಯಿಸರ ಕೇಳ್ಯಾರು

ಶಾಸ್ತ್ರದಲ್ಲಿ ಹಿರಿಸೊಸೆ ಮಲ್ಲಮ್ಮನನ್ನು ಬಲಿ ನೀಡಿದರೆ ನೀರು ಬರುತ್ತದೆ ಎಂದು ಹೇಳಲಾಯಿತು. ಆದರೆ ಮಲ್ಲನಗೌಡನ ಮನೆಯಲ್ಲಿ ಚರ್ಚೆ ನಡೆದು ಹಿರಿಸೊಸೆ ಹಾರವಾದರೆ ಹಿರಿತನಕ್ಕೆ ಯಾರೂ ಇಲ್ಲವೆಂದು ಕಿರಿಸೊಸೆ ಭಾಗೀರಥಿಯನ್ನು ಹಾರವಾಗಿಸಲು ಸಕಲ ಸಿದ್ಧತೆಗಳಾದವು. ಭಾಗೀರಥಿಗೂ ಇದರ ಅರಿವಾಯಿತು. ಆಕೆ ತನ್ನ ತವರಿಗೆ ತಂದೆ ತಾಯಿ ಬಂಧುಬಳಗವನ್ನು ನೋಡಿಬರಲು ಹೋಗುತ್ತಾಳೆ. ಆದರೆ ಕೆರೆಗೆ ಹಾರವಾಗುವ ವಿಷಯವನ್ನು ಯಾರೊಡನೆಯು ಹೇಳದೆ ತನ್ನ ಗೆಳತಿಯೊಡನೆ ಮಾತ್ರ ಹೇಳಿ ಬಂದಳು. ಭಾಗೀರಥಿಗೆ ಮನದಲ್ಲಿ ದುಗುಡವಿದ್ದರೂ ಅದನ್ನು ತೋರಿಕೊಳ್ಳದೆ ಧೈರ್ಯವಾಗಿಯೇ ಇದ್ದಳು. ಮನೆಯಲ್ಲಿ ಸ್ನಾನಕ್ಕೆ ನೀರು ಕಾಯಿಸಿದರು. ಆದರೆ ಸ್ನಾನಕ್ಕೆ ಯಾರೂ ಮುಂದಾಗುವುದಿಲ್ಲ. ನಿಂಗವ್ವ ನಾವೊಲ್ಲೆ, ನೀಲವ್ವ ನಾವೊಲ್ಲೆ, ಗಂಗವ್ವ ನಾವೊಲ್ಲೆ ಎಂದು ಹಿಂಜರಿದರು. ಕೊನೆಗೆ ಸಣ್ಣ ಸೊಸೆ ಬಾಗೀರಥಿ ಜಳಕವ ಮಾಡ್ಯಾಳು, ಜಳಕವ ಮಾಡ್ಯಾಳು ಬಂಗಾರ ಬುಟ್ಟಿ ತುಂಬ್ಯಾಳು.

ಅನಂತರ ಪೂಜೆಗೆಂದು ಕೆರೆಗೆ ಹೊರಟರು. ಅಲ್ಲಿ ಪೂಜೆಯಾಯಿತು. ಆದರೆ ಬೇಕೆಂತಲೇ ಒಂದು ಬಂಗಾರದ ಬಟ್ಟಲನ್ನು ಮರೆತು ಊರಕಡೆಗೆ ನಡೆದರು. ದಾರಿಯಲ್ಲಿ ಅದರ ನೆನಪಾಯಿತು. ಯಾರೂ ಅದನ್ನು ತರಲು ಹೋಗಲಿಲ್ಲ. ಬದಲಾಗಿ ಸಣ್ಣ ಸೊಸೆ ಬಾಗೀರಥಿಗೆ ನೀ ತರು ಹೋಗವ್ವ ಎಂದು ಕಳುಹಿಸಿದರು.

ಬಾಗೀರಥಿ ಬಿರಿಬಿರಿ ನಡೆದಳು

ಬಿರಿಬಿರಿ ನಡೆದಳು ಬಂಗಾರ ಬಟ್ಲ ತಗೊಂಡಳು

ಒಂದು ಮೆಟ್ಲೇರುದಕ ಪಾದಕ ಬಂದಳು ಗಂಗಿ

ಎರಡು ಮೆಟ್ಲೇರುದಕ ಪಾದ ಮುಳುಗಿಸ್ಯಾಳು ಗಂಗಿ

ಮೂರು ಮೆಟ್ಲೇರುದಕ ಮೊಣಕಾಲಿಗೆ ಬಂದಳು ಗಂಗಿ

ನಾಕು ಮೆಟ್ಲೇರುದಕ ನಡುಮಟ ಬಂದಳು ಗಂಗಿ
ಐದು ಮೆಟ್ಲೇರುದಕ ತುಂಬಿ ಹರಿದಾಳು ಗಂಗಿ
ಸಣ್ಣ ಸೊಸಿ ಬಾಗೀರಥಿ ಕೆರೆಗ್ಹಾರವಾದಳು.

ದಂಡಿನಲ್ಲಿದ್ದ ಅವಳ ಗಂಡ ಮಾದೇವರಾಯನಿಗೆ ರಾತ್ರಿ ಸ್ವಪ್ನ ಬಿದ್ದು ಸೆಲ್ಯ ಸುಟ್ಟಂಗಾಯಿತು, ಕೋಲು ಮುರಿದ್ಹಂಗಾಯಿತು, ಚಡಪಡಿಸುತ್ತ ತನ್ನ ಕುದುರಿಗೆ ತಡಿಕೂಡ ಹಾಕದೆ ಬೆತ್ತಲೆ ಕುದುರೆಯನ್ನೇರಿ ಊರಿಗೆ ಬಂದನು. ಹೆಂಡತಿ ಬಾಗೀರಥಿ ಮನೆಯಲ್ಲಿಲ್ಲದ್ದರಿಂದ ತಂದೆ ತಾಯಿಯನ್ನು ಕೇಳಿದನು. ತವರಿಗೆ ಹೋಗಿದ್ದಾಳೆಂದು ಅವರು ಉತ್ತರಿಸಿದರು. ಅಲ್ಲಿಗೂ ಹೋಗಿ ಅತ್ತೆಮಾವಂದಿರನ್ನು ಕೇಳಿ ಅವರಿಂದ ಕೂಡ ಸರಿ ಉತ್ತರ ದೊರೆಯದೆ ಬಾಗೀರಥಿಯ ಗೆಳತಿಯಿಂದ ತನ್ನ ಹೆಂಡತಿ ಕೆರೆಗೆ ಹಾರವಾದ ವಿಷಯವನ್ನು ತಿಳಿದು ನೇರವಾಗಿ ಕೆರೆಯ ಹತ್ತಿರ ಬಂದು ದುಃಖಿಸುತ್ತಾ;

ಮುತ್ತಿನೋಲೆ ಇಟಗೊಳ್ಳೊ ಮುತ್ತೈದೆ ಎಲ್ಲಿಗ್ಹೋದೆ
ಇಷ್ಟು ಮಾತಾಡಿ ಮಾದೇವ ಬಿಟ್ಟಾನು ಕಣ್ಣೀರು
ಬಿಟ್ಟಾನು ಕಣ್ಣೀರ ಹಾರಿದ ಕೆರೆ ನೀರಾಗ್

ಗಂಡ ಸತ್ತರೆ ಆತನ ಹೆಂಡತಿ ಸತ್ತು ಹೋಗುವುದು ನಮ್ಮ ಸಮಾಜದಲ್ಲಿ ಹಿಂದೆ ಇತ್ತು. ಆದರೆ ಹೆಂಡತಿ ಸತ್ತರೆ ಆಕೆಯ ಗಂಡ ಆತ್ಮಾರ್ಪಣೆ ಮಾಡಿಕೊಳ್ಳುವ ಸಂಗತಿಗಳು ಬಹಳ ಅಪರೂಪ. ಇಂತಹ ದುರಂತ ಕಥನಗೀತೆ ಇದಾಗಿದೆ.

ಚಿಕ್ಕನಾಯಕನ ತಾಲೂಕಿನ ಆಲೂರಿನ ಕೆರೆ ಏರಿ ಒಡೆಯದೆ ನಿಲ್ಲಲು ಊರಿನ ಮುಖಂಡ ತನ್ನ ಸೊಸೆ ಕೆಂಚಮ್ಮನನ್ನು ಬಲಿ ಕೊಟ್ಟನು ಎಂಬುದು ಅಲ್ಲಿನ ಜನಪದ ಗೀತೆಯ ಸಾರಾಂಶವಾಗಿದೆ.[೧೦] ಹಾಗೆಯೇ ಚಿಕ್ಕಮಗಳೂರು ಜಿಲ್ಲೆಯ ಅಯ್ಯನಕೆರೆ, ಚಿತ್ರದುರ್ಗ ಜಿಲ್ಲೆಯ ಧರ್ಮಪುರಿ, ಹೊನಬೆಲ್ಲ, ಸತ್ಯಕ್ಕನಕೊಳ, ಕೋಲಾರ ಜಿಲ್ಲೆಯ ಟೇಕಲ್‌ಕೆರೆ, ಮಾಸ್ತಿಕೆರೆಯ ಐತಿಹ್ಯಗಳು ಊರಿಗೆ ಒಳಿತಾಗಲೆಂದು ಕೆರೆಗೆ ಹಾರವಾದ ಸತಿಯರ ಪ್ರಸಂಗಗಳಿವೆ.[೧೧] ನಾಗಮಂಗಲದ ಬಳಿ ಇರುವ ಸೂಳೆಕೆರೆಗೆ ಸಂಬಂಧಿಸಿದಂತೆ ಹೇಳುವ ಕಥೆ ತುಂಬಾ ರೋಮಾಂಚಕಾರಿಯಾಗಿದೆ. ರಾಜನೊಬ್ಬ ಕಟ್ಟಿಸುತ್ತಿದ್ದ ಕೆರೆಯ ಏರಿ ಎಷ್ಟು ಪ್ರಯತ್ನ ಪಟ್ಟರೂ ನಿಲ್ಲದಿದ್ದಾಗ ಕೊನೆಗೆ ರಾಜನ ಸೂಳೆ ತಾನೇ ಬಲಿಯಾಗಿ ಕೆರೆಯನ್ನು ಉಳಿಸಿದಳಂತೆ.[೧೨] ಮತ್ತೊಂದು ಹೇಳಿಕೆ ಪ್ರಕಾರ ಸ್ವರ್ಗವತಿ ಪಟ್ಟಣದ ದೊರೆ ವಿಕ್ರಮರಾಯನ ಮಗಳು ಶಾಂತವ್ವ ಕಟ್ಟಿಸಿದಳೆಂಬ ಪ್ರತೀತಿ. ಶಾಂತವ್ವ ಒಬ್ಬ ದೇವತೆಯೊಡನೆ ಅಕ್ರಮ ಸಂಬಂಧವಿಟ್ಟುಕೊಂಡಿದ್ದಕ್ಕಾಗಿ, ಆಕೆಯನ್ನು ಸೂಳೆ ಎಂದು ರಾಜ ವಿಕ್ರಮರಾಯ ದೂಷಿಸಿದನಂತೆ. ತಾನು ಮಾಡಿದ ಪಾಪ ಪರಿಹಾರಕ್ಕಾಗಿ ಶಾಂತವ್ವ ಈ ಕೆರೆಯನ್ನು ಕಟ್ಟಿಸಿದಳೆಂಬ ವದಂತಿಗಳಿವೆ.[೧೩]

ಕೆರೆ ಹೊನ್ನಮ್ಮ, ಬಾನಾವತಿ ದೊರೆ, ಕೆರೆಗೆ ಹಾರ, ಮಲಪುರಿ ಅಣಜಿ ಹೊನ್ನಮ್ಮ, ಒಡ್ಡರ ಭೋಯಿ ಇತ್ಯಾದಿ ಲಾವಣಿಗಳಲ್ಲಿ ಪ್ರಕೃತಿ ಪುರುಷರ ಸಂಘರ್ಷದ ನೆಲೆಗಳನ್ನೇ ಕಾಣುತ್ತವೆ. ಬಾಯಾರಿ ಬಂದ ಮೂಡಲ ದೇಶದ ಒಡ್ಡರಿಗೆ ಕೆರೆ ಹೊನ್ನಮ್ಮ ಮಜ್ಜಿಗೆ ನೀಡುತ್ತಾಳೆ. ಪ್ರತಿಯಾಗಿ ಒಡ್ಡರು ಕೆರೆ ಕಡಿದು ತಮ್ಮ ಋಣ ಮುಟ್ಟಿಸುವ ಮಾತನ್ನು ಹೇಳುತ್ತಾರೆ. ಹೊನ್ನಮ್ಮ ಆ ವಿಷಯವನ್ನು ಮಲ್ಲೇಗೌಡರ ಮುಂದೆ ಪ್ರಸ್ತಾಪಿಸುತ್ತಾಳೆ. ಗೌಡರು ಒಪ್ಪಿ ಅಡ್ಡ ಅರುಮಾರು, ಉದ್ದ ಒಂಬತ್ತುಮಾರು, ಹನ್ನೆರಡು ಆಳುದ್ದ ಕೆರೆಯನ್ನು ತೋಡುತ್ತಾರೆ. ಜಲ ಬರುವುದಿಲ್ಲ. ಒಡ್ಡನ ಹೆಂಡತಿಯನ್ನು ಕೆರೆ ಆಹುತಿ ಕೇಳುತ್ತದೆ. ಹೆದರಿದ ಒಡ್ಡ ಪರಾರಿಯಾಗುತ್ತಾನೆ. ಆಗ ಗೌಡರು ಜ್ಯೋತಿಷಿಯನ್ನು ಕೇಳಿದರು. ಗೌಡರ ಕಿರುಬೆರಳು ಆಹುತಿ ಕೊಟ್ಟರೆ ಕೆರೆ ತುಂಬಿಬರುತ್ತದೆ ಎನ್ನುವ ಉತ್ತರ ಬರುತ್ತದೆ. ಗೌಡರು ಇದಕ್ಕೆ ಒಪ್ಪುವುದಿಲ್ಲ. ಕೊನೆಗೆ ಕಿರುಬೆರಳಿನ ಬದಲಾಗಿ ಹಿರಿಸೊಸೆ ದೊಡ್ಡಹೊನ್ನಮ್ಮನನ್ನೇ ಕೆರೆಗೆ ಹಾರವಾಗಿಸುತ್ತಾರೆ. ಕೆರೆಯಲ್ಲಿ ನೀರು ಬರುತ್ತದೆ. ಬೆರಳು ನೀಡುವ ಹಾಗು ನಿರಾಕರಿಸುವ ಸಂಕಥನ ಕನ್ನಡ ಸಂಸ್ಕೃತಿಯಲ್ಲಿ ಅಂತಹ ಚರ್ಚೆಗೆ ಒಳಗಾಗಿಲ್ಲ. ಪುರುಷನ ಬೆರಳಗಿರುವ ಮಹತ್ವ ಅಂದರೆ ಕೊನೆಯ ಬೆರಳಾದ ಕಿರುಬೆರಳಿನ ಅಥವಾ ಹೆಬ್ಬೆರಳು ಇವುಗಳಿರುವ ಬೆಲೆ ಒಂದು ಹೆಣ್ಣಿಗಿಲ್ಲವೇ? ಅಷ್ಟು ನಿಕೃಷ್ಟವೇ ಹೆಣ್ಣು? ಹೆಚ್ಚಿನ ಸಂದರ್ಭದಲ್ಲಿ ತ್ಯಾಗ ಬಲಿದಾನಗಳ ಪ್ರತೀಕವಾಗಿಯೇ ಹೆಣ್ಣು ಕಂಡುಬರುತ್ತಾಳೆ.[೧೪] ಇಲ್ಲಿ ಬಲಿಯಾಗುವ ಹೆಣ್ಣುಗಳೆಲ್ಲವೂ ಪರರ ಮಕ್ಕಳು. ಅಂದರೆ ಸೊಸೆಯಂದಿರು. ಸ್ವತಃ ಗೌಡನ ಕುಡಿಗಳಲ್ಲ ಎಂಬುದು ಗಮನಾರ್ಹ.

ಗಂಗೆಗೆ ಕೊಡುವ ಬಲಿಹಾರಗಳಲ್ಲಿ ಹೆಣ್ಣನ್ನು ಹೆಚ್ಚಾಗಿ ಬಲಿ ಕೊಟ್ಟಿರುವ ಪ್ರಕರಣಗಳಿವೆ. ಇಲ್ಲಿ ಗಂಗಾದೇವಿಯೂ ಹೆಣ್ಣಾಗಿರುವುದರಿಂದ ಹೆಣ್ಣು ಹೆಣ್ಣಿನ ಬಲಿಯನ್ನು ಹೇಗೆ ಅಪೇಕ್ಷಿಸುತ್ತಾಳೆ ಎಂಬ ಪ್ರಶ್ನೆ ಹುಟ್ಟುತ್ತದೆ. ಈ ಸಮಸ್ಯೆಯನ್ನು ಬಿಡಿಸಿಕೊಳ್ಳುವ ಮೊದಲು ನೀರಿಗೆ ಹೆಣ್ಣನ್ನು ಬಲಿ ಅಥವಾ ಹಾರ ಕೊಟ್ಟಿರುವ ಅತಿ ಹೆಚ್ಚಿನ ಐತಿಹ್ಯಗಳು ಕೆರೆ ನಿರ್ಮಾಣಕ್ಕೆ ಸಂಬಂಧಿಸಿರುವುದನ್ನು ಗಮನಿಸಬಹುದು. ಒಂದು ಆದಿಮಶಕ್ತಿಯನ್ನು ಎದುರಿಸಲು ಮತ್ತೊಂದು ಆದಿಮ ಶಕ್ತಿಯಿಂದ ಮಾತ್ರ ಸಾಧ್ಯ ಎನ್ನುವ ನಂಬಿಕೆ ಇದೆ. ಗಂಗೆ ನೀರು ಮತ್ತು ಹೆಣ್ಣು ಶಕ್ತಿಯ ಸಮೀಕರಣವೂ ಹೌದು. ನೀರು ಮತ್ತು ಹೆಣ್ಣನ್ನು ಒಂದೇ ಮೂಲಶಕ್ತಿಯ ಎರಡು ರೂಪಗಳಾಗಿ ಚಿತ್ರಿಸುತ್ತದೆ. ಪ್ರಕೃತಿಯ ಎದುರು ಪದೇ ಪದೇ ಮಣ್ಣು ಮುಕ್ಕುತ್ತಿದ್ದರೂ, ಮನುಷ್ಯ ಪ್ರಕೃತಿಯನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳಬೇಕೆಂಬ ಪ್ರಯತ್ನ ಮುಂದುವರಿಕೆಯಾಗಿ ಹೆಣ್ಣಿನ ಬಲಿ ಆಚರಣೆ ಕಂಡುಬರುತ್ತದೆ. ಪ್ರಕೃತಿಯ ವಿರುದ್ಧ ಪ್ರಕೃತಿಯನ್ನು ಬಳಸುವ ತಂತ್ರಗಾರಿಕೆಯನ್ನು ಈ ಆಚರಣೆ ಧ್ವನಿಸುತ್ತದೆ. ಮತ್ತೊಂದು ಮುಖ್ಯ ಸಂಗತಿಯೆಂದರೆ ಹೆಣ್ಣನ್ನು ಕೊಲ್ಲದೆ ಜೀವಂತವಾಗಿ ಸಮಾಧಿ ಮಾಡಿರುವುದು ಕೆರೆ ಕಟ್ಟೆಗಳ ಕುರಿತಾಗಿ ಇರುವ ಐತಿಹ್ಯಗಳಲ್ಲಿ, ಜಾನಪದ ಕತೆಗಳಲ್ಲಿ ಉಲ್ಲೇಖವಾಗಿದೆ.[೧೫] ಹೆಣ್ಣನ್ನು ಕೊಲ್ಲದೆ ಏರಿಗೆ ಜೀವಂತವಾಗಿ ಸಮಾಧಿ ಮಾಡುವುದರ ಮೂಲಕ ಆ ಅಕ್ರಮ ತಡೆಯುವಲ್ಲಿ ಇನ್ನೊಂದು ಶಕ್ತಿಯನ್ನು ನೆಲೆಗೊಳಿಸುವ ಆಶಯ ಕಾಣುತ್ತದೆ. ಇಂದಿಗೂ ಕೆಲವು ಕೆರೆಯ

ಕೆಳಭಾಗದಲ್ಲಿ ಏರಿಗೆ ಹೊಂದಿಕೊಂಡಂತೆ ಶಕ್ತಿದೇವತೆಗಳ ಮತ್ತು ಮಾಸ್ತಿಕಲ್ಲುಗಳು ಇರುವುದು ಕಂಡುಬಂದಿದೆ.

ಕೆರೆ ಹತ್ತಿರ ಹೋಗಬಾರದು, ಮನುಷ್ಯನನ್ನು ಸೆಳೆದುಕೊಳ್ಳುತ್ತದೆ.
ಕೆರೆ ಏರಿಗೆ ಹೆಂಗಸಿನ ಬಲಿ ಕೊಡಬೇಕು.
ತುಂಬಿದ ಕೆರೆ ಕೂಗುತ್ತದೆ.

ಮುಂತಾದ ಕೆರೆ ನೀರನ್ನು ಕುರಿತು ಜನಪದರಲ್ಲಿ ಸಿಗುವ ನಂಬಿಕೆಗಳು ಈ ವಿಚಾರದ ಅರಿವನ್ನು ಹೆಚ್ಚಿಸಿವೆ.

ಮೂರು ಸಾವಿರ ವಡ್ಡರ ಕರ್ಸಿ
ನಾಲ್ಕು ಸಾವಿರ ಕುಡಗೋಲ ತರ್ಸಿ
ಕಲ್ಲು ಕಲ್ಲಿಗೂ ಕುರಿಯ ಕಡಿಸಯ್ಯೊ...
ನಾ ನಿಲ್ಲುವಳಲ್ಲ... ನಾ ನಿಲ್ಲುವಳಲ್ಲ...

ಈ ಹಾಡಿನ ಸಾಲುಗಳು ಮನುಷ್ಯನ ಈ ಎಲ್ಲ ಪ್ರಯತ್ನಗಳ ನಿಷ್ಫಲತೆಯನ್ನು ಸಾರುವ ಗಂಗೆಯ ಬಗೆಗಿನ ವಿಚಾರವನ್ನು ತಿಳಿಸುತ್ತವೆ.[೧೬]

ಹಾಸನ ಜಿಲ್ಲೆಯ ಕೆರೆ ಪರಿಸರದ ಸ್ಥಳ ಮತ್ತು ದೇವರುಗಳಿಗೆ ಸಂಬಂಧಿಸಿದಂತೆ ವಿವಿಧ ಬಗೆಯ ಐತಿಹ್ಯಗಳಿವೆ. ಇವುಗಳ ಸಹಾಯದಿಂದ ಕೆರೆಯ ಸಾಂಸ್ಕೃತಿಕ ಇತಿಹಾಸವನ್ನು ನಿರ್ಧರಿಸಬಹುದಾಗಿದೆ. ಕೆರೆಗಳು ತುಂಬಿ ಕೋಡಿ ಬಿದ್ದಾಗ ನೀರ್ಗಂಟಿಗಳು ಮತ್ತು ಊರಿನ ಜನಪದರು ಸೇರಿ ಗಂಗಮ್ಮನ ಪೂಜೆ ಮಾಡಿ ತೂಬುಗಳನ್ನು ಎತ್ತುತ್ತಿದ್ದರು. ಕೆಲವು ಕೆರೆಗಳ ತೂಬುಗಳಿಗೆ ಮಾತ್ರ ಪ್ರಾಣಿಬಲಿ ಕೊಡುವ ಪದ್ಧತಿ ಇತ್ತು. ಜಿಲ್ಲೆಯ ಅನೇಕ ಕೆರೆಗಳಿಗೆ ನರಬಲಿಯಾದುದರ ಬಗೆಗೆ ಐತಿಹ್ಯಗಳಿರುವುದು ಕಂಡುಬಂದಿವೆ. ಹಾಗೆಯೇ ಕೆರೆ ಸಮೀಪದಲ್ಲಿರುವ ದೇವಸ್ಥಾನಗಳನ್ನು ಕುರಿತು ಅಲ್ಲಿಯ ಜನರು ವಿವಿಧ ವದಂತಿಗಳನ್ನು ಹೇಳಿದ್ದಾರೆ. ಪಾತಿವ್ರತ್ಯ ಕಾರಣಕ್ಕಾಗಿ ಅಗ್ನಿಕುಂಡ ಪ್ರವೇಶಿಸಿದ ಮಹಾಸತಿಯರ ಕಥೆಗಳು ಬಹಳಷ್ಟಿವೆ. ಇವುಗಳ ಕುರುಹಾಗಿ ಮಾಸ್ತಿಕಲ್ಲುಗಳು ಸಿಗುತ್ತವೆ. ಮಳೆಗಾಲದ ಸಂದರ್ಭದಲ್ಲಿ ಕೆರೆ ತುಂಬಿ ಏರಿ ಅಥವಾ ಕೋಡಿ ಒಡೆದುಹೋದ ಹಿನ್ನೆಲೆಯಲ್ಲಿ ನೀರ್ಗಂಟಿ ಆತ್ಮಾರ್ಪಣೆ ಮಾಡಿಕೊಂಡಿರುವ ಐತಿಹ್ಯಗಳು ಕರ್ನಾಟಕದಾದ್ಯಂತ ಅನೇಕ ಕೆರೆಗಳಲ್ಲಿ ಹರಡಿವೆ.

ಜಿಲ್ಲೆಯ ಶಾಂತಿಗ್ರಾಮ ಹೋಬಳಿಯಲ್ಲಿ ಅಂಬುಗ ಕೆರೆ ಇದೆ. ಅದರ ಏರಿಯ ಮೇಲೆ ರಂಬಮ್ಮ ದೇವಸ್ಥಾನವಿದೆ. ಇದಕ್ಕೆ ಸಂಬಂಧಿಸಿದಂತೆ ಐತಿಹ್ಯವಿದೆ. ಹಾಗಲಬಾವಿಯಿಂದ ಗುಡುಗನಹಳ್ಳಿಗೆ ಒಬ್ಬ ಹೆಣ್ಣುಮಗಳನ್ನು ಕೊಟ್ಟು ವಿವಾಹ ಮಾಡಿದ್ದರು. ಗುಡುಗನಹಳ್ಳಿಯಲ್ಲಿ ಮಾವ ಕೆರೆಯನ್ನು ಕಟ್ಟಿಸುತ್ತಿದ್ದ. ಎಷ್ಟು ಕಟ್ಟಿದರೂ ಏರಿ ನಿಲ್ಲಲಿಲ್ಲವಂತೆ ಜೋಯಿಸರನ್ನು ಕರೆಸಿ, ಶಾಸ್ತ್ರ ಕೇಳಿದಾಗ

ಹೆಣ್ಣೊಂದನ್ನು ಬಲಿ ಕೊಡಬೇಕು ಎಂದು ಹೇಳಿದಂತೆ ಇದಕ್ಕೆ ದಿಕ್ಕೆಟ್ಟ ಮಾವ ಊಟ ನಿದ್ರೆ, ಅನ್ನ, ನೀರು ಬಿಟ್ಟು ಮಲಗಿಕೊಂಡನಂತೆ ಈ ವಿಚಾರ ಸೊಸೆ ರಂಬಮ್ಮನಿಗೆ ತಿಳಿಯಿತು. ಮಾವನನ್ನು ಸಮಾಧಾನಪಡಿಸಿ ಸುತ್ತಲಿನ ಏಳೂರು ಜನಗಳಿಗೆ ಒಳ್ಳೆಯದಾಗೋದಾದರೆ ನಾನು ಹೋಗುತ್ತೇನೆ. ನನ್ನನ್ನೇ ಬಲಿ ಕೊಡಿ ಎಂದಳು. ಗಂಡ ಘಟ್ಟಕ್ಕೆ ಹೋಗಿದ್ದ. ಅವನಿಗೂ ತಿಳಿಸದೆ ಸುತ್ತಮುತ್ತಲಿನ ಏಳೂರಿಗೂ ಡಂಗುರ ಬಾರಿಸಿ ಕೆರೆಗೆ ರಂಬಮ್ಮನನ್ನು ಬಲಿ ಕೊಡಲಾಯಿತು. ರಂಬಮ್ಮ ಕೆರೆಯಲ್ಲಿ ಮುಳುಗಿದ ಜಾಗದಲ್ಲಿ ಈಗಲೂ ಕಲ್ಲುಗಳು ಕಾಣಿಸುತ್ತವೆ. ಅಲ್ಲದೆ ಕೆರೆಯ ಒಳಭಾಗದಲ್ಲಿ ದೇವಾಲಯವಿದ್ದು ಅದನ್ನು ಪೂಜೆ ಮಾಡಲು ರಂಬಮ್ಮ ಹೋಗುವಾಗ ನೀರು ಸೀಳಿದ ಹಾಗೆ ದಾರಿ ಕಾಣುತ್ತಿತ್ತು. ಇಂದು ದೇವಾಲಯ ಬಿದ್ದು ಹೋಗಿ ಅವಶೇಷಗಳು ಮಾತ್ರ ಇರುವುದಾಗಿ ಸ್ಥಳೀಯರು ತಿಳಿಸುತ್ತಾರೆ.

ರಂಬಮ್ಮನಿಗೆ ಸಂಬಂಧಿಸಿದಂತೆ ಮತ್ತೊಂದು ಪ್ರತೀತಿ ಇದೆ. ವ್ಯಾಪಾರಿಗಳು ಅಂಬುಗ ಕೆರೆ ಏರಿಯ ಮೇಲೆ ವ್ಯಾಪಾರಕ್ಕೆ ಹೋಗುತ್ತಿದ್ದರು. ವ್ಯಾಪಾರಕ್ಕೆ ಹೋಗುವ ಮೊದಲು ರಂಬಮ್ಮನಿಗೆ ವ್ಯಾಪಾರದಲ್ಲಿ ಲಾಭ ಬಂದರೆ ಕರ್ಪೂರ, ಊದುಬತ್ತಿ ತಂದು ಪೂಜೆ ಮಾಡುವುದಾಗಿ ಹರಕೆ ಮಾಡಿಕೊಂಡು ಹೋಗುತ್ತಿದ್ದರು. ಲಾಭ ಬಂದರೆ ಅದೇ ರೀತಿ ನಡೆದುಕೊಳ್ಳುತ್ತಿದ್ದರಂತೆ. ರಂಬಮ್ಮ ಕೆಲವು ವ್ಯಾಪಾರಿಗಳ ಹತ್ತಿರ ಮಾತನಾಡುತಿರುವುದಾಗಿ ಹೇಳುತ್ತಾರೆ. ಒಮ್ಮೆ ಶುಕ್ರವಾರ ಸಂತೆ ಮುಗಿಸಿಕೊಂಡು ಪಾನಮತ್ತರಾಗಿ ಕುಡಿದ ಅಮಲಿನಲ್ಲಿ ನಾಲ್ಕು ಜನ ವ್ಯಾಪಾರಿಗಳು ಏರಿಯ ಮೇಲೆ ಹೋಗುತ್ತಿದ್ದಾಗ 'ರಂಬೆ ನಿನ್ ಸೊಲ್ಲು ಅಡಗಲಿಲ್ವ' ಎಂದರಂತೆ. ಅವತ್ತಿನಿಂದ ರಂಬಮ್ಮ ಮಾತನಾಡುವುದನ್ನು ನಿಲ್ಲಿಸಿ ಆ ವ್ಯಾಪಾರಿಗಳಿಗೆ ನೀವು ಇಲ್ಲಿಯೇ ಈಚಲ ಮರವಾಗಿ ಹೋಗಿ ಎಂದು ಶಾಪ ಕೊಟ್ಟಳಂತೆ. ಅವರು ನಾಲ್ಕು ಜೋಡಿ ಈಚಲ ಮರವಾದರೆಂದು ಸ್ಥಳೀಯರು ಅಲ್ಲಿರುವ ಈಚಲ ಮರಗಳನ್ನು ತೋರಿಸುತ್ತಾರೆ.[೧೭]

ಅರಸೀಕೆರೆ ಹೋಬಳಿಯಲ್ಲಿ ಬರುವ ಕೆಲ್ಲಂಗೆರೆ ಕೆರೆಗೆ ಸಂಬಂಧಿಸಿದಂತೆ ಇರುವ ಐತಿಹ್ಯವು ವಿಶೇಷವೆನಿಸುತ್ತದೆ. ಇಲ್ಲಿನ ಕೆರೆಯಲ್ಲಿ ನೀರು ನಿಲ್ಲದೆ ಒಡೆದುಹೋಗುತ್ತಿತ್ತು. ಒಂದು ದಿನ ರಾಜನಿಗೆ ಕೆರೆಯು ತನ್ನ ಕನಸಿನಲ್ಲಿ ನರಬಲಿ ಕೊಡುವಂತೆ ಕೇಳಿತು. ರಾಜ ಕೆರೆಗೆ ಯಾರನ್ನು ಬಲಿ ಕೊಡಬೇಕೆಂದು ಯೋಚಿಸುತ್ತಿರುವಾಗಲೆ ಗಂಗಮ್ಮ ಮತ್ತು ಆಕೆಯ ಗಂಡ ಇಬ್ಬರು ಕಾಶಿಯಿಂದ ಬಂದರು. ಈ ದಂಪತಿಗಳಿಗೆ ಏಳು ಜನ ಮಕ್ಕಳಿದ್ದರು. ಅವರಲ್ಲಿ ಕೊನೆಯ ಮಗನನ್ನು ನರಬಲಿ ಕೊಡುವಂತೆ ರಾಜನು ಕೇಳಿದನು. ಇದಕ್ಕೆ ದಂಪತಿಗಳು ನರಬಲಿ ಕೊಡಲು ಒಪ್ಪಿದರು. ರಾಜ ಈ ದಂಪತಿಗಳ ಮಗನನ್ನು ಕೆರೆಗೆ ಬಲಿ ಕೊಟ್ಟನು. ಅಂದಿನಿಂದ ಕೆರೆ ಒಡೆಯುವುದು ನಿಂತು ಹೋಯಿತು. ಅನಂತರ ಗಂಗಮ್ಮನ ಗಂಡ ಉಳಿದ ಆರು ಜನ ಮಕ್ಕಳೊಂದಿಗೆ ಕಾಶಿಗೆ ಹೋದನು. ಗಂಗಮ್ಮ ಮಾತ್ರ ತನ್ನ ಏಳನೇ ಮಗನಿಗಾಗಿ ಏರಿಯ ಮಧ್ಯದಲ್ಲಿ ನೆಲೆಸಿದಳು.

ಆದ್ದರಿಂದ ಏರಿಯ ಮಧ್ಯದಲ್ಲಿರುವ ಗುಡಿಯನ್ನು ಏಳುಮಕ್ಕಳ ಗಂಗಮ್ಮನ ಗುಡಿಯೆಂದು ಕರೆಯುತ್ತಾರೆ.[೧೮] ಸಾಮಾನ್ಯವಾಗಿ ಕೆರೆಗಳಿಗೆ ಸ್ತ್ರೀಯರನ್ನು ಬಲಿ ಕೊಟ್ಟಿರುವ ಐತಿಹ್ಯಗಳೇ ಜಾಸ್ತಿ. ಈ ಐತಿಹ್ಯದಲ್ಲಿ ಊರಿನ ಹಿತಕ್ಕಾಗಿ ಬೇರೆ ಊರಿನಿಂದ ಬಂದ ದಂಪತಿಗಳ ಮಗನನ್ನು ಬಲಿ ಕೊಟ್ಟಿರುವುದು ರಾಜನ ಸ್ವಾರ್ಥವನ್ನು ತಿಳಿಸುತ್ತದೆ. ಇಲ್ಲಿ ನರಬಲಿ ಮುಖ್ಯವಾಗಿತ್ತೇ ಹೊರತು ಸ್ತ್ರೀ ಪುರುಷ ಎನ್ನುವ ಲಿಂಗತಾರತಮ್ಯವಲ್ಲ ಎಂಬುದನ್ನು ಅರಿಯಲಾಗಿದೆ.

ಹಾಸನ ತಾಲೂಕು ದುದ್ದ ಹೋಬಳಿಯ ಬಸವಾಘಟ್ಟ ಗ್ರಾಮದ ಹಿರಿಕೆರೆಯ ಬಗ್ಗೆಯೂ ಒಂದು ಐತಿಹ್ಯವಿದೆ. ಈ ಕೆರೆಯು ತುಂಬಿ ಕೋಡಿ ಬಿದ್ದಾಗ, ಏರಿಯು ಒಡೆದುಹೋಯಿತಂತೆ. ಗ್ರಾಮದ ಜನರು ಎಷ್ಟು ಕಟ್ಟಿದರೂ ಏರಿ ನಿಲ್ಲಲಿಲ್ಲವಂತೆ ಕೆರೆಯು ಗರ್ಭಿಣಿ ಹೆಂಗಸರನ್ನು ಬಲಿ ಕೊಡುವಂತೆ ಬೇಡಿದಾಗ, ಊರಿನ ಜನರೆಲ್ಲಾ ಸೇರಿ ಮಾತು ಬಾರದ ಒಬ್ಬ ಮೂಗಿ ಗರ್ಭಿಣಿ ಹೆಣ್ಣನ್ನು ಕೆರೆಗೆ ಬಲಿ ಕೊಟ್ಟರಂತೆ. ಇದಕ್ಕೆ ಸಾಕ್ಷಿಯಂತೆ ಕೆರೆ ಮಧ್ಯದಲ್ಲಿರುವ ಕಲ್ಲನ್ನು ತೋರಿಸುತ್ತಾರೆ.[೧೯] ಈ ದಿನಗಳಲ್ಲಿ ಕೆರೆಯು ಕೃಷಿಗೆ ಬಳಕೆಯಾಗುತ್ತಿದ್ದರೂ ಕೆರೆಯೇ ಕಾಣದಂತೆ ಗಿಡಗಳು ಬೆಳೆದು ಹೂಳು ತುಂಬಿದೆ. ಇಲ್ಲಿ ಗರ್ಭಿಣಿ ಸ್ತ್ರೀಯನ್ನು ಕೆರೆಗೆ ಹಾರವಾಗಿ ನೀಡಿರುವುದು ಮನ ಸೆಳೆಯುವಂತಿದೆ. ಸಾಂಪ್ರದಾಯಿಕವಾಗಿ ನೋಡಿದಾಗ ಗರ್ಭಿಣಿ ಹೆಂಗಸು ಕುಟುಂಬದ ಸಮೃದ್ಧಿ ಎನ್ನುವ ನಂಬಿಕೆ ಜನಪದರಲ್ಲಿದೆ. ಹಾಗಾಗಿ ಸಾರ್ವಜನಿಕ ಉಪಯುಕ್ತವಾಗುವ ಕೆರೆಗೆ ಹಾರವಾಗಿ ಗರ್ಭಿಣಿ ಸ್ತ್ರೀಯನ್ನು ಕೊಟ್ಟರೆ ಊರಿಗೆ ಒಳಿತಾಗುವುದೆಂಬ ಭಾವನೆ ಇದ್ದಿರಬಹುದು.

ಬೇಲೂರು ಕೆರೆಗೆ ಜನಪದ ಐತಿಹ್ಯದ ಪ್ರಕಾರ ಒಬ್ಬ ಹೆಣ್ಣುಮಗಳು ಬಲಿಯಾದುದಾಗಿ ಹೇಳುತ್ತಾರೆ. ಕೆರೆಯ ಏರಿಯ ಮಧ್ಯದಲ್ಲಿ ಬಿಷ್ಟಮ್ಮನ ಒಂದು ಚಿಕ್ಕ ಗುಡಿ ಇದೆ. ಈ ಗುಡಿ ಒಳಭಾಗದಲ್ಲಿ ಯಾವುದೇ ಶಿಲ್ಪಗಳಿಲ್ಲದೆ ಗದ್ದುಗೆ ಮಾತ್ರ ಇದೆ. ಅದನ್ನು ಕೆರೆಗೆ ಬಲಿಯಾದ ಹೊನ್ನಮ್ಮನ ಗದ್ದುಗೆ ಎಂದು ಹೇಳುತ್ತಾರೆ. ಹೊನ್ನಮ್ಮನ ತವರುಮನೆ ಬೇಲೂರಿನ ಪಶ್ಚಿಮಕ್ಕಿರುವ ಗೊಟ್ಟರಹಳ್ಳಿ. ಈಕೆಗೆ ಐದು ಜನ ಸಹೋದರರು. ಅವಳನ್ನು ಬಿಟ್ಟರವಳ್ಳಿಯ ಗೌಡನ ಮಗನಿಗೆ ಕೊಟ್ಟು ವಿವಾಹ ಮಾಡಿದರು. ಹೊನ್ನಮ್ಮನ ಮಾವ ಮಲ್ಲೇಗೌಡ ರಾಜನ ಆದೇಶದಂತೆ ಕೆರೆ ಕಟ್ಟಿಸುತ್ತಿದ್ದನು. ಈ ಕಾರ್ಯಕ್ಕಾಗಿ ವಡ್ಡಗೌಡನೊಂದಿಗೆ ಚರ್ಚಿಸಿ ೧೨ ವರಹಗಳ ಗುತ್ತಿಗೆಗೆ ನೀಡಿದನು. ವಡ್ಡರು ಕೆರೆ ಕಟ್ಟಲು ಪ್ರಾರಂಭಿಸಿದಾಗ ಕಲ್ಲು ಇಟ್ಟರೆ ಕಲ್ಲು ಜಾರಿ ಬೀಳುವುದು. ಮಣ್ಣು ಇಟ್ಟರೆ ಮಣ್ಣು ಜಾರಿ ಬೀಳುವುದು. ಎಷ್ಟು ಪ್ರಯತ್ನಿಸಿದರೂ ಕೆರೆ ಅಡಿಪಾಯ ಹಾಕಲು ಸಾಧ್ಯವಾಗಲಿಲ್ಲ. ವಡ್ಡಗೌಡ ಮಲ್ಲೇಗೌಡರಿಗೆ ಕೆರೆ ನಿಮ್ಮ ಕಿರುಬೆರಳನ್ನು ಬೇಡಿತು ಎನ್ನುತ್ತಾನೆ. ಅದಕ್ಕೆ ಗೌಡ

"ಕಿರು ಬೆಟ್ಟ ಬೇಡಿದರೆ ಸುವ್ವಲಾಲಿ
ಮುಟ್ಟಗಂಡ ಹಾಕುತೀನಿ ಸುವ್ವಲಾಲಿ" ಎಂದು ಹೇಳುತ್ತಾರೆ.

ಮತ್ತೊಮ್ಮೆ ವಡ್ಡಗೌಡ ಗೌಡರ ಬಳಿ ಬಂದು ನಿಮ್ಮ ಹೆಂಡತಿಯನ್ನು ಬಲಿ ಕೊಡುವಂತೆ ಕೇಳುವುದಾಗಿ ಹೇಳುತ್ತಾನೆ. ಇದಕ್ಕೆ ಗೌಡ ಯಾವುದೇ ಉತ್ತರ ನೀಡುವುದಿಲ್ಲ. ಪುನಃ ಬಂದು ನಿಮ್ಮ ಸೊಸೆಯನ್ನು ಕೇಳಿರುವುದಾಗಿ ತಿಳಿಸುತ್ತಾನೆ. "ಮಗ ಸತ್ತರೆ ಮನೆಹಾಳು, ಸೊಸೆ ಸತ್ತರೆ ಸೋಬಾನ" ಎಂಬ ನಾಣ್ನುಡಿಯಂತೆ ಗೌಡ ಒಪ್ಪಿಕೊಳ್ಳುತ್ತಾನೆ. ಈ ವಿಷಯವನ್ನು ವಡ್ಡರು ಹೊನ್ನಮ್ಮನಿಗೆ ತಿಳಿಸಿದಾಗ

"ನನ್ನನೇ ಬೇಡಿದರೆ ಸುವ್ವಲಾಲಿ

ನಾನೇನೇ ಹೋಗುತ್ತೀನಿ ಸುವ್ವಲಾಲಿ"

ಎಂದು ಸಾರ್ವಜನಿಕವಾಗಿ ಉಪಯುಕ್ತವಾಗುವ ಕೆರೆಗೆ ಬಲಿಯಾಗುವುದಾಗಿ ಸಂತೋಷದಿಂದ ಒಪ್ಪಿಕೊಳ್ಳುತ್ತಾಳೆ. ಗಂಡನು ವ್ಯಾಪಾರಕ್ಕೆಂದು ಘಟ್ಟಕ್ಕೆ ಹೋಗಿರುತ್ತಾನೆ. ಹೊನ್ನಮ್ಮನು ಕೊನೆಯದಾಗಿ ತನ್ನ ತವರುಮನೆಗೆ ಹೋಗಿ ಬರುವುದಾಗಿ ಮಾವನಿಗೆ ತಿಳಿಸುತ್ತಾಳೆ. ತವರುಮನೆಗೆ ಹೋಗಿ ಅಣ್ಣಂದಿರಿಗೆ ಈ ವಿಷಯ ಹೇಳಿ ತನ್ನ ತಂಗಿಯನ್ನು ಗಂಡನಿಗೆ ಕೊಟ್ಟು ವಿವಾಹ ಮಾಡಿ ಕೊಡುವಂತೆ ಕೇಳಿಕೊಳ್ಳುತ್ತಾಳೆ. ನಂತರ ಹಿಂದಿರುಗಿ ಬಿಟ್ಟರವಳ್ಳಿಗೆ ಬರುತ್ತಾಳೆ. ಅಷ್ಟರಲ್ಲಿ ಮಾವನ ಮನೆಯವರು ಗಂಗೆ ಪೂಜೆಗೆ ಸಿದ್ಧತೆ ಮಾಡಿಕೊಂಡಿರುತ್ತಾರೆ. ಹೊನ್ನಮ್ಮ ಕೆರೆಗೆ ಗಂಗೆ ಪೂಜೆ ಮಾಡಿಕೊಂಡು ಮೇಲೆರುವಷ್ಟರಲ್ಲಿ ನೀರು ಉಕ್ಕಿ ಬಂದು ಕೆರೆಯಲ್ಲಿ ಮುಳುಗಿಹೋಗುತ್ತಾಳೆ. ಹೊನ್ನಮ್ಮ ಕೆರೆಗೆ ಆಹುತಿಯಾದ ಬಳಿಕ ಆಕೆಯ ಅತ್ತೆ ಮಗನನ್ನು ಹೊಡೆದು ಹೊರ ಹಾಕುತ್ತಾಳೆ. ಅನಾಥವಾದ ಮಗುವು ಹೊನ್ನಮ್ಮನ ತವರುಮನೆಗೆ ಹೋಗುತ್ತದೆ. ಇದು ಹೊನ್ನಮ್ಮನ ಮಗು ಎಂದು ಅರಿಯದೆ ದನ ಕಾಯಲು ಹಾಕುತ್ತಾರೆ. ವ್ಯಾಪಾರಕ್ಕೆ ಹೋಗಿದ್ದ ಗಂಡ ವಾಪಸ್ಸು ಬಂದು ಮನೆಯಲ್ಲಿ ಹೆಂಡತಿ ಮತ್ತು ಮಗನ ಬಗ್ಗೆ ವಿಚಾರಿಸುತ್ತಾನೆ. ಅವರು ತವರುಮನೆಗೆ ಹೋಗಿರುವುದಾಗಿ ಹೇಳುತ್ತಾರೆ. ಆತ ನಿರಾಶನಾಗಿ ಊರಬಾಗಿಲ ಕಟ್ಟೆಯ ಬಳಿ ಕುಳಿತ ಹುಡುಗರಿಗೆ ತಾನು ತಂದಿದ್ದ ಕೊಬ್ಬರಿ ಕಡಲೆ ಹಂಚುತ್ತಾನೆ. ಅಲ್ಲಿ ದನ ಕಾಯುತ್ತಿದ್ದ ಹೊನ್ನಮ್ಮನ ಮಗ ನನಗಿಷ್ಟು ಕೊಡಿ ಎಂದು ಕೈಯೊಡ್ಡುತ್ತಾನೆ. ಬಾಲಕನ ಮುಖ ಹೊನ್ನಮ್ಮನ ಹೋಲಿಕೆ ಇತ್ತು. ಈತ ನನ್ನ ಮಗನೆಂದು ಗುರುತಿಸಿ ಕರೆದುಕೊಂಡು ಹೋಗುತ್ತಾನೆ. ಕೆರೆಯ ಏರಿಯ ಮೇಲೆ ಬಂದಾಗ ಹೊನ್ನಮ್ಮ ಪ್ರತ್ಯಕ್ಷಳಾಗಿ ಮಗನಿಗೆ ಪ್ರೀತಿ ವಾತ್ಸಲ್ಯ ತೋರಿಸಿ ಗಂಡನಿಗೆ ತನ್ನ ತಂಗಿಯನ್ನು ಮದುವೆಯಾಗುವಂತೆ ಕೇಳಿಕೊಳ್ಳುತ್ತಾಳೆ. ಹಾಗೆಯೇ ಪ್ರತಿ ವರ್ಷ ತನ್ನ ಜಾತ್ರೆ ನಡೆಯಬೇಕೆಂಬ ಬೇಡಿಕೆ ಇಡುತ್ತಾಳೆ. ವಾಸ್ತವಿಕವಾಗಿ ಬಿಟ್ಟರವಳ್ಳಿಯಲ್ಲಿರುವ ಒಂದು ವೀರಗಲ್ಲಿಗೆ ಈ ರೀತಿಯ ಕಥೆ ಇರುವುದನ್ನು ಗಮನಿಸಬಹುದು. ಈ ಕಥೆಗೆ ಪೂರಕವೆಂಬಂತೆ ಇಂದಿಗೂ ಗೊಟ್ಟರವಳ್ಳಿಯವರು ತಮ್ಮ ಹೆಣ್ಣುಮಕ್ಕಳನ್ನು ಬಿಟ್ಟರವಳ್ಳಿಗೆ ಕೊಟ್ಟು ವಿವಾಹ ಮಾಡುವುದಿಲ್ಲ. ಈ ಊರಿಗೆ ಕೊಟ್ಟರೆ ಹೆಣ್ಣುಮಕ್ಕಳಿಗೆ ಏಳಿಗೆಯಿಲ್ಲವೆಂಬ ನಂಬಿಕೆ ಇದೆ.[೨೦]

ಕೆರೆಗೆ ಸಂಬಂಧಿಸಿದಂತೆ ಇನ್ನೂ ಕೆಲವು ಸಾಹಿತ್ಯಕ ಮೌಖಿಕ ಇತಿಹಾಸಗಳಿವೆ. ಸ್ಕಂದ ಪುರಾಣದಲ್ಲಿರುವಂತೆ, ಒಮ್ಮೆ ಗರುಡ ಸ್ವರ್ಗದಿಂದ ಆಕಾಶಮಾರ್ಗವಾಗಿ ಅಮೃತ ಕಲಶವನ್ನು ಎತ್ತಿಕೊಂಡು ಹೋಗುವಾಗ ಇದರಿಂದ ಒಂದು ಹನಿ ನೀರು ಕೆಳಗೆ ಬಿದ್ದು ಕೆರೆ ಉತ್ಪತ್ತಿಯಾಯಿತು ಎಂಬ ಕಥೆ ಇದೆ. ಆದ್ದರಿಂದ ಈ ಕೆರೆಯ ಒಂದು ಭಾಗವನ್ನು ಅಮೃತಬಿಂದು ಸರೋವರ ಎಂದು ಹೆಸರಿಸುತ್ತಾರೆ. ಮತ್ತೊಂದು ಹೇಳಿಕೆಯ ಪ್ರಕಾರ ಕೆರೆಯಲ್ಲಿ ಶಂಖಗಳು ಉತ್ಪತ್ತಿಯಾಗುತ್ತವೆ. ಎಂಬ ನಂಬಿಕೆ ಇದೆ. ಪರಶುರಾಮನು ಪಶ್ಚಿಮ ಕರಾವಳಿಯಲ್ಲಿ ಸಮುದ್ರದಿಂದ ಸ್ವಲ್ಪ ಭಾಗವನ್ನು ಪಡೆದು ಭೂಮಿಯಾಗಿ ಮಾಡಿದನು. ಈ ಭಾಗಕ್ಕೆ ಪರ್ಯಾಯ ರೂಪವಾಗಿ ಸಮುದ್ರ ರಾಜನಿಗೆ ಭಾಗಶಃ ಈ ಕೆರೆಯಲ್ಲಿ ನೆಲೆಸಲು ಅವಕಾಶ ನೀಡಿದನು. ಈ ಕಾರಣದಿಂದ ಕೆರೆಯಲ್ಲಿ ಶಂಖಗಳು ಹುಟ್ಟುತ್ತವೆ ಎಂಬ ಕಥೆಯು ಇದೆ. ಹಾಗೆಯೇ ಕೆರೆಯ ಒಂದು ಭಾಗವನ್ನು 'ಶಂಖತೀರ್ಥ' ಎಂತಲೂ ಕರೆಯುತ್ತಾರೆ. ಅದೇ ರೀತಿ 'ನರಸಿಂಹ ತೀರ್ಥ' ಎಂತಲೂ ಗುರುತಿಸುತ್ತಾರೆ. ಕೆರೆಯ ಉತ್ತರ ಬದಿಯಲ್ಲಿರುವ ಅಮೃತೇಶ್ವರ ದೇವಾಲಯದ ದಕ್ಷಿಣಬದಿಯ ಕೆರೆಯ ನೀರಿನಲ್ಲಿ ಉಗ್ರನರಸಿಂಹ ಶಿಲ್ಪವು ಬಿದ್ದಿರುವುದರಿಂದ ಆ ಸ್ಥಳವನ್ನು 'ನೃಸಿಂಹ ತೀರ್ಥ' ಎಂದು ಹೆಸರಿಸಬಹುದು.[೨೧]

ಸಾಹಿತ್ಯಕವಾಗಿ ಬಿಷ್ಟಮ್ಮನ ಕೆರೆಯ ಪ್ರಸ್ತಾಪ ಪದ್ಮರಸನ ಪದ್ಮರಾಜ ಪುರಾಣದಲ್ಲಿ ದೊರೆಯುತ್ತದೆ. ಇದರ ಐದು ಮತ್ತು ಆರನೆಯ ಸಂಧಿಯಲ್ಲಿ ಕೆರೆ ಕಟ್ಟಿದ ಸಂದರ್ಭ ತುಂಬ ವಿಸ್ತಾರವಾಗಿ ಬಂದಿದೆ. ಕವಿ ಕೆರೆಯ ಪದ್ಮರಸನನ್ನು ಕೇಂದ್ರವಾಗಿಟ್ಟುಕೊಂಡು ಕಾವ್ಯವನ್ನು ರಚಿಸಿದ್ದಾನೆ. ಕೆರೆ ಕಟ್ಟಿಸುವ ಕಾಯಕದಿಂದ ಪದ್ಮರಸನಿಗೆ ಕೆರೆಯ ಎಂಬ ವಿಶೇಷಣ ಪ್ರಾಪ್ತವಾಗಿದೆ. ಪದ್ಮರಾಜ ಪುರಾಣದಲ್ಲಿ ನಿರೂಪಿತವಾಗಿರುವ ಕೆರೆಯ ಪ್ರಸಂಗದಲ್ಲಿ ನರಸಿಂಹ ಬಲ್ಲಾಳನು ತನ್ನ ಮಗ ಬಿಟ್ಟಿದೇವನ ಹೆಸರಿನಲ್ಲಿ ಈ ಕೆರೆ ಕಟ್ಟಿಸಿದನೆಂದು ತಿಳಿದುಬರುತ್ತದೆ. ವಿಷ್ಣುವರ್ಧನನ ಇನ್ನೊಂದು ಹೆಸರೇ ಬಿಟ್ಟಿದೇವ. ಹೊಯ್ಸಳ ನರಸಿಂಹ ಬಲ್ಲಾಳನು ದೋರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ.[೨೨] ಈತನ ಮಂತ್ರಿಗಳಲ್ಲಿ ಪದ್ಮರಸನೂ ಒಬ್ಬ. ಒಮ್ಮೆ ರಾಜನು ಓಲಗಗೊಟ್ಟು ಸಿಂಹಾಸನದಲ್ಲಿ ಉಪಸ್ಥಿತನಿದ್ದನು. ಮಂತ್ರಿ ಪದ್ಮರಸನು ಸಭೆಯಲ್ಲಿ ಕುಳಿತಿದ್ದನು. ಬೇಲೂರಿನ ಅಧಿಕಾರಿಯೊಬ್ಬ ಸಭೆಯಲ್ಲಿ ಈ ರೀತಿ ಭಿನ್ನವಿಸಿದ.

ಎಲೆ ನೃಪಶಿರೋಮಣಿಯೇ ನಿನ್ನ ರಾಜ್ಯಂ ಸಮು
ಜ್ವಲ ದೇವ ಮಾತೃಕ ನದಿ ಮಾತೃಕಂಗಳಿಂ
ಫಲಿಸಿರ್ಕುಮೆನ್ನ ಪುರಮೊಂದೆ ನದ್ಯಂಬುಪಾಲಿತ
ಮೆನಿಸಿದಾ ಕೃತ್ಯಕ್ಕೆ
ಸ್ಥಲಮತ್ತಪೂರ್ವಮೊಳನು ತಟಾಕಮಿಲ್ಲದ
ಕೊರ್ಲವಿನಿದೊಂದು ಕೆಱೆಯಂ ರಚಿಸಿಕೊಟ್ಟೊಡಿಂ

ಪಲವು ಮಾತಂ ನುಡಿದು ಫಲಮದೇಂ ಸಿರಿವೆಣ್ಣೆ
ನೆಲೆವನೆಯನಿಪೆನೆಂದನೆ.[೨೩]

ಎಂದು ಕೆರೆ ಕಟ್ಟಿಸಿಕೊಡುವಂತೆ ಕೇಳಿಕೊಳ್ಳುತ್ತಾನೆ. ರಾಜ ಸಮ್ಮತಿಸಿ ಪದ್ಮರಸನತ್ತ ನೋಟ ಬೀರಿ "ಮತ್ಸುನಪೆ ಸರಿಂದಮರ್ದು ನೀನೊಂದು ಕೆಱೆಯಂ ನೆಗಳ್ಚಿಸುವುದು" ಎಂದು ಹೇಳಿದ ಪದ್ಮರಸನು ಭಂಡಾರಕ್ಕೆ ಹೋಗಿ ಹನ್ನೆರಡು ಸಾವಿರ ಹೊಳೆವ ಹೊನ್ನುಗಳನ್ನು ಬೇಲೂರಿನ ಅಧಿಕಾರಿಗೆ ಕೊಡಲೆಂದು ತೆಗೆಯುವನು. ಅಷ್ಟರಲ್ಲಿ ಶಿವ ಪದ್ಮರಸನ ನಿಷ್ಠೆಯನ್ನು ಪರೀಕ್ಷಿಸುವುದಕ್ಕೆಂದು ವಿಟಜಂಗಮಾಕೃತಿಯನ್ನು ತಾಳಿ ಬಂದು "ನನ್ನ ಪ್ರಿಯತಮೆಯ ಮುನಿಸನ್ನು ನಿವಾರಿಸಬೇಕಾಗಿದೆ. ಈ ಹೊನ್ನುಗಳನ್ನು ಕೊಡು" ಎಂದು ಬೇಡಿದನು. ಜಂಗಮ ಕೇಳಿದಾಗ ಇಲ್ಲವೆನ್ನದೆ ಪದ್ಮರಸನು ಹನ್ನೆರಡು ಸಾವಿರ ಹೊನ್ನುಗಳನ್ನು ವಿಟಜಂಗಮ ರೂಪದಲ್ಲಿದ್ದ ಶಿವನಿಗೆ ನೀಡಿದನು. ಅದೇ ವೇಳೆಗೆ ಒಬ್ಬ ಸೇವಕ 'ನಿಮ್ಮನು ಕಾಣಲು ದೂರದಿಂದ ಭಕ್ತರು ಬಂದಿದ್ದಾರೆ' ಎಂದು ಕರೆದನು. ಕೂಡಲೇ ಪದ್ಮರಸನು ರಾಜನು ಹೇಳಿದ ಕೆಲಸವನ್ನು ಮರೆತು ಭಕ್ತನಿಗೆ ಸಂದರ್ಶನ ನೀಡಲು ಹೊರಟುಹೋದನು.[೨೪]

ಕೆಲವು ದಿನ ಕಳೆಯಿತು. ಒಂದು ದಿನ ನರಸಿಂಹ ಬಲ್ಲಾಳನ ಆಸ್ಥಾನದಲ್ಲಿದ್ದ ಪರವಾದಿಗಳು 'ಎಲೈ ಭೂಪಾಲ ಬೇಲೂರೊಳೊಂದು ನೀರಕಟ್ಟಿಸಲ್ವೇಳ್ದ ಕೆರೆಯಾದುದೇ?' ಎಂದು ಕೇಳುತ್ತಾರೆ. 'ಇಲ್ಲಿಯವರೆಗೂ ಆಗದೆ ಇರುತ್ತದೆಯೇ?' ಎಂದನು ರಾಜ. ಆಗ ಕರಣಿಕರು ಪದ್ಮರಸನು ವಿಟಜಂಗಮನಿಗೆ ಹೊನ್ನು ನೀಡಿದ ವಿಚಾರ ತಿಳಿಸಿದರು. ಈ ಮಾತನ್ನು ಕೇಳಿದ ಅರಸನು ಕೋಪದಿಂದ ಪದ್ಮರಸನನ್ನು ಕರೆತರಲು ಆಜ್ಞಾಪಿಸುತ್ತಾನೆ. ಪದ್ಮರಸನು ಬಂದು ತನ್ನ ಪೀಠದಲ್ಲಿ ಕುಳಿತುಕೊಳ್ಳುತ್ತಾನೆ. ಆಗ ಅರಸನು;

"...ಎಲೆ ನಿನ
ಗುದ್ರಕವೇಕನಿತು ಕಟ್ಬೊಡೆಯನಾನಿರಲೆ
ಛಿದ್ರವೃತ್ತಿಯೊಳೆನ್ನ ಕೋಶಧನಮಂ ಸೂಳೆಗಂಗೀವ ಪರಿಯದೆಂತೋ
ನಿನ್ನನೀಶ್ವರ ಭಕ್ತನೆಂದು ಸುವಿನೀತನೆಂ
ದುನ್ನತ ವಿವೇಕಿಯೆಂದತ್ಯ ಮಲಗುಣಿಯೆಂದು
ನನ್ನಿಯುಳ್ಳವನೆಂದು ಪರರೊಡವೆಗಳು ಪದಿರ್ಪತಿ ಶುದ್ಧನೆಂದು ನಂಬಿ
ಎನ್ನ ಸರ್ವಸ್ವಮಂ ನಿನಗೊಪ್ಪುಗೊಟ್ಟೆನಗೆ
ಚೆನ್ನಾಗಿ ಕಾಣಿಸಿದೆ...[೨೫]

ಎಂದು ಕೇಳುತ್ತಾನೆ. ಪದ್ಮರಸನು ಆ ಮಾತಿಗೆ ಪರವಾದಿಗಳ, ಚಾಡಿಕೋರರ ಎದೆ ಬಿರಿಯುವಂತೆ 'ದುರ್ಜನರ ದುರ್ವಿದಗ್ಧರ ದುರಾತ್ಮರ ಧರ್ಮವರ್ಜಿತರ ಮಾತುಗೇಳ್ದಿಂತು ದೂಷಿಸಿ ನೀನು

ಪಾರ್ಜಿಸಿದ ಪುಣ್ಯಮಂ ಕೆಡಿಸಿಕೊಳ್ವರೆ" ಎಂದು ನುಡಿದು, ಶಿವಭಕ್ತರಾದವರು ಬೇರೆಯವರ ಧನಕ್ಕೆಳಸುವವರಲ್ಲ. ಆ ಮಹೇಶ್ವರರ ಪಾದಸೇವಕನಾದ ನಾನು ನಿನ್ನ ವಿತ್ತದೊಳಗೆ ಇನ್ನಿತನ್ನಾದರೂ ಮುಟ್ಟುವೆನೆ? ಒಂದು ವೇಳೆ ಮುಟ್ಟಿದರೂ ಶಿವಭಕ್ತರು ಒಲಿವರೆ? ಅವರ ಧನವನ್ನು ಅವರಿಗೆ ಅರ್ಪಿಸಿದೆನು ಎಂದು ಧೈರ್ಯವಾಗಿ ನುಡಿಯುತ್ತಾನೆ. ಆಗ ಅರಸನು ಅವನ ಮಾತಿಗೆ ಒಡಂಬಟ್ಟು 'ನಿನ್ನ ಮಾತು ಸತ್ಯವಾದುದಾದರೆ ನನ್ನ ಕೆರೆ ಹೇಗೆ ಇರುವುದು ಎಂದು ರಾಜನು ಕೇಳಿದಾಗ' ಕುಹಕಿಗಳ ಕೆರೆಯ ಮಾತೇನು? ಗದ್ದೆಗಳಲ್ಲಿ ಬೆಳೆ ಅಂಕುರಿಸಿದೆ. ತೋಟದಲ್ಲಿ ಮರಗಳಿವೆ. ಆ ವೈಭವ ನೋಡಲು ದೊರೆಯನ್ನು ಆಹ್ವಾನಿಸಿದನು. ಅಲ್ಲಿ ಶರಣರಿಗೆ ನಮಸ್ಕರಿಸಿ ಅವರು ಆಶೀರ್ವಾದ ಪೂರ್ವಕವಾಗಿ ಕೊಟ್ಟ ವಿಭೂತಿಯನ್ನು ಕೈಯಲ್ಲಿ ತೆಗೆದುಕೊಂಡು ಶಿವನನ್ನು ಸ್ತುತಿಸುತ್ತಾ ಕೆರೆಯ ಆಕಾರದಲ್ಲಿ ಗೆರೆ ಎಳೆದ. ಆ ಕೂಡಲೇ ಪ್ರಳಯವಾಗುವಷ್ಟು ರಭಸದಲ್ಲಿ ನೀರು ಉಕ್ಕಿ ಹರಿಯಿತು. ಶರಣಸಮೂಹವು ಆನಂದದಿಂದ ಜಯಘೋಷ ಮಾಡುತ್ತದೆ. ಅಷ್ಟರಲ್ಲಿ;

'ಗುರುಕುಲಾಗ್ರಣಿಯೊಡನೆ ಸೆನಸುವರ್ಗಡೆ ನರಕ
ನರರಿವರೆಸುತ ಕೋಪದಿಂದ ಪಲ್ಮೊರೆದು ಹೂಂ
ಕರಿಸಿ ಝುಂಕಿಸುತುರ್ಭೀ ಬೆಳೆದಳೂ ಭೂಕಾಂತೆಯೆಂಬಂತೆ ಘುಡಿಘುಡಿಸುತ
ಸ್ಫುರಿದ ಕಲ್ಪಾಂತಕಾಲದ ಸಿಡಿಲ ಗರ್ಜನಮ
ನಿರದೆ ತಾಳ್ವಾರ್ಭಟಿಸುತೇರಿಯಾಗೆ ತೆರೆನೋಡು
ತರರೆ...'[೨೬]

ಅದರ ಆರ್ಭಟಕ್ಕೆ ರಾಜನಾದಿಯಾಗಿ ಎಲ್ಲರೂ ಮೂರ್ಛಿತರಾದರು. ಪದ್ಮರಸ ಕೆರೆಯ ನೀರನ್ನು ಅವರ ಮೇಲೆ ಸಿಂಚಿಸಿ ಎಬ್ಬಿಸಿದ. ರಾಜ ಆತನಿಗೆ ನಮಸ್ಕರಿಸಿದ. ಶಿವನ ಬಿಟ್ಟಿ ದುಡಿಮೆಯಿಂದ ಈ ಕೆರೆ ಕಟ್ಟಲಾಯಿತು. ಆದುದರಿಂದ ಬಿಟ್ಟಿಸಮುದ್ರವೆಂದೂ ಈ ಕೆರೆ ಕಟ್ಟಿದ ಪದ್ಮರಸನಿಗೆ ಕೆರೆಯ ಪದ್ಮರಸ ಎಂಬ ಹೆಸರು ಪ್ರಸಿದ್ಧವಾಯಿತೆಂದು ಕಾವ್ಯದಲ್ಲಿ ನಿರೂಪಿತವಾಗಿದೆ.

'ಅಸಮಾಕ್ಷನಿಂದ ಬಿಟ್ಟಿಗೆ ಕಟ್ಟಿಸಿದ ಕತದಿ
ನೆಸೆವುದೀ ಕೆಱೆಗೆ ಬಿಟ್ಟಿಸಮುದ್ರವೆಂಬ ಪೆಸ
ರೆಸಗಿದೀ ಮಹಿಮರಿಗೆ ಕೆಱೆಯ ಪದ್ಮರಸಾಖ್ಯ
ಮೆಸೆವುದಿನ್ನಿತ್ತಂಲೆನುತೆ
ಉಸುರ್ದೀ ತಟಾಕವ ಜಬಜಗಳೆನ್ನದೆ ಸಮಂ
ಜಸವಾಗಿ ನಿರ್ವಿಘ್ನದಿಂದರ್ಕೆನುತ್ತ ಪ
ರಸಿ ಪೊಗಳುತಿದೆ ನೃಪನದಕೆ ಹರ್ಷಿಸಿ ಪುರಕೆ ಚಿತ್ತವಿ
ಪುದಿನ್ನೆನುತ್ತೆ...'[೨೭]

ಬೇಲೂರಿನ ಉತ್ತರದಿಕ್ಕಿಗೆ ಈ ಕೆರೆ ಇದೆ. ಅದನ್ನು ಈ ದಿನಗಳಲ್ಲಿ 'ಬಿಷ್ಟಮ್ಮನ ಕೆರೆ' ಎಂದು ಕರೆಯುತ್ತಾರೆ. ಇದನ್ನು ವಿದ್ವಾಂಸರು 'ಪದ್ಮರಸ ಕಟ್ಟಿಸಿದ ಕೆರೆ' ಎಂದು ಹೆಸರಿಸುತ್ತಾರೆ. ನರಸಿಂಹ ಬಲ್ಲಾಳನು ತನ್ನ ಮಗ 'ಬಿಟ್ಟಿದೇವರಾಯನ' ಹೆಸರಿನಲ್ಲಿ ಕೆರೆ ಕಟ್ಟಿಸಬೇಕೆಂದು ಹೇಳಿದ್ದನು. 'ಬಿಷ್ಟಮ್ಮ' ಎಂಬುದು ಕಾವ್ಯೋಕ್ತ 'ಬಿಟ್ಟಿ' ಎಂಬುದು ವಿಷ್ಣುವಿನಿಂದ ಬಿಟ್ಟಿಗೆ ಕಟ್ಟಿಸಿದುದರಿಂದ 'ಬಿಟ್ಟಿಸಮುದ್ರ' ಎಂಬ ಹೆಸರು ಇದಕ್ಕೆ ನಿದರ್ಶನವಾಗಿದೆ. ಇಂದಿನ ಬೇಲೂರಿನ ಬಿಷ್ಟಮ್ಮನ ಕೆರೆಯೇ ಪದ್ಮರಸ ಕಟ್ಟಿಸಿದ ಕೆರೆ ಎಂದು ನಾವು ನಂಬಬಹುದಾಗಿದೆ.

ಬೇಲೂರು ಕೆರೆಗೆ ಸೇರಿದಂತೆ ದಂತಕಥೆಗಳಿವೆ. ಪ್ರಸ್ತುತ ಇರುವ ಸ್ಥಳವು ಹಿಂದೆ ಕಾಡಾಗಿತ್ತು. ಅಲ್ಲಿ ಒಬ್ಬ ಸನ್ಯಾಸಿ ವಾಸವಾಗಿದ್ದ. ಈತನ ಮರಣಾನಂತರ ವಾಸಿಸುತ್ತಿದ್ದ ಸ್ಥಳವು ಸನ್ಯಾಸಿಹಳ್ಳಿ ಎಂಬ ಗ್ರಾಮವಾಯಿತು. ಕೆರೆಯ ದಕ್ಷಿಣಭಾಗದಲ್ಲಿ ಇಂದಿಗೂ ಸನ್ಯಾಸಿಹಳ್ಳಿ ಎಂಬ ಗ್ರಾಮವಿದೆ. ಈ ಸ್ಥಳದಲ್ಲಿ ಹಿಂದೆ ಒಬ್ಬ ಸನ್ಯಾಸಿ ಆತನ ಜೊತೆಗೆ ಒಂದು ನಾಯಿಯೂ ಕೂಡ ಇತ್ತು. ಒಮ್ಮೆ ಸನ್ಯಾಸಿಗೂ ಮತ್ತು ನಾಯಿಗೂ ಕುಷ್ಠರೋಗ ಬಂದಿತು. ಸನ್ಯಾಸಿಯೂ ಬಾಯಾರಿಕೆಯಿಂದ ನೀರನ್ನು ಹುಡುಕುತ್ತಿದ್ದನು. ತನ್ನ ಜೊತೆಯಲ್ಲಿ ಇದ್ದ ನಾಯಿಯು ಅಲ್ಲಿಯೇ ಇದ್ದ ಹೊಂಡದಲ್ಲಿ ಮುಳುಗಿ ಮೈ ಒದರಿಕೊಂಡಿತು. ಸನ್ಯಾಸಿಯು ಹೊಂಡದಲ್ಲಿ ನೀರು ಇರುವುದು ತಿಳಿದು ಅಲ್ಲಿಗೆ ಹೋಗಿ ಬೊಗಸೆಯಲ್ಲಿ ನೀರು ಕುಡಿದಾಗ ಜಲಸ್ಪರ್ಶದಿಂದ ಕುಷ್ಠರೋಗ ಮಾಯವಾಯಿತಂತೆ. ಇದರಿಂದ ಸನ್ಯಾಸಿಯ ರೋಗನಿವಾರಕ ಶಕ್ತಿ ಇರುವ ಈ ನೀರು ಪೋಲಾಗದಂತೆ ರಕ್ಷಣೆ ಮಾಡಲು ತಪಸ್ಸಿಗೆ ಕುಳಿತನು. ಅದರ ಪ್ರತಿಫಲವಾಗಿ ಒಬ್ಬ ಬಾಲಕನು ಭಸ್ಮವನ್ನು ಚೆಲ್ಲಿಕೊಂಡು ಹೋದಂತೆ ಕೆರೆ ನಿರ್ಮಾಣವಾಯಿತು. ಅಲ್ಲಿನ ಸ್ಥಳವು ಉತ್ಪತ್ತಿಹಳ್ಳಿಯಾಯಿತು ಎಂಬ ಪ್ರತೀತಿ ಇದೆ.[೨೮]

ಸಾಲುಗಾಮೆ ಹೋಬಳಿಯಲ್ಲಿ ಬರುವ ಹಂದಿನಕೆರೆಗೆ ಸಂಬಂಧಿಸಿದಂತೆ ಒಂದು ಐತಿಹ್ಯವಿದೆ. ದ್ಯಾಮವ್ವ ತಿರುಪತಿ ವೆಂಕಟರಮಣ ಸ್ವಾಮಿಯ ಹೆಂಡತಿಯಾಗಿದ್ದಾಳೆ ಎಂಬ ನಂಬಿಕೆ ಇದೆ. ಸೀಗೆಗುಡ್ಡದ ಮೇಲಿಂದ ಕಂಚಿನ ನಗಾರಿ ಉರುಳಿ ಬಂದು ಮುಗಳೂರು ಕೆರೆ ಮುಳುಗಿ, ಹಂದಿನಕೆರೆ, ಮಾಕನಕಟ್ಟೆಯಲ್ಲಿ ಸ್ಥಾಪನೆಯಾಯಿತು. ಕಡೆಗೆ ಅಲ್ಲಿಯೇ ಮುಳುಗಡೆಯಾಯಿತು ಎಂಬ ನಂಬಿಕೆ ಇದೆ. ಈ ಹಂದಿನ ಕೆರೆಯನ್ನು ಅಕ್ಕತಂಗಿಯರು ಮಾತಾಡಿಕೊಂಡು ಕಟ್ಟಿಸಿದ್ದು, ಇಬ್ಬರೂ ಹಠ ಮಾಡಿ ಮೊದಲು ಯಾರದು ಮುಗಿಯುತ್ತೆ ನೋಡೋಣ ಎಂದು ಪಣ ತೊಟ್ಟಿದ್ದರು. ಅದರಲ್ಲಿ ಹಂದಿನಕೆರೆ ಮೊದಲು ಮುಗಿದು ನೀರು ಬಂದಾಗ ಅಲ್ಲಿಗೆ ಕಾಯಲು ಪಟೇಲ, ಶಾನುಭೋಗ, ತಳವಾರ, ಕುಲುವಾಡಿ ಬಂದಿದ್ದರು. ಅವರಲ್ಲಿ ಒಬ್ಬೊಬ್ಬರಾಗಿ ಎಲ್ಲರೂ ಹೋದರು. ಏರಿಯ ಕಾವಲಿಗೆ ಮಾತ್ರ ಕುಲವಾಡಿ ಒಬ್ಬನೇ ಉಳಿದುಕೊಂಡ. ಹೋದವರು ಮೂರು ದಿನಗಳಾದರೂ ತಿರುಗಿ ಬರಲಿಲ್ಲ. ಇವನು ಹೊಟ್ಟೆ ಹಸಿವು ತಾಳಲಾರದೆ ಗಂಗೆ ಹತ್ತಿರ ನಾನು ಬರುವವರೆಗೂ ಏರಿ ಒಡೆದುಕೊಂಡು ಹೋಗಬಾರದು ಎಂದು ಭಾಷೆ ತೆಗೆದುಕೊಂಡು

ಹೋಗುವಾಗ ಒಮ್ಮೆ ಗಂಗೆಯನ್ನು ಹಿಂತಿರುಗಿ ನೋಡಿದನು. ಅಲ್ಲಿಯೇ ಅರಳಿ ಮರದ ಹತ್ತಿರ ಮೆಟ್ರಕುಯ್ದುಕೊಂಡು ಸತ್ತುಹೋದ. ಈಗಲೂ ಆ ಸ್ಥಳವನ್ನು ಸ್ಥಳೀಯರು ರಕ್ತ ಕೋಡಿಹಳ್ಳ ಎಂದು ಕರೆಯುತ್ತಾರೆ. ಅಲ್ಲಿನ ನೀರು ರಕ್ತದ ರೀತಿಯಲ್ಲಿ ಕಾಣಿಸುತ್ತದೆ. ತಂಗಿ ಕಟ್ಟಿಸಿದ ಹಂದಿನಕೆರೆ ಒಡೆಯಲೇ ಇಲ್ಲ. ಅಕ್ಕ ಕಟ್ಟಿಸಿದ ಮುಗಳೂರು ಕೆರೆ ಎರಡು ಸಲ ಒಡೆದಿರುವಂತೆ ಹೇಳುತ್ತಾರೆ.[೨೯] ಈ ಐತಿಹ್ಯವು ಏರಿ ಸಂರಕ್ಷಿಸುವುದಕ್ಕೋಸ್ಕರ ಕುಲವಾಡಿ ಮರಣವನ್ನು ಕುರಿತಾಗಿದೆ. ಹಿಂದೆ ಕೆರೆ ಅಂದವಾಗಿ ಕಾಣುತಿತ್ತು. ಹಾಗಾಗಿ ಅಂದದಕೆರೆ>ಹಂದದಕೆರೆ> ಹಂದಿನ ಕೆರೆಯಾಗಿದೆ. ತಗ್ಗಾದ ಪ್ರದೇಶದಲ್ಲಿ ಕೆರೆಯ ಹೆಚ್ಚುವರಿ ನೀರು ಹೊರಹೋಗಲು ಕೋಡಿ ಇರಿಸಲಾಗಿದೆ. ಅದನ್ನು ಕೋಡಿಹಳ್ಳವೆಂದು ಗುರುತಿಸಿದ್ದಾರೆ. ಕೆಂಪು ಮಣ್ಣುಮಿಶ್ರಿತವಾದ ನೀರಿನಿಂದ ಕೆಂಪುನೀರು ಬರುತ್ತದೆ. ಅದನ್ನೇ ಜನ ರಕ್ತ ಎಂದಿರಬಹುದು.

ಚನ್ನರಾಯಪಟ್ಟಣ ತಾಲೂಕಿಗೆ ಸೇರಿದ ನಾಗರನವಿಲೆ ಕೆರೆ ಏರಿಯ ಮೇಲೆ ಒಂದು ಮಂಟಪವಿದೆ. ಅದರ ಒಳಭಾಗದಲ್ಲಿ ವೀರ ಮಹಾಸತಿಯಕಲ್ಲು ಇದ್ದು, ಅದನ್ನು ಮಾಸ್ತಮ್ಮ ಎಂದು ಕರೆಯುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಒಂದು ಐತಿಹ್ಯವಿದೆ. ಲಿಂಗಾಯತ ಜನಾಂಗಕ್ಕೆ ಸೇರಿದ ಒಬ್ಬ ಹುಡುಗಿ ಸುಂದರವಾದ ಉದ್ದ ಕೂದಲನ್ನು ಹೊಂದಿದ್ದಳು. ಇವಳ ಸೌಂದರ್ಯಕ್ಕೆ ಮಾರುಹೋದ ಮುಸ್ಲಿಮರು ಈಕೆಯನ್ನು ಪಡೆಯಲು ಬಯಸಿದರು. ಧರ್ಮನಿಷ್ಠಳಾದ ಈಕೆಯು ನನ್ನಷ್ಟು ಸೌಂದರ್ಯವತಿಯು ಹುಟ್ಟಬಾರದು, ಇಷ್ಟು ಉದ್ದವಾದ ಕೂದಲು ಯಾರಿಗೂ ಬೆಳೆಯದಿರಲಿ ಎಂದು ಶಾಪ ಕೊಟ್ಟು ಕಲ್ಲಾದಳೆಂದು ಹೇಳುತ್ತಾರೆ.[೩೦] ಈ ಕಲ್ಲನ್ನು ಲಿಂಗಾಯತ ಜನಾಂಗಕ್ಕೆ ಸೇರಿದ ಒಂದು ಮನೆತನದವರಷ್ಟೇ ವರ್ಷಕ್ಕೊಮ್ಮೆ ಹೊಸ ಸೀರೆಯನ್ನಿಟ್ಟು ಪೂಜೆ ಮಾಡುತ್ತಾರೆ. ವೀರ ಮಹಾಸತಿಯ ಕಲ್ಲು ಹೊಯ್ಸಳ ಕಾಲಘಟ್ಟದಲ್ಲಿ ಹಾಕಿಸಿದಂತಿದೆ.

ಅರಸೀಕೆರೆ ತಾಲೂಕಿಗೆ ಸೇರಿದ ಕಣಕಟ್ಟೆ ಕೆರೆಗೆ ಸಂಬಂಧಿಸಿದಂತೆ ಒಂದು ಕಥೆ ಇದೆ. ಬ್ರಾಹ್ಮಣರು ಹಿಂದೆ ತಮ್ಮ ಹೆಣ್ಣುಮಕ್ಕಳನ್ನು ಋತುಮತಿಯಾಗುವುದಕ್ಕಿಂತ ಮೊದಲೇ ವಿವಾಹ ಮಾಡುತ್ತಿದ್ದರು. ಒಬ್ಬ ಬ್ರಾಹ್ಮಣನ ಮಗಳಾದ ದುರ್ಗಮ್ಮ ಎಂಬ ಹುಡುಗಿಯು ವಿವಾಹ ಮಾಡುವುದಕ್ಕಿಂತ ಮೊದಲೇ ಋತುಮತಿಯಾಗುತ್ತಾಳೆ. ಇದರಿಂದ ಬ್ರಾಹ್ಮಣ ತನ್ನ ಮಗಳನ್ನು ಕಣ್ಣು ಕಟ್ಟಿ ಕಾಡಿಗೆ ಬಿಟ್ಟು ಬರುತ್ತಾನೆ. ದುರ್ಗಮ್ಮ ಕಾಡಿನಿಂದ ಬಂದು ಊರಿನ ಕೆರೆ ಏರಿಯ ಮೇಲೆ ನೆಲೆಸಿ ವಿವಾಹವಾಗದವರಿಗೆ, ಮಕ್ಕಳಿಲ್ಲದವರಿಗೆ ಫಲ ನೀಡುತ್ತಾಳೆ ಎಂಬ ನಂಬಿಕೆ ಇದೆ.[೩೧] ಹರಕೆ ಮಾಡಿಕೊಂಡು ದೇವರಿಗೆ ತೆರೆಬಿಟ್ಟು ಕುರಿ, ಕೋಳಿಯನ್ನು ಬಲಿ ಕೊಡುತ್ತಾರೆ. ಇದೇ ತಾಲೂಕಿನ ಹಾರನಹಳ್ಳಿ ಕೆರೆಗೂ ಕೂಡ ಈ ಬಗೆಯ ಐತಿಹ್ಯವಿದೆ.

ಹೊಳೆನರಸೀಪುರ ತಾಲೂಕಿಗೆ ಸೇರಿದ ಆಲಗೌಡನಹಳ್ಳಿ ಕೆರೆ ಏರಿ ಮೇಲಿರುವ ಕಲ್ಲನ್ನು ಕೋಡಿಯಮ್ಮ ಎಂದು ಗುರುತಿಸುತ್ತಾರೆ. ಇದಕ್ಕೆ ಸಂಬಂಧಿಸಿದ ಐತಿಹ್ಯ ಹೀಗಿದೆ. ರಂಗೇನಹಳ್ಳಿ

ಹೆಣ್ಣು ಮಗಳನ್ನು ಆಲಗೌಡನಹಳ್ಳಿಯ ಪಟೇಲನ ಮಗನಿಗೆ ಕೊಟ್ಟು ವಿವಾಹ ಮಾಡಿದ್ದರು. ಪಟೇಲನ ಮಗ ಕುದುರೆ ಮೇಲೆ ದಂಡೆತ್ತಿ ಹೋಗಿದ್ದನು. ಗಂಡ ತುಂಬಾ ದಿನಗಳಾದರೂ ವಾಪಸ್ಸು ಬರದ ಕಾರಣ ಕೆರೆಯ ದಡದಲ್ಲಿ ಕೆಂಡ ಹಾಕಿಕೊಂಡು ಹೆಂಡತಿಯು ಅಗ್ನಿಗೆ ಆಹುತಿ ಆಗುತ್ತಾಳೆ. ಅದೇ ವೇಳೆಗೆ ದಂಡಿಗೆ ಹೋಗಿದ್ದ ಪಟೇಲನ ಮಗ ವಾಪಸ್ಸು ಬಂದು ತನ್ನ ಹೆಂಡತಿಯ ಬಗ್ಗೆ ವಿಚಾರಿಸಿ ವಿಷಯ ತಿಳಿದುಕೊಂಡು ಆತನು ಕೂಡ ಅಗ್ನಿಕುಂಡದಲ್ಲಿ ಬಿದ್ದು ಸಾವನ್ನಪ್ಪುತ್ತಾನೆ. ಈಗಲೂ ಕೂಡ ಕೆರೆಯ ದಕ್ಷಿಣತುದಿಯಲ್ಲಿರುವ ಗುಡಿಯನ್ನು ಅಗ್ನಿಗೆ ಆಹುತಿಯಾದ ಹೆಣ್ಣುಮಗಳ ಸ್ಥಳವೆಂದೂ ಅದು ಕೋಡಿಯ ಸಮೀಪ ಇರುವುದರಿಂದ ಕೋಡಿಯಮ್ಮನ ದೇವಸ್ಥಾನವೆಂದೂ ಗುರುತಿಸುತ್ತಾರೆ.[೩೨] ಕೆರೆಯು ಜೀರ್ಣೋದ್ಧಾರವಾಗಿರುವುದರಿಂದ ಅದರ ಕಾಲಾವಧಿಯನ್ನು ಗುರುತಿಸುವುದು ಕಷ್ಟಕರವಾಗಿದೆ. ಇಲ್ಲಿನ ಐತಿಹ್ಯವು ಗಂಡ ಇಲ್ಲದ ಹೆಣ್ಣಿಗೆ ಸಮಾಜದಲ್ಲಿ ಯಾವುದೇ ರಕ್ಷಣೆಯಿಲ್ಲದ ಶೋಚನೀಯ ಸ್ಥಿತಿಯನ್ನು ತಿಳಿಸುತ್ತದೆ. ಗಂಡಸಿನ ಮರಣವು ಪತ್ನಿ ಪ್ರೀತಿ ಪುರುಷ ಬಲಿದಾನಕ್ಕೆ ಪ್ರೇರಕವಾಯಿತೆನ್ನಬಹುದು. ಐತಿಹ್ಯವು ಭಾಗೀರತಿಯ ಜನಪದ ಕಥೆಯನ್ನು ನೆನಪಿಸುತ್ತದೆ.

ಮುತ್ತಿಗೆ ಗ್ರಾಮವು ಹಾಸನದಿಂದ ೨೦ ಕಿ.ಮೀ. ದೂರದಲ್ಲಿದೆ. ಹಿಂದೆ ಹಂಚಿಹಳ್ಳಿಯಿಂದ ಮುತ್ತಿಗೆಗೆ ಒಂದು ಹೆಣ್ಣನ್ನು ಕೊಟ್ಟು ವಿವಾಹ ಮಾಡಿದ್ದರು. ಗಂಡನ ಮನೆ ಕಡೆಯವರು ಕೊಡುವ ಹಿಂಸೆಯನ್ನು ತಾಳಲಾರದೆ ಈ ಹೆಣ್ಣು ಎರಡು ಮಕ್ಕಳೊಂದಿಗೆ ಬಟ್ಟೆ ತೊಳೆಯಲು ಕೆರೆಗೆ ಹೋಗುತ್ತಾಳೆ. ತೂಬಿನ ಹತ್ತಿರ ಬಂದು ಮಕ್ಕಳೊಂದಿಗೆ ನೀರಿಗೆ ಬೀಳುತ್ತಾಳೆ. ಆ ಸ್ಥಳದಲ್ಲಿ ಒಡಮೂಡಿದ ಕಲ್ಲು ಮುತ್ತಿಗೆಮ್ಮ ಆಯಿತು. ಈ ದೇವರ ಮೂಲ ಹೆಸರು ಚನಕಮ್ಮ ಆಗಿತ್ತು. ನಂತರ ಜನಪದರು ಮುಕ್ಕಣ್ಣೇಶ್ವರಿ, ಮೂರುಕಣ್ಣಿ, ಚಂಡಿಕಾಂಭ, ಚನ್ನಾಂಬ, ಚನ್ನಾಂಬಿಕೆ ಎಂಬ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮೂರು ವರ್ಷಕ್ಕೊಮ್ಮೆ ತವರೂರು ಹಂಚಿಹಳ್ಳಿಗೆ ಹೋಗುತ್ತದೆ. ಹೊರಡುವ ಸಂದರ್ಭದಲ್ಲಿ ಮುತ್ತಿಗೆ, ಕಲ್ಲೂಗುಡುಗನಹಳ್ಳಿ, ಹಿರೇಹಳ್ಳಿ, ಬಂಟರಹಳ್ಳಿ, ಆಲೇನಹಳ್ಳಿ ಮುಂತಾದ ಗ್ರಾಮದವರು ಸೇರಿ ಅಭಿಷೇಕ ಮಾಡಿ ಮೊಸರನ್ನ, ಬಾಳೇಗೊನೆಯನ್ನು ನೈವೇದ್ಯ ಮಾಡಿ ಕಳಿಸಿಕೊಡುತ್ತಾರೆ. ತೂಬಿನ ಹತ್ತಿರದಲ್ಲಿರುವ ಮರ, ಗಿಡಗಳನ್ನು ಯಾರೂ ಕಡಿಯುವಂತಿಲ್ಲ. ಕಡಿದರೆ ಅವರು ಬದುಕುವುದಿಲ್ಲ ಎಂಬ ನಂಬಿಕೆ ಇಂದಿಗೂ ಇದೆ.[೩೩]

ಅಣತಿ ಕೆರೆಗೆ ಸಂಬಂಧಿಸಿದಂತೆ ಒಂದು ಕಥೆ ಇದೆ. ದಿಗಂಬರೇಶ್ವರರು ಈ ಊರಿಗೆ ಭಿಕ್ಷಕ್ಕೆ ಬಂದು ವಳಗೆರೆಹಳ್ಳಿಗೆ ಹೋಗಲು ಆಟ ಆಡುತ್ತಿದ್ದ ಹುಡುಗರನ್ನು ಕೇಳಿದರು. ಹುಡುಗರು ಹುಡುಗಾಟಕ್ಕೆ ಕೆರೆ ತುಂಬಿ ಕೋಡಿ ಬಿದ್ದಿದ್ದರಿಂದ ಕೆರೆ ಒಳಗಡೆ ಹೋಗಬೇಕೆಂದು ಹೇಳಿದರು. ಈ ಮಾತನ್ನು ಕೇಳಿ ದಿಗಂಬರೇಶ್ವರರು ಕೋಪದಿಂದ ಅಣತಿ ಹಾಳಾಗಲಿ, ವಳಗೆರೆಹಳ್ಳಿ ಊರಾಗಲಿ ಎಂದು ಶಾಪ ಕೊಟ್ಟು ಪಕ್ಕದಲ್ಲಿದ್ದ ಬಾಳೆಗಿಡದ ಎಲೆಯನ್ನು ಕಿತ್ತು ನೀರಿನ ಮೇಲೆ ಇಟ್ಟು ಅದರ ಮೇಲೆ ಕುಳಿತು ವಳಗೆರೆಹಳ್ಳಿಗೆ ಹೋದರು. ಅಂದಿನಿಂದ ಅಣತಿ ಗ್ರಾಮವು ಹಾಳಾಗಿ ವಳಗೆರೆಹಳ್ಳಿ

ಊರಾಯಿತು. ಅಣತಿ ಗ್ರಾಮದಲ್ಲಿ ಯಾರೂ ನೆಲೆ ನಿಲ್ಲದಂತಹ ಸ್ಥಿತಿ ಉಂಟಾಯಿತು. ಆಗ ಗ್ರಾಮದ ಜನರು ಒಟ್ಟಾಗಿ ಸೇರಿ ಸ್ವಾಮಿಗಳನ್ನು ಕರೆಯಿಸಿ ಉತ್ಸವ ಮಾಡಿ ಗ್ರಾಮಕ್ಕೆ ಶಾಂತಿ ಮಾಡಿಸಿದರು. ಅನಂತರ ಗ್ರಾಮವು ಸ್ವಲ್ಪ ಸುಧಾರಣೆಯಾಗತೊಡಗಿತು. ಗ್ರಾಮದಲ್ಲಿ ಯಾವುದೇ ಒಂದು ಹೊಸದಾಗಿ ಸಂಘ, ಸಂಸ್ಥೆ, ಮನೆ, ಅಂಗಡಿಗಳನ್ನು ಸ್ಥಾಪನೆ ಮಾಡಿದರೆ ಅದಕ್ಕೆ ದಿಗಂಬರೇಶ್ವರ ಎಂಬ ಹೆಸರನ್ನೇ ಇಡುತ್ತಾರೆ. ಈಗಲೂ ಕೂಡ ಅಣತಿ ಕೆರೆ ಕೋಡಿ ಬಿದ್ದಾಗ ದಿಗಂಬರೇಶ್ವರರು ಹೋದ ಜಾಗದಲ್ಲಿ ಕೆರೆ ನೀರು ಎರಡು ಹೋಳಾದಂತೆ ಕಾಣುತ್ತದೆ ಎಂದು ಸ್ಥಳೀಯರು ತಿಳಿಸುತ್ತಾರೆ.[೩೪]

ಹಾಸನ ತಾಲೂಕಿನ ದುದ್ದ ಹೋಬಳಿಯಿಂದ ೬ ಕಿ.ಮೀ. ದೂರದಲ್ಲಿ ಹೊನ್ನಾವರ ಕೆರೆ ಇದೆ. ಕೆರೆಯ ಪಶ್ಚಿಮದಿಕ್ಕಿನಲ್ಲಿ ಪೂರ್ವಕ್ಕೆ ಮುಖ ಮಾಡಿರುವ ಕೋಡಿಯಮ್ಮ ದೇವಸ್ಥಾನವಿದೆ. ಈ ದೇವರ ಮೂಲ ಹೆಸರು ಹೊನ್ನಮ್ಮದೇವಿಯೆಂದು. ದೇವಾಲಯವು ಕೋಡಿಯ ಪಕ್ಕದಲ್ಲಿರುವುದರಿಂದ ಅನಂತರ ಜನಪದರು ಕೋಡಿಯಮ್ಮ ಎಂಬ ಹೆಸರಿನಿಂದ ಕರೆದಿದ್ದಾರೆ. ಹೀಗಾಗಿ ಈ ದೇವರ ಹೆಸರಿನಿಂದಲೇ ಗ್ರಾಮಕ್ಕೆ ಹೊನ್ನಾವರ ಎಂಬ ಹೆಸರು ಬಂದಿದೆ. ಎನ್ನಬಹುದು.

ಹೊನ್ನಮ್ಮದೇವಿಗೆ ಸಂಬಂಧಿಸಿದಂತೆ ಒಂದು ಐತಿಹ್ಯವಿದೆ. ದೇವಿಗೆ ಸಂಬಂಧಿಸಿದಂತಹ ಭಕ್ತರೆಲ್ಲ ಮೊದಲು ವಿಜಯನಗರದ ಮೂಲದವರು. ತಾಳಿಕೋಟೆ ಕದನದ ನಂತರ ವಿಜಯನಗರ ಪತನವಾಗಿ ಮುಸ್ಲಿಂ ದೊರೆಗಳ ಪ್ರಾಬಲ್ಯ ಹೆಚ್ಚಾಯಿತು. ಈ ಸಂದರ್ಭದಲ್ಲಿ ಹೊನ್ನಮ್ಮದೇವಿಯ ಭಕ್ತರ ಮೂಲಪುರುಷರಿಗೆ ಸುಂದರವಾದ ಹೆಣ್ಣುಮಗಳಿದ್ದಳು. ಮುಸ್ಲಿಂ ದೊರೆಯೊಬ್ಬನ ಕಣ್ಣು ಈ ಹುಡುಗಿಯ ಮೇಲೆ ಬಿದ್ದು, ಹುಡುಗಿಯನ್ನು ನನಗೆ ಕೊಡಿ ಎಂದು ಒತ್ತಾಯ ಮಾಡುತ್ತಿದ್ದನು. ಇದಕ್ಕೆ ಬೇಸತ್ತ ಜನರು ಹೀಗೆ ಮಾಡಿದರೆ ತಮ್ಮ ವೀರಶೈವ ಧರ್ಮಕ್ಕೆ ಅಪಚಾರ ಮಾಡಿದಂತಾಗುತ್ತದೆಯೆಂದು ರಾತ್ರೋರಾತ್ರಿ ಎತ್ತಿನಗಾಡಿಯ ಮೇಲೆ ತಮ್ಮ ಎಲ್ಲಾ ಸಾಮಾನುಗಳನ್ನು ಹಾಕಿಕೊಂಡು ಈಗಿನ ಹೊನ್ನಾವರ ಕೆರೆಯ ತೋಪಿನಲ್ಲಿ ಬೀಡುಬಿಟ್ಟರು. ಹೊಸದಾಗಿ ಬಂದ ಇವರಿಗೆ ಈ ಸ್ಥಳದಲ್ಲಿ(ಊರಿನಲ್ಲಿ) ಯಾರೂ ಪರಿಚಯವಿರಲಿಲ್ಲ. ಹಾಗಾಗಿ ತಿನ್ನಲು ಏನೂ ಇವರಿಗೆ ಸಿಗದಾಗ ಪಕ್ಕದ ಯಾರದೋ ಗದ್ದೆಯಲ್ಲಿ ಇರುವ ಭತ್ತವನ್ನು ಕುಯ್ದರಂತೆ ಅಷ್ಟರಲ್ಲಿ ಗದ್ದೆಯ ಒಡೆಯ ಬಂದು ಯಾರೋ ಭತ್ತ ಕುಯ್ದಿದ್ದಾರೆ. ಈ ತೋಪಿನಲ್ಲಿ ಇರುವವರೇ ಇರಬೇಕು ಎಂದು ಕೇಳಲು ಬಂದನು. ಅಷ್ಟರಲ್ಲಿ ಭತ್ತ ಕುಯ್ದವರು ಅಲ್ಲಿಯೇ ತೋಪಿನ ಮೆಣೆಯಲ್ಲಿದ್ದ ಒಂದು ಕಲ್ಲನ್ನು ನೋಡಿ, ಕೈಮುಗಿದು, ತಾಯಿ ನಾವು ಕುಯ್ದ ಭತ್ತ ಬದಲಾಯಿಸಿ ಶಿಕ್ಷೆ ಅಪಮಾನದಿಂದ ಪಾರು ಮಾಡು ದೇವಿ, ನಿನಗೆ ದೇವಸ್ಥಾನ ಕಟ್ಟಿಸಿಕೊಡುತ್ತೇವೆಂದು ಹರಕೆ ಮಾಡಿಕೊಂಡಿದ್ದರು. ಭತ್ತದ ಒಡೆಯ ಬಂದು ನೋಡಿದಾಗ ಭತ್ತವೆಲ್ಲ ಬದಲಾಗಿದ್ದವು. ಆಗ

ಇವರು ದೇವರಿಗೆ ದೇವಾಲಯವನ್ನು ಕಟ್ಟಿಸಿದರು. ಕ್ರಮೇಣ ಹೊನ್ನಮ್ಮದೇವಿಯು ಕೋಡಿಯಮ್ಮ ಎಂಬ ಹೆಸರಿನಿಂದ ಹೆಚ್ಚು ಪ್ರಸಿದ್ಧಿ ಪಡೆಯಿತು.[೨೫]

ಹಾಸನದಿಂದ ಹೊಳೆನರಸೀಪುರಕ್ಕೆ ಹೋಗುವ ಮಾರ್ಗದಲ್ಲಿ ಮೊಸಳೆ ಕೆರೆ ಇದೆ. ಈ ಕೆರೆಯ ಉತ್ತರದಿಕ್ಕಿನಲ್ಲಿ ಮೊಸಳಮ್ಮನ ದೇವಸ್ಥಾನವಿದೆ. ಅದು ಪೂರ್ವದಿಕ್ಕಿನ ಕೋಡಿಗೆ ಸಮೀಪವಾಗಿದ್ದರಿಂದ ಇತ್ತೀಚೆಗೆ ಕೋಡಿಯಮ್ಮ ಎಂತಲೂ ಕರೆಯುತ್ತಾರೆ. ಈ ದೇವರಿಗೆ ಸಂಬಂಧಿಸಿದಂತೆ ಒಂದು ಐತಿಹ್ಯವಿದೆ. ಕೆರೆಯ ಅಂಗಳದ ಮುಂಭಾಗವು ಮೊದಲು ಗಿಡ ಮರಗಳಿಂದ ಕೂಡಿದ ಅರಣ್ಯಪ್ರದೇಶವಾಗಿತ್ತು. ಕೌಶಿಕ ಗ್ರಾಮಕ್ಕೆ ಸೇರಿದ ಗಂಗಾಮತ(ಬೆಸ್ತರು) ಜನಾಂಗಕ್ಕೆ ಸೇರಿದ ಒಬ್ಬ ವ್ಯಕ್ತಿಯು ಕುದುರೆ ಸವಾರಿ ಮಾಡಿಕೊಂಡು ಹೋಗುವಾಗ ವಿಶ್ರಾಂತಿ ಪಡೆಯಲು ಇಲ್ಲಿನ ಒಂದು ಮರದ ಕೆಳಗಡೆ ಪೇಟವನ್ನು ಇಟ್ಟು ಮಲಗಿದನು. ಮರದ ಮೇಲಿದ್ದ ಮಂಗವು ಬಂದು ಪೇಟವನ್ನು ಎತ್ತುಕೊಂಡು ಹೋಯಿತು. ನಿದ್ದೆಯಿಂದ ಎದ್ದ ವ್ಯಕ್ತಿಯು ಪೇಟವನ್ನು ಪಡೆಯಲು ಮಂಗನನ್ನು ಹಿಂಬಾಲಿಸಿ ಹೋದಾಗ ಮಂಗವು ಪೊದರು ಗಿಡದ ಬಳಿ ಪೇಟವನ್ನು ಬಿಳಿಸಿತು. ಒಂದು ಕಡ್ಡಿಯಿಂದ ಪೇಟವನ್ನು ತೆಗೆದುಕೊಳ್ಳಲು ಹೋದಾಗ ಚಿಕ್ಕಗುಡಿ ಇವರ ಕಣ್ಣಿಗೆ ಕಣಿಸಿತು. ಅದನ್ನು ಮೊಸಳೆ ಗ್ರಾಮದ ಜನರಿಗೆ ತಿಳಿಸಿದಾಗ ಗ್ರಾಮದ ಸ್ಥಳೀಯರು ಆ ದೇವರು ನಿಮಗೆ ಮೊದಲು ಕಾಣಿಸಿದ್ದರಿಂದ ನೀವೇ ಅದನ್ನು ಪೂಜೆ ಮಾಡಿ ಎಂದು ಹೇಳಿದರಂತೆ. ಅಂದಿನಿಂದ ಕೌಶಿಕ ಗ್ರಾಮದ ಗಂಗಾಮತ ಜನಾಂಗದ ಒಂದು ಮನೆತನದವರು ಮಾತ್ರ ಇಂದಿಗೂ ಪೂಜೆ ಮಾಡುತ್ತಿದ್ದಾರೆ.[೨೬] ಈ ದೇವರು ಇಂದು ಮೊಸಳೆ ಗ್ರಾಮದ ಗ್ರಾಮ ದೇವತೆಯಾಗಿದೆ. ಇತ್ತೀಚೆಗೆ ದೇವಾಲಯ ನಿರ್ಮಿಸಿದ್ದಾರೆ.

ಅರಸೀಕೆರೆಗೆ ಸಂಬಂಧಿಸಿದಂತೆ ಜನಪದ ಕಥೆಯನ್ನು ಆಧರಿಸಿದ ಕವನ ಇದೆ.[೨೭] ಕೆರೆಯ ಸಮೀಪದಲ್ಲಿಯೇ ನಾಗತಿಹಳ್ಳಿ ಎಂಬ ಹಳ್ಳಿಯಿದ್ದು ಅಲ್ಲಿಯೂ ಒಂದು ಕೆರೆಯಿದೆ. ಈ ಎರಡು ಕೆರೆಗಳ ನಡುವೆ ಇನ್ನೊಂದು ಕೆರೆಯಿದೆ. ಅದು ತಿಮ್ಮಪ್ಪನಾಯಕನ ಕೆರೆ. ಇಲ್ಲಿನ ಮೂರು ಕೆರೆಗಳು ಒಂದು ಜನಪದ ಕಥೆಯನ್ನು ಸೂಚಿಸುತ್ತವೆ. ತಿಮ್ಮಪ್ಪನಾಯಕ ಅರಸ. ಆತ ಯೌವನಕ್ಕೆ ಬಂದೊಡನೆ ಅರಸಿ ಎಂಬುವಳನ್ನು ಮದುವೆಯಾಗುತ್ತಾನೆ. ಆದರೆ ಆತನ ಯೌವನದಲ್ಲಿಯೇ ನಾಗತಿಹಳ್ಳಿಯ ಕನ್ಯೆ ನಾಗತಿಯ ಮೇಲೆ ಆತನಿಗೆ ವಿಪರೀತ ಪ್ರೇಮ. ಈ ಎರಡು ಬಂಧನಗಳ ನಡುವೆ ಅರಸ ನಲುಗುತ್ತಾನೆ. ಒಂದು ಕಡೆ ಸಮಾಜ ಸಂಪ್ರದಾಯ ಗೌರವಿಸುವ ಅರಸಿ ರಾಜನ ಮನವ ಮೆಚ್ಚಿಸಲಿಲ್ಲ. ರಾಜನ ಮನವ ಮೆಚ್ಚಿಸಿದ ನಾಗತಿಯ ಸಂಬಂಧವನ್ನು ಸಮಾಜ ಒಪ್ಪುವುದಿಲ್ಲ. ಓೀಗಾಗಿ ರಾಜ ಎರಡು ಸ್ವರ್ಗದ ನಡುವೆ ತ್ರಿಶಂಕು ಆಗುತ್ತಾನೆ. ರಾಜನ ಬದುಕಿನ ಈ ಇಬ್ಬಂದಿತನವನ್ನು ಕವಿತೆ

"ನಾಗತಿ ಅರಸಿಯಾಗಬಾರದೆ ದೊರೆಯೆ
ಅರಸಿಗಾಗಿ ನಾಗತಿಯ ತೊರೆಯಬಾರದೆ ದೊರೆಯೆ

ಮನಬಂದವಳನೊಲ್ಲದು ಮನೆತನ
ಮನೆತನ ನಿಲಿಸುವವಳು ಸಲ್ಲಳು ಮನಕೆ ಎಂದು ವಿವರಿಸುತ್ತದೆ.

ಒಂದು ದಿನ ನಾಗತಿಯ ಮಧುಶಯ್ಯೆಯಲ್ಲಿ ತನ್ನ ಜೀವನದ ಗುಟ್ಟನ್ನು ಅರಸ ಬಿಚ್ಚಿಡುತ್ತಾನೆ. 'ಎಂದು ಮಕರಂದ ಕುಡಿದ ಬಿಳಿ ಹಕ್ಕಿ ಕೆರೆಯ ಏರಿಯ ದೊಡ್ಡ ಆಲದ ಮರಕ್ಕೆ ಬಂದು ಕೂರುವವೋ ಅಂದೇ ನನ್ನ ಮರಣ' ಎಂಬ ಗುಟ್ಟನ್ನು ಬಿಚ್ಚಿಡುತ್ತಾನೆ. ಆದರೆ ದುರ್ದೈವವಶಾತ್ ಈ ಗುಟ್ಟು ಅರಸಿಯ ಕಿವಿಗೆ ಸೇರುತ್ತದೆ. ಬತ್ತಿದ ಕೆರೆಯ ಬವಣೆ ಪ್ರಜೆಗಳ ತಾಯಿಯಾದ ಆಕೆಯನ್ನು ಕಾಡುತ್ತಿರುತ್ತದೆ. ಹಾಗಾಗಿ ರೇಶಿಮೆ ಮುಕುಟವನ್ನು ಕತ್ತರಿಸಿ ದೊಡ್ಡ ಆಲದ ಮರದ ಮೇಲೆ ಹಕ್ಕಿಯ ರೂಪದಲ್ಲಿ ಕೂಡಿಸುತ್ತಾಳೆ. ತನ್ನ ಬೊಕ್ಕಸದ ಬಂಗಾರವನ್ನು ಜನಕ್ಕೆ ದಾನವಾಗಿ ಬೀರುತ್ತಾಳೆ. ರೈತರೆಲ್ಲ ಕೆರೆಯಲ್ಲಿ ರಾಗಿ ಬಿತ್ತಿ ಅನ್ನ ಬೆಳೆಯುತ್ತಾರೆ. ಹನ್ನೆರೆಡು ವರ್ಷ ಇದ್ದ ಬರಗಾಲ ನೀಗಿ, ಅರಸೀಕೆರೆ ತುಂಬಿ ಕೋಡಿ ಹರಿಯುತ್ತದೆ. ಈ ವಿಷಯವನ್ನು ಅರಸಿ ರಾಜನಿಗೆ ಹೇಳುವಾಗ ಕೆರೆಯ ಏರಿಯ ಮೇಲಿರುವ ದೊಡ್ಡಾಲದ ಮರದ ಮೇಲೆ ಹಕ್ಕಿ ಕೂತ ಸುದ್ದಿಯನ್ನು ತಿಳಿಸುತ್ತಾಳೆ.

ಅರಸನಿಗೆ ತನ್ನ ಸಾವು ಸಮೀಪಿಸಿದ ವಿಷಯ ತಿಳಿದು ಗಡಗಡ ನಡುಗುತ್ತಾನೆ. ಪ್ರೀತಿಯ ಹೆಣ್ಣು ನಾಗತಿ ಅರಸನಿಗಾಗಿ ಕೊರಗುತ್ತಾಳೆ. ಅರಸಿಯ ಕೈಯ ಪಟ್ಟದ ಕತ್ತಿ ಅರಸನ ಸಾವಿಗೆ ಹಾರೈಸುತ್ತದೆ. ಕೊನೆಗೂ ಅರಸ ತನ್ನ ಸಂಪ್ರದಾಯ ಒಪ್ಪದ ಪ್ರೀತಿಗಾಗಿ ಅನಾಥನಾಗುತ್ತಾನೆ. ಎಲ್ಲಿಯೂ ಸಲ್ಲದ ಅರಸ ಆತನಾದರೆ, ಅರಸಿ ಮಾತ್ರ ಎಲ್ಲೆಲ್ಲೂ ಗೌರವಕ್ಕೆ ಪಾತ್ರಳಾಗುತ್ತಾಳೆ. ಆಕೆಗೆ ಇಡೀ ರಾಜ್ಯ ಕೊರಳ ಹಾರದ ಮುತ್ತ ಹರಿದು ಜೋಳ ಬಿತ್ತಿನ ತಾಯಿ ಜಯಾ ಜಯಾ ಎಂದು ಜಯ ಘೋಷ ನಡೆಯುತ್ತದೆ. ಕೊನೆಗೂ ಅರಸಿ ರಾಜನನ್ನು ಕ್ಷಮಿಸಿ ಸಾವಿನಿಂದ ಪಾರು ಮಾಡುತ್ತಾಳೆ. ಬಾರದ ಮಳೆ ಬಂದು ಕೆರೆ ತುಂಬಿ ಎಲ್ಲೆಲ್ಲೂ ಸಂಭ್ರಮ ಉಕ್ಕುತ್ತದೆ. ಹೀಗೆ ಅರಸಿ ನಾಗತಿಯ ರೂಪದಲ್ಲಿ ಪ್ರಿಯತಮೆಯಾಗಿ ಅರಸಿಯ ರೂಪದಲ್ಲಿ ಮಡದಿಯಾಗಿ, ಪ್ರಜೆಗಳನ್ನು ರಕ್ಷಿಸುವ ತಾಯಿಯಾದ ಅರಸಿಯ ವ್ಯಕ್ತಿತ್ವದ ೩ ಮುಖಗಳನ್ನು ಈ ಕವಿತೆಯಲ್ಲಿ ಚಿತ್ರಿಸಲಾಗಿದೆ. ಇಂದು ನಾಗತಿಹಳ್ಳಿಯ ಜನ ತಿಮ್ಮಪ್ಪನಾಯಕನ ಕೆರೆಯನ್ನು ಕುರಿತು ಇದೇ ರೀತಿಯ ಕಥೆಯನ್ನು ಹೇಳುತ್ತಾರೆ.

ತ್ಯಾಗ ಬಲಿದಾನಗಳ ಕಥೆಗಳಾಗಿ ಈಗಾಗಲೇ ಪ್ರಚಲಿತವಾಗಿರುವ ಲಾವಣಿಗಳು ನೀರಿನ ಮೂಲ ಹಾಗೂ ಅದರ ಸಮೃದ್ಧಿಯ ಜೊತೆ ನರಬಲಿಗೆ ಸಂಬಂಧಿಸಿದ ವಿಚಾರಗಳನ್ನು ತಿಳಿಸುತ್ತದೆ. ಸ್ತ್ರೀಬಲಿಯ ಹಿಂದಿರುವ ಉದ್ದೇಶ, ಪುರುಷ ಸ್ವಾರ್ಥದ ವಿವರಗಳೊಂದಿಗೆ ಪುರುಷ ಹಾಗು ಪ್ರಕೃತಿಯ ನಡುವಣ ನಿರಂತರ ಹೋರಾಟವನ್ನೇ ಕಟ್ಟಿಕೊಡುತ್ತದೆ. ಹೀಗೆ ಮನೆತನದ ಗೌರವಕ್ಕೆ, ಊರ ಒಳಿತಿಗೆ, ಜಲಮೂಲಕ್ಕೆ ಬಲಿಯಾಗುವ ಹೆಣ್ಣನ್ನು ದೇವತೆಯಾಗಿಸುವ ಕ್ರಮದಲ್ಲಿಯೇ

ಪ್ರಕೃತಿಯ ಮೇಲಿನ ಮನುಷ್ಯನ ಅಸಹಜ ಅತಿಕ್ರಮಣವನ್ನು ಪ್ರತಿಭಟಿಸುವ ನೆಲೆಗಳನ್ನು ಕಾಣಬಹುದು. ಕೆರೆ, ಬಾವಿ ತೋಡುವ ಮೂಲಕ, ಪ್ರಕೃತಿಯ ಮೇಲೆ ನಿಯಂತ್ರಣ ಸಾಧಿಸಿ ಹೊರಡುವ ಮನುಷ್ಯ ಅಹಂಕಾರವನ್ನು ಪ್ರಕೃತಿಯು ನೀರು ಬರದಿರುವ ಮೂಲಕ, ಬಿತ್ತುವ ಮೂಲಕ ಅಥವಾ ಕಟ್ಟಿದ ಕಟ್ಟೆ ಒಡೆದು ಹಾಗೂ ಹರಿದು ಹೋಗುವ ಮೂಲಕ ಪ್ರತಿಭಟಿಸುತ್ತದೆ. ನೀರು ಮತ್ತು ಮನುಷ್ಯನ ನಡುವಿನ ಈ ಹೋರಾಟವೇ ವಿಸ್ಮಯವಾದದ್ದು.

ಜಿಲ್ಲೆಯಲ್ಲಿ ಮೌಖಿಕ ಸಂಪ್ರದಾಯದಲ್ಲಿ ಬರುವ ಇವೆಲ್ಲ ಜನಪದ ಇತಿಹಾಸವೇ ಆಗಿವೆ. ತ್ಯಾಗ ಬಲಿದಾನದಂತಹ ಸತಿಯರ ಐತಿಹ್ಯಗಳು ಬಲಿಯಾದ ವ್ಯಕ್ತಿಯ ಹಿರಿಮೆಯನ್ನು ಪ್ರೇರೇಪಿಸುತ್ತವೆ. ಅಲ್ಲದೆ ಲೋಕೋಪಕಾರಿಯಾಗಿ ಬಾಳಬೇಕು ಎಂಬ ಸಂದೇಶ ಇಂತಹ ಐತಿಹ್ಯಗಳಿಂದ ತಿಳಿದುಬರುತ್ತದೆ. ಹಾಗೆಯೇ ಕೆರೆ, ಕೆರೆಪರಿಸರದಲ್ಲಿರುವ ದೇವರುಗಳಿಗೆ ಸಂಬಂಧಿಸಿದಂತೆ ವಿವಿಧ ಬಗೆಯ ಕಥೆ, ಐತಿಹ್ಯಗಳಿದ್ದು, ಅವು ಇಂದು ಅಲ್ಲಿನ ಇತಿಹಾಸವಾಗಿ ಹೊರಹೊಮ್ಮುತ್ತಿವೆ.

ಅಡಿಟಿಪ್ಪಣಿಗಳು

೧. ಸೋಮೇಶ ಎಂ., ೨೦೦೧: ಡಣಾಯಕನ ಕೆರೆ, ಪು.೩೬

೨. ಸುಬ್ಬಣ್ಣ ರೈ ಎ., ೧೯೯೪: ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ಪು.೨

೩. ಸೋಮೇಶ ಎಂ., ಪೂರ್ವೋಕ್ತ, ಪು.೩೬

೪. ಸುಬ್ಬಣ್ಣ ರೈ ಎ., ಪೂರ್ವೋಕ್ತ, ಪು.೫೬

೫. ಲಕ್ಷ್ಮಣ್ ತೆಲಗಾವಿ(ಸಂ), ೧೯೮೭: ಹರತಿಸಿರಿ, ಪು.೮೦೩

೬. ಅದೇ, ಪು.೮೦೦

೭. ಕೂಡ್ಲೂರು ವೆಂಕಟಪ್ಪ, ೨೦೦೭: ಸ್ಥಳನಾಮ ವೀರರು, ಪು.೨೩

೮. ಧ್ರುವನಾರಾಯಣ ಎಂ.(ಅನು), ೨೦೦೧: ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ(ಮೂಲ: ಕೊಟ್ರಯ್ಯ ಸಿ.ಟಿ.ಎಂ.), ಪು.೧೩೮

೯. ತೀ.ನಂ.ಶ್ರೀ., ೨೦೦೬: ಸಮಗ್ರ ಗದ್ಯ, ಪು.೩೨೧–೩೨೮

೧೦. ಯೋಗೀಶ್ವರಪ್ಪ ಡಿ.ಎನ್.(ಸಂ), ೨೦೦೨: ಕಲ್ಪಸಿರಿ, ಪು.೧೧೮

೧೧. ಗೋಪಾಲ್ ಆರ್.(ಸಂ), ೨೦೧೦: ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೫೭೮; ಪ್ರಹ್ಲಾದರಾವ್ ಕೆ., ೨೦೦೫: ಕೆರೆಯ ಹಾರ(ಕೋಲಾರ ಜಿಲ್ಲೆಯ ಜಲಪರ್ವ), ಪು.೬೦–೬೧

೧೨. ಗೋಪಾಲ್ ಆರ್.(ಸಂ), ಪೂರ್ವೋಕ್ತ, ಪು.೫೭೮

೧೩. ಸಂತೇಬೆನ್ನೂರು ಸುಮತೀಂದ್ರ ನಾಡಿಗ್, ೨೦೦೭: ಸೂಳೆಕೆರೆ(ಶ್ರೀ ಸಿದ್ಧೇಶ್ವರ ಚರಿತ್ರೆ), ಪು.೫೮

೧೪. ಶಂಕರಪ್ಪ ಬಡಿಗೇರ, ೨೦೧೫: ಗದಗ ಜಿಲ್ಲೆಯ ಕೆರೆ ಮತ್ತು ಬಾವಿಗಳು(ಚಾರಿತ್ರಿಕ ಅಧ್ಯಯನ), ಪಿ.ಎಚ್.ಡಿ. ಅಪ್ರಕಟಿತ ಮಹಾಪ್ರಬಂಧ, ಪು. ೨೬೦

೧೫. ನೇಗಿನಹಾಳ ಎಂ.ಬಿ.(ಪ್ರ.ಸಂ), ಜನಪದ ನಂಬಿಕೆಗಳು, ಕಣಜ.ಇನ್, ಅಂತರ್ಜಾಲದಿಂದ ಮಾಹಿತಿ ಸಂಗ್ರಹಿಸಲಾಗಿದೆ.

೧೬. ಅದೇ

೧೭. ಅಂಬುಗ ಗ್ರಾಮದ ಬದರಿ ನಾರಾಯಣ ಇವರಿಂದ ೮-೭-೨೦೧೩ರಂದು ಅಂಬುಗ ಕೆರೆಯ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ; ಗೋಪಾಲ್ ಆರ್.(ಸಂ), ಪೂರ್ವೋಕ್ತ, ಪು.೫೭೯

೧೮. ಕೆಲ್ಲಂಗೆರೆ ಗ್ರಾಮದ ಶಾನುಭೋಗರಾಗಿದ್ದ ವೆಂಕಟರಾಮಯ್ಯ ಅವರಿಂದ ೧೧-೧೨-೨೦೧೧ರಂದು ಕೆಲ್ಲಂಗೆರೆ ಕೆರೆಯ ಕುರಿತ ಮಾಹಿತಿಯನ್ನು ಪಡೆಯಲಾಗಿದೆ.

೧೯. ಗೋಪಾಲ್ ಆರ್.(ಸಂ), ಪೂರ್ವೋಕ್ತ, ಪು.೫೮೦

೨೦. ಸಾಹಿತಿ ಮತ್ತು ಸಂಶೋಧಕರು ಆದ ಬೇಲೂರು ಗ್ರಾಮದ ಶ್ರೀವತ್ಸ ಎಸ್. ವಟಿ., ಅವರಿಂದ ೧೦-೦೮-೨೦೧೩ರಂದು ಬೇಲೂರು ಕೆರೆ ಬಗೆಗಿನ ಐತಿಹ್ಯಗಳನ್ನು ಸಂಗ್ರಹಿಸಲಾಗಿದೆ. ಮಳಲಿ ವಸಂತಕುಮಾರ್, ೧೯೯೬: ಹೊಯ್ಸಳ ಸಂಪದ, ಪು.೪೨೩

೨೧. ಶ್ರೀವತ್ಸ ಎಸ್. ವಟಿ., ೨೦೧೧: ಬೇಲೂರು ಮೇಲೆ ಹೊಸ ಬೆಳಕು, ಪು.೧೬೦

೨೨. ಕ್ಯೂ.ಜೆ.ಎಂ.ಎಸ್., ೧೯೧೮, ಸಂ-೩, ಪು.೧೦೦

೨೩. ಮಳಲಿ ವಸಂತಕುಮಾರ್, ಪೂರ್ವೋಕ್ತ, ಪು.೪೨೦

೨೪. ಅದೇ

೨೫. ಹಳ್ಳಿಕೇರಿ ಎಫ್.ಟಿ., ೧೯೯೬: ಕೆರೆಯ ಪದ್ಮರಸ ಮತ್ತು ಆತನ ವಂಶಜರು, ಪು.೭೭

೨೬. ಅದೇ ಪು.೭೯

೨೭. ಮಳಲಿ ವಸಂತಕುಮಾರ್, ಪೂರ್ವೋಕ್ತ, ಪು.೪೨೧

೨೮. ಶ್ರೀವತ್ಸ ಎಸ್. ವಟಿ., ಅವರಿಂದ ೧೦-೮-೨೦೧೩ರಂದು ಮಾಹಿತಿ ಸಂಗ್ರಹಿಸಲಾಗಿದೆ.

೨೯. ಗೋಪಾಲ್ ಆರ್.(ಸಂ), ಪೂರ್ವೋಕ್ತ, ಪು.೫೮೦

೩೦. ನಾಗರನವಿಲೆ ಗ್ರಾಮದ ನಾಗೇಶ್ವರ ದೇವಾಲಯದ ಅರ್ಚಕರಾದ ಶೇಖರಯ್ಯ ಅವರಿಂದ ೪-೮-೨೦೧೨ರಂದು ನಾಗರನವಿಲೆ ಕೆರೆಯನ್ನು ಕುರಿತು ಇರುವ ಐತಿಹ್ಯಗಳನ್ನು ಸಂಗ್ರಹಿಸಲಾಗಿದೆ.

೩೧. ಕಣಕಟ್ಟೆ ಕೆರೆಯ ನೀರ್ಗಂಟಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಬೆಸ್ತ ಜನಾಂಗದ ಚಂದ್ರಪ್ಪ ಅವರಿಂದ ೨೨-೩-೨೦೧೨ರಂದು ಈ ಕೆರೆಯ ಬಗ್ಗೆ ಮಾಹಿತಿಗಳನ್ನು ಪಡೆಯಲಾಗಿದೆ. ಹಾಗೆಯೇ ಹಾರನಹಳ್ಳಿ ಗ್ರಾಮದ ಸುರೇಶ್ ಅವರಿಂದ ಹಾರನಳ್ಳಿ ಕೆರೆ ಬಗೆಗಿನ ಐತಿಹ್ಯವನ್ನು ಸಂಗ್ರಹಿಸಲಾಗಿದೆ.

೩೨. ಆಲಗೌಡನಹಳ್ಳಿಯ ರಾಮಚಂದ್ರ ಎಂಬ ಶಿಕ್ಷಕರಿಂದ ೨೦-೧೧-೨೦೧೩ರಂದು ಆಲಗೌಡನಹಳ್ಳಿಯ ಕೆರೆಯ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ.

೩೩. ಗೋಪಾಲ್ ಆರ್.(ಸಂ), ಪೂರ್ವೋಕ್ತ, ಪು.೫೭೫

೩೪. ಅಣತಿ ಗ್ರಾಮದವರಾದ ದಿನೇಶ್ ಅವರಿಂದ ೨೫-೧೦-೨೦೧೨ರಂದು ಅಣತಿ ಕೆರೆ ಬಗೆಗಿನ ಐತಿಹ್ಯವನ್ನು ಸಂಗ್ರಹಿಸಲಾಗಿದೆ.

೩೫. ಹೊನ್ನಾವರ ಕೆರೆಯ ಕೋಡಿಯಮ್ಮ ದೇವಾಲಯದ ಅರ್ಚಕರಾದ ಚಂದ್ರಪ್ಪ ಅವರಿಂದ ೨೮-೦೪-೨೦೧೩ರಂದು ಮಾಹಿತಿ ಪಡೆಯಲಾಗಿದೆ.

೩೬. ಬಸ್ತಿಹಳ್ಳಿಯ ಸಂಜೀವಯ್ಯ ಅವರಿಂದ ೯.೭.೨೦೧೩ರಂದು ಮೊಸಳೆ ಕೆರೆಯ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ.

೩೭. ಅನುಸೂಯ ದೇವಾಂಗ ಮಠ, ವೀಣಾ ಹೂಗಾರ(ಸಂ), ೨೦೧೩: ಕಥನ ಕವನಗಳ ಸಂಗ್ರಹ ಮತ್ತು ವಿಚಾರ ಸಾಹಿತ್ಯ, ಪು.೪೧-೪೨; ನಾಗತಿಹಳ್ಳಿಯ ಚನ್ನಪ್ಪ ಅವರಿಂದ ತಿಮ್ಮಪ್ಪನಾಯಕನ ಕೆರೆಯ ಬಗ್ಗೆ ಇದ್ದ ಕಥೆಯನ್ನು ಸಂಗ್ರಹಿಸಲಾಹಿತು.

ಅಧ್ಯಾಯ – ಐದು

ಕೆರೆ ಮತ್ತು ಸಮಾಜ

ಅಧ್ಯಾಯ – ಐದು

ಕೆರೆ ಮತ್ತು ಸಮಾಜ

ಜಗತ್ತಿನ ಜನ ಜೀವನಕ್ಕೆ ಭೂಮಿಯೇ ಆಸರೆ. ಸಮಾಜ, ಧರ್ಮ ಮತ್ತು ಆರ್ಥಿಕ ಸ್ಥಿತ್ಯಂತರಕ್ಕೆ ಜೀವನಾಡಿ. ಕೇವಲ ಸಂಪತ್ತಿನ ಸಂಕೇತವಾಗಿರದೆ, ಆದ್ಯಾತ್ಮಿಕ ಬದುಕಿನಲ್ಲೂ ಸ್ಥಾನ ಪಡೆದಿತ್ತು. ಭಾರತೀಯರಿಗೆ ಬರಿ ಮಣ್ಣಲ್ಲ ಜನ್ಮ ಕೊಟ್ಟ ತಾಯಿ. ಇದನ್ನೇ ನಂಬಿ ಬದುಕುವ ರೈತನಿಗೆ ಜೀವ ಮಾತೃಕೆ. ಕೃಷಿ ಬಹು ಜನರ ಮೂಲ ಕಸುಬು. ಇದು ನಾಗರಿಕತೆಯ ಉಸಿರು. ಭಾರತೀಯರಿಗೆ ಕೃಷಿ ಜೀವ ಮಾರ್ಗವಾಗಿತ್ತೇ ಹೊರತು ಹಣ ಸಂಪಾದನೆಯ ಜ್ಞಾನವಲ್ಲ. ಮನೆ ಮಂದಿಗೆಲ್ಲ ನೆಮ್ಮದಿ ನೀಡಿದ್ದ ವ್ಯವಸಾಯವನ್ನು ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲೆಂದು ಅಚಲವಾಗಿ ನಂಬಿದ್ದರು.[೧]

ಆಕಾಶದಿಂದ ಸುರಿದ ಮಳೆ ಹನಿಗಳನ್ನು ಕೆರೆ ಕಟ್ಟೆಗಳಲ್ಲಿ ಕೂಡಿಟ್ಟುಕೊಂಡು ಬದುಕುವುದೂ ಒಂದು ಕಲೆ. ಇದು ಪ್ರಾಚೀನ ಕಾಲದಿಂದಲೂ ಭಾರತೀಯರಿಗೆ ತಿಳಿದಿತ್ತು. ಹಾಗೆಯೇ ಕರ್ನಾಟಕದಲ್ಲಿ ಕಾಲುವೆ, ಕೆರೆ, ಕಟ್ಟೆ ಹಾಗೂ ಬಾವಿಗಳನ್ನು ಕಟ್ಟಿಸುವುದು ಅತಿ ಪುಣ್ಯದ ಕೆಲಸವಾಗಿತ್ತು. ಇದರಿಂದ ಜನತೆಗೆ ಶ್ರೇಯಸ್ಕರವಾಗುತ್ತಿದೆ ಮಾತ್ರವಲ್ಲದೆ, ದೇವತೆಗಳೂ ಸುಪ್ರಿತರಾಗುತ್ತಾರೆಂಬ ನಂಬಿಕೆ ಜನಪದರಲ್ಲಿತ್ತು. ಅಂತೆಯೇ ರಾಜರು, ಅಧಿಕಾರಿಗಳು, ಶ್ರೀಮಂತರು ಹಾಗು ಸ್ತ್ರೀಯರು ಈ ಪುಣ್ಯ ಕಾರ್ಯಗಳಲ್ಲಿ ಭಾಗಿಗಳಾಗಿದ್ದರು. ಗ್ರಾಮಸಭೆ, ವರ್ತಕ ಶ್ರೇಣಿ, ದೇವಸ್ಥಾನಗಳೆಂಬ ಸಂಸ್ಥೆಗಳೂ ಈ ದಿಸೆಯಲ್ಲಿ ಹಿಂದೆ ಬಿದ್ದಿಲ್ಲ. ಅಂದಿನ ಸಮಾಜ ನೀರಾವರಿ ಕಾರ್ಯಕ್ಕೆ ಕೊಟ್ಟಿದ್ದ ಮಹತ್ವ ಹಾಗೂ ಆದ್ಯತೆ ಗಮನಾರ್ಹವಾದದು.

ಕೆರೆ ಎಂಬ ಪದದ ಬಗೆಗೆ ಈ ಹಿಂದಿನ ಅಧ್ಯಾಯಗಳಲ್ಲಿ ಹೀಗಾಗಲೇ ಪ್ರಸ್ತಾಪಿಸಿದ್ದು, ಮುಂದುವರೆದಂತೆ ಅವುಗಳೊಂದಿಗಿನ ಸಾಂಸ್ಕೃತಿಕ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ. ನೀರು ಸಂಸ್ಕೃತಿಯ ಒಂದು ಪ್ರತೀಕ. ಇದಕ್ಕೆ ನಿದರ್ಶನ ಗತಕಾಲದ ಇತಿಹಾಸ. ನೀರಿನೊಂದಗಿನ

ಮಾನವನ ಸಂಬಂಧ ವಿಶಿಷ್ಟವಾದದ್ದು. ನೀರು ಅವನ ಬದುಕಿನಲ್ಲಿ ಅವಶ್ಯಕವಾದ ದ್ರವ್ಯವಾಗಿ ಉಳಿಯಲಿಲ್ಲ. ಅದು ಅವನ ಭಾವ ಪ್ರಪಂಚದಲ್ಲಿ ವಿಶಿಷ್ಟವಾದ ಸ್ಥಾನ ಪಡೆದು ದೈವತ್ವಕ್ಕೇರಿತು. ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕವಲಯದಲ್ಲಿ ವಿಶಿಷ್ಟ ಸ್ಥಾನ ಪಡೆಯಿತು.

ಜನತೆಯ ಪರಸ್ಪರ ಸಂಬಂಧವುಳ್ಳ ಸುವ್ಯವಸ್ಥೆಯ ಸಮೂಹವನ್ನು ಸಮಾಜವೆನ್ನಬಹುದು. ಇದರಲ್ಲಿ ವರ್ಗ–ವರ್ಣ, ಕುಟುಂಬ, ಸಂಘ–ಸಂಸ್ಥೆ ಅವುಗಳ ಆಲೋಚನಾಕ್ರಮ, ಚಟುವಟಿಕೆಗಳು ಇತ್ಯಾದಿ ಮುಖ್ಯ ಅಂಶಗಳು. ಇವು ಆಯಾ ಸಮಾಜದಲ್ಲಿ ಒಪ್ಪಿತ ಮೌಲ್ಯಕ್ಕೆ ಬದ್ಧವಾಗಿರುತ್ತವೆ. ಪ್ರಾಚೀನ ಕರ್ನಾಟಕದಲ್ಲಿ ಕೆರೆ ನೀರಾವರಿಯ ಸಾಮಾಜಿಕ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಹಾಸನ ಜಿಲ್ಲೆಯ ಕೆರೆಗಳನ್ನು ವಿಶ್ಲೇಷಿಸಲಾಗಿದೆ.[೨]

ಸಮಾಜದಲ್ಲಿ ಗ್ರಾಮಗಳು ನಿರ್ಮಾಣವಾದಂತೆ ನೀರಿನ ಆಸರೆಯಾಗಿ ಕೆರೆ, ಕಟ್ಟೆ, ಜಲಾಶಯಗಳು ನಿರ್ಮಾಣಗೊಂಡವು. ಕೆರೆಯ ಸಮೀಪದಲ್ಲಿ ದೇವಾಲಯಗಳನ್ನು ಕಟ್ಟಿಸುತ್ತಿದ್ದರು. ದೇವಾಲಯಗಳ ಪೂಜಾ ಕೈಂಕರ್ಯಕ್ಕೆ ಭೂದಾನಗಳನ್ನು ನೀಡಿರುವುದು ಜಿಲ್ಲೆಯ ಶಾಸನಗಳಿಂದ ತಿಳಿಯಲಾಗಿದೆ.[೩] ದೇವಾಲಯದ ಭೂಮಿಯ ಬೇಸಾಯದಲ್ಲಿ ನೇರವಾಗಿ ತೊಡಗದೆ ಇತರರಿಗೆ ಬಿಟ್ಟುಕೊಟ್ಟು, ಫಸಲಿನ ಒಂದು ಭಾಗವನ್ನು ಮಾತ್ರ ಪಡೆಯುತ್ತಿದ್ದರು ಎಂಬುದು ಗಮನಾರ್ಹ. ಕೃಷಿಕನು ತನ್ನ ಭೂಮಿಯಲ್ಲಿ ಬೆಳೆದ ಒಂದು ಭಾಗವನ್ನು ರಾಜನಿಗೆ ಕೊಡುತ್ತಿದ್ದಂತೆಯೇ, ಆಲಯದ ಭೂಮಿಯಲ್ಲಿ ಬೆಳೆದ ಫಸಲಿನ ಒಂದು ಭಾಗ ಆಲಯಕ್ಕೆ ಸೇರುತ್ತಿದ್ದಿತು. ಇದನ್ನು ಮೇಲ್‌ವರು ಎಂದೂ, ಬೇಸಾಯಗಾರನು ತನ್ನ ಪಾಲಿಗೆ ಇಟ್ಟುಕೊಳ್ಳುವ ಭಾಗವನ್ನು ಕುಡಿವರಂ ಅಥವಾ ಒಕ್ಕಲು(ಕೀಳ್‌ವರಂ) ಭಾಗವೆಂದೂ ಕರೆಯುತ್ತಿದ್ದರು.[೪]

ಕೆರೆ ನೀರಿನ ಪಲಾನುಭವಿಗಳಲ್ಲಿ ಆದ್ಯತೆಯ ಸಮಸ್ಯೆಯು ಗ್ರಾಮಸ್ಥರೆಲ್ಲರ ಒಪ್ಪಿಗೆ ಮೇಲೆ ನಿರ್ಣಯವಾಗುತ್ತಿತ್ತು. ಶಾಸನಗಳನ್ನು ಗಮನಿಸಿದಾಗ ಸಹಜವಾಗಿ ದೇವಾಲಯದ ಭೂಮಿಗಳಿಗೆ ಮೊದಲ ಆದ್ಯತೆಯಿರುತ್ತಿತ್ತು. ಮತ್ತು ಕೆರೆ ನಿರ್ಮಾಣ, ನಿರ್ವಹಣಾ ಕಾಮಗಾರಿಗಳಿಗಾಗಿ ಶ್ರಮಿಸುವವರಿಗೆ, ದಾನಿಗಳಿಗೆ ನಂತರದ ಪ್ರಾಧಾನ್ಯತೆ ಇರುತ್ತಿತ್ತು. ಕೆರೆ ಕೆಳಗಣ ಮೊದಲೇರಿಯ ಭೂಮಿ ಇವರ ಪಾಲಾಗುತ್ತಿತ್ತು.[೫] ಆಧುನಿಕ ಯುಗದಲ್ಲಿ ಉಳುವವನೇ ಭೂಮಿಯ ಒಡೆಯ ಎಂಬ ಕಾನೂನಿನಿಂದ ಕೆರೆ ಕೆಳಗಣ ಭೂಮಿ ಎಲ್ಲಾ ವರ್ಗಗಳಿಗೂ ಹಂಚಿಕೆಯಾಗಿದೆ.

ಗ್ರಾಮಸ್ಥರು ಕೃಷಿಕರು ತಮ್ಮ ತಮ್ಮ ಅವಶ್ಯಕತೆಗಳಿಗೆ ತಕ್ಕಂತೆ ಕುಡಿಯುವ ನೀರಿಗಾಗಿ, ಗದ್ದೆ ತೋಟಗಳಿಗಾಗಿ ಬಾವಿಗಳನ್ನು, ತಮ್ಮ ಖಾಸಗಿ ಜಮೀನುಗಳನ್ನು ನಿರ್ಮಿಸಿಕೊಳ್ಳುವುದಕ್ಕೆ ತೊಂದರೆಯಿರಲಿಲ್ಲ. ಅಲ್ಲಿ ಹಂಚಿಕೆಯ ಸಮಸ್ಯೆಯೂ ಒದಗುತ್ತಿರಲಿಲ್ಲ. ಆದರೆ ಊರೊಟ್ಟಿನ ಬಾವಿ, ಕಲ್ಯಾಣಿಗಳು, ದೇವಾಲಯದ ಪುಷ್ಕರಣಿಗಳು, ಕೆರೆಗಳ ನೀರನ್ನು ಬಳಸುವುದರ ಬಗೆಗೆ ಸಮಸ್ಯೆಗಳು, ವಿವಾದಗಳು, ವ್ಯಾಜ್ಯಗಳು ನಡೆದಿರುವಂತೆ ಕೆಲವು ಶಾಸನಗಳು ಬೆಳಕು ಚೆಲ್ಲುತ್ತವೆ.

ಕೆರೆ ನಿರ್ಮಿಸುವ ಸ್ಥಳ ಮತ್ತು ನೀರೊತ್ತಾಗುವ ಸಮಸ್ಯೆ

ಕೆರೆ ಕಟ್ಟಿಸಲು ಸೂಕ್ತವಾದ ಸ್ಥಳ ಗ್ರಾಮಕ್ಕೆ ಅಥವಾ ದಾನಿಗಳಿಗೆ ಸೇರಿದ್ದರೆ, ಅವರ ಒಪ್ಪಿಗೆ ಮೇರೆಗೆ ಕೆರೆ ಕಟ್ಟಿಸಲಾಗುತ್ತಿತ್ತು. ಹಾಗಾದಿದ್ದರೆ ಅವುಗಳ ಒಡೆಯರಿಗೆ ಅದನ್ನು ಕ್ರಯ ಮಾಡಲಾಗುತ್ತಿತ್ತು. ಅಥವಾ ಬದಲಿ ನೀರಾವರಿ ಭೂಮಿಯನ್ನು ನೀಡಲಾಗುತ್ತಿತ್ತು.[೬] ಈ ಒಪ್ಪಂದವನ್ನು ಕೆರೆ ನಿರ್ಮಿಸುವ ಮೊದಲೇ ಮಾಡಿಕೊಳ್ಳಬೇಕಾಗಿತ್ತು. ಕೆರೆ ನಿರ್ಮಾಣದಿಂದ ನೀರೊತ್ತಾಗಿ ಮನೆ, ಗದ್ದೆ, ತೋಟಗಳು ಚೌಗಾಗುತ್ತಿದ್ದರೆ ಬದಲಿಭೂಮಿ ನೀಡಿ ಸಮಸ್ಯೆ ಬಗೆಹರಿಸಿರುವುದು ಕ್ರಿ.ಶ. ೧೨೦೭ರ ಹಿರಿಯೂರು ಶಾಸನದಲ್ಲಿದೆ.[೭]

ನೀರಿನ ಹಂಚಿಕೆಯ ಸಮಸ್ಯೆ

ಕೆರೆ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ಗ್ರಾಮಗಳಲ್ಲಿ ಸಮಸ್ಯೆಗಳು ಉದ್ಭವಿಸುತ್ತಿದ್ದವು. ಬ್ರಾಹ್ಮಣರು ಮತ್ತು ಬ್ರಾಹ್ಮಣೇತರ ಕೃಷಿಕ ಕುಟುಂಬದ ಮಧ್ಯೆ ಕೆರೆಯಿಂದ ನೀರನ್ನು ಬಳಸುವ ಸಂಬಂಧವಾಗಿ ಉಂಟಾಗುವ ಕಲಹಗಳು ಶಾಸನಗಳಲ್ಲಿ ಸಿಗುತ್ತವೆ. ಮಹಾ ಮಂಡಳೀಶ್ವರನಾದ ಜಯಸಿಂಘ ಮಹರಾಜದೇವನು ಆಳುತ್ತಿರುವಾಗ ಕರಿಕನ್ನರು ಕಟ್ಟೆಗೆ ನೀರಿಗೆ ಇಳಿದು ಕಾದಾಡಿ ತೀರಿಕೊಂಡ ವಿಷಯವನ್ನು ಕ್ರಿ.ಶ. ೧೧ನೆಯ ಶತಮಾನದ ಹೊಲಹಳ್ಳಿ ಶಾಸನ ತಿಳಿಸುತ್ತದೆ.[೮] ಕ್ರಿ.ಶ. ೧೧ ಮತ್ತು ೧೨ ನೆಯ ಶತಮಾನದ ಬೇಲೂರು ತಾಲೂಕಿನ ಆಲೂರು ಶಾಸನದಲ್ಲಿ[೯] ಮಾಜಿಗಾಮುಣ್ಡ ಎನ್ನುವನು ಕೆರೆಯ ಕಟ್ಟೆ ಕಡಿದಾಗ ಕಾಳಗವೇ ನೆಡೆಯಿತು. ಕೊನೆಗೆ ಅವನು ಸತ್ತ ವಿಷಯ ಆಲೂರು ಶಾಸನದಲ್ಲಿದೆ. ಅದೇ ರೀತಿ ಕ್ರಿ.ಶ. ೧೨೧೧ ಮತ್ತು ೧೨ನೆಯ ಶತಮಾನದ ಶಾಸನದಲ್ಲಿ[೧೦] ಮಡಬಲು ಎಂಬಲ್ಲಿ ಕೆರೆಯೊಂದಕ್ಕೆ ಸಂಬಂಧಿಸಿದಂತೆ ಕೆರೆ ಹಳ್ಳಿಯವರೊಡನೆ ಉಂಟಾದ ಸಂಘರ್ಷದಲ್ಲಿ ಅಂತಿಮವಾಗಿ ಒಡೆಯನು ಮರಣ ಹೊಂದಿದ ವಿಷಯವಿದೆ. ಮೋಹನಕೃಷ್ಣರೈ ಅವರು ಪ್ರಭುತ್ವ ಮತ್ತು ಜನತೆ ಎಂಬ ಗ್ರಂಥದಲ್ಲಿ ಕೆರೆಯೊಂದಕ್ಕೆ ಒಡ್ಡುದಾರಿಯನ್ನು ಮಾಡುವ ವಿಷಯದಲ್ಲಿ ವಿವಾದ ಉಂಟಾಗಿರುವಂತೆ ತೋರುತ್ತದೆ ಎಂದು ಸೂಚಿಸಿದ್ದಾರೆ. ಬಹುಶಃ ಭೂ ಮಾಲೀಕರು ಮತ್ತು ಕೃಷಿಕರ ನಡುವೆ ನೀರಿನ ಹಂಚಿಕೆಗಾಗಿ ಉಂಟಾದ ಮನಸ್ತಾಪಗಳಿರಬೇಕು. ಈ ಶಾಸನಗಳಲ್ಲಿ ವಿಷಯಗಳು ಸ್ಪಷ್ಟವಾಗಿಲ್ಲ.

ಅರಸೀಕೆರೆ ತಾಲೂಕಿನ ತಳಲೂರು ಗ್ರಾಮದಲ್ಲಿ ನೀರಿನ ವ್ಯಾಜ್ಯವನ್ನು ಶಾಸನಗಳಿಂದ ಅರಿಯಬಹುದು. ಕ್ರಿ.ಶ. ೧೯೧ರ ಶಾಸನದಲ್ಲಿ[೧೧] ನಾರಣಘಟ್ಟದ ಕೆರೆಯ ತುಂಬಿನ ಪಂಥದ ನೀರು ಚಿಕ್ಕಕೆರೆಯ ಗದ್ದೆಗೆ ಹರಿಸಬೇಕೆಂದವ ಶಿವದ್ರೋಹಿ ಮೂವತ್ತಿಛಾಯಿರಕ್ಕೆ ಬಹಿಷ್ಕೃತರು ಎಂದಿದೆ. ನಾರಣಘಟ್ಟದ ನೀರು ಅಲ್ಲಿನ ಶೈವ ಸ್ಥಾನಗಳ ಭೂಮಿಗೆ ನೀರುಣಿಸುತ್ತಿದ್ದಂತೆ ತೋರುತ್ತದೆ. ಶಾಸನದಲ್ಲಿ ಮಧುಸೂಧನ ದೇವಾಲಯದ ಕೆರೆ ಚಿಕ್ಕದಾದರಿಂದ ಕೃಷಿ ಭೂಮಿಗೆ ನಾರಣಘಟ್ಟದ ನೀರನ್ನು ಒದಗಿಸಬೇಕೆಂಬ ಬೇಡಿಕೆ ವೈಷ್ಣವರಿಂದ ಬಂದಿರುವಂತೆ ತಿಳಿಯುತ್ತದೆ. ಇದಕ್ಕೆ ಶೈವ

ಸ್ಥಾನದ ಒಪ್ಪಿಗೆ ಇರಲಿಲ್ಲ. ಸುಮಾರು ೮೦ ವರ್ಷಗಳ ನಂತರ ಕ್ರಿ.ಶ. ೧೨೭೧ರ ಶಾಸನದಲ್ಲಿ[೧೨] ಮಧುಸೂದನ ದೇವರ ಚಿಕ್ಕಕೆರೆಯ ಗದ್ದೆಗೆ ನಾರಣಘಟ್ಟದ ನೀರನ್ನು ಉಪಯೋಗಿಸಿಕೊಳ್ಳುವಂತೆ ಶಾಸನ ಬರೆಸಲಾಗಿದೆ. ಮೊದಲಿದ್ದ "ನೀರಪಂಥ" ವಿಲ್ಲವೆಂದೂ ಒಡಂಬಡಿಸಿ ಕೊಟ್ಟು ಆವೃತ್ತಿಗಳ ಮಹಾಜನರು ಬಳಸಿದ ಆವೃತ್ತಿಗಳೋಪಾದಿಯ ನೀತಿ ಸಮಯಕ್ಕೆ ೧ ಗದ್ಯಾಣದಂತೆ ವರ್ಷಕ್ಕೆ ಪ್ರತಿ ಕೊಡುವಂತೆ ನಿಗದಿ ಪಡಿಸಲಾಗಿದೆ. ಇಲ್ಲಿ ಕೃಷಿ ನೀರಿನ ಹಂಚಿಕೆ ಸಮಸ್ಯೆಗಿಂತ ಧಾರ್ಮಿಕತೆ ಎದ್ದು ಕಾಣುತ್ತದೆ. ಅನಂತರದ ವರ್ಷಗಳಲ್ಲಿ ಶೈವರಂತೆ ವೈಷ್ಣವರು ಈ ಗ್ರಾಮದಲ್ಲಿ ಪ್ರಾಭಲ್ಯಕ್ಕೆ ಬಂದು ಹೊಸ ಒಡಂಬಡಿಕೆ ಮಾಡಿಕೊಂಡಿರಬಹುದು. ತಳಲೂರು ಗ್ರಾಮದ ಶಾಸನಗಳಲ್ಲಿ ಉಲ್ಲೇಖವಿರುವಂತೆ ಗ್ರಾಮದಲ್ಲಿ ಶೈವ ಮತ್ತು ವೈಷ್ಣವ ಎರಡು ಧರ್ಮಗಳ ದೇವಾಲಯಗಳು ಇವೆ. ಹಾಗೆಯೇ ಎರಡು ಕೆರೆಗಳಿವೆ. ಶಾಸನಗಳಲ್ಲಿ ಉಲ್ಲೇಖವಾದ ನಾರಾಣಘಟ್ಟ ಕೆರೆ ಈಗಿನ ತಳಲೂರಿನ ದೊಡ್ಡ ಕೆರೆಯಾಗಿದ್ದು, ಊರಮುಂದಿನ ಚಿಕ್ಕಕೆರೆ ಮಧುಸೂದನ ಕೆರೆಯಾಗಿರಬೇಕು. ಇಲ್ಲಿನ ಮಧುಸೂಧನ ಕೆರೆ ನಾರಣಘಟ್ಟ ಕೆರೆಗಿಂತ ಮೊದಲೆ ನಿರ್ಮಾಣವಾದಂತೆ ಶಾಸನಗಳಿಂದ ತಿಳಿದುಬರುತ್ತದೆ.

ಸ್ಪೃಶ್ಯ-ಅಸ್ಪೃಶ್ಯ ಸ್ಪರ್ಶ ನಿಷೇಧಗಳು

ಪ್ರಾಚೀನ ಕಾಲದಲ್ಲಿ ಬಾವಿ, ಕಟ್ಟೆ ಮತ್ತು ದೇವಾಲಯಗಳು ಕೆಲವರ ಪಾಲಿಗೆ ನಿಷೇಧಿತ ಸ್ಥಳಗಳೇ ಆಗಿದ್ದವು. ಸಾಮಾನ್ಯವಾಗಿ ಗ್ರಾಮೀಣ ಭಾಗದಲ್ಲಿ ಕಟ್ಟೆಯ ನೀರನ್ನು ಪೂರ್ವಜರು ಕುಡಿಯಲು ಬಳಸುತ್ತಿದ್ದರು. ಆ ನೀರನ್ನು ಅಸ್ಪೃಶ್ಯರು ಮುಟ್ಟಲು ಅವಕಾಶವಿರಲಿಲ್ಲ. ಈ ರೀತಿಯ ನಿಷೇಧಗಳು ಇಂದಿಗೂ ಕೆಲವು ಗ್ರಾಮಗಳಲ್ಲಿ ಇವೆ. ಉದಾಹರಣೆಗೆ ಚನ್ನರಾಯಪಟ್ಟಣ ತಾಲೂಕಿನ ಬಾಗೂರು ಹೋಬಳಿಗೆ ಸೇರಿದ ಕುರುವಂಕ ಗ್ರಾಮದಲ್ಲಿ ಹಿಂದಿನಿಂದಲೂ ಕಟ್ಟೆಯ ನೀರನ್ನು ಕುಡಿಯಲು, ಪಾತ್ರೆ ತೊಳೆಯಲು ಬಳಸುತ್ತಿದ್ದರು. ಆದರೆ ನಿಮ್ನ ವರ್ಗದವರಿಗೆ ಮುಟ್ಟಲು ಅವಕಾಶವಿರಲಿಲ್ಲ. ಬ್ರಾಹ್ಮಣರು ನಿಮ್ನ ವರ್ಗದವರ ಕೊಡಗಳಿಗೆ ನೀರನ್ನು ತಂದು ಹಾಕುತ್ತಿದ್ದರು. ಈ ದಿನಗಳಲ್ಲಿ ನಿಮ್ನ ವರ್ಗದವರು ಅಧಿಕಾರಿಗಳ ಮೂಲಕ ನೀರನ್ನು ಮುಟ್ಟಿದ್ದಾರೆ.[೧೩] ಇಂದು ಕಟ್ಟೆಯೂ ಎಲ್ಲ ಜನ ಜಾತಿಗಳಿಗೂ ತೆರೆದುಕೊಂಡಂತಾಗಿದೆ. ಕಟ್ಟೆಗಳಿಗಿದ್ದ ಸ್ಪೃಶ್ಯ-ಅಸ್ಪೃಶ್ಯ ಸ್ಪಶ್ಯಗಳೆಂಬ ನಿಷೇಧಗಳು ಇಲ್ಲಿನ ಕೆರೆಗಳಿಗೆ ಇರಲಿಲ್ಲ. ಆದರೆ ಬ್ರಾಹ್ಮಣ ವರ್ಗದವರಿಗೆ ಮೊದಲ ಆದ್ಯತೆ ಇದ್ದಂತೆ ತೋರುತ್ತದೆ. ಉದಾಹರಣೆಗೆ ಹೊಳೆನರಸೀಪುರ ತಾಲೂಕಿನಲ್ಲಿ ಬರುವ ಸೋಮೇನಹಳ್ಳಿಯ ದೊಡ್ಡಕೆರೆಯ ನೀರಿನಲ್ಲಿ ಹಿಂದೆ ಬ್ರಾಹ್ಮಣರು ಪ್ರತಿನಿತ್ಯ ಬೆಳಿಗ್ಗೆ ಸ್ನಾನ ಮಾಡಿತ್ತಿರುವುದಾಗಿ ಹೇಳುತ್ತಾರೆ. ಈ ಪದ್ಧತಿ ಇಂದಿಗೂ ರೂಢಿಯಲ್ಲಿದೆ. ಅವರು ಸ್ನಾನ ಮಾಡುವ ಏರಿಯ ಒಳಪಾರ್ಶ್ವದ ಇಳಿಜಾರಿನಲ್ಲಿ ಮೆಟ್ಟಿಲುಗಳಿದ್ದು, ಮೇಲ್ಭಾಗದಲ್ಲಿ ಮಂಟಪವಿದೆ. ಆ ಸ್ಥಳವು ಬ್ರಾಹ್ಮಣ ವರ್ಗದವರ ಬಳಕೆಗೆ ಸೀಮಿತವಾದಂತಿದೆ. ಬ್ರಾಹ್ಮಣರಿಗೆ ಕೆಲವು ಸಂದರ್ಭದಲ್ಲಿ ಅಗ್ರಹಾರಗಳನ್ನು

ಸ್ಥಾಪಿಸಿ, ದೇವಾಲಯಗಳನ್ನು ಕಟ್ಟಿಸಿ ದತ್ತಿ ನೀಡುತ್ತಿದ್ದರು. ಆ ಮೂಲಕ ಅವರ ಅಗತ್ಯತೆಗಳನ್ನು ಪೂರೈಸುವ ಸಾಂಸ್ಕೃತಿಕ ಸಂವರ್ಧನೆಯ ಸಂಬಂಧವಾಗಿ ಕೆರೆಗಳು ನಿರ್ಮಾಣ ವಾಗುತ್ತಿದ್ದವು. ಉದಾಹರಣೆಗೆ ನುಗ್ಗೇಹಳ್ಳಿಯ ಒಂದು ಶಾಸನದಲ್ಲಿ ಬ್ರಾಹ್ಮಣರಿಗಾಗಿಯೇ ಕೆರೆ ಕಟ್ಟಿಸಿರುವುದು ಗಮನಾರ್ಹ.[೧೪] ಹೀಗೆ ನಿರ್ಮಾಣವಾದ ಕೆರೆಗಳು ಬ್ರಾಹ್ಮಣ ಮತ್ತು ರಾಜ ಮನೆತನದವರಿಗೆ ಮಾತ್ರ ಸೀಮಿತವಾಗಿರದೆ ಸಾರ್ವಜನಿಕವಾಗಿ ಬಳಕೆಯಾಗುತ್ತಿವೆ. ಹಾಗಾಗಿ ಸಾಮಾಜಿಕ ನ್ಯಾಯ ಒದಗಿಸುವುದರಲ್ಲಿ ಕೆರೆಯ ಪಾತ್ರ ಪ್ರಮುಖವಾಗಿ ಕಂಡುಬರುತ್ತದೆ.

ಸೂತಕದವರು ಕೆರೆಯ ನೀರಿಗೆ ಇಳಿಯಬಾರದೆಂಬ ನಿಬಂಧನೆಗಳು

ಕೆರೆಯ ನೀರಿನಲ್ಲಿ ಗ್ರಾಮಗಳ ಜನರು ಬಟ್ಟೆ ಒಗೆಯುವುದು, ದನಕರುಗಳ ಮೈ ತೊಳೆಯುವುದು ಸಾಮಾನ್ಯ. ಇದರಿಂದ ಕೆರೆಯ ನೀರು ಮಲಿನವಾಗುತ್ತದೆ ಎಂದು ಭಾವಿಸಿ ಕೆಲವು ನಿಬಂಧನೆಗಳನ್ನು ಹೇರುತ್ತಾ ಬಂದಿದ್ದಾರೆ. ಅರಸೀಕರೆ ತಾಲೂಕಿನ ಸಿಂಗಿನಕೆರೆ, ಮೇಣೆಕೆರೆ, ಸಕಲೇಶಪುರ ತಾಲೂಕಿನ ಕೆಳಗಲೆಕೆರೆ ಹಾಗೂ ಆಲೂರು ತಾಲೂಕಿನ ಕಾರಗೊಡು ಊರಬಾಗಿಲ ಕೆರೆಗಳಲ್ಲಿ ಚಪ್ಪಲಿ ಹಾಕಿಕೊಂಡು ನೀರಿಗೆ ಇಳಿಯುವುದಾಗಲಿ, ಮುಟ್ಟಾದ ಸ್ತ್ರಿಯರು ಬಟ್ಟೆ ತೊಳೆಯುವುದಾಗಲಿ ಮತ್ತು ಸ್ನಾನ ಮಾಡುವುದಾಗಲಿ ಮಾಡುವಂತಿಲ್ಲ. ಈ ಕೆರೆಗಳು ಚಿಕ್ಕಕೆರೆಗಳಾಗಿದ್ದರು ಧಾರ್ಮಿಕವಾಗಿ ಇಂದಿಗೂ ಪವಿತ್ರವಾಗಿವೆ. ಹಾಗೆಯೇ ಸಾವಿನ ಸೂತಕದವರು ಕೆರೆಯ ನೀರಿಗೆ ಇಳಿಯಬಾರದೆಂಬ ನಿಬಂಧನೆಯೂ ಕ್ರಿ.ಶ. ೧೧೭೭ರ ಯಡವನಹಳ್ಳಿಯ ಶಾಸನದಲ್ಲಿದೆ.[೧೫] ಇಂತಹ ನಿಬಂಧನೆಗಳನ್ನು ನೋಡಿದಾಗ ಕೆರೆಯ ನೀರನ್ನು ಸ್ವಚ್ಛವಾಗಿಡಲು ಗ್ರಾಮಗಳ ಜನರು ಅನುಸರಿಸಿರುವ ನಿಬಂಧನೆಗಳು ಪ್ರಶಂಸನೀಯ.

೫.೧. ಕೆರೆ ಮತ್ತು ಸಂಸ್ಕೃತಿ

ಜಗತ್ತಿನ ಎಲ್ಲ ನಾಗರೀಕತೆಗಳ ಹಟ್ಟು ಬೆಳವಣಿಗೆ ನದಿಗಳ ತೀರದಲ್ಲಿ ಕಂಡುಬಂದಿರುವಂತೆ ವಿವಿಧ ಜನಾಂಗಗಳ ಸಂಸ್ಕೃತಿಗಳು ರೂಪುಗೊಳ್ಳುವಲ್ಲಿ ನೀರಿನ ಪಾತ್ರ ಪ್ರಮುಖವಾಗಿದೆ. ನದಿ, ಸಮುದ್ರ, ಕೆರೆ, ಕಟ್ಟೆ, ಮಳೆ, ತೀರ್ಥ ಇವೆಲ್ಲಾವು ನೀರಿನ ಬಹುರೂಪಗಳಾಗಿವೆ. ಜಗತ್ತಿನ ಎಲ್ಲಾ ಜನಾಂಗಗಳ ನಂಬಿಕೆ, ಪುರಾಣ, ಆಚರಣೆ ಮತ್ತು ಕಸುಬುಗಳು ನೀರಿನ ಗರುತ್ವ ಕೇಂದ್ರದ ಸುತ್ತ ರಚನೆಗೊಂಡಿವೆ. ಮಾನವನು ಅನಾದಿಕಾಲದಿಂದಲೂ ನಂಬಿಕೆ ಮತ್ತು ತತ್ಸಂಬಂಧಿತವಾದ ಆಚರಣೆಗಳನ್ನು ನೆಡೆಸಿಕೊಂಡು ಬಂದಿರುವುದನ್ನು ಮನಗಾಣುತ್ತೇವೆ. ಕಾಲ ಕಾಲಕ್ಕೆ ಹೊಸ ಹೊಸ ನಂಬಿಕೆ ಮತ್ತು ಆಚರಣೆಗಳು ಪ್ರವೇಶ ಮಾಡುತ್ತಿರುತ್ತವೆ. ಇವೆಲ್ಲವೂ ಅವನ ಮಾನಸಿಕ ನೆಮ್ಮದಿಗಾಗಿ ಮಾಡಿಕೊಂಡಿರುವ ಚಿಕಿತ್ಸಕ ಸ್ವರೂಪದ ಸಾಧನಗಳೆನ್ನಬಹುದು. ನಂಬಿಕೆಯ ಭೌತಿಕ ರೂಪವೇ ಆಚರಣೆ.[೧೬]

ನಂಬಿಕೆ ಮತ್ತು ಆಚರಣೆಗಳು

ನಂಬಿಕೆ ಮತ್ತು ಆಚರಣೆಗಳು ಸಂಸ್ಕೃತಿಯ ಒಂದು ಭಾಗ. ಮನುಕುಲಕ್ಕೆ ಬೇಕಾದ ಸಂಸ್ಕೃತಿ ಬಹಳ ವ್ಯಾಪಕ ಅರ್ಥವನ್ನು ಒಳಗೊಂಡಿದೆ. ನ್ಯಾಯ, ನೀತಿ, ಧರ್ಮ ಪ್ರಾಮಾಣಿಕತೆ ಇವೆಲ್ಲವನ್ನು ಒಳಗೊಂಡಿರುವುದೇ ಸಂಸ್ಕೃತಿ. ಅದರಲ್ಲಿ ಸಂಗೀತ, ಸಾಹಿತ್ಯ, ಕಲೆ, ನಂಬಿಕೆ, ಸಂಪ್ರದಾಯ, ಜಾತ್ರೆ ಉತ್ಸವ ಮೊದಲಾದವುಗಳು ಸಮಾವೇಶಗೊಂಡಿರುತ್ತವೆ.[೧೭]

ನಂಬಿಕೆಗಳು ಮಾನವನ ಜೀವನವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿ ಬೆಳೆದು, ಉಳಿದುಕೊಂಡು ಬಂದಿವೆ. ಜನಪದರ ನಿತ್ಯ ಬದುಕಿಗೂ, ನಂಬಿಕೆಗಳಿಗೂ ನಿಕಟವಾದ ನಂಟಿದೆ. ಅದನ್ನು ಪ್ರತ್ಯೇಕಿಸಲು ಅಸಾಧ್ಯವೆನ್ನುವಷ್ಟು ಗಾಢವಾಗಿ ಅವು ಒಂದನ್ನೊಂದು ತಬ್ಬಿನಿಂತಿವೆ. ಜನಪದರ ಆಂತರಿಕ ಮನೋಭಾವವನ್ನು ಹಾಗೂ ಅವರ ಮೂಲಸಂಸ್ಕೃತಿ ಮತ್ತು ಸಂಪ್ರದಾಯವನ್ನು ಪರಿಚಯಿಸುವ ಮುಖ್ಯ ಸಾಧನಗಳಲ್ಲಿ ನಂಬಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ.[೧೮] ಇಷ್ಟೆಲ್ಲಾ ಪ್ರಾಮುಖ್ಯತೆಯನ್ನು ಪಡೆದಿರುವ ನಂಬಿಕೆಗಳ ಉಗಮ, ವಿಕಾಸ ಹಾಗು ಪ್ರಾಚೀನತೆಯತ್ತ ಗಮನ ಹರಿಸಬೇಕಾಗುತ್ತದೆ. ಪ್ರಾಚೀನತೆಯ ದೃಷ್ಟಿಯಿಂದ ಈ ಅಭಿಪ್ರಾಯ ಅತಿರೇಕದಂತೆ ತೋರಿ ಬಂದರೂ, ಉಗಮ ಮತ್ತು ವಿಕಾಸವನ್ನು ಗಮನಿಸಿದಾಗ ಅವೆರಡಕ್ಕೆ ಆಂತರಿಕ ಸಂಬಂಧವಿದೆ.[೧೯] ಮಾನವ ಒಂದಲ್ಲಾ ಒಂದು ರೀತಿಯಲ್ಲಿ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿದಾಗಲೇ ನಂಬಿಕೆಗಳು ಉಗಮಗೊಂಡವು. ಅವನ ಮಾನಸಿಕ ಸ್ಥಿತಿ ಬದಲಾವಣೆಗೊಂಡಂತೆ ನಂಬಿಕೆಗಳು ವಿಕಾಸಗೊಂಡವು.

ಬೇರೆ ಬೇರೆ ಸಂಸ್ಕೃತಿಗಳನ್ನು ಹೊಂದಿದಂತೆ ನಮ್ಮದೇ ಆದ ಜಲಸಂಸ್ಕೃತಿಯನ್ನು ಹೊಂದಿದ್ದೇವೆ. ಜಲವೆಂದರೆ ನೀರು. ನೀರು ಬರೀ ನೀರಲ್ಲ. ಅದಕ್ಕೆ ದೈವತ್ವದ ಸ್ವರೂಪವಿದೆ. ಪಂಚಭೂತಗಳಲ್ಲಿ ನೀರು ಒಂದಾಗಿದೆ. ಮಾನವ, ಪಶು, ಪಕ್ಷಿ, ಸಸ್ಯ ಎಲ್ಲ ಜೀವಕೋಟಿಗೂ ನೀರು ಅತ್ಯವಶ್ಯಕ. ನೀರಿಲ್ಲದೆ ಬದುಕಿಲ್ಲ. ನೀರು ನಮ್ಮ ಜೀವಾಳ. ಅದು ಜೀವಜಲ. ಅಂತೆಯೆ ನೀರನ್ನು ಜಲದೇವತೆಯೆಂದು ಆರಾಧಿಸಲಾಗುತ್ತದೆ.[೨೦]

ಹೀಗೆ ನಮ್ಮ ದೈನದಿಂದ ಬದುಕಿನಲ್ಲಿ ಹಲವಾರು ರೀತಿಯ ನಂಬಿಕೆ ಮತ್ತು ಆಚರಣೆಗಳನ್ನು ರೂಢಿಸಿಕೊಂಡು ಬಂದಿದ್ದೇವೆ. ಇವು ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿವೆ. ಅವರು ಪ್ರಕೃತಿ, ಪ್ರಾಣಿ, ಪಕ್ಷಿಗಳ ಮೇಲೆ ಹಲವು ನಂಬಿಕೆ ಮತ್ತು ಆಚರಣೆಗಳನ್ನು ಇಟ್ಟುಕೊಂಡಿದ್ದಾರೆ. ಅದರಂತೆ ಕೆರೆಗಳ ಬಗ್ಗೆಯೂ ಕೂಡ ಇವೆ. ಪ್ರಾಚೀನ ಮತ್ತು ಮಧ್ಯಕಾಲೀನ ಯುಗದಲ್ಲಿ ನೀರಾವರಿ ಕಾರ್ಯಗಳ ನಿರ್ಮಾಣದಲ್ಲಿ ಕೃಷಿ ಆರ್ಥಿಕಾಭಿವೃದ್ಧಿಗೆ ಪೂರಕವಾದರೂ ಧಾರ್ಮಿಕ ಮಹೋನ್ನತಿಯ ಉದ್ದೇಶಗಳು ಪ್ರಧಾನವಾಗಿದ್ದವು. ಕೆರೆ ಕಾಲುವೆಗಳನ್ನು ನಿರ್ಮಿಸುವುದು, ಒಡ್ಡುಗಳನ್ನು ಹಾಕುವುದು ಧಾರ್ಮಿಕ ಕಾರ್ಯ. ಇಂತಹ ಕಾರ್ಯಗಳನ್ನು ಕೈಗೊಂಡ ವ್ಯಕ್ತಿ ಪುಣ್ಯಕ್ಕೆ ಅರ್ಹರಾಗುತ್ತಾರೆ ಎಂಬ ನಂಬಿಕೆ ಅಂದಿನಿಂದಲೂ ಜನರಲ್ಲಿ ಬೆಳೆದು ಬಂದಿದೆ.[೨೧] ಆದುದರಿಂದ ಜನರು ಈ ಕೆಲಸದಲ್ಲಿ

ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದರು. ಈ ಕಾರಣಗಳಿಂದಾಗಿ ಧರ್ಮದ ಜಾಡಿನಡಿಯಲ್ಲಿ ಜನರು ನಡೆಯುತ್ತಿದ್ದು, ಅವರಿಗೆ ಅರಿವಿಲ್ಲದೆಯೇ ಕೆಲವು ಆಚರಣೆಗಳು ಅವರ ದೈನಂದಿನ ಜೀವನದಲ್ಲಿ ಸೇರಿಕೊಂಡಿವೆ. ಅಂದಿನ ಸಾಮಾಜಿಕ ಮತ್ತು ಧಾರ್ಮಿಕ ಜೀವನವನ್ನು ಗಮನಿಸಿದಾಗ ನಮಗೆ ಇವು ತಿಳಿದುಬರುತ್ತವೆ.

'ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಗಾರಮಂ ಮಾಡಿಸು' – ಇದು ೧೪೧೧ರ ಹಂಪಿಯ ಶಾಸನವೊಂದರ[೨೨] ಮೊದಲ ಸಾಲು. ಆಗಿನ ಕಾಲದ ದೊರೆ ಪಾಲಿಸಬೇಕಾದ ಆಚರಣೆಗಳಲ್ಲಿ ಕೆರೆ, ಬಾವಿಗಳಿಗೆ ಮೊದಲ ಆದ್ಯತೆ ನೀಡಲಾಗಿದೆ. ಕೆರೆ ಕಟ್ಟಿಸಿ ಜನರಿಗೆ ಅನುಕೂಲ ಮಾಡಿಕೊಡುವುದು ಪುಣ್ಯಕಾರ್ಯವಾಗಿದ್ದು, ಅದನ್ನು ದಾನವಾಗಿ ಕಟ್ಟಿಸಿಕೊಡಲಾಗುತ್ತಿತ್ತು. ಕೆರೆ ಗ್ರಾಮೀಣ ಜನಪದರ ಜೀವಾಳ ಹಾಗೂ ಹಳ್ಳಿಯ ಸ್ವತ್ತು ಕೂಡ ಹೌದು. ಕೆರೆ ತುಂಬಿದರೆ ಹಳ್ಳಿಗರಿಗೆ ಸಂಭ್ರಮ. ಆ ವರ್ಷ ಸುಗ್ಗಿ ಸಮೃದ್ಧಿಯಾಗುತ್ತದೆ ಎಂಬ ಸಂತಸ. ಕೆರೆ ತುಂಬಿದ್ರೆ ನಮಗೆ ಬರ ಇಲ್ಲ. 'ಕೆರೆ ತುಂಬಿಲ್ಲ ಅಂದ್ರೆ ನಮಗೆ ಬರಬಂದಂತೆ' ಎಂಬುದು ಜನಪದರ ಅನುಭವದ ಮಾತು.

ಕೆರೆಗಳಿಗೆ ಸಂಬಂಧಿಸಿದಂತೆ ಪುರಾತನ ಸಾಂಖ್ಯಾಯನ ಗೃಹ್ಯಸೂತ್ರದಲ್ಲಿ ಬಾವಿ ಅಥವಾ ಕೆರೆಗಳನ್ನು ದೇವರಿಗೆ ಅರ್ಪಿಸಿದಂತೆ ಉಲ್ಲೇಖವಿದೆ. ಅಂದರೆ ಬಾವಿಯನ್ನು ಅಥವಾ ಕೊಳವನ್ನು ಬಳಸುವ ಮುನ್ನ ವೈದಿಕ ಆಚರಣೆಗಳನ್ನು ನಡೆಸಿ ಋಗ್ವೇದದ ಮಂತ್ರಗಳನ್ನು ಉಚ್ಚರಿಸಿ ಮಳೆಯ ಅದಿದೇವತೆಯಾದ ವರುಣನನ್ನು ಮತ್ತು ಇತರೆ ದೇವತೆಗಳನ್ನು ಸ್ತುತಿಸಿದ ನಂತರದಲ್ಲಿಯೇ ಕೊಳ ಮತ್ತು ಬಾವಿಗಳನ್ನು ಉಪಯೋಗಿಸಬೇಕು ಎಂಬುದಾಗಿ ಈ ಗ್ರಂಥವು ತಿಳಿಸುತ್ತದೆ. ಮಹಾಭಾರತದ ಪ್ರಕಾರ ಯಾವ ವ್ಯಕ್ತಿಯು ಕಟ್ಟಿಸಿದ ಕೆರೆಯಲ್ಲಿ ಹಸುಗಳು, ಪ್ರಾಣಿಗಳು, ಪಕ್ಷಿಗಳು, ಮನುಷ್ಯರು ನೀರನ್ನು ಕುಡಿದು ತೃಪ್ತರಾಗುವರೋ ಅವರು ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾರೆ ಎಂಬ ನಂಬಿಕೆ ಇದೆ.[೨೩] ಅದೇ ರೀತಿ ಅಗ್ನಿಪುರಾಣದ ೬೪ನೆಯ ಅಧ್ಯಾಯದಲ್ಲಿ ವರುಣ ದೇವನನ್ನು ಜಲದೇವನೆಂದೇ ವರ್ಣಿಸಲಾಗಿದೆ. ಅದರಂತೆ ಜಲಕ್ಕೆ ಸಂಬಂಧಿಸಿದ ಆಚರಣೆಗಳ ಬಗ್ಗೆ ಮಾಹಿತಿಗಳನ್ನು ನೀಡುತ್ತದೆ. ಅವುಗಳಲ್ಲಿ ಕೆರೆ, ಬಾವಿ ಮುಂತಾದ ಜಲಕ್ಕೆ ಸಂಬಂಧಿಸಿದ ರಚನೆಗಳನ್ನು ಕೈಗೊಂಡಾಗ ಅಂತಹ ಸ್ಥಳದಲ್ಲಿ ಎಂಟು ಮಡಿಕೆಗಳಲ್ಲಿ ಎಂಟು ಬಗೆಯ ನೀರನ್ನು ತುಂಬಿಸಿ ಎಂಟು ದಿಕ್ಕುಗಳಲ್ಲಿ ಇಡಲಾಗುತ್ತದೆ. ಪೂರ್ವದಿಕ್ಕಿನ ಮಡಕೆಯಲ್ಲಿ ಸಮುದ್ರದ ನೀರನ್ನು, ಆಗ್ನೇಯದಲ್ಲಿ ಗಂಗೆಯ ನೀರನ್ನು, ದಕ್ಷಿಣದಲ್ಲಿ ನದಿಯ ನೀರನ್ನು, ನೈಋತ್ಯದಲ್ಲಿ ಹಳ್ಳದ ನೀರನ್ನು, ಪಶ್ಚಿಮದಲ್ಲಿ ನದಿ ನೀರನ್ನು, ವಾಯವ್ಯ ದಿಕ್ಕಿನಲ್ಲಿ ಪುರುಷ ನದಿಯ ನೀರನ್ನು, ಉತ್ತರದಲ್ಲಿ ಬಳ್ಳಿಗಳ ರಸ ಇಟ್ಟು, ಅಷ್ಟದಿಕ್ಪಾಲಕರನ್ನು ಪೂಜಿಸಿ, ಅದರಲ್ಲಿ ಒಬ್ಬರಾದ ವರುಣ ದೇವರ ಪ್ರತಿಮೆಯನ್ನು ಊರಿನಲ್ಲಿ ಮೆರವಣಿಗೆ ಮಾಡಿ ನಂತರ ಬಾವಿಯಲ್ಲಿ ಅಥವಾ ಕೆರೆಯಲ್ಲಿ ಮುಳುಗಿಸಬೇಕು. ಈ ರೀತಿ ಮಾಡಿದವರಿಗೆ ಅಶ್ವಮೇಧಯಾಗದ ಫಲಕ್ಕಿಂತಲೂ ಅಧಿಕ ಫಲ ದೊರೆಯುತ್ತದೆ ಎಂದು ತಿಳಿಸಿದೆ. ಹಾಗೆಯೇ ಕೆರೆ ಮತ್ತು ಬಾವಿಗಳು ಶುದ್ಧವಾಗುತ್ತವೆ ಎಂದಿದೆ.[೨೪]

ಕೆರೆಗಳನ್ನು ಕಟ್ಟಲು ಅದನ್ನು ಬಳಸಿಕೊಳ್ಳಲು ಸಹ ಒಳ್ಳೆಯ ದಿನ ಮುಹೂರ್ತಗಳನ್ನು ನೋಡುತ್ತಿದ್ದರು. ಈ ವಿಷಯಕ್ಕೆ ಸಂಬಂಧಿಸಿದ ಎರಡು ಶಾಸನಗಳನ್ನು ಉದಾಹರಿಸಬಹುದಾಗಿದೆ. ಮೊದಲನೆ ಬುಕ್ಕರಾಯನ ಆಳ್ವಿಕೆ ಕಾಲದಲ್ಲಿನ(ಕ್ರಿ.ಶ.೧೩೬೯) ಕಡಪ ಜಿಲ್ಲೆಯ ಪೊರುಮಾಮಿಲ್ಲಾ ಕೆರೆಯನ್ನು ರಾಜಕುಮಾರ ಭಾಸ್ಕರ ಭವದೂರ ನಿರ್ಮಿಸಿದನು. ಈ ಶಾಸನದಲ್ಲಿ ಕೆರೆಯನ್ನು ಕಟ್ಟಿದ ಶುಭಮುಹೂರ್ತವನ್ನು ತಿಳಿಸಿದೆ. ಆ ದಿನದ ವಿವರಣೆಯೂ ಈ ರೀತಿಯಾಗಿದೆ. ಶಕವರ್ಷ ೧೨೯೧ರ ಸೌಮ್ಯ ಸಂವತ್ಸರ ಕಾರ್ತಿಕ ಶುದ್ಧ ೧೪ನೆಯ ದಿನ ಗುರುವಾರದ ಪುಷ್ಯ ಕರ್ಕಾಟಕ ಲಗ್ನದ ದಿನದಂದು ಎಲ್ಲಾ ಗ್ರಹಗಳು ಅನುಕೂಲವಾಗಿರುವವೆಂದು ಈ ಕೆರೆಯನ್ನು ಕಟ್ಟಲಾಯಿತು. ಎಂದು ಶಾಸನವು ಉಲ್ಲೇಖಿಸಿದೆ.[೨೫] ಎರಡನೇ ಶಾಸನವು ತುಮಕೂರು ಜಿಲ್ಲೆಯಲ್ಲಿ ಎರಡನೆಯ ಹರಿಹರನ ಕಾಲಕ್ಕೆ ಸಂಬಂಧಿಸಿದ್ದು, ಇದರಲ್ಲಿ ಕುಣಿಗಲ್ಲು ಕೆರೆಯ ತೂಬನ್ನು ಕ್ರಿ.ಶ. ೧೩೬೯ರಲ್ಲಿ ಮಂತ್ರಿವರ್ಯನಾದ ಇರುಗಪ್ಪ ಡಣ್ಣನಾಯಕನು ಕಟ್ಟಿಸಿದನೆಂದು ಉಲ್ಲೇಖಿಸುತ್ತದೆ. ಈ ತೂಬಿನ ಕಲ್ಲನ್ನು ಪ್ರಶಸ್ತವಾದ ಶುಭಲಗ್ನದಲ್ಲಿ ಸ್ಥಾಪಿಸಲಾಯಿತು ಎಂದು ತಿಳಿಸುತ್ತಾ ಅದರ ವಿವರಗಳನ್ನು ಈ ರೀತಿಯಾಗಿ ನೀಡುತ್ತದೆ. ಶಕ ವರ್ಷ ೧೩೧೬ರ ಭಾವನಾಮ ಸಂವತ್ಸರದ ಭಾದ್ರಪದ ಶುಕ್ಲಪಕ್ಷದ ಮೊದಲ ದಿನದಂದು ಸೂರ್ಯೋದಯ ಏಳು ಘಟಕ ಸಂದ ನಂತರ ಧನುರ್ ಲಗ್ನದಲ್ಲಿ ತೂಬನ್ನು ಸ್ಥಾಪಿಸಲಾಯಿತು ಎಂದು ದಾಖಲಿಸಿದೆ.[೨೬] ಇಂತಹ ಯಾವುದೇ ಕಾರ್ಯದ ಆರಂಭದಲ್ಲಿ ಭೂಮಿಪೂಜೆ ಮಾಡುವಾಗ, ಬುನಾದಿ ಕಲ್ಲನ್ನು ಹಾಕುವಾಗ ಮೊದಲ ಬಾರಿ ನೀರು ದೊರೆತಾಗ, ತೂಬುಗಳನ್ನು ನಿರ್ಮಿಸುವಾಗ, ಶಾಸನಗಳನ್ನು ನೆಡುವಾಗ ಈ ಮಾದರಿಯ ಪೂಜೆಗಳನ್ನು ಮಾಡುತ್ತಿದ್ದರು. ಹಾಸನ ಜಿಲ್ಲೆಯ ಕೆರೆಗಳನ್ನು ಕುರಿತಂತೆ ಕೆಲವು ನಂಬಿಕೆ ಮತ್ತು ಆಚರಣೆಗಳಿದ್ದವು. ಅವುಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಕೆರೆಯಲ್ಲಿ ಪಂಚಕನ್ಯೆಯರು, ಅಪ್ಸರಾ ಸ್ತ್ರೀಯರು, ದೇವಾನುದೇವತೆಗಳು ವಾಸಿಸುತ್ತಿದ್ದಾರೆ. ಇದರಿಂದ ಕೆರೆಯು ಪವಿತ್ರವಾದುದೆಂಬ ಭಾವನೆ ಇದೆ. ಈ ಕುರಿತಂತೆ ಅನೇಕ ಬಗೆಯ ಆಚರಣೆಗಳು ರೂಢಿಯಲ್ಲಿವೆ.

ಗಂಗಾಸ್ನಾನ

ಜನಪದರ ಸ್ಮೃತಿಯಲ್ಲಿ ಗಂಗೆ ಕೇವಲ ನೀರನ್ನು ಸಂಕೇತಿಸುವ ಜಲದೇವತೆಯಲ್ಲ, ಈಕೆ ಇಡೀ ನಿಸರ್ಗದ ಪ್ರತೀಕ. ಮೇಲಾಗಿ ನೀರು ಸ್ತ್ರೀರೂಪಿ. ಕೃಷಿಗೆ ಸಂಬಂಧಿಸಿದ ಅಸಂಖ್ಯಾತ ಜಾನಪದ ದೇವತೆಗಳಲ್ಲಿ ಹೆಚ್ಚಿನವರು ಹೆಣ್ಣುಗಳೇ. ಈ ಎಲ್ಲಾ ದೇವರುಗಳ ಅದಿದೇವತೆ ಗಂಗೆ. ಗ್ರಾಮಾಂತರ ಪ್ರದೇಶದಲ್ಲಿ ಕಂಡುಬರುವ ನೂರಾರು ಮಾರಿ, ಮದ್ದು, ಚೌಡಿ, ದುರ್ಗಿ ಮುಂತಾದ ದೇವತೆಗಳ ಪೂಜೆಗಳು ಆರಂಭಗೊಳ್ಳುವುದೇ ಗಂಗೆಪೂಜೆಯಿಂದ.[೨೭]

ಗ್ರಾಮದೇವರುಗಳು ಕೆಲವು ಕೆರೆಗಳಿಗೆ ಗಂಗಾಸ್ನಾನಕ್ಕೆ ಆಗಮಿಸುತ್ತವೆ. ಈ ಆಚರಣೆಯಲ್ಲಿ ಗ್ರಾಮದೇವರುಗಳನ್ನು ಸಮೀಪದ ಜಲವೊಂದರ ಬಳಿ ಕರೆದೊಯ್ದು ಪೂಜೆ ಸಲ್ಲಿಸುವರು. ಇದನ್ನು ದೇವರನ್ನು 'ಜಲಧಿಗೆ' ಹೊರಡಿಸುವುದು ಎಂಬ ಹೆಸರಿನಿಂದ ಗುರುತಿಸುತ್ತಾರೆ. ವೈದಿಕ ದೇವರುಗಳಾದ ಕೃಷ್ಣ, ಶಿವ, ರಾಮ ಮುಂತಾದ ದೇವರುಗಳ ಪೂಜಾವಿಧಿಗಳೂ ಕೂಡ ಗಂಗಾಸ್ನಾನದಿಂದಲೇ ಆರಂಭಗೊಳ್ಳುತ್ತದೆ. ಇಂತಹ ಕೆರೆಗಳಿಗೆ ಗ್ರಾಮದ ದೇವರುಗಳನ್ನು ಅರ್ಚಕವೃಂದ ಮತ್ತು ದೇವರುಗಳ ಆರಾಧಕರು ಭಕ್ತಿಭಾವದಿಂದ ಕರೆತಂದು ಅವುಗಳಿಗೆ ಅಮೃತಸ್ನಾನ ಮಾಡಿಸುತ್ತಾರೆ. ಅವುಗಳ ಪೂಜಾಸಾಮಗ್ರಿಗಳನ್ನು ಮತ್ತು ಅಲಂಕರಣ ಸಾಮಗ್ರಿಗಳನ್ನು ತೊಳೆಯುತ್ತಾರೆ. ಅನಂತರ ದೇವರುಗಳಿಗೆ ಪುಣ್ಯಾಹವನ್ನು ಮಾಡಿಸಿ, ಗೋವಿನ ಗಂಜಲದಿಂದ ಶುದ್ಧೀಕರಿಸುತ್ತಾರೆ. ಈ ರೀತಿ ಕಾರ್ಯ ಮಾಡಿದ ಮೇಲೆ ಕುಂಭದ ಅಭಿಷೇಕ ಮಾಡಿ ಅಲಂಕಾರ ಮಾಡುತ್ತಾರೆ. ಅಭಿಷೇಕದ ಕೊನೆಯಲ್ಲಿ ಅಷ್ಟಗಂಧ ಬಳಸುತ್ತಾರೆ. ಹೀಗೆ ಅವಭೃತ ಸ್ನಾನ ಮಾಡಿಸಿದ ದೇವರಿಗೆ, ಷೋಡಶೋಪಚಾರ ಪೂಜೆ ನಂತರ ಗಣಪತಿ ಹೋಮ, ನವಗ್ರಹ ಹೋಮ ಹಾಗು ಪ್ರತಿಗ್ರಾಮ ದೇವತೆ ಹೆಸರಿನಲ್ಲಿ ಹೋಮ ಮಾಡಲಾಗುತ್ತದೆ. ಶ್ರೀ ದೇವತೆಗಳಿಗೆ ಶಕ್ತಿದೇವತೆಯ ಮೂಲಕ, ವಿಷ್ಣುಸಂಬಂಧಿ ದೇವತೆಗಳಿಗೆ ವಿಷ್ಣುಸಂಬಂಧಿ ಸ್ತುತಿಗಳಿಂದ ಹೋಮ ಮಾಡಿ ಕಳಾಕರ್ಷಣೆ ಮಾಡಿ ರಕ್ಷೆಯನ್ನು ಕೊಡಲಾಗುತ್ತದೆ. ದೇವರಿಗೆ ಅಭಿಷೇಕ, ಪೂಜೆ, ಹೋಮಗಳಾದ ಮೇಲೆ ನೈವೇದ್ಯ ರೂಪದಲ್ಲಿ ಕಡಲೇಕಾಳು, ಬಾಳೆಹಣ್ಣಿನ ರಸಾಯನ, ಸೌತೆಕಾಯಿ ತಂಬಿಟ್ಟನ್ನು ಸಮರ್ಪಿಸುತ್ತಾರೆ. ತರುವಾಯ ದೇವರುಗಳು ಸ್ವಗ್ರಾಮಕ್ಕೆ ತೆರಳುತ್ತವೆ.[೨೮] ಪ್ರಸ್ತುತ ಕ್ಷೇತ್ರಕಾರ್ಯ ಕೈಗೊಂಡಾಗ ಅರಸೀಕೆರೆ ತಾಲೂಕಿಗೆ ಸೇರಿದ ಸಿಂಗಿನಕೆರೆಗೆ ಯುಗಾದಿ ಹಬ್ಬದಂದು ಶಂಕರನಹಳ್ಳಿಯ ಮಾರಮ್ಮ ದೇವರು ಗಂಗಾಸ್ನಾನಕ್ಕೆ ಆಗಮಿಸಿತ್ತು. ಇದರಿಂದ ಗಂಗಾಸ್ನಾನದ ಎಲ್ಲಾ ಕಾರ್ಯ ವಿಧಿ ವಿಧಾನಗಳು ಅಲ್ಲಿನ ಸ್ಥಳೀಯ ಜನಪದರು ಮತ್ತು ಮಾಳಮ್ಮ ದೇವಸ್ಥಾನದ ಅರ್ಚಕರಿಂದ ತಿಳಿದುಬಂದಿತು. ಈ ದೇವರ ಪೂಜೆಗೆ ಪ್ರತಿನಿತ್ಯ ಇಲ್ಲಿನ ಕೆರೆಯಿಂದ ನೀರನ್ನು ತೆಗೆದುಕೊಂಡು ಹೋಗುತ್ತಾರೆ. ಕೆರೆಯು ಚಿಕ್ಕದಾಗಿದ್ದು ಧಾರ್ಮಿಕವಾಗಿ ಉಪಯುಕ್ತವಾಗುತ್ತಿದೆ. ಕೃಷಿಗೆ ಅಷ್ಟಾಗಿ ಬಳಕೆಯಾಗುತ್ತಿಲ್ಲ. ಈ ಬಗೆಯ ಆಚರಣೆ ಆಲೂರು ತಾಲೂಕಿನ ಮರಸು ದೊಡ್ಡಕೆರೆ, ಚನ್ನರಾಯಪಟ್ಟಣ ತಾಲೂಕಿನ ಅಣತಿ ದೊಡ್ಡಕೆರೆ ಹಾಗು ಸಕಲೇಶಪುರ ತಾಲೂಕಿನ ಉದೇವಾರ ಕೆರೆ ಮತ್ತು ಕೆಳಗಲೆ ಕೆರೆಗಳಲ್ಲಿ ಕಂಡುಬರುತ್ತವೆ.

ಗಂಗಮ್ಮನ ಪೂಜೆ

ಗಂಗೆಯೆಂದರೆ ಕೇವಲ ಜೀವದಾಯಕ ನೀರಲ್ಲ. ಮನಸ್ಸಿನ ಕಳಂಕವನ್ನು ತೊಡೆದುಹಾಕುವ ಪಾಪನಾಶಿನಿಯೆಂದು ಭಾವಿಸುತ್ತಾರೆ. ಯಾವುದೇ ಧಾರ್ಮಿಕ ಕಾರ್ಯ ಅಥವಾ ಪೂಜೆ ಮಾಡುವಾಗ ನೀರಿನಿಂದ ಶುದ್ಧೀಕರಣ ಮಾಡುವ ಪುಣ್ಯಾಹವಾಚನವೆಂಬ ಕ್ರಿಯೆಯನ್ನು ಮಾಡುವುದು ಹಿಂದಿನಿಂದ ಬಂದ ಪದ್ಧತಿ. ವ್ರತಗಳನ್ನು ಪ್ರಾರಂಭಿಸುವ ಸಂದರ್ಭದಲ್ಲಿ ಗಂಗಾಪೂಜೆ ಮಾಡುತ್ತಾರೆ. ವೈಶಾಖ ಮಾಸದ ಶುದ್ಧಸಪ್ತಮಿ ದಿನವನ್ನು ಗಂಗಾಸಪ್ತಮಿ ಎಂದು ಕರೆಯಲಾಗಿದ್ದು, ಅದನ್ನು ಒಂದು

ವ್ರತದ ರೂಪದಲ್ಲಿ ಆಚರಿಸುತ್ತಾರೆ. ತುಲಾ ಸಂಕ್ರಮಣದ ದಿನ ತಲಕಾವೇರಿ ಉಕ್ಕಿಬರುವ ಅದ್ಭುತ ಸನ್ನಿವೇಶ, ಅಂದು ಕೊಡಗಿನ ಜನರಿಗೆ ಹಬ್ಬ. ಆ ದಿನ ಅಲ್ಲಿಂದ ನೀರು ತಂದು ಮುಂದಿನ ವರ್ಷಗಳವರೆಗೂ ಇಟ್ಟು ಪೂಜೆ ಮಾಡುತ್ತಾರೆ.[೨೯]

ರಾಮಾಯಣ ಮಹಾಕಾವ್ಯದಲ್ಲಿ ಋಷಿಯ ಕೋಪಕ್ಕೆ ತುತ್ತಾದ ಭಗೀರಥ ತನ್ನ ಪೂರ್ವಜರಿಗೆ ಮುಕ್ತಿ ದೊರಕಿಸಲು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ, ಗಂಗೆಯನ್ನು ಅವರ ಭಸ್ಮದ ಮೇಲೆ ಹರಿಸಲು ಆಕೆಯನ್ನು ಭೂಲೋಕಕ್ಕೆ ತರಿಸಿದನೆಂದು ಉಲ್ಲೇಖವಿದೆ. ಗಂಗೆಯ ರಭಸವನ್ನು ತಡೆಯಲು ಶಿವ ಆಕೆಯನ್ನು ತನ್ನ ಜಟೆಯಲ್ಲಿ ಹಿಡಿದಿರಿಸಿದ. ಗಂಗೆ ಶಿವನ ಜಟೆಯಿಂದ ಸಪ್ತನದಿಗಳಾಗಿ ಹರಿದಳೆಂಬುದು ಪೌರಾಣಿಕ ಪ್ರತೀತಿ.[೩೦]

ಮಹಾಭಾರತದಲ್ಲಿ ಗಂಗೆ ಹಿಮವತ್ ರಾಜನ ಮಗಳು. ಶಂತನು ಮಹಾರಾಜನ ಪತ್ನಿಯಾಗಿ, ಭೀಷ್ಮನನ್ನು ಮಗನಾಗಿ ಪಡೆದಳು. ಆದ್ದರಿಂದ ಭೀಷ್ಮನಿಗೆ ಗಾಂಗೇಯ ಎಂಬ ಹೆಸರು ಬಂದಿತು.[೩೧] ಗಂಗಾನದಿಯ ಉಗಮಸ್ಥಾನದಿಂದ ಗಂಗೋತ್ರಿಯಲ್ಲಿ ಇಂದಿಗೂ ಗಂಗೆಯನ್ನು ಸಣ್ಣ ಕಲಶದಲ್ಲಿ ತುಂಬಿ ಮೊಹರು ಮಾಡಿ ಮಾರಾಟ ಮಾಡುತ್ತಾರೆ. ಗಂಗೆಗಿಂತ ಪವಿತ್ರವಾದದು ಯಾವುದೂ ಇಲ್ಲ ಎಂಬ ನಂಬಿಕೆ ಜನಪದರಲ್ಲಿದೆ.

ಗಂಗೆ ಸೃಷ್ಟಿಯ ಮೂಲ. ಫಲವಂತಿಕೆಯ ಪ್ರತಿರೂಪ. ಯಾವುದೇ ದೇವರನ್ನು ಪೂಜಿಸಬೇಕಾದರೂ ಕೊಡದಲ್ಲಿ ನೀರನ್ನು ತುಂಬಿಟ್ಟು, ಅದಕ್ಕೆ ಹರಕೆ ಸಲ್ಲಿಸಬೇಕಾದ ದೇವರ ಹೆಸರಿನಲ್ಲಿ ಪೂಜಿಸಿದರೆ ಅದು ಆ ದೇವರಿಗೆ ಸಲ್ಲುತ್ತದೆ ಎಂಬ ನಂಬಿಕೆ ಇದೆ. ಹಾಗಾಗಿ ಗ್ರಾಮಾಂತರ ಪ್ರದೇಶದಲ್ಲಿ ಗಂಗೆಪೂಜೆ ಅತ್ಯಂತ ಮಹತ್ವ ಪಡೆದಿದೆ. ಸಾಮಾನ್ಯವಾಗಿ ಕೆರೆ ತುಂಬಿದಾಗ ಗಂಗೆಪೂಜೆ ಮಾಡಿ ತೂಬನ್ನು ಎತ್ತುತ್ತಾರೆ. ವಿವಾಹದ ಸಂದರ್ಭದಲ್ಲಿ ಮೂರು ಜನ ಮುತ್ತೈದೆಯರು ಮೂರು ಕೊಡದಲ್ಲಿ ನೀರನ್ನು ತುಂಬಿಟ್ಟು ಪೂಜೆ ಮಾಡಿ ತರುವ ಪದ್ಧತಿ ಬೇಲೂರು ತಾಲೂಕಿನ ಹಲ್ಮಿಡಿ ಕೆರೆಯಲ್ಲಿದೆ. ಮಕ್ಕಳಾಗದವರು, ವಿವಾಹವಾಗದವರು ಹಾಗೂ ಋತುಮತಿಯಾಗದ ಸ್ತ್ರೀಯರು ಕೆರೆ ಪರಿಸರದಲ್ಲಿರುವ ಶಕ್ತಿದೇವರುಗಳನ್ನು ಮಂಗಳವಾರ ಮತ್ತು ಶುಕ್ರವಾರ ವಿಶೇಷವಾಗಿ ಪೂಜೆ ಮಾಡುತ್ತಾರೆ. ಇದು ಕೇವಲ ಕೇಲವೆ ವರ್ಗಕ್ಕೆ ಸೀಮಿತವಾಗಿರದೆ ಎಲ್ಲಾ ಜನಾಂಗದವರಿಗೂ ಸೇರಿದೆ. ಈ ಆಚರಣೆಯನ್ನು ಮುತ್ತೈದೆಯರು ಕೆರೆಯ ದಡದಲ್ಲಿ ಮೂರು ಕೊಡದಲ್ಲಿ ನೀರನ್ನು ತುಂಬಿಟ್ಟು, ಅದರ ಮುಂಭಾಗದಲ್ಲಿ ಮೂರು ಸಣ್ಣ ಕಲ್ಲನ್ನು ಜೋಡಿಸಿ ಕೊಡದ ಮೇಲೆ ಸೀರೆ ರವಿಕೆಯನ್ನಿಟ್ಟು, ಹೂ, ಅರಿಶಿನ, ಕುಂಕುಮದಿಂದ ಪೂಜೆ ನಡೆಸುತ್ತಾರೆ. ಬಾಳೆ ಅಥವಾ ಮುತ್ತುಗದ ಎಲೆ ಮೇಲೆ ಗೋಧಿ ಹಿಟ್ಟಿನ ಹಣತೆ ಮಾಡಿ ನೀರಿನಲ್ಲಿ ತೇಲಿಬಿಟ್ಟು ನಂತರ ತಂಬಿಟ್ಟಿನ ಆರತಿ ಮಾಡುತ್ತಾರೆ. ಇಂದಿಗೂ ಈ ಆಚರಣೆಯೂ ಅರಸೀಕೆರೆ ತಾಲೂಕಿನ ಕೆಲ್ಲಂಗೆರೆ ಕೆರೆ, ಸಿಂಗಿನಕೆರೆ, ಕಾಮಸಮುದ್ರ ಕೆರೆ, ಬೇಲೂರು ತಾಲೂಕಿನ ಬೇಲೂರು

ಕೆರೆ, ಹಲ್ಮಿಡಿ ಕೆರೆ, ಚನ್ನರಾಯಪಟ್ಟಣ ತಾಲೂಕಿನ ನಾಗರನವಿಲೆ ಕೆರೆಗಳಲ್ಲಿರುವುದನ್ನು ಗಮನಿಸಬಹುದು. ಆಲೂರು ತಾಲೂಕಿನ ಮೇರ್ವೆ ಕೆರೆಯಲ್ಲಿ ಪ್ರತಿ ವರ್ಷ ದೀಪಾವಳಿಯಲ್ಲಿ ಗ್ರಾಮದ ಜನರು ಕೆರೆಗೆ ಗಂಗೆಪೂಜೆ ಮಾಡುತ್ತಾರೆ. ನಂತರ ತಮ್ಮ ತಮ್ಮ ಮನೆಗಳಿಗೆ ಗಂಗೆ ತೆಗೆದುಕೊಂಡು ಹೋಗುವ ಪದ್ಧತಿ ರೂಢಿಯಲ್ಲಿದೆ.

ಹೊಳೆನರಸೀಪುರ ತಾಲೂಕಿನಿಂದ ಸುಮಾರು ೧೧ ಕಿ.ಮೀ. ದೂರದಲ್ಲಿ ದೊಡ್ಡಕಾಡನೂರು ಕೆರೆ ಇದೆ. ಅದರ ಏರಿಯ ಒಳಪಾರ್ಶ್ವದಲ್ಲಿ ಕೆರೆಯಮ್ಮ ಅಥವಾ ಕೋಡಿಯಮ್ಮನ ಚಿಕ್ಕಗುಡಿ ಇದೆ. ಕೆರೆ ತುಂಬಿ ಕೋಡಿ ಬಿದ್ದಾಗ ದೊಡ್ಡಕಾಡನೂರು ಗ್ರಾಮದ ಜನರು ಊರಿನ ಹೆಣ್ಣುಮಕ್ಕಳನ್ನು ಕರೆಯಿಸಿ ಕೆರೆಗೆ ಗಂಗಮ್ಮನನ್ನು ಮಾಡಿಸುತ್ತಿದ್ದರು. ನಂತರ ಪ್ರತಿಯೊಬ್ಬ ಹೆಣ್ಣುಮಗಳಿಗೂ ಸೀರೆ ರವಿಕೆಯನ್ನು ಕೊಟ್ಟು ಕಳುಹಿಸುವಂತಹ ಪದ್ಧತಿ ಬೆಳೆದುಬಂದಿದೆ.

ಮಳೆಗೆ ಸಂಬಂಧಿಸಿದ ನಂಬಿಕೆಗಳು

ನೀರು ಜನಜೀವನದ ಅವಿಭಾಜ್ಯ ಅಂಗ. ಮಾನವನ ನೆಲೆ ನದಿ ದಂಡೆ, ಸರೋವರಗಳ ಹತ್ತಿರವೆ ಬೆಳೆದುಬಂದಿದೆ. ಇದಕ್ಕೆ ಮುಖ್ಯ ಕಾರಣ ಜನ ಮತ್ತು ಜಾನುವಾರುಗಳಿಗೆ ಲಭ್ಯವಾಗುವ ನೀರು. ನಾಗರಿಕತೆ ಬೆಳೆದಂತೆ ನೀರನ್ನು ಬೇಕಾದೆಡೆಗೆ ಒಯ್ದು ಜೀವನ ನಡೆಸುವ ವಿಧಾನ ರೂಢಿಗೆ ಬಂದಿತು. ಅದೇ ರೀತಿ ನದಿಗಳಿಗೆ ಅಡ್ಡಲಾಗಿ ಜಲಾಶಯಗಳನ್ನು ನಿರ್ಮಿಸಿ ನೀರನ್ನು ಕಾಲುವೆಯ ಮುಖಾಂತರ ಹರಿಸಿ ಕೃಷಿ ಕಾರ್ಯಗಳಿಗೆ ಬಳಸಿಕೊಳ್ಳಲಾಯಿತು. ಮಳೆಗಾಲದಲ್ಲಿ ಹೇರಳವಾಗಿ ದೊರೆಯುತ್ತಿದ್ದ ನೀರನ್ನು ಸಂಗ್ರಹಿಸಲು ಕೆರೆ ಕಟ್ಟೆಗಳನ್ನು ನಿರ್ಮಾಣ ಮಾಡುವ ಪದ್ಧತಿ ಬೆಳೆಯಿತು. ಈ ಎಲ್ಲ ಜಲ ಸಂಗ್ರಹಗಳು ಮತ್ತು ಬಳಕೆ ವಿಧಾನಗಳಿಗೂ ಮಳೆಯೇ ಮೂಲಾಧಾರ. ಆದ್ದರಿಂದ ಜನಪದರು ಮಳೆ ಆಗು-ಹೋಗುಗಳಿಗೆ ಇಂದ್ರ, ವರುಣ ಮತ್ತು ಪರ್ಜನ್ಯ ಮೊದಲಾದ ದೇವತೆಗಳನ್ನು ಆರಾಧಿಸುತ್ತಾರೆ.

ಕೆರೆ ಕಟ್ಟೆ ಕಾಲುವೆ ಹರಿಯಲಿ
ಬಾವೀಲಿ ಸಿಹಿನೀರು ಉಕ್ಕಲಿ
ದೇವ ನಿನ್ನ ಹಬ್ಬ ಹೆಚ್ಚಲಿ
ಹೋದ ಜೀವವು ಕೂಡಿಕೊಂಡೇಳಲಿ
ಸ್ವಾತಿಯ ಮಳೆ ಹುಯ್ದು ಸೀತೆಯ ಕೆರೆತುಂಬಿ
ಜೋತಾಡುತ್ತೈತೆ ಕುಣಿಗಲು ಕುಚ್ಚಿನ ಮೀನು
ಮುಂಗೈಯ ನೋಡಿ ನುಗತೈತೆ ।

ಹೀಗೆ ಸಮಾಜದಲ್ಲಿನ ಜನಸಾಮಾನ್ಯರ ನಂಬಿಕೆ, ಆಚಾರ ವಿಚಾರಗಳನ್ನು ನೋಡಿದ ಸರ್ವಜ್ಞ ಕವಿ ಮಳೆಯ ಆಗುಹೋಗುಗಳನ್ನು ತನ್ನದೇ ಆದ ರೀತಿಯಲ್ಲಿ ಚಿತ್ರಿಸಿದ್ದಾನೆ.[೬]

ಮಳೆ ನೀರಿನ ಪ್ರಾಕೃತಿಕ ರೂಪ. ಇದಕ್ಕೆ ಜನಪದ ಬದುಕಿನಲ್ಲಿ ಪ್ರತ್ಯೇಕವಾದ ಸ್ಥಾನವಿದೆ. ಮೋಡ ಕರಗಿ ನೆಲ ಸೇರುವ ಮುನ್ನ ಸುರಿಯುವ ನೀರನ್ನು ಮಳೆ ಎಂದು ಕರೆಯುತ್ತಾರೆ. ನೆಲ ಸೇರಿದ ನಂತರ ಬೇರೆಯದೇ ರೂಪವನ್ನು ಪಡೆಯುತ್ತದೆ. ಮಳೆ ಸಮೃದ್ಧಿಯ, ಫಲವಂತಿಕೆಯ ಸಂಕೇತ. ಮಳೆಯಿಲ್ಲದೆ ಮನುಷ್ಯ ಪಟ್ಟಿರುವ ಪಾಡುಗಳನ್ನು ಜನಪದರ ಹಾಡು ಮತ್ತು ಆಚರಣೆಗಳಲ್ಲಿ ಕಾಣಬಹುದು. ಮುಖ್ಯವಾಗಿ ಬೇಸಾಯದ ಉಳಿವು ನಿಂತಿರುವುದೇ ಮಳೆಯಾಧಾರದ ಮೇಲೆ. ಸಕಾಲದಲ್ಲಿ ಮಳೆಯಾಗದೇ ಹೋದರೆ ಆಗುವ ಅನಾಹುತವನ್ನು ಹಾಡುಗಳು ವರ್ಣಿಸುತ್ತವೆ.

ಮೋಡಾದ ಕಡೆಯಿಂದ, ಮಿಂಚಿನ ಸುಳಿಯಿಂದ
ಧಳ ಧಳ ಹೊಳೆಯುತ್ತ, ಬರುತ್ತಾಳೆ
ಗುಡುಗು ಗೂಡಾಗಿ ಸಿಡಿದಳೋ ಜಲ ಜಲ
ಗಂಗಮ್ಮ ತಾಯಿ ಬರುತ್ತಾಳೆ, ಧರೆಗೆ
ಅಂಬರದಲ್ಲಿ ಯಾಕೆ ನಿಂತೋ ಮಳೆರಾಯ...
ಅಪ್ಪ ನೀನಿಲ್ಲದೆ ಸೊಪ್ಪಾದೋ ಈ ಭೂಮಿ
ಸಪ್ಪೆ ದಂಟಾದೋ ದನಕರ ದೇವೇಂದ್ರರಾಯ
ಕಂಚಿನ ಹಣವಾಗಿ ಸುರಿಬಾರೊ

ಈ ಹಾಡುಗಳು ಮಳೆಗಾಗಿ ಅರ್ಚಿಸುವ ಆಚರಣೆಗಳ ಭಾಗವಾಗಿದೆ.[೩೩]

ಹಾಸನ ಜಿಲ್ಲೆಯಲ್ಲಿನ ಬಹುತೇಕ ಕೆರೆಗಳು ಮಳೆಯನ್ನೇ ಆಶ್ರಯಿಸಿವೆ. "ಊರಿಗೊಂದು ಕೆರೆ ನೀರಿಗೊಂದು ಬಾವಿ" ಎಂಬಂತೆ ಪ್ರತಿ ಹಳ್ಳಿಗೊಂದು ಕೆರೆಯಿದ್ದು, ಗ್ರಾಮೀಣ ಜನಪದರ ಜೀವಾಳವಾಗಿವೆ. ಗ್ರಾಮಗಳಲ್ಲಿ ಮಳೆ ಬಾರದೆ ಹೋದರೆ ಕಂಗಾಲಾದ ರೈತರು ಕೆಲವು ಆಚರಣೆಗಳನ್ನು ಮಾಡುತ್ತಿದ್ದರು. ಮುಂಜಾನೆ ಬಂದ ಮಳೆಗಿಂತ ಮಧ್ಯಾಹ್ನ ಬರುವ ಮಳೆಯೇ ರೈತರಿಗೆ ಹೆಚ್ಚು ಅನುಕೂಲ. ಆದುದರಿಂದ 'ಮುಂಜಾನೆ ಬಂದ ಮಳೆಯಲ್ಲ, ಮಧ್ಯಾಹ್ನ ಬಂದ ಅಳಿಯನಲ್ಲ' ಎಂಬ ಗಾದೆ ಮಾತನ್ನು ಕಟ್ಟಿಕೊಂಡಿದ್ದಾರೆ.[೩೪] ಕರ್ನಾಟಕದಾದ್ಯಂತ ೧೦೦ಕ್ಕೂ ಹೆಚ್ಚು ಮಳೆಯ ಆಚರಣೆಗಳು, ನಂಬಿಕೆಗಳು ಇದ್ದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಯಿರುವುದನ್ನು ಗಮನಿಸಬಹುದು.

ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿ ಮಳೆರಾಯನ ವಿಗ್ರಹವನ್ನು ಮಾಡುತ್ತಾರೆ. ಅದನ್ನು ಹಲಗೆ ಮೇಲಿಟ್ಟು ಅರಿಶಿನ, ಕುಂಕುಮ ಮುತ್ತುಗ, ಮಲ್ಲಿಗೆ ಹೂವುಗಳಿಂದ ಅಲಂಕರಿಸಿ ಪೂಜಿಸುತ್ತಾರೆ. ನಂತರ ಬೆತ್ತಲೆ ಇರುವ ಓರ್ವ ಬಾಲಕನು ಮಳೆರಾಯನ ವಿಗ್ರಹವನ್ನು ಹೊತ್ತುಕೊಳ್ಳುತ್ತಾನೆ. ಇವನ ಹಣೆಗೂ ಅರಿಶಿನ ಕುಂಕುಮ ಹಚ್ಚಿ ಕೊರಳಿಗೆ ಹೂಮಾಲೆಯನ್ನು ಹಾಕಿರುತ್ತಾರೆ. ಹೀಗೆ ಹೆಚ್ಚಿನ ಸಂಖ್ಯೆಯಲ್ಲಿ ಹುಡುಗರೆಲ್ಲರೂ ಸೇರಿಕೊಂಡು ವಿವಿಧ ಹಾಡುಗಳನ್ನು ಹಾಡುತ್ತಾರೆ. ಮಳೆರಾಯನ ವಿಗ್ರಹವನ್ನು ಹೊತ್ತ ಬಾಲಕನ ಜೊತೆಯಲ್ಲಿ ಮನೆ ಮನೆ ಬಾಗಿಲಿಗೆ

ಹೋಗುತ್ತಾರೆ. ಪ್ರತಿಯೊಂದು ಮನೆ ಬಾಗಿಲಿಗೆ ಹೋದಾಗಲೂ ಮನೆಯ ಹೆಂಗಸರು ಮಳೆರಾಯನ ವಿಗ್ರಹ ಹೊತ್ತ ಹುಡುಗನ ತಲೆ ಮೇಲೆ ನೀರನ್ನು ಚುಮುಕಿಸಿ ಕಾಲಿನ ಮೇಲೆ ಒಂದೊಂದು ಕೊಡ ತಣ್ಣೀರನ್ನು ಸುರಿಯುತ್ತಾರೆ. ನಂತರ ವಿಗ್ರಹವನ್ನು ಅರಿಶಿನ ಕುಂಕುಮ ಹಚ್ಚಿ ಹೂವಿನ ಗರುಡಗಂಬಕ್ಕೆ ಎಣ್ಣೆ ಹಾಕಿ ಪೂಜೆ ದವಸ ಧಾನ್ಯ ಅಥವಾ ಹಣದ ರೂಪದ ಕಾಣಿಕೆಯನ್ನು ನೀಡುತ್ತಾರೆ.

ಹುಯ್ಯೋ ಹೂಯ್ಯೋ ಮಳೆರಾಯ
ಹೂವಿನ ತೋಟಕೆ ನೀರಿಲ್ಲ
ಬಾರೋ ಬಾರೋ ಮಳೆರಾಯ
ಬಾಳೇ ತೋಟಕೆ ನೀರಿಲ್ಲ...

ಹೀಗೆ ಊರನ್ನೆಲ್ಲಾ ಸುತ್ತಿದ ಬಳಿಕ ಸಂಗ್ರಹಿಸಿದ ದವಸ ಧಾನ್ಯವನ್ನೆಲ್ಲಾ ಮಾರಾಟ ಮಾಡಿ ಬಂದ ಹಣದಿಂದ ಪುರಿ, ಬೆಲ್ಲ, ಕಾಯಿ, ಬಾಳೆಹಣ್ಣು, ಕರ್ಪೂರ ಮತ್ತು ಊದುಬತ್ತಿಗಳನ್ನು ತಂದು ಊರ ಹೊರಗಿನ ಕೆರೆ ಹತ್ತಿರ ಹೋಗಿ ಮಳೆರಾಯನಿಗೆ ಪೂಜೆ ಮಾಡಿ ಬಂದವರಿಗೆ 'ಚರ್ಪು' ಹಂಚಿ ಕೆರೆಯಲ್ಲಿ ಮಳೆರಾಯನನ್ನು ಬಿಟ್ಟು ಬರುತ್ತಾರೆ.[೩೫] ಕೆಲವು ಕಡೆ ಕಪ್ಪೆ ಮದುವೆ, ಕತ್ತೆ ಮೆರವಣಿಗೆ, ದೇವಸ್ಥಾನಗಳಿಗೆ ಹೋಗಿ ಪರ್ವ ಮಾಡುವುದು, ಹಾಗೆಯೇ ಕನಸಿನಲ್ಲಿ ಕುರಿಗಳ ಹಿಂಡು ಕಾಣಿಸಿದರೆ, ಕಲ್ಲಡಿ ಕಪ್ಪೆಗಳು ಕೂಗಿದರೆ, ದನಗಳು ಕತ್ತೆತ್ತಿ ಆಕಾಶವನ್ನು ಮೂಸಿದರೆ ಮಳೆಬರುತ್ತದೆ ಎಂಬ ನಂಬಿಕೆ ಇದೆ.[೩೬]

ಹಾಸನ ಪರಿಸರದಲ್ಲಿ ಕಳಸ ಪೂಜೆ, ಬಸವನ ಗುಡ್ಡೆ ಪೂಜೆ, ತೆಪ್ಪೋತ್ಸವ ಮತ್ತು ಪರ್ವ ಮಾಡುವ ಪದ್ಧತಿ ಹಾಗೂ ಗ್ರಾಮದೇವರುಗಳಿಗೆ ಅಭಿಷೇಕ ಮಾಡುವ ಪದ್ಧತಿ ಇಂದಿಗೂ ರೂಢಿಯಲ್ಲಿದೆ. ಅರಸೀಕೆರೆ ಪರಿಸರದಲ್ಲಿ ಲಂಬಾಣಿ ಜನಾಂಗದವರು ಕಳಸವನ್ನು ಪೂಜೆ ಮಾಡಿಕೊಂಡು, ಮನೆ ಮನೆಗೆ ಬಂದು ಕೋಲಾಟ ಹಾಡುತ್ತಾ ಮಳೆ ಬರಲಿ ಎಂದು ಹೇಳಿ ಧಾನ್ಯವನ್ನು ಸಂಗ್ರಹಿಸುವ ಪದ್ಧತಿ ಇದೆ. ಹಾಗೆಯೇ ಮೇಟಿ ಕುರ್ಕೆ ಗ್ರಾಮದ ಜನರು ಒಟ್ಟಿಗೆ ಸೇರಿ ಬಸವನ ಗುಡ್ಡೆ ಪೂಜೆ ಮಾಡುತ್ತಾರೆ. ತಾವು ತೆಗೆದುಕೊಂಡು ಹೋಗಿರುವ ಎಡೆಯನ್ನು ನೈವೇದ್ಯ ಮಾಡಿ ಅಲ್ಲಿಗೆ ಬಂದ ಜನರಿಗೆ ಹಂಚಿ ಬರುತ್ತಾರೆ.

ತೆಪ್ಪೋತ್ಸವ

ಜಿಲ್ಲೆಯ ಹಲವು ಕೆರೆಗಳಲ್ಲಿ ಕೆರೆ ನೀರು ತುಂಬಿ ಕೋಡಿ ಹರಿದಾಗ ತೆಪ್ಪೋತ್ಸವವನ್ನು ಮಾಡುತ್ತಾರೆ. ಊರಿನ ಜನರೆಲ್ಲಾ ಸೇರಿ ಮರದ ತುಂಡುಗಳಿಂದ ತೆಪ್ಪವನ್ನು ಕಟ್ಟುತ್ತಾರೆ. ಅದರ ಮೇಲೆ ಗ್ರಾಮದ ದೇವರುಗಳನ್ನು ಕೂರಿಸಿ, ಹೂದೀಪಗಳಿಂದ ಅಲಂಕರಿಸಿ ಕೆರೆಯ ನೀರಿನ ಮೇಲೆ ಮೂರು ಸುತ್ತು ಮೆರವಣಿಗೆ ಮಾಡುತ್ತಾರೆ. ಮಳೆ ಬಾರದೆ ಇದ್ದರೆ ಗ್ರಾಮ ದೇವರುಗಳಿಗೆ ಅಭಿಷೇಕ

ಮಾಡಿ ಪರ್ವ ಮಾಡುತ್ತಾರೆ. ಉದಾಹರಣೆಗೆ ಅಂಬುಗ ಕೆರೆ ಸುತ್ತಮುತ್ತಲಿನ ಏಳೂರುಗಳಾದ ಚಟ್ನಹಳ್ಳಿ, ಬನವಾಸೆ, ಸಾತನಹಳ್ಳಿ, ಕೊತಗೊಂಡನಹಳ್ಳಿ, ಈರೇಹಳ್ಳಿ, ಬಸ್ತಿಹಳ್ಳಿ, ಗ್ರಾಮದ ಜನರು ಕ್ಷಾಮ ಬಂದರೆ ರಂಬಮ್ಮನಿಗೆ ಪರ್ವ(ಪರ) ಮಾಡುತ್ತಾರೆ. ಜೊತೆಗೆ ರಂಬಮ್ಮನಿಗೆ ಕುಂಕುಮ, ಬಳೆ, ಸೀರೆ, ಕುಪ್ಪಸವಿಟ್ಟು ಪೂಜೆ ಸಲ್ಲಿಸುತ್ತಾರೆ. ಈ ರೀತಿಯ ಪದ್ಧತಿಯನ್ನು ೧೨ ವರ್ಷಕ್ಕೊಮ್ಮೆ ಏಳೂರಿನ ಜನರು ಒಟ್ಟಿಗೆ ಸೇರಿ ಮಾಡುತ್ತಿದ್ದರು. ನಂತರ ೫ ವರ್ಷಗಳಿಗೊಮ್ಮೆ ಮಾಡುತ್ತಾ ಬಂದರು. ಅನಂತರ ೧೦ ವರ್ಷಗಳಾದರೂ ಮಾಡಿರಲಿಲ್ಲ. ಇತ್ತೀಚೆಗೆ ಜುಲೈ ೨೦೧೩ರಲ್ಲಿ ನಡೆದಿದೆ. ಕೆರೆಯ ತೋಪಿನಲ್ಲಿ ಏಳೂರು ಗ್ರಾಮದ ಒಕ್ಕಲಿಗ ಜನಾಂಗದವರಿಗೆ ಊಟದ ವ್ಯವಸ್ಥೆ ಇದ್ದರೆ, ಗ್ರಾಮದ ಚನ್ನಕೇಶವ ದೇವಾಲಯದ ಬಳಿ ಬ್ರಾಹ್ಮಣ ಜನಾಂಗದವರಿಗೆ ಊಟದ ವ್ಯವಸ್ಥೆ ಮಾಡಿಸಿರುತ್ತಾರೆ. ಈ ಪದ್ಧತಿ ಅಂದಿನಿಂದಲೂ ಬೆಳೆದುಬಂದಿದೆ.

ಪ್ರಾಚೀನ ಕೆರೆಯಾದ ಬೇಲೂರಿನ ವಿಷ್ಣುಸಮುದ್ರಕೆರೆ ಸಮೀಪದಲ್ಲಿರುವ ಕೊಳದಲ್ಲಿ ಪ್ರತಿ ವರ್ಷ ತೆಪ್ಪೋತ್ಸವ ನಡೆಯುತ್ತಿತ್ತು. ವಿಜಯನಗರದ ಅರಸ ಕೃಷ್ಣದೇವರಾಯನ ಆಡಳಿತದಲ್ಲಿ ಉತ್ಪಾತನಹಳ್ಳಿಯ ಬಸಪ್ಪನಾಯಕನು ತನ್ನ ಆಳ್ವಿಕೆಯ ಅವಧಿಯಲ್ಲಿ ಪ್ರತಿವರ್ಷ ಫಾಲ್ಗುಣ ಬಹುಳ ದಶಮಿಯಂದು ಈ ಕೊಳದಲ್ಲಿ ಚನ್ನಕೇಶವನ ತೆಪ್ಪತಿರುನಾಳ್ ನಡೆಸಬೇಕು ಎಂಬ ಆಶಯದಿಂದ ಬೇಲೂರು ವಿಷ್ಣುಸಮುದ್ರ ಕೆರೆಯ ಉತ್ತರ ತುದಿಯನ್ನು ತೆಪ್ಪದ ಕೊಳ ಎಂಬ ಪುಷ್ಕರಿಣಿಯಾಗಿ ಪರಿವರ್ತಿಸಿ, ವಸಂತ ಮಂಟಪ ನಿವೇದನ ಮಂಟಪಗಳನ್ನು ಕಟ್ಟಿಸಿ ೧೫೨೪ ಜುಲೈ ೫ರಂದು zÉªÀUÉ¸ÀÄ¦ð¹zÀÄ[೩೭] ಅಲ್ಲಿಂದ ಮುಂದೆ ಪ್ರತಿವರ್ಷ ಪಾಲ್ಗುಣ ಬಹುಳ ದಶಮಿಯೆಂದು ತೆಪ್ಪೋತ್ಸವ ನೆಡೆಯುತ್ತಿತ್ತು. ಇದು 'ತೆಪ್ಪತಿರುನಾಳ್' ಎಂದೇ ಜನಪ್ರಿಯವಾಗಿತ್ತು. ತೆಪ್ಪೋತ್ಸವಕ್ಕಾಗಿ ಎರಡು ದೋಣಿಗಳ ಮೇಲೆ ತೆಪ್ಪವನ್ನು ಕಟ್ಟಿ ಉತ್ಸವಮೂರ್ತಿಗಳಿಗೆ ಜಲವಿಹಾರ ಮಾಡಿಸಿ, ಮಂಗಳಾರತಿ ನೈವೇದ್ಯ ಮಾಡುತ್ತಿದ್ದರು. ದೋಣಿಗಳು ಶಿಥಿಲವಾದ ಮೇಲೆ ಕಬ್ಬಿಣದ ಡ್ರಮ್ಮುಗಳ ಮೇಲೆ ಬಿದಿರು ಬೊಂಬುಗಳಿಂದ ತೆಪ್ಪವನ್ನು ಕಟ್ಟಿ ತೆಪ್ಪೋತ್ಸವ ಮಾಡುತ್ತಿದ್ದರು. ತೆಪ್ಪವು ದಡಕ್ಕೆ ಬಂದಾಗ ವಿಶೇಷ ನೈವೇದ್ಯಗಳು, ಕೋಸಂಬರಿ, ಪಾನಕ, ಮಜ್ಜಿಗೆ ಮುಂತಾದವನ್ನು ದೇವರಿಗೆ ನಿವೇದಿಸಿ ಮಂಗಳಾರಾತಿಯ ನಂತರ ಪ್ರಸಾದ ವಿನಿಯೋಗ ನಡೆಯುತ್ತಿತ್ತು.

೧೮೮೦ರ ವೇಳೆಗೆ ತೆಪ್ಪೋತ್ಸವ ನೈವೇದ್ಯದ ಬಗ್ಗೆ ವಿವಾದವೆದ್ದಿತು. ಆಗ ಸರ್ಕಾರವು ಮಧ್ಯಪ್ರವೇಶ ಮಾಡಿ, ತೆಪ್ಪದ ಕೊಳದ ಬೇರೆ ಬೇರೆ ಕಡೆಗಳಲ್ಲಿ ಶ್ರೀವೈಷ್ಣವ, ಮಾಧ್ವ ಜನಾಂಗದವರು ಪ್ರತ್ಯೇಕವಾಗಿ ನಿವೇದನಗಳನ್ನು ಅರ್ಚಕರ ಮೂಲಕ ಅರ್ಪಿಸುವ ವ್ಯವಸ್ಥೆಯು ೧೮೮೧ರಲ್ಲಿ ಜಾರಿಯಲ್ಲಿತ್ತು.[೩೮]

ಕೆಲವು ವರ್ಷಗಳಿಂದ ತೆಪ್ಪೋತ್ಸವ ನಡೆಯುತ್ತಿಲ್ಲ. ದೇವಾಲಯದ ವಾಸುದೇವ ಪುಷ್ಕರಣಿಯಲ್ಲಿ ತೆಪ್ಪೋತ್ಸವ ಮಾಡಬಹುದು ಎಂಬ ಸಲಹೆ ಇದೆ. ಆದರೆ ಅಲ್ಲಿ ಉತ್ಸವಕ್ಕೂ ವೀಕ್ಷಕರಿಗೂ ಸಾಕಷ್ಟು

ಸ್ಥಳಾವಕಾಶ ಇಲ್ಲ. ಆದ್ದರಿಂದ ಕೆರೆಯ ಮಂಟಪ–ಆವರಣಗಳನ್ನು ಶುಚಿಗೊಳಿಸಿ, ತೆಪ್ಪದ ಕೊಳದಲ್ಲಿ ಸದಾ ಶುದ್ಧ ನೀರು ಇರುವಂತೆ ಮಾಡಿ, ಮೆಟ್ಟಿಲುಗಳನ್ನು ಭದ್ರಪಡಿಸಿದರೆ ಪುನಃ ತೆಪ್ಪೋತ್ಸವವನ್ನು ಆರಂಭಿಸಬಹುದು. ಕೆರೆ ತೆಪ್ಪೋತ್ಸವದಲ್ಲಿ ಪುರೋಹಿತರಷ್ಟೇ ಅಲ್ಲದೆ ಎಲ್ಲಾ ಜಾತಿಯ ಜನ ಸೇರಿ ಕೆರೆಯಲ್ಲಿ ಉತ್ಸವ ನಡೆಸಿ ಸಂಭ್ರಮಿಸುತ್ತಾರೆ. ಸಾಮಾಜಿಕ ವ್ಯವಸ್ಥೆಯ ರೂವಾರಿ ಕೆರೆಯಾಗಿದೆ.

ಜಿಲ್ಲೆಯ ಹಲವು ಗ್ರಾಮಗಳಲ್ಲಿ ಗಣೇಶನ ತೆಪ್ಪೋತ್ಸವ ನಡೆಯುತ್ತದೆ. ಅಂದರೆ ಗಣೇಶ ಚತುರ್ಥಿ ಹಬ್ಬದಂದು ಗ್ರಾಮಗಳಲ್ಲಿ ಗಣೇಶನನ್ನು ತಂದು ೩೦ ದಿನಗಳವರೆಗೆ ಪೂಜಿಸಿ, ಕೊನೆಯ ದಿನದಿಂದು ಅತ್ಯಂತ ವಿಜೃಂಭಣೆಯಿಂದ ಮೆರವಣಿಗೆ ಮಾಡಿಕೊಂಡು ತಮ್ಮ ಊರುಗಳ ಕೆರೆಗಳಲ್ಲಿ ವಿಸರ್ಜನೆ ಮಾಡುತ್ತಾರೆ. ಕೆಲವು ಊರುಗಳಲ್ಲಿ ಮಹಾನವಮಿ ಹಬ್ಬದವರೆಗೂ ಪೂಜೆ ಮಾಡಿ, ಕೆರೆಯಲ್ಲಿ ನೀರಿದ್ದರೆ ತೆಪ್ಪೋತ್ಸವ ನಡೆಸಿ ವಿಸರ್ಜಿಸುತ್ತಿದ್ದರು. ಇತ್ತೀಚೆಗೆ ಕೆರೆಯ ನೀರು ಹಾಳಾಗದಂತೆ ಕೆರೆ ಸಮೀಪದಲ್ಲಿರುವ ಪುಷ್ಕರಣಿಯಲ್ಲಿ ತೆಪ್ಪೋತ್ಸವ ನಡೆಸಿ ಅದರಲ್ಲಿಯೇ ಬಿಡುತ್ತಾರೆ.

ಬಂಡಿಹಬ್ಬ

ಕೆರೆ ಪರಿಸರದಲ್ಲಿರುವ ದೇವಾಲಯಗಳಿಗೆ ವರ್ಷಕ್ಕೊಮ್ಮೆ ಬಂಡಿಹಬ್ಬ ಮಾಡುತ್ತಾರೆ. ಅದನ್ನು 'ಹಸಿರು ಬನ್ನಿ' ಎಂತಲೂ ಕರೆಯುತ್ತಾರೆ. ತೆಂಗಿನ ಗರಿಗಳಿಂದ ಎತ್ತಿನ ಬಂಡಿಗಳನ್ನು ಅಲಂಕರಿಸಿ ಊರ ಹೆಬ್ಬಾಗಿಲಿನಿಂದ ದೇವಸ್ಥಾನಗಳವರೆಗೂ ಎಳೆದುಕೊಂಡು ಬರುತ್ತಾರೆ. ಬಂಡಿಗಳಿಗೆ ಕುರಿ, ಮೇಕೆ, ಕೋಳಿಗಳನ್ನು ಬಲಿ ಕೊಡುತ್ತಾರೆ. ಈ ಆಚರಣೆ ಹೊಳೆನರಸೀಪುರ ತಾಲೂಕು ಮತ್ತು ಹಾಸನ ತಾಲೂಕು ಒಳಗೊಂಡಂತೆ ಬಹುತೇಕ ಭಾಗಗಳಲ್ಲಿದೆ. ಇದನ್ನು ಗಮನಿಸಿದಾಗ ಶಾಸನಗಳಲ್ಲಿ ಕೆರೆಯ ಹೊಳನ್ನು ಎತ್ತಲು ಬಂಡಿಗಳನ್ನು ಬಳಸಿರುವ ಉಲ್ಲೇಖಗಳಿವೆ. ಬಹುಶಃ ಅದರ ಪ್ರತೀಕವಾಗಿ ಈ ಮಾದರಿಯ ಹಬ್ಬಗಳು ರೂಢಿಗೆ ಬಂದಿರಬಹುದು ಅಥವಾ ಗ್ರಾಮೀಣ ಪ್ರದೇಶದಲ್ಲಿ ತೋಟದ ಕೆಲಸ ಕಾರ್ಯಗಳಿಗೆ ಎತ್ತಿನ ಬಂಡಿಯ ಬಳಕೆ ಇರುವುದರಿಂದ ವಾರ್ಷಿಕವಾಗಿ ಇಂತಹ ಆಚರಣೆ ಜಾರಿಯಲ್ಲಿದ್ದಿರಬಹುದು.

ಮೈಸೂರಿನ ಸುತ್ತಮುತ್ತ ಪ್ರದೇಶಗಳಲ್ಲಿ ಬಂಡಿಹಬ್ಬ ಆಚರಣೆಯಲ್ಲಿದೆ. ಚಾಮರಾಜನಗರ ಜಿಲ್ಲೆಯ ಕೆಸ್ತೂರಿನ ಆದಿ ದೈವಗಳಾದ ದೇವಮ್ಮ, ಮಾದೇಶ್ವರ ಮತ್ತು ಬಸವಣ್ಣ ದೇವರುಗಳ ಮುಂದೆ ಬಂಡಿ ಹರಕೆ ಒಪ್ಪಿಸುವ ಪದ್ಧತಿ ಇದೆ. ಬಂಡಿಗಳನ್ನು ಕನ್ನಡಿ, ಗಾಜು, ಮಣಿ ಮೊದಲಾದವುಗಳಿಂದ ಕುಸುರಿ ಚಿತ್ತಾರ ಮಾಡಿಸಿದ ಬಣ್ಣದ ಬಟ್ಟೆ, ತೋರಣ ಇತ್ಯಾದಿಗಳಿಂದ ಸಿಂಗರಿಸಿರುತ್ತಾರೆ. ಈ ಬಗೆಯ ಅಲಂಕಾರಕ್ಕಾಗಿ ಹತ್ತಾರು ಸಾವಿರ ಖರ್ಚು ಮಾಡುತ್ತಾರೆ. ಬಂಡಿಗಳನ್ನು ವಿಶೇಷವಾಗಿ ಬಾಳೆಗೊನೆ, ಎಳೆನೀರು, ಹೂ ಮೊದಲಾದವುಗಳಿಂದ ಅಲಂಕರಿಸಿ ಹರಕೆ ಒಪ್ಪಿಸುತ್ತಾರೆ. ಇದಕ್ಕೆ ಸಾಕ್ಷಿ ಎಂಬಂತೆ "ಸಪ್ಪಯ್ಯನಪುರದ್ದೂ ಸಪ್ಪಿನ ಬಂಡಿ" ಎನ್ನುವ ನಾಣ್ಣುಡಿ ಹುಟ್ಟಿಕೊಂಡಿದೆ. ಕಾಯಿ ಹರಕೆ ಮಾಡಿಕೊಂಡವರು ತಮ್ಮ ಬಂಡಿಯನ್ನು ಎಳೆನೀರಿನಿಂದ

ಅಲಂಕರಿಸಿಕೊಂಡಿರುತ್ತಾರೆ. ಬಾಳೆಗೊನೆ ಹರಕೆಯವರು ಬಾಳೆಹಣ್ಣುಗಳಿಂದಲೂ ಸಿಂಗರಿಸಿರುತ್ತಾರೆ. ಬಂಡಿಯ ಅಲಂಕಾರವೂ ಒಂದು ಹರಕೆಯ ವಿಧವಾಗಿ ಕಾಣುತ್ತದೆ.[೫೪]

ನಾಗರಪೂಜೆ

ಕೆರೆಯ ಹತ್ತಿರ ನಾಗರಕಲ್ಲನ್ನು ಹಾಕಿ ಹೋದರೆ ನಾಗರದೋಷ ಪರಿಹಾರ ಆಗುತ್ತದೆ ಎಂಬ ನಂಬಿಕೆ ಇದೆ. ಚನ್ನರಾಯಪಟ್ಟಣ ತಾಲೂಕಿಗೆ ಸೇರಿದೆ ನಾಗರನವಿಲೆ ಕೆರೆ ಏರಿ ಹಿಂಬದಿಯಲ್ಲಿ ನಾಗೇಶ್ವರ, ಪಾರ್ವತಮ್ಮ ಮತ್ತು ಸೋಮೇಶ್ವರ ದೇವಸ್ಥಾನಗಳಿವೆ. ನಾಗೇಶ್ವರ ದೇವಾಲಯದ ಮುಂಬಾಗದಲ್ಲಿ ಒಂದು ಸಣ್ಣ ಮಜ್ಜನ ಬಾವಿ ಇದೆ. ನಾಗರದೋಷವಿರುವವರು ಬಂದು ಈ ಬಾವಿಯ ನೀರನ್ನು ಹಾಕಿಸಿಕೊಂಡು ನಾಗರಕಲ್ಲನ್ನು ಪ್ರತಿಷ್ಠಾಪಿಸಿ ಹೋಗುತ್ತಾರೆ. ಈ ಕಾರ್ಯಕ್ಕೆ ಬಳಸಿದ ಅಭಿಷೇಕದ ನೀರನ್ನು ಕೆರೆಗೆ ಬಿಡುತ್ತಾರೆ. ಹೀಗೆ ಮಾಡುವುದರಿಂದ ವಿವಾಹವಾಗದವರಿಗೆ, ಮಕ್ಕಳಾಗದವರಿಗೆ ಫಲ ದೊರೆಯುತ್ತದೆ ಎಂಬ ನಂಬಿಕೆ ಇದೆ.

ಬ್ರಹ್ಮದೇವರ ಪೂಜೆ

ಹಾಸನ ತಾಲೂಕಿನ ಮೊಸಳೆ ಕೆರೆ, ಕುದುರೆಗುಂಡಿ ಕೆರೆ, ಕೌಶಿಕ ಕೆರೆ, ಯಲಗುಂದ ಕೆರೆ, ನಿಟ್ಟೂರು ಕೆರೆ, ಅರಕಲಗೊಡು ತಾಲೂಕಿನ ಸೀಗೆ ಕೆರೆ, ಬೇಲೂರು ತಾಲೂಕಿನ ಯಲಹಂಕ ಕೆರೆ ಇನ್ನೂ ಮುಂತಾದ ಕೆರೆಗಳ ಏರಿಯ ಮೇಲೆ ಒಂದು ಕಲ್ಲುಗುಂಡು ಇರುವ ಸಣ್ಣ ಗುಡಿಗಳಿವೆ. ಅವುಗಳನ್ನು ಸ್ಥಳೀಯರು ಬ್ರಹ್ಮದೇವರು ಎಂದು ಹೆಸರಿಸುತ್ತಾರೆ. ಈ ಮಾದರಿಯ ಕಲ್ಲುಗುಂಡುಗಳನ್ನು ಗಮನಿಸಿದಾಗ ಕೆರೆಗಳಿಗೆ ಬಳಸಿದ ಕಲ್ಲುಗಳ ರೀತಿ ಇದೆ. ಕೆರೆಯ ನೀರು ಸಕಲ ಪ್ರಾಣಿಪಕ್ಷಿಗಳಿಗೆ ಬಳಕೆಯಾಗುತ್ತಿದ್ದು, ದೇವರು ಎಂಬ ಪರಿಕಲ್ಪನೆಯಿಂದ ಕೆರೆಗೆ ಬಳಸಿದ ಕಲ್ಲುಗಳನ್ನು ಸಂಕೇತಿಕವಾಗಿಟ್ಟು ವರ್ಷಕ್ಕೊಮ್ಮೆ ಪೂಜಿಸುವ ಪದ್ಧತಿ ಬೆಳೆದು ಬಂದಿರಬಹುದು. ಮೊಸಳೆ ಕೆರೆ ಏರಿ ಮೇಲಿರುವ ಬ್ರಹ್ಮದೇವರ ಕಲ್ಲಿಗೆ ಗ್ರಾಮದಲ್ಲಿ ಹಸು ಕರು ಹಾಕಿದ ಅವುಗಳ ಹಾಲಿನಿಂದ ಗಿಣ್ಣನ್ನು ಮಾಡಿ ಈ ದೇವರಿಗೆ ನೈವೇದ್ಯ ಮಾಡಿಕೊಂಡು ಹೋಗುತ್ತಾರೆ.

ಕೌಶಿಕಕೆರೆ ಏರಿಗೆ ಅಂಟಿಕೊಂಡಂತೆ ಎರಡು ಕಲ್ಲುಗಳಿರುವ ಚಿಕ್ಕಗುಡಿ ಇದೆ. ಈ ಕಲ್ಲುಗಳಿಗೆ ಸಂಬಂಧಿಸಿದಂತೆ ಒಂದು ದಂತ ಕಥೆ ಇದೆ. ಕೌಶಿಕ ಗ್ರಾಮದಲ್ಲಿ ಮೊದಲು ಬೇಡರು ಇದ್ದರು. ಇವರು ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಕಡಲೆಗಿಡವನ್ನು ಬೆಳೆಯುತ್ತಿದ್ದರು. ಗ್ರಾಮದಲ್ಲಿನ ಬಸವ ಕಡಲೆ ಗಿಡವನ್ನು ಮೇಯುತ್ತಿದ್ದಾಗ ಕೋಲಿನಿಂದ ಬಸವನನ್ನು ಒಡೆದರಂತೆ, ಇದರಿಂದ ಬಸವನ ಮಂಡಿಯಲ್ಲಿ ರಕ್ತ ಸೋರಿಸಿಕೊಂಡು ಏರಿಯ ಮೇಲೆ ಬಂದು ಮಂಡಿ ಹೂರಿ ಕೆರೆಯ ನೀರಿನಲ್ಲಿ ಈಜುಕೊಂಡು ಕೆರೆಯ ಅಂಗಳದ ಪಕ್ಕದಲ್ಲಿರುವ ಚಿಕ್ಕಬಸವನ ಹಳ್ಳಿಗೆ ಬಂದು ನೆಲೆಗೊಂಡಿತು. ಬಸವ ಮಂಡಿ ಹೂರಿದ ಜಾಗದಲ್ಲಿ ಒಂದು ಕಲ್ಲು ಇದೆ. ಇದರ ಮೇಲೆ ಎತ್ತಿನ ಬಂಡಿಯಲ್ಲಿ ವಲಸೆ ಹೋಗುವ ವಲಸಿಗರು ಈ ಸ್ಥಳದಲ್ಲಿ ಬೀಡುಬಿಟ್ಟು, ಈ ಕಲ್ಲಿನ ಜೊತೆಗೆ ಎರಡು

ಕಲ್ಲುಗಳನ್ನಿಟ್ಟು ಅನ್ನ ಮಾಡಲು ಹೋದಾಗ ಅನ್ನವೆಲ್ಲ ಕೆಂಪಗೆ ರಕ್ತವಾಯಿತಂತೆ, ಅಲ್ಲದೆ ದನಕರುಗಳು ಮೂರ್ಛೆ ಹೋದವಂತೆ. ಅಂದಿನಿಂದ ಈ ಕಲ್ಲನ್ನು ಬಸವ ಮಂಡಿ ಹೂರಿದ ಸ್ಥಳವೆಂದು ಗುರುತಿಸಿ ಪೂಜೆ ಮಾಡುತ್ತಾರೆ.

ಬ್ರಹ್ಮದೇವರ ಜಾತ್ರೆ

ಅರಸೀಕೆರೆ ತಾಲೂಕಿನ ಗಂಡಸಿ ಹೋಬಳಿಯಲ್ಲಿ ಬರುವ ಗ್ರಾಮ ಕೆಂಕೆರೆ. ಈ ಊರಿನಲ್ಲಿ ಎರಡು ಕೆರೆಗಳಿವೆ. ಒಂದು ಬ್ರಹ್ಮದೇವರ ಕೆರೆ ಮತ್ತೊಂದು ಚಿಕ್ಕಕೆರೆ. ಬ್ರಹ್ಮದೇವರ ಕೆರೆ ಏರಿ ಮಧ್ಯದಲ್ಲಿ ಬ್ರಹ್ಮೇಶ್ವರ ದೇವಾಲಯವಿದೆ. ಇದರ ಪಕ್ಕದಲ್ಲಿನ ಕೆರೆಯ ನೀರು ಕೆಂಪಗೆ ಕಾಣುತ್ತದೆಯೆಂತೆ. ಇದರಿಂದ ಗ್ರಾಮಕ್ಕೆ ಕೆಂಪುಕೆರೆ ಹೋಗಿ ಕೆಂಕೆರೆ ಆಗಿದೆ ಎನ್ನುವುದು ಸ್ಥಳೀಯರ ಜನಪದರ ಅಭಿಪ್ರಾಯವಾಗಿದೆ. ಈ ದೇವರ ಜಾತ್ರೆ ಅಪ್ಪಣೆಯ ಮೇರೆಗೆ ಮೂರು ಅಥವಾ ಐದು ವರ್ಷಗಳಿಗೊಮ್ಮೆ ನಡೆಯುತ್ತದೆ. ಈ ಜಾತ್ರೆಯ ವಿಶೇಷತೆ ಎಂದರೆ ಜಾತ್ರೆ ಮಾಡುವುದೆಂದು ತೀರ್ಮಾನವಾದಂದಿನಿಂದ ಮುಗಿಯುವವರೆಗೂ ಯಾರೂ ಊರ ಒಳಗಡೆ ಚಪ್ಪಲಿ ಹಾಕಿಕೊಂಡು ಹೋಗುವಂತಿಲ್ಲ. ಗ್ರಾಮಸ್ಥರು ತಮ್ಮ ಮನೆಯಲ್ಲಿರುವ ಎಲ್ಲಾ ಚಪ್ಪಲಿಗಳನ್ನು ಊರಿನಿಂದ ಹೊರಗಡೆ ಬಿಟ್ಟುಬರುತ್ತಾರೆ. ಪೋಲಿಸರು ಚರ್ಮದ ಬೆಲ್ಟ್‌ಗಳನ್ನು ಕೂಡ ಹಾಕುವಂತಿಲ್ಲ. ಈ ನಿಬಂಧನೆಯನ್ನು ಪಾಲಿಸುವಂತೆ ಊರಿನ ಎಲ್ಲಾ ಕಡೆಗಳಲ್ಲಿಯೂ ಬೋರ್ಡ್‌ಗಳನ್ನು ಹಾಕಿಸುತ್ತಾರೆ. ಈ ಜಾತ್ರೆಯನ್ನು ಬೆಂಕಿ ಬೊಮ್ಮಪ್ಪನ ಜಾತ್ರೆ ಎಂತಲೂ ಕರೆಯುತ್ತಾರೆ.

ಬೂತಪ್ಪನ ಪೂಜೆ

ಬೇಲೂರು ತಾಲೂಕಿನಿಂದ ಹಳೇಬೀಡು ಹೋಬಳಿಯಲ್ಲಿ ಬರುವ ಒಂದು ಗ್ರಾಮ ರಾಜನಸಿರಿಯೂರು. ಈ ಗ್ರಾಮದಲ್ಲಿರುವ ದೊಡ್ಡ ಕೆರೆಯ ಉತ್ತರದಿಕ್ಕಿನ ಕೋಡಿಯ ಸಮೀಪ ಬೂತಪ್ಪನ ಚಿಕ್ಕಗುಡಿ ಇದೆ. ಅದನ್ನು ಸಾಮಾನ್ಯವಾಗಿ ಕೋಡಿ ಬೂತಪ್ಪ ಎಂದು ಕರೆಯುತ್ತಾರೆ. ಗುಡಿಯ ಒಳಭಾಗದಲ್ಲಿ ಒಂದು ದೊಡ್ಡ ಕಲ್ಲಿದ್ದು, ಅದರ ಮುಂಭಾಗದಲ್ಲಿ ಎರಡು ಸಣ್ಣ ಸಣ್ಣ ಕಲ್ಲುಗಳಿವೆ. ಕೆರೆಯ ಪಕ್ಕದಲ್ಲಿ ಒಂದು ಬೆಟ್ಟವಿದೆ. ಅದರ ಕಲ್ಲನ್ನು ಕೆರೆಯ ಏರಿಗೆ ಬಳಸಿರುವುದರಿಂದ ಬೆಟ್ಟದ ಕೆಳಗಿನ ಒಂದು ದೊಡ್ಡ ಕಲ್ಲು ಮತ್ತು ಕೆರೆಗೆ ಬಳಸಿರುವ ಕಲ್ಲನ್ನು ದೇವರು ಎಂಬ ಕಲ್ಪನೆಯಿಂದ ಪೂಜಿಸಿರಬಹುದು. ಶುಕ್ರವಾರ ಮತ್ತು ಮಂಗಳವಾರ ವಿಶೇಷ ಪೂಜೆ ನಡೆಯುತ್ತದೆ. ಶಿವರಾತ್ರಿಯ ಸಂದರ್ಭದಲ್ಲಿ ಜಾತ್ರೆ ಮಾಡುತ್ತಾರೆ. ಈ ದೇವರಿಗೆ ದನ ಕರುಗಳಿಗೆ ರೋಗಗಳು ಬಂದಾಗ ಹರಕೆ ಮಾಡಿಕೊಂಡರೆ ರೋಗಗಳು ನಿವಾರಣೆಯಾಗುತ್ತವೆ ಎಂಬ ನಂಬಿಕೆ ಇದೆ.

ಕೆರೆ ಬಂದಮ್ಮ

ಆಲೂರು ತಾಲೂಕಿನ ಕಾರಗೊಡು ಊರಬಾಗಿಲ ಕೆರೆಯಲ್ಲಿ ಕೆರೆ ಬಂದಮ್ಮ ವಾಸವಾಗಿದ್ದಳೆಂಬ ನಂಬಿಕೆ ಇದೆ. ಪ್ರಾಚೀನ ಕಾಲದಲ್ಲಿ ಬಡವರು ತಮ್ಮ ಮಕ್ಕಳನ್ನು ಮದುವೆ ಮಾಡಲು ಬಂದಮ್ಮನ್ನು

ಒಡವೆ ಕೇಳುತಿದ್ದರು. ಬಂದಮ್ಮ ಒಂದು ಎಲೆ ಮೇಲೆ ಒಡವೆಯನ್ನಿಟ್ಟು ತೇಲಿ ಬಿಡುತ್ತಿದ್ದಳಂತೆ. ಹೀಗೆ ಜನರ ಜೊತೆ ಮಾತನಾಡುತ್ತಿದ್ದ ಬಂದಮ್ಮನನ್ನು ಊರಿನ ಒಬ್ಬ ಹೆಣ್ಣು ಮಗಳು ನಿನ್ನ ಸೊಲ್ಲು ಅಡಗಲಿಲ್ಲ ಎಂದು ಬೈದು ದೂರ ಹೋಗಿ ಅತ್ತಿ ಮರದ ಬಳಿ ಸತ್ತಳು. ಇದಕ್ಕೆ ಸಾಕ್ಷಿಯಂತೆ ಅತ್ತಿ ಮರವನ್ನು ತೋರಿಸುತ್ತಾರೆ. ಅಂದಿನಿಂದ ಬಂದಮ್ಮ ಜನರ ಜೊತೆ ಮಾತನಾಡುವುದನ್ನು ಬಿಟ್ಟಿರುವಂತೆ ಕಥೆ ಹೇಳುತ್ತಾರೆ. ಕೆರೆಯನ್ನು ಬನಕೆರೆ, ಬಂದಮ್ಮನ ಕೆರೆ, ಊರಬಾಗಿಲ ಕೆರೆ, ಎಂಬ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಇಂತಹ ನಂಬಿಕೆಗಳು ಗ್ರಾಮದಲ್ಲಿ ಇರುವುದರಿಂದ ಇವತ್ತಿಗೂ ಕೆರೆ ಚಿಕ್ಕದಾಗಿದ್ದರೂ ಪಾವಿತ್ರ್ಯತೆಯಿಂದ ಕೂಡಿದೆ.

ದೇವಕನ್ನೆಯರು

ಚನ್ನರಾಯಪಟ್ಟಣ ತಾಲೂಕಿನ ಅಣತಿಕೆರೆ ಪಕ್ಕದಲ್ಲಿ ಹಳೆಯ ಮಂಟಪವಿದೆ. ಒಳಭಾಗದಲ್ಲಿ ಭುವನೇಶ್ವರಿ ಇದೆ. ಬಹುಶಃ ಇದನ್ನು ಬೇರೆ ಕಡೆಯಿಂದ ತಂದು ಇಟ್ಟಿರುವಂತೆ ಕಂಡುಬರುತ್ತದೆ. ಸ್ಥಳೀಯರ ಪ್ರಕಾರ ಈ ಮಂಟಪದಲ್ಲಿ ದೇವ ಅಥವಾ ದೇವಕನ್ನೆಯರು ವಾಸವಾಗಿದ್ದರು ಎಂಬ ನಂಬಿಕೆ ಇದೆ. ಗ್ರಾಮದ ಬಡ ಜನರು ಹಿಂದೆ ತಮ್ಮ ಮಕ್ಕಳನ್ನು ಮದುವೆ ಮಾಡುವ ಸಂದರ್ಭದಲ್ಲಿ ಒಡವೆಗಳನ್ನು ಕೇಳುತ್ತಿದ್ದರು. ದೇವತೆಗಳು ಈ ಮಂಟಪದಲ್ಲಿ ಒಡವೆ ಇಟ್ಟು ಹೋಗುತ್ತಿದ್ದರು. ಮದುವೆ ಆದ ನಂತರ ಒಡವೆಗಳನ್ನು ಮಂಟಪದ ಬಳಿ ಇಟ್ಟು ಬರುತ್ತಿದ್ದರು. ಯಾರೋ ಒಬ್ಬರು ಮದುವೆಗೆ ಒಡವೆಗಳನ್ನು ಕೇಳಿ ತೆಗೆದುಕೊಂಡು ಬಂದು ಪುನಃ ಮಂಟಪದ ಬಳಿ ಇಡದೆ ತಮ್ಮ ಬಳಿಯೇ ಇಟ್ಟುಕೊಂಡರಂತೆ. ಅಂದಿನಿಂದ ದೇವಕನ್ನೆಯರು ಒಡವೆಗಳನ್ನು ಕೊಡುವುದನ್ನು ನಿಲ್ಲಿಸಿದರು ಎಂದು ಹೇಳುತ್ತಾರೆ. ಈ ದಿನಗಳಲ್ಲಿ ಮಂಟಪದ ಒಳಗಡೆ ಇರುವ ಭುವನೇಶ್ವರಿಯನ್ನು ನೆಲದಲ್ಲಿ ಪ್ರತಿಷ್ಠಾಪಿಸಿ ಗಂಗಮ್ಮನ ಪೂಜೆ ಮಾಡುತ್ತಾರೆ. ಈ ಸ್ಥಳಕ್ಕೆ ಗಂಗಾ ಮತಸ್ಥರೆಲ್ಲರೂ ಒಟ್ಟಾಗಿ ಸೇರಿ ಊರಿನ ಜನರಿಂದ ಹಣವನ್ನು ಸಂಗ್ರಹಿಸಿ ಗಂಗಮ್ಮನನ್ನು ಮಾಡುತ್ತಾರೆ. ಅಲ್ಲದೆ ಗೌರಿಗಣೇಶನನ್ನು ಇಟ್ಟು ಪೂಜೆ ಮಾಡಿ ೫ ದಿನದ ನಂತರ ಕೆರೆಗೆ ಬಿಡುತ್ತಾರೆ.

ಭೈರವನಪಾದ ಶಿಲ್ಪಫಲಕಗಳು

ಹಾಸನ ಜಿಲ್ಲೆಯಲ್ಲಿ ಹೆಚ್ಚು ಭೈರವ ದೇವಾಲಯಗಳಿದ್ದು ಅವುಗಳ ಮುಂಭಾಗದಲ್ಲಿ ಭೈರವನಪಾದ ಶಿಲ್ಪಫಲಕಗಳು ಕಂಡುಬಂದಿವೆ. ಇವು ಭೈರವಾರಾಧನೆ ವ್ಯಾಪಕವಾಗಿರುವುದನ್ನು ಸಾರುತ್ತವೆ. ಈ ದಿನಗಳಲ್ಲಿ ಕೆಲವು ಗ್ರಾಮಗಳಲ್ಲಿ ಭೈರವನ ದೇವಾಲಯ ನಾಶವಾಗಿದ್ದು, ಅವುಗಳ ಮುಂಭಾಗದಲ್ಲಿರವ ಭೈರವಪಾದ ಶಿಲ್ಪಫಲಕಗಳನ್ನು ಕೆರೆ ದಂಡೆಯ ದೇವಾಲಯಗಳ ಬಳಿ ಇರಿಸಿರುವುದನ್ನು ನೋಡಬಹುದು.

ಉದಾಹರಣೆಗೆ ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಗಂಡಸಿ ಹೋಬಳಿಯಲ್ಲಿರುವ ಬಾಗವಳು ಗಾಮದಲ್ಲಿ ಎರಡು ಅಪರೂಪದ ಭೈರವನಪಾದ ಶಿಲ್ಪಫಲಕಗಳಿವೆ. ಈ ಗ್ರಾಮವು ಅರಸೀಕೆರೆಯಿಂದ ೨೦ ಕಿ.ಮೀ. ಹಾಗೂ ಗಂಡಸಿಯಿಂದ ೫ ಕಿ.ಮೀ. ದೂರದಲ್ಲಿದೆ. ಗ್ರಾಮದ ಉತ್ತರಕ್ಕೆ ಕೆರೆ ಇದೆ. ಕೆರೆಯ ಸಂಮೀಪ ಸೋಮೇಶ್ವರ ಮತ್ತು ಭೈರವೇಶ್ವರ ದೇವಾಲಯಗಳಿವೆ. ಈ ದೇವಾಲಯಗಳ ಮುಂಭಾಗದಲ್ಲಿ ೧ ೧/೨ ಅಡಿ ಉದ್ದ ಮತ್ತು ೧ ೧/೨ ಅಡಿ ಅಗಲದ ನೆಲಕ್ಕೆ ಹಾಸಿದ ಎರಡು ಚಪ್ಪಡಿ ಕಲ್ಲುಗಳಿದ್ದು, ಅವು ಭೈರವನಪಾದ ಶಿಲ್ಪಗಳನ್ನು ಹೊಂದಿವೆ.

ಒಂದು ಶಿಲ್ಪಫಲಕದಲ್ಲಿ ಪಾದಗಳ ಸುತ್ತ ನಾಗಸರ್ಪವಿದ್ದು, ಅದರ ಬಲಭಾಗದಲ್ಲಿ ರುಂಡ ಕತ್ತರಿಸಿದ ಸ್ತ್ರೀಯೊಬ್ಬಳು ತನ್ನ ಎರಡು ಕೈಗಳನ್ನು ಮುಂಚಾಚಿ ಒಂದು ಕಾಲನ್ನು ಮಡಚಿ ಬೋರಲಾಗಿ ಮಲಗಿರುವಂತೆ ಚಿತ್ರಿಸಲಾಗಿದೆ. ಅದೇ ರೀತಿ ಎಡಭಾಗದಲ್ಲಿ ರುಂಡ ಕತ್ತರಿಸಿದ ಪುರುಷ ವ್ಯಕ್ತಿಯೊಬ್ಬನು ಬೋರಲಾಗಿ ಮಲಗಿರುವಂತೆ ತೋರಿಸಲಾಗಿದೆ. ಈ ಎರಡು ಮುಂಡಗಳ ಮುಂಭಾಗದಲ್ಲಿ ಎರಡು ಕುರಿ ತಲೆಗಳಿದ್ದು, ಅವುಗಳ ಬಾಯಲ್ಲಿ ಕಾಲುಗಳನ್ನು ಇಟ್ಟಿರುವಂತೆ ಕಂಡರಿಸಲಾಗಿದೆ. ಪಾದಗಳ ಮುಂಭಾಗದಲ್ಲಿ ಮುಂಡದಿಂದ ಪ್ರತ್ಯೇಕಿಸಿದ ಸ್ತ್ರೀ ಪುರುಷರ ರುಂಡವನ್ನು ಇಡಲಾಗಿದೆ. ಈ ಶಿಲ್ಪಗಳ ದಷ್ಟಪುಷ್ಟ ಆಕಾರ ಮತ್ತು ರುಂಡಗಳ ಮುಖಛಾಯೆಯಿಂದ ಸ್ತ್ರೀ ಮತ್ತು ಪುರುಷ ಶಿಲ್ಪಗಳಂತೆ ಗೋಚರಿಸುತ್ತವೆ. ಮತ್ತೊಂದು ಶಿಲ್ಪಫಲಕದಲ್ಲಿ ಪಾದಗಳ ಸುತ್ತ ನಾಗಸರ್ಪ ಸುತ್ತಿದೆ. ಅದರ ಎಡಬಲಗಳಲ್ಲಿ ಬೋರಲಾಗಿ ಮಲಗಿರುವ ಮನುಷ್ಯರ ಶಿಲ್ಪಗಳಿದ್ದು, ರುಂಡಗಳನ್ನು ಕತ್ತರಿಸಿ ಪ್ರಾಣಿ ತಲೆಯನ್ನು ಜೋಡಿಸಿದಂತೆ ಕೆತ್ತಲಾಗಿದೆ. ಪಾದಗಳ ಮುಂಭಾಗದಲ್ಲಿ ಮುಂಡದಿಂದ ಪ್ರತ್ಯೇಕಿಸಿದ ರುಂಡವನ್ನು ಇಡಲಾಗಿದೆ. ಆದರೆ ಪ್ರಾಣಿ ಮುಂಡ ಈ ಶಿಲ್ಪ ಫಲಕದಲ್ಲಿ ಕಂಡುಬಂದಿಲ್ಲ.

ಅರಸೀಕೆರೆ ತಾಲೂಕಿನಿಂದ ಸುಮಾರು ೧೬ ಕಿ.ಮೀ. ದೂರದ ಚಿಕ್ಕಗಂಡಸಿ ಗ್ರಾಮದ ಕೆರೆಯಂಗಳದಲ್ಲಿ ಮಹಾಲಿಂಗೇಶ್ವರ ದೇವಸ್ಥಾನವಿದೆ. ಈ ದೇವಾಲಯದ ಮುಂಭಾಗದಲ್ಲಿರುವ ಸುಮಾರು ೧.೫ ಅಡಿ ಅಗಲ, ೧ ಅಡಿ ಉದ್ದದ ನೆಲಕ್ಕೆ ಹಾಸಿದ ಕಲ್ಲಿನ ಮೇಲೆ ಭೈರವನಪಾದ ಶಿಲ್ಪಫಲಕಗಳಿವೆ. ಗ್ರಾಮದ ಸ್ಥಳೀಯರು ಈ ಶಿಲ್ಪಫಲಕವು ಮೊದಲು ಗ್ರಾಮದ ಭೈರವ ದೇವಸ್ಥಾನದ ಮುಂಭಾಗದಲ್ಲಿತ್ತು. ನಂತರ ದೇವಾಲಯವನ್ನು ಜೀರ್ಣೋದ್ಧಾರ ಮಾಡುವ ಸಂದರ್ಭದಲ್ಲಿ ಮಹಾಲಿಂಗೇಶ್ವರ ದೇವಸ್ಥನದ ಹತ್ತಿರ ತಂದು ಹಾಕಲಾಗಿದೆ ಎಂದು ತಿಳಿಸಿದ್ದಾರೆ.

ಈ ಶಿಲ್ಪಫಲಕದಲ್ಲಿಯೂ ಕೂಡ ಪಾದಗಳ ಸುತ್ತ ನಾಗಸರ್ಪ ಸುತ್ತಿದೆ. ಇದರ ಎರಡು ಬದಿಯಲ್ಲಿ ಬೋರಲಾಗಿ ಮಲಗಿದ ಭಂಗಿಯಲ್ಲಿರುವ ಎರಡು ವ್ಯಕ್ತಿಗಳ ಕತ್ತರಿಸಿದ ಮುಂಡ ಮತ್ತು ರುಂಡಗಳು ಇದ್ದು, ಎಡಭಾಗದ ವ್ಯಕ್ತಿ ಮುಂಡದ ಕೆಳಗೆ ಪ್ರಾಣಿ ಮುಂಡ ಮತ್ತು ರುಂಡ ಇದೆ. ಆದರೆ ಈ ಶಿಲ್ಪಫಲಕದಲ್ಲಿ ಪ್ರತ್ಯೇಕಿಸಿದ ಮಾನವನ ರುಂಡವು ಸ್ಪಷ್ಟವಾಗಿ ಗೋಚರಿಸಿಲ್ಲ.

ಈ ಬಗೆಯ ಶಿಲ್ಪಫಲಕಗಳು ಅರಸೀಕೆರೆ ತಾಲೂಕಿನ ಕುರುವಂಕ ಕೆರೆ, ಬಾಗವಾಳು ಕೆರೆ ಚನ್ನರಾಯಪಟ್ಟಣ ತಾಲೂಕಿನ ದಿಡಗ ಕೆರೆ, ಬೇಲೂರು ತಾಲೂಕಿನ ಹಳೇಬೀಡು ಕೆರೆ ಮತ್ತು ಹಾಸನ ತಾಲೂಕಿನ ಕದುರೆಗುಂಡಿ ಕೆರೆಗಳ ಸಮೀಪದ ದೇವಾಲಯಗಳ ಬಳಿ ಇವೆ. ಈ ಶಿಲ್ಪಫಲಕಗಳು ನರಬಲಿಯನ್ನು ಸೂಚಿಸುತ್ತವೆ. ಇಪ್ಪತ್ತನೆಯ ಶತಮಾನದ ಆದಿಭಾಗದವರೆಗೂ ಭೈರವನಿಗೆ ಬೆರಳುಗಳನ್ನು ಕತ್ತರಿಸಿ ಬಲಿ ನೀಡುತ್ತಿದ್ದ ಆಚರಣೆ ಇತ್ತೆಂದು, ಅದನ್ನು ಸರ್ಕಾರ ನಿಶೇಧಿಸಿತೆಂಬುದು ತಿಳಿದುಬರುತ್ತದೆ. ಈಗ ಬೆರಳಿಗೆ ವೀಳ್ಯದೆಲೆಯನ್ನು ಸುತ್ತಿ ಅದನ್ನು ಒಪ್ಪಿಸುವುದರ ಮೂಲಕ ಬಲಿಯನ್ನು ಆಚರಿಸಲಾಗುತ್ತದೆ.[೬೦]

ವಾರ್ಷಿಕ ವರ್ತನ

ಕೆರೆ ಕಟ್ಟಿದ ನಂತರ ಊರಿನ ಹಿತಕ್ಕಾಗಿ, ಕೆರೆ ಸಂರಕ್ಷಣೆಗಾಗಿ ಏರಿಯ ಮೇಲೆ, ಕೆರೆ ಆಯಕಟ್ಟು ಪ್ರದೇಶ, ಕೋಡಿಗಳ ಹತ್ತಿರದಲ್ಲಿ ಸಾಮಾನ್ಯವಾಗಿ ಸ್ತ್ರೀ ಮತ್ತು ಪುರುಷ ದೇವಾಲಯಗಳು ಕಂಡುಬಂದಿವೆ. ಅವುಗಳಲ್ಲಿ ಹೆಚ್ಚಿನ ದೇವಾಲಯಗಳು ಶಿವ ದೇವಾಲಯಗಳಾಗಿದ್ದು, ವರ್ಷಕ್ಕೊಮ್ಮೆ ಕೆಲವು ಕೆರೆಗಳ ಬಳಿ ಇರುವ ಶಿವ ದೇವಾಲಯಗಳಿಗೆ ಗ್ರಾಮಗಳ ಜನರು ಒಟ್ಟಿಗೆ ಸೇರಿ ಅಭಿಷೇಕ ಮಾಡಿಸಿ ಪರ್ವ(ಪರ) ಮಾಡುತ್ತಾರೆ. ಹೀಗೆ ಮಾಡುವುದರಿಂದ ಗ್ರಾಮದಲ್ಲಿ ಬರಗಾಲ ತಪ್ಪಿ ಮಳೆ ಬೆಳೆ ಆಗುತ್ತದೆ ಎಂಬ ನಂಬಿಕೆ ಇದೆ.

ಕೃಷಿ ಸಮುದಾಯದ ಜನಕ್ಕೆ ನೀರು ಅತ್ಯವಶ್ಯಕವಾಗಿರುವುದರಿಂದ ನೀರಿನ ಅಧಿದೇವತೆ ಅವರಿಗೆ ಆರಾಧ್ಯ ದೈವವಾಗುತ್ತಾಳೆ. ಹಾಗಾಗಿ ಸ್ತ್ರೀದೇವರುಗಳನ್ನು ಹಲವು ಬಗೆಯ ಹೆಸರುಗಳಿಂದ ಗುರುತಿಸಿ ಆರಾಧಿಸುತ್ತಾರೆ. ಉದಾಹರಣೆಗೆ ಅರಸೀಕೆರೆ ತಾಲೂಕಿನ ಕಾಮಸಮುದ್ರ ಕೆರೆಯ ಕನ್ನೇರಮ್ಮ, ದುಮ್ಮೇನಹಳ್ಳಿ ಕೆರೆಯ ಕನ್ನೇರಮ್ಮ, ಆಲೂರು ತಾಲೂಕಿನ ಮೇರ್ವೆ ಕೆರೆಯ ಹಾಲಕ್ಕಮ್ಮ, ಶ್ರವಣಬೆಳಗೊಳದ ಸುಂಡಳ್ಳಿ ಕೆರೆಯ ಕೋಡಿಯಮ್ಮ, ಜನಿವಾರ ಕೆರೆಯ ಏರಿಮಾರಮ್ಮ, ಬೆಕ್ಕ ಕೆರೆಯ ಮಾರಮ್ಮ ಮತ್ತು ದುರ್ಗಮ್ಮ, ಯಲಿಯೂರು ಕೆರೆಯ ದೇವಿರಮ್ಮ, ಬೇಲೂರು ತಾಲೂಕಿನ ಚಟಚಟನಹಳ್ಳಿ ಕೆರೆಯ ಕರಿಯಮ್ಮ ಹೀಗೆ ವಿವಿಧ ಮಾದರಿಯ ನಾಮಾವಳಿಯಿಂದ ಕೂಡಿದ ಸ್ತ್ರೀದೇವತೆಗಳಿವೆ.

ಈ ದೇವರುಗಳು ಜಲದೇವತೆಗಳಾಗಿದ್ದು, ಅನೇಕ ಗ್ರಾಮಗಳಲ್ಲಿ ಗ್ರಾಮದೇವತೆಯಾಗಿ ವರ್ಷಕ್ಕೊಮ್ಮೆ ಜಾತ್ರೆ ಉತ್ಸವಗಳನ್ನು ಮಾಡುತ್ತಾರೆ. ಚನ್ನರಾಯಪಟ್ಟಣ ಕೆರೆಯ ಹತ್ತಿರ ವಳಗೆರಮ್ಮನ ಪುರಾತನ ದೇವಾಲಯವಿದೆ. ಇದರ ಮುಂಭಾಗದಲ್ಲಿ ಜೋಕಾಲಿ ಕಂಬಗಳಿವೆ. ನರಕ ಚತುರ್ಥಿ ಸಂದರ್ಭದಲ್ಲಿ ಜಾತ್ರೆ ನಡೆಯುತ್ತದೆ. ಸಿಡಿ, ಕೆಂಡ, ಬಾಯಿಬೀಗದ ಹರಕೆ ಒಪ್ಪಿಸುವಂತಹ ಪದ್ಧತಿಗಳು ರೂಢಿಯಲ್ಲಿವೆ. ಇದೇ ಮಾದರಿಯ ಆಚರಣೆಗಳು ಹಾರನಹಳ್ಳಿ ಕೆರೆ ಕೋಡಿಯಲ್ಲಿರುವ ಕೋಡಿಯಮ್ಮನ ದೇವಸ್ಥಾನದಲ್ಲಿಯೂ ಇದೆ. ಸಾಮಾನ್ಯವಾಗಿ ಗ್ರಾಮದೇವತೆಗಳ ಜಾತ್ರೆಗಳು ಮೇ,

ಏಪ್ರಿಲ್ ತಿಂಗಳುಗಳಲ್ಲಿ ನಡೆಯುತ್ತವೆ. ಸಕಲೇಶಪುರ ತಾಲೂಕಿನ ಉದೇವಾರೆ ಕೆರೆ ಹತ್ತಿರ ದೇವಿರಮ್ಮನ ದೇವಾಲಯವಿದ್ದು, ವರ್ಷದಲ್ಲಿ ಎರಡು ಬಾರಿ ಜಾತ್ರೆ ನಡೆಯುತ್ತದೆ. ವೈಶಾಖ ಮಾಹೆಯಲ್ಲಿ ದೇವಿರಮ್ಮನ ಸುಗ್ಗಿ ಜಾತ್ರೆ ಇಲ್ಲಿ ನೆಡೆಯುತ್ತದೆ. ದೀಪಾವಳಿಯಲ್ಲಿ ದೇವಿಯನ್ನು ಕೆರೆಗೆ ಕರೆದುಕೊಂಡು ಹೋಗಿ ಗಂಗಾಸ್ನಾನ ಮಾಡಿಸಿ ನಂತರ ನೂರೊಂದು ಉಡುಗೆಗಳನ್ನು ತೊಡಿಸಿ ಇಡೀ ರಾತ್ರಿ ಗ್ರಾಮದ ಜನರು ಒಟ್ಟಿಗೆ ಸೇರಿ ಚೋಮನ ಕುಣಿತ, ಡೊಳ್ಳಿನ ಕುಣಿತದೊಂದಿಗೆ ಸಂಭ್ರಮಿಸುತ್ತಾರೆ. ಮೇ ಮಾಹೆಯಲ್ಲಿ ನಡೆಯುವ ಸುಗ್ಗಿ ಜಾತ್ರೆ ೧೨ ದಿನಗಳವರೆಗೆ ನಡೆಯುತ್ತದೆ. ಅಲ್ಲದೆ ಮಂಗಳವಾರ ಮತ್ತು ಶುಕ್ರವಾರ ವಿಶೇಷ ಪೂಜೆ ಮಾಡುತ್ತಾರೆ.

ಗ್ರಾಮದೇವತೆಯ ಸಂಸ್ಕೃತಿಯಲ್ಲಿ ವೃಕ್ಷಗಳಿಗೆ ಮಹತ್ವದ ಪಾತ್ರವಿದೆ. ಅನೇಕ ದೇವತೆಗಳು ತಮ್ಮನ್ನು ವೃಕ್ಷಗಳ ಜೊತೆ ಗುರುತಿಸಿಕೊಂಡಿವೆ. ಕೆಲವು ದೇವತೆಗಳು ವೃಕ್ಷಗಳಲ್ಲೇ ಒಡಮೂಡಿರುವುದರಿಂದ ಭಕ್ತರು ಆ ವೃಕ್ಷಗಳನ್ನು ಪೂಜಿಸುತ್ತಾರೆ. ಅವುಗಳನ್ನು ಕಡಿಯುವುದಿಲ್ಲ ಮತ್ತು ಒಲೆಗೆ ಸೌದೆಯಾಗಿ ಬಳಸುವಂತಿರಲಿಲ್ಲ. ಆ ವೃಕ್ಷಕ್ಕೂ ದೇವತೆಗೂ ಯಾವುದೇ ವ್ಯತ್ಯಾಸವಿಲ್ಲವೆಂದು ನಂಬುತ್ತಾರೆ.

ಗ್ರಾಮಗಳಲ್ಲಿ ಮಾರಕ ರೋಗಗಳು ಬಂದು ಜನ ಮರಣ ಹೊಂದುತ್ತಿದ್ದರೆ, ದನಕರುಗಳಿಗೆ ಕಾಯಿಲೆ ಬಂದರೆ ಇಂದು ಗ್ರಾಮದೇವತೆಗಳಿಗೆ ಅಭಿಷೇಕ ಮಾಡಿಸುತ್ತಾರೆ. ಹಿಂದೆ ಗ್ರಾಮದ ಜನರು ಮಂಗಳವಾರ, ಶುಕ್ರವಾರ, ಗುರುವಾರ ಅಥವಾ ಭಾನುವಾರ ಮಣ್ಣಿನಿಂದ ಚಿಕ್ಕ ದೇವತೆಯ ಮೂರ್ತಿಯನ್ನು ಮಾಡಿ ಅದಕ್ಕೆ ಹೂ, ಅರಿಸಿನ, ಕುಂಕುಮದಿಂದ ಪೂಜಿಸಿ ಮೊಸರು ಅನ್ನವನ್ನು ನೈವೇದ್ಯ ಮಾಡಿ, ನಂತರ ಊರಿನಿಂದ ಹೊರಗೆ ಇರುವ ಅರಳಿ ಅಥವಾ ಬೇವಿನ ಮರದ ಕೆಳಗೆ ಇಟ್ಟು ವಾಪಸ್ಸು ಬರುತ್ತಿದ್ದರು. ಹೀಗೆ ಮಾಡುವುದರಿಂದ ರೋಗಗಳಿಂದ ಮುಕ್ತರಾಗಬಹುದೆಂಬ ನಂಬಿಕೆ ಇತ್ತು.

ಅರಸೀಕರೆ ತಾಲೂಕಿನ ಕುರುವಂಕ ಕೆರೆ ಸಮೀಪದಲ್ಲಿ ಅರಳಿ ಮರ ಮತ್ತು ಬೇವಿನ ಮರಗಳಿವೆ. ಅವನ್ನು ಪ್ಲೇಗಮ್ಮ ಎಂದು ಕರೆಯುತ್ತಾರೆ. ಹಿಂದೆ ಗ್ರಾಮದಲ್ಲಿ ಪ್ಲೇಗ್ ರೋಗ ಬಂದಿದ್ದರಿಂದ ಊರಿನ ಜನರು ಅಮ್ಮನಿಗೆ ಹರಕೆ ಮಾಡಿಕೊಂಡು ರೋಗವನ್ನು ಈ ವೃಕ್ಷಗಳಿಗೆ ಕಳುಹಿಸಿಕೊಟ್ಟಿರುವಂತೆ ಹೇಳುತ್ತಾರೆ. ಪ್ರಸ್ತುತ ದಿನಗಳಲ್ಲಿ ಈ ಮರಗಳ ಸುತ್ತ ಕಟ್ಟೆ ಕಟ್ಟಿ ವರ್ಷಕ್ಕೊಮ್ಮೆ ಜಾತ್ರೆ ಮಾಡುತ್ತಾರೆ.

ಹಾಸನ ಪರಿಸರದ ಕೆರೆಗಳನ್ನು ನೋಡಿದಾಗ ಈ ಮೇಲಿನ ನಂಬಿಕೆ ಮತ್ತು ಆಚರಣೆ ಕಂಡುಬಂದವು. ಇದಕ್ಕೆ ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಗಳೇ ಸಾಕ್ಷಿಯಾಗಿವೆ. ಬಹು ಉಪಯೋಗಿ ಕೆರೆ ತನ್ನ ಸುತ್ತಲೂ ಸಾಂಸ್ಕೃತಿಕ ಪರಿಧಿಯನ್ನು ಧಾರ್ಮಿಕ ಸಂಬಂಧವನ್ನು ಹಾಗೂ ಆರ್ಥಿಕ ಮೂಲಗಳನ್ನು ನಿರ್ಮಿಸಿಕೊಂಡಿರುತ್ತದೆ.

ಅಡಿಟಿಪ್ಪಣಿಗಳು

೧. ಮುನಿರಾಜಪ್ಪ(ಸಂ), ೨೦೦೯: ಕರ್ನಾಟಕ ಕೆರೆ ನೀರಾವರಿ ಅಧ್ಯಯನ, ಪು.೮೯

೨. ವಾಸುದೇವ ಬಡಿಗೇರ, ೨೦೧೨: ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಪು.೧೭೩

೩. ಎ.ಕ. ಸಂ.೮, ೧೯೮೪: ಹಾಸನ ೧೧೩, ೯೬; ಅರಕಲಗೂಡು ೧೬೨; ಎ.ಕ ಸಂ.೯, ೧೯೯೦; ಬೇಲೂರು ೪೭೩, ೪೮೪, ೪೦೩, ೪೧೮; ಎ.ಕ. ಸಂ.೧೦, ೧೯೯೭: ಅರಸೀಕೆರೆ ೮೬, ೫೯, ೮೮, ೩೨೫, ೨೪೫, ೧೬೧; ಚನ್ನರಾಯಪಟ್ಟಣ ೭೪, ೬೪, ೧೨೨, ೭೦, ೪೬, ೧೨೯

೪. ಪ್ರಹ್ಲಾದರಾವ್ ಕೆ., ೨೦೦೫: ಕೆರೆಯ ಹಾರ(ಕೋಲಾರ ಜಿಲ್ಲೆಯ ಜಲ ಪರ್ವ), ಪು.೫೮

೫. ಎ.ಕ. ಸಂ.೧೦, ಅರಸೀಕೆರೆ ೫೭, ೩೧೨, ೨೪೧, ೨೬೮

೬. ಎ.ಕ. ಸಂ.೮, ೧೯೮೪: ಹಾಸನ ೧೮೭, ಪು.೪೧೭

೭. ಎ.ಕ. ಸಂ.೧೦, ಅರಸೀಕೆರೆ ೩೧೯, ಪು.೩೯೭

೮. ಎ.ಕ. ಸಂ.೮, ಆಲೂರು ೧೦, ಪು.೪೫೯

೯. ಎ.ಕ. ಸಂ.೯, ೧೯೯೦: ಬೇಲೂರು ೪೯, ಪು.೪೭೮

೧೦. ಎ.ಕ. ಸಂ.೮, ಆಲೂರು ೧೧, ಪು.೪೫೯

೧೧. ಎ.ಕ. ಸಂ.೧೦, ಅರಸೀಕೆರೆ ೧೬೧, ಪು.೨೧೪

೧೨. ಅದೇ, ಅರಸೀಕೆರೆ ೧೬೯, ಪು.೨೨೦; ಲಲಿತಾಂಬ ಎನ್.ಆರ್., ೨೦೧೧: ಮಧ್ಯಕಾಲೀನ ಕರ್ನಾಟಕದ ಸಾಮಾಜಿಕ ಸಂಚಲನ, ಪು.೭೨

೧೩. ಪ್ರಜಾವಾಣಿ ದಿನಪತ್ರಿಕೆ, ದಿನಾಂಕ ೧೯-೦೭-೨೦೧೫

೧೪. ಎ.ಕ. ಸಂ.೧೦, ಚನ್ನರಾಯಪಟ್ಟಣ ೧೧೨, ಪು.೫೪೮

೧೫. ಎ.ಕ. ಸಂ.೧೦, ಅರಸೀಕೆರೆ ೧೮೨, ಪು.೨೩೭

೧೬. ಸೋಮೇಶ. ಎಂ., ೨೦೧೧: ಡಣಾಯಕನ ಕೆರೆ, ಪು.೪೫

೧೭. ಮಹದೇವ ಸಿ.(ಸಂ), ೨೦೦೯: ತೊಣ್ಣೂರು, ಪು.೧೮೬

೧೮. ಕೂಡ್ಲೂರು ವೆಂಕಟಪ್ಪ, ೨೦೦೭: ಸ್ಥಳನಾಮ ವೀರರು, ಪು.೧೭

೧೯. ಅದೇ

೨೦. ನಾಯಕ ಡಿ.ಬಿ.(ಸಂ)., ೨೦೦೫: ಜಾನಪದ ಲೇಖನಗಳು, ಪು.೧೧೫.

೨೧. ಧ್ರುವನಾರಾಯಣ(ಅನು), ೨೦೦೧: ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ(ಮೂಲ: ಕೊಟ್ರಯ್ಯ ಸಿ.ಟಿ.ಎಂ.), ಪು.೧೩೬; ವಾಸುದೇವನ್ ಸಿ.ಎಸ್., ೨೦೦೧: ಹಂಪಿ ಪರಿಸರದ ಕೆರೆಗಳು, ಪು.೮೭

೨೨. ನಾಯಕ ಡಿ.ಬಿ., ಪೂರ್ವೋಕ್ತ, ಪು.೧೨೦

೨೩. ಚಿದಾನಂದ ಮೂರ್ತಿ ಎಂ., ೧೯೭೯: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೪೪೯; ನರೇಗಲ್ಲ ಎಂ.ಎಸ್., ೨೦೦೯: ಉತ್ತರ ಗದಗ ಜಿಲ್ಲೆಯ ಶಾಸನಗಳು ಒಂದು ಅಧ್ಯಯನ, ಪು.೧೯೮

೨೪. ಧ್ರುವನಾರಾಯಣ(ಅನು), ಪೂರ್ವೋಕ್ತ, ಪು.೧೩೮

೨೫. ಎ.ಇ. ಸಂ.XIV, ಪು.೧೧೮

೨೬. ಎಂ.ಎ.ಆರ್. ೧೯೧೯: ಪು.೩೩; ಧ್ರುವನಾರಾಯಣ(ಅನು), ಪೂರ್ವೋಕ್ತ, ಪು.೧೩೭

೨೭. ನಾರಾಯಣಸ್ವಾಮಿ ಕೆ.ವೈ., ೨೦೦೦: ನೀರದೀವಿಗೆ, ಪು.೧೩೭

೨೮. ಮಹದೇವ ಸಿ.(ಸಂ), ೨೦೦೯: ಪೂರ್ವೋಕ, ಪು.೧೬೪; ಅರಸೀಕೆರೆ ತಾಲೂಕಿನ ಕ್ಷೇತ್ರ ಕಾರ್ಯದಲ್ಲಿ ಶಂಕರನಹಳ್ಳಿಯ ಮಾರಮ್ಮ ದೇವರ ಅರ್ಚಕರು ಮತ್ತು ಸ್ಥಳೀಯ ಜನಪದರಿಂದ ಸಂಗ್ರಹಿಸಿದ ವರದಿ

೨೯. ಸಿದ್ದರಾಮಯ್ಯ ಜಿ.ಎಸ್., ಉಷಾಕಿರಣ್, ೨೦೦೬: ಸುಸ್ಥಿರಕೃಷಿ, ಪು.೪೦

೩೦. ಅದೇ

೩೧. ಅದೇ

೩೨. ಅದೇ, ಪು.೪೩

೩೩. ನೇಗಿನಹಾಳ ಎಂ.ಬಿ.(ಪ್ರಸಂ), ಜಾನಪದ ನಂಬಿಕೆಗಳು; ಕಣಜ.ಇನ್, ಅಂತರ್ಜಾಲದಿಂದ ಮಾಹಿತಿಯನ್ನು ಪಡೆಯಲಾಗಿದೆ

೩೪. ಬಸವರಾಜ ಸಬರದ, ೨೦೧೧: ಜಾನಪದ ಆಯಾಮಗಳು, ಪು.೧೯

೩೫. ಬೋರಲಿಂಗಯ್ಯ ಹಿ.ಚಿ.(ಸಂ), ೧೯೯೬: ಕರ್ನಾಟಕ ಜಾನಪದ ಕಲೆಗಳ ಕೋಶ, ಪು.೧೬೪

೩೬. ರಮೇಶ್ ಸ.ಚಿ., ೨೦೦೫: ನೀರು: ಒಂದು ಜಾನಪದ ನೋಟ, ಪು.೧೨

೩೭. ಎ.ಕ. ಸಂ.೯, ೧೯೯೦: ಬೇಲೂರು ೧೫೫, ೧೮೨, ಪು.೧೧೬, ೧೭೩

೩೮. ಶ್ರೀವತ್ಸ ಎಸ್. ವಟಿ, ೨೦೧೧: ಬೇಲೂರ ಮೇಲೆ ಹೊಸ ಬೆಳಕು, ಪು.೧೨೮

೩೯. ರಮೇಶ್ ಸ.ಚಿ., ೨೦೧೦: ಕರ್ನಾಟಕದ ಜಾನಪದ ಆಚರಣೆಗಳು, ಪು.೧೩೫

೪೦. ಲಲಿತಾಂಬ ಎನ್.ಆರ್., ೨೦೧೧: ಮಧ್ಯಕಾಲೀನ ಕರ್ನಾಟಕದ ಸಾಮಾಜಿಕ ಸಂಚಲನ, ಪು.೨೩೮

ಅಧ್ಯಾಯ – ಆರು

ಕೆರೆ ಮತ್ತು ಆರ್ಥಿಕತೆ

ಅಧ್ಯಾಯ – ಆರು

ಕೆರೆ ಮತ್ತು ಆರ್ಥಿಕತೆ

ಕೆರೆಗಳು ಗ್ರಾಮೀಣ ಜನರ ಆರ್ಥಿಕ ಅಭಿವೃದ್ಧಿಗೆ ಸಹಾಯವಾಗಿವೆ. ಹಿಂದಿನ ಕಾಲದಲ್ಲಿ ಕೆರೆಯನ್ನೇ ಆಧರಸಿ ಕೆಲವು ವೃತ್ತಿಗಳು ಏರ್ಪಟ್ಟು, ಗ್ರಾಮೀಣ ಜನರಿಗೆ ಉದ್ಯೋಗ ಸೃಷ್ಟಿಸಿವೆ. ಮೀನುಗಾರರು ಅಥವಾ ಬೆಸ್ತರು, ಕುಂಬಾರರು, ಮಡಿವಾಳರು, ಇಟ್ಟಿಗೆ ತಯಾರಿಸುವವರು, ಹೆಂಚು ತಯಾರಿಸುವವರು, ತೆಪ್ಪ ತಯಾರಿಸುವವರು, ನೀರ್ಗಂಟಿ, ತೋಟಿ, ತಳವಾರ, ಆಸಾದಿ ಕೆರೆ ನಿರ್ಮಾಣ ಮಾಡುವವರು ಹೀಗೆ ಹಲವು ವೃತ್ತಿಗಳ ಜನರ ಆಧಾರ ಸ್ತಂಭವಾಗಿತ್ತು. ಈ ದಿನಗಳಲ್ಲಿ ಕೆಲವು ಕೆರೆಗಳಲ್ಲಿ ನೀರ್ಗಂಟಿಗಳು ಇದ್ದು ಕೆಲಸ ನಿರ್ವಹಿಸುತ್ತಿದ್ದಾರೆ.

ಕೆರೆಯಂಗಳದ ಮಣ್ಣು ಫಲವತ್ತಾಗಿದ್ದು ಗೊಬ್ಬರದ ಗುಣಗಳನ್ನು ಹೊಂದಿದೆ. ರೈತರು ಹೊಲ ಗದ್ದೆಗಳಿಗೆ ಈ ಮಣ್ಣನ್ನು ಹೊಡೆದು ಅದರ ನೆಲವನ್ನು ಪುನಃ ಫಲವತ್ತೀಕರಣ ಮಾಡಲು ಕೆರೆ ಸಹಾಯಕವಾಗಿದೆ. ಮಳೆಗಾಲೇತರ ಋತುಮಾನಗಳ ಅವಧಿಯಲ್ಲಿ ಕೆರೆಯಂಗಳದಲ್ಲಿ ನೀರಿಲ್ಲದಿದ್ದಾಗ ಜೋಳ, ಕಡಲೆ ಬೆಳೆ ತೆಗೆಯುತ್ತಾರೆ. ಈ ಅವಧಿಯ ನಿರುದ್ಯೋಗ ನೀಗಿಸುವ ಆಸರೆ ಕೆರೆಯೇ ಆಗಿದೆ.

ಜಿಷಲ್ಲೆಯಲ್ಲಿ ಆಳ್ವಿಕೆ ಮಾಡಿದ ಅರಸರು ಆದಿಕಾಲದಿಂದಲೂ ಬೇಸಾಯವೇ ಪ್ರಮುಖ ಉದ್ಯೋಗ ಎಂಬುದನ್ನು ಅರಿತಿದ್ದರು. ಹಾಗೆಯೇ ಅದರ ವಿಕಾಸಕ್ಕೆ ಆದ್ಯತೆ ನೀಡಿದರು. ಈ ದಿಶೆಯಲ್ಲಿ ಅವರು ಕೈಗೆತ್ತಿಕೊಂಡ ಎರಡು ಪ್ರಮುಖ ಕಾರ್ಯಗಳೆಂದರೆ, ಮೊದಲನೆಯದಾಗಿ ಕೆರೆ, ಕಟ್ಟೆ, ಸರೋವರಗಳನ್ನೂ ನಿರ್ಮಿಸಿ ನೀರಾವರಿ ಆಧಾರಿತ ಕೃಷಿಗೆ ಪ್ರೋತ್ಸಾಹಿಸಿರುವುದು. ಎರಡನೆಯದಾಗಿ ಕಾಡುಗಳನ್ನು ಕಡಿದು, ಆ ಭೂಮಿಯನ್ನು ವ್ಯವಸಾಯಕ್ಕೆ ಉಪಯೋಗಿಸಿರುವುದು ಕಂಡುಬಂದಿದೆ.

೬.೧. ಕೆರೆ ಆಧಾರಿತ ಕೃಷಿ

ಗಾಳಿ, ನೀರು, ಆಹಾರ ಜೀವಕೋಟಿಯ ಮೂರು ಮುಖ್ಯ ಅಗತ್ಯಗಳೆಂಬುದು ಸರ್ವವಿದಿತ. ಮನುಷ್ಯನು ತಮ್ಮ ಪ್ರಾಣ ಉಳಿಸಿಕೊಳ್ಳಲು ಆಹಾರದ ಮೇಲೆ ಅವಲಂಬಿತರಾಗಿರುತ್ತಾನೆ. ಮನುಷ್ಯನಿಗೆ ಕೃಷಿಯೂ ಸಹ ಉಸಿರಾಟದಷ್ಟೇ ಅನಿವಾರ್ಯ. ಈ ಸಂಗತಿಯನ್ನು ಹಿಂದಿನವರು ಮನಗಂಡಿದ್ದರು. ಹಾಗಾಗಿ ಕೃಷಿಗೆ ಉನ್ನತ ಸ್ಥಾನ ನೀಡಲಾಗಿತ್ತು. ಕುಮಾರವ್ಯಾಸ ತನ್ನ ಕರ್ಣಾಟ ಭಾರತ ಕಥಾಮಂಜರಿಯಲ್ಲಿ –

> ಕೃಷಿ ಮೊದಲು ಸರ್ವಕ್ಕೆ ಕೃಷಿಯಂ
> ಪಸರಿಸುವುದು ಕೃಷಿಯನುದ್ಯೋ
> ಗಿಸುವ ಜನವನು ಪಾಲಿಸುವುದಾ ಜನಪದರ ಜನದಿವಸು ತೆರಳುವುದಾ ವಸುವಿನಿಂ
> ಸಾಧಿಸುವ ವಡಾವುದ ಸಾಧ್ಯವದರಿಂ
> ಕೃಷಿ ಹೀನನ ದೇಶವದು ದುರ್ದೇಶ ಕೇಳೆಂದ [೧]

ಎಂದು ಹೇಳಿದ್ದಾನೆ. ವ್ಯವಸಾಯವು ಸಮಸ್ತ ವೃತ್ತಿಗಳಲ್ಲಿ ಶ್ರೇಷ್ಠವಾದುದೆಂಬ ಭಾವನೆ ಎಂದೆಂದಿಗೂ ಸಮಾಜದಲ್ಲಿತ್ತೆಂಬುದು ಇದರಿಂದ ತಿಳಿದುಬರುತ್ತದೆ.

ವ್ಯವಸಾಯಕ್ಕೆ ಪೂರಕವಾದ ಸಾಕಷ್ಟು ದಾಖಲೆಗಳು ಶಾಸನಗಳಲ್ಲಿ ದೊರೆಯುತ್ತವೆ. ಬಹುತೇಕ ಶಾಸನಗಳು ದಾನಶಾಸನಗಳಾದ ಪ್ರಯಕ್ತ ಒಂದಲ್ಲ ಒಂದು ರೀತಿಯಲ್ಲಿ ಗದ್ದೆ, ಗದ್ದೆಬಯಲು, ಕೆರೆ ಕೆಳಗಿನ ಭೂಮಿ ಹೀಗೆ ಹಲವಾರು ಉನ್ನತಮಟ್ಟದ ಫಲವತ್ತಾದ ಭೂಮಿಯ ವಿವರಗಳು ಕಂಡುಬರುತ್ತವೆ. ಅವುಗಳ ಜೊತೆಯಲ್ಲಿ ಕೆರೆಯನ್ನು ನಿರ್ಮಿಸಿದ ವಿವರ, ಅಚ್ಚುಕಟ್ಟು ನಿರ್ಮಿಸಿದ ವಿವರಗಳೂ ಹಾಗೂ ಅಂದು ಬೆಳೆಯುತ್ತಿದ್ದ ವಿಭಿನ್ನ ಬೆಳೆಗಳೂ ಸಹ ಶಾಸನೋಕ್ತ ದಾಖಲೆಗಳಲ್ಲಿ ಕಂಡುಬರುತ್ತವೆ. ಒಟ್ಟಾರೆಯಾಗಿ ಆ ಕಾಲವನ್ನು ನಾವು ನೋಡಿದರೆ ಅಂದಿನ ಸಮಾಜ ಕೃಷಿ ಪ್ರಧಾನವಾಗುತ್ತಿತ್ತು. ರಾಜನೇ ಸ್ವತಃ ಕೆರೆ ಕಟ್ಟೆಗಳ ನಿರ್ಮಾಣ ಮಾಡಿಸಿದ ಉಲ್ಲೇಖಗಳು ವಿಪುಲವಾಗಿವೆ. ರಾಜನು ಮಾಡುತ್ತಿದ್ದ ಜನಪರ ಕಾರ್ಯಗಳು ಜನರ ಹಿತದೃಷ್ಟಿಯಿಂದ ಮುಖ್ಯವಾಗಿರುತ್ತಿದ್ದವು.[೨]

ಆದರೂ ಇದು ಮೊದಲು ಖರ್ಚು ಎನಿಸಿದರೂ ನಂತರದಲ್ಲಿ ಅದರಿಂದ ರಾಜ್ಯದ ಬೊಕ್ಕಸಕ್ಕೆ ಹೇರಳವಾದ ಕಂದಾಯ ದೊರಕುತ್ತಿತ್ತು. ಆ ಕಾಲದಲ್ಲಿ ಕೆರೆ ಕಟ್ಟೆಗಳ ನಿರ್ಮಾಣವನ್ನು ಪುಣ್ಯಕೆಲಸವೆಂದೇ ತಿಳಿಯಲಾಗುತ್ತಿತ್ತು. ಇವುಗಳ ನಿರ್ಮಾಣದಿಂದ ಕೃಷಿ ಚಟುವಟಿಕೆಗಳು ಅಧಿಕಗೊಂಡು ರಾಜ್ಯದಲ್ಲಿ ಆಹಾರಬೆಳೆಗಳು ಸಮೃದ್ಧಗೊಂಡು ಹೆಚ್ಚಿನ ಉತ್ಪನ್ನ ದೊರೆಯುತ್ತಿತ್ತು. ಇದರಿಂದ ಉದ್ಯೋಗ, ವ್ಯಾಪಾರ ಹಾಗೂ ಕಂದಾಯಗಳ ಆದಾಯವು ಗಣನೀಯವಾಗಿ ಅಧಿಕವಾಗುತ್ತಿತು. ಹೀಗಾಗಿ ರಾಜರು ಮಳೆ ಕಡಿಮೆ ಬೀಳುವ ಪ್ರದೇಶಗಳಲ್ಲಿ ವಿಶೇಷ ಆದ್ಯತೆ ಕೊಟ್ಟು, ಕೆರೆ ಕಟ್ಟೆಗಳ ನಿರ್ಮಾಣ ಮಾಡುತ್ತಿದ್ದರು. ಇದೊಂದು ಪ್ರಜಾಹಿತಕಾರಿಯೆಂದೂ, ಧರ್ಮ

ಕಾರ್ಯವಾಗಿ ಪರಿಗಣಿಸಿ ಜಿಲ್ಲೆಯ ಎಲ್ಲ ಭಾಗಗಳಲ್ಲಿ ಕೆರೆಗಳ ನಿರ್ಮಾಣವಾಗಿರುವುದನ್ನು ಕಾಣಬಹುದು. ಕೆರೆಯ ನಿರ್ಮಾಣದೊಂದಿಗೆ ಆ ಕಾಲದಲ್ಲಿ ಕೆರೆಯ ನೀರಿನಿಂದ ಎಷ್ಟು ಭೂಮಿ ನೀರಾವರಿ ಆಗುತ್ತಿತ್ತು ಮತ್ತು ಯಾವ ಯಾವ ಬೆಳೆಗಳನ್ನು ಬೆಳೆಯುತ್ತಿದ್ದರು ಎನ್ನುವುದರ ಬಗೆಗೆ ಶಾಸನಗಳು ಬೆಳಕು ಚೆಲ್ಲುತ್ತವೆ.[೩]

ಹಾಸನ ಜಿಲ್ಲೆಯೂ ಕರ್ನಾಟಕದ ಆಯಕಟ್ಟಿನ ಸ್ಥಾನದಲ್ಲಿದ್ದು, ಮಲೆನಾಡು ಮತ್ತು ಬಯಲುಸೀಮೆಯ ಸಂಗಮವಾಗಿದೆ. ಸಕಲೇಶಪುರ, ಬೇಲೂರು ಮತ್ತು ಆಲೂರು ತಾಲೂಕುಗಳು ಮಲೆನಾಡು ಪ್ರದೇಶಗಳಾಗಿಯೂ, ಉಳಿದ ಪ್ರದೇಶವು ಬಯಲುಸೀಮೆಯಾಗಿದ್ದು, ಭೌಗೋಳಿಕವಾಗಿ ವೈವಿಧ್ಯತೆಯನ್ನು ಹೊಂದಿವೆ. ನೈಸರ್ಗಿಕ ಬದಲಾವಣೆಯಿಂದ ಹಲವಾರು ರೀತಿಯ ಬೆಳೆಗಳನ್ನು ಹಾಸನ ಜಿಲ್ಲೆಯೊಂದರಲ್ಲೇ ಕಾಣಬಹುದು. ಈ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ ೬,೮೨,೬೧೫ ಚ.ಕೀ.ಮೀ.ಗಳು. ಅದರಲ್ಲಿ ವ್ಯವಸಾಯಕ್ಕೆ ಒಳಪಟ್ಟ ಭೂಮಿ ೬,೬೨,೬೬೨ ಹೆಕ್ಟೇರ್ ಇದೆ. ಇದರಲ್ಲಿ ಶೇ. ೩೫ ಭಾಗ ಭೂಮಿ ತೋಟಗಾರಿಕೆಗೆ ಒಳಪಟ್ಟಿದೆ.[೪] ತರಿ, ಖುಷ್ಕಿ, ಬಾಗಾಯ್ತು ಬೆಳೆಗಳನ್ನು ಬೆಳೆಯುತ್ತಾರೆ. ಶಾಸನಗಳಲ್ಲಿ ತರಿ ಮತ್ತು ಖುಷ್ಕಿ ಭೂಮಿಗಳ ಉಲ್ಲೇಖಗಳಿವೆ. ಉದಾಹರಣೆಗೆ ಕ್ರಿ.ಶ. ೧೧೪೯ರ ದೊಡ್ಡಕುಂಚೆಯ ಶಾಸನದಲ್ಲಿ[೫] ಚಿಕ್ಕಗಾವುಂಡ ೪ ಸಲಗೆ ತರಿ ಭೂಮಿ ಮತ್ತು ೧೦ ಕೊಳಗ ಖುಷ್ಕಿ ಭೂಮಿಯನ್ನು ದೇವಾಲಯಕ್ಕೆ ದತ್ತಿ ನೀಡಿರುವುದನ್ನು ದಾಖಲಿಸಲಾಗಿದೆ.

ಮಲೆನಾಡು ಪ್ರದೇಶದಲ್ಲಿ ಜಂಬುಮಣ್ಣು ಕಾಫಿ, ಏಲಕ್ಕಿ ಮತ್ತು ಕರಿಮೆಣಸಿಗೆ ಯೋಗ್ಯವಾಗಿದೆ. ಅಲ್ಲದೆ ಕಿತ್ತಲೆ, ಅನಾನಸ್, ನಿಂಬೆ, ಬಾಳೆ ಹಾಗೂ ತರಕಾರಿಗಳಾದ ಸುವರ್ಣಗಡ್ಡೆ, ಗೆಡ್ಡೆಕೋಸು ಮತ್ತು ಮರಗೆಣಸಿಗೂ ಪೂರಕವಾಗಿದೆ. ಹಾಸನ, ಚನ್ನರಾಯಪಟ್ಟಣ, ಅರಸೀಕೆರೆ, ಹೊಳೆನರಸೀಪುರಗಳಲ್ಲಿ ಕಂಡುಬರುವ ಕೆಂಪುಮರಳು ಮಣ್ಣು, ಆಲೂಗಡ್ಡೆ, ಟೊಮ್ಯಾಟೊ, ಬದನೆಕಾಯಿ, ಎಲೆಕೋಸು, ಹುರುಳಿಕಾಯಿ, ಬೆಂಡೆಕಾಯಿ ಮತ್ತು ವಿವಿಧ ಸೊಪ್ಪಿನ ಬೆಳೆಗಳಿಗೆ ಸೂಕ್ತವಾಗಿದೆ. ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲೂಕುಗಳಲ್ಲಿ ತೆಂಗು ಪ್ರಮುಖ ಬೆಳೆಯಾದರೆ, ಹೊಳೆನರಸೀಪುರ, ಚನ್ನರಾಯಪಟ್ಟಣ ಹಾಗೂ ಅರಕಲಗೂಡಿಗೆ ಉತ್ತಮ ನೀರಾವರಿ ಸೌಲಭ್ಯವಿದೆ. ಆದರೆ ಈ ಪ್ರದೇಶಗಳಲ್ಲಿ ಹಣ್ಣು, ತರಕಾರಿಗಳಿಗಿಂತ ಕಬ್ಬು ಮತ್ತು ಭತ್ತದ ಬೆಳೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗುತ್ತದೆ. ಅಡಿಕೆ ಅರಕಲಗೂಡು ಮತ್ತು ಹಾಸನದಲ್ಲಿ ಹೆಚ್ಚು ಪ್ರಸಿದ್ಧಿಯಾಗಿದೆ.[೬] ಹಾಸನ, ಅರಸೀಕೆರೆ ತಾಲೂಕುಗಳಲ್ಲಿ ಕಾಲುವೆ ನೀರಾವರಿ ಸೌಲಭ್ಯವಿಲ್ಲದೆ ಕೆರೆ ಮತ್ತು ಮಳೆನೀರನ್ನು ಆಶ್ರಯಿಸಿವೆ. ಈ ಪ್ರದೇಶಗಳಲ್ಲಿಯೂ ಹಣ್ಣು ತರಕಾರಿಗಳನ್ನು ಬೆಳೆಯಲಾಗುತ್ತಿದೆ. ಹಾಸನ ಜಿಲ್ಲೆಯೂ 'ತರಕಾರಿಗಳ ಕಣಜ'ವೆಂದು ಪ್ರಚಲಿತವಾಗಿದೆ.

೬.೨. ನೀರಿನ ಬಳಕೆ ಮತ್ತು ಬೆಳೆಗಳು

ಜನಸಂಖ್ಯೆ ಬೆಳವಣಿಗೆಯಾದಂತೆ ಕಾಡುಗಳನ್ನು ಕಡಿದು ಭೂಮಿಯನ್ನು ಸಮತಟ್ಟುಗೊಳಿಸಿ

ಕೃಷಿಗೆ ಯೋಗ್ಯ ಭೂಮಿಯನ್ನಾಗಿ ಮಾಡಲಾಗಿತ್ತು. ಈ ಕಾರಣಕ್ಕಾಗಿಯೇ ಅನೇಕ ಕೆರೆಗಳು ನಿರ್ಮಾಣವಾಗಿ ಕೃಷಿ ಚಟುವಟಿಕೆಗಳಿಗೆ ಇಟ್ಟುಕೊಂಡಿರಬೇಕು. ಹೊಯ್ಸಳ ಆಳ್ವಿಕೆ ಅವಧಿಯಲ್ಲಿ ದಟ್ಟಾರಣ್ಯದಿಂದ ತುಂಬಿಹೋಗಿದ್ದ ಕಾಡುಗಳನ್ನು ಕಡಿದು ಜನವಸತಿಗೆ ಅನುಕೂಲವಾಗುವಂತೆ ಕೆರೆಗಳನ್ನು ರೂಪಿಸಿರುವುದು ಹಾಸನ ಜಿಲ್ಲೆಯ ಶಾಸನಗಳಿಂದ ತಿಳಿದುಬರುತ್ತದೆ.

ಹೊಳೆನರಸೀಪುರದ ೧೨ನೆಯ ಶತಮಾನದ ಗುಬ್ಬಿ ಶಾಸನದಲ್ಲಿ[೭] ಒದಿಗೆರೆ, ಮತ್ತಿಕೆರೆ, ಬನಕೆರೆಯಂತಹ ಹೆಸರುಗಳು ಅಲ್ಲಿ ಇದ್ದಿರಬಹುದಾದ ಕಾಡಿನ ಉಲ್ಲೇಖವೇ ಆಗಿವೆ. ಬೇಲೂರು ತಾಲೂಕಿನ ಕೂಡಲೂರಿನ ಕ್ರಿ.ಶ. ೧೧೭೮ರ ಶಾಸನದಲ್ಲಿ[೮] ಮಹಾಪ್ರಧಾನ ಪೆರುಮಾಳು ದೇವನು ಸಂದಿಯ ಉಪಗ್ರಾಮವಾದ ಕೂಡಲೂರಿನಲ್ಲಿ ದೇವಾಲಯ ಸ್ಥಾಪಿಸಿ, ಆ ಪರಿಸರದ ಕಾಡನ್ನು ಕಡಿದು ಭೂಮಿಯನ್ನು ಸಾಗುವಳಿಗೆ ಯೋಗ್ಯವಾಗಿಸಿ ದಾನ ನೀಡುವ ಮೂಲಕ ಕೃಷಿ ಚಟುವಟಿಕೆಗಳ ವಿಸ್ತರಣೆಗೆ ನೆರವಾಗುತ್ತಾನೆ. ಅದೇ ರೀತಿ ಹಿರೇಹಳ್ಳಿಯ ಕ್ರಿ.ಶ. ೧೧೮೨ರ ಶಾಸನದಲ್ಲಿ[೯] ಮಹಾದಂಡ ನಾಯಕ ಬೊಪ್ಪದೇವ ಕಂಜಲಿಯ ಗ್ರಾಮಕ್ಕೆ ಎಲ್ಲ ಬಗೆಯ ತೆರಿಗೆಗಳಿಂದ ವಿನಾಯಿತಿ ನೀಡಿ ತಳವಾರ ಭೂತಿಯನಾಯಕ ಮತ್ತು ಅವನ ಮಗ ಮಾರ ಕಾಡನ್ನು ಕಡಿದು ಗ್ರಾಮ ಸ್ಥಾಪಿಸಿ ಕೆರೆಗಳನ್ನು ನಿರ್ಮಿಸಬೇಕೆಂದು ಮನವಿ ಸಲ್ಲಿಸಿದಾಗ ಆದಿಗಾವುಂಡ ಮತ್ತು ಚಿಕ್ಕಗಾವುಂಡ ಹಾಗೂ ಅವನ ಸಹೋದರ ಕಾಳಗಾವುಂಡರು ಗ್ರಾಮ ಸ್ಥಾಪಿಸಿ, ದೇವಾಲಯ ಕಟ್ಟಿಸಿ, ಜಕ್ಕನಕೆರೆ ಹಾಗೂ ಕಂಜಣನಕೆರೆ ಎಂಬ ೨ ಕೆರೆಗಳನ್ನು ಕಟ್ಟಿಸಿದುದನ್ನು ದಾಖಲಿಸಿದೆ.

ಪ್ರಸ್ತುತ ಜಿಲ್ಲೆಯ ಈಗಿನ ಕೃಷಿ ವಿವರಗಳನ್ನು ತಿಳಿಯುವುದಕ್ಕಿಂತ ಮೊದಲು ಪ್ರಾಚೀನ ಕಾಲದ ಸ್ಥಿತಿಗತಿಗಳನ್ನು ಗಮನಿಸಬೇಕಾಗುತ್ತದೆ. ವಿಜಯನಗರ ಕಾಲಕ್ಕಿಂತ ಪೂರ್ವದಲ್ಲೇ ಈ ಪ್ರದೇಶದಲ್ಲಿ ಕೃಷಿ ನೀರಾವರಿಗಳು ವ್ಯವಸ್ಥಿತವಾಗಿದ್ದುದರ ಬಗೆಗೆ ಶಾಸನೋಕ್ತ ಉದಾಹರಣೆಗಳು ಸಿಗುತ್ತವೆ. ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದಲ್ಲಿ[೧೦] ತರಿ ಭೂಮಿಯ ಹತ್ತನೆಯ ಒಂದು ಭಾಗವನ್ನು 'ಪತ್ತೊಂದಿ' ಭಟ್ಟರಿಗೆ ಎಂಬ ಉಲ್ಲೇಖವಿರುವ ಹಿನ್ನೆಲೆಯಲ್ಲಿ ಜನರಲ್ಲಿ ಈ ವೇಳೆಗಾಗಲೇ ನೀರಾವರಿ ಆಧಾರಿತ ಕೃಷಿ ಚೌಕಟ್ಟು ವ್ಯವಸ್ಥಿತವಾಗಿ ರೂಪುಗೊಂಡಿತ್ತು ಎಂಬ ಅಭಿಪ್ರಾಯಕ್ಕೆ ಬರಬಹುದಾಗಿದೆ.

ಸಾಮಾನ್ಯವಾಗಿ ಹೆಚ್ಚಿನ ಶಾಸನಗಳಲ್ಲಿ ಗದ್ದೆ ಬೆದ್ದಲುಗಳ ಉಲ್ಲೇಖವಿರುವುದನ್ನು ನೋಡಬಹುದು. ಕೆಲವು ಶಾಸನಗಳು ಮಾತ್ರ ಹೂತೋಟ, ಎಲೆ, ಅಡಿಕೆ, ಮಾವಿನಮರ ಮತ್ತು ತೋಟ ತುಡಿಕೆಗಳನ್ನು ಕುರಿತಂತಿವೆ. ಕ್ರಿ.ಶ. ೧೧೯೯ರ ಪೂಮಗಾಮೆಯ ಶಾಸನದಲ್ಲಿ[೧೧] ಬಸವಯ್ಯ ಪೂಮಗಾಮೆಯ ದೇವಾಲಯವನ್ನು ಮಾಡಿಸಿ, ಕಲಿದೇವರ ನೈವೇದ್ಯಕ್ಕೆ ಬಿಟ್ಟ ದತ್ತಿಯಲ್ಲಿ ಹಿರಿಯ ಕೆರೆಯ ಮೊದಲೇರಿಯ ಖಂಡುಗ ಗದ್ದೆ, ದೇವರ ಮುಂದಣ ಕಿರುಕೆರೆಯ ಹೂವಿನ ತೋಟ, ಊರ ದಕ್ಷಿಣಭಾಗದ ಬೆದ್ದಲೆ ಎಂದಿದೆ. ಇಲ್ಲಿ ದೊಡ್ಡಕೆರೆ ನೀರನ್ನು ಗದ್ದೆಗೆ, ಚಿಕ್ಕಕೆರೆಯ ನೀರನ್ನು

ಹೂತೋಟಕ್ಕೆ ಬಳಸಿರುವುದನ್ನು ಗಮನಿಸಬಹುದು. ಕ್ರಿ.ಶ. ೧೨-೧೩ನೆಯ ಶತಮಾನದ ಗೀಜಿಹಳ್ಳಿಯ ಶಾಸನವು[೧೨] ಲಿಂಗಣ ತಾವು ಕಟ್ಟಿಸಿದ ಕೆರೆಯ ಕೆಳಗಿನ ಭೂಮಿಯನ್ನು ಶಂಭುಮೇಳೇಶ್ವರ ದೇವರ ಹೂತೋಟಕ್ಕಾಗಿ ೨೫ ಕಂಬ ಭೂಮಿಯನ್ನು ಬಿಟ್ಟಿದ್ದು, ಆ ಹೂತೋಟವನ್ನು ನೋಡಿಕೊಳ್ಳಲು ಮಾಲಕಾರ ಬೂವನಿಗೆ ೪೦ ಕಂಬ ಭೂಮಿಯನ್ನು ನೀಡಿರುವುದನ್ನು ಹೇಳಿದೆ. ಹಾಗೆಯೇ ೧೦ ಕಂಬ ಭೂಮಿಯನ್ನು ಹೂತೋಟಕ್ಕೆ ಬಿಟ್ಟಿದ್ದನ್ನು ಕ್ರಿ.ಶ. ೧೨೩೨ರ ಬೆಂಡೆಕೆರೆ ಶಾಸನವು ಸೂಚಿಸಿದೆ.[೧೩] ತಳಲೂರಿನ ಕ್ರಿ.ಶ. ೧೧೯೧ರ ಶಾಸನದಲ್ಲಿ[೧೪] ಚನ್ನಕೇಶವ ದೇವರಿಗೆ ೪೦ ಕಂಬ ಹೂವಿನ ತೋಟವನ್ನು ಬಿಟ್ಟಿರುವ ಉಲ್ಲೇಖವಿದೆ. ಅದೇ ರೀತಿ ಕೋಡಿಹಳ್ಳಿಯ ಕ್ರಿ.ಶ. ೧೧೫೮ರ ಶಾಸನವು[೧೫] ಚಿಕ್ಕಗವುಡನೆಂಬುವವನು ಚಿಕ್ಕಕೆರೆಯ ನೀರನ್ನು ಬಳಸಿಕೊಂಡು ಒಂದು ಹೂವಿನ ತೋಟವನ್ನು ಬೆಳೆಸಿರುವುದಾಗಿ ತಿಳಿಸಿದೆ. ಹಾಗೆಯೇ ಅರಸೀಕೆರೆಯ ಕ್ರಿ.ಶ. ೧೨೯೨ರ ಶಾಸನದಲ್ಲಿ[೧೬] ಧರ್ಮೇಶ್ವರ ದೇವರಿಗೆ ಬಲ್ಲಾಳೇಶ್ವರ ತೋಟವೆಂಬ ಹೆಸರಿನ ದೇವರ ತೋಟವೊಂದಿತ್ತು ಮತ್ತು ೫೦ ಕಂಬ ಭೂಮಿಯನ್ನು ಕಣಿಗನ ಕೆರೆಯ ನೀರನ್ನು ಬಳಸಿಕೊಂಡು ಒಂದು ಹೂವಿನ ತೋಟವನ್ನು ಬೆಳೆಸಲಾಗಿತ್ತು ಎಂಬ ಉಲ್ಲೇಖವಿದೆ.

ಹೂತೋಟದಂತೆ ಎಲೆತೋಟಗಳ ಮಾಹಿತಿಗಳು ಶಾಸನಗಳಲ್ಲಿವೆ. ಕ್ರಿ.ಶ.೧೧೩೪ರ ಶಾನೆಗೆರೆ ಶಾಸನವು[೧೭] ಎಲೆ ಗುಳಿಗಳನ್ನು ದೇವರಿಗೆ ಬಿಟ್ಟಿರುವುದನ್ನು ಹೇಳಿದೆ. ಅದೇ ತಾಲೂಕಿನ ಅರಸೀಕೆರೆಯ ಕ್ರಿ.ಶ. ೧೧೮೩ರ ಶಾಸನದಲ್ಲಿ[೧೮] ಕೇತಯ್ಯನ ಎಲೆಯ ತೋಟದೊಳಗೆ ದೇವರಿಗೆ ಸೇರಿದ ಎಲೆಯ ಗುಳಿ ೨೦೦ ಎಂಬ ಉಲ್ಲೇಖವಿದೆ.

ನೀರಾವರಿ ಚೆನ್ನಾಗಿರುವ ಕೆರೆಗಳ ಮೊದಲೇರಿಯ ಗದ್ದೆಗಳಲ್ಲಿ ಭತ್ತ, ಕಬ್ಬು, ಬಾಳೆಯ ತೋಟಗಳು ವಿಪುಲವಾಗಿರುತ್ತಿದ್ದವು. ಈ ಜಿಲ್ಲೆಯಲ್ಲಿ ಭತ್ತದ ಗದ್ದೆ ಅಂದಿನಿಂದಲೂ ನೀರಾವರಿ ಬೆಳೆಯಾಗಿ ಬೆಳೆದುಬಂದಿದೆ. ಇಂದು ಕೃಷಿಯಲ್ಲಿ ಸಾಕಷ್ಟು ಸುಧಾರಣೆಗಳಾಗಿದ್ದು, ಕೆರೆಯ ನೀರನ್ನು ಬಳಸಿಕೊಂಡು ಏಕದಳಧಾನ್ಯ, ದ್ವಿದಳಧಾನ್ಯ, ವಾಣಿಜ್ಯ ಬೆಳೆಗಳು ಮತ್ತು ತೋಟದ ಬೆಳೆಗಳು ಹಾಗೂ ತರಕಾರಿಗಳನ್ನು ಕೂಡ ಬೆಳೆಯುತ್ತಾರೆ. ಅವುಗಳ ವಿವರಗಳನ್ನು ಈ ರೀತಿಯಾಗಿ ತಿಳಿಯಬಹುದು.

ಭತ್ತ

ಹಾಸನ ಪರಿಸರಕ್ಕೆ ಸೇರಿದ ಗ್ರಾಮಗಳು ಭತ್ತದ ಕೃಷಿಗೆ ಹೆಸರುವಾಸಿಯಾಗಿವೆ. ಭತ್ತಕ್ಕೆ 'ಒರೈಸಾ ಸಟೈವ'[೧೯] ಎಂಬ ವೈಜ್ಞಾನಿಕ ಹೆಸರು ಇದೆ. ಇದು ಹುಲ್ಲಿನ ವರ್ಗದ ಒಂದು ಸಸ್ಯ. ಮಲೆನಾಡಿನಲ್ಲಿ ತೋಟದ ಬೆಳೆಗಳನ್ನು ಹೊರತುಪಡಿಸಿದರೆ ನೀರಾವರಿ ಬೆಳೆಯಲ್ಲಿ ಭತ್ತದ ಪೈರೇ ಮುಖ್ಯವಾದದು. ಈ ಪೈರನ್ನು ಗದ್ದೆಗಳಲ್ಲಿ ಬೆಳೆಯುತ್ತಾರೆ. ಕೆರೆ ಮತ್ತು ನಾಲೆಗಳೇ ಇವುಗಳಿಗೆ ನೀರಿನ ಆಸರೆಯಾಗಿರುತ್ತವೆ. ಇಂತಹ ಬೆಳೆಯನ್ನು 'ತರಿ' ಎಂದು, ಮಳೆಯನ್ನು ಆಶ್ರಯಿಸಿದ

ಬೆಳೆಯನ್ನು 'ಖುಷ್ಕಿ' ಭೂಮಿ ಎಂದು ಕರೆಯುತ್ತಾರೆ. ಭತ್ತದ ಬೆಳೆಯಲ್ಲಿ ಖುಷ್ಕಿ ಭೂಮಿಗಿಂತ ತರಿ ಭೂಮಿಯೇ ಹೆಚ್ಚಾಗಿ ಕಂಡುಬರುತ್ತದೆ. ೨೦೧೧-೧೨ನೆಯ ಸಾಲಿನಲ್ಲಿ ೪೮೮೯೬ ಹೆಕ್ಟೇರ್‌ನಷ್ಟು[೨೦] ಭತ್ತವನ್ನು ಉತ್ಪಾದಿಸಲಾಗಿದೆ. ಭತ್ತದ ವಿವಿಧ ತಳಿಗಳಾದ ಜಯ, ಪ್ರಕಾಶ, ಮಂಗಳ, ಐಆರ್ ೬೪, ಇವುಗಳನ್ನು ಮುಂಗಾರು ಬೆಳೆಗಳನ್ನಾಗಿ ಮತ್ತು S-೩೧೭, S-೬೬೧, S-೭೪೯, S-೧೦೯೨, Ch-೪೫, Ch-೧೦, Ch-೨ ಇವು ಬೇಸಿಗೆ ಬೆಳೆಗಳಾಗಿ ಬಳಕೆಯಲ್ಲಿವೆ.[೨೧] ಈ ರೀತಿಯ ಭತ್ತದ ತಳಿಗಳನ್ನು ಋತುಗಳ ಆಧಾರದ ಮೇಲೆ ವಿಂಗಡಿಸುತ್ತಾರೆ. ಭತ್ತದಲ್ಲಿರುವ ಗಂಜಿಯನ್ನು ಕೂಡ ಗಣನೆಗೆ ತೆಗೆದುಕೊಳ್ಳುತ್ತಾರೆ. ಅಲ್ಲದೆ ಮಧ್ಯಮ ಮತ್ತು ಉತ್ತಮ ಭತ್ತದ ತಳಿಯ ಆಕಾರ ಮತ್ತು ಎತ್ತರವನ್ನು ಪರಿಗಣಿಸುತ್ತಾರೆ. ಭತ್ತದ ಬಣ್ಣವನ್ನು ಆಧರಿಸಿ ಕೆಲವು ಭತ್ತದ ತಳಿಗಳನ್ನು ವರ್ಗೀಕರಿಸುತ್ತಾರೆ. ಜಿಲ್ಲೆಯಲ್ಲಿ ರತ್ನಚೂಡಿ, ಆಲೂರುಸಣ್ಣ, ಪುರಿಭತ್ತ, ಹಸಿಡೆ, ಗಂಧಸಲಿ, ಚಿಪ್ಪಿಗ ಮುಂತಾದವು ಬಳಕೆಯಲ್ಲಿದ್ದವು.[೨೨]

ಹಾಸನ ತಾಲೂಕಿನ ಹೊನ್ನಾವರ ಶಾಸನವೊಂದರಲ್ಲಿ[೨೩] ಹೆಗ್ಗಡೆ ಲಕ್ಷ್ಮಯ್ಯ ಕೇಶವ ದೇವರಿಗೆ ಬಿಟ್ಟ ವ್ರಿತ್ತಿಯಲ್ಲಿ ಹಿರಿಯ ಕೆರೆಯ ಕೆಳಗಿನ ಮೂಗಳ ಭತ್ತ ದಾನ ಬಿಟ್ಟಿರುವುದನ್ನು ತಿಳಿಸಿದೆ. 'ಮೂಗೂಳ ಭತ್ತ' ಎನ್ನುವುದು ಒಂದು ಜಾತಿಯ ಭತ್ತದ ತಳಿ ಆಗಿರಬೇಕು.

ಭತ್ತದ ಸಾಗುವಳಿಯನ್ನು ಮುಂಗಾರು ಋತು ಜೂನ್-ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿ ಆಗಸ್ಟ್ ತಿಂಗಳಿನಲ್ಲಿ ಕಟಾವು ಮಾಡಲಾಗುತ್ತದೆ. ಹಿಂಗಾರು ಅಥವಾ ಬೇಸಿಗೆ ಋತು ಜನವರಿ ತಿಂಗಳಲ್ಲಿ ಪ್ರಾರಂಭವಾಗಿ ಮೇ-ಜೂನ್ ತಿಂಗಳಲ್ಲಿ ಮುಕ್ತಾಯವಾಗುತ್ತದೆ. ಈ ಬೆಳೆಯನ್ನು ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುವುದಿಲ್ಲ. ನೀರು ಸರಬರಾಜು ಇರುವ ನಾಲಾ ಪ್ರದೇಶದಲ್ಲಿ ಮಾತ್ರ ಕಂಡುಬರುತ್ತದೆ. ವಾರ್ಷಿಕವಾಗಿ ಎರಡು ಬಾರಿ ನೀರಾವರಿ ಬೆಳೆಯಾಗಿ ಭತ್ತವನ್ನು ಬೆಳೆಯುತ್ತಾರೆ. ಈ ಪ್ರದೇಶದಲ್ಲಿ ಭತ್ತವನ್ನು ಬೆಳೆಯುವ ಸಾಮಾನ್ಯ ಪದ್ಧತಿಯೆಂದರೆ 'ನಾಟಿವಿಧಾನ' ಈ ವಿಧಾನವು ಬಹುತೇಕ ನೀರಾವರಿ ಪ್ರದೇಶಗಳಲ್ಲಿ ಕಂಡುಬರುವುದು. ಇದು ಆಧುನಿಕ ವಿಧಾನವಾಗಿದೆ. ಇದರಿಂದ ಹೆಕ್ಟೇರುವಾರು ಇಳುವರಿಯು ಹೆಚ್ಚಾಗುತ್ತದೆ. ಈ ವಿಧಾನದಲ್ಲಿ ಭತ್ತದ ಪೈರುಗಳನ್ನು ಮಡಿಗಳಲ್ಲಿ ಬೆಳೆಯುವರು. ಮೊದಲು ಪಾತಿ ಮಾಡಿ ಅದಕ್ಕೆ ಬೀಜದ ಭತ್ತ ಹಾಕಿ ಅದರ ಮೇಲೆ ಗೊಬ್ಬರ ಚೆಲ್ಲಿ ಕಾಡುಸೊಪ್ಪಿನಿಂದ ಮುಚ್ಚುತ್ತಾರೆ. ಇದನ್ನು "ಅಗೇ" ಹಾಕುವುದೆಂದು ಕರೆಯುತ್ತಾರೆ.[೨೪] ಇದರಲ್ಲಿ ನೀರನ್ನು ಪಾತಿಗಳಲ್ಲಿ ತುಂಬಿಸುತ್ತಾರೆ. ಅದಾದ ನಂತರ ನೀರನ್ನು ಹೊರಗೆ ಹಾಕಿ ಒಣಗಿಸಿ ಮತ್ತೆ ನೀರು ಕಟ್ಟುತ್ತಾರೆ. ಹೀಗೆ ೨೦ ದಿವಸಕ್ಕೆ ಈ ಪೈರು ಅರ್ಧ ಅಡಿ ಬೆಳೆಯುತ್ತದೆ. ಅಷ್ಟರೊಳಗೆ ಭತ್ತ ನಾಟಿ ಹಾಕುವ ಗದ್ದೆಯನ್ನು ೨-೩ ಸಾರಿ ಉಳುಮೆ ಮಾಡಿ ಬದುಗಳ ಅಂಚನ್ನೆಲ್ಲಾ ಕಡಿದು ಕರಗಿಸುತ್ತಾರೆ. ೨೦ ದಿವಸದ ಸಸಿಗಳನ್ನು ಕಿತ್ತಾಗ, ಗದ್ದೆಯನ್ನು ಪುನಃ ಉತ್ತು ಅಟ್ಲು ಗದ್ದೆ ಮಾಡಿ ಮರ ಹೊಡೆದು ಸಮ ಮಾಡಿ ಅರ್ಧ ಅಡಿಗೊಂದರಂತೆ ಮೂರು-ನಾಲ್ಕು ಸಸಿಗಳನ್ನು ಒಟ್ಟಿಗೆ ಸೇರಿಸಿ ನಾಟಿ ಮಾಡುತ್ತಾರೆ. ಇದಕ್ಕೆ ಹದವಾಗಿ ನೀರು ಕಟ್ಟುತ್ತಾರೆ. ನಾಟಿ

ಮಾಡಿದ ೧೫ರಿಂದ ೨೦ ದಿನಗಳಾದ ಮೇಲೆ ಕಳೆ ಕೀಳುತ್ತಾರೆ. ಇದಾದ ಮೇಲೆ ಕ್ರಿಮಿಕೀಟಗಳ ಬಾಧೆಗಳನ್ನು ತಪ್ಪಿಸಬೇಕಾದರೆ ಔಷಧಿ ಸಿಂಪಡಿಸಬೇಕು. ಭತ್ತವು ನಾಟಿ ಮಾಡಿದಾಗಿನಿಂದ ೧೦೦ರಿಂದ ೧೨೦ ದಿವಸಗಳಲ್ಲಿ ಕೊಯ್ಲಿಗೆ ಬರುತ್ತದೆ. ಈಗಿನ ಕಾಲದಲ್ಲಿ ಹೈಬ್ರಿಡ್ ಭತ್ತದ ಬೀಜ ಹಾಕಿ ಇನ್ನು ೯೦ ದಿವಸಗಳಿಗೆ ಕೊಯ್ಲು ಮಾಡುತ್ತಾರೆ.

ಭತ್ತದ ಇಳುವರಿಯು ಅದರ ತಳಿ ಮತ್ತು ಯಾವ ಋತುಗಳಲ್ಲಿ ಬೆಳೆಯುತ್ತಾರೆ ಎಂಬುದನ್ನು ಅವಲಂಬಿಸಿರುತ್ತದೆ. ಒಂದು ಎಕರೆಗೆ ೪೦ ಕ್ವಿಂಟಲ್ ಭತ್ತ ಬೆಳೆಯುತ್ತಾರೆ. ಆದರೆ ಸಾಮಾನ್ಯವಾಗಿ ೩೦ರಿಂದ ೩೫ ಕ್ವಿಂಟಲ್‌ವರೆಗೆ ಉತ್ತಮ ಫಸಲು ಬರುತ್ತದೆ. ಕೆರೆಯ ನೀರಿನಿಂದ ನೀರಾವರಿಗೆ ಒಳಪಟ್ಟಿರುವ ಗದ್ದೆಯಲ್ಲಿ ಎಕರೆಗೆ ೧೫ರಿಂದ ೩೦ ಕ್ವಿಂಟಲ್‌ವರೆಗೆ ಇಳುವರಿ ನಿರೀಕ್ಷಣೆ ಮಾಡುತ್ತಾರೆ. ಭತ್ತದ ಹುಲ್ಲು ಇಂದು ಜಾನುವಾರುಗಳಿಗೆ ಮೇವಾಗಿ ಬಳಕೆಯಾಗುತ್ತಿದೆ.

ಕೂರಿಗೆ ಬಿತ್ತನೆ ಭತ್ತದ ಮತ್ತೊಂದು ಪ್ರಾಚೀನ ವಿಧಾನ. ಇದರಲ್ಲಿ ಎರಡು ತಾಳು ಕೂರಿಗೆ, ಮೂರು ತಾಳು ಕೂರಿಗೆ, ನಾಲ್ಕು ತಾಳು ಕೂರಿಗೆ ಹೀಗೆ ಅನೇಕ ಪ್ರಮಾಣದಲ್ಲಿವೆ. ಮಲೆನಾಡಿನಲ್ಲಿ ಕೂರಿಗೆಯಿಂದ ಬಿತ್ತುವುದೇ ಹೆಚ್ಚು.

ಸಕಲೇಶಪುರ ಭಾಗದ ಮಲೆನಾಡಿನ ಭಾಗದಲ್ಲಿ ಭತ್ತ ಬಿತ್ತುವ ದಿನ ದುಷ್ಟ ಶಕ್ತಿಗಳ ನಿವಾರಣಾರ್ಥವಾಗಿ ಗದ್ದೆಯ ಮಧ್ಯದಲ್ಲಿ ಕೂರಿಗೆಯನ್ನಿಟ್ಟು, ಕೂರಿಗೆ ಪೂಜಿಸುವ ಪದ್ಧತಿ ಇತ್ತು. ಬೇಲೂರು ಭಾಗದಲ್ಲಿ ಕೂರಿಗೆಗೆ ಕಟ್ಟುವ ಎತ್ತುಗಳ ಕೋಡುಗಳನ್ನು ಅಲಂಕರಿಸಿ ವ್ಯವಸಾಯದ ಉಪಕರಣಗಳನ್ನಿಟ್ಟು ಪೂಜಿಸಿ, ಮನೆಯಲ್ಲಿ ಕಿಚ್ಚಡಿ ಮಾಡಿ ಎಡೆ ನೀಡುವರು. ಬಿತ್ತನೆ ಬೀಜ ತುಂಬಿದ ಕುಕ್ಕೆಯ ಸುತ್ತ ವಿಭೂತಿ ಬಳಿದು, ಮೇಲೆ ಬೆನಕನನ್ನು ಇಟ್ಟು ಪೂಜಿಸುವವರು. ಮನೆಯ ಯಜಮಾನ ಬೀಜದ ಕುಕ್ಕೆ ತೆಗೆದುಕೊಂಡು ಮೊದಲು ಮೂರು ಹಿಡಿ ಭತ್ತವನ್ನು ಊರದೇವರ ಮುಂದಿಟ್ಟು ಗದ್ದೆಗೆ ತೆರಳುವನು. ಪೂರ್ವಕ್ಕೆ ನಿಂತು ಬೆಳೆ ಹೆಚ್ಚಲೆಂದು ಸೂರ್ಯದೇವನನ್ನು, ಮಳೆರಾಯನನ್ನು ಪ್ರಾರ್ಥಿಸುವನು.[೫] ಮನುಷ್ಯ ಪ್ರಕೃತಿಯನ್ನೇ ದೇವರೆಂದು ಆರಾಧಿಸುವ ಅವಸ್ಥೆಯನ್ನು ಈ ಸಂಪ್ರದಾಯ ಬಿಂಬಿಸುತ್ತಿರಬಹುದು.

ರಾಗಿ

ರಾಗಿ ಬೆಳೆಯು ನೀರಾವರಿ ಬೆಳೆಗಿಂತ ಒಣ ಬೇಸಾಯಕ್ಕೆ ಅತಿ ಸೂಕ್ತವಾದ ಬೆಳೆ ಆಗಿದೆ. ಹಾಸನ, ಅರಸೀಕೆರೆ, ಅರಕಲಗೂಡು, ಚನ್ನರಾಯಪಟ್ಟಣ ತಾಲೂಕುಗಳಲ್ಲಿ ಹೆಚ್ಚಾಗಿ ರಾಗಿ ಬೆಳೆಯನ್ನು ನೋಡಬಹುದು. ರಾಗಿ ಹಾಕುವಾಗ ಬೆನಕನನ್ನು ಮಾಡಿಕೊಂಡು ರಾಗಿ ಇರುವ ಕುಕ್ಕೆಯಲ್ಲಿಟ್ಟುಕೊಂಡು ಹೊಲದ ಹತ್ತಿರ ಪೂಜೆ ಮಾಡಿ ಬೀಜಗಳನ್ನು ಬಿತ್ತುತ್ತಾರೆ. ಈ ಕುಕ್ಕೆಯಲ್ಲಿ ಒಂದು ಕುಡುಗೋಲನ್ನು ಸಹ ಸಾಂಕೇತಿಕವಾಗಿ ಇಟ್ಟಿರುತ್ತಾರೆ. ಇದು ಅಂದು ಹಾಕುವ ಬೆಳೆ ಹುಲುಸಾಗಿ ಕೊಯ್ಲಿಗೆ ಬರುತ್ತದೆ ಎಂಬರ್ಥದಲ್ಲಿ ಕುಡುಗೋಲನ್ನಿಟ್ಟು ಪೂಜೆ ಮಾಡುತ್ತಾರೆ. ಇದಕ್ಕೆ 'ಯೆಲಿಯುಸಿನ್

ಕೋರಾಕಾನ್'[೨೬] ಎಂಬ ವೈಜ್ಞಾನಿಕ ಹೆಸರಿದ್ದು. ಇದನ್ನು ೨೦°ರಿಂದ ೩೦° ಸೆಂಟಿಗ್ರೇಡ್ ಉಷ್ಣಾಂಶ ಮತ್ತು ಸುಮಾರು ೨೫ರಿಂದ ೩೦ ಇಂಚು ಮಳೆಯ ಪ್ರಮಾಣದಲ್ಲಿ ಬೆಳೆಯುತ್ತಾರೆ.[೨೭] ಈ ಪ್ರದೇಶದಲ್ಲಿ ವಾರ್ಷಿಕವಾಗಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆಗಳಿವೆ. ೨೦೧೧-೧೩ನೆಯ ಸಾಲಿನಲ್ಲಿ ೭೧೯೩೮ ಹೆಕ್ಟೇರ್[೨೮] ರಾಗಿ ಉತ್ಪಾದನೆಯಾಗಿದೆ. ಮಳೆ ಕಡಿಮೆ ಹಾಗೂ ಅನಿಶ್ಚಿತವಾದಾಗ ಒಂದು ಅಥವಾ ಎರಡು ಬಾರಿ ನೀರನ್ನು ರಾಗಿಗೆ ಹಾಯಿಸುವುದರಿಂದ ಉತ್ತಮ ಇಳುವರಿಯನ್ನು ಪಡೆಯಬಹುದು. ಜಿಲ್ಲೆಯಲ್ಲಿ ರಾಗಿಯನ್ನು ಸಾಲು ಬಿಡುವುದು, ಎರಚುವಿಕೆ ಹಾಗೂ ನಾಟಿ ಮಾಡುವುದು ಹೀಗೆ ಮೂರು ವಿಧಾನಗಳಿಂದ ಬೆಳೆಯುವರು. ಹಾಸನ ಜಿಲ್ಲೆಯ ಮೈದಾನದ ಭಾಗದಲ್ಲಿ 'ಗಿಡ್ಡರಾಗಿ' ಬೆಳೆದರೆ ಪೂರ್ವಭಾಗದಲ್ಲಿ ಅಂದರೆ ಚನ್ನರಾಯಪಟ್ಟಣ ತಾಲೂಕಿನ ಪರಿಸರದಲ್ಲಿ 'ದೊಡ್ಡರಾಗಿ'ಯನ್ನು ಬೆಳೆಯುತ್ತಾರೆ.[೨೯]

ಇಂದು ರಾಗಿಯ ಬೆಳೆಯುವ ಪ್ರದೇಶದ ವಿಸ್ತೀರ್ಣವು ಭತ್ತ ಪ್ರದೇಶದ ವಿಸ್ತೀರ್ಣಕ್ಕಿಂತ ಬಹಳ ಹೆಚ್ಚಾಗಿದೆ. ರಾಗಿಯ ಬೆಳೆಯು ನಾಲ್ಕು ತಿಂಗಳ ಕಾಲದಲ್ಲಿ ಕೊಯ್ಲಿಗೆ ಬರುವುದರಿಂದ ಇದು ಬಡವರ ಆಹಾರಧಾನ್ಯವಾಗಿ ಹೆಚ್ಚು ಬೆಲೆಯನ್ನು ಹೊಂದಿರುತ್ತದೆ. ಇದರ ಒಂದು ಜಾತಿಯನ್ನು ನೀರು ಹಾಯಿಸಿ ಗದ್ದೆಗಳಲ್ಲಿ ಬೆಳೆಯುತ್ತಾರೆ. ಸಸಿಗಳನ್ನು ಒಟಲಿನಿಂದ ಕಿತ್ತು ನಾಟಿ ಹಾಕುವ ಪದ್ಧತಿಯು ಇತ್ತೀಚೆಗೆ ರೂಢಿಗೆ ಬಂದಿದೆ. ಈ ಪದ್ಧತಿಯಿಂದ ಫಸಲು ಹೆಚ್ಚಾಗಿ ಬರುತ್ತದೆ. ಸರ್ಕಾರಿ ಸಂಸ್ಥೆಯೊಂದರಿಂದ ಹೊಸ ಜಾತಿಯ ಹಂಸ[೩೦] ಎಂಬ ಬಿಳಿಯ ರಾಗಿಯು ಉತ್ಪನ್ನವಾಗಿ ರೈತರ ವ್ಯವಸಾಯಕ್ಕೆ ಸರಬರಾಜು ಆಗುತ್ತಿದೆ. ಈ ಪ್ರದೇಶಗಳಲ್ಲಿ ರಾಗಿಯನ್ನು ಬೆಳೆಯಲು ಒಣ ಮತ್ತು ನೀರಾವರಿ ರಾಗಿ ಬೆಳೆ ಗದ್ದೆಯನ್ನು ಕಬ್ಬಿಣದ ನೇಗಿಲಿನಿಂದ ೬ ಇಂಚಿನಷ್ಟು ಆಳವಾಗಿ ಮೂರು ಸಲ ಸಾಗುವಳಿ ಮಾಡುತ್ತಾರೆ. ನಂತರ ಹಲುಬೆಯನ್ನು ಉಪಯೋಗಿಸಿ ಭೂಮಿಯನ್ನು ಸಮ ಮಾಡಿ ಕೊಟ್ಟಿಗೆ ಗೊಬ್ಬರ ಮತ್ತು ರಾಸಾಯನಿಕ ಗೊಬ್ಬರವನ್ನು ನಾಟಿ ಮಾಡುವ ಮೊದಲು ಹಾಕುತ್ತಾರೆ. ನಾಟಿ ಮಾಡಿದ ೩೫ರಿಂದ ೪೦ ದಿನಗಳ ನಂತರ ಮತ್ತೊಮ್ಮೆ ಹಾಕುತ್ತಾರೆ. ಈ ಗೊಬ್ಬರ ಮಣ್ಣಿನ ತೇವಾಂಶವನ್ನು ಅವಲಂಬಿಸಿರುತ್ತದೆ. ನೀರಾವರಿ ರಾಗಿ ಬೆಳೆ ಬೆಳೆಯಲು ನಾಲ್ಕು ತಿಂಗಳಿಗೆ ೩ ಬಾರಿ ನೀರನ್ನು ಪೂರೈಸುತ್ತಾರೆ. ರಾಗಿ ಪೈರಿನ ಸಾಲುಗಳಲ್ಲಿ ದ್ವಿದಳ ಧಾನ್ಯಗಳಾಗಿ ತೊಗರಿ, ಅವರೆ, ಹುಚ್ಚೆಳ್ಳು, ಸಾಸಿವೆ ಮತ್ತು ಜೋಳವನ್ನು ಸಹ ಬಿತ್ತುತ್ತಾರೆ. ರಾಗಿ ಪೈರು ಕಟಾವು ಆದ ಎರಡು ಮೂರು ತಿಂಗಳಲ್ಲಿ ಈ ಧಾನ್ಯವನ್ನು ಕಟಾವ್ ಮಾಡುತ್ತಾರೆ.

ಕಟಾವ್ ಮಾಡಿದ ರಾಗಿ ಪೈರನ್ನು ಸಣ್ಣ ಸಣ್ಣ ಕಂತೆ ಕಟ್ಟಿ 'ಗುಪ್ಪೆ' ಹಾಕುತ್ತಾರೆ. ಈ ಗುಪ್ಪೆಗಳನ್ನು ೮-೧೦ ದಿವಸಗಳಾದ ಮೇಲೆ ದೊಡ್ಡ ಮೆದೆಗೆ ರಾಗಿ ಹುಲ್ಲನ್ನು ಒಟ್ಟುತ್ತಾರೆ. ರಾಗಿ ಮೆದೆಯನ್ನು ಹಾಕಲು ಮೊದಲು ನೆಲವನ್ನು ಸಮ ಮಾಡಿ ಸಗಣಿ ಸಾರಿಸಿ ಮೆದೆ ಒಟ್ಟುತ್ತಾರೆ. ಮೆದೆಯನ್ನು 'ಗುಡ್ಡೆ' ಎಂದು ಸಹ ಕರೆಯುತ್ತಾರೆ.[೩೧] ಈ ಗುಡ್ಡೆಯನ್ನು ನೆಲಕ್ಕೆ ಸಾಲಿಗೆ ಮೂರರಂತೆ ೩ ಸಾಲಿಗೆ ಒಂಬತ್ತು ಕಲ್ಲುಗಳನ್ನಿಟ್ಟು ಅದರ ಮೇಲೆ ರಾಗಿ ಪೈರನ್ನು ಪಿರಾಮಿಡ್ಡಿನೋಪಾದಿಯಲ್ಲಿ

ಒಟ್ಟುತ್ತಾರೆ. ಇದನ್ನೇ ಮೆದೆ ಅಥವಾ ಗುಡ್ಡೆ ಎಂದು ಕರೆಯುತ್ತಾರೆ. ಇದಾದ ನಂತರ ಒಂದೆರಡು ತಿಂಗಳಿಗೆ 'ಸಂಕ್ರಾಂತಿ' ಹಬ್ಬ ಬರುತ್ತದೆ. ಆಗ ಹಸಿ ಅವರೆಕಾಯಿ ಬೇಯಿಸಿ, ಕಡಬು ಸಮೇತ ಮೆದೆಯೊಳಗಿಟ್ಟು ಪೂಜೆ ಮಾಡುತ್ತಾರೆ. ಇದನ್ನು ಗುಡ್ಡೆಪೂಜೆ ಎಂದು ಕರೆಯುತ್ತಾರೆ. ಮೆದೆ ಹಾಕಿದ ಒಂದು ತಿಂಗಳ ಮೇಲೆ ಕಣವನ್ನು ಸಗಣಿಯಿಂದ ಸಾರಿಸಿ ಪೂಜೆ ಮಾಡಿ ರಾಗಿಹುಲ್ಲನ್ನು ಬಡಿಯುವುದಕ್ಕೆ ಹಾಕುತ್ತಾರೆ.

ಜೋಳ

ಹಾಸನ ಜಿಲ್ಲೆಯಲ್ಲಿ ಜೋಳವನ್ನು ನೀರಾವರಿ ಮತ್ತು ಒಣಬೇಸಾಯ ಕಾಲದಲ್ಲಿ ಬೆಳೆಯುತ್ತಾರೆ. ಇದರ ವೈಜ್ಞಾನಿಕ ಹೆಸರು 'ಸೊರ್ಗಾಮ್ ವಲ್ಗರೆ.'[೨೨] ಎಂದು ಈ ಬೆಳೆಯು ಉಷ್ಣವಲಯದ ಬೆಳೆಯಾಗಿದ್ದು, ೨೬° ಸೆಂ.ಮೀ. ರಿಂದ ೩೨° ಸೆಂಟಿಗ್ರೇಡ್ ಉಷ್ಣಾಂಶ ಮತ್ತು ೩೦ರಿಂದ ೨೦೦ ಸೆಂ.ಮೀ ಮಳೆ ಬೀಳುವ ಪ್ರದೇಶದಲ್ಲಿ ಬೆಳೆಯುತ್ತದೆ. ೨೦೧೧-೧೨ನೆಯ ಸಾಲಿನಲ್ಲಿ ೨೧೬೪ ಹೆಕ್ಟೇರ್ ಜೋಳ ಮತ್ತು ೬೫೮೯೫ ಹೆಕ್ಟೇರ್[೨೩] ಮುಸುಕಿನ ಜೋಳ ಉತ್ಪಾದನೆಯಾಗಿದೆ. ಈ ಬೆಳೆಗಳು ಹೆಚ್ಚಾಗಿ ಅರಸೀಕೆರೆ, ಬೇಲೂರು, ಹಾಸನ, ಅರಕಲಗೂಡು ಮತ್ತು ಚನ್ನರಾಯಪಟ್ಟಣ ತಾಲೂಕುಗಳಲ್ಲಿ ಕಂಡುಬಂದಿವೆ.

ಜಿಲ್ಲೆಯಲ್ಲಿ ಮುಂಗಾರು ಬೆಳೆಯನ್ನು ಒಣಬೇಸಾಯ ಕಾಲದಲ್ಲಿ ಜೂನ್ ಅಥವಾ ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಕಟಾವು ಮಾಡಲಾಗುತ್ತದೆ. ಹಿಂಗಾರು ಬೆಳೆಯನ್ನು ತರಿ ಭೂಮಿಯಲ್ಲಿ ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಲ್ಲಿ ಆರಂಭವಾಗಿ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ಮುಕ್ತಾಯವಾಗುತ್ತದೆ. ಈ ರೀತಿಯ ನೀರಾವರಿ ಭೂಮಿಯಲ್ಲಿ ಬೆಳೆದ ಜೋಳಕ್ಕೆ ಒಂದು ಬಾರಿ ನೀರನ್ನು ಪೂರೈಸುತ್ತಾರೆ. ಈ ಬೆಳೆಯನ್ನು ಹೆಚ್ಚಾಗಿ ದನಗಳಿಗೆ ಮೇವಾಗಿ ಬಳಸುತ್ತಾರೆ.

ಜೋಳ ಬಿತ್ತನೆ ಮಾಡುವ ಸಾಂಪ್ರದಾಯಿಕ ಪದ್ಧತಿ ಪ್ರಕಾರ ಒಂದು ಅಥವಾ ಎರಡು ಸಲ ಹೆಗ್ಗುಂಟೆಯಿಂದ ಸಾಗುವಳಿ ಮಾಡುತ್ತಾರೆ. ಬಿತ್ತನೆಯನ್ನು ಕೂರಿಗೆಯಿಂದ ಮಾಡುತ್ತಾರೆ. ಒಂದು ಬೀಜದಿಂದ ಮತ್ತೊಂದು ಬೀಜದ ಅಂತರ ೯ ಇಂಚು ಇರುವಂತೆ ೧ ಎಕರೆಗೆ ೪ರಿಂದ ೫ ಕೆ.ಜಿ.ಯಷ್ಟು ಜೋಳದ ಬೀಜವನ್ನು ಬಿತ್ತಿ ಸಾಗುವಳಿ ಮಾಡುತ್ತಾರೆ. ಹಾಸನ ಜಿಲ್ಲೆಯ ಕೆಲವು ಭಾಗಗಳಲ್ಲಿ ಹೈಬ್ರಿಡ್ ಜೋಳಕ್ಕಿಂತ ಹೆಚ್ಚಾಗಿ ಸ್ಥಳೀಯ ಜೋಳ ಮತ್ತು ಜಾನುವಾರುಗಳಿಗಾಗಿ ಬೆಳೆಯುವ ಮುಸುಕಿನ ಜೋಳ ಕಂಡುಬರುತ್ತದೆ.

ಕಬ್ಬು

ಹಾಸನ ಜಿಲ್ಲೆಯ ಹೊಳೆನರಸೀಪುರ, ಅರಕಲಗೂಡು ಮತ್ತು ಚನ್ನರಾಯಪಟ್ಟಣ ತಾಲೂಕುಗಳಲ್ಲಿ ಕಬ್ಬು ವಾಣಿಜ್ಯಬೆಳೆಯಾಗಿದೆ. ಫ್ರಾನ್ಸಿಸ್ ಬುಕಾನನ್ ಸುಮಾರು ಕ್ರಿ.ಶ. ೧೮೦೦ರಲ್ಲಿ ಹಳೇಬೀಡು

ಕೆರೆಯನ್ನು ನೋಡಿ 'ಅದು ರಾಜಧಾನಿಯ ಕೇಂದ್ರಪ್ರದೇಶವಾಗಿತ್ತು ಮತ್ತು ಒಳ್ಳೆಯ ಭತ್ತದ ಗದ್ದೆಗಳಿಗೆ ನೀರು ಒದಗಿಸಲಾಗುತ್ತಿತ್ತು. ಈಗ ಅಲ್ಲಿ ಕಬ್ಬನ್ನು ಹಾಕುತ್ತಾರೆ' ಎಂದು ಹೇಳುತ್ತಾನೆ.[೩೪] ಇದರಿಂದ ಕೆರೆಯ ನೀರನ್ನು ಉಪಯೋಗಿಸಿಕೊಂಡು ಭತ್ತ ಮತ್ತು ಕಬ್ಬನ್ನು ಬೆಳೆದಿರಬೇಕು. ಈ ದಿನಗಳಲ್ಲಿ ಕೆರೆಯ ನೀರು ಕಬ್ಬಿಗಿಂತ ಭತ್ತದ ಬೆಳೆಗೆ ಹೆಚ್ಚು ಬಳಕೆಯಾಗುತ್ತಿದೆ. ೨೦೧೧-೧೨ರ ಅವಧಿಯಲ್ಲಿ ಕಬ್ಬಿನ ಉತ್ಪಾದನೆಯು ೫೩೫೨ ಹೆಕ್ಟೇರ್[೩೫]ನಷ್ಟು ಇದೆ. ಕಬ್ಬಿನ ಬೇಸಾಯಕ್ಕೆ ಸರಾಸರಿ ೨೪° ರಿಂದ ೨೫° ಸೆಂಟಿಗ್ರೇಡ್ ಉಷ್ಣಾಂಶ ಮತ್ತು ಮಳೆಯ ಸರಾಸರಿ ೨೦೦-೩೦೦ ಸೆಂ.ಮೀ. ಬೇಕಾಗುತ್ತದೆ.

ಕಬ್ಬನ್ನು ಎರಡು ಋತುಗಳಲ್ಲಿ ನಾಟಿ ಮಾಡುತ್ತಾರೆ. ಮೊದಲ ಋತು ಜನವರಿ ಅಥವಾ ಫೆಬ್ರವರಿಯಾದರೆ ಮತ್ತೊಂದು ಋತು ಜುಲೈ ಅಥವಾ ಆಗಸ್ಟ್ ತಿಂಗಳಾಗಿರುತ್ತದೆ. ಮೊದಲ ಋತುವಿನಲ್ಲಿ ಅಂದರೆ ಜನವರಿ ಅಥವಾ ಫೆಬ್ರವರಿಯಲ್ಲಿ ನಾಟಿ ಮಾಡಿದ ಕಬ್ಬು ಮಳೆಯಿಂದ ಬೆಳವಣಿಗೆಯಾಗಿ ವ್ಯಾಪಕವಾಗಿ ಬೇರು ಬಿಟ್ಟು ಬೇಗನೆ ಕಟಾವಿಗೆ ಬರುತ್ತದೆ. ಎರಡನೇ ಋತುವಿನಲ್ಲಿ ಬೆಳೆದ ಕಬ್ಬಿಗೆ ಯಾವ ಅನುಕೂಲವೂ ದೊರೆಯದೆ ನೀರಾವರಿ ಮೇಲೆ ಅವಲಂಬನೆಯಾಗಿರುತ್ತದೆ.

ಈ ತಾಲೂಕುಗಳಲ್ಲಿ ವಿವಿಧ ರೀತಿಯ ಕಬ್ಬಿನ ತಳಿಗಳಿರುತ್ತವೆ. ಅವುಗಳಲ್ಲಿ ಹಳೆಯ ಮತ್ತು ದೇಶೀಯ ಕಬ್ಬು ಮೃದುವಾಗಿದ್ದು, ಈ ತಳಿಗಳನ್ನು 'ರಸದಾಳಿ' ಎಂದು ಕರೆಯುತ್ತಾರೆ. ರಸದಾಳಿಯಲ್ಲಿ ಎರಡು ಪ್ರಕಾರಗಳಿರುತ್ತದೆ. ಒಂದು ದಪ್ಪ, ಇನ್ನೊಂದು ತೆಳ್ಳಗೆ ಇರುತ್ತದೆ. ಈ ತಳಿಯ ಕಬ್ಬು ಮೃದುವಾಗಿದ್ದು ಹಸಿರುಮಿಶ್ರಿತ ಹಳದಿ ಸಿಪ್ಪೆ ಹೊಂದಿದ್ದು, ೧೧ ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಪ್ರತಿಶತ ೧೬ರಷ್ಟು ಸಕ್ಕರೆ ಅಂಶ ಇದ್ದು, ಸಾಧಾರಣ ಇಳುವರಿ ಕೊಡುತ್ತದೆ. ಈ ತಳಿಯ ಕಬ್ಬಿಗೆ ಸಾಕಷ್ಟು ಪ್ರಮಾಣದಲ್ಲಿ ನೀರಾವರಿ ಮತ್ತು ಗೊಬ್ಬರದ ಬಳಕೆ ಮಾಡುತ್ತಾರೆ. ಇತ್ತೀಚೆಗೆ ಮತ್ತೊಂದು ತಳಿ ಕಂಡುಬಂದಿದೆ. ಅದರ ಹೆಸರು 'ಪಟ್ಟಾಪಟ್ಟಿ' ಈ ತಳಿಯನ್ನು ವೆಲ್ಲೂರಿನಿಂದ ತರಿಸಲಾಗಿದೆ ಎಂದು ಹೇಳುತ್ತಾರೆ. ಇದು ರಸದಾಳಿ ಕಬ್ಬಿಗಿಂತ ಸ್ವಲ್ಪ ಬಿರುಸು ಸಿಪ್ಪೆ ಮೇಲೆ ಹಳದಿ ಹಾಗು ಕೆಲವು ಪಟ್ಟಿಗಳಿರುತ್ತವೆ. ಅಲ್ಲದೆ ರಸದಾಳಿ ಕಬ್ಬಿಗಿಂತ ತುಂಬಾ ಎತ್ತರ ಬೆಳೆಯುತ್ತದೆ. ಇದರಲ್ಲಿ ೧.೨೨ರಷ್ಟು ಸಕ್ಕರೆ ಅಂಶವಿರುತ್ತದೆ. ಈ ತಳಿಯ ಕಬ್ಬನ್ನು ಕಟಾವು ಮಾಡಲು ೧೨ ತಿಂಗಳು ಬೇಕಾಗುತ್ತದೆ. ಇದು ಉತ್ತಮ ಗುಣಮಟ್ಟದ ಬೆಲ್ಲ ಕೊಡುತ್ತದೆ. ಇದಕ್ಕೆ ಹೆಚ್ಚು ನೀರು ಗೊಬ್ಬರ ಬಳಕೆ ಮಾಡಬೇಕಾಗುತ್ತದೆ. ೧ ಎಕರೆಗೆ ೧೦ ಟನ್‌ಗಳಷ್ಟು ಇಳುವರಿ ಬರುತ್ತದೆ. HM-೩೨೦ ಮತ್ತು CO-೪೧೯ ಇವು ಇತ್ತೀಚಿನ ತಳಿಗಳಾಗಿದ್ದು[೩೬] ಅಧಿಕ ಇಳುವರಿ ಮತ್ತು ಉತ್ತಮ ಗುಣಮಟ್ಟದ ಸಕ್ಕರೆಯನ್ನು ಕೊಡುತ್ತವೆ. ಇಳುವರಿ ಪ್ರತಿ ಎಕರೆಗೆ ಸುಮಾರು ೫೫ರಿಂದ ೬೦ ಟನ್‌ಗಳಷ್ಟು ಬರುತ್ತದೆ.

ಕಬ್ಬು ಬೆಳೆಯನ್ನು ಸಾಗುವಳಿ ಮಾಡಲು ಕಬ್ಬಿನ ಭೂಮಿಯನ್ನು ಮೂರರಿಂದ ನಾಲ್ಕು ಸಲ ಮೌಲ್ಡಾಬೋರ್ಡ್‌ನಿಂದ ನೇಗಿಲು ಹೊಡೆದು ಒಂದು ಅಥವಾ ಎರಡು ಸಲ ಕುಂಟೆಯಿಂದ

ಸಾಗುವಳಿ ಮಾಡಬೇಕು. ೧೦ರಿಂದ ೨೦ ಚಕ್ಕಡಿ ತಿಪ್ಪೆಗೊಬ್ಬರ ಹಾಗೂ ೫೦೧bs ಫಾಸ್ಪೆಟ್ ಮತ್ತು ೫೦೦bsನಷ್ಟು ನೈಟ್ರೋಜನ್ ರಾಸಾಯನಿಕ ಗೊಬ್ಬರವನ್ನು ಕಬ್ಬು ನಾಟಿ ಮಾಡುವ ಸಮಯದಲ್ಲಿ ಕೊಡಬೇಕಾಗುತ್ತದೆ. ೩ ತಿಂಗಳ ನಂತರ ೫೦೧bs ನೈಟ್ರೋಜನ್ ಉಪಯೋಗಿಸಬೇಕು. ಕಬ್ಬನ್ನು ಬದುಕಟ್ಟಿ ನೇಗಿಲ ಸಾಲುಗಳಲ್ಲಿ ೩ ಫೂಟ್‌ಗೊಂದರಂತೆ ನಾಟಿ ಮಾಡುವುದು ನಂತರ ಕಬ್ಬು ಕಟಾವಿಗೆ ಬಂದಾಗ ಇದರ ಎಲೆ ಮತ್ತು ಕಬ್ಬಿನಲ್ಲಿ ಬದಲಾವಣೆ ಕಂಡುಬರುತ್ತದೆ. ಅನಂತರ ಎಲೆಗಳು ಒಣಗಲಾರಂಭಿಸುತ್ತವೆ. ಈ ಕಬ್ಬನ್ನು ಕೊಯ್ಲು ಮಾಡಿ ಬೆಲ್ಲ ಅಥವಾ ಸಕ್ಕರೆ ತಯಾರಿಸಲು ಕಳಿಸುತ್ತಾರೆ.

ತೋಟದ ಬೆಳೆಗಳು

ತೆಂಗು

ಹಾಸನ ಜಿಲ್ಲೆಯಲ್ಲಿ ತೆಂಗಿನ ಉತ್ಪಾದನೆಯು ನೀರಾವರಿ ಬೆಳೆಗಳಲ್ಲಿ ಪ್ರಮುಖವಾದುದಾಗಿದೆ. ಜಿಲ್ಲೆಯ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲೂಕಿನಲ್ಲಿ ತೆಂಗು ಪ್ರಮುಖ ಬೆಳೆಯಾಗಿದೆ. ೨೦೧೧-೧೨ರ ಅವಧಿಯಲ್ಲಿ ೮೮೭೦.೧೦ ಟನ್‌ಗಳಷ್ಟು[೩೭] ಉತ್ಪಾದನೆಯಾಗಿದೆ. ಈ ಪರಿಸರದಲ್ಲಿ ದೊಡ್ಡ ನಾಗವಳಿ, ಸಣ್ಣ ನಾಗವಳಿ, ಗಂಧಪಣಿ, ವಿವಿಧ ರೀತಿಯ ತೆಂಗಿನ ತಳಿಗಳಿದ್ದು,[೩೮] ಅದರಲ್ಲಿ 'ಗಂಗಾಪಾಣಿ'[೩೯] ಎಂಬ ಜಾತಿ ಮುಖ್ಯವಾದುದು. ತೆಂಗು ತಾಳೆ ಜಾತಿಯ ಮರದಂತೆ ನಿರಂತರವಾಗಿ ಬೆಳೆಯುವ ಖಾಯಂ ತೋಟಗಾರಿಕೆ ಬೆಳೆಯಾಗಿದೆ. ಜಿಲ್ಲೆಯ ಕೆರೆ ಪಕ್ಕದಲ್ಲಿನ ತೆಂಗಿನ ಜಮೀನು ನೀರು ಮುಳುಗಡೆಯಾಗಿ ಕಡಿಮೆ ಇಳುವರಿ ಹೊಂದಿದ್ದರೆ, ಕೆರೆಯಿಂದ ಸ್ವಲ್ಪ ದೂರದಲ್ಲಿ ಇರುವ ತೆಂಗಿನ ಬೆಳೆಗೆ ನೀರು ಸಮರ್ಪಕವಾಗಿ ನೀರು ಹಾಯಿಸಿ ಅಧಿಕ ಇಳುವರಿ ಪಡೆಯಲಾಗುತ್ತಿದೆ. ತೆಂಗನ್ನು ೨೫°ರಿಂದ ೩೦° ಸೆಂಟಿಗ್ರೇಡ್ ಉಷ್ಣಾಂಶ ಮತ್ತು ೧೨೦ರಿಂದ ೧೩೦ ಸೆಂ.ಮೀ ಮಳೆ ಇರುವ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ.[೪೦]

ತೆಂಗಿನ ಬೆಳೆಯು ನಿರಂತರ ಫಲ ನೀಡುವ ಬಹುವಾರ್ಷಿಕ ಮರ. ಇದರ ಸಸಿಗಳನ್ನು ಚೆನ್ನಾಗಿ ಬಲಿತ ಕಾಯಿಗಳನ್ನು ಹೂಳಿ ಬೆಳೆಸಲಾಗುವುದು. ಸುಮಾರು ೪೦ ವರ್ಷದ ದೃಢಕಾಯವಾದ ಮರದಲ್ಲಿ ದಪ್ಪಕಾಯಿಗಳಿರುವ ದುಂಡಾದ ಗೊನೆಯನ್ನು ನೋಡಿಕೊಂಡಿರುತ್ತಾರೆ. ಇದರಿಂದ ಬಲಿತ ಕಾಯಿ ಕೆಳಗೆ ಬಿದ್ದಾಗ ಆ ಗೊನೆಯನ್ನು ಹಗ್ಗ ಕಟ್ಟಿ ಇಳಿಸುವವರು. ಗಿಡದ ಮೇಲೆ ಕಾಯಿ ಪೂರ್ತಿ ಒಣಗಿದ್ದರೆ ಅಂಥ ಕಾಯಿ ಮೊಳೆಯುವುದಿಲ್ಲ. ನಾಟಿ ಮಾಡುವ ಸ್ಥಳ ಎತ್ತರವಾಗಿರಬೇಕು. ಅಲ್ಲಿ ಒಂದೂವರೆ ಅಡಿ ಅಗೆದು ಬೇರೆ ಮಣ್ಣನ್ನು ಹಾಕಬೇಕು. ಅಮಾವಾಸ್ಯೆಯಂದು ಕಾಯಿ ನಾಟಿ ಮಾಡುವರು. ಏಕೆಂದರೆ ಹುಣ್ಣಿಮೆಯಲ್ಲಿ ಹಾಕಿದ ಬೀಜಗಳಿಗೆ ಹುಳು ಹೊಡೆಯುವುದು ಹೆಚ್ಚು. ನಾಟಿ ಹಾಕಿದ ಬಳಿಕ ನೆರಳಿಗಾಗಿ ಚಪ್ಪರ ಕಟ್ಟುತ್ತಾರೆ. ತೊಂಬತ್ತು ದಿನಕ್ಕೆ ಮೊಳಕೆ ಬರುತ್ತದೆ. ಅನಂತರ ಒಂದರಿಂದ ಮೂರು ವರ್ಷಗಳವರೆಗೆ ಬೆಳೆದ ಸಸಿಗಳನ್ನು ೩x೩ ಪ್ರಮಾಣದ

ಗುಂಡಿಗಳಲ್ಲಿ ಸುಮಾರು ೪೦ ಅಡಿ ಅಂತರದಲ್ಲಿ ನೆಡಲಾಗುವುದು. ತೆಂಗಿನ ಸಸಿಗಳು ಪೂರ್ಣವಾಗಿ ಬೆಳೆಯುವವರೆಗೆ ಆ ಪ್ರದೇಶದಲ್ಲಿ ವಿವಿಧ ಬೆಳೆಗಳಾದ ಬಾಳೆ. ಶುಂಠಿ ಹಾಗೂ ತರಕಾರಿಗಳನ್ನು ಬೆಳೆಯಬಹುದು. ಈ ಮರಗಳು ನೆಟ್ಟು ೬-೭ ವರ್ಷಗಳಿಂದ ಸುಮಾರು ೫೦ರಿಂದ ೬೦ ವರ್ಷಗಳವರೆಗೆ ನಿರಂತರವಾಗಿ ಫಲ ನೀಡುತ್ತವೆ. ತೆಂಗಿನ ತೋಟಗಳನ್ನು ಚೆನ್ನಾಗಿ ಉಳುಮೆ ಮಾಡಿ, ಮಳೆ ಕಡಿಮೆ ಇರುವ ಅವಧಿಯಲ್ಲಿ ನೀರನ್ನು ಪೂರೈಸಿ ಹೆಚ್ಚು ಉತ್ಪಾದನೆ ಮಾಡುತ್ತಾರೆ. ಎಳೆ ನೀರನ್ನು ೬ರಿಂದ ೭ ತಿಂಗಳಿನಲ್ಲಿ ಹಾಗು ಕೊಬ್ಬರಿಗಾಗಿ ಬಳಸುವ ಕಾಯಿಗಳನ್ನು ೧೧ ತಿಂಗಳ ನಂತರ ಕೀಳಲಾಗುವುದು. ಚೆನ್ನಾಗಿ ಬಲಿತ ಕಾಯಿಗಳನ್ನು ಕಿತ್ತು ೬ರಿಂದ ೧೨ ತಿಂಗಳವರೆಗೆ ಸಂಗ್ರಹಿಸಿ, ಕೊಬ್ಬರಿ ಮಾಡಿ ಅಧಿಕ ಲಾಭ ಗಳಿಸುತ್ತಾರೆ.

ತೆಂಗಿಗೆ ಧಾರ್ಮಿಕವಾಗಿ ವಿಶಿಷ್ಟ ಸ್ಥಾನವಿರುವುದರಿಂದ ಅನೇಕ ಆಚರಣೆಗಳಿವೆ. ಸಸಿ ನೆಡುವ ದಿವಸ ಮೊದಲ ಸಸಿಗೆ ಬಿಳಿಪಂಚೆ ಉಡಿಸಿ ಮುತ್ತೈದೆಯರು ಗಂಗೆ ಪೂಜೆ ಮಾಡಿ, ಆ ಸಸಿಗೆ ನೀರು ಹಾಕುವ ಸಂಪ್ರದಾಯ ಕೆಲವು ಸಮುದಾಯಗಳಲ್ಲಿದೆ. 'ಫಲ ನೆಟ್ಟು ಪಾಪ ಕಳೆ' ಎಂಬ ಮಾತಿನಂತೆ ತೆಂಗಿನ ಸಸಿ ನೆಡುವುದು ಪುಣ್ಯಕರವೆಂಬ ನಂಬಿಕೆ ಸಾಮಾನ್ಯವಾಗಿದೆ.[೪೧] ಮೊದಲ ಸಸಿ ನೆಟ್ಟವರಿಗೆ ಸಸಿಗೆ ಉಡಿಸಿದ್ದ ಪಂಚೆಯನ್ನು ಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ಮನೆಯ ಹಿರಿಯರಿಂದ ಸಸಿ ನೆಡುವ ಕಾರ್ಯ ಆರಂಭಿಸುತ್ತಾರೆ. ಆ ದಿವಸ ಮನೆಯಲ್ಲಿ ವಿಶೇಷ ಅಡುಗೆ ತಯಾರಿಸಿ ಬಂದವರಿಗೆ ಔತಣ ನೀಡುತ್ತಾರೆ.

ಅಡಿಕೆ

ಅಡಿಕೆಗೆ ಅಪಾರ ಬೇಡಿಕೆ ಇದ್ದುದರಿಂದ ಶಾಸನಗಳಲ್ಲಿ ಅಡಿಕೆ ತೋಟಗಳ ಉಲ್ಲೇಖಗಳು ಸಿಕ್ಕಿವೆ. ಕ್ರಿ.ಶ. ೧೧೫೯ರ ಸೂಳೆಕೆರೆ ಶಾಸನದಲ್ಲಿ[೪೨] ಗ್ರಾಮದ ಮೂಲಸ್ಥಾನ ದೇವರಿಗೆ ಹಿರಿಯ ಕೆರೆಯ ಕೆಳಗಿನ ಗದ್ದೆ ಬೆದ್ದಲು ೪೦೦ ಅಡಿಕೆ ಮರಗಳನ್ನು ಬಿಟ್ಟಿರುವ ಉಲ್ಲೇಖವಿದೆ. ಅದೇ ರೀತಿ ಹಲಕೂರಿನ ಕಲಿದೇವರಿಗೆ ದೇವರ ಮುಂದಣ ಕೆರೆಯ ಕೆಳಗೆ ತೋಟ ಸ್ಥಳವನ್ನು ೬೦೦ ಅಡಕೆ ಮರವನ್ನು ದಾನ ಬಿಟ್ಟಿರುವಂತೆ ಕ್ರಿ.ಶ. ೧೧೭೭ರ ಶಾಸನದಲ್ಲಿದೆ.[೪೩] ಬೊಮ್ಮೇನಹಳ್ಳಿಯ ಶಾಸನವೊಂದು ಒಂದು ತೋಟಕ್ಕೆ ಎಷ್ಟು ಮರಗಳಿರಬೇಕೆಂದು ಹೇಳಿದೆ. ಕ್ರಿ.ಶ. ೧೧೯೪ರ ಶಾಸನದಲ್ಲಿ[೪೪] ೩೪ ಕಂಬಗಳ ತೋಟದ ಸ್ಥಳ ಒಂದರಲ್ಲಿ ೫೦೦ ಮರಗಳು ೪೦ ಕಂಬದ ತೋಟ ಸ್ಥಳ ಒಂದರಲ್ಲಿ ೬೦೦ ಮರಗಳು ಸಾಧ್ಯವಿರುವಂತೆ ತಿಳಿಸಿದೆ. ಕ್ರಿ.ಶ. ೧೨೧೬ರ ದೊಡ್ಡಗದ್ದವಳ್ಳಿಯ ಶಾಸನದಲ್ಲಿ[೪೫] ಚಿಕ್ಕಗಾವುಂಡ ಮತ್ತು ಇತರರು ಮಾಡಿಕೊಂಡ ಕ್ರಯದಲ್ಲಿ ಹಿರಿಯ ಕೆರೆಯ ೮೦೦ ಅಡಕೆ ಮರಗಳನ್ನು ಸೂಚಿಸಿದೆ.

ಹಾಸನ ಮತ್ತು ಅರಕಲಗೂಡು ಪ್ರದೇಶಗಳಲ್ಲಿ ಅಡಿಕೆಯೇ ಒಂದು ಪ್ರಮುಖ ನೀರಾವರಿ ಬೆಳೆಯಾಗಿದೆ. ಅಡಿಕೆ ಮರಗಳಿಗೆ ತಿಂಗಳಿಗೆ ಸುಮಾರು ೨ ಬಾರಿಯಾದರೂ ನೀರನ್ನು ಹಾಯಿಸುತ್ತಾರೆ.

ಈ ಮರವನ್ನು ಹೆಚ್ಚಾಗಿ ಏಲಕ್ಕಿ, ಮೆಣಸು ಮತ್ತು ಬಾಳೆ ಜೊತೆ ಬೆಳೆಸಿದ್ದಾರೆ. ಇದರ ವೈಜ್ಞಾನಿಕ ಹೆಸರು 'ಅರೇಕಕಾಚು.'[೪೬] ಇದನ್ನು ೧೫°ರಿಂದ ೩೫° ಸೆಂಟಿಗ್ರೇಡ್ ಉಷ್ಣಾಂಶ ಮತ್ತು ೧೫೦ರಿಂದ ೧೮೦ ಸೆಂ.ಮೀ. ಮಳೆಯಲ್ಲಿ ಬೆಳೆಯುತ್ತಾರೆ.[೪೭] ಜೇಡಿಮಿಶ್ರಿತ ಮಣ್ಣು ಈ ಬೆಳೆಗೆ ಸೂಕ್ತವಾದುದಾಗಿದೆ. ೨೦೧೧-೧೨ರ ಅವಧಿಯಲ್ಲಿ ಸುಮಾರು ೭೦೮೫.೭೫ ಟನ್‌ಗಳಷ್ಟು[೪೮] ಉತ್ಪಾದನೆಯಾಗಿದೆ. ಈ ಬೆಳೆಯನ್ನು ಬೆಳೆಯಲು ಅಡಿಕೆ ಸಸಿಗಳನ್ನು ಸಸಿ ಮಡಿಗಳಲ್ಲಿ ಬೆಳೆಸಿ ನಂತರ ನೆಡಲಾಗುವುದು. ಅಡಿಕೆ ಬಿತ್ತನೆಗೆ ಬೀಜ ಮಾಡುವಾಗ ಸುಮಾರು ೨೦ ವರ್ಷ ಚೆನ್ನಾಗಿ ಫಸಲು ಬಿಡುವ ಮರವನ್ನು ಆಯ್ಕೆ ಮಾಡಿಕೊಂಡು, ಅದರ ಬಲಿತ ಗೊನೆಯಿಂದ ಕಾಯಿ ಉದುರಿದ್ದನ್ನು ನೋಡಿ, ಗೊನೆ ಇಳಿಸಿ ಕಾಯಿ ಬಿಡಿಸಿಕೊಂಡು ೧೦ರಿಂದ ೧೫ ದಿವಸ ನೆರಳಿನಲ್ಲಿ ಒಣಗಿಸಲಾಗುವುದು. ಗುದ್ದಲಿಯಿಂದ ಅಗೆದು, ಕೊಟ್ಟಿಗೆ ಗೊಬ್ಬರ, ಕೆಂಪು ಮಣ್ಣು, ಮರಳು, ನೀರು ಹಾಕಿ ಪಾತಿ ಮಾಡುತ್ತಾರೆ. ಇದರಲ್ಲಿ ಬೀಜಕ್ಕೆ ಆರಿಸಿದ ಕಾಯಿಗಳನ್ನು ಅಡಿಗೆ ಒಂದರಂತೆ ಎರಡು ಅಂಗುಲ ಆಳದಲ್ಲಿ ನೆಡುತ್ತಾರೆ. ನೀರು ತುಂತುರು ಬೀಳುವಂತೆ ಹಾಕುತ್ತಿದ್ದರೆ ೪೫ ದಿನಕ್ಕೆ ಮೊಳಕೆಯೊಡೆಯುತ್ತದೆ. ಇವುಗಳನ್ನು ಕಾಫಿಯಂತೆಯೇ ಪ್ಲಾಸ್ಟಿಕ್ ಚೀಲಗಳಿಗೆ ಹಾಕಿ ಚಪ್ಪರದ ಕೆಳಗೆ ಇಟ್ಟು ಪ್ರತಿನಿತ್ಯ ನೀರು ಬಿಡುತ್ತಿರಬೇಕು. ತೊಂಬತ್ತು ದಿನಗಳಲ್ಲಿ ಸಸಿಗಳು ಸಿದ್ಧವಾಗುತ್ತವೆ. ಮರವು ಸುಮಾರು ೨೦.೨೫ ಮೀ. ಎತ್ತರದವರೆಗೆ ಬೆಳೆಯುವುದು. ಅಡಿಕೆ ಕಾಯಿಯನ್ನು ಕಿತ್ತು, ಸುಲಿದು, ಬೇಯಿಸಿ ಒಣಗಿಸಿದ ನಂತರ ಮಾರಾಟ ಮಾಡುವರು. ಇದರ ಮರಗಳನ್ನು ತೆಂಗು, ಬಾಳೆ, ವೀಳ್ಯದೆಲೆ ಮುಂತಾದವುಗಳೊಡನೆ ಮಿಶ್ರ ಬೆಳೆಯಾಗಿ ಬೆಳೆಯುವರು.

ಏಲಕ್ಕಿ

ಹಾಸನ ಜಿಲ್ಲೆಯಲ್ಲಿ ಒಟ್ಟು ೬೬೫೭ ಹೆಕ್ಟೇರ್ ಪ್ರದೇಶದಲ್ಲಿ ಏಲಕ್ಕಿ ಬೆಳೆಯಿದೆಯೆಂದು ೧೯೯೦-೯೧ರ ಸಮೀಕ್ಷೆ ತಿಳಿಸುತ್ತದೆ.[೪೯] ೨೦೧೧-೧೨ರ ಅವಧಿಯಲ್ಲಿ ೧೧೪೨.೬೦ ಟನ್‌ಗಳಷ್ಟು ಬೆಳೆಯಲಾಗಿದೆ.[೫೦] ಸಕಲೇಶಪುರ, ಆಲೂರು, ಬೇಲೂರು ತಾಲೂಕುಗಳಲ್ಲಿ ಹೆಚ್ಚಾಗಿ ಕಂಡುಬಂದಿದೆ. ಸ್ವಾತಂತ್ರ್ಯಪೂರ್ವದಲ್ಲಿ ಸಕಲೇಶಪುರ ತಾಲೂಕಿಗೆ "ಮಂಜರಾಬಾದ್" ಎಂಬ ಹೆಸರಿತ್ತು. ಅಂತೆಯೇ ಇಲ್ಲಿ ಬೆಳೆಯುವ ಏಲಕ್ಕಿ ತಳಿ ಮಂಜರಾಬಾದ್ ತಳಿಯೆಂದೇ ಪ್ರಖ್ಯಾತವಾಗಿದೆ. ಹಾಸನ ಜಿಲ್ಲೆಯಲ್ಲಿ ವಾರ್ಷಿಕ ಸುಮಾರು ೨೫೦ರಿಂದ ೩೫೦ ಟನ್ ಉತ್ಪಾದನೆ ಇದೆಯೆಂದು ಅಂದಾಜು ಮಾಡಲಾಗಿದೆ.

ಏಲಕ್ಕಿಯು ಬಹುವಾರ್ಷಿಕ ಸಸ್ಯವಾಗಿದ್ದು ಇದರ ಬೇರು ಕಾಂಡವು ನೆಲದೊಳಗೆ ಇರುತ್ತದೆ. ಸುಮಾರು ಎರಡರಿಂದ ನಾಲ್ಕು ಮೀಟರ್ ಎತ್ತರಕ್ಕೆ ಗಿಡಗಳು ಬೆಳೆಯುತ್ತವೆ. ಏಲಕ್ಕಿ ಗಿಡದ ಬೇರುಗಳು ಆಳವಾಗಿ ಇಳಿಯದೆ ಮಣ್ಣಿನ ಮೇಲ್ಪದರದಲ್ಲಿ ಹರಡಿಕೊಂಡಿರುತ್ತವೆ. ಸುಮಾರು ಶೇ. ೫೦ರಿಂದ ೬೦ ಪ್ರಮಾಣದಲ್ಲಿ ನೆರಳಿರುವ ಪರಿಸರದಲ್ಲಿ ಹುಲುಸಾಗಿ ಬೆಳೆಯುವುದು. ನಿತ್ಯ ಹರಿದ್ವರ್ಣ ಕಾಡುಗಳ ನೆರಳಿನಲ್ಲಿ ೧೦°ರಿಂದ ೩೫° ಸೆಂಟಿಗ್ರೇಡ್ ಉಷ್ಣಾಂಶವಿರುವ ಹವಾಮಾನದಲ್ಲಿ

ಏಲಕ್ಕಿಯನ್ನು ಉತ್ಪಾದಿಸಲಾಗುವುದು.[೫೧] ತಂಪು ಹವೆ ಮತ್ತು ತೇವಾಂಶ ಅವಶ್ಯವಿರುವ ಏಲಕ್ಕಿ ಬೆಳೆಗೆ ವಾರ್ಷಿಕ ೧೫೦ರಿಂದ ೨೦೦ ಸೆಂ.ಮೀ. ಮಳೆ ಬೇಕಾಗುವುದು. ಇಳಿಜಾರಾದ ಕಾಡಿನ ಎಲೆ ಕರಗಿ ಫಲವತ್ತಾದ ಮಣ್ಣಿನ ಪ್ರದೇಶ ಸೂಕ್ತವಾದುದು. ಹವಳಿಗೆ, ಹಲಸು, ಅತ್ತಿ, ಗಂಥಗರಿಗೆ ಮುಂತಾದ ಮರಗಳು ಏಲಕ್ಕಿ ತೋಟಗಳಲ್ಲಿ ನೆರಳು ನೀಡುವ ಸೂಕ್ತ ಮರಗಳಾಗಿವೆ. ಇತ್ತೀಚಿನ ವರ್ಷಗಳಲ್ಲಿ ಮಳೆಗಾಲದ ನಂತರ ಬೇಸಿಗೆಯಲ್ಲಿ ಏಲಕ್ಕಿ ತೋಟಗಳಿಗೆ ತುಂತುರುನೀರಾವರಿ ಇಲ್ಲವೇ ಹನಿನೀರಾವರಿಯ ಮೂಲಕ ನೀರನ್ನು ಒದಗಿಸುತ್ತಾರೆ.

ಹಲವು ಸಂಶೋಧನಾ ಸಂಸ್ಥೆಗಳು ಸ್ಥಳಕ್ಕೆ ಸೂಕ್ತವಾದ, ಹೆಚ್ಚು ಇಳುವರಿ ನೀಡುವ ತಳಿಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿವೆ. ಅವುಗಳೆಂದರೆ. ಐ.ಸಿ.ಆರ್, ಐ–೩(ಎಸ್.ಕೆ.ಪಿ–೧೪), ಮೂಡಿಗೆರೆ–೧ ಮತ್ತು ಮೂಡಿಗೆರೆ–೨, ಸಿ.ಸಿ.ಎಸ್–೧[೫೨] ಇವಲ್ಲದೆ, ಬೆಳೆಗಾರರು ತಾವೇ ಗುರುತಿಸಿ ಅಭಿವೃದ್ಧಿಪಡಿಸಿರುವ ಅಧಿಕ ಇಳುವರಿ ನೀಡುವ ತಳಿಗಳನ್ನು ಬೆಳೆಯುತ್ತಿದ್ದಾರೆ.

ಏಲಕ್ಕಿ ಗಿಡ ಬೆಳೆಸುವುದಕ್ಕೆ ನೈಸರ್ಗಿಕ ಕ್ರಮವೊಂದಿದೆ. ಹಕ್ಕಿಗಳು ಏಲಕ್ಕಿ ಗಿಡದಲ್ಲಿ ಬಿಟ್ಟ ಹಣ್ಣುಗಳನ್ನು ತಿಂದು ಕಾಡಿನಲ್ಲಿ ಇಕ್ಕೆ ಹಾಕುತ್ತವೆ. ಇಲ್ಲವೆ ಬೀಜ ತಿನ್ನುವಾಗ ಬಾಯಲ್ಲಿ ರಸ ಹೀರಿ ಉಗುಳಿರುತ್ತವೆ. ಈ ಬೀಜಗಳು ಮಳೆ ಬಿದ್ದಾಗ ಚಿಗುರಿ ಮೊಳಕೆಯೊಡೆದು ಸಸಿಗಳಾಗುತ್ತವೆ. ಕೆಲವರು ಇಂತಹ ಸಸಿಗಳನ್ನು ಅರಸಿ ತಂದು ತಾವು ಬಿತ್ತನೆ ಮಾಡಬೇಕೆಂದಿರುವ ಜಾಗದಲ್ಲಿ ನೆಡುತ್ತಾರೆ. ಇದೂ ಸಹ ಉತ್ತಮ ಬೆಳೆಯನ್ನು ನೀಡುತ್ತದೆ.[೫೩] ಜಿಲ್ಲೆಯ ಸಕಲೇಶಪುರ, ಬೇಲೂರು ಮತ್ತು ಅರಕಲಗೂಡು ತಾಲೂಕುಗಳಲ್ಲಿ ಏಲಕ್ಕಿ ಬೆಳೆ ಅಲ್ಲದೆ ಮೆಣಸು ಮತ್ತು ಕಾಫಿಯನ್ನು ಬೆಳೆಯಲಾಗುತ್ತದೆ.

ಕಾಫಿ

ಹಾಸನ ಜಿಲ್ಲೆಯ ಸಕಲೇಶಪುರ, ಬೇಲೂರು, ಆಲೂರು ಮತ್ತು ಅರಕಲಗೂಡು ತಾಲೂಕುಗಳಲ್ಲಿ ಕಾಫಿಯನ್ನು ಬೆಳೆಯಲಾಗುತ್ತದೆ. ಕಾಫಿ ಸಣ್ಣಮಧ್ಯಮ ಮತ್ತು ದೊಡ್ಡ ಬೆಳಗಾರರ ಉದ್ದಿಮೆ. ಕಾಫಿಯಲ್ಲಿ ೭೦ ಪ್ರಭೇದಗಳಿವೆ. ಇವುಗಳಲ್ಲಿ ಬಹಳ ಪ್ರಚರದಲ್ಲಿರುವ ತಳಿಗಳೆಂದರೆ ರೊಬಸ್ಟ ಮತ್ತು ಅರೇಬಿಕ. ಕಾಫಿ ಬೆಳೆಗೆ ಮಳೆ ಬೀಳುವ, ನೀರು ನಿಲ್ಲದಿರುವ ಪ್ರದೇಶ ಸೂಕ್ತವಾಗಿದೆ. ಸಮೃದ್ಧವಾಗಿ ಬೆಳೆದ ಗಿಡಗಳಿಂದ ಬಿತ್ತನೆಗೆ ಬೀಜ ಸಿದ್ಧಪಡಿಸಿಕೊಳ್ಳುತ್ತಾರೆ. ದೊಡ್ಡದಾಗಿ ಬೆಳೆದ ಹಣ್ಣುಗಳಿರುವ, ಗೊಂಚಲು ಒತ್ತಾಗಿರುವ ಗಿಡದ ತುಂಬ ಫಸಲಿರುವ ಗಿಡಗಳನ್ನು ಗಮನಿಸಿ ಅದರ ಕಾಫಿ ಹಣ್ಣುಗಳನ್ನು ಬಿಡಿಸಿ, ಸಿಪ್ಪೆಯನ್ನು ಕೈಯಿಂದ ತೆಗೆದು ಬೂದಿಯೊಂದಿಗೆ ಮಿಶ್ರ ಮಾಡಿ ೫ರಿಂದ ೬ ದಿನ ಒಣಗಿಸುತ್ತಾರೆ. ಅನಂತರ ಚೀಲದಲ್ಲಿ ತುಂಬಿಡುತ್ತಾರೆ. ನಂತರ ಅಗತ್ಯವಿರುವಷ್ಟು ಸ್ಥಳವನ್ನು ಚೌಕಾಕಾರದಲ್ಲಿ ಅಗೆದು ಮಡಿ ಮಾಡಿ ಅದಕ್ಕೆ ಕೊಟ್ಟಿಗೆ ಗೊಬ್ಬರ, ಕೆಂಪುಮಣ್ಣು, ಮರಳು ಇವುಗಳನ್ನು ಮಿಶ್ರ ಮಾಡಿ ಹಾಕುವರು. ಆ ಬಳಿಕ ಕಾಫಿ ಬೀಜಗಳನ್ನು

ಒಂದು ಅಂಗುಲದ ಅಂತರದಲ್ಲಿ ನೆಟ್ಟು, ಮಣ್ಣು ಮುಚ್ಚಿ, ಅದರ ಮೇಲೆ ಭತ್ತದ ಹುಲ್ಲನ್ನು ತೆಳುವಾಗಿ ಹರಡಿ, ಪ್ರತಿನಿತ್ಯ ತುಂತುರುನೀರು ಸಿಂಪಡಿಸುವರು ಬೀಜಗಳು ೪೦-೪೫ ದಿನಗಳಲ್ಲಿ ಮೊಳಕೆ ಕಟ್ಟುತ್ತವೆ. ಕಾಡುಮಣ್ಣು, ಕೆಂಪುಮಣ್ಣು, ಕೊಟ್ಟಿಗೆ ಗೊಬ್ಬರ, ಮರಳು, ನೀರು ಹಾಕಿ ಮೊಳೆತ ಬೀಜವನ್ನು ಒಂದು ಚೀಲದಲ್ಲಿ ಒಂದು ಬೀಜದಂತೆ ನೆಟ್ಟು, ಪ್ರತಿನಿತ್ಯ ತುಂತುರುನೀರು ಬಿಡುತ್ತಾರೆ. ಆಗ ಮೊಳಕೆ ಚಿಗುರಿ ಎಲೆ ಮೂಡುತ್ತದೆ. ಆರರಿಂದ ಎಂಟು ಎಲೆ ಬಂದಾಗ ತೋಟದಲ್ಲಿ ಒಂದು ಅಡಿ ಅಗಲವಿರುವ ಗುಂಡಿಗಳನ್ನು ತೋಡಿ ನೆಡುತ್ತಾರೆ. ಇದಕ್ಕೆ ಆಧಾರವಾಗಿ ಕೋಲು ಕೊಡುತ್ತಾರೆ.

ಕಾಫಿ ಬಿತ್ತನೆಯಲ್ಲಿ 'ನೆಲಪಾತಿ' ಎಂಬ ಮತ್ತೊಂದು ವಿಧಾನವಿದೆ. ಇದರಲ್ಲಿ ಮೊಳಕೆಗಳನ್ನು ನೇರವಾಗಿ ನೆಲದಲ್ಲಿಯೇ ಅಂದರೆ ಒಂದು ಅಡಿ ಅಂತರದಲ್ಲಿ ನೆಟ್ಟು ೪೦ರಿಂದ ೪೫ ದಿನ ಕಳೆದ ಮೇಲೆ ಕಿತ್ತು ತೋಟದಲ್ಲಿ ನೆಡುತ್ತಾರೆ.[೫೪] ಜಿಲ್ಲೆಯ ಸಕಲೇಶಪುರ, ಬೇಲೂರು ಮತ್ತು ಆಲೂರು ತಾಲೂಕುಗಳಲ್ಲಿ ಕಾಫಿ ಬೆಳೆಗಳಿಗೆ ಆ ಪ್ರದೇಶದಲ್ಲಿರುವ ಸಣ್ಣ ಸಣ್ಣ ಕೆರೆಗಳಿಂದ ನೀರನ್ನು ಹಾಯಿಸಿಕೊಳ್ಳುತ್ತಾರೆ. ಇದಕ್ಕಾಗಿ ಕೆರೆಗಳಿಗೆ ಮೋಟರ್‌ಗಳನ್ನಿಟ್ಟು ಪೈಪ್‌ಗಳನ್ನು ಅಳವಡಿಸಿರುತ್ತಾರೆ.

ಮೆಣಸು

ಕರಿಮೆಣಸು 'ಪೈಪರ್ ನಿಗ್ರಮ್' ಸಸ್ಯ ನಾಮದ 'ಪೈಪೆರೇಸೀ' ಕುಟುಂಬಕ್ಕೆ ಸೇರಿದ ಬಹುವಾರ್ಷಿಕ ಬಳ್ಳಿ. ಇದನ್ನು 'ಸಂಬಾರಗಳ ರಾಜ' ಎಂದು ಕರೆಯಲಾಗಿದೆ. ಇದು ವಿಶ್ವದ ಅತ್ಯಂತ ಹಳೆಯದಾದ ಸಾಂಬಾರವಸ್ತು. ಇದರ ಬಗ್ಗೆ ೧೦೦೦ ವರ್ಷಗಳಷ್ಟು ಪುರಾತನವಾದ ಸಂಸ್ಕೃತ ಉಲ್ಲೇಖಗಳು ಕಂಡುಬರುತ್ತವೆ.[೫೫]

ಕರಿಮೆಣಸು ಕವಲುಗಳನ್ನು ಹೊಂದಿರುವ ಬಳ್ಳಿಯಾಗಿದ್ದು, ನುಣುಪಾದ, ಎಲೆ ಕಂಕುಳಗಳಲ್ಲಿ ಉಬ್ಬಿದಂತಿರುವ ಗೆಣ್ಣುಗಳನ್ನುಳ್ಳ ಕಾಂಡದಿಂದ ಕೂಡಿರುತ್ತದೆ. ಈ ಬಳ್ಳಿಯು ಸುಮಾರು ೧೦ ಮೀಟರ್‌ವರೆಗೂ ತನ್ನ ಆಧಾರ ಬೇರುಗಳ ಸಹಾಯದಿಂದ ಮೇಲಕ್ಕೆ ಬೆಳೆಯಬಲ್ಲದು. ಅದರ ವಿಶಾಲವಾದ ಹೊಳಪಿನಿಂದ ಕೂಡಿರುವ ಹಸಿರಾದ ತುದಿಯಲ್ಲಿ ಚೂಪಾದ ತೊಟ್ಟುಗಳನ್ನು ಹೊಂದಿರುವ ಎಲೆಗಳು ಪರ್ಯಾಯ ರೀತಿಯಲ್ಲಿ ಜೋಡಣೆಯಾಗುತ್ತವೆ. ಸಣ್ಣದಾದ ತೊಟ್ಟಿಲ್ಲದ ಬಿಳಿಯ ಬಣ್ಣದ ಸುಮಾರು ೫೦ರಷ್ಟು ಹೂವುಗಳು ತೆನೆಯಲ್ಲಿ ತೂಗಾಡುತ್ತಿರುತ್ತವೆ. ಹಣ್ಣುಗಳ ಗೊಂಚಲು ಗುಂಡಾಗಿದ್ದು ಸುಮಾರು ೦.೫ರಿಂದ ೧ ಸೆಂ.ಮೀ. ದಪ್ಪವಿದ್ದು ಒಂದೊಂದೇ ಬೀಜವನ್ನು ಹೊಂದಿರುತ್ತವೆ.[೫೬]

ಕರಿಮೆಣಸು ಆರ್ದ್ರತೆಯಿಂದ ಕೂಡಿರುವ ಉಷ್ಣವಲಯದ ಸಸ್ಯವಾಗಿದ್ದು, ಮಳೆಯನ್ನು ಬಯಸುತ್ತದೆ. ಈ ಬೆಳೆಯು ೧೦°ರಿಂದ ೧೪° ಸೆಂಟಿಗ್ರೇಡ್ ಉಷ್ಣಾಂಶವನ್ನು ಪಡೆಯುತ್ತದೆ. ವಾರ್ಷಿಕ ಮಳೆಯ ಪ್ರಮಾಣ ೧೨೫ರಿಂದ ೨೦೦ ಸೆಂ.ಮೀ. ಸಮುದ್ರ ಮಟ್ಟದಿಂದ ಸುಮಾರು

೧೫೦೦ ಮೀಟರ್ ಎತ್ತರದವರೆಗಿನ ಪ್ರದೇಶಗಳಲ್ಲಿ ಬೇಸಾಯ ಮಾಡಬಹುದು. ಈ ಬೆಳೆಯು ದೀರ್ಘಕಾಲದ ಮಳೆಗಾಲ ಮತ್ತು ಹಿತಕರವಾದ ಉಷ್ಣಾಂಶವನ್ನು ಬಯಸುತ್ತದೆ. ಕರ್ನಾಟಕದ ಹಾಸನ ಜಿಲ್ಲೆಯ ಸಕಲೇಶಪುರ ಭಾಗದಲ್ಲಿ ಮೆಣಸಿನ ಬೆಳೆಗೆ ಸೂಕ್ತವಾದ ಪ್ರದೇಶವಾಗಿದ್ದು, ಇಂದಿಗೂ ಕರಿಮೆಣಸಿನ ಬಳ್ಳಿಗಳನ್ನು ನೋಡಬಹುದು. ಇದನ್ನು ಜೂನ್, ಜುಲೈ ತಿಂಗಳಿನಲ್ಲಿ ನಾಟಿ ಮಾಡುವುದು ಸೂಕ್ತ. ಇದರಲ್ಲಿ ಪಣಿಯಾರು ೧, ೨, ೩, ೪ ಎಂಬ ವಿವಿಧ ಮಾದರಿಯ ತಳಿಗಳಿವೆ.[೫೭]

ಹಣ್ಣುಗಳ ಬೆಳೆಗಳು

ಮಾವಿನ ಹಣ್ಣು

ಮಾವು ಭಾರತದ ಪ್ರಮುಖ ಹಣ್ಣಿನ ಬೆಳೆ. ಸಸ್ಯಗಳ ವೈಜ್ಞಾನಿಕ ವರ್ಗೀಕರಣದಲ್ಲಿ 'ಮ್ಯಾಂಗಿಫೆರಾ' ಜಾತಿಗೆ ಸೇರಿದೆ. ಇದರಲ್ಲಿ ೪೧ ಪ್ರಬೇಧಗಳಿವೆ. ಆದರೂ ಭಾರತದಲ್ಲಿ ಮಾಂಗಿಫೆರಾ, ಪೆಮಟಾಡ್ರಾ, ಮ್ಯಾಂಗಿಫೆರಾ, ಸಿಲ್ವಾಟಿಕಾ, ಮ್ಯಾಂಗಿಫೆರಾ, ಓಬ್ಲಾಂಂಜಿಪೋಲಿಯಾ, ಮ್ಯಾಂಗಿಫೆರಾಯನ, ಮ್ಯಾಮಜಿಫರಾ ಅನಡಮಾನಿಕೆ ಮತ್ತು ಮ್ಯಾಂಗಿಫೆರಾ ಇಂಡಿಕಾ ಎಂಬ ಪ್ರಬೇಧಗಳು ಕಂಡುಬರುತ್ತವೆ.[೫೮] ವಿಶ್ವದ ಒಟ್ಟು ಹಣ್ಣಿನ ಉತ್ಪಾದನೆಯ ಶೇ. ೨೫ರಷ್ಟು ಮಾವಿನ ಹಣ್ಣಿನ ಉತ್ಪಾದನೆ ಭಾರತದಲ್ಲಾಗುತ್ತದೆ. ಇದನ್ನು ಹಣ್ಣುಗಳ ರಾಜನೆಂದು ಕರೆಯಲಾಗುತ್ತದೆ.

ಮಾವು ಉಷ್ಣವಲಯ ಹಾಗೂ ಸಮಶೀತೋಷ್ಣ ವಲಯಗಳಲ್ಲಿ ಉತ್ತಮವಾಗಿ ಬೆಳೆಯುತ್ತದೆ. ಇದು ಸಮುದ್ರಮಟ್ಟದಿಂದ ೧,೪೦೦ ಮೀ. ಎತ್ತರದವರೆಗೂ ಬೆಳೆಯುತ್ತದೆ. ಹೂಬಿಡುವ ಸಮಯದಲ್ಲಿ ಅಧಿಕ ಆರ್ದ್ರತೆ, ಮಳೆ ಹಾಗೂ ಹಿಮ ಸುರಿಯುವುದು ಕಂಡುಬಂದಲ್ಲಿ ಹಾನಿಕಾರಕ. ಮಾವಿನ ಬೆಳೆಗೆ ೨೪°ರಿಂದ ೨೭° ಸೆಂಟಿಗ್ರೇಡ್ ಉಷ್ಣಾಂಶವು ಅನುಕೂಲಕರವಾಗಿರುತ್ತದೆ. ಆದರೂ ನಿರಂತರವಾಗಿ ನೀರಾವರಿ ಸೌಕರ್ಯವಿದ್ದಲ್ಲಿ ೪೮° ಸೆಂಟಿಗ್ರೇಡ್ ಉಷ್ಣಾಂಶ ತಡೆಯುವ ಶಕ್ತಿಯನ್ನು ಹೊಂದಿದೆ. ಅಧಿಕ ಉಷ್ಣಾಂಶ ಹಾಗೂ ಬಿರುಗಾಳಿಯು ಮಾವಿನ ಬೆಳೆಗೆ ಹಾನಿಕಾರಕ. ಹೂಬಿಡುವ ಸಮಯದಲ್ಲಿ ಮಳೆಯಾದರೆ ಕೀಟ ಮತ್ತು ರೋಗಗಳ ಭಾದೆಗೆ ತುತ್ತಾಗಿ ಕಾಯಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಮಾವನ್ನು ೨೫ರಿಂದ ೨೫೦ ಸೆಂ.ಮೀ. ಮಳೆಯಾಗುವ ಪ್ರದೇಶದಲ್ಲಿ ಬೆಳೆಯಲಾಗುತ್ತದೆ.[೫೯]

ಉಷ್ಣವಲಯದ ಹಣ್ಣಾಗಿರುವ ಮಾವು ಹಾಸನ ಜಿಲ್ಲೆಯ ಹವಾಗುಣಕ್ಕೆ ಹೊಂದಿಕೊಂಡಿದೆ. ಈ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಮಾವಿನ ಬೆಳೆ ಕಂಡುಬಂದರೂ ಪ್ರಮುಖವಾಗಿ ಬೇಲೂರು ಮತ್ತು ಅರಸೀಕೆರೆ ತಾಲೂಕುಗಳಲ್ಲಿ ಹೆಚ್ಚು ಬೆಳೆಯುತ್ತಾರೆ. ಕಣಕಟ್ಟೆಯ ಕ್ರಿ.ಶ. ೧೧೩೨ರ ಶಾಸನವು[೬೦] ಓರಿಯಕೆರೆಯ ಕಲ್ಲ ತೂಬಿನ ಮಾವಿನಗದ್ದೆಯನ್ನು ಉಲ್ಲೇಖಿಸಿದೆ. ಅಂದರೆ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಮಾವಿನ ಬೆಳೆ ಇರುವುದು ಗಮನಾರ್ಹ. ೧೯೯೪-

೯೫ನೆಯ ಸಾಲಿನಲ್ಲಿ ೩೫೮೮ ಹೆಕ್ಟೇರ್ ವಿಸ್ತೀರ್ಣದಲ್ಲಿ ೨೩೦೦೭ ಟನ್ ಮಾವಿನ ಹಣ್ಣನ್ನು ಉತ್ಪಾದಿಸಲಾಗಿದೆ.[೬೧] ನಂತರ ೨೦೧೧-೧೨ನೆಯ ಸಾಲಿನಲ್ಲಿ ೩೪೪೦೧.೦೦ ಟನ್‌ಗಳಷ್ಟು[೬೨] ಬೆಳೆಯಲಾಗಿದೆ. ಇಲ್ಲಿನ ಪ್ರಮುಖ ಮಾವಿನ ತಳಿಗಳೆಂದರೆ ತೋತಾಪುರಿ, ನೀಲಂ, ಬಂಗನಪಲ್ಲಿ ಮತ್ತು ರಸಪುರಿ ಇತ್ಯಾದಿ.

ಬಾಳೆ ಹಣ್ಣು

ಈ ಪ್ರದೇಶದ ನೀರಾವರಿ ಬೆಳೆಗಳಲ್ಲಿ ಬಾಳೆಯು ಪ್ರಮುಖವಾದುದು. ತೋಟ, ತರಕಾರಿ ಮತ್ತು ಹಣ್ಣಿನ ಬೆಳೆಯಾಗಿ, ಅದೇ ರೀತಿ ವಾಣಿಜ್ಯಬೆಳೆಯಾಗಿ ಬಾಳೆಗೆ ಇಲ್ಲಿ ಅಗ್ರಸ್ಥಾನವಿದೆ. ಇದಕ್ಕೆ "ಮ್ಯೂಸಾಸೆಫಿಯೆಂಟ ಒಂ"[೬೩] ಎಂಬ ವೈಜ್ಞಾನಿಕ ಹೆಸರು ಇದೆ. ಬಾಳೆಯು ೧೦ರಿಂದ ೧೨ ತಿಂಗಳಿನಷ್ಟು ದೀರ್ಘಾವಧಿಯ ಬೆಳೆಯಾಗಿದ್ದು, ಸರಾಸರಿ ಸುಮಾರು ೨೦°ಯಿಂದ ೩೦° ಸೆಂಟಿಗ್ರೇಡ್‌ಗೂ ಹೆಚ್ಚು ಉಷ್ಣಾಂಶದಲ್ಲಿ ಬೆಳೆಯುತ್ತಾರೆ. ಹಾಸನ ಜಿಲ್ಲೆಯು ಇದರ ಉತ್ಪಾದನೆಯಲ್ಲಿ ಪ್ರಮುಖಸ್ಥಾನ ಪಡೆದಿದೆ. ಅರಸೀಕೆರೆ ತಾಲೂಕಿನ ಕ್ರಿ.ಶ. ೧೨೭೬ರ ಉಂಡಿಗನಾಳು ಶಾಸನವೊಂದರಲ್ಲಿ[೬೪] ಬಾಳೆಯ ತೋಟದ ಮಾಹಿತಿ ಇದೆ. ಇವುಗಳಿಗೆ ಕೆರೆಯ ನೀರನ್ನು ಸಮರ್ಪಕವಾಗಿ ಹಾಯಿಸಿ ಅಧಿಕ ಉತ್ಪಾದನೆ ಮಾಡುತ್ತಾರೆ. ಈ ಬೆಳೆಯಲ್ಲಿ ವಿವಿಧ ರೀತಿಯ ತಳಿಗಳಿವೆ. ಅವುಗಳಲ್ಲಿ ಪಚ್ಚಬಾಳೆ, ರಸಬಾಳೆ, ಬೂದಬಾಳೆ, ನೇಂದ್ರಬಾಳೆ, ಏಲಕ್ಕಿಬಾಳೆ ಮತ್ತು ಪುಟ್ಟಬಾಳೆ ಇವು ಈ ಪ್ರದೇಶದಲ್ಲಿ ಹೆಚ್ಚುವರಿ ಫಸಲನ್ನು ನೀಡುತ್ತವೆ. ೧೯೯೪-೯೫ರ ಸಾಲಿನಲ್ಲಿ ೨೬೬೪ ಹೆಕ್ಟೇರ್ ಪ್ರದೇಶದಲ್ಲಿ ೩೭೦೨೩ ಟನ್ ಉತ್ಪಾದನೆಯಾಗಿದೆ.[೬೫] ೨೦೧೧-೧೨ನೆಯ ಸಾಲಿನಲ್ಲಿ ೧೨೨೧೭೦.೦೦ ಟನ್‌ಗಳಷ್ಟು[೬೬] ಆಗಿದೆ.

ಬಾಳೆಯನ್ನು ಬೇಸಾಯ ಮಾಡಲು ಸೂಕ್ತವಾದ ಕಂದುಗಳನ್ನು ಬಳಕೆ ಮಾಡಲಾಗುವುದು. ಬಾಳೆಕಂದುಗಳಲ್ಲಿ ಕತ್ತಿಕಂದು ಮತ್ತು ನೀರುಕಂದುಗಳೆಂಬ ಎರಡು ರೀತಿಯ ಕಂದುಗಳಿವೆ. ಕತ್ತಿ ಕಂದುಗಳು ಒಂದು ನಿರ್ದಿಷ್ಟ ಎತ್ತರದವರೆಗೆ ಕಿರಿದಾದ, ತೆಳುವಾದ ಎಲೆಯ ಅಲಗುಗಳನ್ನು ಹೊಂದಿದ್ದು, ಅನಂತರ ಬೆಳವಣಿಗೆಯಾಗುತ್ತವೆ. ಎಲೆಯ ಅಲಗುಗಳು ಹೆಚ್ಚಿನ ವಿಸ್ತೀರ್ಣ ಹೊಂದಿರುತ್ತವೆ. ಕತ್ತಿಕಂದುಗಳು ನೀರುಕಂದುಗಳಿಗಿಂತ ಸತ್ವಯುತವಾಗಿದ್ದು, ಗಾತ್ರದಲ್ಲಿ ದೊಡ್ಡದಿರುವ ಹಾಗು ಹೆಚ್ಚು ತೂಕ ಹೊಂದಿರುವ ಗೊನೆಗಳು ೧೧ ತಿಂಗಳ ಸಮಯದಲ್ಲಿ ಬೆಳವಣಿಗೆ ಹೊಂದುತ್ತವೆ. ನೀರುಕಂದುಗಳು ೧೫ ತಿಂಗಳಿಗಿಂತಲೂ ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತವೆ. ಸುಮಾರು ೮೦ರಿಂದ ೧೨೦ ಸೆಂ.ಮೀ. ಎತ್ತರವಿರುವ ಕತ್ತಿಕಂದುಗಳನ್ನು ನಾಟಿ ಮಾಡಲು ಬಳಕೆ ಮಾಡಬಹುದು.[೬೭]

ನಾಟಿ ಮಾಡಲು ೪೫ರಿಂದ ೬೦ ಘನ ಸೆಂ.ಮೀ. ಗಾತ್ರದ ಗುಂಡಿಯನ್ನು ತೆಗೆಯಬೇಕು. ಈ ಗುಂಡಿಯಲ್ಲಿ ಸಮಪ್ರಮಾಣದಲ್ಲಿ ಮಿಶ್ರ ಮಾಡಿದ ಕೊಟ್ಟಿಗೆ ಗೊಬ್ಬರ ಮತ್ತು ಮೇಲ್ಮಣ್ಣನ್ನು ತುಂಬಬೇಕು. ಗುಂಡಿಯ ಮಧ್ಯಭಾಗದಲ್ಲಿ ಒಂದು ಕಾಂಡವನ್ನು ನಾಟಿ ಮಾಡಿ ಬುಡದ ಸುತ್ತಲೂ

ಮಣ್ಣನ್ನು ಅದುಮಬೇಕು. ನಂತರ ಮಳೆ ಇಲ್ಲದಿದ್ದಲ್ಲಿ ನೀರು ಹಾಯಿಸಬೇಕು. ಅಧಿಕ ಮಳೆ ಬೀಳುವ ಅವಧಿಯನ್ನು ಹೊರತುಪಡಿಸಿ ವರ್ಷಪೂರ್ತಿ ನೀರಾವರಿ ಅಗತ್ಯವಿದೆ.

ಕಿತ್ತಲೆ ಹಣ್ಣು

ಹಾಸನ ಜಿಲ್ಲೆಯ ಮಲೆನಾಡು ಪ್ರದೇಶಗಳಾದ ಸಕಲೇಶಪುರ, ಬೇಲೂರು ಮತ್ತು ಆಲೂರು ತಾಲೂಕುಗಳಲ್ಲಿ ಕಾಫಿಯ ತೋಟದಲ್ಲಿ ಪ್ರಮುಖವಾಗಿ ಬೆಳೆಯುವ ಹಣ್ಣಿನ ಬೆಳೆ ಎಂದರೆ ಕಿತ್ತಲೆ. ಶಾಸನಗಳಲ್ಲಿ[೬೮] ಕಿತ್ತಲೆ ಹಣ್ಣಿನ ಉಲ್ಲೇಖಗಳು ದೊರಕುತ್ತವೆ. ಈ ಹಣ್ಣಿನಲ್ಲಿ ಎರಡು ಜಾತಿಯ ತಳಿಗಳಿವೆ. ಒಂದು ಸಿಪ್ಪೆಯು ತೆಳ್ಳಗಿದ್ದು, ಹಣ್ಣು ತಟ್ಟೆಯಾಗಿರುವುದು ಮತ್ತೊಂದು ಸಿಪ್ಪೆಯು ದಪ್ಪವಾಗಿದ್ದು ಹಣ್ಣು ಸಡಿಲವಾಗಿರುವುದು. ಇದರಲ್ಲಿ ಮೊದಲನೆಯ ಜಾತಿಯನ್ನು ಹಾಸನ ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಈ ಹಣ್ಣನ್ನು ವರ್ಷದಲ್ಲಿ ಎರಡು ಸಲ ಕೊಯ್ಲು ಮಾಡುತ್ತಾರೆ. ಮೊದಲು ಕೊಯ್ಲು ಮಾಡಿದ ಹಣ್ಣು ಜನವರಿಯಿಂದ ಏಪ್ರಿಲ್‌ವರೆಗೆ, ಹಾಗೂ ಎರಡನೆಯ ಸಲ ಕೊಯ್ಲು ಮಾಡಿದ ಹಣ್ಣು ಅಕ್ಟೋಬರ್ ತಿಂಗಳಿನಿಂದ ಡಿಸೆಂಬರ್‌ವರೆಗೆ ಮಾರಾಟಕ್ಕೆ ಲಭ್ಯವಿರುತ್ತದೆ. ೧೯೯೪-೯೫ರ ಸಾಲಿನಲ್ಲಿ ೧೭೦೧ ಹೆಕ್ಟೆರ್ ಪ್ರದೇಶದಲ್ಲಿ ೧೪೮೯೬ ಟನ್‌ಗಳಷ್ಟು ಕಿತ್ತಲೆ ಹಣ್ಣು ಉತ್ಪಾದನೆಯಾಗಿತ್ತು.[೬೯]

ಸಪೋಟ ಹಣ್ಣು

ಸಪೋಟವು ನಿಧಾನವಾಗಿ ಬೆಳೆಯುವ ನಿತ್ಯ ಹಸಿರಿನ ಮರ. ಇದು ಸುಮಾರು ೯ ಮೀಟರ್ ಎತ್ತರದವರೆಗೂ ಬೆಳೆಯುತ್ತದೆ. ಪ್ರಧಾನ ಕಾಂಡವು ಸತ್ವಯುತವಾಗಿದ್ದು, ಗಿಡ್ಡದಾಗಿರುತ್ತದೆ. ಕವಲುಗಳು ಸಮಮಟ್ಟದಲ್ಲಿ ವರ್ತುಲಗಳಲ್ಲಿ ಸ್ವಲ್ಪಮಟ್ಟದಲ್ಲಿ ನಿರ್ದಿಷ್ಟ ಅಂತರದಲ್ಲಿ ಹರಡಿಕೊಳ್ಳುತ್ತವೆ. ಹಣ್ಣುಗಳು ಬೀಜದಿಂದ ಕೂಡಿದ್ದು, ಮೊಟ್ಟೆ ಆಕಾರ ಅಥವಾ ಗುಂಡಗಿರುತ್ತವೆ. ಹಣ್ಣಿನ ಸಿಪ್ಪೆಯು ಒರಟಾಗಿದ್ದು, ಆಲೂಗಡ್ಡೆಯ ಸಿಪ್ಪೆಯ ರೀತಿ ಸ್ವಲ್ಪ ಮಟ್ಟಿಗೆ ಇರುತ್ತದೆ. ಪ್ರತಿಯೊಂದು ಹಣ್ಣು ೩ರಿಂದ ೫ ಅಥವಾ ಅದಕ್ಕೂ ಹೆಚ್ಚು ಕಪ್ಪುಬಣ್ಣದ ಹೊಳಪಿನಿಂದ ಕೂಡಿದ ಬೀಜವನ್ನು ಹೊಂದಿರುತ್ತದೆ. ಬೀಜಗಳಿಲ್ಲದ ಹಣ್ಣುಗಳು ಕೂಡ ಸಾಮಾನ್ಯವಾಗಿ ಕಂಡುಬರುತ್ತವೆ.

ಸಪೋಟ ಬೆಳೆಯು ಅಧಿಕ ಆರ್ದ್ರತೆ, ಅಧಿಕ ಮಳೆಯ ಪ್ರಮಾಣ ಮತ್ತು ಸ್ವಲ್ಪ ಪ್ರಮಾಣ ಚಳಿಯನ್ನು ಬಯಸುತ್ತದೆ. ಈ ಬೆಳೆಯ ಬೆಳವಣಿಗೆಗೆ ೧೧°ಯಿಂದ ೩೪° ಸೆಂಟಿಗ್ರೇಡ್ ಉಷ್ಣಾಂಶದ ಅವಶ್ಯಕತೆಯಿದೆ.[೨೦] ಹಾಸನ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಸಾಮಾನ್ಯವಾಗಿ ಸಪೋಟ ಬೆಳೆ ಕಂಡುಬಂದಿದೆ. ೨೦೧೧-೧೨ರ ಸಾಲಿನಲ್ಲಿ ಆಲೂರು ತಾಲೂಕಿನಲ್ಲಿ ೨೮೭೩.೦೦ ಟನ್, ಅರಕಲಗೂಡು ತಾಲೂಕಿನಲ್ಲಿ ೯೦೦.೦೦ ಟನ್, ಅರಸೀಕೆರೆ ತಾಲೂಕಿನಲ್ಲಿ ೧೨೬೦.೦೦ ಟನ್, ಬೇಲೂರು ತಾಲೂಕಿನಲ್ಲಿ ೬೦೦.೦೦ ಟನ್, ಚನ್ನರಾಯಪಟ್ಟಣ ತಾಲೂಕಿನಲ್ಲಿ ೧೩೦೦.೦೦ ಟನ್, ಹಾಸನ ತಾಲೂಕಿನಲ್ಲಿ ೨೨೫೫.೦೦ ಟನ್ ಹಾಗೂ ಸಕಲೇಶಪುರ ತಾಲೂಕಿನಲ್ಲಿ ೧೩೫೦.೦೦ ಟನ್‌ಗಳಷ್ಟು ಉತ್ಪಾದನೆಯಾಗಿದೆ.[೨೧]

ಸಪೋಟ ಬೆಳೆಯನ್ನು ಬೆಳೆಯಲು ಮೊದಲು ಭೂಮಿಯನ್ನು ಉಳುಮೆ ಮಾಡಿ, ಸಮತಟ್ಟು ಮಾಡಿಕೊಂಡಿರಬೇಕು. ಬೇಸಿಗೆಯಲ್ಲಿ ಗಿಡದಿಂದ ಗಿಡಕ್ಕೆ ೮ರಿಂದ ೧೦ ಮೀಟರ್ ಅಂತರವಿರುವಂತೆ ಗುರುತುಮಾಡಿ ೬೦ ಘನ ಸೆಂ.ಮೀ. ಗಾತ್ರದ ಗುಂಡಿಗಳನ್ನು ಸಿದ್ಧಪಡಿಸಿಕೊಳ್ಳಬೇಕು. ನಂತರ ಚೆನ್ನಾಗಿ ಕಳಿತ ಕೊಟ್ಟಿಗೆ ಗೊಬ್ಬರ ಹಾಗೂ ಮೇಲ್ಮಣ್ಣನ್ನು ೧:೨ ಅನುಪಾತದಲ್ಲಿ ಮಿಶ್ರ ಮಾಡಿ ಗುಂಡಿಗೆ ತುಂಬಬೇಕು. ಮುಂಗಾರು ಪ್ರಾರಂಭವಾದಾಗ ನಾಟಿ ಮಾಡುವುದು ಸೂಕ್ತ.

ಪರಂಗಿ(ಪಪ್ಪಾಯಿ)

ಇದು ಒಂದು ವಾಣಿಜ್ಯ ಹಣ್ಣಿನ ಬೆಳೆಯಾಗಿದೆ. ಸಣ್ಣ ಆಕಾರದ, ನಿತ್ಯ ಹಸಿರಿನ ನೇರವಾಗಿ ಬೆಳವಣಿಗೆ ಹೊಂದುವ ಸಸ್ಯ. ಕಾಂಡವು ಟೊಳ್ಳಾದ ಮೆದು ಕಾಂಡವಾಗಿದೆ. ಹಣ್ಣುಗಳು ಸಾಮಾನ್ಯವಾಗಿ ಅಂಡಾಕಾರವಿದ್ದರೆ, ದ್ವಿಲಿಂಗ ಹೂಗಳಿಂದ ಬೆಳವಣಿಗೆಯಾಗುವ ಹಣ್ಣುಗಳು ಪೇರು ಹಣ್ಣಿನ ಆಕಾರವಿದ್ದು ಸಿಲಿಂಡರ್ ರೀತಿಯಲ್ಲಿರುತ್ತವೆ. ಹಣ್ಣಿನ ಸಿಪ್ಪೆಯು ಮೃದುವಾಗಿ ಹಸಿರಾಗಿದ್ದು, ಹಣ್ಣು ಪಕ್ವವಾದಂತೆ ಹಳದಿ ಮತ್ತು ಕಿತ್ತಳೆ ಬಣ್ಣ ಹೊಂದುತ್ತವೆ. ಹಣ್ಣಿನ ತಿರುಳು ಕಿತ್ತಲೆ ಅಥವಾ ಕೆಂಪು ಮಿಶ್ರಿತ ಕಿತ್ತಳೆ ಬಣ್ಣವಿದ್ದು, ಕೆಲವೊಮ್ಮೆ ಹಳದಿ ಬಣ್ಣವಿರುತ್ತದೆ. ಹಣ್ಣಿನ ಮಧ್ಯಭಾಗವು ಟೊಳ್ಳಾಗಿದ್ದು, ಕೋನಗಳಲ್ಲಿರುತ್ತವೆ.

ಪರಂಗಿ ಹಣ್ಣನ್ನು ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲಿ ಬೆಳೆಯಲಾಗುತ್ತದೆ. ಈ ಬೆಳೆಗೆ ೨೨°ರಿಂದ ೨೬° ಸೆಂಟಿಗ್ರೇಡ್ ಉಷ್ಣಾಂಶವು ಅನುಕೂಲಕರವಾಗುತ್ತದೆ. ವಾರ್ಷಿಕವಾಗಿ ಮಳೆಯ ಪ್ರಮಾಣವು ೧೫೦೦ ರಿಂದ ೧೮೦೦ ಮಿ.ಮೀ. ಅಗತ್ಯವಿದೆ.[೨] ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕನ್ನು ಹೊರತುಪಡಿಸಿ ಉಳಿದ ತಾಲೂಕುಗಳಲ್ಲಿ ಪರಂಗಿ ಬೆಳೆ ಕಂಡುಬಂದಿದೆ. ೨೦೧೧-೧೨ನೆಯ ಸಾಲಿನ ಅಂಕಿ-ಅಂಶಗಳನ್ನು ಗಮನಿಸಿದಾಗ ಆಲೂರು ೧೦೪೦.೦೦ ಟನ್, ಅರಕಲಗೂಡು ತಾಲೂಕಿನಲ್ಲಿ ೮೫೦.೦೦ ಟನ್, ಅರಸೀಕರೆ ತಾಲೂಕಿನಲ್ಲಿ ೯೦೯.೦೦ ಟನ್, ಬೇಲೂರು ತಾಲೂಕಿನಲ್ಲಿ ೧೬೮೦.೦೦ ಟನ್, ಚನ್ನರಾಯಪಟ್ಟಣ ತಾಲೂಕಿನ ಹಾಗು ಹೊಳೆನರಸೀಪುರ ತಾಲೂಕಿನಲ್ಲಿ ೩೩೬.೦೦ ಟನ್‌ಗಳಷ್ಟು ಪರಂಗಿ ಹಣ್ಣಿನ ಉತ್ಪಾದನೆ ಕಂಡುಬಂದಿದೆ.[೩]

ಪರಂಗಿ ಸಸಿಗಳನ್ನು ನಾಟಿ ಮಾಡಲು ಸಾಲಿನಿಂದ ಸಾಲಿಗೆ ೧.೮ ಮೀ. ಹಾಗು ಗಿಡದಿಂದ ಗಿಡಕ್ಕೆ ೧.೮ ಮೀ. ಅಂತರ ಇರುವಂತೆ ೪೫ ಘನ ಸೆಂ.ಮೀ. ಗಾತ್ರದ ಗುಂಡಿಗಳನ್ನು ತೆಗೆದುಕೊಳ್ಳಬೇಕು. ನಂತರ ಅದಕ್ಕೆ ಚೆನ್ನಾಗಿ ಕಳಿತ ಗೊಬ್ಬರ ಮತ್ತು ಗುಂಡಿಯ ಮೇಲ್ಮಣ್ಣಿನಿಂದ ೧:೩ ಅನುಪಾತದಲ್ಲಿ ಮಿಶ್ರ ಮಾಡಿ ತುಂಬಬೇಕು. ಸಸಿಗಳನ್ನು ಮಳೆಗಾಲದ ಪ್ರಾರಂಭದಲ್ಲಿ ಅಥವಾ ಮೋಡ ಕವಿದ ವಾತಾವರಣದಲ್ಲಿ ನಾಟಿ ಮಾಡುವುದು ಉತ್ತಮ.

ಪೈನಾಪಲ್(ಅನಾನಸ್)

ಪೈನಾಪಲ್ ಉಷ್ಣವಲಯದ ಏಕದಳ ಗುಂಪಿಗೆ ಸೇರಿದ ಹಣ್ಣಿನ ಬೆಳೆಯಾಗಿದೆ. ಈ

ಬೆಳೆಯು ೨೦°ರಿಂದ ೪೦° ಸೆಂಟಿಗ್ರೇಡ್ ಉಷ್ಣಾಂಶವನ್ನು ತಡೆಯುವ ಶಕ್ತಿ ಹೊಂದಿದ್ದರೂ, ೧೮ರಿಂದ ೨೦° ಸೆಂಟಿಗ್ರೇಡ್ ಉಷ್ಣಾಂಶವು ಸೂಕ್ತವಾಗಿರುತ್ತದೆ.[೪೪] ಜಿಲ್ಲೆಯ ಬೇಲೂರು ಮತ್ತು ಸಕಲೇಶಪುರ ಭಾಗಗಳಲ್ಲಿ ಮಾತ್ರ ನೋಡಬಹುದಾಗಿದೆ. ೨೦೧೧-೧೨ನೆಯ ಸಾಲಿನ ಅಂಕಿ-ಅಂಶಗಳ ಪ್ರಕಾರ ಬೇಲೂರು ತಾಲೂಕಿನಲ್ಲಿ ೧೩೦.೦೦ ಟನ್ ಮತ್ತು ಸಕಲೇಶಪುರ ತಾಲೂಕಿನಲ್ಲಿ ೧೭೦೦.೦೦ ಟನ್‌ಗಳಷ್ಟು ಉತ್ಪಾದನೆಯಾಗಿದೆ ಎಂದು ವರದಿ ಮಾಡಲಾಗಿದೆ.[೪೫]

ನೀರಾವರಿ ಸೌಕರ್ಯವಿದ್ದಲ್ಲಿ ವರ್ಷದ ಯಾವುದೇ ಕಾಲದಲ್ಲಿ ನಾಟಿ ಮಾಡಬಹುದು. ನಾಟಿಗೆ ಮೊದಲು, ನಾಟಿಗೆ ಬಳಕೆ ಮಾಡುವ ಸಸ್ಯದ ಭಾಗಗಳನ್ನು ಬಿಸಿಲಿನಲ್ಲಿ ೮ರಿಂದ ೧೦ ದಿನಗಳ ಕಾಲ ಒಣಗಿಸಬೇಕು. ಈ ರೀತಿ ಮಾಡುವುದರಿಂದ ಎಲೆಗಳ ಹುರುಪು ಇಲ್ಲದಂತಾಗಿ ನಾಟಿ ಮಾಡಲು ಸುಲಭವಾಗಿ ಬೇರುಗಳ ರಚನೆಗೆ ಅನುಕೂಲವಾಗುತ್ತದೆ. ನಾಟಿಯನ್ನು ೨೫x೩೫x೯೦ ಸೆಂ.ಮೀ. ಅಥವಾ ೨೫x ೩೫x೭೫ ಸೆಂ.ಮೀ. ಅಂತರದಲ್ಲಿ ಗುಂಡಿಗಳಲ್ಲಿ ನಾಟಿ ಮಾಡುವುದರಿಂದ ಅಧಿಕ ಇಳುವರಿಯನ್ನು ಪಡೆಯಬಹುದು.

ತರಕಾರಿ ಬೆಳೆಗಳು

ಆಲೂಗಡ್ಡೆ

ಭಾರತದಲ್ಲಿ ಆಲೂಗಡ್ಡೆಯನ್ನು ಬೆಳೆಯುವ ಪ್ರಮುಖ ಪ್ರದೇಶಗಳಲ್ಲಿ ಹಾಸನ ಜಿಲ್ಲೆಯೂ ಒಂದು. ಆಹಾರ ವಸ್ತುವಾಗಿ ಆಲೂಗಡ್ಡೆಗೆ ವಿಶಿಷ್ಟ ಮಹತ್ವವಿದೆ. ಇದು ಅತ್ಯಂತ ಹೆಚ್ಚು ಕ್ಯಾಲೊರಿಯನ್ನು ಹೊಂದಿದ್ದು ಪಿಷ್ಟಪೂರಿತವಾದ ತರಕಾರಿಯಾಗಿದೆ. ಹಾಸನದ ತರಕಾರಿ ರಾಜನೆಂದೇ ಹೆಸರುವಾಸಿಯಾಗಿರುವ ಆಲೂಗಡ್ಡೆಯನ್ನು ಹಾಸನ, ಬೇಲೂರು, ಆಲೂರು ಮತ್ತು ಅರಕಲಗೂಡು ತಾಲೂಕುಗಳಲ್ಲಿ ಬೆಳೆಯುತ್ತಾರೆ. ಇದು ಮಳೆ ಆಧಾರಿತ ಬೆಳೆ. ರೈತರು ಬೇಸಿಗೆ ಕಾಲದಲ್ಲಿ ಹೊಲವನ್ನು ಚೆನ್ನಾಗಿ ಉತ್ತು ಬಿಸಿಲಿನಲ್ಲಿ ಒಣಗಿಸುತ್ತಾರೆ. ಮುಂಗಾರು ಮಳೆ ಬಂದ ಕೂಡಲೇ ಇನ್ನೂ ಒಂದೆರಡು ಸಾರಿ ಉಳುಮೆ ಮಾಡಿ ಭೂಮಿಯನ್ನು ಹದ ಮಾಡುತ್ತಾರೆ. ಮೃಗಶಿರಾ, ಆರಿದ್ರಾ ಮಳೆಯಲ್ಲಿ ನಾಟಿ ಮಾಡುತ್ತಾರೆ. ಆಲೂಗಡ್ಡೆ ನೆಡಬೇಕಾದರೆ ಒಂದೂವರೆ ಅಡಿಗೊಂದರಂತೆ ನಾಟಿ ಮಾಡುತ್ತಾರೆ. ಅದರ ಮೇಲೆ ಮಣ್ಣು ಮುಚ್ಚಿ ಗೊಬ್ಬರ ಸುರಿದು ಚೆನ್ನಾಗಿ ನೆಲಸಮ ಮಾಡುತ್ತಾರೆ. ನಾಟಿ ಮಾಡಿದ ೨೦ ದಿನಕ್ಕೆ ಆಲೂಗಡ್ಡೆ ಮೊಳೆತು ೪ರಿಂದ ೫ ಇಂಚು ಎತ್ತರದ ಸಸಿಗಳು ಮೇಲೆ ಬರುತ್ತವೆ. ಆಗ ಎರಡು ಸಾಲಿನ ಮಧ್ಯದಲ್ಲಿ ಅದನ್ನು ಕುಂಟೆ ಹೊಡೆದು ಕಳೆ ತೆಗೆದು ಪೈರಿಗೆ ಮಣ್ಣು ಏರಿಸುತ್ತಾರೆ. ಇದೆಲ್ಲವೂ ೨೦ದಿವಸದಿಂದ ೪೦ ದಿವಸಗಳೊಳಗೆ ಮುಗಿಯುತ್ತದೆ. ಆಲೂಗಡ್ಡೆ ಕೇವಲ ೯೦ ದಿವಸಗಳ ಬೆಳೆಯಾದ್ದರಿಂದ ೪೦ನೆಯ ದಿವಸದಿಂದ ಇನ್ನೇನೂ ಬೇಸಾಯ ಮಾಡುವುದಕ್ಕಾಗುವುದಿಲ್ಲ. ೯೦ ದಿವಸಕ್ಕೆ ಆಲೂಗಡ್ಡೆ ಕಿತ್ತು ಮಾರುಕಟ್ಟೆ ಕಳುಹಿಸುತ್ತಾರೆ. ಈ ಭಾಗಕ್ಕೆ ಇದು ಹಣ ಗಳಿಸುವ ಬೆಳೆ. ಇದರ ಉತ್ಪಾದನೆ ೧೯೭೪-೭೫ನೆಯ ಸಾಲಿನಲ್ಲಿ

೧೮,೧೪೨ ಹೆಕ್ಟೇರ್ ಪ್ರದೇಶದಲ್ಲಿ ೭೬.೪೫೦ ಟನ್ ಇದ್ದರೆ,[೭೬] ೨೦೧೧-೧೨ನೆಯ ಸಾಲಿನಲ್ಲಿ ೩೨೩೮೫೧.೦೦ ಟನ್‌ಗಳಷ್ಟು ಬೆಳೆಯಲಾಗಿದೆ.[೭೭] ತರಕಾರಿ ಬೆಳೆಯುವ ಪ್ರದೇಶದಲ್ಲಿ ಶೇ. ೬೦ ಭಾಗದಷ್ಟು ಆಲೂಗಡ್ಡೆಯನ್ನೇ ಬೆಳೆಯುತ್ತಾರೆ. ಇದನ್ನು ಜೂನ್ ಅಥವಾ ಜುಲೈನಲ್ಲಿ ಬಿತ್ತಿ, ಅಕ್ಟೋಬರ್ ಅಥವಾ ನವಂಬರ್‌ನಲ್ಲಿ ಕೀಳುತ್ತಾರೆ. ವರ್ಷದಿಂದ ವರ್ಷಕ್ಕೆ ಇದರ ಉತ್ಪಾದನೆ ಮಾರುಕಟ್ಟೆಯ ಬೇಡಿಕೆ ಮತ್ತು ಬೆಲೆಯ ಅಸ್ಥಿರತೆಯಿಂದಾಗಿ ವ್ಯತ್ಯಾಸವಿರುತ್ತದೆ.

ಎಲೆಕೋಸು

ಎಲೆಕೋಸನ್ನು ಹಾಸನದಲ್ಲಿ ಚಳಿಗಾಲದ ತರಕಾರಿಯಾಗಿ ಬೆಳೆಯುತ್ತಾರೆ. ಇದು ಮುದ್ದೆಯಾಕಾರದಲ್ಲಿ ಇರುವುದರಿಂದ ಕೆಲವು ಕಡೆ ಮುದ್ದೆಕೋಸು ಎಂತಲೂ ಕರೆಯುತ್ತಾರೆ. ಎಲೆಕೋಸು ಕ್ರಿಮಿಕೀಟಗಳ ಬಾಧೆಗೆ ಬಹುಬೇಗ ತುತ್ತಾಗುವುದರಿಂದ ಉತ್ತಮಗುಣಮಟ್ಟದ ಎಲೆಕೋಸನ್ನು ಉತ್ಪಾದಿಸುವುದು ಪ್ರಯಾಸಕರವಾದ ಕಾರ್ಯ. ಜಿಲ್ಲೆಯ ಬೇಲೂರು, ಹಾಸನ, ಅರಕಲಗೂಡು ಮತ್ತು ಆಲೂರು ತಾಲೂಕುಗಳಲ್ಲಿ ಬೆಳೆಯುತ್ತಾರೆ. ಇದರ ಉತ್ಪಾದನೆ ೧೯೯೪-೯೫ನೇ ಸಾಲಿನಲ್ಲಿ ೧,೭೯೦ ಹೆಕ್ಟೇರ್ ಪ್ರದೇಶದಲ್ಲಿ ೯,೨೧೫ ಟನ್‌ಗಳಷ್ಟು ಬೆಳೆಯಲಾಗಿದೆ.[೭೮]

ಟೊಮಾಟೋ

ಟೊಮಾಟೋವನ್ನು ಎಲ್ಲ ಪ್ರದೇಶದಲ್ಲಿ ಬೆಳೆಯಬಹುದಾದರೂ ಸಹ ಉಷ್ಣವಲಯ ಸಮಶೀತೋಷ್ಣವಲಯದಲ್ಲಿರುವ ಬಯಲು ಸೀಮೆಯಲ್ಲಿ ಅಧಿಕವಾಗಿ ಬೆಳೆಯಲಾಗುತ್ತದೆ. ಹಾಸನ ಜಿಲ್ಲೆಯು ಟೊಮಾಟೋಗೆ ಸೂಕ್ತವಾದ ಪ್ರದೇಶ. ಇಲ್ಲಿ ವರ್ಷದ ಎಲ್ಲಾ ಕಾಲದಲ್ಲಿಯೂ ಇದನ್ನು ಬೆಳೆಯುತ್ತಾರೆ. ಆದರೆ ಬೃಹತ್ ಪ್ರಮಾಣದಲ್ಲಿ ನವೆಂಬರ್ ತಿಂಗಳಿನಿಂದ ಪ್ರಾರಂಭಿಸಿ ಫೆಬ್ರವರಿ ತಿಂಗಳವರೆಗೆ ಬೆಳೆಯುತ್ತಾರೆ. ಜಿಲ್ಲೆಯ ಅರಸೀಕೆರೆ, ಬೇಲೂರು, ಅರಕಲಗೂಡು, ಆಲೂರು ಮತ್ತು ಹೊಳೆನರಸೀಪುರದಲ್ಲಿ ಹೆಚ್ಚಾಗಿ ಕಾಣುತ್ತೇವೆ. ೧೯೯೪-೯೫ನೆಯ ಸಾಲಿನಲ್ಲಿ ೨೩೪೬ ಹೆಕ್ಟೇರ್ ಪ್ರದೇಶದಲ್ಲಿ ೨೬,೬೯೬ ಟನ್ ಉತ್ಪಾದನೆ ಮಾಡಲಾಗಿದೆ.[೭೯] ೨೦೧೧-೧೨ನೆಯ ಶಾಲಿನಲ್ಲಿ ೩೭೩೫೯.೦೦ ಟನ್‌ಗಳಷ್ಟು ಬೆಳೆಯಲಾಗಿದೆ.[೮೦] ಇದು ಬಹುಬೇಗ ಹಾಳಾಗುವ ಹಣ್ಣಾದ್ದರಿಂದ ರೈತರಿಗೆ ಒಳ್ಳೆಯ ಬೆಳೆ ಸಿಗಬೇಕಾದರೆ ವರ್ಷದ ಎಲ್ಲಾ ಕಾಲದಲ್ಲಿಯೂ ಪೂರೈಕೆ ಇರಬೇಕು.

ಗೆಣಸು

ಗೆಣಸು ಆದಿಮಾನವ ಕಾಲದಿಂದ ಮುಖ್ಯ ಆಹಾರವಾಗಿರುವುದು ಕಂಡುಬರುತ್ತದೆ. ಜಿಲ್ಲೆಯಲ್ಲಿನ ಅನುಕೂಲಕರ ಪರಿಸರ ಹಾಗೂ ಅಲ್ಲಿನ ಮಳೆ ಈ ಬೆಳೆಗೆ ವರದಾನದಂತಿದೆ. ರೈತರು ಹೊಲದ ಸುತ್ತ ಬಿತ್ತನೆ ಮಾಡಿ ಮಧ್ಯದಲ್ಲಿ ಗೆಣಸಿನ ಬಳ್ಳಿಯನ್ನು ಹಬ್ಬಿಸುತ್ತಾರೆ. ಗೆಣಸನ್ನು ಬಣ್ಣದ ಆಧಾರದ ಮೇಲೆ ಬಿಳಿ ಮತ್ತು ಕೆಂಪು ಎಂದು ವಿಂಗಡಿಸಲಾಗಿದೆ. ಸಿಹಿಗೆಣಸನ್ನು ಬೇಲೂರು, ಅರಕಲಗೂಡು, ಮತ್ತು ಸಕಲೇಶಪುರ ತಾಲೂಕುಗಳಲ್ಲಿ ಬೆಳೆಯುತ್ತಾರೆ. ೧೯೯೪-೯೫ರ ಸಾಲಿನಲ್ಲಿ ೩,೧೩೦ ಹೆಕ್ಟೇರ್‌ನಲ್ಲಿ ೧೬.೧೯೦ ಟನ್ ಉತ್ಪಾದನೆಯಾಗಿದೆ.[೮೧] ಈ ಜಿಲ್ಲೆಯ ಇತರ ಪ್ರಮುಖ ತರಕಾರಿಗಳೆಂದರೆ

ಹುರುಳಿಕಾಯಿ, ಸೌತೆಕಾಯಿ ಕುಂಬಳಕಾಯಿ ಇತ್ಯಾದಿ. ಕೆರೆಯ ನೀರು ಕೇವಲ ಕೃಷಿಗೆ ಮಾತ್ರ ಬಳಕೆಯಾಗದೆ ಇನ್ನಿತರ ಮೂಲಗಳಿಗೆ ಬಳಕೆಯಾಗುತ್ತಿದೆ.

೫.೩. ಮೀನುಗಾರಿಕೆ

ಜಿಲ್ಲೆಯ ಕೆರೆಗಳು ಮೀನುಗಾರಿಕೆಗೆ ವಿಶೇಷವಾಗಿ ನೆರವಾಗಿವೆ. ಇಲ್ಲಿ ಪಂಚಾಯಿತ್ ರಾಜ್ ಸಂಸ್ಥೆ ಮತ್ತು ಸಣ್ಣ ನೀರಾವರಿ ಇಲಾಖೆ ಮೀನುಗಾರಿಕೆಯನ್ನು ಬಹಳವಾಗಿ ಪ್ರೋತ್ಸಾಹಿಸುತ್ತಿವೆ. ಜಿಲ್ಲೆಯಲ್ಲಿ ೨೦೧೧-೧೨ನೆಯ ಸಾಲಿನಲ್ಲಿ ಪಂಚಾಯಿತ್ ರಾಜ್ ಸಂಸ್ಥೆಗೆ ಸೇರಿದ ೩೦೩೫ ಕೆರೆಗಳು ಮತ್ತು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಸೇರಿದ ೧೬೪ ಕೆರೆಗಳಲ್ಲಿ ಮೀನಿನ ಮರಿಗಳನ್ನು ಬಿಟ್ಟು ಬೆಳೆಸುತ್ತಾರೆ. ಈ ಕೆರೆಗಳನ್ನು ಇಲಾಖೆಯವರು ವಾರ್ಷಿಕವಾಗಿ ವಿಲೇವಾರಿ ಮಾಡುತ್ತಾರೆ. ಇದು ಆರ್ಥಿಕವಾಗಿ ತೊಂದರೆಯಲ್ಲಿರುವ ಗ್ರಾಮೀಣ ಮತ್ತು ನಗರ ಪ್ರದೇಶದ ಜನರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಟ್ಟಿದೆ. ಅಲ್ಲದೆ ಆಹಾರವು ಕೂಡ ಆಗಿದೆ. ೨೦೧೧-೧೨ ನೆಯ ಸಾಲಿನಲ್ಲಿ ೫೩೨೫ ಪೂರ್ಣಕಾಲಿಕ ಮತ್ತು ೧೬೫೦ ಅರೆಕಾಲಿಕ ಮೀನುಗಾರಿಕೆಯಲ್ಲಿ ತೊಡಗಿದ ಕುಟುಂಬಗಳಿವೆ.[೮೨]

೫.೩. ಪಶುಪಾಲನೆ

ವ್ಯವಸಾಯ ಪ್ರದೇಶವಾದ ಹಾಸನ ಜಿಲ್ಲೆಯಲ್ಲಿ ಪಶುಪಾಲನೆ ಅಗ್ಯವಾಗಿದೆ. ಕೃಷಿಕರು ಭೂಮಿಯನ್ನು ಉಳುಮೆ ಮಾಡಲು ಎತ್ತುಗಳನ್ನು ಹೆಚ್ಚಾಗಿ ಬಳಸಿದ್ದಾರೆ. ಈ ಜಾನುವಾರುಗಳಿಗೆ ಬೇಕಾದ ಮೇವು ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ಕೆರೆಗಳಿಂದ ಪೂರೈಸಲಾಗುತ್ತಿತ್ತು. ಇದರಿಂದ ಈ ಜಿಲ್ಲೆಯಲ್ಲಿ ದನ, ಎಮ್ಮೆ, ಕುರಿ, ಮೇಕೆ ಮತ್ತು ಕೋಳಿ ಸಾಕಾಣಿಕೆ ಗಣನೀಯವಾಗಿ ಕಂಡುಬಂದಿದೆ. ಪಶುಪಾಲನೆ ಇಲ್ಲದ ರೈತರ ಒಕ್ಕಲುತನ ಆಸಾಧ್ಯ. ಪಶುಪಾಲನೆಯೂ ರೈತರ ಬದುಕಿನಲ್ಲಿ ಮಹತ್ವದ್ದಾಗಿದೆ. ೨೦೧೦-೧೧ರ ಜಾನುವಾರು ಗಣತಿಯ ಪ್ರಕಾರ ೬,೩೩,೫೩೫ ದನಕರುಗಳು, ೧,೯೧,೪೮೪ ಎಮ್ಮೆಗಳು ಮತ್ತು ೨,೦೧,೧೫೫ ಕುರಿಗಳಿವೆ.[೮೩] ಜಿಲ್ಲೆಯಲ್ಲಿ ಕುರಿಗಳನ್ನು ಮಾಂಸಕ್ಕಾಗಿ ಸಾಕುತ್ತಾರೆ. ಕುರಿಯ ರೋಮದಿಂದ ಉಣ್ಣೆ ಮತ್ತು ಸೊಂಟದ ಬೆಲ್ಟ್ ತಯಾರಿಸುತ್ತಾರೆ. ಪಶುಪಾಲನೆಯತ್ತ ಜನರಿಗೆ ಆಸಕ್ತಿ ಮೂಡಿಸಲು, ಹೈನುಗಾರಿಕೆಯನ್ನು ವೃದ್ಧಿಪಡಿಸಲು ಜಿಲ್ಲೆಯ ವಿವಿಧ ಬ್ಯಾಂಕುಗಳು ಜಾನುವಾರುಗಳನ್ನು ಕೊಳ್ಳಲು ರೈತರಿಗೆ ಸಾಕಷ್ಟು ಸಾಲ ನೀಡುತ್ತವೆ. ಪಶುಗಳ ಆರೋಗ್ಯ ಸಂರಕ್ಷಣೆಗೆ ಅಗತ್ಯ ಕ್ರಮಕೈಗೊಳ್ಳಲಾಗುತ್ತದೆ. ಕಾಲ ಕಾಲಕ್ಕೆ ಸಾಂಕ್ರಾಮಿಕ ರೋಗಗಳ ತಡೆಗೆ ಚುಚ್ಚುಮದ್ದು ಹಾಕಲಾಗುತ್ತಿದೆ. ಮಿಶ್ರತಳಿಯ ಅಭಿವೃದ್ಧಿಗಾಗಿ ಕೃತಕ ಗರ್ಭಧಾರಣೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಈ ಪರಿಸರದ ಜನರು ಎಲ್ಲಾ ಸೌಲಭ್ಯವನ್ನು ಸದುಪಯೋಗ ಮಾಡಿಕೊಂಡು ಜಾನುವಾರುಗಳನ್ನು ಅಭಿವೃದ್ಧಿಪಡಿಸಿಕೊಂಡು ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳುತ್ತಿದ್ದಾರೆ.

ಕೆರೆಯ ನೀರು ಏಕದಳ, ದ್ವಿದಳ, ವಾಣಿಜ್ಯ ಮತ್ತು ತೋಟದ ಬೆಳೆಗಳಿಗೆ ಉಪಯುಕ್ತವಾಗಿದ್ದರು ಕೂಡ ಕೆರೆಯ ಬಯಲು ಪ್ರದೇಶದ ಭೂಮಿಗೆ ಹೆಚ್ಚು ಉಪಯುಕ್ತವಾಗಿದೆ ಎನ್ನಬಹುದು. ಇನ್ನಿತರ ಮೂಲಗಳಾದ ಮೀನುಗಾರಿಕೆ ಮತ್ತು ಪಶುಪಾಲನೆಗೆ ಕೆರೆಯ ನೀರು ಇಂದಿಗೂ ಬಳಕೆಯಾಗುತ್ತಿರುವುದು ಕಂಡುಬಂದಿದೆ. ಒಟ್ಟಾರೆಯಾಗಿ ಕೆರೆಯ ನೀರನ್ನು ಬಳಸಿಕೊಂಡು ಯಾವ ಯಾವ ಬೆಳೆಗಳನ್ನು ಬೆಳೆಯುತ್ತಾರೆ ಹಾಗೂ ಮೀನುಗಾರಿಕೆ ಮತ್ತು ಪಶುಪಾಲನೆಯ ಅಭಿವೃದ್ಧಿಯಲ್ಲಿ ಕೆರೆಯ ಪಾತ್ರವೇನು ಎಂಬುದನ್ನು ಈ ಅಧ್ಯಾಯದಿಂದ ತಿಳಿದುಕೊಳ್ಳಲಾಗಿದೆ.

ಅಡಿಟಿಪ್ಪಣಿಗಳು

೧. ರಮೇಶ್ ಸ.ಚಿ., ೨೦೧೧: ಕೃಷಿ: ಪಾರಂಪರಿಕ ಜ್ಞಾನ, ಪು.೫೩

೨. ಗುಡ್ಡದೀಶ್ವರಪ್ಪ ಹೆಚ್., ೨೦೧೦: ಬೆಂಗಳೂರು ಜಿಲ್ಲೆಯ ಶಾಸನಗಳು ಸಾಂಸ್ಕೃತಿಕ ಅಧ್ಯಯನ, ಪು.೮೭–೮೮

೩. ಅದೇ

೪. ಮಳಲಿ ವಸಂತಕುಮಾರ್(ಪ್ರಸಂ), ೧೯೯೬: ಹೊಯ್ಸಳ ಸಂಪದ, ಪು.೨೦

೫. ಎ.ಕ. ಸಂ.೮, ಹೊಳೆನರಸೀಪುರ ೧೩೫, ಪು.೯೬

೬. ಮಳಲಿ ವಸಂತಕುಮಾರ್(ಪ್ರಸಂ), ಪೂರ್ವೋಕ್ತ, ಪು.೨೦

೭. ಎ.ಕ. ಸಂ.೮, ಹೊಳೆನರಸೀಪುರ ೧೩೫, ಪು.೯೬

೮. ಎ.ಕ. ಸಂ.೯, ಬೇಲೂರು ೨೨೫, ಪು.೨೦೮

೯. ಅದೇ, ಬೇಲೂರು ೨೪೦, ಪು.೨೨೬

೧೦. ಎ.ಕ. ಸಂ.೯, ಬೇಲೂರು ೨೩೬, ಪು.೨೨೨

೧೧. ಎ.ಕ. ಸಂ.೮, ಹಾಸನ ೮೮, ಪು.೩೦೧

೧೨. ಎ.ಕ. ಸಂ.೧೦, ಅರಸೀಕೆರೆ ೨೨೪, ಪು.೨೭೩

೧೩. ಅದೇ, ಅರಸೀಕೆರೆ ೫೨, ಪು.೭೩

೧೪. ಅದೇ, ಅರಸೀಕೆರೆ ೧೬೧, ಪು.೨೧೪

೧೫. ಅದೇ, ಅರಸೀಕೆರೆ ೧೭೪, ಪು.೨೨೭

೧೬. ಅದೇ, ಅರಸೀಕೆರೆ ೩೨೬

೧೭. ಅದೇ, ಅರಸೀಕೆರೆ ೬೦, ಪು.೮೮

೧೮. ಅದೇ, ಅರಸೀಕೆರೆ ೩೯, ಪು.೫೨

೧೯. ಸ್ಪರ್ಧಾಸ್ಫೂರ್ತಿ, ಜನವರಿ, ೨೦೧೦ರ ನಿಯತಕಾಲಿಕೆ, ಪು.೮೫

೨೦. ಕೃಷಿ ಇಲಾಖೆಯ ವರದಿ, ೨೦೧೧-೧೨, ಹಾಸನ

೨೧. ಪಾರ್ಥಸಾರಥಿ ಟಿ.ಎ., ೨೦೦೮: ಮಂಡ್ಯ ಜಿಲ್ಲೆ ಗ್ಯಾಸೆಟಿಯರ್, ಪು.೨೦೬

೨೨. ರಮೇಶ್ ಸ.ಚಿ., ಪೂರ್ವೋಕ್ತ, ಪು.೬೧

೨೩. ಎ.ಕ. ಸಂ.೮, ಹಾಸನ ೯೫, ಪು.೩೦೮

೨೪. ಮಳಲಿ ವಸಂತಕುಮಾರ್(ಪ್ರ.ಸಂ), ಪೂರ್ವೋಕ್ತ, ಪು.೪೧೬

೨೫. ರಮೇಶ್ ಸ.ಚಿ., ಪೂರ್ವೋಕ್ತ, ಪು.೫೮

೨೬. ಸ್ಪರ್ಧಾಸ್ಫೂರ್ತಿ, ಪೂರ್ವೋಕ್ತ, ಪು.೮೬

೨೭. ಅದೇ

೨೮. ಕೃಷಿ ಇಲಾಖೆಯ ವರದಿ, ೨೦೧೧-೧೨, ಹಾಸನ

೨೯. ಮಳಲಿ ವಸಂತಕುಮಾರ್(ಪ್ರ.ಸಂ), ಪೂರ್ವೋಕ್ತ, ಪು.೨೭

೩೦. ಸಂಪದ್ಗಿರಿ ರಾವ್ ಕೆ.(ಸಂ), ೨೦೦೬: ಕರ್ನಾಟಕ ಪರಂಪರೆ, ಸಂಪುಟ-೧, ಪು.೬೫

೩೧. ಮಳಲಿ ವಸಂತಕುಮಾರ್(ಪ್ರ.ಸಂ), ಪೂರ್ವೋಕ್ತ, ಪು.೯೪೪

೩೨. ಸ್ಪರ್ಧಾಸ್ಫೂರ್ತಿ, ಪೂರ್ವೋಕ್ತ, ಪು.೮೫

೩೩. ಕೃಷಿ ಇಲಾಖೆಯ ವರದಿ, ಹಾಸನ

೩೪. ಬುಕಾನನ್ ಫ್ರಾನ್ಸಿಸ್, ಸಂ.೩, ಜರ್ನಿ ಫ್ರಮ್ ಮದ್ರಾಸ್ ಥ್ರೋ ದ ಕಂಟೀಸ್ ಆಫ್ ಮೈಸೂರು, ಕೆನರಾ ಆ್ಯಂಡ್ ಮಲಬಾರ್, ಪು.೩೯೦

೩೫. ಕೃಷಿ ಇಲಾಖೆಯ ವರದಿ, ಹಾಸನ

೩೬. ಗೋಪಾಲ್ ಆರ್.(ಸಂ), ೨೦೦೯: ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.೫೭೦

೩೭. ಕೃಷಿ ಇಲಾಖೆಯ ವರದಿ, ೨೦೧೧-೧೨, ಹಾಸನ

೩೮. ರಮೇಶ್ ಸ.ಚಿ., ಪೂರ್ವೋಕ್ತ, ಪು.೬೬

೩೯. ಸಂಪದ್ಗಿರಿ ರಾವ್ ಕೆ.(ಸಂ), ಪೂರ್ವೋಕ್ತ, ಪು.೬೬

೪೦. ಸ್ಪರ್ಧಾಸ್ಫೂರ್ತಿ, ಪೂರ್ವೋಕ್ತ, ಪು.೯೦

೪೧. ರಮೇಶ್ ಸ.ಚಿ., ಪೂರ್ವೋಕ್ತ, ಪು.೬೬

೪೨. ಎ.ಕ. ಸಂ.೧೧, ಅರಸೀಕೆರೆ ೧೪೦, ಪು.೧೮೪

೪೩. ಅದೇ, ಅರಸೀಕೆರೆ ೯೬, ಪು.೧೩೦

೪೪. ಅದೇ, ಅರಸೀಕೆರೆ ೧೩೯, ಪು.೧೮೩

೪೫. ಎ.ಕ. ಸಂ.೮, ಹಾಸನ ೩೮, ಪು.೨೬೫

೪೬. ಸ್ಪರ್ಧಾಸ್ಫೂರ್ತಿ, ಪೂರ್ವೋಕ್ತ, ಪು.೯೦

೪೭. ರಂಗನಾಥ, ೨೦೦೬: ಭಾರತ ಪ್ರಾದೇಸಿಕ ಮತ್ತು ಆರ್ಥಿಕ ಭೂಗೋಳಶಾಸ್ತ್ರ, ಪು.೩೩೮

೪೮. ಕೃಷಿ ಇಲಾಖೆಯ ವರದಿ, ೨೦೦-೧೨, ಹಾಸನ

೪೯. ಮಳಲಿ ವಸಂತಕುಮಾರ್(ಪ್ರಸಂ), ಪೂರ್ವೋಕ್ತ, ಪು.೩೨೫

೫೦. ಕೃಷಿ ಇಲಾಖೆಯ ವರದಿ, ೨೦೧೧-೧೨, ಹಾಸನ

೫೧. ಮಳಲಿ ವಸಂತಕುಮಾರ್(ಪ್ರಸಂ), ಪೂರ್ವೋಕ್ತ, ಪು.೩೨೫

೫೨. ಅದೇ, ಪು.೩೨೭

೫೩. ರಮೇಶ್ ಸ.ಚಿ., ಪೂರ್ವೋಕ್ತ, ಪು.೬೫

೫೪. ಅದೇ, ಪು.೬೫

೫೫. ಮುನಿಸ್ವಾಮಿಗೌಡ ಕೆ.ಎನ್., ಹನುಮಂತ ರಾಜು ಟಿ.ಹೆಚ್., ೨೦೧೨: ತೋಟಗಾರಿಕೆ ಬೆಳೆಗಳ ಸಮಗ್ರ ಕೈಪಿಡಿ, ಪು.೫೩೯

೫೬. ಅದೇ

೫೭. ಅದೇ, ಪು.೫೩– ೫೪೦

೫೮. ಅದೇ, ಪು.೨

೫೯. ಅದೇ, ಪು.೨–೩

೬೦. ಎ.ಕ. ಸಂ.೧೧, ಅರಸೀಕೆರೆ ೯೬, ಪು.೧೩೦

೬೧. ಮಳಲಿ ವಸಂತಕುಮಾರ್(ಪ್ರಸಂ), ಪೂರ್ವೋಕ್ತ, ಪು.೩೦೭

೬೨. ಕೃಷಿ ಇಲಾಖೆಯ ವರದಿ, ೨೦೧೧-೧೨, ಹಾಸನ

೬೩. ಸ್ಪರ್ಧಾಸ್ಫೂರ್ತಿ, ಪೂರ್ವೋಕ್ತ, ಪು.೮೯

೬೪. ಎ.ಕ. ಸಂ.೧೦, ಅರಸೀಕೆರೆ ೨೪೮, ಪು.೩೨೦

೬೫. ಮಳಲಿ ವಸಂತಕುಮಾರ್(ಪ್ರ.ಸಂ), ಪೂರ್ವೋಕ್ತ, ಪು.೩೦೭

೬೬. ಕೃಷಿ ಇಲಾಖೆಯ ವರದಿ, ೨೦೧೧-೧೨, ಹಾಸನ

೬೭. ಮುನಿಸ್ವಾಮಿಗೌಡ ಕೆ.ಎನ್., ಹನುಮಂತ ರಾಜು ಟಿ.ಹೆಚ್., ಪೂರ್ವೋಕ್ತ, ಪು.೩೧

೬೮. ಎ.ಕ. ಸಂ.೧೦, ಅರಸೀಕೆರೆ ೧೫೩ ಪು.೨೦೦

೬೯. ಮಳಲಿ ವಸಂತಕುಮಾರ್(ಪ್ರ.ಸಂ), ಪೂರ್ವೋಕ್ತ, ಪು.೩೦೮

೭೦. ಮುನಿಸ್ವಾಮಿಗೌಡ ಕೆ.ಎನ್., ಹನುಮಂತ ರಾಜು ಟಿ.ಹೆಚ್., ಪೂರ್ವೋಕ್ತ, ಪು.೮೧

೭೧. ಕೃಷಿ ಇಲಾಖೆಯ ವರದಿ, ೨೦೧೧-೧೨, ಹಾಸನ

೭೨. ಮುನಿಸ್ವಾಮಿಗೌಡ ಕೆ.ಎನ್., ಹನುಮಂತ ರಾಜು ಟಿ.ಹೆಚ್., ಪೂರ್ವೋಕ್ತ, ಪು.೮೮

೭೩. ಕೃಷಿ ಇಲಾಖೆಯ ವರದಿ, ೨೦೧೧-೧೨, ಹಾಸನ

೭೪. ಮುನಿಸ್ವಾಮಿಗೌಡ ಕೆ.ಎನ್., ಹನುಮಂತ ರಾಜು ಟಿ.ಹೆಚ್., ಪೂರ್ವೋಕ್ತ, ಪು.೧೦೯

೭೫. ಕೃಷಿ ಇಲಾಖೆಯ ವರದಿ, ೨೦೧೧-೧೨, ಹಾಸನ

೭೬. ಮಳಲಿ ವಸಂತಕುಮಾರ್(ಪ್ರ.ಸಂ), ಪೂರ್ವೋಕ್ತ, ಪು.೩೦೫

೭೭. ಕೃಷಿ ಇಲಾಖೆಯ ವರದಿ, ೨೦೧೧-೧೨, ಹಾಸನ

೭೮. ಮಳಲಿ ವಸಂತಕುಮಾರ್(ಪ್ರ.ಸಂ), ಪೂರ್ವೋಕ್ತ, ಪು.೩೦೬

೭೯. ಅದೇ

೮೦. ಕೃಷಿ ಇಲಾಖೆಯ ವರದಿ, ೨೦೧೧-೧೨, ಹಾಸನ

೮೧. ಮಳಲಿ ವಸಂತಕುಮಾರ್(ಪ್ರ.ಸಂ), ಪೂರ್ವೋಕ್ತ, ಪು.೩೦೬

೮೨. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯ ವರದಿ, ೨೦೧೧-೧೨, ಹಾಸನ

೮೩. ಅದೇ

ಅಧ್ಯಾಯ – ಏಳು

ಸಮಾರೋಪ

ಅಧ್ಯಾಯ – ಏಳು

ಸಮಾರೋಪ

"ಹಾಸನ ಜಿಲ್ಲೆಯ ಕೆರೆಗಳು"(ಪುರಾತತ್ವ ಮತ್ತು ಸಾಂಸ್ಕೃತಿಕ ಅಧ್ಯಯನ) ಎಂಬ ಶೀರ್ಷಿಕೆಯ ಮಹಾಪ್ರಬಂಧದಲ್ಲಿ ಜಿಲ್ಲೆಯ ಕೆರೆಗಳ ಇತಿಹಾಸ, ತಾಂತ್ರಿಕತೆ ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ದಾಖಲಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ನೀರಿನ ಮಹತ್ವವನ್ನು ವಿಶ್ಲೇಷಿಸಲಾಗಿದೆ. ನೀರು ಭೂಮಿಯ ಸಕಲ ಜೀವರಾಶಿಗಳಿಗೂ ಆಧಾರ. ಜೀವ ಸೃಷ್ಟಿಗೆ ಅಲ್ಲದೆ ಜೀವಿಗಳ ಅಸ್ತಿತ್ವಕ್ಕೆ ನೀರು ಅಷ್ಟೇ ಮುಖ್ಯವಾಗಿದೆ. ಆಹಾರವಿಲ್ಲದೆ ಹಲವಾರು ವಾರ ಮನುಷ್ಯ ಬದುಕಬಲ್ಲ. ಆದರೆ ನೀರಿಲ್ಲದೆ ಎರಡು ಮೂರು ದಿನ ಮಾನವ ಬದುಕಲಾರ. ನಮ್ಮ ಶರೀರದಲ್ಲಿ ಶೇ. ೭೦ ಭಾಗ ನೀರು ಇದ್ದರೆ, ವೃಕ್ಷ ಮತ್ತು ಹಣ್ಣು ತರಕಾರಿಗಳಲ್ಲಿ ಶೇ. ೫೦ರಿಂದ ೬೯ ಭಾಗದಷ್ಟು ನೀರು ಇರುತ್ತದೆ. ಪ್ರಾಗೈತಿಹಾಸ ಕಾಲದ ಮಾನವ ನೀರು ಸಿಗುವ ಸ್ಥಳಗಳನ್ನೇ ತನ್ನ ನೆಲೆಗಳಾಗಿ ಮಾಡಿಕೊಂಡಿದ್ದನು. ನಂತರ ನಾಗರಿಕತೆ ಬೆಳೆದಂತೆ ಕೃಷಿಗೆ ನೀರನ್ನು ಸಂಗ್ರಹಿಸತೊಡಗಿದನು. ಅಂತಹ ಕೃತಕ ಸಂಗ್ರಹಗಳಾಗಿ ಕೆರೆ, ಕಟ್ಟೆ ಮತ್ತು ಬಾವಿಗಳನ್ನು ನಿರ್ಮಿಸಿಕೊಂಡಿರುವುದನ್ನು ಗಮನಿಸಬಹುದು. ಈ ಆಧಾರದ ಮೇಲೆ ಜಿಲ್ಲೆಯ ವಿವಿಧ ಕಾಲಘಟ್ಟಗಳಲ್ಲಿನ ಕೆರೆ ನೀರಾವರಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗಿದೆ.

ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚು ಕೆರೆಗಳನ್ನು ಹೊಂದಿದ ಜಿಲ್ಲೆ ಹಾಸನ. ಇಲ್ಲಿ ಸಣ್ಣ ಮತ್ತು ದೊಡ್ಡ ಕೆರೆಗಳು ಸಾಕಷ್ಟು ಕಂಡುಬಂದಿವೆ. ಇವುಗಳ ಸಮಗ್ರ ಅಧ್ಯಯನವನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಕೈಗೊಳ್ಳಲಾಗಿದೆ. ಕೆರೆಗಳ ನಿರ್ಮಾಣ, ಉದ್ದೇಶ, ನಿರ್ವಹಣೆ, ಕೆರೆಗಳನ್ನು ಕುರಿತಾದ ಐತಿಹ್ಯಗಳು, ಸಮಾಜದಲ್ಲಿ ಕೆರೆ ನೀರಿನ ಬಳಕೆಗೆ ಇದ್ದ ನಿಬಂಧನೆಗಳು, ಕೆರೆಯೊಂದಿಗಿನ ನಂಬಿಕೆ ಮತ್ತು ಆಚರಣೆಗಳು ಹಾಗು ಆರ್ಥಿಕತೆ ತಿಳಿಯುವ ಪ್ರಯತ್ನ ಮಾಡಲಾಗಿದೆ.

ಅಧ್ಯಯನದ ಫಲಿತಗಳು

* ಜಿಲ್ಲೆಯನ್ನು ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿದ್ದು, ಆಡಳಿತಾನುಕೂಲಕ್ಕಾಗಿ ೮ ತಾಲೂಕುಗಳಾಗಿ ಹಾಗು ಹಾಸನ ಮತ್ತು ಸಕಲೇಶಪುರವೆಂಬ ಎರಡು ಉಪವಿಭಾಗಗಳನ್ನಾಗಿ ಮಾಡಿ ಆಡಳಿತ ನಡೆಸಲಾಗುತ್ತದೆ. ಕೆರೆ, ಕಟ್ಟೆ, ಬಾವಿ ಮತ್ತು ನದಿಗಳು ಹರಿಯುತ್ತಿದ್ದು, ಕೆಲವು ಕೆರೆಗಳನ್ನು ಜೀವಂತವಾಗಿಸಿ ಕೃಷಿ ಚಟುವಟಿಕೆಗಳಿಗೆ ಅನುವು ಮಾಡಿಕೊಟ್ಟಿವೆ. ಹೆಚ್ಚಿನ ಕೆರೆಗಳು ಮಳೆ ಆಧಾರಿತವಾಗಿದ್ದು, ಅವುಗಳಿಂದ ಅಂತರ್ಜಲ ಮಟ್ಟ ಕಾಯ್ದುಕೊಳ್ಳಲು ಬೇಸಿಗೆಯಲ್ಲಿ ಕೆರೆ ಅಂಗಳದಲ್ಲಿ ನೀರನ್ನು ಸಂಗ್ರಹಿಸಲು, ನೀರಾವರಿ ಇಲಾಖೆಯವರು ತೂಬುಗಳನ್ನು ಮುಚ್ಚುವಂತೆ ಕ್ರಮಕೈಗೊಂಡಿದ್ದಾರೆ.

* ಪುರಾತನ ಕಾಲದಿಂದಲೂ ಭಾರತದ ಕೃಷಿಯಲ್ಲಿ ನೀರಾವರಿಯ ಬಳಕೆಯು ಕಂಡುಬಂದಿದೆ. ಕೆರೆ, ಕಟ್ಟೆ, ಬಾವಿ ಮತ್ತು ಕಾಲುವೆಗಳು ಬಹುಹಿಂದಿನಿಂದಲೂ ನೀರಾವರಿ ಮೂಲಗಳಾಗಿವೆ. ಇಲ್ಲಿಯವರೆಗೂ ದೊರಕಿರುವ ಪ್ರಾಕ್ತನ ನೆಲೆಗಳೆಲ್ಲವೂ ನದಿ ಅಥವಾ ನೀರಿನ ಆಶ್ರಯವಿರುವಂತಹ ಜಾಗಗಳಲ್ಲಿಯೇ ದೊರೆತಿದ್ದು, ಈ ವಾದವನ್ನು ಸಮರ್ಥಿಸುತ್ತದೆ. ಹಾಸನ ಪರಿಸರದ ಕೆಲವು ಕೆರೆಗಳ ಆಯಕಟ್ಟಿನ ಪ್ರದೇಶಗಳಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳು ಇಂದಿಗೂ ಸಿಗುತ್ತವೆ. ಬೇಲೂರು ತಾಲೂಕಿನ ಯಲಹಂಕ ಕೆರೆ ಅಚ್ಚುಕಟ್ಟಿನಲ್ಲಿ ಬೃಹತ್ ಶಿಲಾಯುಗದ ಶಿಲಾವೃತ್ತ ಸಮಾಧಿಗಳಿವೆ. ಈ ನೆಲೆಗಳ ಹಿನ್ನೆಲೆಯಲ್ಲಿ ಬೃಹತ್ ಶಿಲಾಯುಗದ ಕಾಲದಲ್ಲಿಯೇ ಸಣ್ಣ ಪ್ರಮಾಣದಲ್ಲಿ ಕೆರೆ ನಿರ್ಮಾಣವಾಗಿದ್ದು, ಅನಂತರದ ಕಾಲಘಟ್ಟದಲ್ಲಿ ವಿಸ್ತಾರವಾಗಿ ನಿರ್ಮಾಣವಾಗಿರಬಹುದು ಎನ್ನುವುದು ನನ್ನ ಗ್ರಹಿಕೆಯಾಗಿದೆ.

* ಪ್ರಸ್ತುತ ಅಧ್ಯಯನದಲ್ಲಿ ಅಧಿಕಾರಿಗಳು, ಜನಸಾಮಾನ್ಯರು, ವರ್ತಕರು, ಕೆರೆಗಳ ಬಗ್ಗೆ ಇರುವ ಐತಿಹ್ಯಗಳು, ಶಾಸನಗಳು, ವೀರಗಲ್ಲುಗಳು ಮತ್ತು ದೇವಾಲಯಗಳನ್ನು ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಅಲ್ಲದೇ ಇಲ್ಲಿನ ಭೌಗೋಳಿಕ ಲಕ್ಷಣಗಳನ್ನು ಗಮನಿಸಿಕೊಂಡು ಕೆರೆಗಳ ಅಧ್ಯಯನ ಮಾಡಲಾಗಿದೆ. ಈ ಪರಿಸರದಲ್ಲಿ ಅನೇಕ ರಾಜಮನೆತನಗಳು ಆಳ್ವಿಕೆ ನಡೆಸಿವೆ. ಅವರ ಆಳ್ವಿಕೆ ಅವಧಿಯಲ್ಲಿ ಹಲವಾರು ಕೆರೆಗಳು ಕಂಡುಬಂದಿವೆ. ಅವುಗಳಲ್ಲಿ ಹೆಚ್ಚಿನ ಕೆರೆಗಳು ಹೊಯ್ಸಳ ಕಾಲದಲ್ಲಿ ನಿರ್ಮಾಣವಾಗಿವೆ ಎಂಬ ಅಂಶವನ್ನು ಶಾಸನಾಧಾರಗಳಿಂದ ಅರಿಯಲಾಗಿದೆ. ಜಿಲ್ಲೆಯ ಬೇಲೂರು ಹೊಯ್ಸಳರ ರಾಜಧಾನಿಯಾಗಿತ್ತು ಎಂಬುದು ಗಮನಾರ್ಹ.

* ಜಿಲ್ಲೆಯಲ್ಲಿ ಕದಂಬರು, ಗಂಗರ ಕಾಲದ ಶಾಸನಗಳು ದೊರಕಿದ್ದು, ಹೊಯ್ಸಳರ ಪೂರ್ವದಲ್ಲೇ ಈ ಪರಿಸರದಲ್ಲಿ ಕೆರೆ ಕಟ್ಟೆಗಳು ನಿರ್ಮಾಣವಾಗಿದ್ದವು ಮತ್ತು ಕೃಷಿ ಚಟುವಟಿಕೆಗಳಿಗೆ ಚಾಲನೆ ದೊರಕಿತ್ತು ಎಂಬುದು ಸ್ಪಷ್ಟವಾಗುತ್ತದೆ. ಮುಂದೆ ವಿನಯಾದಿತ್ಯ ಮತ್ತು ಎರೆಯಂಗನ ಕಾಲದ ಶಾಸನಗಳಲ್ಲಿ ದಾನಗಳನ್ನು ಹೇಳುವಾಗ ಹೊಸದಾಗಿ ನಿರ್ಮಾಣಗೊಂಡ ಕೆರೆಗಳೊಂದಿಗೆ

ಅನೇಕ ಹಳೆಯ ಕೆರೆ ಕಟ್ಟೆಗಳ ಉಲ್ಲೇಖ ಮಾಡುತ್ತವೆ. ವಿನಯಾದಿತ್ಯನಿಂದ ಪ್ರಾರಂಭಿಸಿ, ಕೆರೆ ನಿರ್ಮಾಣದ ಸಂಖ್ಯೆ ಹೆಚ್ಚಾಗುತ್ತಾ ಹೋಗಿ, ಇಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಈ ಪ್ರದೇಶದಲ್ಲಿ ಅದು ಗರಿಷ್ಠ ಸಂಖ್ಯೆಯನ್ನು ತಲುಪಿಸಿತು. ಇಮ್ಮಡಿ ನರಸಿಂಹನ ನಂತರದಲ್ಲಿ ಹೊಸ ಕೆರೆಗಳ ನಿರ್ಮಾಣ ಸ್ವಲ್ಪ ಕಡಿಮೆಯಾಗಿ ಹಳೆಯ ಕೆರೆಗಳ ನಿರ್ವಹಣೆಯ ಕಡೆಗೆ ಹೆಚ್ಚಿನ ಗಮನ ನೀಡಿರುವುದು ಕಂಡುಬರುತ್ತದೆ. ವಿಜಯನಗರ ಅರಸರ ಕಾಲದಲ್ಲಿ ಮತ್ತೆ ಕೆರೆ ನಿರ್ವಹಣೆಗೆ ಹೆಚ್ಚಿನ ಚಾಲನೆ ದೊರೆತಂತೆ ಕಂಡುಬರುತ್ತದೆ. ಹಾಗೆಯೇ ಸ್ಥಳೀಯ ಪಾಳೆಯಗಾರರು ಕೂಡ ಕೆರೆ ನಿರ್ಮಾಣದ ಕಡೆ ಗಮನ ನೀಡಿರುವಂತೆ ಕಂಡುಬಂದಿದೆ.

* ನಮ್ಮ ಪೂರ್ವಿಕರು ಜಿಲ್ಲೆಯ ಕೆರೆಗಳನ್ನು ವಿವಿಧ ಬಗೆಯ ಹೆಸರುಗಳಿಂದ ಕರೆದಿದ್ದಾರೆ. ಶಾಸನಗಳಲ್ಲಿ ಕೆರೆ, ಸಮುದ್ರ, ಸಾಗರ, ತಟಾಕ, ಕಟ್ಟೆ ಹಾಗು ಪಿರಿಯ ಮತ್ತು ಹಿರಿಯ ಕೆರೆಗಳೆಂಬ ಉಲ್ಲೇಖಗಳು ಸಿಕ್ಕಿವೆ. ಹಾಗೆಯೇ ಧಾರ್ಮಿಕವಾಗಿ ದೇವರ ಹೆಸರಿನ ಕೆರೆಗಳು ಇವೆ. ಶಾಸನಗಳಲ್ಲಿ 'ವಾಸುದೇವತೀರ್ಥ,' 'ತೀರ್ಥದ ಕೆರೆ'ಗಳೆಂಬ ಮಾಹಿತಿಗಳಿವೆ. ಇವುಗಳ ಜೊತೆಗೆ ಸ್ತ್ರೀಮೂಲದ ಹೆಸರುಗಳು, ರಾಜರ ಬಿರುದುಸೂಚಕ ಹೆಸರುಗಳು, ಸಸ್ಯ ಮತ್ತು ಪ್ರಾಣಿಮೂಲದ ಹೆಸರುಗಳು, ವೃತ್ತಿಮೂಲದ ಹೆಸರುಗಳು, ಶ್ರೀ ಸಾಮಾನ್ಯರ ಹೆಸರುಗಳು ಹಾಗು ಹೊಲಗಟ್ಟ, ಹೊಲಗೆರೆ, ಹೊಲೆಗಟ್ಟ ಮತ್ತು ಬಣಜಿಗೆರೆಗಳೆಂಬ ಜಾತಿ ಮತ್ತು ವೃತ್ತಿಮೂಲದ ಹೆಸರುಗಳಿರುವುದು ವಿಶೇಷವೆನಿಸುತ್ತವೆ.

* ಕೆರೆಗಳನ್ನು ಅರಸರು ತಮ್ಮ ಗೌರವ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಮತ್ತು ತಂದೆ ತಾಯಿಯರ ಹಾಗು ಯದ್ಧಗಳಲ್ಲಿ ಜಯಗಳಿಸಿದ ಸ್ಮರಣಾರ್ಥವಾಗಿ ನಿರ್ಮಿಸುತ್ತಿದ್ದರು. ಕೆಲವು ಸಂದರ್ಭದಲ್ಲಿ ಅಗ್ರಹಾರವನ್ನು ಸ್ಥಾಪಿಸಿ ಬ್ರಾಹ್ಮಣರಿಗೆ ದತ್ತಿ ನೀಡುವ ಮತ್ತು ದೇವಾಲಯಗಳನ್ನು ಕಟ್ಟಿಸಿ ಅವರ ಅಗತ್ಯತೆಗಳನ್ನು ಪೂರೈಸುವ ಸಾಂಸ್ಕೃತಿಕ ಸಂವರ್ಧನೆಯ ಸಂಬಂಧವಾಗಿ ಇಲ್ಲಿನ ಕೆರೆಗಳು ನಿರ್ಮಾಣವಾಗಿರುವುದಕ್ಕೆ ಶಾಸನಾಧಾರಗಳು ಬೆಳಕು ಚೆಲ್ಲುತ್ತವೆ. ಹಾಗೆಯೇ ಬ್ರಾಹ್ಮಣರಿಗಾಗಿಯೇ ಕೆರೆಯನ್ನು ಕಟ್ಟಿಸಿರುವ ಉಲ್ಲೇಖಗಳಿರುವುದು ಗಮನಾರ್ಹ. ಹೀಗೆ ನಿರ್ಮಾಣವಾದ ಕೆರೆಗಳು ಕೇವಲ ಬ್ರಾಹ್ಮಣ ಮತ್ತು ರಾಜ ಮನೆತನದವರಿಗೆ ಮಾತ್ರ ಸೀಮಿತವಾಗಿರದೆ ಸಾರ್ವತ್ರಿಕವಾಗಿ ಬಳಕೆಯಾತ್ತಿರುವುದು ಪ್ರಶಂಸನೀಯ.

* ಪ್ರಾಚೀನ ಕರ್ನಾಟಕದಲ್ಲಿ ಸಾಮಾನ್ಯವಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಅಗ್ರಹಾರಗಳು ಪ್ರಮುಖ ಕಾರ್ಯ ನಿರ್ವಹಿಸುತ್ತಿದ್ದವು. ಅಗ್ರಹಾರಗಳಲ್ಲಿ ವಾಸಿಸುವ ವಿದ್ವಾಂಸರ ಜೀವನೋಪಾಯಕ್ಕಾಗಿ ಕೃಷಿ ಭೂಮಿಯನ್ನು ದತ್ತಿ ಬಿಡಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಕೆರೆಗಳ ನಿರ್ಮಾಣ ಮಾಡಲಾಗುತ್ತಿತ್ತು. ಹಾಗಾಗಿ ದೇವಾಲಯ ಮತ್ತು ಕೆರೆ ನಿರ್ಮಾಣ ಆಗಿನ ಸಾಮಾಜಿಕ ಸಂದರ್ಭದಲ್ಲಿ ಪುಣ್ಯದ ಕೆಲಸವಾಗಿತ್ತು. ಶಾಸನಗಳಲ್ಲಿ ಕೆರೆ ಕಟ್ಟಿಸುವುದರ ಜೊತೆಗೆ ದೇವಾಲಯಗಳ ನಿರ್ಮಾಣಗಳ ಬಗ್ಗೆ

ಉಲ್ಲೇಖವಿದೆ. ಅಲ್ಲದೆ ನೀರಿನ ಆಸರೆಯಲ್ಲಿ ಜಲಸಮೃದ್ಧಿಯ ಸಂಕೇತಿಕವಾಗಿ ಪಾವಿತ್ರ್ಯತೆಯ ಭಾವನೆಯಿಂದ ಕೆರೆಯ ದಂಡೆಯಲ್ಲಿ ದೇವಾಲಯಗಳನ್ನು ನಿರ್ಮಾಣ ಮಾಡುತ್ತಿದ್ದರು. ದೇವಾಲಯಗಳಿಗೆ ಕೆರೆ ಕೆಳಗಿನ ಜಮೀನನ್ನು ದತ್ತಿ ಬಿಡುತ್ತಿದ್ದರು. ಕೆರೆ ದುರಸ್ತಿ ನಿರ್ವಹಣೆಗೆ ದೇವಾಲಯದ ನಿಧಿಯೂ ಲಭ್ಯವಾಗುತ್ತಿತ್ತು. ದೇವಾಲಯಗಳಿಗೆ ಬಿಟ್ಟ ಭೂಮಿ, ದಾನ ದತ್ತಿಗಳು ನೀರಾವರಿ ಚೌಕಟ್ಟಿನಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿದ್ದವು.

* ಕೆರೆಗಳ ಸ್ವರೂಪ ಮತ್ತು ರಚನೆಯ ದೃಷ್ಟಿಯಿಂದ ಹಾಸನ ಜಿಲ್ಲೆಯ ಎಲ್ಲಾ ಕೆರೆಗಳು ಒಂದೇ ತೆರನಾಗಿ ಕಂಡುಬರುವುದಿಲ್ಲ. ಬಹುತೇಕ ಕೆರೆಗಳು ಅರ್ಧಚಂದ್ರಾಕೃತಿ, ಆಯತಾಕೃತಿ ಮತ್ತು ವೃತ್ತಾಕಾರದ ಕೆರೆಗಳಾಗಿವೆ. ಜಿಲ್ಲೆಯನ್ನು ಭೌಗೋಳಿಕ ಪರಿಸರಕ್ಕನುಗುಣವಾಗಿ ಮಲೆನಾಡು, ಅರೆಮಲೆನಾಡು ಮತ್ತು ಬಯಲುಸೀಮೆ ಎಂದು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಇಲ್ಲಿನ ಕೆರೆಗಳು ಹೆಚ್ಚು ಆಳವಿಲ್ಲದೆ ತಟ್ಟೆಯಂತೆ ಹರಡಿಕೊಂಡಿವೆ. ಬಯಲುಸೀಮೆ ಪ್ರದೇಶಗಳಲ್ಲಿ ಬಹುತೇಕ ಕೆರೆಗಳನ್ನು ಬೆಟ್ಟಗುಡ್ಡದ ಹತ್ತಿರವೇ ನಿರ್ಮಿಸಿರುವುದರಿಂದ ಉತ್ತಮ ಜಲಾನಯನ ಪ್ರದೇಶ ಹೊಂದಿದೆ. ಎಲ್ಲಾ ಕೆರೆಗಳ ಜಲಾನಯನ ಪ್ರದೇಶದಲ್ಲಿ ಬೀಳುವ ವಾರ್ಷಿಕ ಸರಾಸರಿ ಮಳೆ ಪ್ರಮಾಣವು ಕೂಡ ಜಾಸ್ತಿ ಇದೆ.

* ಕೆರೆಗಳನ್ನು ಸರಣಿ ವ್ಯವಸ್ಥೆಯಲ್ಲಿ ನಿರ್ಮಿಸಿರುವುದು ಅಂದಿನ ತಾಂತ್ರಿಕತೆಗೆ ಹಿಡಿದ ಕೈಗನ್ನಡಿ. ಪರಿಸರಕ್ಕೆ ಅನುಗುಣವಾಗಿ ಮೂರು ಅಥವಾ ನಾಲ್ಕು ಕೆರೆಗಳನ್ನು ಒಂದಕ್ಕೊಂದು ಹೊಂದಿಕೊಂಡಿರುವಂತೆ ಸಮೀಪದಲ್ಲಿ ಕಟ್ಟಿದ್ದಾರೆ. ಹಾಗೆಯೇ ಏರಿಯನ್ನು ವೃತ್ತಾಕಾರ, ಅರ್ಧಚಂದ್ರಾಕಾರ ಮತ್ತು ಅಂಕುಡೊಂಕಾಗಿ S ಆಕಾರದಲ್ಲಿ ನಿರ್ಮಿಸಿದ್ದಾರೆ. ಇದರಿಂದ ಏರಿಗೆ ಬೀಳುವ ಒತ್ತಡವು ಸಮಾನಾಗಿ ಹಂಚಿಕೆಯಾಗುತ್ತದೆ. ಮತ್ತು ಏರಿಯು ಒಡೆದಲ್ಲಿ ಸುಲಭವಾಗಿ ಸರಿಪಡಿಸಬಹುದು. ಇಂತಹ ಒಂದು ಪ್ರಾಚೀನ ನೀರಾವರಿ ತಂತ್ರಜ್ಞಾನವನ್ನು ಇಲ್ಲಿ ಗುರುತಿಸಲಾಗಿದೆ. ಏರಿಯ ಒಳಪಾರ್ಶ್ವದ ಇಳಿಜಾರಿಗೆ ಸ್ಥಳೀಯವಾಗಿ ದೊರೆಯುವ ಬೆಟ್ಟದ ಕಲ್ಲುಗಳಿಂದಲೇ ಕಟ್ಟಲಾಗಿದೆ. ಏರಿಯ ಹಿಂಬದಿಗೆ ಭಾರಿ ಮಳೆ ಬಿದ್ದು ಕೊಚ್ಚಿ ಹೋಗದಂತೆ, ರಕ್ಷಣೆಗೆ ಇಳಿಜಾರಿನಲ್ಲಿ ಸಸಿಯನಿಕ್ಕಿ ಸಾಕುವಂತವವನಿಗೆ ಉಂಬಳಿ ನೀಡಿರುವ ಉಲ್ಲೇಖವನ್ನು ಅರಸೀಕೆರೆಯ ಗೀಜಿಹಳ್ಳಿಯ ಶಾಸನ ಬೆಳಕು ಚೆಲ್ಲುತ್ತದೆ.

* ಕೆರೆಯಲ್ಲಿ ಸಂಗ್ರಹವಾದ ನೀರನ್ನು ತೂಬುಗಳಿಂದ ಅಚ್ಚುಕಟ್ಟು ಪ್ರದೇಶಕ್ಕೆ ಏಕಕಾಲದಲ್ಲಿ ಹಾಯಿಸಲಾಗುತ್ತಿದೆ. ಕೆರೆಯ ಗಾತ್ರಕ್ಕೆ ಅನುಗುಣವಾಗಿ ಒಂದು, ಎರಡು, ಮೂರು ಅಥವಾ ನಾಲ್ಕು ತೂಬುಗಳನಿಟ್ಟಿರುವುದು ವಿಶೇಷ. ಈ ಪರಿಸರದ ಹೆಚ್ಚಿನ ಕೆರೆಗಳಲ್ಲಿ ಮರದ ದಿಮ್ಮಿಯ ತೂಬುಗಳು ಕಂಡುಬಂದಿವೆ. ತೂಬುಗಳ ರಚನೆ ಒಂದೇ ತೆರನಾಗಿ ಕಂಡುಬರುವುದಿಲ್ಲ. ಹೊಯ್ಸಳರ ನಂತರ ಕಾಲದ ತೂಬುಗಳನ್ನು ಅವುಗಳ ರಚನಾವಿನ್ಯಾಸದಿಂದ ಸ್ಪಷ್ಟವಾಗಿ ಗುರುತಿಸಲಾಗಿದೆ. ಸಕಲೇಶಪುರ

ಮತ್ತು ಆಲೂರು ತಾಲೂಕುಗಳಲ್ಲಿ ತೂಬುಗಳನ್ನು ಏರಿಗೆ ಇರಿಸಿ ಮರದ ದಿಮ್ಮಿ ಮತ್ತು ಕಬ್ಬಿಣದ ಬಾಗಿಲುಗಳಿಗೆ ಬದಲಾಗಿ ನೀರಿನ ಗುಣಮಟ್ಟಕ್ಕನುಗುಣವಾಗಿ ೩ ರಂಧ್ರಗಳನ್ನು ಮಾಡಿದ್ದಾರೆ. ಪ್ರಾಚೀನರು ತೂಬುಗಳನ್ನು ಏರಿಯಿಂದ ೧೨ ಅಡಿ ದೂರದಲ್ಲಿ ಇರಿಸಿದ್ದು, ಅವು ಇಂದು ಕಾರ್ಯ ನಿರ್ವಹಣೆಯಲ್ಲಿಲ್ಲದೆ ಹಾಳಾಗಿವೆ. ಇತ್ತೀಚೆಗೆ ಹೊಸ ತೂಬುಗಳನ್ನು ಏರಿಗೆ ಅಳವಡಿಸುವ ಪ್ರವೃತ್ತಿಯನ್ನು ಕಾಣುತ್ತೇವೆ.

* ಜಿಲ್ಲೆಯ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲೂಕಿನ ಕೆಲವು ಪ್ರಾಚೀನ ತೂಬುಗಳ ಮೇಲೆ ಶಾಸನ ಸಹಿತ ಉಬ್ಬುಶಿಲ್ಪಗಳಿವೆ. ಉದಾಹರಣೆಗೆ ಶ್ರವಣಬೆಳಗೊಳದ ಹೊಸಹಳ್ಳಿ ಕೆರೆ, ಅರಸೀಕೆರೆ ತಾಲೂಕಿನ ಹಿರಿಯೂರು ಕೆರೆ ಇನ್ನೂ ಕೆಲವು ತೂಬುಗಳ ಮೇಲೆ ಗಜಲಕ್ಷ್ಮಿ ಶಿಲ್ಪವನ್ನು ಜಲಸಮೃದ್ಧಿಯ ಸಂಕೇತಿಕವಾಗಿ ಕಂಡರಿಸಿರುವುದು ಕಂಡುಬಂದಿದೆ. ಹಾಗೆಯೇ ಇತರ ದೇವರುಗಳಿಗೆ ಸಂಬಂಧಿಸಿದ ಉಬ್ಬುಶಿಲ್ಪಗಳು ಕೂಡ ಇವೆ. ಅವು ಧಾರ್ಮಿಕತೆಯನ್ನು ಸೂಚಿಸುತ್ತವೆ. ಅರಸೀಕೆರೆ ತಾಲೂಕಿನ ಪುರಲ್ಲೇಹಳ್ಳಿ ಕೆರೆ ತೂಬಿನ ಮೇಲೆ ಶಿಖಾರದ ಮಾದರಿಯ ರಚನೆ ಇರುವುದು ವಿಶೇಷವೆನಿಸುತ್ತದೆ. ಇದು ಮೈಲಾರ ಸಂಪ್ರದಾಯವನ್ನು ಪರಿಚಯಿಸುತ್ತದೆ. ಇತರೆ ಶಿಲ್ಪಗಳಾದ ಜಲಚರ ಮತ್ತು ಕಾಲ್ಪನಿಕ ಪ್ರಾಣಿಗಳ ಉಬ್ಬುಶಿಲ್ಪಗಳು ಹಾಗೂ ನೃತ್ಯ ಭಂಗಿಯ ಉಬ್ಬುಶಿಲ್ಪಗಳನ್ನು ಆಲಂಕಾರಿಕವಾಗಿ ತೂಬುಗಳ ಮೇಲೆ ಕಂಡರಿಸಲಾಗಿದೆ. ಹಿಂದೆ ಅರಸರು ದೇವಾಲಯಗಳನ್ನು ಕಟ್ಟಲು ತೋರಿಸಿದ ಆಸಕ್ತಿಯನ್ನು ತೂಬುಗಳನ್ನು ಕಟ್ಟಲು ತೋರಿಸಿದ್ದಾರೆ. ಉದಾಹರಣೆಗೆ ಚನ್ನರಾಯಪಟ್ಟಣ ತಾಲೂಕಿನ ನುಗ್ಗೇಹಳ್ಳಿ ಗ್ರಾಮದಲ್ಲಿ ಲಕ್ಷ್ಮೀನಾರಾಯಣ ದೇವಾಲಯವಿದೆ. ಆ ದೇವಾಲಯದಲ್ಲಿರುವ ಶಿಲ್ಪಗಳನ್ನು ನುಗ್ಗೇಹಳ್ಳಿ ಕೆರೆಯ ತೂಬಿನ ಮೇಲೆ ಕೆತ್ತಿರುವುದು ಗಮನಾರ್ಹ. ಹಾಗೆಯೇ ಹಾಸನದ ಹೆರಗು ಶಾಸನದಲ್ಲಿ ತೂಬು ದೇಗುಲ ಎಂಬ ಉಲ್ಲೇಖವಿದೆ.

* ಕೆರೆಯ ರಕ್ಷಣೆಯ ದೃಷ್ಟಿಯಿಂದ ಕೆಲವು ಕೆರೆಗಳಲ್ಲಿ ಎರಡು ಕೋಡಿಗಳಿದ್ದರೆ, ಇನ್ನುಳಿದ ಕೆರೆಗಳಲ್ಲಿ ಒಂದು ಕೋಡಿ ಇರುತ್ತದೆ. ಕೆರೆಯ ಗಾತ್ರವನ್ನು ಅವಲಂಬಿಸಿ ಕೋಡಿಗಳನ್ನು ನಿರ್ಮಿಸಲಾಗಿದೆ. ಸಾಮಾನ್ಯವಾಗಿ ಇಲ್ಲಿನ ಎಲ್ಲಾ ಕೋಡಿಗಳ ಆಕಾರ ಚಚ್ಚೌಕಾಕಾರವಾಗಿ ಕಂಡುಬಂದರೆ, ಅರಕಲಗೂಡು ತಾಲೂಕಿನ ಕೊಣನೂರು ಕೆರೆ ಮತ್ತು ಹೊಳೆನರಸೀಪುರದ ತಾತನಹಳ್ಳಿ ಕೆರೆ ಕುದುರೆಲಾಳಾಕೃತಿಯಲ್ಲಿ ಕಟ್ಟಿರುವುದು ವಿಶೇಷವೆನಿಸುತ್ತದೆ. ಈ ವ್ಯವಸ್ಥೆಯಿಂದ ಹೆಚ್ಚುವರಿ ನೀರು ವ್ಯರ್ಥವಾಗದಂತೆ ಮತ್ತೊಂದು ಕೆರೆಯಲ್ಲಿ ಸಂಗ್ರಹವಾಗುತ್ತದೆ. ಇದರಿಂದ ಕೆರೆಯ ಏರಿಗೆ, ಕೋಡಿಗಳಿಗೆ ಆಗುವ ದಕ್ಕೆಯನ್ನು ತಪ್ಪಿಸಿ ಸಂರಕ್ಷಣೆಗೆ ಆದ್ಯತೆ ಕೊಡಲಾಗಿದೆ. ಕೋಡಿಗಳ ರಕ್ಷಣೆಗೆ ಭೂದಾನ ನೀಡಿರುವುದು ಶಾಸನಗಳಲ್ಲಿದೆ. ಅರಸೀಕೆರೆಯ ಒಂದು ಶಾಸನದಲ್ಲಿ ಕೋಡಿಯ ರಕ್ಷಣೆಗಾಗಿ ತಿಪ್ಪೆಸುಂಕ, ಆಲೆವೆತ್ತ, ಮಾನೆಣ್ಣೆ, ಹಂದರವಣ, ಮೊಡೆಮೆಳಸು, ಅರಿಶಿನ, ಅಡಕೆಯ ಹೇರು, ಸೀರೆಯ ಮಳವೆ, ಎಲೆಯ

ಹೇರಿನ ಆಯಗಳನ್ನೆಲ್ಲಾ ನೀಡಿರುವುದು ಗಮನಾರ್ಹವಾದ ವಿಷಯ. ಕೋಡಿಗಳಂತೆ ಕಾಲುವೆಗಳು ಸಹ ಕೆರೆಯ ಭಾಗಗಳಲ್ಲಿ ಒಂದಾಗಿ ಕೆರೆಗೆ ರಕ್ಷಣೆಯನ್ನು ನೀಡುತ್ತಿವೆ.

* ಕೆರೆಗಳ ನಿರ್ಮಾಣ, ಸಂರಕ್ಷಣೆ ಮತ್ತು ನಿರ್ವಹಣೆಯಲ್ಲಿ ಮಂತ್ರಿಗಳು, ಸಂಧಿವಿಗ್ರಹಿಗಳು, ಊರಗೌಡರು, ಜಲಸೂತ್ರಧಾರರು, ಶಾನುಬೋಗರು, ನೀರ್ಗಂಟಿಗಳು, ತಳವಾರರು, ಗ್ರಾಮಪಂಚಾಯಿತಿಯ ಅಧಿಕಾರಿಗಳು ಮತ್ತು ಜನಸಾಮಾನ್ಯರು ಪ್ರಮುಖ ಪಾತ್ರ ವಹಿಸುತ್ತಿದ್ದರು. ರಾಜರು ಕೆರೆಯನ್ನು ಕಟ್ಟುವಂತೆ ಹೇಳುತ್ತಿದ್ದರು. ಕೆರೆಗಳನ್ನು ಬೇರೆ ಜನಾಂಗದವರು ಕಟ್ಟಿರುವುದು ಶಾಸನಗಳಿಂದ ಗಮನಿಸತಕ್ಕ ವಿಷಯ. ಉದಾರಣೆಗೆ ಹೊಳೆನರಸೀಪುರ ಮತ್ತು ಅರಸೀಕೆರೆಯ ಗೀಜಿಹಳ್ಳಿಯ ಶಾಸನಗಳಲ್ಲಿ ತೂಬುಗಳನ್ನಿಟ್ಟ ಕಲ್ಲುಕುಟಿಕರ ಮಾಹಿತಿಗಳಿವೆ.

* ಪ್ರಾಚೀನ ನೀರ್ಗಂಟಿ ವ್ಯವಸ್ಥೆ ಈವತ್ತಿಗೂ ಇರುವುದನ್ನು ನನ್ನ ಅಧ್ಯಯನದಲ್ಲಿ ಗುರುತಿಸಿದ್ದೇನೆ. ನೀರ್ಗಂಟಿಗಳು ತೂಬುಗಳ ನಿರ್ವಹಣೆ ಕಾರ್ಯವನ್ನು ಹಿಂದಿನಿಂದಲೂ ನಿರ್ವಹಿಸುತ್ತಿದ್ದರು. ಇವರು ವಂಶಪಾರಂಪರ್ಯವಾಗಿ ನೇಮಕವಾಗಿತ್ತಿದ್ದರು. ಅವರು ಹೆಚ್ಚಾಗಿ ತಳವಾರ(ವಾಲ್ಮೀಕಿ), ಬಾರಿಕರ ಜಾತಿಗೆ ಸೇರಿದವರಾಗಿರುತ್ತಿದ್ದರು. ಕಾಲ ಬದಲಾದಂತೆ ಶಿಕ್ಷಣ ಪಡೆದಂತೆಲ್ಲಾ ವೃತ್ತಿಗಳು ಹಂಚಿಕೆಯಾದಂತೆಲ್ಲಾ ಬೇರೆ ಜನಾಂಗದವರೂ ನೀರ್ಗಂಟಿ ವೃತ್ತಿ ಮಾಡಲು ಆರಂಭಿಸಿದರು. ಇಂದಿಗೂ ಅರಸೀಕೆರೆಯ ಕೆಲವು ಗ್ರಾಮಗಳಲ್ಲಿ ಈ ಸಂಪ್ರದಾಯ ರೂಢಿಯಲ್ಲಿದೆ. ಗೀಜಿಹಳ್ಳಿಯ ಒಂದು ಶಾಸನದಲ್ಲಿ ನೀರ್ಗಂಟಿಯನ್ನು ನೀರಯ್ಯನೆಂದು ಕರೆದಿರುವ ಉಲ್ಲೇಖವಿದೆ. ಪ್ರಸ್ತುತ ದಿನಗಳಲ್ಲಿ ಬಹುತೇಕ ಕೆರೆಗಳಲ್ಲಿ ನೀರ್ಗಂಟಿಗಳಿಲ್ಲ. ಗ್ರಾಮದ ಜನರೆ ಕೆರೆಗಳಿಗೆ ನೀರು ಬಂದರೆ ತೂಬುಗಳನ್ನು ಎತ್ತಿ ನೀರನ್ನು ಅಚ್ಚುಕಟ್ಟು ಪ್ರದೇಶಕ್ಕೆ ಹಾಯಿಸಿಕೊಳ್ಳುತ್ತಾರೆ. ಅಮಾನಿಕೆರೆಗಳಲ್ಲಿ ಮಾತ್ರ ನೀರಾವರಿ ಇಲಾಖೆಯವರು ಪ್ರತ್ಯೇಕ ವ್ಯಕ್ತಿಗಳನ್ನು ನೇಮಿಸಿ ಸರ್ಕಾರದಿಂದ ಇವರಿಗೆ ವೇತನ ಭರಿಸುತಿರುವುದು ಕಂಡುಬಂದಿದೆ.

* ಸ್ವಾತಂತ್ರ್ಯಾನಂತರ ಈ ಪರಿಸ್ಥಿತಿಯು ಬಹುಪಾಲು ಪರಿವರ್ತನೆ ಆಗಿದೆ. ೧೯೬೪ರ ನೀರಾವರಿ ಕಾಯಿದೆ ಅನ್ವಯ ಕೆರೆಗಳ ನಿರ್ವಹಣೆ ಜೀರ್ಣೋದ್ಧಾರಗಳು ಸರ್ಕಾರದ ಜವಾಬ್ದಾರಿಗಳಲ್ಲಿ ಸೇರಿದವು. ವಂಶ ಪಾರಂಪರ್ಯವಾಗಿ ಬಂದ ಪಟೇಲ, ಶ್ಯಾನುಭೋಗರ ಹುದ್ದೆಗಳನ್ನು ರದ್ದುಗೊಳಿಸಲಾಯಿತು. ಈ ಹುದ್ದೆಗಳಿಗೆ ಬದಲಾಗಿ ಗ್ರಾಮಲೆಕ್ಕಿಗರನ್ನು ಸರ್ಕಾರವೇ ನೇಮಕ ಮಾಡಿತು. ಇಂದು ಹಣದಕೊರತೆ, ವೈಜ್ಞಾನಿಕತೆ ಕೊರತೆ, ರೈತರನ್ನು ಕೆರೆಯ ನಿರ್ವಹಣೆಯಿಂದ ದೂರವಿಟ್ಟಿರುವುದು ಮುಂತಾದ ಕಾರಣಗಳಿಂದ ಕೆರೆಗಳು ದುಸ್ಥಿತಿಗೆ ಒಳಗಾಗುತ್ತಿವೆ.

* ಕೆರೆ ಕಟ್ಟಿಸುವುದರೊಂದಿಗೆ, ಅದರ ರಕ್ಷಣೆ ಮತ್ತು ನಿರ್ವಹಣೆಯ ಬಾಧ್ಯತೆಗಳನ್ನು ರಾಜರು ಬಹು ಸಮರ್ಪಕವಾಗಿ ಮಾಡುತ್ತಿದ್ದರು. ಈ ದಿಸೆಯಲ್ಲಿ ರಾಜರ ಆಳ್ವಿಕೆಯಲ್ಲಿಯೇ ಹಲವಾರು ನೀತಿ-ನಿಯಮಗಳನ್ನು ಅಳವಡಿಸಿಕೊಂಡಿರುವುದನ್ನು ಆ ಕಾಲದ ತೆರಿಗೆಪದ್ಧತಿಯಿಂದ

ವ್ಯಕ್ತವಾಗುತ್ತದೆ. ಕೆರೆ ಕಟ್ಟುವವನಿಗೆ ಕಟ್ಟುಮಾನ್ಯ, ಕಟ್ಟುಕೊಡಿಗೆ, ಬಿತ್ತುವಟ್ಟ, ದಸವಂದ ಹಾಗೂ ಇನ್ನಿತರ ತೆರಿಗೆಗಳಿಂದ ವಿನಾಯ್ತಿಗೊಳಿಸಿ ಕೆರೆಯ ರಕ್ಷಕನಿಗೆ ವಿಶೇಷ ಸವಲತ್ತುಗಳನ್ನು ನೀಡಿರುವುದು ತಿಳಿದುಬರುತ್ತದೆ. ಹಾಗೆಯೇ ಕೆರೆಯಲ್ಲಿ ಹೂಳೆತ್ತಿಸಲು ಕೆರೆಬಂಡಿಗಳನ್ನು ಸಹ ನಿಯೋಜಿಸಿರುವುದು ಕಂಡುಬಂದಿದೆ.

* ಕೆರೆಗಳನ್ನು ಕುರಿತಾದ ವಿವಿಧ ಬಗೆಯ ಐತಿಹ್ಯಗಳು ಜನಪದ ಇತಿಹಾಸಗಳಾಗಿವೆ. ಒಂದು ಕೆರೆಯನ್ನು ನಿರ್ಮಿಸುವ ಸಂದರ್ಭದಲ್ಲಿ ಆದ ಅಡಚಣೆಗಳನ್ನು ನಿವಾರಿಸಲು ನರಬಲಿ, ಪ್ರಾಣಿಬಲಿ ನೀಡಿರುವುದು ಜನಪದ ಕಥೆಯಾಗಿ ಹೊರಹೊಮ್ಮಿದೆ. ಈ ಕಥೆಗಳು ಬಲಿಯಾದ ವ್ಯಕ್ತಿಯ ಹಿರಿಮೆ ಮತ್ತು ಲೋಕೋಪಕಾರಿಯಾಗಿ ಬಾಳಬೇಕು ಎಂಬ ಸಂದೇಶವನ್ನು ನೀಡುತ್ತವೆ. ಕೆರೆಗೆ ಬಲಿ ಕೊಡುವ ಬಲಿಹಾರಗಳಲ್ಲಿ ಹೆಣ್ಣಿನ ಪ್ರಕರಣಗಳೇ ಜಾಸ್ತಿ ಕಂಡುಬಂದಿವೆ. ಇಲ್ಲಿ ಗಂಗಾದೇವಿಯೂ ಹೆಣ್ಣಾಗಿರುವುದರಿಂದ ಹೆಣ್ಣು ಹೆಣ್ಣನ್ನು ಹೇಗೆ ಅಪೇಕ್ಷಿಸುತ್ತಾಳೆ ಎಂಬ ಪ್ರಶ್ನೆ ಹುಟ್ಟುತ್ತದೆ. ಒಂದು ಆದಿಮಶಕ್ತಿಯನ್ನು ಎದುರಿಸಲು ಮತ್ತೊಂದು ಆದಿಮ ಶಕ್ತಿಯಿಂದ ಮಾತ್ರ ಸಾಧ್ಯ ಎನ್ನುವ ಹೆಣ್ಣಿನ ಬಲಿದಾನಗಳ ಹಿಂದಿನ ನಂಬಿಕೆಗಳನ್ನು ಕಂಡುಕೊಳ್ಳಲಾಗಿದೆ. ಅಲ್ಲದೆ ಬಲಿಯಾದ ಹೆಣ್ಣು ಮಕ್ಕಳು ಗೌಡನ ಸೊಸೆಯಂದಿರು ಸ್ವತಃ ಕುಡಿಗಳಲ್ಲ ಎಂಬುದು ಗಮನಾರ್ಹ.

* ಸಮಾಜದಲ್ಲಿ ಸಾರ್ವತ್ರಿಕವಾಗಿ ನಿರ್ಮಾಣವಾದ ಕೆರೆ ನೀರಿನ ಬಳಕೆಯಲ್ಲಿ ಉಂಟಾದ ಹಂಚಿಕೆಯ ಸಮಸ್ಯೆ, ವ್ಯಾಜ್ಯಗಳು, ಸ್ಪೃಶ್ಯ ಮತ್ತು ಅಸ್ಪೃಶ್ಯ ಸ್ಪರ್ಶಗಳೆಂಬ ನಿಷೇಧಗಳು ಮತ್ತು ನಿಬಂಧನೆಗಳ ಮೇಲೆ ಇಲ್ಲಿನ ಶಾಸನಗಳು ಬೆಳಕು ಚೆಲ್ಲಿವೆ. ಅಲ್ಲದೆ ಈವತ್ತಿಗೂ ಗ್ರಾಮಗಳ ಕಟ್ಟೆ ನೀರಿನ ಬಳಕೆಯ ಬಗೆಗೆ ಅಸ್ಪೃಶ್ಯ ನಿಬಂಧನೆಗಳು ಇರುವುದನ್ನು ಗುರುತಿಸಲಾಗಿದೆ.

* ಕೆರೆ ಮತ್ತು ದೇವಾಲಯಗಳು ನಮ್ಮ ಗ್ರಾಮಗಳ ಸಾಂಸ್ಕೃತಿಕ ಪ್ರತೀಕವಾಗಿ ಬೆಳೆದುಬಂದಿವೆ. ಕೆರೆ ನೀರಿನ ಫಲಾನುಭವಿಗಳಲ್ಲಿ ದೇವಾಲಯದ ಭೂಮಿಗಳಿಗೆ ಮೊದಲ ಆದ್ಯತೆಯಿದ್ದು, ನಂತರ ಕೆರೆ ನಿರ್ಮಾತೃ, ನಿರ್ವಹಣ ಕಾಮಗಾರಿಗಳಿಗೆ ಪ್ರಾಧಾನ್ಯತೆ ನೀಡಿರುವುದು ಗಮನಿಸತಕ್ಕ ವಿಷಯ.

* ಕೆರೆಗಳು ಧಾರ್ಮಿಕ ನಂಬಿಕೆ ಮತ್ತು ಆಚರಣೆಯ ತಾಣವಾಗಿರುವುದನ್ನು ನನ್ನ ಅಧ್ಯಯನದಲ್ಲಿ ಗುರುತಿಸಿದ್ದೇನೆ. ಕೆಲವು ಕೆರೆಗಳಲ್ಲಿ ಚಪ್ಪಲಿ ಹಾಕಿಕೊಂಡು ನೀರಿಗೆ ಇಳಿಯುವಂತಿಲ್ಲ, ಮುಟ್ಟಾದ ಸ್ತ್ರೀಯರು ಬಟ್ಟೆ ತೊಳೆಯುವಂತಿಲ್ಲ ಹಾಗೂ ಸ್ನಾನ ಮಾಡುವಂತಿಲ್ಲ ಎಂಬ ನಿಬಂಧನೆಗಳಿವೆ. ಸಾವಿನ ಸೂತಕದವರು ಕೆರೆ ನೀರಿಗೆ ಇಳಿಯಲಾಗದೆಂಬ ನಿಬಂಧನೆಯು ಅರಸೀಕೆರೆ ತಾಲೂಕಿನ ಯಡವನಹಳ್ಳಿ ಶಾಸನದಲ್ಲಿರುವುದು ಗಮನಾರ್ಹ. ಇಲ್ಲಿನ ವಿಶೇಷ ಅಂಶವೇನೆಂದರೆ ನದಿಗಳಿಗಿರುವ ಪಾವಿತ್ರ್ಯತೆಯ ಭಾವನೆಯನ್ನು ಈ ಪರಿಸರದ ಜನರು ಕೆರೆಗಳ ಬಗ್ಗೆ ಹೊಂದಿರುವುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

* ಕೆರೆಗೆ ಸಂಬಂಧಿಸಿದ ಆಚರಣೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಕೃಷಿಯನ್ನೇ ಅವಲಂಬಿಸಿದ ರೈತ ಅನೇಕ ಬಗೆಯ ನಂಬಿಕೆಗಳನ್ನು ಹೊಂದಿದ್ದಾನೆ. ಅವು ಮೌಢ್ಯತೆಯಿಂದಿವೆಯೋ, ವೈಜ್ಞಾನಿಕವಾಗಿವೆಯೋ ಎಂಬ ಪ್ರಶ್ನೆ ಅಪ್ರಸ್ತುತ. ಇಲ್ಲಿ ಭಾಗಶಃ ಮಳೆತರಿಸುವ ಮನುಷ್ಯನ ಪ್ರಯತ್ನವನ್ನು ಗುರುತಿಸಲಾಗಿದೆ. ಹಾಗೆಯೇ ಕೆರೆಗಳಲ್ಲಿ ಕೆರೆಬಂದಮ್ಮ, ದೇವಕನ್ಯೆಯರು ವಾಸಿಸುತ್ತಿದ್ದರು ಎಂಬ ನಂಬಿಕೆಗಳು ಇದ್ದು, ಗ್ರಾಮದವರು ಗ್ರಾಮದೇವತೆಗಳಿಗಿಂತಲೂ ಅಧಿಕವಾಗಿ ಪೂಜ್ಯನೀಯ ಭಾವನೆಯನ್ನು ಕೆರೆ ಅಧಿದೇವತೆಗಳಿಗೆ ನೀಡಿದ್ದಾರೆ. ಇದರಿಂದ ಹಲವು ಬಗೆಯ ಆಚರಣೆಗಳು ನಡೆಯುತ್ತಿವೆ. ಉದಾಹರಣೆಗೆ ಗಂಗಮ್ಮನ ಪೂಜೆ, ಗಂಗಾಸ್ನಾನ, ಬಾಗಿನ ಅರ್ಪಣೆ, ಬಂಡಿಹಬ್ಬ ಮತ್ತು ಕೆರೆ ತುಂಬಿ ಕೋಡಿ ಬಿದ್ದಾಗ ತೆಪ್ಪೋತ್ಸವದಂತಹ ಆಚರಣೆಗಳು ಪ್ರಚಲಿತದಲ್ಲಿವೆ. ಇವುಗಳ ಜೊತೆಗೆ ನಾಗರಪೂಜೆ ಮತ್ತು ಬ್ರಹ್ಮದೇವರ ಪೂಜೆಗಳು ರೂಢಿಯಲ್ಲಿವೆ.

* ಜಿಲ್ಲೆಯ ಕೆರೆ ದಂಡೆಗಳಲ್ಲಿ ಸ್ತ್ರೀ ಮತ್ತು ಶೈವ ದೇವಾಲಯಗಳು ಹೆಚ್ಚಾಗಿ ಕಂಡುಬಂದಿವೆ. ಇವುಗಳ ಜೊತೆಗೆ ಬ್ರಹ್ಮದೇವರ ಕಲ್ಲುಗುಂಡು ಇರುವುದು ವಿಶೇಷವೆನಿಸುತ್ತದೆ. ಅಲ್ಲದೆ ಭೈರವಪಾದ ಶಿಲ್ಪಫಲಕಗಳು ಕೆರೆ ಪರಿಸರದ ಕೆಲವು ದೇವಾಲಯದ ಮುಂಭಾಗದಲ್ಲಿ ಕಂಡುಬಂದಿವೆ. ಉದಾಹರಣೆಗೆ ಚನ್ನರಾಯಪಟ್ಟಣ ತಾಲೂಕಿನ ದಿಡಗ ಕೆರೆ, ಅರಸೀಕೆರೆ ತಾಲೂಕಿನ ಚಿಕ್ಕಗಂಡಸಿ ಕೆರೆ, ಕುರುವಂಕ ಕೆರೆ, ಬಾಗವಾಗಿಲು ಕೆರೆ ಹಾಗೂ ಹಳೇಬೀಡು ಕೆರೆಗಳ ಸಮೀಪದಲ್ಲಿ ನೋಡಬಹುದಾಗಿದೆ.

* ಪ್ರಸ್ತುತ ಅಧ್ಯಯನದಲ್ಲಿ ಕ್ರಿ.ಶ. ಆರಂಭ ಕಾಲದಿಂದಲೂ ಕೃಷಿ ಚಟುವಟಿಕೆಯನ್ನು ಗುರುತಿಸಲಾಗಿದೆ. ಜನಸಂಖ್ಯೆ ಬೆಳವಣಿಗೆಯಾದಂತೆ ಕಾಡುಗಳನ್ನು ಕಡಿದು ಭೂಮಿಯನ್ನು ಸಮತಟ್ಟುಗೊಳಿಸಿ ಜನವಸತಿಗೆ ಅನುಕೂಲವಾಗುವಂತೆ ಕೆರೆಗಳನ್ನು ರೂಪಿಸಿರುವುದು ಜಿಲ್ಲೆಯ ಶಾಸನಗಳಿಂದ ಕಂಡುಕೊಳ್ಳಲಾಗಿದೆ. ಅಲ್ಲದೆ ಗದ್ದೆ ಬೆದ್ದಲು, ಹೂತೋಟ, ಎಲೆ, ಅಡಿಕೆ, ಮಾವಿನಮರ ಮತ್ತು ತೋಟ ತುಡಿಕೆಗಳ ಮಾಹಿತಿಗಳಿವೆ. ಇದರಿಂದ ಜಿಲ್ಲೆಯಲ್ಲಿ ತರಿ ಮತ್ತು ಖುಷ್ಕಿ ಎಂಬ ಎರಡು ಬೆಳೆಗಳನ್ನು ಬೆಳೆಯುತ್ತಿದ್ದರು ಎಂಬುದಾಗಿ ತಿಳಿದುಬಂದಿದೆ. ಜನಸಂಖ್ಯೆ ಹೆಚ್ಚಾದಂತೆ ಈ ರೀತಿಯ ನೀರಾವರಿ ವ್ಯವಸ್ಥೆಯಿಂದ ರೈತನ ಬೆಳೆಯಲ್ಲಿ ಸಮತೋಲನ ಕಂಡುಬಂದು ಅವರ ಆರ್ಥಿಕ ಜೀವನದಲ್ಲಿ ಸುಸ್ಥಿತಿ ಕಂಡುಬಂದಿದೆ. ಹೊಳೆನರಸೀಪುರ, ಚನ್ನರಾಯಪಟ್ಟಣ ಹಾಗೂ ಅರಕಲಗೂಡು ತಾಲೂಕುಗಳಲ್ಲಿ ಉತ್ತಮ ನೀರಾವರಿ ಸೌಲಭ್ಯವಿರುವುದರಿಂದ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಬೆಳೆಗಳನ್ನು ಬೆಳೆಯುತ್ತಾರೆ. ಮುಖ್ಯವಾಗಿ ಹಣ್ಣು ತರಕಾರಿಗಳಿಗಿಂತ ಭತ್ತ, ಕಬ್ಬು, ಅಡಿಕೆ, ಬೆಳೆಗಳು ಪ್ರಮುಖವಾಗಿ ಕಂಡುಬಂದಿವೆ. ಹಾಗೆಯೇ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲೂಕುಗಳಲ್ಲಿ ತೆಂಗು, ರಾಗಿ ಬೆಳೆಗಳು ಪ್ರಮುಖವಾಗಿರುವುದನ್ನು ಗಮನಿಸಲಾಗಿದೆ.

* ಕೆರೆಗಳು ಮೀನುಗಳ ಸಾಕಾಣಿಕೆಗೆ ಮತ್ತು ಜಾನುವಾರುಗಳ ಕುಡಿಯುವ ನೀರಿಗಾಗಿ ಬಳಕೆಯಾಗುತ್ತಿವೆ. ಬೇಸಿಗೆ ಕಾಲದಲ್ಲಿ ಕೆರೆಗಳಲ್ಲಿ ನೀರು ಕಡಿಮೆಯಾದಾಗ ಕೆರೆಯ ಅಂಗಳದಲ್ಲಿ

ಪಶುಪಾಲಕರು ಜಾನುವಾರುಗಳನ್ನು ಮೇಯಿಸುತ್ತಾರೆ ಹಾಗೂ ಕೆರೆಯ ಮಣ್ಣನ್ನು ಉಪಯೋಗಿಸಿಕೊಂಡು ಜನಪದರು ಇಟ್ಟಿಗೆ ತಯಾರಿಸುತ್ತಿದ್ದಾರೆ ಎಂಬುದು ಈ ಅಧ್ಯಯನದಿಂದ ತಿಳಿದುಬಂದಿದೆ. ಇದರಿಂದ ಉದ್ಯೋಗದ ಜತೆಗೆ ಆರ್ಥಿಕ ಪ್ರಗತಿಯು ಉತ್ತಮಗೊಳ್ಳುತ್ತಿದೆ. ಕೆರೆಗಳ ಮಣ್ಣು ತೋಟಗಳಿಗೆ ಗೊಬ್ಬರವಾಗಿ ಮತ್ತು ಮನೆಗಳನ್ನು ಕಟ್ಟಲು ಸಿದ್ಧೆಯ ಮಣ್ಣಿನಂತೆ ಬಳಕೆಯಾಗುತ್ತಿದೆ. ಮಳೆಗಾಲೇತರ ಋತುಮಾನಗಳ ಅವಧಿಯಲ್ಲಿ ಈಗಲೂ ಕೆರೆಯಂಗಳದಲ್ಲಿ ನೀರಿಲ್ಲದಿದ್ದಾಗ ಕಡಲೆ, ಜೋಳದ ಬೆಳೆಗಳನ್ನು ತೆಗೆಯುತ್ತಿದ್ದಾರೆ. ಈ ಕೆರೆಗಳ ಅಸ್ತಿತ್ವದಿಂದಾಗಿ ಗ್ರಾಮಗಳು ತೀವ್ರ ಬರಗಾಲದಿಂದ ಪಾರಾಗಿವೆ. ಏಕೆಂದರೆ ಇವು ಜನರ ಜೀವನದ ಪ್ರಾಥಮಿಕ ಪೂರೈಕೆಗೆಳಾಗಿವೆ. ಕೆರೆಗಳಿಂದ ಅಂತರ್ಜಲ ಮಟ್ಟ ಹೆಚ್ಚಾಗುತ್ತಿದೆ. ಗ್ರಾಮಗಳ ಬಾವಿ, ಕೊಳ ಮತ್ತು ಕೊಳವೆಬಾವಿಗಳ ಅಂತರ್ಜಲ ಮಟ್ಟ ಏರಿರುವುದು ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಅಂಶ.

* ಜಿಲ್ಲೆಯಲ್ಲಿ ಮಳೆಯಾಶ್ರಿತ ಕೆರೆಗಳು ಹೆಚ್ಚಿದ್ದು, ಈ ದಿನಗಳಲ್ಲಿ ಕೆರೆಗಳಿಗೆ ರಕ್ಷಣೆ ಇಲ್ಲದೆ ಹೂಳು ತುಂಬಿ ನಾಶವಾಗುವ ಅಂಚಿನಲ್ಲಿವೆ. ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲೂಕುಗಳು ಬಯಲು ಮೈದಾನ ಪ್ರದೇಶಗಳಾಗಿದ್ದು, ಅಚ್ಚುಕಟ್ಟು ಪ್ರದೇಶದಲ್ಲಿನ ತೆಂಗಿನ ಬೆಳೆಗಳಿಗೆ ಬೋರ್‌ವೆಲ್ ಗಳಿಂದ ನೀರನ್ನು ಬಳಸುತ್ತಿರುವುದರಿಂದ ಕೆರೆಯ ರಕ್ಷಣೆಗೆ ಅಷ್ಟಾಗಿ ಮಹತ್ವ ನೀಡಿಲ್ಲ. ಕೆರೆ ಅಂಗಳ ತಿಪ್ಪೆಗುಂಡಿ ಮತ್ತು ಆಟದ ಮೈದಾನಗಳಾಗಿವೆ. ಚಾರಿತ್ರಿಕವಾಗಿ ನಿರ್ಮಾಣವಾದ ಕೆರೆಗಳು ಜೀವಂತವಾಗಿದ್ದು, ನಿರ್ವಹಣೆಯಲ್ಲಿ ಸ್ಥಳೀಯ ಮತ್ತು ಸರ್ಕಾರದ ವ್ಯವಸ್ಥೆ ಶೂನ್ಯವಾಗಿದೆ. ಹಾಸನ ಜಿಲ್ಲೆಯಲ್ಲಿನ ಗೊರೂರು ಜಲಾಶಯ ಮತ್ತು ನಾಲೆಗಳ ಅಬ್ಬರದಿಂದ ನಿರ್ಲಕ್ಷ್ಯ ವಹಿಸಲಾಗಿದೆ. ಕೆಲವು ಕೆರೆಗಳು ಮಾತ್ರ ನಾಲೆಗಳ ಸಂಪರ್ಕದಿಂದ ಹಿಂದಿನ ಮಹತ್ವ ಪಡೆದಿವೆ.

* ಆಧುನೀಕರಣ ಮತ್ತು ಜಾಗತೀಕರಣದ ಇಂದಿನ ದಿನಗಳಲ್ಲಿ, ಪ್ರಾಚೀನವಾಗಿ ಕೆರೆಗಳ ಬಗ್ಗೆ ಇದ್ದ ನಂಬಿಕೆ, ಆಚರಣೆಗಳು, ಸಂಪ್ರದಾಯಗಳು ಇಂದು ಕಣ್ಮರೆಯಾಗುತ್ತಿರುವುದು ಖೇದಕರದ ವಿಷಯವಾಗಿದೆ. ಪ್ರಾಚೀನ ಮತ್ತು ಮಧ್ಯಯುಗೀನ ಜನರಲ್ಲಿ ಕೆರೆಗಳ ಬಗೆಗೆ ಇದ್ದ ಭಾವನಾತ್ಮಕ ಸಂಬಂಧಗಳು, ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವ ಅವರ ಕಾರ್ಯಗಳು, ಕೆರೆ ನಿರ್ಮಾಣ ಮತ್ತು ನಿರ್ವಹಣೆಗಳ ವಿಷಯದಲ್ಲಿ ತೋರುತ್ತಿದ್ದ ಆಸಕ್ತಿಗಳು ಇಂದು ಕಡಿಮೆಯಾಗಿ, ಹೆಚ್ಚಿನ ಪ್ರಮಾಣದಲ್ಲಿ ಕೆರೆಗಳ ನಾಶ ಮತ್ತು ಬರಗಾಲದಂತಹ ಪರಿಸ್ಥಿತಿಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ.

* ಈ ಪರಿಸರದಲ್ಲಿ ದೊಡ್ಡ ಕೆರೆಗಳು ಮಾತ್ರ ಉಳಿದು ಬಳಕೆಯಾಗುತ್ತಿವೆ. ಸಣ್ಣ ಕೆರೆಗಳು ಒತ್ತುವರಿಯಾಗಿದ್ದು ಕಣ್ಮರೆಯಾಗುತ್ತಿವೆ. ಅನೇಕ ಕೆರೆಗಳು ಆಕಾರವನ್ನು ಕಳೆದುಕೊಳ್ಳುತ್ತಿವೆ. ಅವುಗಳಲ್ಲಿ ನೀರಿನ ಸಂಗ್ರಹಣ ಪ್ರಮಾಣ ಕಡಿಮೆಯಾಗುತ್ತಿದೆ. ಅವುಗಳ ಇರುವಿಕೆಯೇ ಹಾಳಾಗುತ್ತಿವೆ. ಅವುಗಳ ಸೌಂದರ್ಯ ಮಾಯವಾಗಿ ಅವಶೇಷಗಳು ಮಾತ್ರ ಉಳಿದಿವೆ. ಬಹುಪಾಲು ಕೆರೆಗಳು

ನಾಮಾವಶೇಷಗಳಾಗಿ ನಗರೀಕರಣಕ್ಕೆ ಮತ್ತು ಕೃಷಿಗೆ ಒತ್ತುವರಿಯಾಗುತ್ತಿವೆ. ಗ್ರಾಮೀಣ ಪ್ರದೇಶದ ಜನರು ಕೆರೆಗಳ ಸಂರಕ್ಷಣೆ ಸರ್ಕಾರದ ಜವಾಬ್ದಾರಿ ಎಂದು, ಕೆರೆಗಳ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ಇದೇ ರೀತಿ ಮುಂದುವರಿದರೆ ಮುಂದಿನ ಪೀಳಿಗೆಗೆ ಕೆರೆಗಳೇ ಇಲ್ಲದಂತಾಗುತ್ತದೆ. ಕೆರೆಗಳಲ್ಲಿ ಹೂಳೆತ್ತಿಸಿ, ಜೀರ್ಣೋದ್ಧಾರ ಮಾಡಿದರೆ ಮುಂದಿನ ಪೀಳಿಗೆಗೆ ಕೆರೆಗಳ ಅಸ್ತಿತ್ವವನ್ನು ಉಳಿಸಬಹುದು. ಇದಕ್ಕೆ ಸಂಬಂಧಪಟ್ಟ ಇಲಾಖೆ ಹಾಗೂ ಸರ್ಕಾರ ಗಮನ ಹರಿಸಬೇಕು. ಮುಖ್ಯವಾಗಿ ಸ್ಥಳೀಯರು ತಮ್ಮೂರಿನ ಕೆರೆಗಳ ಸಂರಕ್ಷಣೆಗಾಗಿ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು.

* ಜಿಲ್ಲೆಯ ಕೆರೆಗಳು ಹೂಳು ತುಂಬಿಕೊಂಡು ನೀರನ್ನು ಹಿಡಿದಿಡಲು ಸಾಧ್ಯವಿಲ್ಲದಿರುವ ಎಲ್ಲಾ ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕು. ಇದು ಜಲಸಂಪನ್ಮೂಲಗಳ ಪುನಃ ನಿರ್ಮಾಣದಲ್ಲಿ ಮೊದಲನೆಯ ಹೆಜ್ಜೆಯಾಗಬೇಕು. ಅಂತಹ ಎಲ್ಲಾ ಕೆರೆಗಳನ್ನು ಅವುಗಳ ಮೂಲ ಸಾಮರ್ಥ್ಯದ ಮಟ್ಟಕ್ಕೆ ಜೀರ್ಣೋದ್ಧಾರ ಮಾಡಿದಲ್ಲಿ ಕನಿಷ್ಠ ಬಂಡವಾಳದಿಂದಲೇ ಕೆರೆಗಳ ಕೆಳಗಿನ ನೀರಾವರಿ ಪ್ರದೇಶ ವಿಸ್ತಾರಗೊಳ್ಳುತ್ತದೆ. ಮತ್ತು ನಮ್ಮ ಕೃಷಿ ಉತ್ಪಾದನೆ ಹೆಚ್ಚುತ್ತದೆ. ಕೃಷಿ ಉತ್ಪಾದನೆ ಹೆಚ್ಚುವುದು ಮಾತ್ರವಲ್ಲ ಕೆರೆಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗೂ ಸಹಾಯಕವಾಗುತ್ತದೆ. ಕೆರೆಗಳಲ್ಲಿನ ಜಲಸಂಗ್ರಹವು ಹಳ್ಳಿಯ ಬಾವಿಗಳಲ್ಲಿನ ನೀರಿನ ಮಟ್ಟವನ್ನು ಉತ್ತಮವಾಗಿಸುತ್ತದೆ. ಅಲ್ಲದೆ ಹಳ್ಳಿಗಳ ಅರ್ಥವ್ಯವಸ್ಥೆಯನ್ನು ಅಭಿವೃದ್ಧಿ ಮಾಡುತ್ತವೆ.

* ನಮ್ಮ ಪೂರ್ವಿಕರು ಕೆರೆಗಳನ್ನು ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ ಕಾರಣಗಳಿಗಾಗಿ ನಿರ್ಮಿಸುತ್ತಿದ್ದರು. ತಮ್ಮ ಅನುಭವದ ನೆಲೆಯಲ್ಲಿ ಕೆರೆ ರಚನೆಯನ್ನು ಮಾಡುತ್ತಿದ್ದರು. ಆದರೆ ಇಂದು ಅವರ ತಂತ್ರಜ್ಞಾನವನ್ನು ನಾವು ಅರಿಯದೆ ಹೊಸದಾದ ತಂತ್ರಜ್ಞಾನದ ಮೊರೆ ಹೋಗಿ ಪಾರಂಪರಿಕವಾಗಿ ಬಂದಿರುವ ತಂತ್ರಜ್ಞಾನವನ್ನು ಅಲಕ್ಷ್ಯ ಮಾಡಿದ್ದೇವೆ. ಅಂದಿನ ತಂತ್ರಜ್ಞಾನವನ್ನು ನಾವು ಇಂದಿನ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡು ನಮ್ಮ ಆರ್ಥಿಕ ಜೀವನವನ್ನು ಸುಧಾರಿಸಿಕೊಳ್ಳುವತ್ತ ಗಮನ ಹರಿಸಬೇಕು. ಸರ್ಕಾರವು ಇತ್ತೀಚೆಗೆ ಕೆರೆ ಸಂರಕ್ಷಣೆಗಾಗಿ ಹಲವು ಕಾಯ್ದೆಗಳನ್ನು ತಂದಿದೆ. ಇವು ಕೇವಲ ಕಾನೂನುಗಳಾಗಿ ಉಳಿಯದೇ ಅಸ್ತಿತ್ವಕ್ಕೆ ಬರಬೇಕು ಎನ್ನುವುದು ನನ್ನ ಆಶಯ.

ಈ ಮಹಾಪ್ರಬಂಧದಲ್ಲಿ ಹಾಸನ ಪರಿಸರದ ಪ್ರಾಚೀನ ಕೆರೆಗಳನ್ನು ಪುನರ್‌ಪರಿಶೀಲಿಸಿ ಇಂದಿಗೂ ಅವುಗಳ ಅಸ್ತಿತ್ವ, ಅಳಿವು, ಉಳಿವು ಮತ್ತು ಪ್ರಯೋಜನವನ್ನು ಗುರುತಿಸುವ ಪ್ರಯತ್ನವನ್ನು ಗರಿಷ್ಠ ಪ್ರಮಾಣದಲ್ಲಿ ಮಾಡಲಾಗಿದೆ.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಪ್ರಾಥಮಿಕ ಆಕರಗಳು

- ಅಭಿಶಂಕರ ಕೆ., ೧೯೭೧: *ಹಾಸನ ಜಿಲ್ಲಾ ಗ್ಯಾಸೆಟಿಯರ್*, ಗೌರ್ನಮೆಂಟ್ ಪಬ್ಲಿಕೇಶನ್ಸ್, ಬೆಂಗಳೂರು.
- *ಅನ್ಯುಯಲ್ ರಿಪೋರ್ಟ್ಸ್ ಆನ್ ಇಂಡಿಯನ್ ಎಪಿಗ್ರಾಫಿ.*
- *ಅನ್ಯುಯಲ್ ರಿಪೋರ್ಟ್ಸ್ ಆನ್ ಸೌಥ್ ಇಂಡಿಯನ್ ಎಪಿಗ್ರಾಫಿ.*
- *ಎಪಿಗ್ರಾಫಿಯ ಕರ್ನಾಟಿಕ*(ಹಳೆಯ ಸಂಪುಟಗಳು), ೧ ರಿಂದ ೧೬
- *ಎಪಿಗ್ರಾಫಿಯ ಕರ್ನಾಟಿಕ*(ಹೊಸ ಸಂಪುಟಗಳು), ೧ ರಿಂದ ೧೦
- *ಎಪಿಗ್ರಾಫಿಯಾ ಇಂಡಿಕಾ ಸಂಪುಟಗಳು.*
- ಅಂಬಳಿಕೆ ಹಿರಿಯಣ್ಣ(ಸಂ), ೨೦೦೩: *ಕನ್ನಡ ವಿಷಯ ವಿಶ್ವಕೋಶ, ಭೂಗೋಳ ವಿಜ್ಞಾನ*, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- *ಕನ್ನಡ ವಿಷಯ ವಿಶ್ವಕೋಶ*, ೨೦೦೫: ಕರ್ನಾಟಕ ಪರಿಷ್ಕೃತ ಸಂಪುಟ-೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- *ಕನ್ನಡ ವಿಷಯ ವಿಶ್ವಕೋಶ*, ೨೦೦೫: ಕರ್ನಾಟಕ ಪರಿಷ್ಕೃತ ಸಂಪುಟ-೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- *ಕರ್ನಾಟಕ ಕೈಪಿಡಿ*, ೧೯೯೬: ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ.
- *ಕರ್ನಾಟಕ ರಾಜ್ಯ ಗ್ಯಾಸೆಟಿಯರ್‌ಗಳು.*
- *ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್ಸ್*
- ಸಚ್ಚಿದಾನಂದ ಶಂಕರ ಭಾರತೀ ಸ್ವಾಮಿಗಳು(ಕನ್ನಡ ಅನುವಾದ), ೨೦೦೫: *ಕೌಟಿಲ್ಯನ ಅರ್ಥಶಾಸ್ತ್ರ*, ಮೈಸೂರು ರಾಜ್ಯದ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಮೈಸೂರು.
- *ಸೌಥ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್*
- ಶ್ರೀನಿವಾಸ ಸಿರನೂರಕರ್, ೨೦೦೫: *ವಿಜ್ಞಾನೇಶ್ವರನ ಮಿತಾಕ್ಷರ*, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- ಹಯವದನರಾವ್ ಸಿ., ೧೯೮೪: *ಮೈಸೂರು ಗ್ಯಾಸೆಟಿಯರ್*. ಸಂಪುಟ-೫, ಬಿ.ಆರ್. ಪಬ್ಲಿಕೇಶನ್, ದೆಹಲಿ.

ಆನುಷಂಗಿಕ ಆಕರಗಳು

ಕನ್ನಡ ಗ್ರಂಥಗಳು

- ಅರ್ಕಸಾಲಿ ವೃಷಭೇಂದ್ರಚಾರ್, ೨೦೧೦: *ಮಳೆರಾಜ ಪರಂಪರೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಅನಸೂಯಾ ದೇವಾಂಗಮಠ, ವೀಣಾ ಹೂಗಾರ(ಸಂ), ೨೦೧೩: *ಕಥನಕವನಗಳ ಸಂಗ್ರಹ ಮತ್ತು ವಿಚಾರ ಸಾಹಿತ್ಯ*, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ಅಶೋಕ ಎಸ್. ಆಲೂರಾ, ಶಿವಾನಂದ ಬಿ., ಹೊಸಮನಿ, ದಾಸೋಗ ಜಿ.ಎಸ್., ೨೦೧೦: *ಬರಡಾಗುತ್ತಿರುವ ನಮ್ಮ ಭೂ ಸಂಪತ್ತು ಹಾಗೂ ಅದರ ರಕ್ಷಣೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಅಣ್ಣಿಗೇರಿ ಎ.ಎಂ., ಶೇಷಶಾಸ್ತ್ರಿ ಆರ್., ೧೯೭೫: *ಶಾಸನ ಸಂಗ್ರಹ, ಕನ್ನಡ ಸಾಹಿತ್ಯ ಪರಿಷತ್ತು*, ಬೆಂಗಳೂರು.
- ಉದಯರವಿ ಮಾವನೂರು, ೧೯೯೬: *ಆಲೂರು ತಾಲ್ಲೂಕು ಅವಲೋಕನ*, ರಾಧಾ ಪ್ರಕಾಶನ, ಮಾವನೂರು.
- ಉದಯ ರವಿ, ೨೦೧೦: *ಹಾಸನ ಜಿಲ್ಲಾ ವೈಶಿಷ್ಟ್ಯ*, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಾಸನ.
- ಕಲಬುರ್ಗಿ ಎಂ.ಎಂ., ೧೯೯೪: *ಕರ್ನಾಟಕದ ಕೈಫಿಯತ್ತುಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಕಲಬುರ್ಗಿ ಎಂ.ಎಂ., ೧೯೮೮: *ಮಾರ್ಗ–೧, ೨, ೩*, ಕರ್ನಾಟಕ ಬುಕ್ ಏಜೆನ್ಸಿ, ಗಾಂಧಿನಗರ, ಬೆಂಗಳೂರು.
- ಕಲಬುರ್ಗಿ ಎಂ.ಎಂ., ೧೯೮೩ : *ಕರ್ನಾಟಕ ಭಾರತಿ(ತ್ರೈಮಾಸಿಕ ಪತ್ರಿಕೆ)*, ಕರ್ನಾಟಕ ವಿ.ವಿ., ಧಾರವಾಡ.
- ಕೂಡ್ಲೂರು ವೆಂಕಟಪ್ಪ, ೨೦೦೭: *ಸ್ಥಳನಾಮ ವೀರರು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಕೊಟ್ರಯ್ಯ ಸಿ.ಟಿ.ಎಂ., ೨೦೦೯: *ವಿಜಯನಗರ ಕಾಲದ ತುಂಗಭದ್ರಾ ನದಿಯ ಅಣೆಕಟ್ಟುಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಗುಡ್ಡದೀಶ್ವರಪ್ಪ ಹೆಚ್., ೨೦೧೦: *ಬೆಂಗಳೂರು ಜಿಲ್ಲೆಯ ಶಾಸನಗಳು ಸಾಂಸ್ಕೃತಿಕ ಅಧ್ಯಯನ*, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.
- ಗೊರೂರು ರಾಮಸ್ವಾಮಿ ಅಯ್ಯಂಗಾರ್, ೧೯೭೭: *ಹಾಸನ ಜಿಲ್ಲಾ ದರ್ಶನ*, ಪಿ.ಬಿ.ಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು.
- ಗೊರೂರು ಅನಂತರಾಜು, ೨೦೦೯: *ಹಾಸನ ಜಿಲ್ಲೆಯ ದೇವಾಲಯಗಳು ದರ್ಶನ*, ಹುಣಸಿನಕೆರೆ ಬಡಾವಣೆ, ಹಾಸನ.
- ಗೋಪಾಲ್ ಆರ್.(ಸಂ), ೨೦೧೦: *ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು.

- ಗೋವಿಂದಯ್ಯ ಟಿ., ೧೯೦೪: *ಕರ್ನಾಟಕ ನೀರಾವರಿ*, ಅರ್ಥಶಾಸ್ತ್ರ ಸಮಾಜ ವಿಜ್ಞಾನ ಸಂಶೋಧನಾ ಸಂಸ್ಥೆ, ಬೆಂಗಳೂರು.
- ಚಿದಾನಂದ ಮೂರ್ತಿ ಎಂ., ೧೯೬೬: *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಚಿದಾನಂದ ಮೂರ್ತಿ ಎಂ., ೧೯೯೩: *ಹೊಸತು ಹೊಸತು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಚಂದ್ರ ಪೂಜಾರಿ(ಸಂ), ೨೦೦೨: *ಸಮುದಾಯ ಮತ್ತು ಸಹಭಾಗಿತ್ವ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಚಂದ್ರಶೇಖರಯ್ಯ ಬಿ.ಎಂ., ೨೦೦೫: *ಕರ್ನಾಟಕ ಸಾಂಸ್ಕೃತಿಕ ಪರಂಪರೆ*, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.
- ತಿ.ನಂ.ಶ್ರೀ., ೨೦೦೬: *ಸಮಗ್ರ ಗದ್ಯ*, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಬೆಂಗಳೂರು.
- ಧ್ರುವನಾರಾಯಣ ಎಂ., ೨೦೦೩: *ಕನ್ನೀರಾಂಬೆಯ ಕಥೆ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಧ್ರುವನಾರಾಯಣ(ಅನು), ೨೦೦೧: *ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ(ಮೂಲ:* ಕೊಟ್ರಯ್ಯ ಸಿ.ಟಿ.ಎಂ.), ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
- ದೇವರಕೊಂಡಾರೆಡ್ಡಿ(ಸಂ), ೨೦೦೬: *ಹಂಪಿ ಸಂಪುಟ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ನರಸಿಂಹೇಗೌಡ ಎಸ್.ಕೆ., ವೆಂಕಟರಾವ್ ಬಿ.ವಿ., ಹಿತ್ತಲಮನಿ ವಿ.ಸಿ.(ಅನು) ೧೯೭೩: *ಮಣ್ಣು ಮತ್ತು ನೀರು*, ಸಂರಕ್ಷಣಾ ಕೈಪಿಡಿ. ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
- ನರೇಗಲ್ಲ ಎಂ.ಎಸ್., ೨೦೦೯: *ಉತ್ತರ ಗದಗ ಜಿಲ್ಲೆಯ ಶಾಸನಗಳು ಒಂದು ಅಧ್ಯಯನ*, ರಶ್ಮಿ ಪ್ರಕಾಶನ, ಗದಗ.
- ನಾಗರಾಜ ಟಿ.ವಿ., ೨೦೦೮: *ಮೈಸೂರು ಸಂಸ್ಥಾನದಲ್ಲಿ ನೀರಾವರಿ(ಕೋಲಾರ ಜಿಲ್ಲೆಯ ಒಂದು ಅಧ್ಯಯನ ೧೮೦೦-೧೯೫೬)*, ಜನನಿಲ ಪ್ರಕಾಶನ, ಬೆಂಗಳೂರು.
- ನಾಯಕ ಡಿ.ಬಿ.(ಸಂ), ೨೦೦೫: *ಜಾನಪದ ಲೇಖನಗಳು*, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ.
- ನಾರಾಯಣ ಕೆ.ವಿ.(ಸಂ), ೧೯೯೯: *ಸ್ಥಳನಾಮಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ನಾಗೇಶ್ ಎಚ್.ವಿ., ೧೯೮೬: *ಭಾರತೀಯ ಗ್ರಾಮ(ಕೆಲವು ಅಧ್ಯಯನಗಳು)*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ನಾರಾಯಣ ಸ್ವಾಮಿ ಕೆ.ವೈ., ೨೦೦೦: *ನೀರದೀವಿಗೆ(ಜಲ ಸಂಸ್ಕೃತಿ ಅನ್ವೇಷಣೆ)*, ಲೋಹಿಯಾ ಪ್ರಕಾಶನ, ಬಳ್ಳಾರಿ.

• ನೀಲತ್ತಹಳ್ಳಿ ಕಸ್ತೂರಿ(ಅನು), ೨೦೦೦: *ಕರ್ನಾಟಕದಲ್ಲಿ ಕೆರೆ ನೀರಾವರಿ(ಮೂಲ: ದೀಕ್ಷಿತ್ ಜಿ.ಎಸ್., ಕುಪ್ಪುಸ್ವಾಮಿ ಜಿ.ಆರ್., ಮೋಹನ್ ಎಸ್.ಕೆ.)*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ನಂಜುಂಡಸ್ವಾಮಿ ಬಿ., ೨೦೦೩: *ಕಲ್ಪಸಿರಿ*, ಅಖಿಲ ಭಾರತ ೭೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

• ಪಾಟೀಲ ಎಸ್.ವಿ., ದೀಕ್ಷಿತ್ ಲ.ಅ., ೨೦೦೬: *ನೀರು ನಿರ್ವಹಣೆ*, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.

• ಪುಟ್ಟಪ್ಪ ಕೆ.ವಿ., ೧೯೬೪: *ನೀರಾವರಿ*, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

• ಪ್ರಹ್ಲಾದರಾವ್ ಕೆ., ೨೦೦೫: *ಕೆರೆಯ ಹಾರ(ಕೋಲಾರ ಜಿಲ್ಲೆಯ ಜಲಪರ್ವ)*, ಕೋಲಾರ ಪತ್ರಿಕೆ ಪ್ರಕಾಶನ, ಕೋಲಾರ.

• ಬಸವರಾಜ ಕುಂಚೂರು, ೨೦೦೯: *ನಮ್ಮೂರ ಕೆರೆಗಳು(ಗ್ರಾಮೀಣ ಜಲ ದೇವತೆಗಳು)*, ಶ್ರೀ ಚಕ್ರ ಪ್ರಕಾಶನ, ಕುಂಚೂರು, ದಾವಣಗೆರೆ.

• ಬಸವರಾಜು ಎಲ್., ೨೦೦೦: *ಸರಳ ಸಿದ್ಧರಾಮ ಚರಿತೆ*, ಲೋಹಿಯಾ ಪ್ರಕಾಶನ, ಬಳ್ಳಾರಿ.

• ಬಸವರಾಜ ಸಬರದ, ೨೦೧೦: *ಜಾನಪದ ಆಯಮಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ಬ್ರಹ್ಮಪ್ಪ ಜಿ., ೨೦೦೦: *ಶ್ರವಣಬೆಳಗೊಳ*, ಸಪ್ನ ಬುಕ್ ಹೌಸ್, ಬೆಂಗಳೂರು.

• ಬೋರಲಿಂಗಯ್ಯ ಹಿ.ಚಿ.(ಸಂ), ೧೯೯೬: *ಕರ್ನಾಟಕ ಜನಪದ ಕಲೆಗಳ ಕೋಶ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ಮಠಪತಿ ಜೆ.ವಿ., ೧೯೯೩: *ಸುಧಾರಿತ ನೀರಾವರಿ ಪದ್ಧತಿಗಳು*, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

• ಮಹದೇವ ಸಿ.(ಸಂ), ೨೦೦೯: *ತೊಣ್ಣೂರು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ಮಳಲಿ ವಸಂತಕುಮಾರ್(ಸಂ), ೧೯೯೬: *ಹೊಯ್ಸಳ ಸಂಪದ*, ಅಖಿಲ ಭಾರತ ೬೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಹಾಸನ.

• ಮುರಿಗೆಪ್ಪ ಎ.(ಸಂ), ೨೦೧೧: *ದಕ್ಷಿಣ ಭಾರತೀಯ ಜಾನಪದ ಕೋಶ*, ಸಂಪುಟ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ಮುನಿರಾಜಪ್ಪ(ಸಂ), ೨೦೦೯: *ಕರ್ನಾಟಕ ಕೆರೆ ನೀರಾವರಿ ಅಧ್ಯಯನ*, ಇತಿಹಾಸ ಮತ್ತು ಪ್ರವಾಸೋದ್ಯಮ ವಿಭಾಗ, ರೂರಲ್ ಕಾಲೇಜು, ಕನಕಪುರ.

• ಮುನಿಸ್ವಾಮಿಗೌಡ ಕೆ.ಎನ್., ಹನುಮಂತರಾಜು ಟಿ.ಹೆಚ್., ೨೦೧೨: *ತೋಟಗಾರಿಕೆ ಬೆಳೆಗಳ ಸಮಗ್ರ ಕೈಪಿಡಿ*, ಕೃಷಿ ವಿಕಾಸ್ ಪಬ್ಲಿಕೇಷನ್ಸ್, ಬೆಂಗಳೂರು.

- ಮೂರ್ತಿ ಎನ್.ಎಸ್., ೧೯೭೬: *ನೀರಾವರಿ*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಮೋಹನ್‌ಕೃಷ್ಣ ರೈ.ಕೆ., ೨೦೦೪: *ಪ್ರಭುತ್ವ ಮತ್ತು ಜನತೆ*, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ.
- ಮಂಜುನಾಥ್ ಆರ್., ೨೦೦೯: *ಕೆರೆ ಕರಗುವ ಸಮಯ*, ಕೆ.ಎಚ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು.
- ಯೋಗೀಶ್ವರಪ್ಪ ಡಿ.ಎನ್., ೨೦೦೩: ಕಲ್ಪಸಿರಿ, ಅಖಿಲ ಭಾರತ ೬೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ ತುಮಕೂರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಯೋಗೀಶ್ವರಪ್ಪ ಡಿ.ಎನ್., ೨೦೧೧: *ಚರಿತ್ರೆಯ ಪುಟಗಳು*, ಸಿವಿಜಿ ಇಂಡಿಯಾ, ಬೆಂಗಳೂರು.
- ರಮೇಶ್ ಸ.ಚಿ., ೨೦೧೦: *ಕರ್ನಾಟಕ ಜನಪದ ಆಚರಣೆಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ರಮೇಶ್ ಸ.ಚಿ., ೨೦೦೫: *ನೀರು: ಒಂದು ಜಾನಪದ ನೋಟ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ರಮೇಶ್ ಸ.ಚಿ., ೨೦೧೧: *ಕೃಷಿ : ಪಾರಂಪರಿಕ ಜ್ಞಾನ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ರಾಜಗೋಪಾಲ್ ಟಿ.ಎಸ್.. ೨೦೦೦: *ಬೇಲೂರು*, ಸಪ್ನ ಬುಕ್ ಹೌಸ್, ಬೆಂಗಳೂರು.
- ರಾಜಾರಾಮ ಹೆಗಡೆ(ಸಂ)., ೨೦೦೨: *ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ರಾಜಪ್ಪ ಟಿ.ಎಸ್.(ಸಂ), ೧೯೭೪: ಕೆರೆ ಹೊನ್ನಮ್ಮ ಮತ್ತು ಇತರೆ ಲಾವಣಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ರಂಗನಾಥ., ೨೦೦೬: *ಭಾರತ ಪ್ರಾದೇಶಿಕ ಮತ್ತು ಆರ್ಥಿಕ ಭೂಗೋಳಶಾಸ್ತ್ರ*, ವಿದ್ಯಾನಿಧಿ ಪ್ರಕಾಶನ, ಬೆಂಗಳೂರು.
- ಲಲಿತಾಂಬ ಎನ್.ಆರ್., ೨೦೧೧: *ಮಧ್ಯಕಾಲೀನ ಕರ್ನಾಟಕದ ಸಾಮಾಜಿಕ ಸಂಚಲನ (ಅರಸೀಕೆರೆ ತಾಲ್ಲೂಕಿನ ಶಾಸನಗಳನ್ನು ಅನುಲಕ್ಷಿಸಿ)*, ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್– ಕೃಷ್ಣಾಪುರದೊಡ್ಡಿ, ಬೆಂಗಳೂರು.
- ಲಕ್ಷ್ಮಣ್ ತೆಲಗಾವಿ(ಸಂ), ೧೯೮೭ : *ಹರತಿಸಿರಿ*, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಹಿರಿಯೂರು.
- ಲಕ್ಷ್ಮಣ್ ತೆಲಗಾವಿ, ೨೦೦೪: *ಮೌರ್ಯ ಮತ್ತು ಶಾತವಾಹನಯುಗ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ವಾಸುದೇವನ್ ಸಿ.ಎಸ್., ೨೦೦೧: *ಹಂಪಿ ಪರಿಸರದ ಕೆರೆಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ವಾಸುದೇವ ಬಡಿಗೇರ(ಸಂ), ೨೦೦೮: *ಹಾನಗಲ್ಲು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ವಾಸುದೇವ ಬಡಿಗೇರ, ೨೦೧೨: ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ವೀರೇಂದ್ರ ಶೀಲವಂತ, ೨೦೧೦: *ಕೃಷಿ ಆಚರಣೆಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ವಿಶ್ವನಾಥನ್, ೧೯೯೬: *ಸ್ಥಳನಾಮಗಳು*, ದೇವಿ ಪ್ರಕಾಶನ, ಮೈಸೂರು.

• ವೆಂಕಟೇಶ ಜೆ., ಶಶೀಧರ ಕೆ.ಸಿ., ಖಾನ್ ಎಂ.ಎಂ., ಮೆಲಾಂಟಾ ಕೆ.ಆರ್., ೧೯೯೪: *ಮಳೆಯಾಶ್ರಿತ ತೋಟಗಾರಿಕೆ*, ತಾಂತ್ರಿಕ ಅಭಿವೃದ್ಧಿ ಕೇಂದ್ರ(ಸಿ.ಟಿ.ಡಿ.), ಬೆಂಗಳೂರು.

• ಶಾಂತ ವೀರಭದ್ರಯ್ಯ ಎನ್.ಎಂ., ೨೦೦೮: *ಕೃಷಿ ವಿಜ್ಞಾನ*, ಕೃಷಿ ವಿಜ್ಞಾನ ವಾಹಿನಿ, ಸಂಜಯ ನಗರ ಬೆಂಗಳೂರು.

• ಶಶಿಧರ ಕೆ.ಸಿ., ೨೦೦೨: *ಜಲಾನಯನ ಸಮಗ್ರ ಅಭಿವೃದ್ಧಿ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

• ಶಿರೂರ ಬಿ.ವ್ಹಿ., ೧೯೭೬: *ಶ್ರವಣಬೆಳ್ಗೊಳ ರಾಜಕೀಯ ಸಾಹಿತ್ಯ ಸಾಂಸ್ಕೃತಿಕ ಮಹತ್ವ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

• ಶಿವತಾರಕ್ ಕೆ.ಬಿ., ೨೦೦೧: *ಕರ್ನಾಟಕ ಪುರಾತತ್ವ ನೆಲೆಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ಶಿವರುದ್ರಪ್ಪ ಜಿ.ಎಸ್.(ಸಂ), ೧೯೮೩: *ಶ್ರವಣಬೆಳಗೊಳ ಒಂದು ಸಮೀಕ್ಷೆ*, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

• ಶಿವಶಂಕರರಾವ್, ೧೯೭೨: *ನೀರಾವರಿ ಸಮಸ್ಯೆಗಳು*, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

• ಶ್ರೀಧರ., ೨೦೦೮: *ತುಮಕೂರು ಪರಿಸರದ ಐತಿಹಾಸಿಕ ಕೆರೆಗಳ ಒಂದು ಅವಲೋಕನ*, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

• ಶ್ರೀವತ್ಸ ಎಸ್.ವಟಿ., ೨೦೧೧: ಬೇಲೂರು ಮೇಲೆ ಹೊಸ ಬೆಳಕು, ಹೊಯ್ಸಳ ಪ್ರಕಾಶನ, ಹಾಸನ.

• ಶೇಷಗಿರಿರಾವ್ ಎಲ್.ಎಸ್., ೧೯೯೪: *ಕಿರಿಯ ಕರ್ನಾಟಕ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ಸಕಲೇಶ್ ಮ., ೨೦೦೨: *ಹೊಯ್ಸಳೋದಯ ಸಂಶೋಧನ*, ಹಿಮಶೈಲ ಪ್ರಕಾಶನ, ಶಿವಮೊಗ್ಗ.

• ಸ್ವಸ್ತಿ ಶ್ರೀಚಾರು ಕೀರ್ತಿ ಭಟ್ಟಾರಕ ಸ್ವಾಮಿಜಿ, ೧೯೮೮: *ಶ್ರವಣಬೆಳಗೊಳದ ಶಾಸನಗಳು*, ಚಂದ್ರಗುಪ್ತ ಗ್ರಂಥಮಾಲೆ, ಶ್ರವಣಬೆಳಗೊಳ.

• ಸಿದ್ದಲಿಂಗಯ್ಯ, ೧೯೯೭: *ಗ್ರಾಮದೇವತೆಗಳು*, ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು.

• ಸಿದ್ದರಾಮಯ್ಯ ಜಿ.ಎಸ್., ಉಷಾಕಿರಣ್., ೨೦೦೬: *ಸುಸ್ಥಿರ ಕೃಷಿ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

• ಸುಬ್ಬಣ್ಣ ರೈ ಎ., ೧೯೯೪: *ದಕ್ಷಿಣಕನ್ನಡ ಜಿಲ್ಲೆಯ ಐತಿಹ್ಯಗಳು*, ಕನ್ನಡ ಅಧ್ಯಯನ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬೈ.

• ಸೋಮಣ್ಣ, ೨೦೧೦: *ವ್ಯವಸಾಯ ಸಂಬಂಧಿ ಆಚರಣೆಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ಸೋಮಪ್ಪ ಹೆಚ್.ಡಿ., ೨೦೦೩: *ಅಂತರ ಜಲ ಸಂಪತ್ತು*, ಸಾಯಿಗೀತ ಪ್ರಕಾಶನ, ಬೆಂಗಳೂರು.

• ಸೋಮೇಶ, ೨೦೧೧: *ಡಣಾಯಕನ ಕೆರೆ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

• ಸಂಗಪ್ಪ ಚನ್ನಪ್ಪ ಕುಬಸದ, ೧೯೮೨: *ನೀರಾವರಿ*, ಆನಂದ ಪಬ್ಲಿಕೇಶನ್ಸ್, ಧಾರವಾಡ.

• ಸಂತೇಬೆನ್ನೂರು ಸುಮತೀಂದ್ರ ನಾಡಿಗ್, ೨೦೦೭: *ಸೂಳೆಕೆರೆ ಸಾಂಗತ್ಯ(ಶ್ರೀ ಸಿದ್ಧೇಶ್ವರ ಚರಿತೆ)*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

• ಸಂಪದ್ಗಿರಿ ರಾವ್ ಕೆ. (ಸಂ), ೨೦೦೬: *ಕರ್ನಾಟಕ ಪರಂಪರೆ(ಪ್ರಾಗೈತಿಹಾಸ ಕಾಲದಿಂದ ವಿಜಯನಗರ ಸಾಮ್ರಾಜ್ಯದ ಕಾಲದವರೆಗೆ)*, ಸಂಪುಟ–೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

• ಹರಿಹರ ಶ್ರೀನಿವಾಸರಾವ್, ೨೦೧೦: *ಚಾವುಂಡರಾಯನ ಲೋಕೋಪಕಾರದಲ್ಲಿ ಜಲವಿಜ್ಞಾನ ತಂತ್ರಜ್ಞಾನ*, ಕ್ನನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

• ಹಳ್ಳಿಕೇರಿ ಎಫ್.ಟಿ., ೧೯೯೬: *ಕೆರೆಯ ಪದ್ಮರಸ ಮತ್ತು ಆತನ ವಂಶಜರು ಒಂದು ಅಧ್ಯಯನ*, ವಿಕಾಸನ ಪ್ರಕಾಶನ, ಕಮಲಾಪುರ.

ಕನ್ನಡ ಲೇಖನಗಳು

• ಉಷಾರಾಣಿ ಎಚ್.ಎಸ್., ೧೯೯೭: *ಹೊಯ್ಸಳ ಕಾಲದ ಕೆರೆ ನೀರಾವರಿ*, ಇತಿಹಾಸ ದರ್ಶನ, ಸಂಪುಟ–೭, ಇತಿಹಾಸ ಅಕಾಡೆಮಿ, ಬೆಂಗಳೂರು.

• ಕಾಳಸ್ವಾಮಿ, ೨೦೧೧: *ಚಿಕ್ಕಮಗಳೂರು ಜಿಲ್ಲೆಯ ಶಾಸನೋಕ್ತ ಕೆರೆಗಳು ಒಂದು ಅವಲೋಕನ*, ಸಂಪುಟ–೧೦ ಸ್ಟಡಿಸ್ ಇನ್ ಕರ್ನಾಟಕ ಹಿಸ್ಟರಿ ಆ್ಯಂಡ್ ಕಲ್ಚರ್.

• ಕೃಷ್ಣ, ೨೦೦೬: *ವಿಜಯನಗರ ನೀರಾವರಿ ಪದ್ಧತಿ ಒಂದು ಹೊಸ ಸಂಶೋಧನೆ*, ವಿಜಯನಗರ ಅಧ್ಯಯನ, ಸಂಪುಟ ೧೧, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

• ಕೃಷ್ಣಮೂರ್ತಿ ಪಿ.ವಿ., ೨೦೦೩: *ಕೆಲವು ಶಾಸನೋಕ್ತ ವ್ಯಕ್ತಿ ನಾಮಗಳ ಕೆರೆಗಳು*, ಶಾಸನ ಅಧ್ಯಯನ, ಸಂಪುಟ–೧, ಸಂಚಿಕೆ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ಚನ್ನಬಸಪ್ಪ ಎಸ್. ಪಾಟೀಲ, ೧೯೯೬: *ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ*, ವಿಜಯನಗರ ಅಧ್ಯಯನ, ಸಂ.೧, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಬೆಂಗಳೂರು.

• ಚನ್ನಬಸಪ್ಪ ಟಿ. ಆರ್., ೨೦೦೫: *ಗ್ರಾಮ ಪಂಚಾಯತಿ : ಪ್ರಸ್ತುತ ಸಮಸ್ಯೆಗಳು; ಅಭಿವೃದ್ಧಿ ಅಧ್ಯಯನ.* ಸಂ–೩, ಸಂಚಿಕೆ–೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ, ಹಂಪಿ.

• ಚಂದ್ರಶೇಖರ್ ಎಚ್., ೨೦೦೨: *ಕರ್ನಾಟಕದಲ್ಲಿ ಜಲ ಸಂಪತ್ತು ಮತ್ತು ನೀರಾವರಿ, ಕರ್ನಾಟಕ ಸಂಗಾತಿ,* ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

• ಚಂದ್ರಶೇಖರ್ ಎಸ್. ಪಾಟೀಲ, ೨೦೦೦: *ಛತ್ರದಹಳ್ಳಿ ಮತ್ತು ತಂಬ್ರಹಳ್ಳಿಯ ಬಾವಿಗಳು, ವಿಜಯನಗರ ಅಧ್ಯಯನ,* ಸಂ. ೫, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಬೆಂಗಳೂರು.

• ಜಗದೀಶ್, ೨೦೦೬: *ಮೆಟ್ಟಿಲು ಪುಷ್ಕರಣಿಯ ನಿರ್ಮಾಣ ಪ್ರಕ್ರಿಯೆ, ವಿಜಯನಗರ ಅಧ್ಯಯನ,* ಸಂಪುಟ–೯, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

• ದ್ಯಾಮನಗೌಡ್ರು ವ್ಹಿ.ಕೆ., ೨೦೦೮: *ಕೆರೆ–ಕಟ್ಟೆ, ಹಾನಗಲ್ಲು,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ದೀಕ್ಷಿತ್ ಜಿ.ಎಸ್., ೧೯೯೭: *ಕೆರೆಗಳ ಬಗ್ಗೆ ಐತಿಹಾಸಿಕ ಸಂಶೋಧನೆಯ ಅವಶ್ಯಕತೆ, ಇತಿಹಾಸ ದರ್ಶನ,* ಸಂ.೭, ಇತಿಹಾಸ ಅಕಾಡೆಮಿ, ಬೆಂಗಳೂರು.

• ನಾಗರಾಜ ಟಿ.ವಿ., ೨೦೦೮: *ಕೆರೆಗಳ ಸಾಂದ್ರತೆ–ಒಂದು ಅವಲೋಕನ, ಇತಿಹಾಸ ದರ್ಶನ,* ಸಂ. ೨೩, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

• ನಾಗರಾಜ ಟಿ.ವಿ., ೨೦೧೦: *ಕದಂಬರ ನೀರಾವರಿ ಚೌಕಟ್ಟು, ಇತಿಹಾಸ ದರ್ಶನ,* ಸಂ.೨೫, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

• ನಾಗರಾಜ ಟಿ.ವಿ., ೨೦೦೩: *ಟ್ಯಾಂಕ್ ಪಂಚಾಯತಿ ಕಾಯಿದೆ, ಇತಿಹಾಸ ದರ್ಶನ,* ಸಂ.೧೮, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

• ನಾಗರಾಜ ಟಿ.ವಿ., ೨೦೦೭: *ಚಿತ್ರದುರ್ಗ ಜಿಲ್ಲೆಯ ಶಾಸನೋಕ್ತ ಕೆರೆ ನೀರಾವರಿ, ಇತಿಹಾಸ ದರ್ಶನ,* ಸಂ.೨೨, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

• ಬಾಲಸುಬ್ರಮಣ್ಯ, ೨೦೦೩: *ರಾಜಧಾನಿ ವಿಜಯನಗರ ನೀರು ಪೂರೈಕೆಗಳು,* ವಿಜಯನಗರ ಅಧ್ಯಯನ, ಸಂಪುಟ ೮, ಪ್ರಾಚ್ಯಾವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

• ಮಹದೇವ ಸಿ., ೨೦೦೨: *ಕೃಷಿ ಮತ್ತು ನೀರಾವರಿ, ಹೊಸಪೇಟೆ ತಾಲ್ಲೂಕು ದರ್ಶನ,* ಮಹದೇವ ಸಿ., ಸುಬ್ಬಣ್ಣ ರೈ ಎ., ಮಾಧವ ಪೆರಾಜೆ(ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ಮಹಾಂತೇಶ ಎನ್.ಎಸ್., ೨೦೧೦: *ಕೆರೆ ನೀರಾವರಿ, ಜಗಳೂರು ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ,* ಮಾಲೆ– ೪, ಸೋಮಶೇಖರ್ ಎಸ್.ವೈ.(ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ಮೋಹನ್ ಎಸ್.ಕೆ., ೧೯೯೭: *ಕರ್ನಾಟಕದ ಕೆಲವು ಹಳೆಯ ಕೆರೆಗಳು, ಇತಿಹಾಸ ದರ್ಶನ,* ಸಂ.೭ ಇತಿಹಾಸ ಅಕಾಡೆಮಿ, ಬೆಂಗಳೂರು.

- ಯೋಗಿಶ್ ಡಿ.ಎನ್., ೨೦೦೨: *ಕಲ್ಪಸಿರಿ*, ನಂಜುಂಡ ಸ್ವಾಮಿ(ಸಂ), ಅಖಿಲ ಭಾರತ ೬೯ ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
- ರಾಜಮಣಿ ರಾಮಕುಂಜ, ೨೦೦೩: *ಬಂಟ್ವಾಳದ ಜಲ ಸಂಪನ್ಮೂಲ, ಬಂಟ್ವಾಳ ಇತಿಹಾಸ ದರ್ಶನ.* ಭಾಗ-೧, ರಾಣಿಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ಬಂಟ್ವಾಳ.
- ಲಿಂಗರಾಜು, ೨೦೧೦: *ತೊಣ್ಣೂರು ಕೆರೆಯ ವಿಶಿಷ್ಟ ಇತಿಹಾಸ, ಇತಿಹಾಸ ದರ್ಶನ*, ಸಂ.೨೩, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.
- ವಾಸುದೇವನ್ ಸಿ.ಎಸ್., ೨೦೦೪: *ವಿಜಯನಗರ ಪಟ್ಟಣದ ಜಲ ಸಾರಿಗೆ ವ್ಯವಸ್ಥೆ, ವಿಜಯನಗರ ಅಧ್ಯಯನ*, ಸಂ-೯, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.
- ವಾಸುದೇವ್ ಸಿ.ಎಸ್., ೨೦೦೭: *ಕೃಷಿ ಮತ್ತು ನೀರಾವರಿ ವ್ಯವಸ್ಥೆ, ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ*, ರಮೇಶನಾಯಕ(ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೧: *ವಿಜಯನಗರ ಕಾಲದ ಮೀನುಗಾರಿಕೆ ಮತ್ತು ಅಂಬಿಗತನ, ವಿಜಯನಗರ ಅಧ್ಯಯನ*, ಸಂ-೬, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಬೆಂಗಳೂರು.
- ಶ್ರೀಧರ, ೨೦೧೦: *ತುಮಕೂರು ಪರಿಸರದ ಐತಿಹಾಸಿಕ ಕೆರೆಗಳು, ಇತಹಾಸ ದರ್ಶನ*, ಸಂ-೨೫, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.
- ಸ್ವಾಮಿ ಲ.ನ., ೨೦೧೧: *ಕೆರೆ, ಕಟ್ಟೆಗಳು*, ನಾಗಮಂಗಲ, ಮಹದೇವ ಸಿ.(ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಿ.ಎಚ್.ಡಿ. ಮತ್ತು ಎಂ.ಫಿಲ್. ಸಂಶೋಧನಾ ಪ್ರಬಂಧಗಳು

- ಅನುರಾಧ ಪಾಟೀಲ್ ಅರ್., ೨೦೦೯: *ದಾವಣಗೆರೆ ಜಿಲ್ಲೆಯಲ್ಲಿ ವಿಜಯನಗರ ಮತ್ತು ನಾಯಕರ ಕಾಲದ ಕೃಷಿ ವ್ಯವಸ್ಥೆ(ಕ್ರಿ.ಶ. ೧೩೩೬-೧೮೦೦)*, ಪಿ.ಎಚ್.ಡಿ. ಮಹಾಪ್ರಬಂಧ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ
- ಅನಂದಕುಮಾರ್ ಡಿ.ಎನ್., ೨೦೦೮: *ಮಂಡ್ಯ ಜಿಲ್ಲೆಯ ಕೆರೆ ನೀರಾವರಿ ಪದ್ಧತಿ ಒಂದು ಚಾರಿತ್ರಿಕ ಅಧ್ಯಯನ*, ಎಂ.ಫಿಲ್, ಕಿರುಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಉಮಾದೇವಿ ಮ. ಹಂಚಿನಮನಿ, ೨೦೦೯: *ಜಮಖಂಡಿಯ ಕೆರೆಗಳು*, ಎಂ.ಫಿಲ್, ಕಿರುಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ಧನಂಜಯ ಸಿ., ೨೦೧೧: *ಪಾವಗಡ ತಾಲೂಕು ಕೆರೆಗಳು*, ಎಂ.ಫಿಲ್, ಕಿರುಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ಪದ್ಮ ಬಿ.ಎಸ್., ೨೦೧೦: *ತುರುವೇಕೆರೆ ಪರಿಸರದ ಕೆರೆಗಳು: ಒಂದು ಸಾಂಸ್ಕೃತಿಕ ಅಧ್ಯಯನ*, ಎಂ.ಫಿಲ್, ಕಿರುಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ವೆಂಕಟೇಶ್ ಎಂ., ೨೦೦೭: *ನೀರಾವರಿ ನಿರ್ವಹಣೆಯಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳ ಪಾತ್ರ*, ಪಿ.ಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

• ಶ್ರೀಧರ, ೨೦೧೦: *ಕೆರೆ ನೀರಾವರಿ ಇತಿಹಾಸ*, ಪಿ.ಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

• ಶಿಲ್ಪ ಶ್ರೀ ಸಿ.ಎನ್., ೨೦೧೦: *ಹೊಯ್ಸಳರ ಕಾಲದಲ್ಲಿ ದಾನಿಗಳ ಪಾತ್ರ– ಒಂದು ಅಧ್ಯಯನ*, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

• ಶಂಕರಪ್ಪ ಬಡಿಗೇರ, ೨೦೧೫: *ಗದಗ ಜಿಲ್ಲೆಯ ಕೆರೆ ಮತ್ತು ಬಾವಿಗಳು(ಚಾರಿತ್ರಿಕ ಅಧ್ಯಯನ)*, ಪಿ.ಎಚ್.ಡಿ. ಮಹಾಪ್ರಬಂಧ, ಕನ್ನಡವಿಶ್ವವಿದ್ಯಾಲಯ, ಹಂಪಿ.

• ಸೌಮ್ಯಶ್ರೀ ಎಸ್.ಜಿ., ೨೦೧೧: ಹಾರನಹಳ್ಳಿ ಚನ್ನಕೇಶವಸ್ವಾಮಿ ದೇವಾಲಯದ ಅಧ್ಯಯನ, ಎಂ.ಎ. ಪದವಿಯ ಕಿರು ಪ್ರಬಂಧ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ.

ಪತ್ರಿಕೆ ಮತ್ತು ವರದಿಗಳು

• ಪ್ರಜಾವಾಣಿ ದಿನಪತ್ರಿಕೆ

• ಸಂಯುಕ್ತ ಕರ್ನಾಟಕ ದಿನಪತ್ರಿಕೆ

• ವಿಜಯ ಕರ್ನಾಟಕ ದಿನಪತ್ರಿಕೆ

• ತುಷಾರ ಮಾಸಪತ್ರಿಕೆ, ಬೆಂಗಳೂರು

• ಸ್ಪರ್ಧಾಸ್ಫೂರ್ತಿ ತಿಂಗಳ ನಿಯಕಾಲಿಕೆ

• ಸಣ್ಣ ನೀರಾವರಿ ಇಲಾಖೆ ವರದಿ, ಹಾಸನಜಿಲ್ಲೆ

• ಸಹಾಯಕ ಕೃಷಿ ಇಲಾಖೆಯ ವರದಿ, ಹಾಸನ ಜಿಲ್ಲೆ

• ಕಣಜ.ಇನ್, ಅಂತರ್ಜಾಲದಿಂದ ಪಡೆದ ಮಾಹಿತಿ.

ಇಂಗ್ಲಿಷ್ ಪುಸ್ತಕಗಳು

• Buchanan Francis, 1988 : *A Journey from Madras through the countries of Mysore,* Canaras and Malabar- voll. 1, 2, 3, The Asian Educational Services, New Delhi.

• Devaraj D.V., Chabnnabasappa S. Patil., 1991: *Vijayanagara progress of research 1987-88,* Directorate of Archaeology Museums, Mysore.

• Dhawan B.D., 1989: *Studies in irrigation and water management,* common wealth publishers, New Delhi.

• Dhawam B.D., 1993: *Indian water resource development for irrigation,* commonwealth publications, New Delhi.

• Dikshit G.S., Kuppaswamy G.R., Mohan Krishna S.K., 1993: *Irrigation in Karnataka A historical survey,* Bengaluru.

• Gopal B.R.(Ed), 1995: *Vijayanagara inscriptions*, vo ll-III, Directorate of Archaeology and Museums, Mysore.

• Jain S. K., Singh U.P., 2006 : *water resources systems planning and management,* printed and hound at raj kamal electronic press, Delhi.

• Jha U. M., 1984: *irrigation and agricultural development,* Deepa Publications, New Delhi.

• Kotraiah C.T.M., 1995: *Irrigation systems under vijayanagara empire,* Directorate of Archaeology Museums, Mysore.

• Kham M.A., 2002: *Watershed management for sustainable agriculture,* agrobios(India) agro house, Jodhapur.

• Krishnamacharlu C.R.(Ed), 1986: *Bombay Karnataka, Inscriptions,* voll XI, the director general Archaeological Survey of India, New delhi.

• Patil V.C. and Angadi S.S., 1997: *Drip Irrigation, University of Agriculture Sciences,* Dharwad.

• Randhawa M.S., 1983: *A History of agriculture of india 1757-1947*, Voll. II Indian council of agricultural research, New Delhi.

• Ramesh K.V., 1984: *Inscriptions of the western Gangas*, Agrem Kala Prakshan, New Delhi.

• Satpathy T., 1984: *Irrigation and economic development*, S.B. Nangia for Ashish Publish house, New Delhi.

• Sharma, 2007: *Agricultural Water management*, New Delhi.

• Shastry K.A.N., 1976: *A History of south India*, Madras.

• Srivastava H.S., *Managing Irrigation project*, Rawat publications Jaipur and New Delhi.

ಇಂಗ್ಲಿಷ್ ಲೇಖನಗಳು

• Desayar M., 1955: *Irrigation in Medieval In Tamilnad*, Vol-LXXXVI, No-2 QJMS.

• Ellanti Sobhanbabu., 1995: *Indian pepception on water*, Vol-LXXXVI, No-1 QJMS.

• Kulkarni K., 1991: *Agrarian Unrest In Northern Karnataka The Nipani Tobacco Growers Rasta Roko Agitation*, Vol-LXXXII, No-1,2, QJMS.

• Kuppuswamy G.R,1983: *Irrigation Facilities Provided By Feudatary Familives In South Karnataka*, Vol-LXXIV, No-1, QJMS.

• Kuppuswamy G.R., 1983: *Some Aspects Of Irrigation System In Karnataka (Historical Period)*, Vol-LXXIV, No-4, QJMS.

• Kuppuswamy G.R., 1988: *Irrigation System In Karnataka Scope and Methodolo Gy*, Vol-LXXIX, No-4, QJMS.

• Kuppuswamy G.R., 1990: *Irrigation System In Karnataka Methods and Techniq ue*, Vol-LXXXI, No-1.2, QJMS.

- Kuppuswamy G.R., 1990: *Economic Dimensions Of Tank Construction and IrriGation Under The Kakatiyas Of Warngal*, Vol-LXXXI, No-3.4, QJMS.
- Kuppuswamy G.R., 1991: *Irrigation System In Karnataka Bulding Aspect*, Vol-LXXXIII, No-1, QJMS.
- Kuppuswamy G.R., 1991: *Irrigation System In Karnataka In as Sources*, Vol-LXXXII, No-3.4, QJMS.
- Kuppuswamy G.R., 1992: *Irrigation System In Karnataka* , Vol- LXXXIII, QJMS.
- Kuppuswamy G.R., 1995: *Irrigation System In Karnataka Building Aspect*, Vol-LXXXVI, No-1, QJMS.
- Prabhakar C.L., 1993: *Samudra In The Rgveda*, Vol-LXXXIV, No-4 QJMS.
- Ramakrishna R., 1992: *Positing Agrarian Growth And Scoial Conflicts In EarlY India*, Vol-LXXXIII, No1, QJMS.
- Vasantha Madhava, 1983: *Women In The Agrarian Set up In Coastal Karnatak 1400-1800A.D.*
- Venkata ratnam A.V., and Sarawathi M.L., 1995: *Epigraphy Numimatics and Other Aspects In Karnataka*, Directorate of Archaeology and Musems, Mysore.

ಸಂಕ್ಷೇಪ ಸೂಚಿ

ಎ.ಕ. – ಎಪಿಗ್ರಾಫಿಯ ಕರ್ನಾಟಿಕ

ಎ.ಇ. – ಎಪಿಗ್ರಾಫಿಯ ಇಂಡಿಕಾ

ಎಸ್.ಐ.ಐ. – ಸೌಥ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್

ಕ್ಯೂ.ಜೆ.ಎಂ.ಎಸ್. – ಕ್ವಾರ್ಟನರಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ

ಎಂ.ಎ.ಆರ್. – ಮೈಸೂರು ಅರ್ಕಿಯಲಾಜಿಕಲ್ ರಿಪೋರ್ಟ್

ಎಂ.ಸಿ.ಎಫ್.ಟಿ. – ಮಿಲಿಯನ್ ಕ್ಯೂಬಿಕ್ ಫೀಟ್

ಪಾರಿಭಾಷಿಕ ಶಬ್ದಕೋಶ

ಅಣೆಕಟ್ಟು	– ನದಿ, ಹಳ್ಳ ಮೊದಲಾದವುಗಳ ನೀರನ್ನು ತಡೆಯಲು ಹಾಕಿರುವ ಅಡ್ಡಗಟ್ಟೆ.
ಅಮಾನಿ	– ಸರ್ಕಾರಿ ಅಧಿಕಾರಿಗಳ ನೇರ ಉಸ್ತುವಾರಿಯಲ್ಲಿ ಇರುವ ಭೂಮಿ ಅಥವಾ ಇತರ ಕಂದಾಯ ಮೂಲ.
ಆಯಕಟ್ಟು	– ನೀರಾವರಿ ಸೌಲಭ್ಯವನ್ನು ಹೊಂದಿರುವ ಕೃಷಿಭೂಮಿ, ಜಮೀನು, ಗದ್ದೆ.
ಊಟೆಕಾಲುವೆ	– ಊಟೆ ನೀರಿನ ಕಾಲುವೆ.
ಏರಿ	– ಕೆರೆ, ಕೆರೆಯ ಕಟ್ಟೆ.
ಕಟ್ಟುಕೊಡುಗೆ, ಕಟ್ಟುಗೊಡುಗೆ	– ಕೆರೆ ಉಸ್ತುವಾರಿ ಮತ್ತು ಸಂರಕ್ಷಣೆಗಾಗಿ ನೀಡಿದ ಮಾನ್ಯ(ಗದ್ದೆ).
ಕಟ್ಟುಮಾನ್ಯ	– ಕೆರೆ ಉಸ್ತುವಾರಿ ಮತ್ತು ಸಂರಕ್ಷಣೆಗಾಗಿ ನೀಡಿದ ಮಾನ್ಯ(ಗದ್ದೆ).
ಕೂರಿಗೆ	– ಹೊಲಗಳಲ್ಲಿ ಬೀಜ ಬಿತ್ತಲು ಬಳಸುವ ಉಪಕರಣ.
ಕೆರೆ, ಕಟ್ಟೆ, ಕುಂಟೆ, ಕೊಳ	– ಏರಿ ನಿರ್ಮಿಸಿ ನೀರು ಸಂಗ್ರಹಿಸುವ ಜಲಾಶಯ.
ಕೆರೆಬಂಡಿ	– ಕೆರೆ ಏರಿಯ ಸಂರಕ್ಷಣೆಗಾಗಿ ಏರ್ಪಡಿಸಲಾಗುತ್ತಿದ್ದ ಎತ್ತಿನ ಬಂಡಿ.
ಕೆರೆಬಂಡಿ ಹಣ	– ಕೆರೆ ಏರಿಯ ಸಂರಕ್ಷಣೆಗಾಗಿ ಬೇಕಾದ ಎತ್ತಿನ ಬಂಡಿಯ ವ್ಯವಸ್ಥೆಗಾಗಿ ಸ್ಥಳೀಯವಾಗಿ ಸಂಗ್ರಹಿಸುತ್ತಿದ್ದ ತೆರಿಗೆ.

ಕೋಡಿ – ಕೆರೆ ಕಟ್ಟೆಗಳ ಹೆಚ್ಚು ನೀರು ಹರಿದು ಹೋಗಲು ಮಾಡಿದ ದಾರಿ.

ಖುಷ್ಕಿ – ಮಳೆ ನೀರಿನಿಂದ ಮಾಡುವ ಬೇಸಾಯ.

ಖಂಡುಗ – ಭೂಮಿಯ ಅಳತೆ. ೧೦ ಸಾವಿರ ಚದರ ಗಜ ಗದ್ದೆ ಹಾಗೂ ತೋಟ ಮತ್ತು ೬೪ ಚದರ ಗಜ ಒಣಭೂಮಿ, ಧಾನ್ಯದ ಅಳತೆ ೪ ಬುಷಲ್ ಅಥವಾ ೧೨-೮ ಪಿಂಟೆಗಳು.

ಗದ್ದೆ – ತರಿ ಜಮೀನು, ಭತ್ತ, ಕಬ್ಬು, ನೀರಾವರಿ ಪೈರುಗಳನ್ನು ಬೆಳೆಯುವ ಭೂಮಿ.

ಚಕ್ಕಡಿ – ಒಂದು ಎತ್ತಿನ ಗಾಡಿ.

ಜಲಸೂತ್ರಧಾರಿ – ನೀರಾವರಿ ಕಾಮಗಾರಿಗಳ ಶಾಸ್ತ್ರಜ್ಞ/ತಂತ್ರಜ್ಞ.

ತರಿ – ನೀರಾವರಿ ಭೂಮಿ, ಗದ್ದೆ.

ತಳಾರಿ, ತಳಾರ, ತಳವಾರ – ಹಳ್ಳಿಯ ಕಾವಲುಗಾರ, ಅಧಿಕಾರಿಗಳಿಗೆ ಮಾಹಿತಿ ನೀಡುವುದು ಇವನ ಕರ್ತವ್ಯ.

ತೂಬು – ನೀರನ್ನು ಕೆರೆಯಿಂದ ಹಾಯಿಸುವ ಭಾಗ.

ದಶವಂದ, ದಶವಂಧ
ದಸವಂದ ಭೂಮಿ – ಕೆರೆ ನಿರ್ಮಾಣ ಮತ್ತು ಉಸ್ತುವಾರಿಗೆ ದಾನವಾಗಿ ನೀಡಿದ ಭೂಮಿ.

ದೇವದಾನ – ದೇವಾಲಯಕ್ಕೆ ಕೊಟ್ಟ ಉಂಬಳಿ.

ದೇವಮಾತೃಕೆ – ಮಳೆಯ ನೀರಿನಿಂದಲೇ ಸಾಗುವಳಿ ಮಾಡುವ ಜಮೀನು.

ನದಿಮಾತೃಕೆ – ನದಿ ನೀರಿನ ಕಾಲುವೆ.

ನದಿ, ತಟಾಕ – ನದಿ ನೀರನ್ನು ಪಡೆಯುವ ಕೆರೆ.

ನೀರ್ಗಂಟಿ(ನೀರುಗಂಟಿ) – ಕೆರೆ ನೀರು ಸರಬರಾಜು ವ್ಯವಸ್ಥೆಯನ್ನು ನಿರ್ವಹಿಸುವ ನಿರ್ವಾಹಕ, ತಂತ್ರಪಾಲ.

ಪಟ್ಟಣಸ್ವಾಮಿ – ಶೆಟ್ಟಿಗೆ ಎರಡನೆಯವನಾದ ನಗರ ಪ್ರಮುಖನಿಗೆ ನೀಡಿದ ಬಿರುದು, ಶೆಟ್ಟಿ ನಗರಾಧ್ಯಕ್ಷನಾದರೆ ಪಟ್ಟಣಶೆಟ್ಟಿ-ಅಲ್ಡರ್‌ಮನ್(ದ್ವಿತೀಯ ಪ್ರಮುಖ)

ಮತ್ತರ – ಭೂ ಅಳತೆ


ಮತ್ತರು	–	ಭೂಮಿ ಅಳತೆ, ಸುಮಾರು ನಾಲ್ಕು ಅಥವಾ ಐದು ಎಕರೆಗೆ ಸಮ.
ಮಾನ್ಯ	–	ತೆರಿಗೆ ವಿನಾಯಿತಿ.
ವಿಲೇವಾರಿ	–	ಕೆರೆಯಲ್ಲಿ ಮೀನು ಹಿಡಿಯುವ ಗುತ್ತಿಗೆಯಿಂದ ಬಂದ ಹಣ.
ಸಲುಗೆ, ಸಲಗೆ	–	ಗಾತ್ರದ ಅಳತೆ, ಖಂಡುಗ ೧೬೦ ಸೇರು.
ಸಮುದ್ರ, ಸರೋವರ	–	ವಿಶಾಲ ನೀರಿನ ಹರಿವಿನಿಂದ ಕೂಡಿದ ಕೆರೆ.
ಸರ್ವಮಾನ್ಯ	–	ಪೂರಾ ಮುಫತ್ತಾಗಿ ನೀಡಲಾದ ಜಮೀನು.
ಕ್ಯೂಸೆಕ್ಸ್	–	ಎಕರೆ ಇಂಚು/ಎಕರೆ ಅಡಿಗಳಲ್ಲಿ ಒಂದು ಕ್ಯೂಸೆಕ್ ಅಂದರೆ ಪ್ರತಿ ಸೆಕೆಂಡಿಗೆ ಒಂದು ಘನ ಅಡಿ ಹರಿಯುವ ನೀರಿನ ಪ್ರಮಾಣ. ಒಂದು ಘನ ಅಡಿ ನೀರು ೬೨.೪ ಪೌಂಡು ತೂಕದ್ದಾಗಿರುತ್ತದೆ. ಒಂದು ಘಂಟೆಯವರೆಗೆ ಒಂದು ಕ್ಯೂಸೆಕ್‌ನಂತೆ ಹರಿದರೆ ಅದರೆ ಪ್ರಮಾಣವು(೬೦x೬೦) ೨,೨೪,೬೪೦ ಪೌಂಡುಗಳಷ್ಟಾಗುತ್ತದೆ. ಎಕರೆ ಇಂಚು ಅಂದರೆ ಎಕರೆ ಮೇಲೆ ಒಂದು ಇಂಚು ಅಳದವರೆಗೆ ನಿಲ್ಲಬಲ್ಲ ನೀರಿನ ಪ್ರಮಾಣ.

ವಕ್ತೃಗಳ ವಿವರ

ಹೆಸರು	ವಯಸ್ಸು	ಉದ್ಯೋಗ	ಜನಾಂಗ	ಊರು
ವೆಂಕಟರಾಮಯ್ಯ	೬೨	ಶಾನುಭೋಗ	ಬ್ರಾಹ್ಮಣ	ಕೆಲ್ಲಂಗೆರೆ
ಕುಮಾರಸ್ವಾಮಿ	३೮	ಅರ್ಚಕರು	ಬ್ರಾಹ್ಮಣ	ಜಾವಗಲ್
ಚಂದ್ರಪ್ಪ	೪೦	ಮೀನುಗಾರಿಕೆ	ಬೆಸ್ತರು	ಕಣಕಟ್ಟೆ
ಪ್ರಕಾಶ	೪೫	ವ್ಯವಸಾಯ	ಒಕ್ಕಲಿಗ	ಕಬಳಿ
ಹನುಮೇಗೌಡ	೭೩	ವ್ಯವಸಾಯ	ಒಕ್ಕಲಿಗ	ಹೊಸಹಳ್ಳಿ
ಚಿದಂಬರ	೮೮	ಶಾನುಬೋಗ	ಬ್ರಾಹ್ಮಣ	ಬಾಳಗಂಚಿ
ಶೇಖರಯ್ಯ	೪೫	ನಾಗೇಶ್ವರ ದೇವಾಲಯ ನಿರ್ವಾಹಕ	ಲಿಂಗಾಯತ	ನಾಗರನವಿಲೆ
ಮಂಜೇಗೌಡ	೬೦	ವ್ಯವಸಾಯ	ಒಕ್ಕಲಿಗ	ಅನೆಕೆರೆ
ರವೀಶ್	೫೫	ಹೂವಿನ ವ್ಯಾಪಾರ	ಉಪ್ಪಾರ	ಚನ್ನರಾಯಪಟ್ಟಣ
ಜಗದೀಶ್	೪೫	ವ್ಯವಸಾಯ	ಲಿಂಗಾಯತ	ಅಣತಿ
ನಂಜುಂಡಪ್ಪ	೭೦	ವ್ಯವಸಾಯ	ಗೊಲ್ಲ	ನುಗ್ಗೇಹಳ್ಳಿ
ಬೋರೇಗೌಡ	೬೨	ಬುಚೇಶ್ವರ ದೇವಾಲಯದ ಗಾರ್ಡನ್	ಒಕ್ಕಲಿಗ	ಕೋರಮಂಗಲ
ಚಂದ್ರಪ್ಪ	೫೩	ಅರ್ಚಕರು	ಗಂಗಾಮತ	ಹೊನ್ನಾವರ
ಬಸವರಾಜು	೬೦	ವ್ಯವಸಾಯ	ಲಿಂಗಾಯತ	ಸೀಗೆಕೆರೆ
ರಾಜೇಗೌಡ	೬೫	ವ್ಯವಸಾಯ	ಒಕ್ಕಲಿಗರು	ಕುದುರೆಗುಂಡಿ
ಶ್ರೀವತ್ಸ ಎಸ್. ವಟಿ	೬೦	ಸಾಹಿತಿ	ಬ್ರಾಹ್ಮಣ	ಬೇಲೂರು
ವೀರೇಗೌಡ	೪೫	ವ್ಯವಸಾಯ	ಲಿಂಗಾಯತ	ವೀರದೇವನಹಳ್ಳಿ
ಶೇಷಯ್ಯ	೪೭	ವ್ಯವಸಾಯ	ವೈಷ್ಣವ	ರಣಘಟ್ಟ
ಲಿಂಗಪ್ಪ	೫೬	ವ್ಯವಸಾಯ	ಲಿಂಗಾಯತ	ಚಟಚಟನಹಳ್ಳಿ

ಈಶ್ವರಪ್ಪ	೬೦	ವ್ಯವಸಾಯ	ಆದಿದ್ರಾವಿಡ	ಯಲಹಂಕ
ರುದ್ರೇಶ್	೬೫	ವ್ಯವಸಾಯ	ಪರಿಶಿಷ್ಟ ಜಾತಿ	ಹೆಜ್ಜೇಗನಹಳ್ಳಿ
ಶಾರದಮ್ಮ	೪೨	ವ್ಯವಸಾಯ	ಲಿಂಗಾಯತ	ಉದೇವಾರ
ನಾಗರಾಜೇಗೌಡ	೭೮	ವ್ಯವಸಾಯ	ಲಿಂಗಾಯತ	ಕೆಳಗಲೆ
ರಾಮೇಗೌಡ್ರು	೬೦	ವ್ಯವಸಾಯ	ಕುರುಬ	ಕೊಣನೂರು
ಚಂದ್ರಪ್ಪ ಕೆ.ಎನ್.	೭೫	ವ್ಯವಸಾಯ	ಲಿಂಗಾಯತ	ಕೊಳ್ಳಂಗಿ
ನಾಗರಾಜು	೬೦	ವ್ಯವಸಾಯ	ಲಿಂಗಾಯತ	ದೊಡ್ಡಬೆಮ್ಮತ್ತಿ
ಲಕ್ಷ್ಮೀನಾರಾಯಣ	೭೫	ಅರ್ಚಕರು	ಬ್ರಾಹ್ಮಣ	ರಾಮನಾಥಪುರ
ರಾಮಚಂದ್ರ	೬೩	ವ್ಯವಸಾಯ	ನಾಮದಾರಿ	ಅಲಗೌಡನಹಳ್ಳಿ
ಪುರುಷೋತ್ತಮ	೫೫	ವ್ಯವಸಾಯ	ವೈಷ್ಣವ	ಮರಸು
ಮಂಜೇಶ್	೬೦	ವ್ಯವಸಾಯ	ಆದಿದ್ರಾವಿಡ	ಹಳೇಪಾಳ್ಯ

ಲಂಬಚಿತ್ರ: ವಿವಿಧ ಮೂಲಗಳಿಂದ ನೀರಾವರಿಯಾದ ಪ್ರದೇಶ



ಕ್ರಸಂ.	ತಾಲೂಕು	ಕೆರೆಗಳು ಸಂಖ್ಯೆ	ಒಟ್ಟು ನೀರಾವರಿಯಾದ ಪ್ರದೇಶ	ನಿವ್ವಳ ನೀರಾವರಿ ವಿಸ್ತೀರ್ಣ
೧	ಅರಸೀಕೆರೆ	೨೪೯	೩೭೬೩	೩೪೩೫
೨	ಬೇಲೂರು	೧೬೨೪	೪೮೪೪	೪೨೧೯
೩	ಹಾಸನ	೧೦೬೩	೪೧೬೮	೨೬೧೦
೪	ಚನ್ನರಾಯಪಟ್ಟಣ	೨೪೨	೩೮೩೧	೩೫೧೦
೫	ಅಲೂರು	೯೨೦	೨೯೩೩	೨೪೨೫
೬	ಹೊಳೆನರಸೀಪುರ	೩೩೩	೨೩೧೮	೧೯೮೫
೭	ಸಕಲೇಶಪುರ	೪೩೧	೪೪೯೭	೩೬೩೯
೮.	ಅರಕಲಗೂಡು	೮೦೪	೪೩೯೩	೩೯೫೦
	ಒಟ್ಟು	೪೮೬೨	೨೬೩೫೪	೨೧೮೨೩

ತಾಲೂಕುವಾರು ಕೆರೆಗಳ ವಿವರ
ಅರಸೀಕೆರೆ ತಾಲೂಕಿನ ಶಾಸನೋಕ್ತ ಕೆರೆಗಳ ಹೆಸರುಗಳು

ಕ್ರಸಂ.	ಗ್ರಾಮದ ಹೆಸರು	ಪ್ರಾಚೀನ ಹೆಸರು	ರಾಜಮನೆತನ	ಕಾಲ	ಕೆರೆ ನಿರ್ಮಾತೃ	ಆಧುನಿಕ ಹೆಸರು	ಸ್ಥಿತಿ
೧	ಮನಕತ್ತೂರು	ಆದಳಗಟ್ಟ	ಹೊಯ್ಸಳ	ಕ್ರಿ.ಶ. ೧೧೦೧	ಚಾಮಗಾವುಣ್ಡ		
೨	ಕುರಾದಹಳ್ಳಿ		ಹೊಯ್ಸಳ	ಕ್ರಿ.ಶ. ೧೧ನೆಯ ಶತಮಾನ	ಚಾವುಣ್ಡ ರಾಜನ ಮಕ್ಕಳು		
೩	ಕಣಕಟ್ಟೆ		ಹೊಯ್ಸಳ	ಕ್ರಿ.ಶ. ೧೧೫೩	ಚಟ್ಟಬೋವ	ದೊಡ್ಡಕೆರೆ	ಉತ್ತಮ
೪	ಜೆ.ಸಿ. ಪುರ	ಬಬ್ಬಿಯ ಕೆರೆ ಆಣೆಯ ಕೆರೆ ಹಿರಿಯ ಕೆರೆ ಮತ್ತಿಯ ಕೆರೆ ದೇವರ ಮುಂದಿನ ಕೆರೆ	ಹೊಯ್ಸಳ	ಕ್ರಿ.ಶ. ೧೧೭೭	ಹಲುಕೂರ		
೫	ತಳಲೂರು	ತಟಾಕ	ಹೊಯ್ಸಳ	ಕ್ರಿ.ಶ. ೧೧೮೫	ಗೌರಿದೇವಿ	ದೊಡ್ಡಕೆರೆ	ಉತ್ತಮ
		ನಾರಾಯಣ ಘಟ್ಟಕೆರೆ	ಹೊಯ್ಸಳ	ಕ್ರಿ.ಶ. ೧೧೫೭-೫೮		ದೊಡ್ಡಕೆರೆ	ಉತ್ತಮ
		ಮಧುಸೂಧನಕೆರೆ	ಹೊಯ್ಸಳ	ಕ್ರಿ.ಶ. ೧೨ನೇ ಶ.		ಚಿಕ್ಕಕೆರೆ	ಮಧ್ಯಮ
೬	ಕುರುವಂಕ		ಹೊಯ್ಸಳ	ಕ್ರಿ.ಶ. ೧೧೮೬	ಸೇನಬೋವ ಬಿಟ್ಟಿಯಣ್ಣ	ಊರಮುಂದಿನ ಕೆರೆ	ಉತ್ತಮ
೭	ಬಾಣಾವರ	ಕಲ್ಲನಕೆರೆ	ಹೊಯ್ಸಳ	ಕ್ರಿ.ಶ. ೧೧೮೭	ಚಟ್ಟಪ್ಪಶೆಟ್ಟಿ		
೮	ಮುರುಂಡಿ		ಹೊಯ್ಸಳ	ಕ್ರಿ.ಶ. ೧೧೯೫	ಮಾವಂತನ ಸಹೋದರರು	ಊರಮುಂದಿನ ಕೆರೆ	ಉತ್ತಮ
೯	ವಡಗರಹಳ್ಳಿ		ಹೊಯ್ಸಳ	ಕ್ರಿ.ಶ. ೧೧೯೬	ಕೂಸದಲ್ಲಯ್ಯ	ಜಲನಾಯಕನ ಕಟ್ಟೆ	ಮಧ್ಯಮ
೧೦	ಗಂಜಿಗೆರೆ		ಹೊಯ್ಸಳ	ಕ್ರಿ.ಶ. ೧೧೯೭-೯೮	ತಂತ್ರಪಾಲ ಮಹಾದೇವ		
೧೧	ಗೀಜಿಹಳ್ಳಿ		ಹೊಯ್ಸಳ	ಕ್ರಿ.ಶ. ೧೨೦೦	ಕಾಟಿಗೌಡ		
೧೨	ಹಿರಿಯೂರು		ಹೊಯ್ಸಳ	ಕ್ರಿ.ಶ. ೧೨೦೭	ಮಾರಜೀಯ	ದೊಡ್ಡಕೆರೆ	ಉತ್ತಮ
೧೩	ಕಣಕಟ್ಟೆ	ಬಿಟ್ಟಿಸಮುದ್ರ	ಹೊಯ್ಸಳ	ಕ್ರಿ.ಶ. ೧೨೦೮	ಬಿಟ್ಟಯ್ಯ	ದೊಡ್ಡಕೆರೆ	ಉತ್ತಮ
೧೪	ಹೊನ್ನಕಟ್ಟೆ	ಮಾಚಸಮುದ್ರ	ಹೊಯ್ಸಳ	ಕ್ರಿ.ಶ. ೧೨೧೪	ಘಂಟೆಯ ಸಿಂಗಯ್ಯ		
೧೫	ಹೊಸಕಲ್ಯಾಡಿ	ಕನ್ನೆಗೆರೆ	ಹೊಯ್ಸಳ	ಕ್ರಿ.ಶ. ೧೨೧೪	ಹೊಳಲಗಾವುಂಡ	ದೇವಿಕೆರೆ	ಮಧ್ಯಮ
೧೬	ಕಣಕಟ್ಟೆ		ಹೊಯ್ಸಳ	ಕ್ರಿ.ಶ. ೧೨೨೦	ಜಗತೀಶ್ವರರು	ದೊಡ್ಡಕೆರೆ	ಉತ್ತಮ
೧೭	ಗಂಡಸಿ	ಕನ್ನೆಗೆರೆ	ವಿಜಯನಗರ	ಕ್ರಿ.ಶ. ೧೩೨೪	ಕಂಚಿನಾಯಕ	ದೊಡ್ಡಕೆರೆ	ಉತ್ತಮ
೧೮	ಬಾಗವಾಳು		ವಿಜಯನಗರ	ಕ್ರಿ.ಶ. ೧೩೩೮	ಬೊಮ್ಮಣ್ಣ	ಊರಮುಂದಿನ ಕೆರೆ	ಉತ್ತಮ
೧೯	ಗಂಡಸಿ	ಮಂಗಸಮುದ್ರ	ವಿಜಯನಗರ	ಕ್ರಿ.ಶ. ೧೪೦೩	ಬಾಯಣ್ಣ	ದೊಡ್ಡಕೆರೆ	ಉತ್ತಮ
೨೦	ಚಿಕ್ಕಗಂಡಸಿ	ಲಕ್ಕಸಮುದ್ರ	ವಿಜಯನಗರ	ಕ್ರಿ.ಶ. ೧೫೩೫	ಬಯಕಾರ ರಾಮಪ್ಪ	ಊರಮುಂದಿನ ಕೆರೆ	ಉತ್ತಮ
೨೧	ಜಾವಗಲ್	ಬಯಿರಸಮುದ್ರ	ಜಾವಗಲ್ ಪ್ರಭುಗಳು	ಕ್ರಿ.ಶ. ೧೫೧೫	ಭೈರಭೂಪಾಲ	ಜಾವಗಲ್ ದೊಡ್ಡಕೆರೆ	ಉತ್ತಮ

ಚನ್ನರಾಯಪಟ್ಟಣ ತಾಲೂಕಿನ ಶಾಸನೋಕ್ತ ಕೆರೆಗಳ ಹೆಸರುಗಳು

ಕ್ರಸಂ.	ಗ್ರಾಮದ ಹೆಸರು	ಪ್ರಾಚೀನ ಹೆಸರು	ರಾಜಮನೆತನ	ಕಾಲ	ಕೆರೆ ನಿರ್ಮಾತೃ	ಆಧುನಿಕ ಹೆಸರು	ಸ್ಥಿತಿ
೧	ಕೆಂಬಾಳು		ಹೊಯ್ಸಳ	ಕ್ರಿ.ಶ. ೧೧೯೮	ಕಲ್ಲಗಾವುಂಡ	ಕೆಂಬಾಳು ಕೆರೆ	ಉತ್ತಮ
೨	ಬಾಳಗಂಚಿ		ಹೊಯ್ಸಳ	ಕ್ರಿ.ಶ. ೧೧೩೨	ಕುತ್ತರಜೀಯ	ಅಮಾನಿಕೆರೆ	ಉತ್ತಮ
೩	ನಾಗರನವಿಲೆ		ಹೊಯ್ಸಳ	ಕ್ರಿ.ಶ. ೧೨ನೆಯ ಶತಮಾನ	ಮಹಾದೇವ ಪಂಡಿತರು	ಊರಮುಂದಿನ ಕೆರೆ	ಉತ್ತಮ
೪	ಬಿದರೆ	ಬಾಣಗೆರೆ	ಹೊಯ್ಸಳ	ಕ್ರಿ.ಶ. ೧೧೬೫	ಮಹಾದೇವರಾಸಿ ಪಂಡಿತರುಪಂಡಿತರು		
೫	ಬಳಗಟ್ಟೆ		ಹೊಯ್ಸಳ	ಕ್ರಿ.ಶ. ೧೧೭೮	ಮಾದೆಯನಾಯಕ		
೬	ಚನ್ನರಾಯಪಟ್ಟಣ	ಶಾಂತಿಸಮುದ್ರ	ಹೊಯ್ಸಳ	ಕ್ರಿ.ಶ. ೧೧೮೧	ಶಾಂತಲದೇವಿ	ಚನ್ನರಾಯಪಟ್ಟಣ ಕೆರೆ	ಉತ್ತಮ
೭	ಕಬಳಿ	ಹೊಸಕೆರೆ	ಹೊಯ್ಸಳ	ಕ್ರಿ.ಶ. ೧೧೮೬	ಹೊನ್ನಜೀಯ		ಮಧ್ಯಮ'
೮	ಬೆಳಗುಲಿ	ಕೇಶವ ಸಮುದ್ರ ಲಕ್ಷ್ಮೀ ಸಮುದ್ರ	ಹೊಯ್ಸಳ	ಕ್ರಿ.ಶ. ೧೨೦೯	ಕೇಶವರಾಜ	ಊರಮುಂದಿನ ಕೆರೆ	ಉತ್ತಮ
೯	ಸಂತೆಶಿವರ	ಹೊಸಕೆರೆ	ಹೊಯ್ಸಳ	ಕ್ರಿ.ಶ. ೧೨ನೆಯ ಶತಮಾನ		ಬಾಚರಸ	ಮಧ್ಯಮ
೧೦	ಹೆಬ್ಬಾಳು	ಹೊಸಕೆರೆ	ಹೊಯ್ಸಳ	ಕ್ರಿ.ಶ. ೧೨ನೆಯ ಶತಮಾನ	ಹೆಗ್ಗಡೆ	ಹೆಬ್ಬಾಳು ಕೆರೆ	ಉತ್ತಮ
೧೧	ಕೆಂಬಾಳು		ಹೊಯ್ಸಳ	ಕ್ರಿ.ಶ. ೧೨೨೩	ಕರಣಾಧಿಕಾರಿ ವಿಶ್ವನಾಥ	ಮುತ್ತಿನಕೆರೆ	ಉತ್ತಮ
೧೨	ನುಗ್ಗೇಹಳ್ಳಿ	ಬ್ರಹ್ಮಸಮುದ್ರ	ಹೊಯ್ಸಳ	ಕ್ರಿ.ಶ. ೧೨೫೨	ಕಮ್ಮಟದ ಬಸವಣ್ಣ	ಹಿರಿಕೆರೆ	ಉತ್ತಮ
೧೩	ಗೊಲ್ಲರ ಹೊಸಹಳ್ಳಿ		ಹೊಯ್ಸಳ	ಕ್ರಿ.ಶ. ೧೨೬೮	ಪಾಂಡುಗಾವುಂಡ	ರಂಗಸಮುದ್ರ ಕೆರೆ	ಉತ್ತಮ
೧೪	ಶ್ರವಣಬೆಳಗೊಳ	ಜಕ್ಕಿ ಕೆರೆ	ಹೊಯ್ಸಳ	ಕ್ರಿ.ಶ. ೧೨ನೆಯ ಶತಮಾನ	ಜಕ್ಕಿ ಮಬ್ಬೆ	ಜಕ್ಕಿ ಕಟ್ಟೆ	ಮಧ್ಯಮ
೧೫	ಶ್ರವಣಬೆಳಗೊಳ	ನಾಗಸಮುದ್ರ	ಹೊಯ್ಸಳ	ಕ್ರಿ.ಶ. ೧೨ನೆಯ ಶತಮಾನ		ಜಿಗಣಿಕಟ್ಟೆ	ಮಧ್ಯಮ
೧೬	ಬೆಕ್ಕ	ಸಿಂಗಸಮುದ್ರ	ಹೊಯ್ಸಳ		ಮುದ್ದರಸ ಮತ್ತು ಸೋಮರಸ	ಅಮಾನಿಕೆರೆ	ಉತ್ತಮ
೧೭	ಕುಂದೂರು	ಪೆರುಮಾಳು ಸಮುದ್ರ	ಹೊಯ್ಸಳ	ಕ್ರಿ.ಶ. ೧೩ನೆಯ ಶತಮಾನ	ಪೆರುಮಾಳು ದಂಡನಾಯಕ	ಊರಮುಂದಿನ ಕೆರೆ	ಉತ್ತಮ
೧೮	ಸುಂಡಹಳ್ಳಿ		ಹೊಯ್ಸಳ	ಕ್ರಿ.ಶ. ೧೩ನೆಯ ಶತಮಾನ	ಮಾರಗೌಡ	ಊರಮುಂದಿನ ಕೆರೆ	ಉತ್ತಮ

ಬೇಲೂರು ತಾಲೂಕಿನ ಶಾಸನೋಕ್ತ ಕೆರೆಗಳು

ಕ್ರಸಂ.	ಗ್ರಾಮದ ಹೆಸರು	ಪ್ರಾಚೀನ ಹೆಸರು	ರಾಜಮನೆತನ	ಕಾಲ	ಕೆರೆ ನಿರ್ಮಾತೃ	ಆಧುನಿಕ ಹೆಸರು	ಸ್ಥಿತಿ
೧	ದಬ್ಬೆಅಗ್ರಹಾರ	ಕಲ್ಯಾಣ ಚಾಲುಕ್ಯರು	ಕ್ರಿ.ಶ. ೧೧೦೧	ಕೋಬೆಗಾವುಂಡ			
೨	ಹಳೇಬೀಡು	ದೋರಸಮುದ್ರ	ಹೊಯ್ಸಳ	ಕ್ರಿ.ಶ. ೧೦೬೨-೬೩	ವಿನಯಾದಿತ್ಯ	ಹಳೇಬೀಡು ಕೆರೆ	ಉತ್ತಮ
೩	ದೇವಿಹಳ್ಳಿ	ಕನ್ನೆಗೆರೆ	ಹೊಯ್ಸಳ	ಕ್ರಿ.ಶ. ೧೦೯೩	ಕುಂದಜೀಯ		
೪	ರಣಘಟ್ಟ	ಬಳ್ಳಿಕೆರೆ	ಹೊಯ್ಸಳ	ಕ್ರಿ.ಶ. ೧೦೯೬	ಬಾಸಾಗಾವುಂಡ	ದೊಡ್ಡಕೆರೆ	ಉತ್ತಮ
೫	ಬೇಲೂರು	ವಾಸುದೇವತೀರ್ಥ	ಹೊಯ್ಸಳ	ಕ್ರಿ.ಶ ೧೧೧೭	ವಿಷ್ಣುವರ್ಧನ	ದೊಡ್ಡಕೆರೆ	ಉತ್ತಮ
೬	ಹಳೇಬೀಡು	ಪಿರಿಯಕೆರೆ	ಹೊಯ್ಸಳ	ಕ್ರಿ.ಶ. ೧೧೩೬	ವಿಷ್ಣುವರ್ಧನ	ಹಳೇಬೀಡು ಕೆರೆ	ಉತ್ತಮ
೭	ಹುಲಿಕೆರೆ	ಚಟ್ಟಸಮುದ್ರ	ಹೊಯ್ಸಳ	ಕ್ರಿ.ಶ. ೧೧೬೦	ಚಟ್ಟಯ್ಯ	ಹುಲಿಕೆರೆ	ಉತ್ತಮ
೮	ಬೇಲೂರು	ಹೊಯ್ಸಳ ಸಮುದ್ರ	ಹೊಯ್ಸಳ	ಕ್ರಿ.ಶ. ೧೧೬೪	ಬಿಟ್ಟಿದೇವ ಮತ್ತು ಮಾದಿಕಬ್ಬೆಯ	ಬೇಲೂರು ಕೆರೆ	ಉತ್ತಮ
೯	ಹಿರೇಹಳ್ಳಿ	ಜಕ್ಕನ ಕೆರೆ	ಹೊಯ್ಸಳ ಕಂಜಣನ ಕೆರೆ	ಕ್ರಿ.ಶ. ೧೧೮೨	ಕಾಳಗಾವುಂಡ		
೧೦	ವೀರದೇವನ ಹಳ್ಳಿ	ರುದ್ರ ಸಮುದ್ರ ಗಂಗ ಸಮುದ್ರ ಅಚ್ಚುತ ಸಮುದ್ರ ವೀರ ಸಮುದ್ರ	ಹೊಯ್ಸಳ	ಕ್ರಿ.ಶ. ೧೧೮೬	ಮಾರಯ್ಯ		
೧೧	ಬೇಲೂರು	ಸಾವಂತ ಸಮುದ್ರ	ಹೊಯ್ಸಳ	ಕ್ರಿ.ಶ. ೧೧೯೬-೯೭	ಸಾಮಂತ ಮಾರ	ಬೇಲೂರು ಕೆರೆ	ಉತ್ತಮ
		ಬ್ರಹ್ಮ ಸಮುದ್ರ					
೧೨	ಚಟಚಟನಹಳ್ಳಿ	ದಾಸಿಶೆಟ್ಟಿ ಕೆರೆ	ಹೊಯ್ಸಳ	ಕ್ರಿ.ಶ. ೧೨೨೧	ಚಟ್ಟಯ್ಯ ಪೆರುಮಾಳ್ ದೇವ	ದ್ಯಾವಪ್ಪನ ಕೆರೆ	ಉತ್ತಮ
೧೩	ಗೋಣಿ ಸೋಮನಹಳ್ಳಿ		ಹೊಯ್ಸಳ	ಕ್ರಿ.ಶ. ೧೨೨೭	ಮಹಾದೇವಿ	ದೊಡ್ಡ ಕೆರೆ	ಮಧ್ಯಮ
೧೪	ಬಂಟೇನಹಳ್ಳಿ		ವಿಜಯನಗರ	ಕ್ರಿ.ಶ. ೧೩೮೭	ಮಹಾರಾಜರು ಮತ್ತು ಗೌಡಪ್ರಭುಗಳು		

ಹಾಸನ ತಾಲೂಕಿನ ಶಾಸನೋಕ್ತ ಕೆರೆಗಳು

ಕ್ರಸಂ.	ಗ್ರಾಮದ ಹೆಸರು	ಪ್ರಾಚೀನ ಹೆಸರು	ರಾಜಮನೆತನ	ಕಾಲ	ಕೆರೆ ನಿರ್ಮಾತೃ	ಆಧುನಿಕ ಹೆಸರು	ಸ್ಥಿತಿ
೧	ಶಾಂತಿಗ್ರಾಮ	ದಸರಿಕಟ್ಟೆ	ಹೊಯ್ಸಳ	ಕ್ರಿ.ಶ. ೧೧ನೆಯ ಶತಮಾನ		ದೊಡ್ಡಕೆರೆ	ಉತ್ತಮ
೨	ಮೂಮಗಾಮೆ	ಪಿರಿಯಕೆರೆ ಚಿಕ್ಕಕೆರೆ	ಹೊಯ್ಸಳ	ಕ್ರಿ.ಶ. ೧೧೯೯		ದೊಡ್ಡಕೆರೆ ಕಟ್ಟೆ	ಉತ್ತಮ ಒತ್ತುವರಿಯಾಗಿದೆ
೩	ಚಿಕ್ಕಕಡಲೂರು		ಹೊಯ್ಸಳ	ಕ್ರಿ.ಶ. ೧೧೫೬-೫೭	ಹೊನ್ನಜೀಯ	ದೊಡ್ಡಕೆರೆ	ಉತ್ತಮ
೪	ಗೌಡಗೆರೆ	ಪಿಣ್ಣಾವನೆ	ಹೊಯ್ಸಳ	ಕ್ರಿ.ಶ. ೧೧೭೦	ಮುದಗೌಡ ಮತ್ತು ಇತರರು		
೫	ಕೋರವಂಗಲ	ಮಾಕಸಮುದ್ರ	ಹೊಯ್ಸಳ	ಕ್ರಿ.ಶ. ೧೨ನೆಯ ಶತಮಾನ	ಹೆಗ್ಗಡತಿ ಮಾಕಣವ್ವೆ	ದೊಡ್ಡಕೆರೆ	ಉತ್ತಮ
೬	ಅವ್ವೇರಳ್ಳಿ		ಹೊಯ್ಸಳ	ಕ್ರಿ.ಶ. ೧೩೧೪	ಮಾಚಯ್ಯ	ಅವ್ವೇರಳ್ಳಿ ಕೆರೆ	ಉತ್ತಮ

ಅರಕಲಗೂಡು ತಾಲೂಕಿನ ಶಾಸನೋಕ್ತ ಕೆರೆಗಳು

ಕ್ರಸಂ.	ಗ್ರಾಮದ ಹೆಸರು	ಪ್ರಾಚೀನ ಹೆಸರು	ರಾಜಮನೆತನ	ಕಾಲ	ಕೆರೆ ನಿರ್ಮಾತೃ	ಆಧುನಿಕ ಹೆಸರು	ಸ್ಥಿತಿ
೧	ರಾಮೇನಹಳ್ಳಿ	ರಾಮಸಮುದ್ರ	ಹೊಯ್ಸಳ	ಕ್ರಿ.ಶ. ೧೨೧೩	ಹೆಗ್ಗಡೆ ರಾಮಯ್ಯ		
೨	ಬಸವಪಟ್ಟಣ		ಹೊಯ್ಸಳ		ಬೊಮ್ಮಣ್ಣ ಮತ್ತು ಸೇಂದ್ರಾಧಿಪತಿ	ಬಸವಪಟ್ಟಣ ಕೆರೆ	ಉತ್ತಮ
೩	ರುದ್ರಪಟ್ಟಣ		ವಿಜಯನಗರ	ಕ್ರಿ.ಶ. ೧೩೫೭	ವಟ್ಟವ್ಯವಹಾರಿ ಮಹಾದೇವಯ್ಯ	ರುದ್ರಪಟ್ಟಣ ಕೆರೆ	ಉತ್ತಮ

ಸಕಲೇಶಪುರ ತಾಲೂಕಿನ ಶಾಸನೋಕ್ತ ಕೆರೆಗಳು

ಕ್ರಸಂ.	ಗ್ರಾಮದ ಹೆಸರು	ಪ್ರಾಚೀನ ಹೆಸರು	ರಾಜಮನೆತನ	ಕಾಲ	ಕೆರೆ ನಿರ್ಮಾತೃ	ಆಧುನಿಕ ಹೆಸರು	ಸ್ಥಿತಿ
೧	ಹಾಲೆಬೇಲೂರು	ಮೇಚಚಸಮುದ್ರ	ಉತ್ತರ ಕದಂಬರು	ಕ್ರಿ.ಶ. ೧೧೦೧	ದಯಾಸಿಂಹರಾಜ	ಅರಸೀಕೆರೆ	ಉತ್ತಮ

ಜಿಲ್ಲೆಯ ದೊಡ್ಡ ಕೆರೆಗಳ ಪಟ್ಟಿ

ಹಾಸನ ತಾಲೂಕು

ಕ್ರಸಂ.	ಗ್ರಾಮಗಳ ಹೆಸರು	ಕೆರೆಗಳು ಹೆಸರು	ಜಲ ವಿಸ್ತೀರ್ಣ(ಹೆ)	ಅಚ್ಚುಕಟ್ಟು ಪ್ರದೇಶ (ಹೆ)
೧	ಅಂಬುಗ	ದೊಡ್ಡಕೆರೆ	೭೦.೦೪	೧೨೩.೦೮
೨	ಅನುಗವಳ್ಳಿ	ದೊಡ್ಡಕೆರೆ	೭೮.೪೦	೩೮.೦೦
೩	ಅಟ್ಟವರ	ಊರಮುಂದಿನ ಕೆರೆ	೩೪.೪೦	೪೯.೬೦
೪	ಬೊಮ್ಮೇನಹಳ್ಳಿ	ನಾಮಿಕೆರೆ	೭೧.೨೦	೧೦೫.೩೨
೫	ಚಿಕ್ಕಕಡಲೂರು	ದೊಡ್ಡಕೆರೆ	೨೮.೪೦	೪೦.೨೦
೬	ದುದ್ದ	ದೊಡ್ಡಕೆರೆ	೧೨೩.೨೦	೧೭೯.೭೬
೭	ಹಾಸನ	ಹುಣಸಿನಕೆರೆ	೮೫.೨೦	೮೫.೬೦
೮	ಹೆರಗು	ತಂಗಿನ ಕೆರೆ	೧೧೬.೮೦	೯೯.೧೯
೯	ಹಿರೀಕಡಲೂರು	ಅಮಾನಿಕೆರೆ	೪೯.೨೦	೧೨೮.೪೦
೧೦	ಹೊಲಗು	ದೊಡ್ಡಕೆರೆ	೧೦೮.೮೦	೭೫.೦೦
೧೧	ಹೊನ್ನಾವರ	ದೊಡ್ಡಕೆರೆ	೬೦.೮೦	೧೦೬.೪೮
೧೨	ಜನಿವಾರ	ಅರಳಿಕಟ್ಟೆ	--	೬೮.೦೦
೧೩	ಕೆಲ್ಲವತ್ತಿ	ಊರಮುಂದಿನ ಕೆರೆ	೫೫.೨೦	೭೯.೮೦
೧೪	ಕಿತ್ತನಕೆರೆ	ದೊಡ್ಡಕೆರೆ	೪೬.೪೦	೭೨೦
೧೫	ಕಿಟ್ಟನೆ	ದೊಡ್ಡಕೆರೆ	೨೪.೦೦	೪೧.೨
೧೬	ಕೌಶಿಕ	ದೊಡ್ಡಕೆರೆ	೧೧೮.೮೦	೧೦೨.೮
೧೭	ಕೃಷ್ಣಪುರ	ದೊಡ್ಡಕೆರೆ	೩೬.೮೦	೪೪.೦೦
೧೮	ಕುದುರೆಗುಂಡಿ	ದೊಡ್ಡಕೆರೆ	೯೨.೮	೧೭೨.೪೦
೧೯	ಮೆಲಗೊಡು	ಬಿಕ್ಕನಕೆರೆ	೩೦.೦೦	೫೦.೪೦
೨೦	ಮೆಲಗೊಡು	ಹಿರಿಕೆರೆ	--	೬೦.೦೦
೨೧	ಮೊಸಳೆ	ದೊಡ್ಡಕೆರೆ	೪೩.೨೦	೬೨.೦೦

೨೨	ಮುಗಳೂರು	ಊರಮುಂದಿನ ಕೆರೆ	೮೮.೩೭	೭೭.೨೦
೨೩	ಮುತ್ತತ್ತಿ	ದೊಡ್ಡಕೆರೆ	೪೨.೪೦	೫೦.೪೦
೨೪	ನಿಟ್ಟೂರು	ಹಿರೆಕೆರೆ	೨೮.೪೦	೫೩.೫೦
೨೫	ಸಾಲಗಾಮೆ	ದೊಡ್ಡಕೆರೆ	೮೫.೬೦	೭೬.೨೦
೨೬	ಸತ್ಯಮಂಗಳ	ಊರಮುಂದಿನ ಕೆರೆ	೧೩.೦೦	೪೪.೦೦
೨೭	ಸೀಗೆ	ದೊಡ್ಡಕೆರೆ	೩೪.೪೦	೬೯.೬
೨೮	ಶಂಖ	ದೊಡ್ಡಕೆರೆ	೫೩.೬೦	೭೯.೬೦
೨೯	ಶಾಂತಿಗ್ರಾಮ	ದೊಡ್ಡಕೆರೆ	೭೩.೫೮	೧೮೯.೦೦
೩೦	ತೆಜೂರು	ದೊಡ್ಡಕೆರೆ	೩೭.೨೦	೪೫.೨೦
೩೧	ಯಲಗುಂದ	ಊರಮುಂದಿನ ಕೆರೆ	೩೮.೦೦	೪೯.೦೦

ಅರಸೀಕೆರೆ ತಾಲೂಕು

ಕ್ರಸಂ.	ಗ್ರಾಮಗಳ ಹೆಸರು	ಕೆರೆಗಳು ಹೆಸರು	ಜಲ ವಿಸ್ತೀರ್ಣ (ಹೆ)	ಅಚ್ಚುಕಟ್ಟು ಪ್ರದೇಶ (ಹೆ)
೧	ದುಮ್ಮೇನಳ್ಳಿ	ಊರಮುಂದಿನ ಕೆರೆ	೪೦.೦೬	೪೦.೪೬
೨	ಬೊಮ್ಮೇನಹಳ್ಳಿ	ಬೊಮ್ಮೇನಹಳ್ಳಿ ಕೆರೆ	೫೯.೮೮	೪೪.೫೫
೩	ಕೆಲ್ಲಂಗೆರೆ	ಊರಮುಂದಿನ ಕೆರೆ	೯೯.೫೪	೧೧೧.೬೬
೪	ಹಾರನಹಳ್ಳಿ	ದೊಡ್ಡಕೆರೆ	೧೫೭.೮೨	೧೬೨.೬೬
೫	ತಳಲೂರು	ದೊಡ್ಡಕೆರೆ	೧೨೧.೪೦	೧೫೨.೯೯
೬	ಯಳವಾರೆ	ಯಳವಾರೆ ಕೆರೆ	೮೭.೮೯	೬೩.೫೫
೭	ಅರಸೀಕೆರೆ	ದೊಡ್ಡಕೆರೆ	೧೭೯.೨೦	೧೭೧.೫೭
೮	ಅರಸೀಕೆರೆ	ಗಂಗಮ್ಮನ ಕೆರೆ	೧೦೮.೦೪	೬೮.೬೮
೯	ಚಿಕ್ಕೂರು	ಚಿಕ್ಕೂರು ಕೆರೆ	೭೭.೬೯	೯೦.೨೨
೧೦	ಕಿತ್ತನಕೆರೆ	ಊರಮುಂದಿನ ಕೆರೆ	೯೬.೭೧	೭೧.೬೧
೧೧	ಸಾತನಗೆರೆ	ಊರಮುಂದಿನ ಕೆರೆ	೩೧.೫೬	೪೦.೮೭
೧೨	ಕಣಕಟ್ಟೆ	ಊರಮುಂದಿನ ಕೆರೆ	೯೬.೭೧	೧೫೬.೭೫
೧೩	ಕೋಳಗುಂದ	ಊರಮುಂದಿನ ಕೆರೆ	೩೯.೬೫	೫೫.೦೩
೧೪	ಕಾಮಸಮುದ್ರ	ದೊಡ್ಡಕೆರೆ	೧೪೦.೦೧	೭೦.೮೧
೧೫	ರಾಮೇನಹಳ್ಳಿ	ಅಹೋಬಲರಾಯನ ಕೆರೆ	೧೪.೧೬	೪೫.೩೧
೧೬	ಕುರುವಂಕ	ಊರಮುಂದಿನ ಕೆರೆ	೬೭.೧೯	೫೯.೮೮
೧೭	ಬೆಂಡೆಕೆರೆ	ಊರಮುಂದಿನ ಕೆರೆ	೫೭.೪೫	೫೩.೪೧
೧೮	ನೇರ್ಲಿಗೆ	ಊರಮುಂದಿನ ಕೆರೆ	೧೪೮.೯೧	೧೦೯.೮೯
೧೯	ಅರಕೆರೆ	ಅರಕೆರೆ	೧೦೮.೦೪	೬೮.೬೮
೨೦	ಕೊಂಡವಾಗಿಲು	ಕೊಂಡವಾಗಿಲು ಕೆರೆ	೬೦.೦೭	೬೮.೭೦
೨೧	ಕೋಳಗುಂದ	ಕೋಳಗುಂದ ಕೆರೆ	೨೨.೯೫	೬೧.೦೦

೨೨	ಜಾವಗಲ್	ದೊಡ್ಡಕೆರೆ	೧೦೩.೯೯	೫೮.೯೮
೨೩	ಚಿಕ್ಕಯರಗನಾಳು	ದೊಡ್ಡಕೆರೆ	೬೫.೯೫	೧೨೬.೬೦
೨೪	ಗಂಡಸಿ	ದೊಡ್ಡಕೆರೆ	೭೦.೮೧	೯೩.೦೬
೨೫	ಹುಲ್ಲೇಕೆರೆ	ದೊಡ್ಡಕೆರೆ	೮೦.೯೩	೪೭.೭೪
೨೬	ಕೆಂಕೆರೆ	ಊರಮುಂದಿನ ಕೆರೆ	೩೬.೪೨	೪೦.೪೬
೨೭	ಹೆಗ್ಗಟ್ಟ	ಊರಮುಂದಿನ ಕೆರೆ	೨೩.೦೬	೪೩.೨೯
೨೮	ಉಂಡಿಗನಾಳು	ಊರಮುಂದಿನ ಕೆರೆ	೬೭.೪೫	೫೩.೩೦
೨೯	ನೀರಗುಂದ	ಹಿರಿಕೆರೆ	೪೮.೫೬	೫೮.೬೦
೩೦	ಮುದುಡಿ	ಹಿರಿಕೆರೆ	೪೮.೧೪	೪೪.೫೦
೩೧	ಉಂಡಿಗನಾಳು	ಉಂಡಿಗನಾಳು ಹಳೆನಾಯಕನ ಕೆರೆ	೧೧.೦೪	೫೧.೦೦
೩೨	ಪುರಲ್ಲೇಹಳ್ಳಿ	ಪುರಲ್ಲೇಹಳ್ಳಿ ಕೆರೆ	೧೪೦.೦೧	೭೭.೫೫
೩೩	ಅಪ್ಪೇನಹಳ್ಳಿ	ಅಪ್ಪೇನಹಳ್ಳಿ ಕೆರೆ	೧೪೦.೦೦	೪೩.೦೦
೩೪	ನಾಗತಿಹಳ್ಳಿ	ತಿಮ್ಮಪ್ಪನಾಯಕನ ಕೆರೆ	೧೮೨.೧೦	೪೨.೦೩
೩೫	ಚಿಕ್ಕಗಂಡಸಿ	ಊರಮುಂದಿನ ಕೆರೆ	೫೭.೪೫	೪೮.೫೫
೩೬	ಕಲ್ಲುಗುಂಡಿ	ಊರಮುಂದಿನ ಕೆರೆ	೫೯.೬೫	೫೫.೦೩

ಚನ್ನರಾಯಪಟ್ಟಣ ತಾಲೂಕು

ಕ್ರಸಂ.	ಗ್ರಾಮಗಳ ಹೆಸರು	ಕೆರೆಗಳು ಹೆಸರು	ಜಲ ವಿಸ್ತೀರ್ಣ (ಹೆ)	ಅಚ್ಚುಕಟ್ಟು ಪ್ರದೇಶ (ಹೆ)
೧	ಅಣತಿ	ಊರಮುಂದಿನ ಕೆರೆ	೧೮೫.೪೨	೧೨೪.೮೨
೨	ಅನೆಕೆರೆ	ದೊಡ್ಡಕೆರೆ	೧೦೯.೦೦	೫೪.೮೦
೩	ಬಿ.ಸಮುದ್ರವಳ್ಳಿ	ಹೊಸಹಳ್ಳಿ		೫೩.೦೦
೪	ಬಾಗೂರು	ಅಮಾನಿಕೆರೆ	೧೭೦.೦೪	೧೫೯.೮೨
೫	ಬಾಳಗಂಚಿ	ಅಮಾನಿಕೆರೆ	೮೦.೯೭	೯೪.೯೪
೬	ಬರಗೂರು	ದೊಡ್ಡ ಕೆರೆ	೬೧.೯೪	೪೮.೦೨
೭	ಚಲ್ಯ	ಹಿರೆಕೆರೆ	೧೯.೪೩	೫೬.೬೦
೮	ದೇವಿಕೆರೆ	ದೇವಿಕೆರೆ ಕೆರೆ	೧೭.೬೦	೭೭.೧೪
೯	ದಿಡಗ	ಊರಮುಂದಿನ ಕೆರೆ	೧೮೪.೬೧	೧೦೬.೨೬
೧೦	ಗೊಲ್ಲರಹೊಸಹಳ್ಳಿ	ರಂಗಸಮುದ್ರ ಕೆರೆ	೫೬.೬೮	೪೬.೯೪
೧೧	ಹಳೆಬೆಳ್ಗೊಳ	ದೊಡ್ಡಕೆರೆ	೩೮.೧೭	೫೨.೪೬
೧೨	ಹಿರಿಸಾವೆ	ಊರಮುಂದಿನ ಕೆರೆ	೮೩.೦೮	೧೦೭.೦೬
೧೩	ಹುಲಿಕೆರೆ	ಬೋರನಕಟ್ಟೆ	೦.೦೦	೫೧.೮೧
೧೪	ಜಂಬೂರು	ಅಮಾನಿಕೆರೆ	೫೭.೮೯	೬೩.೪೦
೧೫	ಕೆಂಬಾಳು	ಮುತ್ತಿನನಕ	೪೪.೫೩	೪೨.೮೩
೧೬	ಕುಂದೂರು	ಊರಮುಂದಿನ ಕೆರೆ	೩೦.೭೬	೪೫.೬೫
೧೭	ಮತಿಘಟ್ಟ	ಮತಿಘಟ್ಟ ಕೆರೆ	೫೨.೨೨	೪೬.೫
೧೮	ನಾರಾಯಣಪುರ	ಹೊಸಕೆರೆ	೪೩.೭೦	--
೧೯	ನವಿಲೆ	ಊರಮುಂದಿನ ಕೆರೆ	೯೨.೫೧	೧೧೮.೭೮
೨೦	ನುಗ್ಗೇಹಳ್ಳಿ	ಹಿರಿಕೆರೆ	೫೧.೮೨	೫೦.೧೦
೨೧	ಸಂತೆಶಿವರ	ಊರಮುಂದಿನ ಕೆರೆ	೭೦.೮೫	೭೨.೩೧

೨೨	ಶ್ರವಣಬೆಳಗೊಳ	ದೊಡ್ಡಕೆರೆ	೫೧.೮೨	೫೬.೫೬
೨೩	ತಾವರೆಕೆರೆ	ತಾವರೆಕೆರೆ ಕೆರೆ	೮೫.೦೨	೧೦೨.೪೭
೨೪	ತೋಟಿ	ತೋಟಿಕೆರೆ	೭೭.೭೩	೬೪.೬೪
೨೫	ಯಲಿಯೂರು	ಊರಮುಂದಿನ ಕೆರೆ	೧೦೨.೦೨	೯೩.೦೧
೨೬	ಜನಿವಾರ	ಅಮಾನಿಕೆರೆ	೧೪೩.೦೦	೧೩೨.೪೦
೨೭	ಬೆಕ್ಕ	ಅಮಾನಿಕೆರೆ	೯೮.೦೦	೧೫೫.೨೮
೨೮	ದಿಂಡಗೂರು	ದೊಡ್ಡಕೆರೆ	೧೬೮.೦೦	೨೧೦.೦೮
೨೯	ಬೇಡಿಗನಹಳ್ಳಿ	ಬೇಡಿಗನಹಳ್ಳಿ ಕೆರೆ	೧೨೩.೦೦	೧೯೪.೮೦

ಬೇಲೂರು ತಾಲೂಕು

ಕ್ರಸಂ.	ಗ್ರಾಮಗಳ ಹೆಸರು	ಕೆರೆಗಳು ಹೆಸರು	ಜಲ ವಿಸ್ತೀರ್ಣ (ಹೆ)	ಅಚ್ಚುಕಟ್ಟು ಪ್ರದೇಶ (ಹೆ)
೧	ಅಡುಗೂರು	ದೊಡ್ಡಕೆರೆ	೫೦.೭೦	೫೬.೨೦
೨	ಅಗ್ಗಡಲು	ಹಿರಿಕೆರೆ	೩.೮೦	೪೪.೦೦
೩	ಬಳ್ಳೂರು	ದೊಡ್ಡಕೆರೆ	೬.೫೦	೪೦.೦೦
೪	ಬೆಲ್ಲೋಟ್ಟೆ	ಹೊಸಕೆರೆ	೩.೩೦	೪೫.೬೦
೫	ಬೇಲೂರು	ವಿಷ್ಣುಸಮುದ್ರ ಕೆರೆ	೪೩.೨೦	೭೯.೨೦
೬	ಬೆಟ್ಟದೂರು	ಹೊಸಕೆರೆ	೨.೧೦	೭೬.೨೦
೭	ಬೊಮ್ಮೇನಹಳ್ಳಿ	ಗೆರವನಕೆರೆ	೬.೭೦	೪೬.೮೦
೮	ಚಟಚಟನಹಳ್ಳಿ	ದ್ಯಾವಪ್ಪನ ಕೆರೆ	೫೧.೩೨	೭೬.೩೦
೯	ಚಿಕ್ಕೋಲೆ	ದೊಡ್ಡಕೆರೆ	೮.೪೦	೪೮.೦೦
೧೦	ದೊಡ್ಡಕೋಡಿಹಳ್ಳಿ	ದೊಡ್ಡಕೆರೆ	೪೬.೪೦	೮೯.೨೦
೧೧	ಘಟ್ಟದಹಳ್ಳಿ	ದೊಡ್ಡಕೆರೆ	೩೮.೫೭	೮೨.೯೦
೧೨	ಗೋಣೀಸೋಮನಹಳ್ಳಿ	ದೊಡ್ಡಕೆರೆ	೪೮.೦೦	೬೨.೨೦
೧೩	ಹಳೇಬೀಡು	ದೊಡ್ಡಕೆರೆ	೧೦೦.೦೦	೨೮೪.೦೦
೧೪	ಹನಿಕೆ	ಹಿರಿಕೆರೆ	೨೦.೦೦	೬೦.೦೦
೧೫	ಹಲ್ಮಿಡಿ	ದೊಡ್ಡಕೆರೆ	೯.೬೦	೯೦.೨೦
೧೬	ಹಿರೇವಟೆ	ದೊಡ್ಡಕೆರೆ	೨.೮೦	೪೪.೬೦
೧೭	ಹುಲಗುಂಡಿ	ಹುಲಿಕೆರೆ	೨೦.೦೦	೪೦.೦೦
೧೮	ಇಬ್ಬೀಡು	ದೊಡ್ಡಕೆರೆ	೧೬.೦೦	೪೭.೫೦
೧೯	ಇಂಟಿತೊಳಲು	ಕೊಂಡಕೆರೆ	೨.೬೩	೪೭.೨೦
೨೦	ಕರಗಡ	ದೇವಿಕೆರೆ	೩೨.೮೦	೧೧೩.೦೦
೨೧	ಕೊಂಡನಳ್ಳಿ	ಕೊರಟನ ಕೆರೆ	೧೪.೦೦	೪೬.೦೦

೨೨	ಮಲ್ಲಾಪುರ	ದೊಡ್ಡಕೆರೆ	೮.೯೦	೫೯.೬೦
೨೩	ಮತ್ತಿಘಟ್ಟ	ದೊಡ್ಡಕೆರೆ	೪೭.೯೪	೮೨.೮೦
೨೪	ನಾರಾಯಣಪುರ	ದೊಡ್ಡಕೆರೆ	೨೦.೮೦	೬೪.೭
೨೫	ನಾರ್ವೆ	ಸಣ್ಣಕೆರೆ	೦.೪೦	೬೧.೨೦
೨೬	ಪಂಡಿತನಹಳ್ಳಿ	ದೊಡ್ಡಕೆರೆ	೨೮.೪೫	೪೦.೮೦
೨೭	ರಾಜನಸಿರಿಯೂರು	ದೊಡ್ಡಕೆರೆ	೫೪.೦೦	೧೨೮.೦೦
೨೮	ರಣಘಟ್ಟ	ದೊಡ್ಡಕೆರೆ	೧೯.೦೦	೪೬.೧೫
೨೯	ಸಿಂಗಾಪುರ	ದಿಂಡಿಗನಹಳ್ಳಿ ಕೆರೆ	೪.೪೦	೪೧.೬೦
೩೦	ಸುಗ್ಗಲೂರು	ದೊಡ್ಡಕೆರೆ	೪.೮೦	೪೯.೬೦
೩೧	ಸುಲಗಲಲೆ	ದೊಡ್ಡಕೆರೆ	೦.೮೦	೪೧.೬೦
೩೨	ತುಂಬಿದೇವನಹಳ್ಳಿ	ದೇವಿರಮ್ಮನ ಕೆರೆ	೦.೯೪	೪೮.೮೦
೩೩	ಯಲಹಂಕ	ದ್ಯಾವನಕೆರೆ	೬.೭೦	೬೧.೬೦

ಸಕಲೇಶಪುರಕೆರೆ ತಾಲೂಕು

ಕ್ರಸಂ.	ಗ್ರಾಮಗಳ ಹೆಸರು	ಕೆರೆಗಳು ಹೆಸರು	ಜಲ ವಿಸ್ತೀರ್ಣ (ಹೆ)	ಅಚ್ಚುಕಟ್ಟು ಪ್ರದೇಶ (ಹೆ)
೧	ಬೈಕೆರೆ	ಊರಬಾಗಿಲ ಕೆರೆ	೦.೪೦	೫೦.೧೫
೨	ಬೈಕೆರೆ	ಸಕಲೆಶೆಟ್ಟಿಕೆರೆ	೧.೮೦	೫೦.೦೦
೩	ಬೈಕೆರೆ	ಕಿರಗದ್ದೆಕೆರೆ	೧.೨೦	೮೧.೦೦
೪	ಬೈಕೆರೆ	ದೊಡ್ಡಕೆರೆ	೦.೮೦	೧೩೪.೦೦
೫	ಬೆಳಗೋಡು	ಈಶ್ವರಹಳ್ಳಿಕೆರೆ	೦.೮೦	೮೮.೦೦
೬	ಬೇಲೂರು	ದೊಡ್ಡಕೆರೆ	೮.೦೦	೪೯.೭೯
೭	ಬೇಲೂರು	ತಾವರೆ ಕೆರೆ	೯.೦೦	೪೧.೭೦
೮	ಬೀರದಹಳ್ಳಿ	ಕೋರಲಕೆರೆ	೦.೪೦	೫೫.೦೦
೯	ದೊಡ್ಡನಗರ	ದೊಡ್ಡಕೆರೆ	೦.೫೦	೫೦.೨೦
೧೦	ಹಲಸುಲಿಗೆ	ಸುಬ್ಬಣ್ಣನಕೆರೆ	೦.೪೦	೬೫.೭೭
೧೧	ದೊಡ್ಡನಗರ	ತೂಬಿನಕೆರೆ	೦.೮೦	೫೦.೧೦
೧೨	ಹಾಲೆಬೇಲೂರು	ಊರಬಾಗಿಲ ಕೆರೆ	೦.೮೦	೭೬.೦೦
೧೩	ಹಬ್ಬಸಾಲೆ	ಕಲ್ಲುಬಾಗಿಲುಕೆರೆ	೦.೬೦	೧೨೫.೩೫
೧೪	ಹುಲ್ಲಹಳ್ಳಿ	ಹಂದಿತೋಟಕೆರೆ	೦.೩೦	೪೦.೧೩
೧೫	ಕಾಮನಹಳ್ಳಿ	ಮಲ್ಲಯನಕೆರೆ	೧.೨೦	೬೬.೦೫
೧೬	ಕೆಲಗಲೆ	ನಾಗಪ್ಪನಕೆರೆ	೦.೫೦	೫೦.೦೦
೧೭	ಕುಂಬ್ರಹಳ್ಳಿ	ಊರಬಾಗಿಲ ಕೆರೆ	೦.೮೦	೪೩.೨೦
೧೮	ಮಳಲಿ	ಹಿರಿಕೆರೆ	೦.೪೦	೧೭೭.೩೪
೧೯	ಮಟ್ಟಸಾಗರ	ಪುರದಮ್ಮನಕೆರೆ	೧.೬೦	೪೫.೨೭
೨೦	ಮಟ್ಟಸಾಗರ	ಸವತಿಮ್ಮನಕೆರೆ	೧.೨೦	೫೫.೨೮
೨೧	ಮಟ್ಟಸಾಗರ	ಚಂದ್ರಪುರಕೆರೆ	೦.೪೦	೧೨೪.೦೦
೨೨	ನದಹಳ್ಳಿ	ಶೆಟ್ಟಿಹಳ್ಳಿಕೆರೆ	೦.೬೦	೫೦.೦೦
೨೩	ನಿದಿಗೆರೆ	ಬೈದರಕೆರೆ	೧.೦೦	೪೦.೪೮
೨೪	ಸಿದ್ಧಾಪುರ	ಊರಬಾಗಿಲ ಕೆರೆ	೧.೨೦	೭೪.೦೯
೨೫	ಉದೆವಾರ	ಊರಬಾಗಿಲ ಕೆರೆ	೦.೪೦	೪೦.೪೦

ಹೊಳೆನರಸೀಪುರ ತಾಲೂಕು

ಕ್ರಸಂ.	ಗ್ರಾಮಗಳ ಹೆಸರು	ಕೆರೆಗಳು ಹೆಸರು	ಜಲ ವಿಸ್ತೀರ್ಣ (ಹೆ)	ಅಚ್ಚುಕಟ್ಟು ಪ್ರದೇಶ (ಹೆ)
೧	ಬಾನಕುಪ್ಪೆ	ಬಾನಕುಪ್ಪೆ ಕೆರೆ	೮.೦೪	೫೮.೭೦
೨	ಮಾವನೂರು	ದೊಡ್ಡಕೆರೆ	೩೨.೦೦	೫೦.೦೦

ಆಲೂರು ತಾಲೂಕು

ಕ್ರಸಂ.	ಗ್ರಾಮಗಳ ಹೆಸರು	ಕೆರೆಗಳು ಹೆಸರು	ಜಲ ವಿಸ್ತೀರ್ಣ (ಹೆ)	ಅಚ್ಚುಕಟ್ಟು ಪ್ರದೇಶ (ಹೆ)
೧	ಗಂಗರ	ದೊಡ್ಡಕೆರೆ	೪.೮೦	೪೦.೩೦
೨	ಹೊಸಹಳ್ಳಿ	ಹೊಸಕಟ್ಟೆ	೨.೬೦	೪೯.೬೦
೩	ಕರಗೊಡು	ಊರಬಾಗಿಲ ಕೆರೆ	೨.೪೦	೪೩.೭೬
೪	ಮುರುಡೂರು	ಹೊಸಕಟ್ಟೆ	೬.೦೦	೪೫.೨೦

ಅರಕಲಗೂಡು ತಾಲೂಕು

ಕ್ರಸಂ.	ಗ್ರಾಮಗಳ ಹೆಸರು	ಕೆರೆಗಳು ಹೆಸರು	ಜಲ ವಿಸ್ತೀರ್ಣ (ಹೆ)	ಅಚ್ಚುಕಟ್ಟು ಪ್ರದೇಶ (ಹೆ)
೧	ಬೋದನೂರು	ಬೋದನೂರು ಕೆರೆ	೧೯.೭೦	೪೪.೦೦
೨	ದೊಡ್ಡಬೆಮ್ಮತ್ತಿ	ದೊಡ್ಡಬೆಮ್ಮತ್ತಿ ಕೆರೆ	೧೭.೦೦	೪೫.೦೦
೩	ಹೆಣ್ಣೂರು	ಚೈತ್ರಬಲಕೆರೆ	೨೪.೦೦	೪೪.೪೦
೪	ಕರೆಗಲ್ಲು	ನಾದೆಕೆರೆ	೧೦.೦೦	೫೦.೪೦
೫	ಕೊಳ್ಳಂಗಿ	ಕೊಳ್ಳಂಗಿ ಕೆರೆ	೧೮.೨೦	೫೦.೦೦
೬	ಮಸರಂಗಳ	ತಿಮ್ಮನಾಯಕನಕೆರೆ	೨೬.೦೦	೭೯.೨೦
೭	ತರಿಗಳಲೆ	ತರಿಗಳಲೆ ಕೆರೆ	೨೦.೫೦	೧೧೪.೦೦

ನಕ್ಷೆಗಳು


ಕರ್ನಾಟಕದ ಜಿಲ್ಲೆಗಳ ನಕ್ಷೆ





ಹಾಸನ ಜಿಲ್ಲಾ ನಕ್ಷೆ


ಚಿಕ್ಕಮಗಳೂರು
ಅರಸೀಕೆರೆ ತಾಲೂಕು
ತುಮಕೂರು
ದಕ್ಷಿಣ ಕನ್ನಡ
ಬೇಲೂರು ತಾಲೂಕು
ಹಾಸನ ತಾಲೂಕು
ಚನ್ನರಾಯಪಟ್ಟಣ ತಾಲೂಕು
ಆಲೂರು ತಾಲೂಕು
ಸಕಲೇಶಪುರ ತಾಲೂಕು
ಮಂಡ್ಯ
ಅರಕಲಗೂಡು ತಾಲೂಕು
ಹೊಳೇನರಸೀಪುರ ತಾಲೂಕು
ಕೊಡಗು
ಉ
ಪ
ಪೂ
ದ


HASSAN DISTRICT
DRAINAGE MAP.
N
W
E
S
YAGACHI
HEMAVATHI
CAUVERY
0
10
20
Kilometres
SOURCE: TOPOSHEETS OF SCALE 1:250000
PREPARED AT :
NRDMS CENTRE/KSCST/HASSAN.
TANKS
tank
DRAINAGE
drainage
BASIN
boundry

ಅರಸೀಕರೆ ತಾಲೂಕಿನ ನಕ್ಷೆ



ಹಾಸನ ತಾಲೂಕಿನ ನಕ್ಷೆ


ಅನಗವಳ್ಳಿ ಕೆರೆ *
* ಹೊನ್ನಾವರ ಕೆರೆ
* ಮುತ್ತತ್ತಿಕೆರೆ
* ಸಾಲಗಾಮೆ ಕೆರೆ
* ದುದ್ದಕೆರೆ
ಕೋರವಂಗಲ ಕೆರೆ *
* ಹೆರಗು
* ಚಿಕ್ಕಕಡಲೂರು ಕೆರೆ
* ಹಾಸನ ತಾಲೂಕು ಕೇಂದ್ರ
ಶಾಂತಿಗ್ರಾಮ ಕೆರೆ *
ಕೌಶಿಕ ಕೆರೆ*
* ಅಂಬುಗಕೆರೆ
* ಕಿತ್ತಾನೆ ಕೆರೆ
* ಗೊರೂರು ಜಲಾಶಯ



ಉ
ಪ
ಪೂ
ದ

ಚನ್ನರಾಯಪಟ್ಟಣ ತಾಲೂಕಿನ ನಕ್ಷೆ







ಬೇಲೂರು ತಾಲೂಕಿನ ನಕ್ಷೆ


* ರಾಜನಸಿರಿಯೂರು ಕೆರೆ
* ಹನಿಕೆ ಕೆರೆ
* ಚಟಚಟನಹಳ್ಳಿ ಕೆರೆ
* ಹಲ್ಮಿಡಿ ಕೆರೆ
* ಯಗಚಿ ನದಿ
* ಹಳೇಬೀಡು ಕೆರೆ
* ವೀರದೇವನಹಳ್ಳಿ ಕೆರೆ
* ಯಲಹಂಕ ಕೆರೆ
* ಬೇಲೂರು ಕೆರೆ (ತಾಲೂಕು ಕೇಂದ್ರ)


ಉ
ಪ
ಪೂ
ದ

ಹೊಳೆನರಸೀಪುರ ತಾಲೂಕಿನ ನಕ್ಷೆ





ಅರಕಲಗೂಡು ತಾಲೂಕಿನ ನಕ್ಷೆ





ಸಕಲೇಶಪುರ ತಾಲೂಕಿನ ನಕ್ಷೆ




ಆಲೂರು ತಾಲೂಕಿನ ನಕ್ಷೆ






ರೇಖಾಚಿತ್ರಗಳು


ರೇಖಾಚಿತ್ರಗಳು




ಏರಿ ಮಧ್ಯದಲ್ಲಿರುವ ಗೋಡೆಯ ರಚನೆ




ಏರಿಯ ಸ್ವಲ್ಪ ಅಂತರದಲ್ಲಿರುವ ಬಿರುಡೆ ತೂಬು




ಏರಿಯ ಒಳಪಾರ್ಶ್ವದ ನೋಟ



ಫ್ರಾನ್ಸಿಸ್ ಬುಕಾನನ್ ಕಂಡಂತಹ ಕಲ್ಲುಕಂಬದ ಕೋಡಿ



ಕುದುರೆ ಲಾಳಾಕೃತಿಯ ಕೋಡಿಯ ರಚನೆ



ಅರ್ಧಚಂದ್ರಾಕೃತಿಯಲ್ಲಿರುವ ಕೋಡಿಯ ರಚನೆ

ಛಾಯಾಚಿತ್ರಗಳು



ಯಲಹಂಕ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿರುವ ಬೃಹತ್ ಶಿಲಾವೃತ್ತ ಸಮಾಧಿ, ಬೇಲೂರು ತಾಲೂಕು



ವೃತ್ತಾಕಾರವಾಗಿರುವ ಅಣತಿ ಕೆರೆ, ಚನ್ನರಾಯಪಟ್ಟಣ ತಾಲೂಕು



ಆಯತಾಕಾರವಾಗಿರುವ ಊರಬಾಗಿಲ ಕೆರೆ, ಸಕಲೇಶಪುರ ತಾಲೂಕು



ಅಂಕುಡೊಂಕಾಗಿರುವ ಉದೇವಾರ ಕೆರೆಯ ಏರಿ, ಸಕಲೇಶಪುರ ತಾಲೂಕು



ತಳಲೂರು ಕೆರೆ ಏರಿಯ ರಚನೆ, ಅರಸೀಕೆರೆ ತಾಲೂಕು



ಅಂಕುಡೊಂಕಾಗಿರುವ ವೃತ್ತಾಕಾರದ ಏರಿ ಸತ್ಯಮಂಗಳ ಕೆರೆ, ಹಾಸನ ತಾಲೂಕು



ಗಜಲಕ್ಷ್ಮೀ ಮತ್ತು ನೃತ್ಯಭಂಗಿಯ ಉಬ್ಬುಶಿಲ್ಪಗಳು,
ಸಿಂಗಿನಕೆರೆ, ಅರಸೀಕೆರೆ ತಾಲೂಕು



ಗರುಡ ಹಾಗೂ ಮಕರದ ಮೇಲೆ ಕುಳಿತಿರುವ ವರುಣ ಮತ್ತು ಆತನ ಪತ್ನಿಯ
ಉಬ್ಬುಶಿಲ್ಪಗಳು, ಸಿಂಗಿನಕೆರೆ, ಅರಸೀಕೆರೆ ತಾಲೂಕು



ತೂಬಿಗೆ ಸೇತುವೆ ಇರುವ ರಚನೆ, ಹಳೇಬೀಡು ಕೆರೆ, ಬೇಲೂರು ತಾಲೂಕು



ಅರಸೀಕೆರೆ ತೂಬಿನ ಮೇಲಿರುವ ಗಜಲಕ್ಷ್ಮೀ ಶಿಲ್ಪ



ತಿಮ್ಮಪ್ಪನಾಯಕ ಕೆರೆಯ ಮಂಟಪದ ರೀತಿಯ ತೂಬು, ಅರಸೀಕೆರೆ ತಾಲೂಕು



ಪುರಲ್ಲೇಹಳ್ಳಿ ಕೆರೆಯ ತೂಬಿನ ಮೇಲಿರುವ ಶಿಬಾರದ ಕಟ್ಟೆ, ಅರಸೀಕೆರೆ ತಾಲೂಕು.


ಹಿರಿಯೂರು ಕೆರೆಯ ತೂಬಿನ ಮೇಲಿರುವ ಶಾಸನಸಹಿತ ಉಬ್ಬುಶಿಲ್ಪಗಳು,
ಅರಸೀಕೆರೆ ತಾಲೂಕು.


ನೇರ್ಲಿಗೆ ಕೆರೆ ತೂಬಿನ ಮೇಲಿರುವ ಜಲಚರ ಪ್ರಾಣಿಗಳ ಉಬ್ಬುಶಿಲ್ಪಗಳು,
ಅರಸೀಕೆರೆ ತಾಲೂಕು


ಹೊಸಹಳ್ಳಿ ಕೆರೆಯ ತೂಬಿನ ಮೇಲಿರುವ ಜಿನ ಶಿಲ್ಪ, ಚನ್ನರಾಯಪಟ್ಟಣ ತಾಲೂಕು.



ಶಿಖರದ ಮಾದರಿಯಲ್ಲಿರುವ ತೂಬು, ನುಗ್ಗೇಹಳ್ಳಿ ಕೆರೆ, ಚನ್ನರಾಯಪಟ್ಟಣ ತಾಲೂಕು



ಬಾವಿಯಾಕಾರದ ತೂಬಿನ ರಚನೆ, ಮೊಸಳೆ ಕೆರೆ, ಹಾಸನ ತಾಲೂಕು



ಕೆಳಗಲೆ ಕೆರೆಯ ತೂಬು, ಸಕಲೇಶಪುರ ತಾಲೂಕು



ಬಾವಿಯಾಕಾರದ ತೂಬಿನ ರಚನೆ, ಹಳೆನಾಯಕನ ಕೆರೆ, ಅರಸೀಕೆರೆ ತಾಲೂಕು



ಹಿರಿಯೂರು ಕೆರೆಯ ತೂಬಿನಲ್ಲಿರುವ ಮರದ ದಿಮ್ಮಿ ಮತ್ತು ಕಬ್ಬಿಣದ ಸಲಾಕೆ,
ಅರಸೀಕೆರೆ ತಾಲೂಕು



ಅಟ್ಟಾವರ ಕೆರೆಯ ತೂಬಿಗೆ ಅಳವಡಿಸಿರುವ ಕಲ್ಲಿನ ಕಾಲುವೆಯ ಅವಶೇಷ, ಹಾಸನ ತಾಲೂಕು



ತೂಬಿಗೆ ಬಳಸಿರುವ ಇಟ್ಟಿಗೆಯ ಅವಶೇಷ, ದಿಡಗ ಕೆರೆ, ಚನ್ನರಾಯಪಟ್ಟಣ ತಾಲೂಕು



ರುದ್ರಪಟ್ಟಣ ಕೆರೆಯ ಕೋಡಿ, ಅರಕಲಗೂಡು ತಾಲೂಕು



ಚನ್ನರಾಯಪಟ್ಟಣ ಕೆರೆಯ ಅಚ್ಚುಕಟ್ಟಿಗೆ ನೀರುಣಿಸುವ ಕಾಲುವೆ, ಚನ್ನರಾಯಪಟ್ಟಣ



ಕೆಲ್ಲಂಗೆರೆ ಕೆರೆಯ ಅಚ್ಚುಕಟ್ಟಿಗೆ ನೀರುಣಿಸಲು ತೊಟ್ಟಿಗೆ ಅಳವಡಿಸಿರುವ ಕಾಲುವೆ, ಅರಸೀಕೆರೆ ತಾಲೂಕು



ಹಳೇಬಿಡು ಕೆರೆಯ ಕೋಡಿಯ ರಚನೆ



ಯಗಚಿ ನದಿಗೆ ಕಟ್ಟಿರುವ ಒಡ್ಡಿನ ಅವಶೇಷ, ರಣಘಟ್ಟ, ಬೇಲೂರು ತಾಲೂಕು



ಅರ್ಧಚಂದ್ರಾಕೃತಿಯಲ್ಲಿರುವ ಕೋಡಿಯ ರಚನೆ, ಕೊಣನೂರು ಕೆರೆ, ಅರಕಲಗೂಡು ತಾಲೂಕು



ಕುದುರೆ ಲಾಳಾಕೃತಿಯ ಕೋಡಿಯ ರಚನೆ, ತಾತನಹಳ್ಳಿ ಕೆರೆ, ಹೊಳೆನರಸೀಪುರ ತಾಲೂಕು



ಹಲ್ಮಿಡಿ ಕೆರೆ, ಬೇಲೂರು ತಾಲೂಕು



ಅರಸೀಕೆರೆ



ಬೇಲೂರು ಕೆರೆ, ಬೇಲೂರು



ಚನ್ನರಾಯಪಟ್ಟಣ ಕೆರೆ, ಚನ್ನರಾಯಪಟ್ಟಣ



ಜಾವಗಲ್ ಕೆರೆ, ಅರಸೀಕೆರೆ ತಾಲೂಕು



ಆನೆಕೆರೆ, ಚನ್ನರಾಯಪಟ್ಟಣ ತಾಲೂಕು



ಅಂಬುಗ ಕೆರೆ, ಹಾಸನ ತಾಲೂಕು



ಮೇರ್ವೆ ಕೆರೆ, ಆಲೂರು ತಾಲೂಕು



ಗಂಡಸಿ ಕೆರೆ, ಅರಸೀಕೆರೆ ತಾಲೂಕು.



ದೊಡ್ಡಕುಂಚೆ ಅಮಾನಿಕೆರೆ, ಹೊಳೆನರಸೀಪುರ ತಾಲೂಕು



ಪೂಮಗಾಮೆ ಕಟ್ಟೆ, ಹಾಸನ ತಾಲೂಕು



ಕೊಳ್ಳಂಗಿ ಕೆರೆ, ಅರಕಲಗೂಡು ತಾಲೂಕು



ಸೋಮನಹಳ್ಳಿ ಕೆರೆ, ಹೊಳೆನರಸೀಪುರ ತಾಲೂಕು



ಕಣಕಟ್ಟೆ ಕೆರೆ, ಅರಸೀಕೆರೆ ತಾಲೂಕು



ಕೆಳಗಲೆ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿರುವ ವೀರ ಮಹಾಸತಿ ಕಲ್ಲುಗಳು,
ಸಕಲೇಶಪುರ ತಾಲೂಕು



ಬಾಳಗಂಚಿ ಚಿಕ್ಕಕೆರೆ ಪಕ್ಕದಲ್ಲಿರುವ ವೀರಗಲ್ಲು, ಚನ್ನರಾಯಪಟ್ಟಣ ತಾಲೂಕು



ಈಶ್ವರ ದೇವಾಲಯದ ಮುಂಭಾಗದಲ್ಲಿರುವ ನಂದಿ ಸ್ತಂಭ, ದಿಂಡಗೂರು ಕೆರೆ,
ಚನ್ನರಾಯಪಟ್ಟಣ ತಾಲೂಕು



ವೀರರಗುಡಿ ಚಿಕ್ಕಗಂಡಸಿ ಕೆರೆ, ಅರಸೀಕೆರೆ ತಾಲೂಕು



ಹಾಲೆಬೇಲೂರು ಕೆರೆ ಏರಿ ಮೇಲಿರುವ ಅರಸಿಗುಡಿ,
ಸಕಲೇಶಪುರ ತಾಲೂಕು.



ಏರಿಯಲ್ಲಿ ಮುಚ್ಚಿದಂತೆ ಕಾಣುವ ಈಶ್ವರ ದೇವಾಲಯ, ಶಾಂತಿಗ್ರಾಮ ಕೆರೆ



ಏರಿ ಮೇಲಿರುವ ಬಿಜ್ಜಮ್ಮನ ಗದ್ದುಗೆ, ಬೇಲೂರು ಕೆರೆ



ಕೋರವಂಗಲ ಕೆರೆ ಸಮೀಪದಲ್ಲಿರುವ ಬೂಚೇಶ್ವರ ದೇವಾಲಯ, ಹಾಸನ ತಾಲೂಕು



ಬೆಳಗುಂಬ ಕೆರೆ ಅಂಗಳದಲ್ಲಿರುವ ಮಹಾಲಿಂಗೇಶ್ವರ ದೇವಾಲಯ, ಅರಸೀಕೆರೆ ತಾಲೂಕು



ಏರಿ ಇಳಿಜಾರಿನಲ್ಲಿರುವ ಸೋಮೇಶ್ವರ ದೇವಾಲಯ,
ನಾಗರನವಿಲೆ ಕೆರೆ



ಸೋಮೇಶ್ವರ ದೇವಾಲಯದ ಪಕ್ಕದಲ್ಲಿರುವ ನಾಗರ ಕಲ್ಲುಗಳು, ನಾಗರನವಿಲೆ ಕೆರೆ



ಕುದುರೆಗುಂಡಿ ಕೆರೆ ಏರಿ ಮೇಲಿರುವ ಬ್ರಹ್ಮದೇವರ ಕಲ್ಲು, ಹಾಸನ ತಾಲೂಕು



ಮೊಸಳೆ ಕೆರೆ ಏರಿ ಮೇಲಿರುವ ಬ್ರಹ್ಮದೇವರ ಕಲ್ಲು, ಹಾಸನ ತಾಲೂಕು



ಅಂಬುಗ ಕೆರೆ ಏರಿ ಮೇಲಿರುವ ರಂಬಮ್ಮನ ಗುಡಿ, ಹಾಸನ ತಾಲೂಕು



ರಾಜನಸಿರಿಯೂರು ಕೆರೆ ಕೋಡಿಯಲ್ಲಿರುವ ಬೂತಪ್ಪನಗುಡಿ, ಬೇಲೂರು ತಾಲೂಕು



ನಾಗರಪೂಜೆಯ ಅಭಿಕ್ಷೇಕದ ನೀರನ್ನು ಕೆರೆಗೆ ಬಿಡುತ್ತಿರುವುದು,
ನಾಗರನವಿಲೆ ಕೆರೆ, ಚನ್ನರಾಯಪಟ್ಟಣ ತಾಲೂಕು



ಸಿಂಗಿನ ಕೆರೆಗೆ ಗಂಗಸ್ನಾನಕ್ಕೆ ಬಂದಿರುವ ಶಂಕರನಹಳ್ಳಿಯ ದೇವರು, ಅರಸೀಕೆರೆ ತಾಲ್ಲೂಕು



ಆಲಗೌಡನಹಳ್ಳಿ ಕೆರೆ ಏರಿ ಮೇಲಿರುವ ಕೋಡಿಯಮ್ಮ, ಹೊಳೆನರಸೀಪುರ ತಾಲೂಕು




ಪುರಲ್ಲೇಹಳ್ಳಿ ಕೆರೆ ಅಂಗಳದಲ್ಲಿ ಹೂಳೆತ್ತುವಾಗ ಸಿಕ್ಕಿರುವ ಆಂಜನೇಯ ಶಿಲ್ಪ,
ಅರಸೀಕೆರೆ ತಾಲೂಕು



ಕೆಲ್ಲಂಗೆರೆ ಕೆರೆ ಏರಿ ಮೇಲಿರುವ ಗಂಗಮ್ಮನ ಗುಡಿ, ಅರಸೀಕೆರೆ ತಾಲೂಕು



ಗಂಡಸಿ ಕೆರೆ ಏರಿ ಮೇಲಿರುವ ಈಶ್ವರ ದೇವಾಲಯದ ಅವಶೇಷಗಳು,
ಅರಸೀಕೆರೆ ತಾಲೂಕು



ದೇವಿಕೆರೆ ಅಂಗಳದಲ್ಲಿರುವ ದೊಡ್ಡಮ್ಮನ ಗುಡಿ, ಚನ್ನರಾಯಪಟ್ಟಣ ತಾಲೂಕು



ದ್ಯಾಮವ್ವನ ಗುಡಿ, ಹಂದಿನ ಕೆರೆ, ಹಾಸನ ತಾಲೂಕು



ಹೊಸಹಳ್ಳಿ ಕೆರೆ ಏರಿ ಹೊರಪಾರ್ಶ್ವದಲ್ಲಿರುವ ಸಪ್ತಮಾತೃಕೆಯರ ಶಿಲ್ಪಗಳು



ದುಮ್ಮೆನಹಳ್ಳಿ ಕೆರೆ ಅಂಗಳದಲ್ಲಿರುವ ಪುಷ್ಕರಣಿ, ಅರಸೀಕೆರೆ ತಾಲೂಕು



ಸೋಮೇಶ್ವರ ಮತ್ತು ಭೈರವೇಶ್ವರ ದೇವಾಲಯದ ಮುಂಭಾಗದಲ್ಲಿರುವ
ಭೈರವಪಾದ ಶಿಲ್ಪಫಲಕ, ಬಾಗವಾಳು ಕೆರೆ, ಅರಸೀಕೆರೆ ತಾಲೂಕು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ